2-4-0

KARNATAKA

KÁDAMBARI.

ಕರ್ನಾಟಕ

ಕಾದಂಬರಿ.

ನಾಗವರ್ಮ ಮಹಾಕವಿಯಿಂದ ರಚಿತವಾದ

ಈ ಗ್ರಂಥವು

ಮೈಸೂರು ಶ್ರೀಮನ್ಮಹಾರಾಜರವರ ಕನ್ನಡ ಸ್ಕೂಲ್ ಹೆಡ್ ಮಾಷ್ಟರ್

ಬಿ. ಮಲ್ಲಪ್ಪನವರಿಂದ ಪರಿಷ್ಕರಿಸಲ್ಪಟ್ಟಿತು.

MYSORE:

PRINTED AT THE GOVERNMENT BRANCH PRESS,

1892.

PREFACE.

I have much pleasure, in placing before the public, this able work of Nagavarma, whose writings on Kanarese Grammar, Prosody, and Rhetoric, are so widely read, and universally acknowledged to be standard treatises on the subjects. The work itself is a metrical translation of the Sanskrit Prose work of the same name, whose author is the celebrated Banabhatta, the greatest of Sanskrit prose writers.

Manuscripts of Kannada Kadambari are exceedingly rare; and it was not without much difficulty that I succeeded in procuring a single copy of this work, ten years before. I learnt with gladness, that another manuscript copy was to be had in the Palace Library, but unfortunately for me it was found on examination, that the Palace copy was in fact the original from which the other had been copied out. The same errors and omissions are to be found in both. The manuscript is on old and worn-out palmyra leaves, and abounds in errors, which the ignorant copyists have been extremely active in multiplying to a large extent. I had almost given up the idea of bringing out this work; but the desire of saving such an able work from oblivion, and of supplying the long-felt want for a correct edition of a standard work, which may be prescribed for the Higher University Examinations, prompted me to undertake this Herculean task.

In many places portions of original stanzas have been re-written, and omissions have been supplied by stanzas newly composed by pandits. I must take this opportunity of informing the public of the inestimable aid which this work received at the hands of the much lamented late Basavappa Sastri and at the hands of Messrs. Sosalay Ayya Sastri and Karibasava Sastri, gentlemen whose names are so well known in the literary world, as to need no introduction from me. I thankfully acknowledge my obligation to these gentlemen; and my sincere thanks are due to Mr. Lakshminarasimha Sastri, Kanarese Munshi of the

Wesleyan Institution, Mysore, who has himself associated with me in passing the major portions of the book through the press. I have endeavoured to bring out the work in a manner befitting the reputation of its illustrious author; and the fact that the first part has already been adopted by the Mysore Government, as a text book for the Local Teachers' Examination, cannot but be gratifying to me. It is hoped that the work will receive general approbation, which it eminently deserves.

I cannot conclude this preface without acknowledging my deep indebtedness to Rai Bahadur A. Narasim Iyengar, but for whose generous assistance I would not have been able to bring out the work. My humble thanks are alike due to Mr. B. L. Rice, C.I.E., the late Education Secretary, who was kind enough to promise me some help from the Government.

B. MALLAPPA.

MYSORE,
17th September 1892.

ಪೀಠಿಕೆ.

ಪ್ರಸಿದ್ಧನಾದ ಬಾಣಮಹಾಕವಿಯಿಂದ ರಚಿತವಾದ ಸಂಸ್ಕೃತ ಕಾದಂಬರಿಯ ಭಾಷಾಂತರವಾಗಿಯೂ, ಕರ್ಣಾಟಕ ಭಾಷೆಯಲ್ಲಿ ವ್ಯಾಕರಣ, ಅಲಂಕಾರ, ಛಂದಸ್ಸು ಮೊದಲಾದ ಗ್ರಂಥಗಳನ್ನು ರಚಿಸಿ ಅತಿಪ್ರಸಿದ್ಧನಾದ ನಾಗವರ್ಮ ಮಹಾಕವಿಯಿಂದ ರಚಿಸಲ್ಪಟ್ಟಿದ್ದಾದಕಾರಣ ಲಕ್ಷಣಬದ್ಧವಾಗಿಯೂ, ಉತ್ತಮವಾದ ಭಾಷಾಶೈಲಿಯುಳ್ಳದ್ದಾಗಿಯೂ ಇರುವ ಗದ್ಯಪದ್ಯಾತ್ಮಕವಾದ ಕರ್ಣಾಟಕ ಕಾದಂಬರಿಯೆಂಬೀಗ್ರಂಥದ ಒಂದು ಓಲೇಪ್ರತಿಯು ಸುಮಾರು ಹತ್ತು ವರ್ಷಗಳ ಕೆಳಗೆ ನನಗೆ ದೊರಕಿತು. ಇದು ಅವ್ಯುತ್ಪನ್ನರಾದ ಲೇಖಕರಿಂದ ಬರೆಯಲ್ಪಟ್ಟದ್ದಾಗಿಯೂ, ಯಾವದೋ ಒಂದು ಜೀರ್ಣಪ್ರತಿಯ ಮೇಲೆ ಹುಟ್ಟಿದ್ದಾಗಿಯೂ ಇದ್ದಕಾರಣ ಅಲ್ಲಲ್ಲಿ ಕೆಲವು ಪದ್ಯಗಳಿಲ್ಲದೆ ಕಥಾಸಂದರ್ಭ ಕೆಟ್ಟಿತ್ತು. ಕೆಲವುಪದ್ಯಗಳಲ್ಲಿ ಒಂದುಪಾದವೂ, ಇನ್ನು ಕೆಲವುಪದ್ಯಗಳಲ್ಲಿ ಎರಡು ಮೂರು ಪಾದಗಳೂ, ಲುಪ್ತವಾಗಿದ್ದದ್ದಲ್ಲದೆ ಅಲ್ಲಲ್ಲಿ ಅಕ್ಷರಪಾತಗಳೂ, ಬಹಳವಾಗಿದ್ದವು. ಆದಕಾರಣ ನಿರಬದ್ಧವಾದ ಮತ್ತೊಂದು ಪ್ರತಿಯನ್ನು ಸಂಪಾದಿಸಬೇಕೆಂದು ಬಹು ದಿವಸಗಳವರೆಗೂ ಪ್ರಯತ್ನಪೂರ್ವಕವಾಗಿ ವಿಚಾರಿಸಿದಾಗ್ಯೂ ದೊರಕಲಿಲ್ಲ. ಕಡೆಗೆ ಶ್ರೀಮನ್ಮಹಾರಾಜರವರ ಅರಮನೆಯ ಸರಸ್ವತೀ ಭಂಡಾರದಲ್ಲಿದ್ದ ಒಂದು ಪ್ರತಿಯನ್ನು ಅಲ್ಲಿನ ಅಧಿಕಾರಿಗಳ ಅಪ್ಪಣೆಯಿಂದ ಪಡೆದು ಎರಡು ಪ್ರತಿಗಳನ್ನೂ ಹೋಲಿಸಿ ನೋಡುವಲ್ಲಿ ಆ ಸರಸ್ವತೀಭಂಡಾರದ ಪ್ರತಿಯೇ ನನ್ನಲ್ಲಿದ್ದ ಪ್ರತಿಗೆ ಮಾತೃಕೆಯಾಗಿತ್ತು. ಆದಾಗ್ಯೂ ಇಂಥಾ ಉತ್ತಮವಾದ ಗ್ರಂಥವು ನಷ್ಟವಾದರೆ ಭಾಷೆಗೆ ನಷ್ಟವುಂಟಾಗುವದಾದ್ದರಿಂದ ಹ್ಯಾಗಾದರೂ ಮುದ್ರಿಸಿ ಪ್ರಕಟಿಸಬೇಕೆಂದು ಅನೇಕ ಪಂಡಿತರು ಹೇಳಿದ್ದರಿಂದಲೂ, ಶ್ರೀಮನ್ಮಹಾರಾಜರವರ ದರ್ಬಾರು ಬಕ್ಷಿಯವರಾದ ರಾಯಬಹದ್ದೂರ್ ಮಹಾರಾಜಶ್ರೀ ಪಿ. ನರಸಿಂಹಯ್ಯಂಗಾರ್ಯರು ಮುದ್ರಣವಿಷಯದಲ್ಲಿ ಬೇಕಾದ ಸಹಾಯವನ್ನೆಲ್ಲಾ ಮಾಡಿದ್ದರಿಂದಲೂ, ವಿದ್ಯಾಭ್ಯಾಸದ ಇಲಾಖೆಯ ಸಿಕ್ರೆಟೆರಿಯವರಾಗಿದ್ದ ಬಿ. ಎಲ್. ರೈಸ್. ಸಿ. ಐ. ಇ. ಸಾಹೇಬರವರು ಸರಕಾರದಿಂದಲೂ ಸ್ವಲ್ಪ ಸಹಾಯವನ್ನು ಮಾಡುವದಾಗಿ ಅಪ್ಪಣೆ ಕೊಡಿಸಿದ್ದರಿಂದಲೂ, ಈ ಗ್ರಂಥವನ್ನು ಅಚ್ಚು ಹಾಕಿಸಿದೆನು. ಈ ಗ್ರಂಥವು ಸಂಸ್ಕೃತ ಕಾದಂಬರಿಗೆ ಸರಿಯಾದ ಭಾಷಾಂತರವಾದದ್ದರಿಂದ ಅದರ ಸಹಾಯವಿಲ್ಲದಿದ್ದರೆ ತಪ್ಪಿಲ್ಲದಂತೆ ಪರಿಷ್ಕರಿಸುವದಕ್ಕೆ ಎಂದಿಗೂ ಆಗುತ್ತಿರಲಿಲ್ಲ. ಇದಲ್ಲದೆ ಸಂಸ್ಕೃತಕ್ಕೂ ಕನ್ನಡಕ್ಕೂ ಹೋಲಿಸಿ, ತಪ್ಪನ್ನು ತಿದ್ದಿ ಅಕ್ಷರಪಾತವನ್ನು ಸರಿಮಾಡಿ, ಪಾದಪಾತಗಳಿದ್ದ ಕಡೆಗಳಲ್ಲಿ ಕವಿತ್ವವನ್ನು ಮಾಡಿ ಸೇರಿಸುವ ವಿಷಯದಲ್ಲಿ ಪೂರ್ವಕಾದಂಬರಿಯ ಒಂದುಭಾಗವು ಅಚ್ಚಾದಮೇಲೆ, ನನ್ನೊಡನೆ ನಿಯತವಾಗಿ ಶ್ರಮವನ್ನು ತೆಗೆದುಕೊಂಡ ಕನ್ನಡ ಪಂಡಿ

ತರಾದ ವೆಸ್ಲಿಯನ್ ಮಿಷನ್ ಹೈಸ್ಕೂಲ್ ಮುನಿಷಿ ವೇ॥ ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ ತುಂಬಾ ಕೃತಜ್ಞನಾಗಿರುವೆನು. ಇದಲ್ಲದೆಗ್ರಂಥಪಾತದಿಂದ ಕಥಾಸಂದರ್ಭವು ಕೆಟ್ಟಿದ್ದ ಕಡೆಗಳಲ್ಲಿ ಸಂಸ್ಕೃತಕಾದಂಬರಿಯ ಅರ್ಥವನ್ನು ಬಿಡದೆ ನಾಗವರ್ಮನ ವಾಕ್ಸರಣಿಗೆ ಸಮಾನವಾದ ವಾಕ್ಸರಣಿಯಿಂದ ಪದ್ಯಗಳನ್ನು ರಚಿಸಿಕೊಟ್ಟು ಗ್ರಂಥಪರಿಷ್ಕರಣವಿಷಯದಲ್ಲಿಯೂ ಆಗಾಗ್ಗೆ ಸಹಾಯ ಮಾಡಿದ ಶ್ರೀಮನ್ಮಹಾರಾಜರವರ ಆಸ್ಥಾನಕವಿಗಳಾಗಿದ್ದು ಗತಿಸಿದ ಬಸವಪ್ಪ ಶಾಸ್ತ್ರಿಗಳಿಗೂ, ಆಸ್ಥಾನಪಂಡಿತರಾಗಿರುವ ಸೋಸಲೆ ಅಯ್ಯಾಶಾಸ್ತ್ರಿಗಳಿಗೂ, ಇಂಗ್ಲೀಷ್ ಕಾಲೀಜು ಕನ್ನಡಪಂಡಿತರಾಗಿರುವ ಕರಿಬಸವಪ್ಪಶಾಸ್ತ್ರಿಗಳಿಗೂ ನನ್ನ ವಂದನೆಗಳನ್ನು ಸಮರ್ಪಿಸುವೆನು. ಪೂರ್ವಕಾದಂಬರಿಯಲ್ಲಿ ೬೦೩ನೆ ಪದ್ಯದಿಂದ ೬೧೮ನೆ ಪದ್ಯದವರಿಗೂ, ೭೦೧ ರಿಂದ ೭೦೭ ರವರಿಗೂ ಬಸವಪ್ಪಶಾಸ್ತ್ರಿಗಳೂ, ಉತ್ತರಕಾದಂಬರಿಯಲ್ಲಿ ೫೭೦ ರಿಂದ ೫೯೯ ರವರಿಗೆ ಅಯ್ಯಾಶಾಸ್ತ್ರಿಗಳೂ, ೭೦೯ನೆ ಪದ್ಯದಿಂದ ೭೩೫ನೆ ಪದ್ಯದವರಿಗೆ ಕರಿಬಸವಪ್ಪಶಾಸ್ತ್ರಿಗಳೂ ರಚಿಸಿರುತ್ತಾರೆ. ಅಲ್ಲಲ್ಲಿ ಆಯಾ ಪುಟಗಳ ಕೆಳಭಾಗದಲ್ಲಿ ಇವರುಗಳ ಹೆಸರನ್ನು ಸೂಚಿಸಿ ಇವರಿವರು ರಚಿಸಿದ ಈ § ಗುರುತನ್ನು ಹಾಕಿರುವ ಗದ್ಯಪದ್ಯಗಳನ್ನು ನೋಡಿದರೆ ಗುಣಜ್ಞರಾದ ವಿದ್ವಾಂಸರು ಅತ್ಯಂತವಾಗಿ ಸಂತೋಷಪಡದೆ ಇರಲಾರರು.

ಒಂದೊಂದು ಅಕ್ಷರಗಳ ಅಬದ್ಧವು ಅನೇಕವಾಗಿತ್ತು. ಅದಕ್ಕೆಲ್ಲಾ ಆವರಣಚಿಹ್ನೆಯನ್ನು ಹಾಕಿದರೆ ಮುದ್ರಾರಚನೆ ಕೆಡುವದೆಂದೆಣಿಸಿ ಕೆಲವು ಅಕ್ಷರಗಳ ಅಥವಾ ಕೆಲವು ಪಾದಗಳ ಪಾತವಿದ್ದ ಕಡೆಯಲ್ಲಿ ಮಾತ್ರ ಸಂಸ್ಕೃತಕಾದಂಬರಿಯನ್ನು ನೋಡಿ, ಪದ್ಯಾರ್ಥವು ಕೆಡದಂತೆ ಪೂರ್ತಿಮಾಡಿ ಅದಕ್ಕೆ ಹೀಗೆ [ ] ಬರೀ ಆವರಣಚಿಹ್ನೆಯು ಹಾಕಲ್ಪಟ್ಟಿರುವದು. ಅಬದ್ಧವನ್ನು * † ‡ ¶ ‖ ಈಗುರುತುಗಳೊಡನೆ ಆವರಣದೊಳಗೆ ಆಯಾಪುಟದ ಕೆಳಗಡೆಯಲ್ಲಿಟ್ಟು ಅರ್ಥಕೆಡದಂತೆ ಅಕ್ಷರಗಳನ್ನು ಅಥವಾ ಪಾದಗಳನ್ನು ಕವಿತ್ವಮಾಡಿ ಪದ್ಯಗಳಲ್ಲಿ ಸೇರಿಸಿ ಆಯಾಗುರುತುಗಳು ಹಾಕಲ್ಪಟ್ಟಿರುವವು. ಈ ಗ್ರಂಥದಲ್ಲಿ ಕೆಲವು ಕಠಿನವಾದ ಶಬ್ದಗಳಿಗೆ ಮಾತ್ರ ಅರ್ಥವೂ ಅಲ್ಲಲ್ಲಿ ವ್ಯಾಕರಣವಿಷಯವೂ ಬರೆಯಲ್ಪಟ್ಟಿರುವದು. ಶಮ. ಸೂ. ಎಂದು ಬರೆದಿರುವದನ್ನು ಶಬ್ದಮಣಿದರ್ಪಣದಸೂತ್ರವೆಂತಲೂ, ಶಶಾ. ಸೂ. ಎಂದು ಬರೆದಿರುವಕಡೆಗಳಲ್ಲಿ ಶಬ್ದಾನುಶಾಸನದ ಸೂತ್ರವೆಂತಲೂ ತಿಳಿಯತಕ್ಕದ್ದು. ಅಚ್ಚುಹಾಕುವಾಗ ಪ್ರಮಾದದಿಂದ ಬಿದ್ದಿರುವ ಅಶುದ್ಧಗಳನ್ನು ಮತ್ತೊಂದು ಮುದ್ರಣದಲ್ಲಿ ಸರಿಮಾಡುವೆನು.

ಬಿ. ಮಲ್ಲಪ್ಪ.

KARNATAKA

KÁDAMBARI.

ಕರ್ಣಾಟಕ

ಕಾದಂಬರಿ.

ಪೂರ್ವಭಾಗ.

ವೃತ್ತ ॥ ಶ್ರೀಮನ್ನಾಗೇಂದ್ರಭೋಗಸ್ಫುರದರುಣಮಣಿದ್ಯೋತಸಂ
ಧ್ಯಾನಿಬದ್ಧ । ಪ್ರೇಮಂ ಪ್ರೋದ್ಯತ್ತರಂಗೋಚ್ಚರದಮರನದೀ ಶೀಕರೋ
ದಾರತಾರಾ ॥ ರಾಮಂ ಹೇಮಪ್ರಭಾಪ್ರಸ್ಫುರಿತಗಿರಿಶಚಂಚಜ್ಜಟಾಜಾಲ
ಜೂಟ । ವ್ಯೋಮಪ್ರೋದ್ಭಾಸಿಚಂದ್ರಂ ತ್ರಿಭುವನಜನಕಾನಂದಮಂ
ಮಾಡುಗೆಂದುಂ ॥ ೧

ಸತತ ಗಭೀರವೃತ್ತಿಯಿನುದಾರತೆಯಿಂ ಜಗದೇಕಜೀವನ । ಸ್ಥಿತಿ
ಯಿನತಿಪ್ರಸಾದಗುಣದಿಂ ರಸಭಾವವಿಳಾಸದಿಂ ಕವಿ ॥ ಪ್ರತತಿನಿತಾಂತಸೇ
ವ್ಯತೆಯಿನೊಂದಿ ಸರಸ್ವತಿಯಂದದಿಂ ಸರ । ಸ್ವತಿ ದಯೆಗೆಯ್ಗೆ ನಮ್ಮೊಳ
ನುಕೂಲತೆಯಿಂದಮೆ ನಿರ್ಮಳತ್ವಮಂ ॥ ೨

---

೧. ಭೋಗ—ಹೆಡೆ; ರಾಮಂ—ಮನೋಹರನಾದ; ಜೂಟ—ಮುಡಿಕಟ್ಟು.

೨. ಗಭೀರವೃತ್ತಿ—ಗಂಭೀರವಾದ ಕೈಶಿಕಿ ಮೊದಲಾದ ವೃತ್ತಿಗಳು, ಆಳವಾದ ವರ್ತನವು; ಉದಾರತೆ—ವೃತ್ತಿರೀತಿಮೊದಲಾದವುಗಳಿಂದುಂಟಾದ ಗುಣ, ಮಹತ್ವ; ಪ್ರಸಾದ—ಪ್ರಸಾದವೆಂಬಗುಣ, ನೈರ್ಮಲ್ಯ; ರಸಭಾವ—ಶೃಂಗಾರಾದಿರಸಗಳೂ ವಿಭಾವಾನುಭಾವಾದಿಗಳೂ, ಸ್ವಾಪದಸ್ಥಿತಿ; ಕವಿ—ಗ್ರಂಥಕರ್ತರು, ನೀರಪಕ್ಕಿಗಳು; ಅನುಕೂಲತೆ—ಅನುಕೂಲ್ಯ, ಅನುಗತಕೂಲತ್ವವೆಂದರೆ ಸಂಪೂರ್ಣತೆ; ಸರಸ್ವತಿಯಂದದಿಂ—ಸರಸ್ವತೀನದಿಯಂತೆ; ಸರಸ್ವತಿ—ಶಾರದೆ.

ಬಾಣಂ ವಲ್ಲಭನಕ್ಕುಮೆಂದು ಪಡೆದಾವಾಗ್ದೇವಿಗಬ್ಜೋದ್ಭವಂ । ಜಾಣಿಂ ಬಾಣಿಯೆನಿಪ್ಪದೊಂದುಪೆಸರಂ ಮುನ್ನಿತ್ತನೆಂದಂದು ಪೋ ॥ ಮಾಣಿನ್ನನ್ಯಕವಿಸ್ತುತಿವ್ಯಸನಮುಂ ವಾಗ್ಜಾತಚಾತುರ್ಯ ಗೀ । ರ್ವಾಣಂ ತಾನೆನೆ ಸಂದಬಾಣನೆ ವಲಂ ವಂದ್ಯಂ ಪೆಱರ್ವಂದ್ಯರೇ ॥ ೩

ಕಂದ ॥ ಅವಯವದೆರ್ದೆಗೊಳ್ವುದಿದಾ । ರುವನೆಂದೊಡೆ ಬಾಣ ಕೃತಿ ಪುಳಿಂದನ ಸಂಧಾ ॥ ನವನೆಯ್ದಿದತ್ತು ಮತ್ತಿನ । ಕವಿಕುಳದೆರ್ದೆಗೊಳ್ವುದೆಂಬುದೊಂದಚ್ಚರಿಯೇ ॥ ೪

ಸತ್ಕೃತಿ ಸಂಸ್ಕೃತದಿಂದೆ ಜ । ಗತ್ಕೌತುಕವಾಗಿ ಮತ್ತೆ ಕರ್ಣಾಟದೊಳಂ ॥ ಸತ್ಕವಿ ನಿವಹಂ ಪೊಗಳೆ ಚ । ಮತ್ಕೃತಿಯಂ ಪಡೆದುಸೊಬಗುವಡೆದತ್ತೀಗಳ್ ॥ ೫

ಆ ಕೃತಿ ಮುನ್ನಂ ಚೆಲ್ವಿಂ । ಗಾಕರಮೆನಿಸಿದ್ದು ಮತ್ತೆ ಕನ್ನಡಿಸಿತ್ತೆ ॥ ನ್ನೀ ಕವಿತೆಯಿಂ ಪ್ರಗಲ್ಭತೆ । ಯಾ ಕಾದಂಬರಿಯ ಸೊಬಗದೇನಚ್ಚರಿಯೋ ॥ ೬

ಕೃತಿಪತಿ ನರೇಂದ್ರಚಂದ್ರಂ । ಕೃತಿಯಂ ಪೇಳ್ದಂ ಬುಧಾಬ್ಜವನಕಳಹಂಸಂ ॥ ಕೃತಿ ಕಾದಂಬರಿಯೆನೆ ಸ । ತ್ಕೃತಿಕಥಿತಕಥಾವತಾರಮೇಂ ಕೇವಳಮೋ ॥ ೭

---

೩. ಜಾಣಿಂ—ಜಾಣತನದಿಂದ; ಮುನ್—ಮೊದಲು; ಪೋ—ಹೋಗು; ಮಾಣ್—ಬಿಡು; ಇನ್—ಇನ್ನು ಮೇಲೆ.

೪. ಬಾಣಕೃತಿ.—ಬಾಣನಕಾವ್ಯ, ಅಂಬಿನಕೆಲಸ; ಅವಯವದೆ—ಅಂಗಗಳೊಳಗೆ; ಆರುವಂ—ಯಾರಿಗಾದರೂ; ಎರ್ದೆಗೊಳ್ವುದು—ಮನೋಹರವಾಗುವದು, ಹೃದಯವನ್ನು ಭೇದಿಸುವದು; ಎಯ್ದಿದತ್ತೆಂದೊಡೆ—ಹೊಂದಿರುವಲ್ಲಿ; ಕವಿ—ಗ್ರಂಥಕರ್ತರು, ಜಲಪಕ್ಷಿಗಳು.

೫. ಚಮತ್ಕೃತಿಯಂ ಪಡೆದು—ಚಮತ್ಕಾರವನ್ನುಂಟುಮಾಡಿ.

೬. ಕನ್ನಡಿಸಿತ್ತು—ಕನ್ನಡವಾಗಿ ಮಾಡಲ್ಪಟ್ಟಿತು; ಕಾದಂಬರಿಯ.—ಕಾದಂಬರಿಯೆಂಬ ಗ್ರಂಥದ.

೭. ನರೇಂದ್ರಚಂದ್ರಂ—ಚಂದ್ರಾಪೀಡನು; ಪೇಳ್ದಂ—ಹೇಳಿದವನು; ಕೇವಳಮೋ—ಸಾಧಾರಣವೇ; ಬುಧಾಬ್ಜವನಕಲಹಂಸಂ—ನಾಗವರ್ಮನು.

ವೃತ್ತ ॥ ಇಳೆಯೊಳ್‌ದೋರ್ವ್ವನಿಂದ್ರನೆನೆ ಸಂದ ಸಮೃದ್ಧಿಯೊಳೊಂದಿ ಕೂಡಿತ । ನ್ನೊಳೆ ನೃಪಲಕ್ಷಣಂ ನೆಗಳೆ ದೋರ್ವ್ವಳದಿಂ ಚತುರಬ್ಧಿಮೇಖಲಾ ॥ ವಳಯಿತಭೂಮಿಗಾದನೆಱೆಯಂ ನೃಪತಿ ಪ್ರಭುಲೋಕಮಂ ನಿಜೋ । ಜ್ಜ್ವಳತರಕೀರ್ತಿಯಿಂ ನೆಱೆಯೆ ಮುದ್ರಿಸಿ ಶೂದ್ರಕನೆಂಬ ಭೂಭುಜಂ ॥ ೮

ಕಂದ ॥ ಆಕ್ರಮಿಪೆಡೆಯೊಳ್ಮೂಱುಂ । ವಿಕ್ರಮದಾಯಾಸಮಾಯ್ತು ಮುಂಚಕ್ರಿಗೆನು ॥ ತ್ತಾಕ್ರಾಂತಸಮಸ್ತಜಗ । ಚ್ಚಕ್ರಂ ನೃಪನೊಂದೆ ವಿಕ್ರಮಂ ನಗುತಿರ್ಕ್ಕುಂ ॥ ೯

ಅರಿಗಳ್ಪೆಸರ್ಗೇಳ್ದಿರ್ದುವೊಡೆ । ವರೆಂಬ ಶೂದ್ರಕನ ವಿಕ್ರಮಾಡಂಬರಮಂ ॥ ದರೆಮಾಸಿಸಿಕೆಯೊಳೊಂದಿದ । ನರಸಿಂಹಾಡಂಬರಕ್ಕೆ ನಸುನಗುತಿರ್ಕ್ಕುಂ ॥ ೧೦

ಕಲಿಮಲಿನಕುಭೃತ್ಸಂಗದ । ಕಳಂಕಮಂಕರ್ಚ್ಚಿ ಕಳೆಯಲೆಂದಾ ಭೂಮಂ । ಡಳಪತಿಯುಖಡ್ಗಧಾರಾ । ಜಳದೋಳ್ ಸಾಮ್ರಾಜ್ಯಲಕ್ಷ್ಮಿ ಸಲೆ ನೆಲಸಿರ್ಪ್ಪಳ್ ॥ ೧೧

ಪಿರಿದುಂ ದೃಢತರಮುಷ್ಟಿಯ । ಭರದಿಂ ಮುನ್ನುಂಡ ನೀರನುಗುಳ್ದಪ್ಪುದೆಂಬಂ ॥ ತರಿಕರಿಮಸ್ತಕಮುಕ್ತೋ । ತ್ಕರದಂತುರಮೆಸೆವುದಾ ನೃಪಾಲಕೃಪಾಣಂ ॥ ೧೨

---

೮. ಸಂದ—ಪ್ರಸಿದ್ಧನಾದ ; ತನ್ನೊಳೆ–ತನ್ನಲ್ಲಿ ; ನೆಗಳೆ—ಪ್ರಸಿದ್ಧವಾಗಲು ; ಎಱೆಯಂ—ಸ್ವಾಮಿಯು ; ನೃಪತಿಪ್ರಭು—ರಾಜಾಧಿರಾಜನು ; ನೆಱೆಯೆ—ಸೇರಿಕೊಳ್ಳುವಹಾಗೆ.

೯. ಮುಂ—ಪೂರ್ವದಲ್ಲಿ ; ವಿಕ್ರಮಂ—ಪಾದವಿನ್ಯಾಸ, ಪರಾಕ್ರಮ ; ನಗುತಿರ್ಕ್ಕುಂ—ಹಾಸ್ಯಮಾಡುತ್ತಿರುವದು.

೧೦. ಅರೆಮಾಸಿಸಿಕೆ—ಅರ್ಧ ಮನುಷ್ಯತ್ವ ; ಆಡಂಬರಕ್ಕೆ—ಆರ್ಭಟವನ್ನು ಕುರಿತು.

೧೧. ಕರ್ಚ್ಚಿಕಳೆಯಲ್—ತೊಳೆದುಬಿಡುವದಕ್ಕಾಗಿ.

೧೨. ಪಿರಿದುಂ—ಅಧಿಕವಾಗಿ ; ಮುನ್ನುಂಡನೀರಂ—ಪದಕೊಡುವಾಗಕುಡಿದ ನೀರನ್ನು.

ವೃತ್ತ ॥ ಕಲಿಗಳುರಃಕವಾಟ ಕವಚಂಗಳ ಕಳ್ತಲೆಯೊಳ್ಕರೀಂದ್ರ ಸಂ। ಕುಳಮುದವಾರಿ ಧಾರೆಗಳಪೆರ್ಮ್ಮೆಳೆಯೊಳ್ ರಣಮೆಂಬರಾತ್ರಿಯೊ ಳ್ ॥ ಸಲೆಬರುತಿರ್ಪ್ಪಳೆಂದುಮಭಿಸಾರಿಕೆಯುಂದದೆ ರಾಜ್ಯಲಕ್ಷ್ಮಿ ತ। ನ್ನೊಲವಿನೊಳೆಂದೊಡಾನೃಪನ ಪೌರುಷಮೇಂ ಪೊಗಳಲ್ಕೆವೇಳ್ಕುಮೋ ॥ ೧೩

ಕಂದ ॥ ಹೃದಯಸ್ಥಿತ ನೃಪರುಮನುರು। ಪಿದಪ್ಪುದೆನಲ್ಪತಿವಿಯೋಗ *[ಖಿದ್ಯದ್ವನಿತಾ] ಹೃದಯಂಗಳೊ †[ಳಾವಗಮುರಿ। ವುದು] ಕಡುಪಿನೊಳಾನೃಪಪ್ರತಾಪಜ್ವಲನಂ ॥ ೧೪

ವೃತ್ತ ॥ ಇದುಕಲಿಭೀತಿಯಿಂ ಕೃತಯುಗಂ ಬಲಿದಿರ್ದ್ದಪುದೆಂಬ ನಚ್ಚರಿ। ತ್ರಿದಿನೆಸೆದಾವಗಂತ್ರಿಭುವನಪ್ರಸವಕ್ಕಿದು ಭೂಮಿಯೆಂಬ ಪೆಂ ॥ ಪೊದವಿರೆಪೆರ್ಮ್ಮೆಯಿಂ ವಿದಿಸೆಯೆಂಬುದುನಚ್ಚಿನ ರಾಜಧಾನಿ ಯಾ। ದುದು ಜಗದೊಳ್ವಿಶೇಷಮೆನಲೊಪ್ಪುವ ಮಾಳವ ಮಧ್ಯದೇಶದೊಳ್॥ ೧೫

ವಚನ ॥ ಮತ್ತಮದುಜಳಕೇಳಿಗೆಂದು ಬಂದೋಲಾಡುವ ಮಾಳವ ವಿಲಾಸಿನಿಯರ ಪೆರ್ಮ್ಮೊಲೆಯ ಪೊರ್ಕ್ಕುಳಿಯೊಳ್ಪಳಿವಳಿಯಾದ ಪೆರ್ದ್ದೆರೆಯೊಳಮುಪಗಾಹನಕ್ಕೆಂದು ಬಂದಸೊಕ್ಕಿದಾನೆಗಳ ಸಿಂದುರಂಬೊರೆದಸಲಿಲಂಗಳೊಳ ‡[ಮಿಂಚರವಂಚೆವಿಂಡುಗಳಿಂ] ಸೊಗಯಿಸುವಿರ್ತ್ತಡಿಗಳೊಳಮೊಪ್ಪಂಬೆತ್ತ ವೇತ್ರವತಿಯೆಂಬನದಿಯಿಂ ಸುತ್ತುಂಗೊಂಡಿರ್ಪ್ಪದಾ ರಾಜಧಾನಿಯೊಳ್ ॥ ೧೬

---

೧೩. ಅಭಿಸಾರಿಕೆ—ನಾಯಕನಸಂಕೇತ ಸ್ಥಳವನ್ನು ಕುರಿತು ಹೋಗುವ ಸ್ತ್ರೀ; ವೇಳ್ಕುಮೇ—ಸಾಧ್ಯವಾಗುವದೇ.

೧೪. ಉರುಪಿದಪ್ಪುದು—ಸುಡುತ್ತದೆ; ಕಡುಪಿನೊಳ್—ಪ್ರಾಬಲ್ಯದಿಂದ.

೧೫. ಬಲಿದು—ನೆಲೆಗೊಂಡು; ವಿದಿಸೆಯೆಂಬುದು—ವಿದಿಸೆಯೆಂಬ ಪಟ್ಟಣವು; ನಚ್ಚಿನ—ವಿಶ್ವಾಸಕ್ಕೆ ಪಾತ್ರವಾದ.

೧೬. ಓಲಾಡುವ—ಈಜಾಡುವ; ಪೊರ್ಕ್ಕುಳಿಯೊಳ್—ಹೊಡೆತದಿಂದ; ಪಳಿವಳಿಯಾದ—ಕಲಕಲ್ಪಟ್ಟ; ಸಿಂದುರಂಪೊರೆದ—ಚಂದ್ರವಪುಡಿಯಿಂದ ವ್ಯಾಪ್ತವಾದ; ಇಂಚರದ—ಮಧುರಧ್ವನಿಯುಳ್ಳ.

* [ವಿದ್ಯದ್ವನಿತಾ] † [ಳೊಮ್ಮೆವು। ಮುಱವುದು]

‡ [ಮಂಜೀರವಲ್ಲರಿಂಚರವಂಚೆವಿಂಡುಗಳೊಳಂ]

ಹರಿಣೀವೃತ್ತ || ಮಥಿತರಿಪುಭೂಪಾಳಂ *[ಹೇಳಾವಶೀಕೃತಮಂಡಲಂ] | ಪ್ರಥಿತಪೃಥಿವೀಪಾಲೌಘಾನಮ್ರಮೌಳಿಮಣಿಪ್ರಭಾ | ಗ್ರಥಿತಪದಪೀಠಾಗ್ರಂ ಕೇಯೂರಮಂ ತಳೆವಂದದಿಂ | ಪೃಥುಳಭುಜದಿಂ ಪೃಥ್ವೀಶಂ ತಾಳ್ದಿದಂ ನೆಲನೆಲ್ಲಮಂ || ೧೭

ವ || ಅಂತು ವಿಜಿತಾಶೇಷಭುವನಮಂಡಲತೆಯಿನವನಪಗತ ರಾಜ್ಯಚಿಂತಾಭಾರನಿರ್ವೃತನಾಗಿರ್ಪನಂತು ಮಲ್ಲದೆಯುಂ || ೧೮

ಕಂದ || ಪ್ರಣತರಿಪುನೃಪತಿಚೂಡಾ | ಮಣಿರಂಜಿತಪಾದ ನಧಿಕಸತ್ವಗುಣೈಕಾ || ಗ್ರಣಿಗಾನೃಪಂಗೆ ಮನದೊಳ್ | ತೃಣವಲ್ಲಘುವಾದುದಾವಗಂ ಸ್ತ್ರೈಣಸುಖಂ || ೧೯

ವೃತ್ತ || ಕಂತುಗೆ ತಾನೆಮೇಲೆನಿಸಿಯುಂ ಪೊಸಜವ್ವನದಿಂದಮೊಂಡಿಯುಂ | ಸಂತತಿವೇಳ್ಕುಮೆಂದು ಸಚಿವರ್ಸಲೆಪೇಳೆಯುಮೊಳ್ಪುವೆತ್ತ ಶುದ್ಧಾಂತನಿತಂಬಿನೀನಿವಹ ಮೊಲ್ದೆಳಸುತ್ತಿರೆಯುಂ ಧರಾಂಗನಾ | ಕಾಂತನಚಿತ್ತಮೇಕಱಿಯೆಮೊಂದಮಣಂ ಸುರತೋಪಭೋಗಮಂ || ೨೦

ಅದೊರ್ಮೆ †[ಕಲ] ವಾದ್ಯದಿಂ ಸರಸವಾದ ‡[ಗೀತಂಗಳಿಂ] | ದದೊರ್ಮೆ ಮೃದುಪಂಚಮಾಂಚಿತ ವಿಪಂಚಿಕಾನಾದದಿಂ || ದದೊರ್ಮೆ ರಸಭಾವ §[ಕಂಚುಕಿತ] ಚಿತ್ರಕರ್ಮಂಗಳಿಂ | ದದೊರ್ಮೆ ವಿವಿಧಪ್ರಕಾರಮೃಗಯಾ ¶[ವಿನೋದಂಗಳಿಂ] || ೨೧

---

೧೭. ತಾಳ್ದಿದಂ—ಧರಿಸಿದನು ; (ಧಾತು)—ತಾಳ್ದು.

೧೯. ಸ್ತ್ರೈಣ—ಸ್ತ್ರೀಸಂಬಂಧಿಯಾದ ; ತೃಣವಲ್ಲಘು—ಹುಲ್ಲಿನಂತೆ ನಿಸ್ಸಾರವಾದದ್ದು; (ವ್ಯಾಕ) ಶ. ಮ. ೧೫೦. ಸೂತ್ರದಿಂದ ಚೂಡಾಮಣಿರಂಜಿತ ಪಾದಂ ಎಂಬ ಪ್ರಥಮೆಯು ನೃಪಂಗೆಯೆಂಬ ಚತುರ್ಥ್ಯಂತಪದಕ್ಕೆ ವಿಶೇಷಣವು.

೨೦. ಕಂತುಗೆ—ಮನ್ಮಥನಿಗಿಂತಲು ; ವೇಳ್ಕುಂ—ಅವಶ್ಯಕವಾದದ್ದು ; ಅರಿಯೆಂ—ತಿಳಿಯೆನು ; ಅಣಂ—ಸ್ವಲ್ಪವಾದರೂ.

೨೧. ಅದೊರ್ಮೆ—ಒಂದುವೇಳೆಯಲ್ಲಿ.

*[ಹೇಳಾವನಿಮಂಡಲಂ] †[ಲಲಿತ] ‡[ಗೀತದಿಂ] §[ಸಂಕುಚಿತ] ¶[ವಿನೋದದಿಂ]

ಅದೊರ್ಮೆ ನವಕಾವ್ಯ ಬಂಧರಚನಾವಿಶೇಷಂಗಳಿಂ । ದದೊರ್ಮೆ ಪರವೀರವಿಶ್ರುತಕಥಾ ಪುರಾಣಂಗಳಿಂ ॥ ದದೊರ್ಮೆ ಮುನಿಮಂಡಳೀ ಪದಪಯೋಜ ಶುಶ್ರೂಷೆಯಿಂ । ವಿದಗ್ಧಜನವಲ್ಲಭಂ ಕಳೆವನಿಂತುಪೊಳ್ತಂ ನೃಪಂ ॥ ೨೨

ವ॥ ಅಂತು ವನಿತಾಸುಖಪರಾಙ್ಮುಖಂ ಪೊಳ್ತುಗಳೆವುತ್ತಿರ್ದ್ದೊಂದುದಿವಸಂ ಪ್ರಭಾತಸಮಯದೊಳೊಡ್ಡೋಲಗದೊಳಿರೆ ॥

ವೃ॥ ತಳೆದೇನಿರ್ದ್ದರೊ ತಮ್ಮತಮ್ಮ ತಲೆಯೊಳ್ರಾಜಾಜ್ಞೆಯಂ ಮೂರ್ತಿಗೊಂ । ಡಳನೆಂಬಂತಿರೆ ಭೂಪತಿಪ್ರಕರ ನಾನಾಮೌಳಿ ಮಾಣಿಕ್ಯಸಂ॥ ಕುಳದೊಳ್ಮಾರ್ಪ್ಪೊಳೆವುತ್ತಮೊಯ್ಯನೆ ಬರುತ್ತಿರ್ದ್ದಳ್ ಪ್ರತೀಹಾರಿಭೂ । ವಳಯಾಧೀಶ್ವರನಲ್ಲಿಗಾಗಿ ನಯದಿಂ ವಿಜ್ಞಾಪನೋತ್ಕಂಠೆಯಿಂ ॥ ವ ॥ ಅಂತುಬಂದು ॥ ೨೩

ಜನತಾಧೀಶ್ವರ ಬಿಂನಪಂ ತ್ರಿದಶಲೋಕಕ್ಕೇಱುತ್ತಿರ್ದ್ದತ್ರಿಶಂ । ಕುನರಾಧೀಶನ ಲಕ್ಷ್ಮಿ ಶಕ್ರನ ಮಹಾಹುಂಕಾರದಿಂ ಬಿರ್ದ್ದಳೆಂ ॥ ಬಿನೆಗಂ ವಿಶ್ರುತದಕ್ಷಿಣಾಪಥದಿ ನೊರ್ವ್ವಳ್ಕನ್ನೆ ಚಂಡಾಲೆ ದ । ರ್ಪನತಾತ್ಪರ್ಯದೆ ರಾಜಕೀರಸಹಿತಂ ಬಂದಿರ್ದ್ದಪಳ್ಬಾಗಿಲೊಳ್॥ ೨೪

ವ॥ ಎಂದು ಪಡಿಯಱಿತಿ ಬಿನ್ನವಿಸೆ ರಾಜಾಧಿರಾಜಂ ರಾಜಲೋಕದ ಮೊಗಮಂ ನೋಡಿ ದೋಷಮೇಂ ಬರ್ಕ್ಕೆಂಬುದುಂ ಚಂಡಾಲಕನ್ನೆಯಂ ಪುಗವೇೞ್ದಾಗಳ್ ॥ ೨೫

ವೃ ॥ ಕುಳಶೈಲವ್ರಾತದಿಂದಂ ಬಳಸಿದ ಕನಕಾದ್ರೀಂದ್ರಮೆಂಬಂತೆ ಭೂಭೃ। ತ್ಕುಳಮೆತ್ತಂ ಸುತ್ತೆ ರತ್ನಾಭರಣಕಿರಣ ಜಾಲಂಗಳಿಂದಿಂದ್ರಚಾಪಂ॥

೨೩. ಮೂರ್ತಿಗೊಂಡಳಂ—ದೇಹವನ್ನು ಧರಿಸಿದ; ಮಾರ್ಪ್ಪೊಳೆವುತ್ತಂ—ಪ್ರತಿಬಿಂಬಿಸುತ್ತಾ; ಒಯ್ಯನೆ—ಮೆಲ್ಲಗೆ.

೨೪. ಏಱುತ್ತಿರ್ದ್ದ—ಹತ್ತುತ್ತಿದ್ದ; ಎಂಬಿನೆಗಂ—ಎಂಬಹಾಗೆ.

೨೫. ಪಡಿಯಱಿತಿ—ಬಾಗಿಲಕಾಯುವವಳು; ಬರ್ಕ್ಕೆ—ಬರಲಿ; ಎಂಬುದುಂ—ಎಂದು ಹೇಳಿದಕೂಡಲೆ; ಪುಗವೇೞ್ದಾಗಳ್—ಒಳಗೆ ಹೋಗೆಂದು ಹೇಳಿದಾಗ.

ಗಳತಳ್ಪಂದೊಪ್ಪಮಂತಾಳ್ದಿದ ಘನಸಮಯಂ ತಾನಿದೆಂಬಂದದಿಂ ಕ | ಣ್ಗೊಳೆ ಸಿರ್ದಂ ಪಾದಪೀಠಾಂಕಿತಮಣಿಮಯಪರ್ಯಂಕದೊಳ್ವಿಕ್ರಮಾಂಕಂ ॥ ೧೬

ಕಂದ ॥ ಅಧಿಕತರರಾಗದೀಧಿತಿ | ನಿಧಾನಮೆನಲೆಸೆವ ಚಕ್ರಿಚರಣಾಂಬುಜಮಾ ॥ ಮಧುಕೈಟಭ ಮದಮರ್ದನ | ರುಧಿರಾರುಣಚಕ್ರಿಚರಣಮಂ ನೆನೆದಿಸುಗುಂ ॥ ೧೭

ವೃ ॥ ಕರೆಗಳ್ಮಿಳ್ಳಸೆ ಚಾಮರಂಗಳೆಲರಿಂದಂ ಮೆಲ್ಪಿನಿಂ ನರ್ತಿಸು | ತ್ತಿರೆ ನೀಳ್ದಿರ್ದಸೆಱಂಗು ಚಿತ್ರಿಸಿದಹಂಸಾನೀಕದಿಂ ಚೆಲ್ವನಾ ॥ ಳ್ದರೆ ದುಗ್ಧಾರ್ಣವಫೇನಪಾಂಡುರತೆಯಂ ಕಯ್ಕೊಂಡ ಬೆಳ್ದಿಂಗಳಂ | ತಿರೆ ತೋಱುತ್ತಿಸೆ ವುತ್ತರೀಯವಸನಂ ರಾಜೇಂದ್ರಚಂದ್ರಾಂಕನಾ ॥ ೧೮

ಕಂದ ॥ ಎಳೆವಿಸಿಲಮುಱುಗಳಿಂ ಕ | ಣ್ಗೊಳಿಸುವ ಕೈಲಾಸದಂತೆ ಕೀರ್ತಿವಿಲಾಸಂ ॥ ಬೆಳಗುವಚಂದನದಣ್ಪಿಂ | ತೊಳಗುವ ಕುಂಕುಮದ ತಳ್ಕಿನಿಂ ಕರಮೆಸೆದಂ ॥ ೧೯

ತಾರಾವಳಿ ಮುಖಚಂದ್ರನ | ಸಾರೋಲಗಿಸುತ್ತಮಿರ್ದುದೆನೆ ಸಕಳಕಳಾ ॥ ಧಾರನ ಪೇರುರದೊಳ್ಮಣಿ | ಹಾರಂ ಥಳಥಳಿಸಿಪೊಳೆವುತಿರ್ದತ್ತಾಗಳ್ | ೨೦

ಕರಮೆಸೆದಿರ್ದುದು ಚಪಳೆಗೆ | ಸಿರಿಗಿಕ್ಕಿದ ನಿಯಮನಿಗಳಮೆನೆ *[ಭುಜಗಯುಗಂ] ॥ ಪರಿವೇಷ್ಟಿಸಿದುದುಚಂದನ | ಪರಿಮಳಕೆನೆ ನೃಪನರತ್ನಕೇಯೂರಯುಗಂ ॥ ೨೧

---

೧೭. ರಾಗದೀಧಿತಿ—ಅರುಣಕಾಂತಿಗೆ; ನಿಧಾನಮೆನಲ್-ನಿಧಿಯಹಾಗೆ; ಚಕ್ರಿಚರಣಾಂಬುಜಂ—ಚಕ್ರವರ್ತಿಯಾದ ಶೂದ್ರಕನಪಾದ ಕಮಲವು.

೧೮. ಕರೆಗಳ್—ಸೆರಗಿನಕೊನೆಗಳು; ಮಿಳ್ಳಸೆ—ಚಲಿಸಲು; ಎಲರಿಂ—ಗಾಳಿಯಿಂದ; ತೋಱುತ್ತು—ಕಾಣಿಸಿತು.

೧೯. ಮುಱುಗಳಿಂ—ತುಣುಕುಗಳಿಂದ; ಅಣ್ಪಿಂ—ಲೇಪನದಿಂದ; ತಳ್ಕಿನಿಂ—ಚಮಕಿಸೋಣದರಿಂದ.

೨೦. ಸಾರಿ + ಓಲಗಿಸುತ್ತಂ = ಸಾರೋಲಗಿಸುತ್ತ.

* [ಭುಜಯುಗಳಂ]

ತುಱುಗಿದತಾರಾಪುಂಜದೆ । ಮಿಱುಗುತ್ತಿರ್ದ್ದಪುದೊ ಪಶ್ಚಿಮಾದ್ರೀಂದ್ರಮೆನಲ್ ॥ ನಱುಗಂಪುಪ್ಪೊಜೆವಜಾದಿಯ । ತುಱುಂಬು ಕಣ್ಗೊಳಿಸೆ ಶೂದ್ರಕಂ ಕರಮೆಸೆದಂ ॥ ೧೦

ತಳೆವಳೊ ಪತಿಯಂನೆಲವೆ । ಣ್ಬೞೆದನುರಾಗದೊಳೆ ಹೃದಯದಿಂದೆಂಬಿನೆಗಂ ॥ ಥಳಥಳಪರತ್ನಕುಟ್ಟಿಮ । ತಳದೊಳ್ಪೊಳೆದತ್ತು ರೂಪು ಭೂಪೋತ್ತಮನಾ ॥ ೧೧

ವ ॥ ಅಂತಿರ್ದ್ದ ಶೂದ್ರಕಚಕ್ರವರ್ತಿಯನಾಚಂಡಾಲಕನ್ಯೆಕಂಡು.

ಕಂ ॥ ಅರುಣದಳೋತ್ಪಲಕೋಮಲ । ಕರತಲದೊಳ್ತಳೆದದೊಂದು ಸಂಬಳಿಗೋಲಿಂ ॥ ದಿರದೆಪಳಂಚಿಸಿದಳ್ಜ । ರ್ಝರರವಮೊಗೆಯಲ್ಕೆ ನೃಪಸಭಾಕುಟ್ಟಿಮಮಂ ॥ ಅಂತು ಸಂಬಳಿಗೋಲಿಂಸನ್ನೆಗೆಯ್ಯೆ ॥ ೧೨

ಬಗೆದೊಂದುತಾಳೆದನಿಗೇ । ಳ್ದಗಜವ್ರಜದಂದದಾಗೆ ಸಂಬಳಿಗೋಲಿಂ ॥ ದೊಗೆದೊಂದುಲುಪಿಂಗತ್ತಲೆ । ಮೊಗಮಾದುದುಭೋಂಕನಖಿಳರಾಜಕದಂಬಂ ॥ ೧೩

ವ ॥ ಅಂತು ಚಂಡಾಲಕನ್ಯೆ ಪ್ರಗುತಪ್ರ್ಪಗಳ್.

ವೃ ॥ ಜರೆಯಿಂದಂ ಕೂಡಿಬೆಳ್ಪಂತಳೆಯೆತಲೆ ದಳಪ್ರಕ್ತನೀರೇಜಮಂಪ್ಪೋ । ಲ್ತಿರೆಕಣ್ವ್ಯಾಯಾಮದಿಂ ಮೆಯ್ಸಡಿಲದೆಸೆಯೆ ಮಾತಂಗನಾಗಿರ್ದ್ದಮೇಲಿಂನಿ ॥ ಷ್ಪ್ರರಮುಲ್ತಾಕಾರವಿತಾತಂಗೆಸಿಸಿ ಧವಳವಾಸೋನ್ವಿತಂ ಮು

೧೦. ತುಱುಗಿದ—ತುಂಬಿದ ; ನಱುಗಂಪುಪ್ಪೊಜೆವ—ಪೊಸವಾಸನೆಯಿಂದ ವ್ಯಾಪ್ತವಾದ ; ತುಱುಂಬು—ಮುಡಿಗಟ್ಟು.

೧೧. ನೆಲವೆಣ್—ಭೂಕಾಂತೆ.

೧೨. ಸಂಬಳಿಗೋಲಿಂ—ಬಿದಿರುಕೋಲಿಂದ ; ಪಳಂಚಿಸಿದಳ್—ಬಡಿದಳು.

೧೩. ತಾಳೆದನಿಗೇಳ್ದ—ತಾಳೇಮರದೆಲೆಗಳ ಧ್ವನಿಯನ್ನು ಕೇಳಿದ ; ಉಲುಪಿಂಗೆ—ಶಬ್ದಕ್ಕೆ ; ಭೋಂಕನೆ—ಪಕ್ಕನೆ.

೧೪. ವ್ಯಾಯಾಮದಿಂ—ಅಂಗಸಾಧನೆಯಿಂದ ; ಸಡಿಲದೆ—ಶಿಥಿಲವಾಗದೆ ; ಪಿನ್ನೊಳ್—ಹಿಂದೆ; ಅನ್ಯವೇಷಂ—ಮುದುಕನಿಗೆ ತಕ್ಕ ವೇಷವುಳ್ಳವನು; ಅಲ್ಲಿಂಬೞಿಗೆ—ಅದಕ್ಕೆ ಹಿಂದೆ.

ತ್ತವೋಲಿರ್ಪ್ಪರ್ಗಂ। ಬರುತಿರ್ದ್ದರ್ಗಂ ಬೆನ್ನೊಳಾತ್ಮೋಚಿತಮೆನಿಸಿದ ಚಾತುರ್ಯದಿಂ ದಾರ್ಯರ್ವೇಷಂ ॥ ಅಲ್ಲಿಂಪೞಿಗೆ ೩೬

ಕಂ ॥ ಅರಗಿಳಿಯ ಪಸುರ್ಪ್ಪಿಂದಂ। ಮರಕತಮಯಮೆನಿಪ ಪೊನ್ನ ಪಂಜರಮಂ ಪೊ। ತ್ತಿರದೇೞ್ತಂದಂ ಚೆಂಡಿಕೆವೆರಸಿದ ಚಂಡಾಲಬಾಲಕಂ ಮತ್ತೊರ್ವ್ವಂ ॥ ೩೭

ವ ॥ ಅನ್ತವರ್ಬ್ಬರಸು ಬಂದಳಂತುಮಲ್ಲದೆಯುಂ.

ವೃ ॥ ದನುಜರ ಕಯ್ಯೊಳಿರ್ದ್ದಮರ್ದನಾವಗಮೀೞ್ಕೊಳಲೆಂದು ದೈತ್ಯಮ। ರ್ದನನೆನಿಸಿರ್ದ್ದವಂ ಕಪಟದಿಂದೆ ವಿಲಾಸಿನಿಯಾದ ವೇಷಮಂ ॥ ನೆನೆಯಿಸಿದಪ್ಪುದೀ ಪಸಿಯಬಣ್ಣಮಿವಳ್ಗೆನೆ ಚೆಲ್ವನಾಳ್ದುಮೆ। ಲ್ಲನೆ ನಡೆತರ್ಪ್ಪ ನೀಲಮಣಿಪುತ್ರಿಕೆಯಂದದಿನಾದಮೊಪ್ಪಿದಳ್ ॥ ೩೮

ಕಂ ॥ ಮುಸುಕಿದಮೆಯ್ಯಂ ಗುಲ್ಫಾ। ವಸಕ್ತಮೆನಿಸಿರ್ದ್ದ ರಕ್ತನವ ಕಂಚುಕದಿಂ ॥ ಕಿಸುಸಂಜೆಯೊಳ್ಬಿಸಿಲ್ವೊರೆ। ದಸಿತೋತ್ಪಲಿನಿಯವೊಲಾಕೆ ಕಣ್ಗೆಸೆದಿರ್ದ್ದಳ್ ॥ ೩೯

ಪೊಳೆವೊಂದು ದಂತದೋಲೆಯ। ಬೆಳಗಿಂದುಜ್ವಳಿಪಕದಪಿಸಿಂದಿಂ ದುವ ಮುಂ ॥ ಡಳದಿಂದ ಮಾವಗಂ ಕ। ಣ್ಗೊಳಿಪ ವಿಭಾವರಿಯ ನಿನಿಸನನುಕರಿಸಿರ್ದ್ದಳ್ ॥ ೪೦

ಅತಿಕಪಿಳರೋಚನಾರಚಿ। ತತಿಳಕಮದು ನೊಸಲಕಣ್ಣೊಲೆಸೆದಿರೆ ಗೌರೀ ॥ ಪತಿಯ ಜಿನದಕ್ಕೆಭೂಭ್ಯ। ತ್ಸತೆ ಬೇಡಿತಿಯಾದ ತೆಱನನನುಕರಿಸಿರ್ದ್ದಳ್ ॥ ೪೧

---

೩೭. ಪಸುರ್ಪ್ಪು — ಹಸುರುಬಣ್ಣ; ಚೆಂಡಿಕೆ — ಮುಡಿಗಂಟು.

೩೮. ಅಮರ್ದಂ — ಅಮೃತವನ್ನು; ಈೞ್ಕೊಳಲೆಂದು — ಅಪಹರಿಸಬೇಕೆಂದು; ಪಸಿಯಬಣ್ಣಂ — ಕಪ್ಪುಬಣ್ಣ; ಆದಂ — ಅತ್ಯಂತವಾಗಿ.

೩೯. ಕಿಸುಸಂಜೆಯೊಳ್ — ಕೆಂಪಾದಸಂಜೆಯಲ್ಲಿ; ಬಿಸಿಲ್ವೊರೆದ — ಬಿಸಿಲಿನಿಂದವ್ಯಾಪ್ತವಾದ.

ಶ್ರೀರಮಣೀಪ್ರಿಯನ ವಿಶಾ | ಲೋರಸ್ಥಳದಲ್ಲಿ ನಿಂದು ತತ್ಪ್ರಭೆಯಿಂ ದ || ಕ್ಷೀರಮಣಿ ಪುದಿದಳೆನೆ ನೀ | ರೇರುಹದಳನಯನೆ ನಾಡೆ ಕಣ್ಗೆಸೆದಿರ್ದಳ್ || ೪೨

ಸ್ಮರರಿಪುಲಲಾಟನೇತ್ರ | [ಸ್ಫುರದುರು] ಹುತವಹನಿನೆಯ್ದೆ ಬೇವುತ್ತಿರ್ದಾ || ಸ್ಮರನ ಪೊಗೆಯಿಂದೆ ಪುದಿದಿ | ರ್ದರತಿಯ ಪೊಲ್ಕಾಂತೆ ಕರಮೆ ಕಣ್ಗೆಸೆದಿರ್ದಳ್ || ೪೩

ಸ್ಮರವೇದನೆಯಿಂ ಮಹಿಷಾ | ಸುರನೇಳ್ತರೆ ಮೆಟ್ಟಿಕೊಲ್ವಪದದೊಳ್ನೆತ್ತರ್ || *[ಪೊರೆವದ್ರಿ] ಕನ್ಯೆಯಡಿಯಂ | ತಿರಲೇನೆಸೆದಿರ್ದವಡಿಗಳಾ ಕನ್ನಿಕೆಯಾ || ೪೪

ಬೆಟ್ಟಿತಿದು ನಾಡೆಯುಂ ಮಣಿ | ಕುಟ್ಟಿಮತಳಮೆಂದು ತಳಿರ್ಗಳಂ ಮೆಲ್ಲಡಿಯಿಂ || ಮೆಟ್ಟಿರ್ದಪಳೆನೆ ಚೆಲ್ವಿಂ | ದಿಟ್ಟಳಮೆಸೆದಿರ್ದವರುಣಚರಣದ್ಯುತಿಗಳ್ ೪೫

ವೃ || ಅನಲಂ ರೂಪಿನ ಪಕ್ಷಪಾತದೊಳೆ ತಾನೇಳ್ತಂದು ನೀರೇಜಗ | ರ್ಭನ†[ಗೆಯ್ತಂಗಡ]ಮಪ್ರಮಾಣಮೆನುತಂ ತಜ್ಜಾತಿಸಂಶೋಧನ || ಕ್ಕನುರಾಗಂಬೆರಸಾದ ಮಪ್ಪಿದನೊ ಪೇಳೆಂತೀಗಳೆಂಬಂದದಿಂ | ದೆನಸುಂ ನೂಪುರರತ್ನಕಾಂತಿ ತನುವಂ ಪರ್ವಿರ್ತ್ತು ತನ್ವಂಗಿಯಾ || ೪೬

ಕಂ || ಸ್ಮರಚಕ್ರೇಶ್ವರಕರಿಕುಂ | ಭರುಚಿರನಕ್ಷತ್ರಮಾಲೆ ರೋಮಲತಾಬಂ || ಧುರತಾಲವಾಲಮೆಂಬಂ | ತಿರಲೆಸೆಗುಂ ಕಾಂಚಿ ಜಘನದೊಳ್ಗುರುಕುಚೆಯಾ || ೪೭

---

೪೩. ಪುದಿದಿರ್ದ—ವ್ಯಾಪ್ತಿಯಾದ.

೪೪. ಏಳ್ತರೆ—ಬರಲು; ಕೊಲ್ವಪದದೊಳ್—ಸಂಹರಿಸುವವೇಳೆಯಲ್ಲಿ.

೪೫. ಬೆಟ್ಟಿತು—ಕಠಿನವಾದದ್ದು; ನಾಡೆಯುಂ—ಅತ್ಯಂತವಾಗಿ; ಇಟ್ಟಳಂ—ಸಾಂದ್ರವಾದದ್ದು.

೪೬. ಗೆಯ್ತಂ—ಕಾರ್ಯವು; ಅಪ್ರಮಾಣಂಗಡಂ—ಅನ್ಯಾಯವಲ್ಲವೆ; ತಜ್ಜಾತಿಸಂಶೋಧನಕ್ಕೆ—ಅವಳ ಚಂಡಾಲತ್ವಶೋಧನೆಗಾಗಿ; ಅನುರಾಗಂಬೆರಸು—ಪ್ರೇಮವೆರಸಿ; ಎನಸುಂ—ಅತ್ಯಂತವಾಗಿ.

೪೭. ನಕ್ಷತ್ರಮಾಲೆಯೆಂಬಂತಿರೆ; ಬಂಧುರತಾ—ಬಂಧುರತಾವಿಶಿಷ್ಟವಾದ.

*[ಪೊರ್ದಿರ್ದ] †[ಗೆಯ್ತಗಮು]

ಮಂದಾಕಿನಿ ಪರಿದಾಕಾ । ಳಿಂದಿಯೆಗೆತ್ತಾದಮಳ್ಕರಿಂದಂ ಕೊರಲಂ ।
ಬಂದಪ್ಪಿರ್ದ್ದಳೊ ಪೇಳೆಂ ॥ ಬಂದದಿ ನೆಸೆವತ್ತು ಹಾರವಮಾಕಾಮಿನಿಯಾ ॥

ವ ॥ ಅದಲ್ಲದೆಯುಂ ಮಲಯಮೇಖಲೆಯಂತೆ ಚಂದನಪಲ್ಲವಾವತಂಸೆಯುಂ ನಕ್ಷತ್ರಮಾಲೆಯಂತೆ ಚಿತ್ರಾಶ್ಲೇಷಶ್ರವಣಾಭರಣಭೂಷಿತೆಯುಂ ಲಕ್ಷ್ಮಿಯಂತೆ ಹಸ್ತಸ್ಥಿತಕಮಲಶೋಭಿತೆಯುಂ ದಿವ್ಯಕಾಂತೆಯಂತಕುಲೀನೆಯುಂ ನಿದ್ರೆಯಂತೆ ಲೋಚನಗ್ರಾಹಿಣಿಯುಂ ಮೂರ್ಛೆಯಂತೆ ಮನೋಹರೆಯುಂ ಅರಣ್ಯಭೂಮಿಯಂತೆ ಅಕ್ಷತರೂಪಸಂಪನ್ನೆಯುಂ ಅರಣ್ಯಕಮಲಿನಿಯಂತೆಮಾತಂಗಕುಲದೂಷಿತೆಯುಂ ಅಮೂರ್ತೆಯಂತೆ ಸ್ಪರ್ಶವರ್ಜಿತೆಯುಂ *[ಆಲೇಖ್ಯಗತೆ]ಯಂತೆ ದರ್ಶನಮಾತ್ರಫಲೆಯುಂ ಮಧುಮಾಸಕುಸುಮಸಮೃದ್ಧಿಯಂತೆ ವಿಜಾತಿಯುಂ ಮದನಚಾಪಲತೆಯಂತೆ ಮುಷ್ಟಿಗ್ರಾಹ್ಯಮಧ್ಯೆಯುಂ ಯಕ್ಷಾಧಿಪಲಕ್ಷ್ಮಿಯಂತಳಕೋದ್ಭಾಸಿಯೆನಿಸಿದೀರುಂಜವ್ವನೆಯ ರೂಪಾತಿಶಯಮ ನೆಮೆಯಿಕ್ಕದೆ ಶೂದ್ರಕಂ ನೋಡುತ್ತಮತಿವಿಸ್ಮಿತಚಿತ್ತನಾಗಿತನ್ನೊಳಿಂತೆಂದಂ. ೪೯

ವೃ ॥ ಇದುಮೂಲೋಕಕ್ಕಮೊಂದಚ್ಚರಿಯೆನಿಸಿದು ದಸ್ಥಾನದೊ
ಳ್ರೂಪಮಂ †[ಮಾ । ಡಿದವಾಣೀಶಪ್ರಯತ್ನಂ] ತ್ರಿಭುವನಜನಕಾಶ್ಚರ್ಯಮ

೪೮. ಆಕಾಳಿಂದಿಯೆಗೆತ್ತು — ಯಮುನೆಯೊಂದೇತೀರದು.

೪೯. ಚಿತ್ರಾಶ್ಲೇಷಶ್ರವಣಾಭರಣ — ಚಿತ್ರಾ, ಆಶ್ಲೇಷ, ಶ್ರವಣ ಎಂಬ ನಕ್ಷತ್ರಗಳ ಪ್ರೋಷಣೆ, ಆಶ್ಚರ್ಯಕರವಾದ ಸಂಯೋಗವುಳ್ಳ ಕರ್ಣಾಲಂಕಾರ; ಅಕುಲೀನೆ — ಭೂಮಿಯನ್ನು ಹೊಂದದವಳು, ಸತ್ಕುಲೋತ್ಪನ್ನೆಯಲ್ಲದವಳು; ಅಕ್ಷತರೂಪಸಂಪನ್ನೆ — ಅಕ್ಷತರು ತಾಪಸರುಗಳಿಂದ, ಉಪಸಂಪನ್ನಂ ಕೂಡಿರುವದು, ಅಕ್ಷತ ಕೊರತೆಯಿಲ್ಲದ, ರೂಪ ಸೌಂದರ್ಯದಿಂದ, ಸಂಪನ್ನೆ ಕೂಡಿದವಳು; ಮಾತಂಗಕುಲ — ಆನೆಗಳಗುಂಪು, ಚಂಡಾಲಜಾತಿ; ವಿಜಾತಿ — ಜಾಜೀಪುಷ್ಪಗಳಿಂದ ರಹಿತವಾದದ್ದು, ನೀಚ ಜಾತಿಯವಳು; ನಿರುಂಜವ್ವನೆಯ — ವೃದ್ಧಿಹೊಂದುತ್ತಿರುವ ಯೌವನವುಳ್ಳ; ನಿಮೆಯಿಕ್ಕದೆ — ರೆಪ್ಪೆಮುಚ್ಚದೆ.

೫೦. ಅಸ್ಥಾನದೊಳ್ — ಅಯೋಗ್ಯವಾದವಸ್ತುವಿನಲ್ಲಿ; ಪದಪಿಂದಂ — ಇಚ್ಛೆಯಿಂದ; ಗರ್ಹಿತಸ್ಪರ್ಶಸಂಭೋಗದೊಳ್ — ದೂಷಿತವಾದ ಸ್ಪರ್ಶ ಸಂಭೋಗವುಳ್ಳ;

*[ಆಲೇಖ್ಯೆಯಂತೆ] †[ಮಾಡಿದಕ್ರಿಯಾತ್ಮಂ]

ಪ್ಪಂತು ರೂಪಂ ॥ ಪದಪಿಂದಂ ಮಾಡಿಯುಂ ನೋಡಿಯುಮಸದೃಶದೊಳ್ಗ
ರ್ಹಿತಸ್ಪರ್ಶಸಂಭೋ। ಗದೊಳಿಂತೀದುಷ್ಟಚಂಡಾಲರಕುಲದೊಳಗೇ [ಗೈ
ದನೋ] ದುರ್ವಿವೇಕಂ ॥ ೫೦

ಕಂ ॥ ಇದನರಿವೆಂ ಕಮಲಭವಂ । ಮೊದಲೊಳ್ಮಾತಂಗಿಯೆಂದು
ತಾಂಮುಟ್ಟದೆ ಮಾ । ಡಿದನಕ್ಕುಂ ಕಯ್ಯೊಳ್ಮು ॥ ಟ್ಟದೊಡಿಂತಗ್ಗಳಿಸಿ
ತೋರ್ಕುಮೇಲಾವಣ್ಯಂ ॥ ೫೧

ವ ॥ ಎಂದಾ ರೂಪಿಂಗಚ್ಚರಿ ವಡುತಿರ್ದ್ದ ನೃಪರೂಪ ಚಂದ್ರನಂ
[ನೋಡಿ].

ಕಂ ॥ ಸೊಗಯಿಸುವ ಪೊಲೆಯಿಂ ನಸು । ಜಗುಳುತ್ತಿರೆ ಕರ್ಣಪೂ
ರಪಲ್ಲವಮಾಚ । ಕ್ರಿಗೆ ತನ್ನ ವಿನಯದಿಂದಂ । ಪ್ರಗಲ್ಭೆಯೆನಿಸಿರ್ದ್ದ ವನಿತೆ
ಪೋಲ್ಪೊಡಮಟ್ಟಳ್ ॥ ೫೨

ವ ॥ ಅಂತು ಪೊಡಮಟ್ಟು ಮಣಿಕುಟ್ಟಿಮತಳದೊಳ್ಕುಳ್ಳಿರ್ದ್ದದು
ಮೊಡನೆ ಯಮಾತಂಗಂ [ವಿಹಂಗಸಂಗತ] ಪಂಜರಮಂ ಪಿಡಿದು ನರೇಂದ್ರ
ನಂ ದೇವ ಬಿನ್ನಪಮೊಂದಿಂತೆಂದಂ. ॥ ೫೩

ವೃ ॥ ಇದು ವಿದಿತಾರ್ಥ ಶಾಸ್ತ್ರನಿದಶೇಷಪುರಾಣ ಕಥಾಪ್ರವೀಣನಿಂ।
ತಿದು ಸಕಲಾಂಗವೇದವಿದನಿಂತಿದುಕಾ [ವ್ಯಕಲಾ] ಪ್ರಗಲ್ಭನಿಂ। ತಿದುವಿತತಾ
ದಿವಾದ್ಯವಿದ [ನಿಂತಿದುಚಿತ್ರಕ] ಥಾಭಿರೂಪನಿಂ । ತಿದುಗಜವಾಜಿಲಕ್ಷಣವಿಚ
ಕ್ಷಣನೀಶುಕನುದ್ಗತಾಂಶುಕಂ ॥ ೫೪

ಏಗೈದನೋ—ಯಾತಕ್ಕೋಸ್ಕರ ಮಾಡಿದನೊ.

೫೨. ಪೊಲೆಯಿಂ—ಕಿವಿಯದೆಸೆಯಿಂದ; ನಸು—ಸ್ವಲ್ಪವಾಗಿ; ಜಗುಳು
ತ್ತಿರೆ—ಜಾರುತ್ತಿರಲು; ಪೊಡಮಟ್ಟಳ್—ನಮಸ್ಕರಿಸಿದಳು.

೫೩. ಆಮಾತಂಗಂ—ಅವಳಜೊತೆಯಲ್ಲಿ ಬಂದ ವೃದ್ಧಚಂಡಾಲನು.

೫೪. ವಿದಿತಾರ್ಥಶಾಸ್ತ್ರಂ—ತಿಳಿಯಲ್ಪಟ್ಟ ತರ್ಕಶಾಸ್ತ್ರವುಳ್ಳದ್ದು; ಅಥವಾ
ಧನಾರ್ಜನವಿದ್ಯೆಯುಳ್ಳದ್ದು; ಅಂಗ—ವ್ಯಾಕರಣಾದಿಷಡಂಗಗಳುಳ್ಳ; ವಿತತ—ತಂತ್ರಿ
ವಾದ್ಯ; ಅಭಿರೂಪಂ—ಪ್ರಾಜ್ಞ; ಉದ್ಗತಾಂಶುಕಂ—ಹಚ್ಚನಕಾಂತಿಯುಳ್ಳ.

ಕಂ ॥ ಇದುನರ್ತನಾವಲೋಕನ । ವಿದ ನಿದುಪರಿಹಾಸವಚನನಿಚ
ಯಾಸ್ಪದನಿಂ ॥ ತಿದು ಸಕಲಸುಭಾಷಿತಕೋ । ವಿದ ನಿದುಬಹುವಿಧಕಳಾಕ
ಳಾಪಾ [ಭಿಜ್ಞಂ] ॥ ೫೫

ವ ॥ ಅದಲ್ಲದೆಯುಂ.

ಕಂ ॥ ವನಿತೆಯರೊಲವಿನ ಕಲಹದ । ಮುನಿಸುಗಳಂ ತಿಳಿಪುವೆಡೆ
ಯೊಳತಿಚತುರಂ ತಾ ॥ ನೆನಿಸಿದ್ದಂ ವೈಶಂಪಾ । ಯನನೆನಿಪುದು ಪೆಸರೊ
ಳೀಶುಕಂ ಭುವನಪತೀ ॥ ೫೬

ವೃ ॥ ದೇವರೆಭಾಜನಂ ವಿದಿತರತ್ನಚಯಕ್ಕೆದಲೆಂದು ತನ್ನಸ ।
ದ್ಭಾವದಿನೆನ್ನನಾಳ್ದನ ಮಗಳ್ಪದಪಿಂದವಮ ತಂದಳಿಂತಿದಂ । ದೇವರ ಪಾದ
ಪಂಕರುಹವಲ್ಲಿಗೆ ಕನ್ನೆಯದೊಂದುಭಕ್ತಿಯುಂ । ಭಾವಿಸಿ [ನೀನಿದಂ] ನೃಪತಿ
ಕೈಕೊಳವೇಳ್ಪುದು ರಾಜಕೀರಮುಂ ॥ ೫೭

ವ ॥ ಎಂದೊಡನೆಯಾವಮಾತಂಗಂಬಿನ್ನವಿಸಿ ಶುಕಪಂಜರದ ಬಾಗಿ
ಲಂ ತೆಱೆದು ಮುಂದಿರಿಸಲಾಶುಕಂ ರಾಜಾಭಿಮುಖನುಮುನ್ನಮಿತದಕ್ಷಿಣ
[ಚರಣ] ನುಮತಿಸ್ಪಷ್ಟವರ್ಣಸಂಸ್ಕಾರಮಪ್ಪವಾಣಿಯಿಂ ಕೃತಜಯಶಬ್ದ
ನುಮಾಗಿ ೫೮

ಕಂ ॥ ತಿರ್ಯಗ್ಜಾತಿಯೊಳೀಚಾ । ತುರ್ಯಮಿದೇನೆಂದು ಸಭೆಯಚಿತ್ತ
ದೊಳಚ್ಚಾ ॥ ಶ್ಚರ್ಯವೊದವುವಿನಮರಸಂ । ಗಾರ್ಯಮನೋದಿತ್ತದೊಂದನಾ
ಶುಕರತ್ನಂ ॥ ೫೯

ಆರ್ಯಾವೃತ್ತಂ ॥ ಸ್ತನಯುಗಮಶ್ರುಸ್ನಾತಂ । ಸಮೀಪತರವರ್ತಿ
ಹೃದಯಶೋಕಾಗ್ನೇಃ ॥ ಚರತಿ ವಿಮುಕ್ತಾಹಾರಂ । ವ್ರತಮಿವ ಭವತೋ
ರಿಪುಸ್ತ್ರೀಣಾಂ ॥ ೬೦

---

೫೬. ಒಲವಿನಕಲಹದ—ಪ್ರಣಯಕಲಹದ; ತಿಳುಪುವೆಡೆಯೊಳ್—ಸಮಾ
ಧಾನಪಡಿಸುವ ಸಂದರ್ಭದಲ್ಲಿ.

೫೭. ದೇವರೆ—ಸ್ವಾಮಿಗಳಾದನೀವೇ; ವಿದಿತರತ್ನ—ಪ್ರಸಿದ್ಧವಾದಶ್ರೇಷ್ಠ
ವಸ್ತುಗಳ; ದಲ್—ನಿಶ್ಚಯ; ಎನ್ನನಾಳ್ದನ—ನನ್ನಒಡೆಯನ.

೫೯. ಒದವುವಿನಂ—ಪ್ರಾಪ್ತವಾಗುತ್ತಿರಲು; ಆರ್ಯಮಂ—ಆರ್ಯಾಪದ್ಯವನ್ನು

ಕಂದ ॥ ವೀರರವೀರ ವಿಮುಕ್ತಾ । ಹಾರಂ ಭವದರಿ *[ವಧೂ] ಸ್ತನ ದ್ವಿತಯಮುಂ ಕ ॥ ಣ್ಣೀರಿಂ ಮಿಂದೆರ್ದೆಗಿಚ್ಚಿಂ । ದೋರಂತಿರೆ †[ಬೆಂದು] ಚರಿಸುತಿರ್ಪ್ಪುದು ತಪಮಂ ॥ ೬೧

ವ ॥ ಅಂತದ ನರಸಂ ಕೇಳ್ದು ಚಿತ್ರೀದ್ಯಂಬಟ್ಟು ಬಲದಕೆಲದೊಳ್ಮಹಾಪೀಠಾಸನಾಸೀನನುಮಮರಗುರುಸದೃಶನು ಮಖಿಲಮಂತ್ರಿಮಂಡಳಿಕ ಪ್ರಧಾನನುಮಪ್ಪ ಕುಮಾರಪಾಲಿತನೆಂಬಮಂತ್ರಿಮುಖ್ಯನಸಿಂತೆಂದಂ ॥ ೬೨

ವೃ ॥ ಗಿಳಿಗೀಸ್ಪಷ್ಟಾಕ್ಷರೋಚ್ಚಾರಣಮೆ ಮೊದಲೊಳಾಶ್ಚರ್ಯವೆಂಬಲ್ಲಿಮತ್ತ । ಗ್ಗಳಸುತ್ತಂ ವರ್ಣಮಾತ್ರಾಸ್ವರರುಚಿರಮುಮಪ್ಪಾದ್ಯೆಯುಂ ವ್ಯಕ್ತದಿಂದ । ಸ್ಖಲಿತಂ ತಾನೆನ್ನನುದ್ದೇಶಿಸಿ ಸುಲಲಿತಮೆಂಬಂದದಿಂ ದೋದಿತೋರ್ದ್ದಿರ್ದೀ । ಗಿಳಿಗೆಂತೋ ಬುದ್ಧಿಪೂರ್ವಂ ಮನುಜರತೆಱದಿಂದೋದುಮಾಶ್ಚರ್ಯಮಾಗಲ್ ॥ ೬೩

ವ ॥ ಎಂಬುದುಂಕುಮಾರಪಾಲಿತನಿಂತೆಂದಂ.

ಕಂ ॥ ಶುಕಶಾರಿಕಾದಿ ವಿಹಗ । ಪ್ರಕರಂ ಮುಂಕೇಳ್ದ ವಚನಮಂ ನುಡಿವುದು ಕೌ ॥ ತುಕಮಲ್ಲದೀಗಳುಂ ಕೌ । ತುಕಮಿಂತಿತೇಕೆ ದೇವ ನೀನಱಿಯದುದೇ ॥ ೬೪

ಇದು ಪೂರ್ವಜನ್ಮಸಂಸ್ಕಾ । ರದೆ ಮೇಣ್ಪುರುಷಪ್ರಯತ್ನದಿಂದಂ ಮೇಣೀ । ತುಪಯಿಸುಗುಮಲ್ತೆ ಸಂಸ್ಕಾ । ರದೊಳತಿಶಯಚಿತ್ರಮಲ್ತು ಭಾವಿಸಿ ನೋಡಲ್ ॥ ೬೫

ವ ॥ ಅದಲ್ಲದೆಯುಂ.

---

೬೨. ಬಲದಕೆಲದೊಳ್—ದಕ್ಷಿಣಪಾರ್ಶ್ವದಲ್ಲಿ.

೬೩. ಬುದ್ಧಿಪೂರ್ವಂ—ಬುದ್ಧಿಪುರಸ್ಸರವಾದ; ಓದುಂ—ಪಠನವುಕೂಡ; ಗಿಳಿಗೆಂತೋ —ಹ್ಯಾಗೆಬಂತೋ.

೬೫. ಸಂಸ್ಕಾರದೆಮೇಣ್—ಸಂಸ್ಕಾರದಿಂದಾಗಲಿ; ಪ್ರಯತ್ನದಿಂದಂಮೇಣ್— ಪ್ರಯತ್ನದಿಂದಾಗಲಿ.

*[ರಮಾ] †[ನಿಂದು]

ವೃ ॥ ನುಡಿಯುನ್ನಂ ಸ್ಪಷ್ಟಮಾಗಿರ್ದುದು ಬಳಿಕಮಿದಸ್ಪಷ್ಟಮಾ
ಯ್ತುಗ್ನಿಕಾಪಂ । ಗುಡಲಲ್ಲಿಂದಿತ್ತಲಿಂತೀಶುಕಸಮಿತಿಗೆ ತಚ್ಛಾಪದಿಂ *[ದಾನಗ
ಳ್ಗಂ ॥ ನುಡಿಯಲ್ಕಾಗಂದಿಸಿಂ] ನಾಲಗೆ ಮುಡಿದುದೆನುತ್ತಿಂತುಪೇಳುತ್ತಿರಲ್ಕಾ।
ಗಡೆಪ್ರೋಕ್ತಿತ್ತಲ್ಲಿ ಮಧ್ಯಂದಿನಸಮಯಸಮುದ್ಭೂತಶಂಖಪ್ರಣಾದಂ ॥ ೬೮

ವ ॥ ಅದಂಕೇಳ್ದು ಮಜ್ಜನಕ್ಕುಜ್ಜುಗಂಗೆಯ್ದೊಡ್ಡೋಲಗಮಂ ಪಱಿಯಲ್ವೇಳ್ದಾಸ್ಥಾನಮಂಟಪದಿಂ ಮಹೀಪಾಲನೇಳ್ವುದುಮನೇಕಾಂಗದಮುಕರಿಕಾಪತ್ರಾದಿಗಳಂ ಮಿಂಚುಪ್ರೋಕ್ತಿ ತಮ್ಮೊಳ್ಪಳಂಚಲೆಯೆಯುಂ ತೋರಮುಯ್ಯುಗಳೊಳೆಸೆವ ಕುಂಕುಮಂಗಳಬಂಬಲಸೋಂಕಿನೊಳ್ ರಜಂನೆಗೆದು ದೆಸೆಗಳ್ಪೊಂಬಣ್ಣಮಾಗೆಸೆಯೆಯುಂ ತುಂಬಿಗಳ್ಪುಗಳಂಬಿಟ್ಟು ಮೇಗೆ ನೆಗೆಯೆಯುಂ ಕರ್ಣೋತ್ಪಲಂಗಳ್ಕಪೋಲಬಿಂಬಂಗಳೊಳ್ಬಂಬಿಸೆಯುಂ ತೋರಮುತ್ತಿನಹಾರಂಗ [ಳುರಸ್ಥಲಂ] ಗಳೊಳ್ಪೊಳೆದಾಡೆಯುಮತಿಸಂಭ್ರಮದಿನೊಡನೇಳ್ವಮಹೀಪಾಲರೊಳಂ †[ಅಂಸಾವಸಕ್ತಚಮರೀಜ] ಯರ ಪ್ರಕಾಂತೆಯರ ಕಮಳಮಧುಪಾನದಿಂ ಸೊಕ್ಕಿದ ಮುತ್ತಂಚೆಯಧ್ವನಿಗಳಂತೆ ಜರ್ಝರಮಾದಪ್ರೆಂಗೆಜ್ಜೆಗಳಮೆಲ್ಲುಲಿಯೊಳಂ ವಿಳಾಸಿನೀಜನದ ಘನಜಘನಂಗಳೊಳ್ ಪಳಂಚುವರತ್ನಮಾಲೆಗಳೊಳ ಮಡಿಯಿಡುವ ರಮಣಿಯರ ನೂಪುರರಣಿತಕ್ಕೆಳಸಿ ಬರ್ಪಂಚೆವಿಂಡಿನಿಂಚರದೊಳ ಮುಲ್ಲಸಿತಮಾದ ಕಾಂಚೀಕ್ರೇಂಕಾರಕ್ಕುತ್ಕಂಠಂಗಳಾದ ಸಾರಸಂಗಳ ಕೂಜಿತಂಗಳೊಳ ಮನುಪಮಪ್ರಾಸಾದಕೂಟಕುಹರಂಗಳೊಳ್ ಮಾರ್ದನಿಯಿಡುವ ಪಡಿಯರರ ಕಳಕಳಂಗಳೊಳರಸುಗಳ ಮಗೆತಮಗೆಂದು ಪೊಡಮಡುವಲ್ಲಿ ಮಣಿಕುಟ್ಟಿಮ

೬೮. ನುಡಿಯಲ್ಕೆ—ಮಾತಾಡುವದಕ್ಕೆ; ಆಗ—ಆಗದು; ಶ. ಶಾ. ಅದ್ವಿದಾದಿಗೋಂತನಾರ್ಹೇ, ಎಂಬಸೂತ್ರದಿಂ ಆಗುಧಾತುವಿನಮೇಲೆ ಅನರ್ಹಾರ್ಥದಲ್ಲಿ ಅ ಪ್ರತ್ಯಯ ಬಂದಿದೆ; ಮಡಿದುದು—ಮಡಿಸಿಕೊಂಡಿತು;

೬೯. ಪಱಿಯಲ್ವೇಳ್ದು—ಹಿಂಗಿಸಿದನಾದನಂತರ; ತೋರಮುಯ್ಯುಗಳೊಳ್—ಸ್ಥೂಲವಾದ ಭುಜಶಿರಸ್ಸುಗಳಲ್ಲಿ; ಬಂಬಲಸೋಂಕಿನೊಳ್—ಇಕ್ಕಟ್ಟಿನಿಂದ ಒಬ್ಬರಿಗೊಬ್ಬರ ತಗಲುವಿಕೆಯಲ್ಲಿ; ಮೆಲ್ಲುಲಿ—ಮೃದುಧ್ವನಿ; ಮಾರ್ದನಿಯಿಡುವ—ಪ್ರತಿಧ್ವನಿಕೊಡುವ; ಪೊಡಮಡುವದೆ—ನಮಸ್ಕರಿಸುವದೆ; ಮಗಮಗಕೆ—ಅನಂತರಕ್ಕೆ;

*[ತಿಂನಿಗಳ್ದುನುಡಿಯಲ್ಕಾಗಂದಿಸಿಂ] †[ಸರಿಶಾಸಕ್ತಿಮರಸ್ಪಚಮರು]

ತಳದೊಳ್ ಪಳಂಚುವ ಮಣಿಮಯಕಿರೀಟಕರ್ಣಪೂರಕೇಯೂರಹಾರರಣಿತಂಗಳೊಳವೆಡವರಿಯುದಡಿಯಿಡುವ, ಮಾಮಸಕಕಂಜಿ ಮಣಿಕುಟ್ಟಿಮತಳದಪೂವಲಿಯುಂಬಿಟ್ಟು ಪಾರುವ ಮಧುವಿಹಂಗಂಗಳ ಹುಂಕಾರದೊಳಂ ಮುಂದೆಬಂದೋದುವ ಮಂಗಳಪಾಠಕರ ಜಯಜಯಾದಿ ಮಧುರರವಂಗಳೊಳಮತಿಕ್ಷುಭಿತಮಾದಾಸ್ಥಾನಮಂಟಪದಿಂ ಮನುಜೇಂದ್ರಂ ಪೊರಮಟ್ಟು ಸಕಳರಾಜಲೋಕಮಂ ವಿಸರ್ಜಿಸಿ ಚಂಡಾಲಕನ್ನೆಯುಂ ವಿಶ್ರಮಿಸಲ್ವೇಳ್ದು ವೈಶಂಪಾಯನನಂ ಮಹಾದೇವಿಯರರಮನೆಗೆಕಳುಪಿ ಮೆಂದಾತಾಂಬೂಲಕರಂಕವಾಹಿನಿಗೆ ಬೆಸಸಿ ಕೆಲಬರರಸುಮಕ್ಕಳ್ವೆರಸೊಳಗಂಪೊಕ್ಕು ॥ ೬೭

ಕಂ ॥ ಭುವನೇಶಂ ಭೂಷಣವೆ । ಲ್ಲವನಾಗಳ್ಕಳೆದು ನಾಡೆಯುಂ
ಕಣ್ಗೆಸೆದಂ ॥ ದಿವಸಕರಚಂದ್ರತಾರಾ । ನಿವಹಂ ತೊಲಗಿಪ್ಪಗಗನವಿಸ್ತಾರ
ದವೊಲ್ ॥ ೬೮

ವೃ ॥ *[ಪೆಱೆಗಿವೆ] ಪೊಣ್ಮಿದತ್ತವೃತಬಿಂದುಗಳೆಂಬಿನೆಗಂ ಲಲಾಟ
ದೊ । ಳ್ತುಱುಗಿದ ಸಿಂಧುವಾರನವಮಂಜರಿಯೆಂಬಿನೆಗಂ ಕದಂಪಿನೊಳ್ ॥
ಮಿಱುಗುವ ಹಾರಮೆಂಬಿನಮುರಸ್ಥಳದೊಳ್ ಘನಘರ್ಮಬಿಂದುಗ । ಳ್ಪೊಱ
ಮಡೆ ಮತ್ತಳಂಕೃತನವೋಲೆಸೆದಂ ನೃಪರೂಪಚಂದ್ರಮಂ ॥ ೬೯

ವ ॥ ಅನಂತರಂ ಕಟ್ಟಿದಬೆಳುವಟ್ಟೆಯ ಮೇಲ್ಕಟ್ಟಿನೊಳಂ ತೀವಿದ ಚೆಂಬೊನ್ನದೋಣಿಗಳೊಳಮಳಂಕರಿಸಿದ ಪಳುಕಿನ ಪಟ್ಟವಣೆಗಳೊಳಂ ಪರಿಮಳಕ್ಕೆಱಗಿಮುಸುಱುವ ಮಱಿದುಂಬಿಯಬಂಬಲಿಂನೀಳಾಂಬರದಿಂಬಾ

ಪೂವಲಿ—ಪುಷ್ಪೋಪಹಾರ; ಕಳಪಿಂ—ಕಳುಹಿಸಿ; ಕರಂಕ—ಸಂಬೆಗೆ; ಶ.ಶಾ. "ಇಪ್" ಎಂಬ ಸೂತ್ರದಿಂದ ಕಳುಪುಧಾತುವಿನಮೇಲೆ ವಿಧ್ಯರ್ಥದಲ್ಲಿ ಇಪಾದೇಶಬಂದಿದೆ.

೬೯. ಪೆಱೆಗೆ—ಚಂದ್ರಸಿಗೆ; ಪೊಣ್ಮಿದತ್ತು—ಹೊಮ್ಮಿದವು; ಸಿಂಧುವಾರ—ಬಿಳೀಲಕ್ಕಿ; ಪಟ್ಟವಣೆ—ರಾಜಪೀಠ.

೭೦. ಮುಸುಱುವ—ಮುತ್ತುವ; ಬಾಸಣಿಸಿದಂತೆ—ಮುಚ್ಚಿದಹಾಗೆ; ಓಲಾಡಿ—ಮುಳುಗಾಡಿ.

*[ಪೆರನಿವೆ]

ಸಣಿಸಿವಂತಿರ್ದ್ದಗಂಧೋದಕಕಲಶಂಗಳೊಳ ಮೆಸೆವ ಮಜ್ಜನಪ್ರದೇಶಕ್ಕೆ ಮಜ್ಜನೋಪಕರಣಸಂಪಾದನವ್ಯಗ್ರಪರಿಜನಂ ಬೆರಸು ಬಂದು ನೀರ ... ಯೊಳೋಲಾಡಿ ಮಜ್ಜನಪೀಠಮ ನಳಂಕರಿಸಿದಾಗಳ್ ‖ ೨೦

ವೃ ‖ ಬಿಗಿದೊಗೆದೊಪ್ಪಿತೋರ್ಪ್ಪ ಕುಚಮಂಡಳಮಂ ರುಚಿರಾಂಚಳಂಗಳಿಂ । ಬಿಗಿವಪುರ್ವಂತಿಱುಂಕಿ ನಿಱಿಯಂಲುಳಿತಾಳಕಜಾಳಮಂ ಕೊಡಂ ‖ ಕೆಗೆತೆಗೆದೇಱಿನೂಂಕಿ ಮಣಿಕಂಕಣಮಂ ಕಳಶೋತ್ಕರಂಗೆಳಂ । ತೆಗೆದಭಿಷೇಕದೇವತೆಯರಂದದಿ ನೊಪ್ಪಿದರಂದು ಕಾಂತೆಯರ್ ‖ ೨೧

ಕ ‖ ಕಲಶಮನಾಗಳ್ನಿಜಕುಚ । ಕಲಶದ ಮೇಲಿಟ್ಟು ನೃಪನ ಕೆಲದೊಳ್ನಿಲಬ ‖ ಕ್ಕಲಶಸ್ತನೆಯನ್ನಿಜಕುಚ । ಕಲಶದಚೆಲ್ವಿಂಗೆ ಕಲಶವಿಟ್ಟಂತಿರ್ದ್ದರ್ ‖ ೨೨

ನಳಿನದಳಪ್ರಟದೆ ನೀರಂ । ನಳಿನಿಗಳವು ರೂಪುಗೊಂಡು ಸುರಿದಪುವೆನೆಕಂ ‖ ಗೊಳಿಪ ಮರಕತದ ಕಳಸಂ । ಗಳಜಲಮಂ ಸುರಿದರಮಳಕಮಳಾನನೆಯರ್ ‖ ೨೩

ರಜನಿಗ ಳ್ಪೆಂಪವ ಬಿಂಬ । ವ್ರಜದಿಂ ಜ್ಯೋತ್ಸ್ನಾಪ್ರವಾಹಮಂ ಪಸರಿಪವೋಲ್ ‖ ರಜತಕಳಶಂಗಳಿಂ ಮಳ । ಯಜಜಳಮಂ ಸುರಿದರಸಿತನಳಿನೇಕ್ಷಣೆಯರ್ ‖ ೨೪

ವೃ ‖ ಸುರುಚಿರಶಾತಕುಂಭಕಲಶಂಗಳ ಮಂಗಳಪಲ್ಲವಂಗಳಿಂ । ತ್ರಿರೆ ಕರಪಲ್ಲವಂ ಸಖಿನಿಕಾಯದಿಸುಣ್ಮುವ ಕಾಂತಿಜಾಳಮಂ । ಜರಿ ಲುಳಿತಾಂಗುಳಿಪ್ರಕರದಿಂಪ್ರೊಱಪ್ರೊಣ್ಮುವ ವಾರಿಧಾರೆಯಿಂ । ತಿರೆ ಜಲಯಂತ್ರದೇವತೆಯುರಂದದಿನೊಪ್ಪಿದ ರಂದು ಕಾಂತೆಯರ್ ‖ ೨೫

ಕಂ ‖ ಕಳಸಮನೆತ್ತಿ ಬಳಲ್ದು । ಗಳಂತೆ ಸರ್ವಾಂಗದಿಂದೆ ಪೊಣ್ಮೆ ಬೆಮರ್ಕೆಲ್ಗಳ್ ‖ ಮಳಿಯಜ್ಜಳನೇವತೆಯರ । ವಿಳಾಸಮಂ ತಳೆದು ಸುರಭಿಜಳಮಂ ಸುರಿದರ್ ‖ ೨೬

---

೨೧. ಕೊಡಂಕೆ—ಕಿಪಿ, ಪಿಡಿನೂಂಕಿ—ದೊಳ್ಕೆತ್ತೆ.

ಉದಯಂಗೆಯ್ವಿನಜಿಂಬದಿ । ನುದಯಿಸುವೆಳವಿಸಿಲಿದೆಂಬಿನಂ ಮಣಿ
ಮಯುಕುಂ ॥ ಭದಿನಂದು ಪೊಯ್ದುಳೋರ್ವ್ವ । ಳ್ವದ ಳತಪಂಕರುಹವದನೆ
ಕುಂಕುಮಜಳವಂ ॥ ೩೭

ವ ಅಂತು ಮಜ್ಜನಾನಂತರದೊಳ್.

ಕಂ ॥ ತರುಣೋರಗ ನವಸಿರ್ಮ್ಮೋ । ಕರುಚಿಮೆನಿಸಿರ್ದ್ದ ಧೌತ
ಧವಳಾಂಬರದಿಂ ॥ ಕರಮೆಸೆವನಭ್ರಗಂಗಾ । ಪರಿವೃತಹಿಮವನ್ನಗೇಂದ್ರದಂತೆ
ನರೇಂದ್ರಂ ॥ ೩೮

ವ ॥ ಅನಂತರಂ [ಸಂಪಾದಿತ] ಪಿತೃತರ್ಪ್ಪಣನು [ಮಭಿವಂದಿತ] ಸಹಸ್ರಕಿರಣನುಮಭ್ಯರ್ಚಿತ ಭಗವದ್ಭವಾನೀವಲ್ಲಭ ಚರಣಕಮಳನುಮುಪಚರಿತಲೇಪನಾಳಂಕಾರನು *[ಮಾಚರಿತಾಭ್ಯವಹಾರನು]ಮುದ್ಗೃಹೀತತಾಂಬೂಲಕರಂಕವಾಹಿನೀ ಸ್ಕಂಧವಿನ್ಯಸ್ತಹಸ್ತನುಮಾಗಿ ಕತಿಪಯಪದಂಗಳಂ ನಡೆದಿದಿರೊಳ್ ಪೊಳೆವ ಪಳುಕಿನ ಭಿತ್ತಿಯಂತೆ ಸುತ್ತಿದ ನೇತ್ರದುಕೂಲದೊಳಂ ಕಸ್ತೂರಿಯಕಂಪಿನಿಂ ಪೊರೆದ ಚಂದನದಣ್ಪಿಂ ಕುಳಿರ್ವ ಮಣಿಕುಟ್ಟಿಮತಳದೊಳಂ [ಗಗನತಳದೊಳ್] ಪೊಳೆವ ತಾರಾವಳಿಯಂತೆ[ನೀಲ] ದನೆಲೆಗಟ್ಟಿನೊಳ್ ಪೊರೆದಪೂವಲಿಯೊಳಂ ಗೃಹದೇವತೆಯರ್ಸಂನಿದವಾದರೆನಿಸಿ ರಂಜಿಸುವಮಣಿಮಯಸಾಲಭಂಜಿಕೆಗಳೊಳಂ ಸುಗಂಧಜಲದೊಳ್ತೊಳೆಯೆಕಂಪ್ರವೆತ್ತು ಪೊಳೆವ ಪಳುಕಿನಕಂಬಂಗಳೊಳಂ ಮಂದ್ಯೈಸಿನೆಗೆವಗರುಧೂಪಧೂಮದೊಳ ಮೆಸೆವಾಸ್ಥಾನಮಂಟಪದೊಳ್ ಸಮುಚಿತಾಮಾತ್ಯ ರಾಜಪುತ್ರಮಿತ್ರಸಮನ್ವಿತಂ ಬಂದುಪುಗುವಲ್ಲಿ ॥

ವೃ ॥ ಬಳಸಿರ್ದ್ದಭ್ರಾಳಿಯಿಂದಂ ತುಹಿನಗಿರಿಶಿಲಾಪಟ್ಟವೆಂಬಂತೆ ಚೆಲ್ವಾ । ದಲತಾಂತಂ ತಳ್ತಶಯ್ಯಾತ್ರಿತಸಿತಮೃದುಳಪ್ರಚ್ಛದಚ್ಛನ್ನಶಯ್ಯಾ

೩೯. ಅಭ್ಯವಹಾರ—ಭೋಜನ; ನೇತ್ರ—ಸೂಕ್ಷ್ಮವಾದ; ಚಂದನವಣ್ಪು—ಗಂದೋದಕ; ತೊಳಪದಿಂ—ಸೇಚನದಿಂ; ಕುಳಿರ್ವ—ತಣ್ಣಗಿರುವ; ಸಂನಿದವಾದರ್—ಸನ್ನಿಹಿತರು; ಮಂದ್ಯೈಸಿ—ದಟ್ಟವಾಗಿ;

*[ಉಚ್ಚರಿತವ್ಯವಹಾರನುಂ]

ತಲವೊಳ್ಕಿಳ್ತು * [ಳವಸ್ತ್ರಿಲ್ಲನೆ] ಕರತಳಪದ್ಮಂಗಳಿಂ ಪಾದಪದ್ಮಂ । ಗಳನಂದೊತ್ತುತ್ತಿರಲ್ ಶೂದ್ರಕನೃಪತಿ ಸುಖಾಸೀನನಾಗಿರ್ದ್ದನಾಗಳ್॥ ೮೦

ವ ॥ ಅನಂತರಮನತಿದೂರದೊಳಿರ್ದ್ದದೌವಾರಿಕೆಯುಂ ವೈಶಂಪಾಯನನ ನೋಡಂಗೊಂಡು ಬರ್ಪ್ಪುದೆಂದುತದ್ವೃತ್ತಾಂತಾಕರ್ಣನಕೌತುಕದಿಂ ಬೆಸಸೆ॥ ೮೧

ಕಂ ॥ ಪಡಿಯುರತಿವಿನಯವಿನಮಿತೆ । ಪೊಡವಟ್ಟಾಕ್ಷಣದೊಳಂತೆವುದದಿಂದಂಕ ॥ ನ್ನಡವಕ್ಕಿಯುಪಂಜರಮಂ । ತಡೆಯದೆತಂದವನಿಪತಿಯ ಮುಂದಿಳುಪುವುದುಂ ॥ ೮೨

ವೃ ॥ ಕುಂಚಿತ ಪೂರ್ವಕಾಯ ನುಪಜಾತಜರಾಧವಳೋತ್ತಮಾಂಗನಂ । ಗಾಂಚಿತಕಂಚುಕಂ † [ವಿಹಗ] ಜಾತಿಯಕೂರ್ಮೆಯಿಸೆಯ್ದೆವರ್ಪ್ಪುದುಮು ॥ ತ್ತಂಚೆಯಿದೆಂಬಿನಂ ಗಿಳಿಯುಜೆನ್ನನೆ ಮೆಲ್ಲನೆ ಗದ್ಗದಸ್ವನಂ । ಕಂಚುಕಿಬಂದು ಕಂಡನನುರಾಗದಿ ನಾಮನುಜೇಂದ್ರಚಂದ್ರನಂ ॥ ೮೩

ವ ॥ ಅಂತುಕಂಡವನಿತಳಕ್ಕೆ ಕರತಳಮನಿಕ್ಕಿ ಪೊಡವಟ್ಟು ದೇವ ಜಿನ್ನಪಂ [ದೇವಿಯುದ್ವೇವರಾಣತಿಯಿಂ] ಕೃತಸ್ನಾನನುಮುಪರಚಿತಾಹಾರನುಮಾದೀವೈಶಂಪಾಯನನಂ [ದೇವರಡಿಯೆಡೆಗೆ ದೌವಾರಿಕೆಯೊಡನೆ ಕಳುಹಿದೆನೆಂದು ಬಿನ್ನವಿಸಿವರೆನೆ] ವೈಶಂಪಾಯನನಂ ನರೇಂದ್ರನಿಂತೆಂದಂ॥ ೮೪

ಕಂ ॥ ಏನೇನಭಿಮತಮಂ ಪೇ । ಳ್ಳೇನಾಸ್ವಾದಿಸಿದೆ ದೇವಿಯರ ಮನೆಯೊಳಿನ ॥ ಲ್ಕೇನೇನಭಿಮತಮಂ ಕೇ । ಳಾನಾಸ್ವಾದಿಸಿದನಲ್ಲ ನೃಪಕುಲತಿಲಕಾ ॥ ೮೫

---

೮೦. ಅಭ್ಯಾಸದಿಂದುಬಳಸಿದ ಎಂದರ್ಥವು; ಲತಾಂತಂ—ಪುಷ್ಪ; ತಳ್ತ—ವ್ಯಾಪ್ತವಾದ; ಕಪಸ್ಟು—ಹಾಸಿಗೆ, ಮಂಚ; ಕಿಳ್ಳಿಳವಳ್—ಬಿಚ್ಚುಗತ್ತಿಯ ಹೆಂಗಸು;

೮೧. ಕನ್ನಡವಕ್ಕಿ—ಗಿಳಿ.

೮೩. ಕೂರ್ಮೆಯಿಂದ—ಪ್ರೀತಿಯಿಂದ; ಗಿಳಿಮಾಜೆನ್ನನೆ—ಗಿಣಿಯಹಿಂದೆ.

೮೪. ಆಣತಿಯಿಂ—ಆಜ್ಞೆಯಿಂದ.

* [ಸೋಳ್ಪ ಕಿಳ್ಳಳವಿಲ್ಲಿಲ್ತಸೆ.] † [ವಿಗತ]

ಕಳಕಂಠಲೋಚನಚ್ಛವಿ । ವಿಳಾಸಮಂ ತಳೆದ ನೀಲಪಾಟಳಜಂ
ಬೂ ॥ ಫಳಮಧುರರಸಮನೀಂಟಿದೆ । ನಿಳೇಶ ಪಿರಿದಳ್ತಿಯಿಂ ಮನಂ ತಣಿ
ವಿನೆಗಂ ॥ ೮೬

ಹರಿವಿದಳಿತಮದಗಜಕುಂ । ಭರಕ್ತಸಿಕ್ತಾರ್ದ್ರಮೌಕ್ತಿಕಪ್ರಕರದ
ವೋಲ್ ॥ ಕರವೆಸೆವ ದಾಡಿವಿಾಬೀ । ಜರಾಜಿಯುಂ ತೆಗೆದು ರಸವನಾಸ್ವಾ
ದಿಸಿದೆಂ ॥ ೮೭

ಆದತ್ತಾಮಳಕಫಳಾ । ಸ್ವಾದನೆಯಿಂ ತೃಪ್ತಿ ದೇವಗಳಪ್ರತ್ತಿರಲೇಂ ॥
ಆದತ್ತಮೃತಂ ದೇವಿಯು । ರಾದರದಿಂ ತಮ್ಮ ಕಯ್ಯೊಳೂಡಿದರೆನ್ನಂ ॥ ೮೮ ॥

ವ ॥ ಅಂತುನುಡಿವ ವೈಶಂಪಾಯನನಂ ನರೇಂದ್ರನಿಂತೆಂದಂ.

ಕಂ ॥ ಎಂತೆಂತುನುಡಿಯೆ ವಿಸ್ಮಯ । ಮಂತಂತೊದವಿಪ್ಪುದು ಚಿತ್ತ
ದೊಳ್ ಕೇಳಿದನ ॥ ತ್ಯಂತಂ ನಿನ್ನಯ ನಿಜವೃ । ತ್ತಾಂತಮನೆನಗಱಿಯೆ
ಪೇಳ್ವುದತಿಕೌತುಕಮಂ ॥ ೮೯

ವೃ ॥ ನಿಂನಯ ದೇಶ ಮೆತ್ತಣದು ಪುಟ್ಟಿದೆ ಯೆಂತಭಿದಾನಮಾವನಿಂ ।
ದಂನಿನಗಾಯ್ತು ವೇದನಿವಹಸ್ಮೃತಿಶಾಸ್ತ್ರಕಳಾಕಳಾಪಮಂ ॥ ಪಂನತೆ ಯೆಂ
ತು ಬಂದುದು ಭವಸ್ಮೃತಿಪುಟ್ಟಿತೊ ಮೇಣ್ವರಪ್ರಸಾ । ದೋಂನತಿ ಯಾದು
ದೋ ಮಱಸಲೆಂಮ ವಿಹಂಗಮವೇಷ್ಟಿಯಾವೆಯೋ ॥ ೯೦

ಕಂ ॥ ದೊರೆಕೊಂಡೆ ಯೆಂತು ಮುಂಪಂ । ಜರಬಂಧನಮಾವ

---

೮೬. ಈಂಟಿದೆಂ—ಪಾನಮಾಡಿದೆನು; ತಣಿವಿನೆಗಂ—ತೃಪ್ತಿ ಪಡುವವರಿಗೆ.

೮೮. ಗಳಪ್ರತ್ತಿರಲೇಂ—ಹಟಟುತ್ತಿದ್ದರೇನು; ಅಮೃತಮಾದತ್ತು—ಅಮೃತೋಪಮಾನವಾಯಿತು; ಊಡಿದರ್—ತಿನ್ನಿಸಿದರು; ಎನ್ನಂ—ಇಲ್ಲಿ; ಶಾ. ಸೂ. ೨೦೬, ಬೋಧಾಶನಾವನರ್ತೀನಾಂ ವಾ ಎಂಬ ಸೂತ್ರದಿಂದ ಅಶನಾರ್ಥಕವಾದ ಊಡುಧಾತುವಿನ ಸಂಬಂಧದಿಂದ ಪ್ರಯೋಜ್ಯಕರ್ತೃವಾದ ಎನ್ ಶಬ್ದದಮೇಲೆ ವಿಕಲ್ಪವಾಗಿ ದ್ವಿತೀಯೆ ಬಂದಿದೆ.

೮೯. ವಿಸ್ಮಯಮ—ಆಶ್ಚರ್ಯವನ್ನು; ಒದವಿಪ್ಪುದು—ಉಂಟುಮಾಡುವದು, ನುಡಿಯೆಂಬುವಧ್ಯಾಹಾರವು; ಅಱಿಯೆಪೇಳ್ವುದು—ತಿಳಿಯಪಡಿಸು.

೯೧. ಎಂತು—ಹ್ಯಾಗೆ; ದೊರೆಕೊಂಡೆ—ಸಿಕ್ಕಿದೆ.

ದೆಂತು ನಿನಗೀಚಂಡಾ ‖ ಲರ ಸಂಗತಿ ಯೆಂತಿಲ್ಲಿಗೆ । ಬರವಾಯಿತ್ತೆಂತು ಪೇಳ ದೆಲ್ಲಮನೀಗಳ್ ‖ ೯೧

ವೃ ‖ ತನ್ನಯ ಚಿತ್ತದೊಳ್ಪಿರಿದುಕೌತುಕಮಾಗಲು ತನ್ನನಳ್ಕರಿಂ । ಮನ್ನಿಸಿ ಭೂಭುಜಂ ಬೆಸಗೊಳಲ್ಕಿಜವೃತ್ತಮನೆಲ್ಲಮಂ ಕ್ಷಣಂ ‖ ತನ್ನೊಳೆ ತಾನೆ ಭಾವಿಸುತ ವಿದಗ್ಧಶುಕಂ ನುಡಿಗುಂ ನರೇಂದ್ರಕೇ । ಳ್ನಿನ್ನಮನಕ್ಕೆ ಕೌತುಕವಿದಪ್ಪೊಡೆ ಪೇಳ್ವೆನೆ ತತ್ಪ್ರಪಂಚಮಂ ‖ ೯೨

ವ ‖ ಎಂದುವೈಶಂಪಾಯನಾಭಿದಾನಶುಕಂ ಪೇಳಲ್ತಗುಳ್ದುದದೆಂತೆನೆ.

ವೃ ‖ ಭುವನಪ್ರಸ್ತುತ್ಯವಸ್ತುಪ್ರಕರದಪ್ರದುವಿಂ ಮಧ್ಯದೇಶಕ್ಕಳಂಕಾ । ರವೆನಲ್ಬೆಲ್ವಾಗಿ ಭೂದೇವಿಯ ರುಚಿರಕಟೀಸೂತ್ರವೋ ಪೇಳಿಮೆಂಬಂ । ತೆವೊಲೊಪ್ಪಂಬೆತ್ತು ಪೂರ್ವಾಪರಜಳನಿಧಿವೇಳಾತರಂ ಗೋಚ್ಛಳದ್ರ । ತ್ನವಿನಿದ್ರಪ್ರಾಂತದೇಶಂ ಸೊಗಯಿಪುದೆಸಸುಂ ನೀಳ್ದ ವಿಂಧ್ಯಾಚಳೇಂದ್ರಂ ‖

ವ ‖ ಅಂತಾವಿಂಧ್ಯಾಚಳದ ಪೇರಡವಿಯೊಳ್ ‖ ೯೩

ಕಂ ‖ *[ಪಳುವದ] ಮದಕರಿಗಳ ಮದ । ಜಳದೊಳ್ನಿಮಿರ್ದಿರ್ದ ಮರದ ತುದಿಗೊಂಬುಗಳೊ ಳ್ಪೊಳೆವುವು ಸಿಲುಕಿದ ತಾರಾ । ವಳಿಗಳಿವೆನೆ ತೊಳಗಿಪ್ಪೊಳೆವ ಕುಸುಮಾವಳಿಗಳ್ ‖ ೯೪

†[ಕುರರಕುಲತುಂಡ] ಖಂಡಿತ । ಮರಿಚಲತಾಪ್ರಚಯರುಚಿರ

---

೯೨. ನುಡಿಗುಂ—ಹೇಳಿತು ; ಶಶಾ ಸೂ. ೩೬೩, ಅಮರೋಗುರ್ಗುಮ್ ಎಂಬುದರಿಂದ ಪ್ರಥಮಪುರುಷ ಭೂತಕಾಲ ನಪುಂಸಕಲಿಂಗೈಕವಚನದಲ್ಲಿ ಗುಮ್ ಎಂಬ ಪ್ರತ್ಯಯ ಬಂದಿದೆ.

೯೩. ತಗುಳ್ದುದು—ಉಪಕ್ರಮಿಸಿತು ; ಪ್ರದುವಿಂ—ವ್ಯಾಪ್ತಿಯಿಂದ ; ಪೇಳಿಂ—ಹೇಳಿರಿ.

೯೪. ಪಳುವದ—ಅರಣ್ಯದ ; ನಿಮಿರ್ದಿರ್ದ—ಬೆಳೆದಿದ್ದ.

೯೫. ಕುರರಕುಲತುಂಡ—ಕುರರಪಕ್ಷಿಸಮೂಹದ ಕೊಕ್ಕಿನಿಂದ ; ಮರಿಚಲತಾ—ಮೆಣಸಿನ ಬಳ್ಳಿ ; ಖಂಡಿತ—ಕೊಚ್ಚಲ್ಪಟ್ಟ.

* [ಪಳಿವುವು] †[ಕುರವಕನಿಕರದ]

ನವಪಲ್ಲವದಿಂ ‖ ಕರಿ * [ಕರವ್ಯದಿತತವೂ] ಲೋ। ತ್ಕರಕಿಸಲಯಸುರಭಿ
ಗಂಧದಿಂಸೊಗಯಿಸುಗುಂ ‖ ೯೫

ಚರಿಯಿಪ ವನದೇವತೆಯರ । ಚರಣಾಲಕ್ತಕದೆ ಪೊರೆದುವೆನಿಪ್ಪವು
ಮಧುವಿಂ ‖ [ದುರೆ] ಸೊಕ್ಕನಾಳ್ದ ಕೇರಳಿ । ಯರ ಕದಪಿನ ಬಣ್ಣಮಪ್ಪ
ಚೆಂದಳಿರ್ದುರುಗಲ್ ‖ ೯೬

ವ ‖ ಮತ್ತಮಲ್ಲಿ ಗಿಳಿಗಳ ಗೂಡಿಂದುದಿರ್ದ ದಾಳಿಂಬದ ಬಿತ್ತುಗಳಿ
ನೊಸರ್ದ ತನಿರಸದ್ದಳಿಪದೊಳ ಮೊಲರಲೆಪದಿಂ ದುರುಳ್ದು ಪರೆದೆಸೆವ ಕುಸು
ಮರೇಣುಗಳೊಳಂ ಪಥಿಕಜನಂಗಳಿಂ ಪಸರಿಸಿದ ಲವಂಗಪಲ್ಲವದ ಪಾಸು
ಗಳೊಳಂ ಕುರವಕದಪಕುಳದೆಳಗೌಂಗಿನ ಹೊಂಗೇದಗೆಯ ಬಳಸಿನೊ
ಳವೆಲೆವಳ್ಳಿಯ ತಳ್ಕಿನಿಂ ಮನಂಗೊಳಿಪ ಕೌಂಗಿನ ಮರಂಗಳೊಳಂ ಮ
ನಂಗೊಳಿಸುವ ವನಲಕ್ಷ್ಮಿಯನಿವಾಸಭವನದಂತಿರ್ದ್ದ ಲತಾಮಂಟಪಂಗಳ್
ಮನಂಗೊಳಿಪ್ಪವಂತುಮಲ್ಲದೆಯುಂ ‖ ೯೭

ಕಂ ‖ ಮದವನ್ಮಾತಂಗಕಪೋ । ಲದಿ ನೊರೆದೊರತೆಯೊಳೆ ಜೆಳೆ
ದುದೆಂಬಿನಮೆತ್ತಂ । ಮದಗಂಧವೊದವೆ ಕತ್ತಲಿ ಪ್ಪುದು ಪುದಿದೇಲಾಲತಾ
ವನಪ್ರೋದ್ಯಾನಂ ‖ ೯೮

ವೃ ‖ ಗಗನತಳಂಬರಂ ನೆಗೆದು ಮತ್ತಗಜಂಗಳ ಮಸ್ತಕಕ್ಕೆ ಪಾ।

---

೯೬. ಚರಿಯಿಪ—ಸಂಚರಿಸುವ ; ಅಲಕ್ತಕದೆ—ಅರಗಿನರಸದಿಂದ ; ಪೊರೆ
ದುವು—ಲೇಪಿಸಲ್ಪಟ್ಟವು ; ಕೇರಳಿಯರ—ಕೇರಳದೇಶದಸ್ತ್ರೀಯರ.

೯೭. ಒಸರ್ದ—ಸುರಿಯುವ ; ತಳಿಪದೊಳಂ—ಸೇಚನೆಯಿಂದ ; ಅಲೆಪದಿಂ
ದೆ—ಚಲನೆಯಿಂದ ; ಪರೆದು—ಹರಡಿಕೊಂಡು ; ಪಸರಿಸಿದ—ಹಾಸಲ್ಪಟ್ಟ ; ಎಳಗವುಂ
ಗಿನ—ಕೋಮಲವಾದ ಅಡಿಕೇಮರಗಳ ; ಎಲೆವಳ್ಳಿಗಳ—ಎಲೇಬಳ್ಳಿಗಳ.

೯೮. ಒರೆದ—ಸ್ರವಿಸಿದ ; ಒರತೆಯೊಳೆ—ಪ್ರವಾಹದಿಂದ ; ಕತ್ತಲಿಪ್ಪುದು—
ಅಂಧಕಾರವನ್ನುಂಟುಮಾಡುವದು ; ಪುದಿದ—ವ್ಯಾಪ್ತವಾದ ; ಏಲಾಲತಾವನಂ—ಯಾ
ಲಕ್ಕೀಬಳ್ಳಿಗಳಸಾಲಿನ

೯೯. ಗಗನತಳಂಬರಂ—ಆಕಾಶದತನಕ ; ಉಗಿಬಗಿಮಾಡುವಲ್ಲಿ—ಸೀಳುವಾಗ ;

*[ಕುರಿಯುಸಮುದ್ಧಿತಕಮಲೋ]

ಯ್ಯುಗಿಬಗಿವಮಾಡುವಲ್ಲಿ ಪ್ರೇಳೆವಂಕುಶದಂತಿರೆ ಕೊಂಕುವೆತ್ತ ಕೂರುಗು ಗಳೊಳೆಯ್ದೆ ತೆತ್ತಿಸಿದ ಮುತ್ತಿನಲೋಭದೆ ಕೊಬ್ಬರೆತ್ತಲುಂ। ಮೃಗಪತಿ ಯೂಥಮಂ ಪಲಬರಾಬನದೊಳ್ ಶಬರಾಧಿನಾಯಕರ್ ೯೯

ವ॥ ಮತ್ತಮದು ಸಮರಸಮುದ್ಯತನಂತೆ ವೇಣುಬಾಣಾಸನಾರೋಪಿತ ಶಿಲೀಮುಖಮುಂ ವಿವಿಕ್ತ ಸಿಂಹನಾದಮುಂ ಯಮಪುರದಂತೆ ಮೃತ್ಯುಭೀಷಣಮುಂ ಮಹಿಷಾಧಿಷ್ಠಿತಮುಂ ಕಾತ್ಯಾಯನೀಕಾಯದಂತೆ ವಿಚಳಿತಖಡ್ಗಭಯಂಕರಮುಂ ಅರುಣಚಂದನಪಲ್ಲವಾಳಂಕೃತಮುಂ ಸಂಧ್ಯಾಕಾಲದಂತೆ ನೃತ್ಯನ್ನೀಲಕಂಠಮುಂ ಪಲ್ಲವಾರುಣಿತಮುಂ ಸಾಮ್ರಾಜ್ಯವಿಭವದಂತೆ ಚಮರೀವಾಲವ್ಯಜನೋಪಶೋಭಿತಮುಂ ಗಜಘಟಾಪರಿಪಾಲಿತಮುಂ ಕಾಮಿನೀಜನದಂತೆ ಮೃಗಮದಪರಿಮಳಾಮೋದಿತಮುಂ ಕೃಷ್ಣಾಗರುತಿಳಕಭೂಷಿತಮುಂ ವಿರಹಿಜನದಂತೆ ವಿವಿಧಪಲ್ಲವಾನಿಲವೀಜ್ಯಮಾನಮುಂ ಮದನಾಕ್ರಾಂತಮುಂ ಬಾಲಗಳದಂತೆ ವ್ಯಾಘ್ರನಖಮಂಡಿತಮುಂ ಗಂಡಕಾಭರಣಮುಂ ಪಾನಪ್ರದೇಶದಂತೆ ಪರಿಗತಮಧುಕೋಶಶತಮುಂ ವಿಕೀರ್ಣವಿವಿಧಕುಸುಮಮುಂ ದಶಮುಖನಗರಿಯಂತೆ ವಾನರಭಜ್ಯಮಾನತುಂಗಸಾಲಮುಂ ಪ್ರಳಯಕಾಲದಂತೆ ಮಹಾವರಾಹಸಮುತ್ಖಾತಧರಣೀಮಂಡಲಮುಂ ವಿನಾಹಗೇಹದಂತೆ ಸಮಿತ್ಕುಶಕುಸುಮಶಮೀಪಲಾಶೋಪಶೋಭಿತಮುಂ ಅಮರಪತಿಗಾತ್ರದಂತೆ ನೇತ್ರಸಹಸ್ರಸಂಕುಳಮುಂ ಅವನಿಪತಿಗೃಹದ್ವಾರದಂತೆ ವೇತ್ರಲತಾಶತದುಷ್ಪ್ರವೇಶಮುಂ ವಿರಾಟನಗರಿಯಂತೆ ಕೀಚಕಾವೃತಮುಂ ಅಂಬರದಂತೆ ವ್ಯಾಧಾನುಗಮ್ಯಮಾನತರಳತಾರಕಮೃಗಮುಂ ಗೃ

ಕೊಂಕುವೆತ್ತ—ವಕ್ರನಾದ; ತೆತ್ತಿಸಿದ—ಸೇರಿಕೊಂಡಿರುವ.

೧೦೦. ವೇಣುಬಾಣಾಸನಾರೋಪಿತಶಿಲೀಮುಖಮುಂ:—ವೇಣು—ಬಿದರಿನ; ಬಾಣಾಸನ—ಬಿಲ್ಲಿನಲ್ಲಿ, ಆರೋಪಿತ—ಏರಿಸಲ್ಪಟ್ಟ, ಶಿಲೀಮುಖ—ಬಾಣವುಳ್ಳವನು; ವೇಣು—ಬಿದರುಗಳಲ್ಲಿಯೂ, ಬಾಣ—ಗೋರಂಟಿಮರಗಳಲ್ಲಿಯೂ, ಅಸನ—ಸರ್ಜಕವೃಕ್ಷಗಳಲ್ಲಿಯೂ ಆರೋಪಿತ—ಕುಳಿತುಕೊಂಡಿರುವ, ಶಿಲೀಮುಖ—ತುಂಬಿಗಳುಳ್ಳದ್ದು. ಖಡ್ಗ—ಕತ್ತಿ, ಗೇಂಡ; ನೃತ್ಯ—ಕುಣಿಯುವ; ನೀಲಕಂಠನು—ಶಿವನುಳ್ಳದ್ದು, ನವಿಲುಗಳುಳ್ಳದ್ದು; ತಿಲಕ—ಬೊಟ್ಟು, ತಿಲಕವೃಕ್ಷ; ಮದನ—ಮನ್ಮಥ, ಮಗ್ಗರೆಗಿಡ; ಮಧು

ಹೀತಪ್ರತನಂತೆ ದರ್ಭಚೀರ ಜಟಾವಲ್ಕಲಧಾರಿಯುಂ ಅಪರಿಮಿತ ಪತ್ರಸಂಚಯಮಾಗಿಯುಂ ಸಪ್ತಪರ್ಣೋಪಶೋಭಿತಮುಂ ಕ್ರೂರಸತ್ವಮಾಗಿಯುಂ ಮುನಿಜನಸೇವಿತಮುಮೆನಿಸಿಪ್ಪುದಂತುಮಲ್ಲದೆಯುಂ ॥ ೧೦೦

ಕಂ ॥ ಅದು ನಿಖಿಲಭುವನಮಂಡಲ । ವಿದಿತಂ ತಳ್ತೆಸೆವ ದಂಡಕಾ
ರಣ್ಯದೊಳಿ ॥ ರ್ಪ್ಪುದಗಸ್ತ್ಯಮುನಿಪ ನಾಶ್ರಮ । ಪದ ಮತಿಪಾವನಮ ಗಣ್ಯ
ಪುಣ್ಯಕ್ಷೇತ್ರಂ ॥ ೧೦೧

ವ ॥ ಅದರೊಳ್ಸುರಾಸುರಮಕುಟಪತ್ರಭಂಗಕೋಟಿಚುಂಬಿತಚರಣಾರವಿಂದನುಂ ದಕ್ಷಿಣಾಶಾ [ವಧೂಮುಖ] ವಿಶೇಷಕನುಮೆನಿಸಿದಗಸ್ತ್ಯಮಹಾಮುನಿಯಿರ್ಪ್ಪನಾತನ ಮಹಾಪ್ರಭಾವಮಂಪೇಳ್ವೊಡೆ ॥ ೧೦೨

ವೃ ॥ ಕೆಡೆದಂ ಭೋಂಕನೆ ಸಗ್ಗದಿಂದೆ ನಹುಷಂ ಪಾವಾಗಿ ಹುಂಕಾ
ರದಿಂ । ಪೊಡೆಗಿಚ್ಚಿಂದವೆ ಜೀರ್ಣನಾದನಸುರಂ ವಾತಾಪಿತನ್ನಾಣೆ [ಯಿ ॥
ಟ್ಟೊಡೆ] ಮಾಣ್ದಿರ್ದ್ದುದಮೇರುಮತ್ಸರದೊಳಾದಂ ನೀಳ್ದವಿಂಧ್ಯಾಚಳಂ ।
ಕಡಲಾಪೋಶನಮಾದುದಾ ಮುನಿಗೆ ನಲ್ಕೇನೆಂಬೆನಾಶ್ಚರ್ಯಮಂ ॥ ೧೦೩

ಕಂ ॥ ಆಮುನಿಮುಖ್ಯನ ಸತಿಲೋ । ಪಾಮುದ್ರೆ ತನೂಜರಿಂದೆ
ಮಿಗಿಲೆನಿಸಿದತಿ ॥ ಪ್ರೇಮದೆ ನಡಪಿದವಿಟಪಿ । ಸ್ತೋಮದಿ ನಾಶ್ರಮಪದಂ
ಮನಂಗೊಳಿಸಿರ್ಕ್ಕುಂ ॥ ೧೦೪

ಕೋಶ—ಮದ್ಯಪಾತ್ರೆ, ಜೇನುಹುಳು; ಸಾಲಂ—ಪ್ರಾಕಾರ, ಮರ; ನೇತ್ರ—ಕಣ್ಣು, ಮರದಜಡೆ: ಕೀಚಕ—ವಿರಾಟನ ಭಾವಮೈದುನನು, ಗಾಳಿಗೆಕೂಗುವ ಬಿದರು; ಸಪ್ತಪರ್ಣ—ಏಳೆಲೆಬಾಳೆ, ರಂಧ್ರವಿಂದಕೂಡಿ ಗಾಳಿಗೆ ಕೂಗುವ ಬಿದರು.

೧೦೨. ವಿಶೇಷಕಂ—ತಿಲಕದಂತೆ ಅಲಂಕಾರವಾಗಿರುವವನು.

೧೦೩. ಕೆಡೆದಂ—ಬಿದ್ದನು; ಪೊಡೆಗಿಚ್ಚಿಂದವೆ—ಜಠರಾಗ್ನಿಯಿಂದಲೆ; ಆಣೆಯಿಟ್ಟೊಡೆ—ಆಜ್ಞೆಯಂಮಾಡಲು; ಮಾಣ್ದು—ನಿಂತು; ಮೇರುಮತ್ಸರದೊಳ್—ಮೇರುಪರ್ವತದೊಡನೆ ಹುರುಡಿನಿಂದ; ನೀಳ್ದ—ಬೆಳೆದ: ಆಪೋಶನಂ—ಆಚಮನಜಲ.

೧೦೪. ತನೂಜರಿಂದೆ—ಮಕ್ಕಳಿಗಿಂತಲೂ; ಮಿಗಿಲೆನಿಸಿದ—ಹೆಚ್ಚು ಎಂದು ಹೇಳಿಸಿಕೊಂಡ; ನಡಪಿದ—ಸಾಕಿದ.

ವ ॥ ಮತ್ತಂ ಗೃಹೀತವ್ರತನುಮಾಕಲಿತಶಾಸ್ತ್ರನುಮುಪರಚಿತಭಸ್ಮತ್ರಿಪುಂಡ್ರಕಾಭರಣನುಮಾಬದ್ಧಮೌಂಜೀಮೇಖಳಾರಂಜಿತನುಂ ಪರ್ಣಪುಟೋಪನೀತಪ್ರತ್ಯುಟಜಭಿಕ್ಷನುಮೆನಿಸಿದ ತತ್ಪುತ್ರನಪ್ಪಿಧ್ಮವಾಹನಿಂ ಪವಿತ್ರೀಕೃತಮಾಗಿರ್ದುದಂತುಮಲ್ಲದೆಯುಂ ॥ ೧೦೫

ಕ ॥ ಪರಿಪೀತಮಾಯ್ತು ರತ್ನಾ । ಕರನೀಕಳಶಜನಿ *[ನೆಂದವನಬಳಿಸಂದಂ] ॥ ತಿರೆ ಬದ್ಧವೇಣಿಗೋದಾ । ವರಿ ಬಂದವತರಿಸಿದುದು ತದಾಶ್ರಮಪದಮಂ ॥ ೧೦೬

ವೃ ॥ ಗುರುವಿನ ನನ್ನಿಗುರ್ವರೆಯನಿತ್ತನುಜಾತನುಮಾತ್ಮಕಾಂತೆಯುಂ । ಬೆರಸು ತದಾಶ್ರಮಪ್ರಥಿತಪಂಚವಟೀಸ್ಥಳದೊಳ್ಮಹಾಮುನೀ ॥ ಶ್ವರನೆನಿಸಿರ್ದಗಸ್ತ್ಯನಿರಿಸಲ್ಪಲವುಂದಿನಮಿರ್ದನಂದು ಕಂ । †[ಧರಕುಲಖಂಡನಾಹಿತ] ದಶಾನನಲಾಘವನಪ್ಪ ರಾಘವಂ ॥ ೧೦೭

ಕಂ ॥ ಚೆಲುವೆನಿಸಿರ್ದೀಕುಸುಮಾ । ವಳಿಯಂ ಕೊಯ್ದವನಿಸುತೆಯ ಕರತಳರಾಗಂ । ಬಳಸಿದುದೆಂಬಿನಮೆಸೆದುವು । ಲಲಿತಲತಾಲುಳಿತಪಲ್ಲವಪ್ರಕರಂಗಳ್ ॥ ಮತ್ತಂ — ೧೦೮

ಘನತರುಶಾಖಾಗ್ರಮಾ । ಗ್ರನಿಭೃತ ಪಾಂಡುರ ಕಪೋತಪಜ್ತ್ತಿಪ್ರಕರಂ । ನೆನೆಯಿಸುವುದು ಶೂನ್ಯಮಾಗಿಯು । ಮನೇಕಮುನಿಪಾಗ್ನಿಹೋತ್ರಧೂಮಮನಿನ್ನುಂ । ಮತ್ತಮಲ್ಲಿ— ೧೦೯

---

೧೦೬. ಅವನ — ರತ್ನಾಕರವನ್ನು; ಬಳಿಸಂದಂತಿರೆ — ಅನುಸರಿಸಿದಳೋ ಎಂಬಂತೆ; ಬದ್ಧವೇಣಿ — ಕಟ್ಟಲ್ಪಟ್ಟ ಜಡೆಯುಳ್ಳ. ಮುಂದಮಾದಪ್ರವಾಹವುಳ್ಳ; ಅಗಸ್ತ್ಯನಿಂದ ಪಾನ ಮಾಡಲ್ಪಟ್ಟಿರುವ ಸಮುದ್ರನ ಮಾರ್ಗವನ್ನು ಅನುಸರಿಸುವದಕ್ಕಾಗಿ, ಗೋದಾವರಿಯು ನಿಯಮದಿಂದ ಬದ್ಧವೇಣಿಯಾಗಿದ್ದಾಳೆಂದು ತಾತ್ಪರ್ಯ.

೧೦೭. ನನ್ನಿಗೆ — ಸತ್ಯಕ್ಕೆ; ಅಂದರೆ ಆತನ ಮಾತನ್ನು ಉಳಿಸುವದಕ್ಕಾಗಿ; ಇರಿಸಲ್ — ನಿಲ್ಲಿಸಲು; ಖಂಡನ — ಕತ್ತರಿಸುವಿಕೆಯಿಂದ; ಆಹಿತ — ಉಂಟುಮಾಡಲ್ಪಟ್ಟ; ದಶಾನನ — ರಾವಣನಿಗೆ; ಲಾಘವಂ — ಹಗುರತ್ವ.

೧೦೮. ಕೊಯ್ದ — ಅವನಿಸುತೆಯ; ಲುಳಿತ — ಚಲಿಸುವ.

೧೦೯. ಶಾಖಾಗ್ರದ — ಕೊಂಬೆಗಳ ತುದಿ; ಶೂನ್ಯಮಾಗಿಯುಂ — ಹೊಗೆ ಇಲ್ಲದಿದ್ದರೂ.

*[ನಂದನಬಳಿಸಂದಪ್ಪೊಲಂ] †[ಕಂಪರತಾಳಕಂಡಳಾಹಿತ]

ಕಂ ॥ ಕಿಡೆಕೆಱೆಲ್ವರಾಮಬಾಣದೆ । ಕೆಡೆವ ಪಿಶಾಚರರ ನೆತ್ತರೊಳ್ಬೆಳೆ ದುವೆನ ॥ ಲ್ಕಡುಗೆಂಪುವೊರೆದ ತಳಿರ್ಗಳಿ । ನೆಡೆವಿಡದಿತಿವಡವಿ ಸುತ್ತಿ ಸೊಗ ಯಿಸಿ ತೋಱ್ಕುಂ ॥ ೧೧೦

ವೃ ॥ ಜನಕಜೆ ಕೂರ್ಮೆಯಿಂ ನಡಪಿದಂದಿನ ಜೀರ್ಣಚರನ್ಮೃಗಾಳಿ ಭೋಂ । ಕನೆ ಮಳೆಗಾಲದೊಳ್ಮೊಳಗುಗೇಳ್ದು ಜಗದ್ವಿವರಾಂತಮಪ್ಪ ರಾ ॥ ಮನ ಘನಚಾಪದಂಡರವಮಂ ನೆನೆದೆತ್ತಲುಮಿಕ್ಷಿಸುತ್ತೆ ಕಂ । ಜಸಿಗಳ ನಿಕ್ಕಿ ಮೇಪುಗೊಳಲೊಲ್ಲವು ರೂಥಿಯ ಶಾದ್ವಲಂಗಳೊಳ್ ॥ ೧೧೧

ಕಂ ॥ ಮೃಗಯಾನಿತಾಂತರತಿಯಿಂ । ಮಿಗೆ ನೊಂದಪ್ಪುದವೊ ನಿಖಿಳ ವನಮೃಗಮೆನೆ ಪೊಂ ॥ ಮಿಗಮಿರದೊಯ್ಯುದು ಸೀತೆಯು । ನಗಲ್ಚಿ ನಿಲಲೀಯ ದಲ್ಲಿ ದಶರಥಸುತನಂ ॥ ೧೧೨

ವೃ ॥ ಪೊಲ್ಲದುಗೆಯ್ದನೆಂದು ನಹುಷಾಜಗರಂ ಪಿರಿದಪ್ಪದೈನ್ಯದಿಂ । ಬಲ್ಲಿದನಪ್ಪಗಸ್ತ್ಯಮುನಿಯೊಳ್ದಯೆಯಂ ಪಡೆಯಲ್ಕೆ ಬಂದಪೋ ॥ ಲಲ್ಲಿಯೆ ರಾಘವಂ ತಱಿದ ಯೋಜನಬಾಹುವ ಬಿಳ್ದ ತೋ *[ಳದೊಂ] । ದೆಲ್ಲರ ಚಿತ್ತದೊಳ್ಪಿರಿದುಮೊಂದಭಿಶಂಕೆಯ ನುಂಟುಮಾಡುಗುಂ ॥ ೧೧೩

ವಿರಹದೆ ರಾಮ ಬಾಣದುಟ ಜಾಂಗಣರಮ್ಯಶಿಲಾತಲಂಗಳೊಳ್ಬ । ರೆಯೆ ವಿಚಿತ್ರಮಾಗೆಸೆವ ಸೀತೆಯಚಿತ್ರಮನಿಂನು ಮಲ್ಲಿತ ಸ್ಮರಸನ ನಿಂದತಾಣಮನೆ ನೋಡಲಿದಂ ಪೊಱಮಟ್ಟಿಳಾಗಳು । ರ್ವರೆಯ ನಿಳಾತನೂಜೆ ಯೆನುತಂತದ ನೀಕ್ಷಿಸುವರ್ವನೇಚರರ್ ೧೧೪

---

೧೧೧. ಜೀರ್ಣ—ಮುಪ್ಪಾದ; ಜಗದ್ವಿವರ—ಬ್ರಹ್ಮಾಂಡವಿವರನೆ; ಅಂತಮಪ್ಪ—ಅವಧಿಯಾಗುಳ್ಳ ; ಮೇಪು—ಆಹಾರ ; ರೂಥಿಯ—ಭೂಮಿಯ.

೧೧೨. ಮೃಗಂ—ಮೃಗಗಳು. ಶಮ. ಸೂ॥ ೧೪೩ ಜಾತಿವಾಚಕವಾದಮೃಗ ಶಬ್ದದಮೇಲೆ ಬಹುವಚನಕ್ಕೆ ಏಕವಚನವು. ಪೊಮ್ಮಿಗಂ—ಚಿನ್ನದಮುಲ್ಲೆ

೧೧೪. ವಿರಹದೆ—ಸೀತಾವಿಯೋಗಕಾಲದಲ್ಲಿ ; ರಾಮ—ರಾಮನು ; ಬಾಣದೆ—ಅಂಬಿನಿಂದ ; ಉರ್ವರೆಯಂ—ಭೂಮಿಯಿಂದ : ಶಶ. ೨೪೧ ವ್ಯತ್ಯಯೋಬಹುಳಂ ಎಂಬ ಸೂತ್ರದಿಂದ ತೃತೀಯಾರ್ಥದಲ್ಲಿ ದ್ವಿತೀಯಾವಿಭಕ್ತಿ ಬಂದಿದೆ.

* [ಳ್ಗಳಿಂ]

ವ ॥ ಅಂತೀಗಳ್ ಅಂಪ್ರಕಟೋಪಲಕ್ಷ್ಯಮಾಣಪ್ರಮಾಣಪೂರ್ವಮ
ಪ್ಪಗಸ್ತ್ಯಾಶ್ರಮಕ್ಕನತಿದೂರಮೆನಿಸಿ ॥ ೧೧೫

ವೃ ॥ ಕಡಲಂ ಪೀರ್ದ್ದನಗಸ್ತ್ಯನೆಂಬಪ್ರುರುಡಿಂ ಮತ್ತೊಂದನಬ್ಜೋ
ದ್ಭವಂ । ಪಡೆನಂ ಪೆರ್ಗ್ಗಡಲಂ ಮಹಾಪ್ರಳಯದೊಳ್ದಿಕ್ಸಂಧಿಗಳ್ಬಂಧಮಂ ॥
ಬಿಡೆ ಬಿಳ್ದತ್ತಿಳೆಗಾಗಸಂ ಧರಣಿಯುಂ ಪೆರ್ಬ್ಬಂದಿಕಿಳ್ತತ್ತಿದೊಂ । ದೆಡೆ
ನೀರ್ತೀವಿತೆನಲ್ಕೆ ಪೊಪ್ರುವಡೆಗುಂ ಗುಣ್ಪಿಂದೆಪಂಪಾಸರಂ ॥ ೧೧೬

ವ । ಮತ್ತಮಲ್ಲಿಬಂದೋಲಾಡುವ ಪ್ರುಳಿಂದಸುಂದರಿಯರ ಪೆರ್ಮೊಲೆಯು ಪ್ರೊಕ್ಕರ್ಳಿಯೊ [ಕ್ಸರಿವರಿಯದಾವ ಜಲದೊಳಂ] ಉಳ್ಳಲರ್ದಕುವಮು ದಕುವಲಯಕಲ್ಹಾರಕುಸುಮಂಗಳೊಳಂ ಅಲರ್ದತಾವರೆಯ ತನಿವಂಡಿನ ಪನಿಗಳಿಂ ಪೆಸರಿಸುವ ಪೀಲಿಗಣ್ಗಳೊಳಂ ಕಾರ್ಗತ್ತಲೆಮಸಗೆ ಮುಸುರುವ ಮಱಿದುಂಬಿಯ ಬಂಬಲೊಳಂ ಎಕ್ಕೆಕ್ಕೆಯಿನುಲಿವಜಕ್ಕವಕ್ಕಿಗಳಕಳಕಳಂಗಳೊಳಂ ತಾವರೆವಂಡಿನ ತನಿಸೊಕ್ಕಿಂ ಸೊಕ್ಕಿದಪೆಣ್ಣಂಚೆಗಳಿಂಚರಂಗಳೊಳಂ ಜಲಚರಂಗಳ ಪೊಳಪಿನೆಸಕದಿಂ ಮಸಗಿ ಮೊರೆವತೆರೆದುಱುಗಲೊಳಂ ಎಲರಲಿಪದಿ *[ನೊಗೆವತೆರೆಗೊನೆಯ] ತೂಪ್ಪರ್ನಿಯ ತುಂತುಱುಗಳಿಂ ಮುಸಗುವ ಮಂಜಿನೊಳಂ ಅಂಜದೆಪೊಕ್ಕು ನಡುನೀರೊಳಾಡುವ ವನದೇವಿಯರ ಸೋಮ್ಮುರ್ಡಿಯಿಂ ಪರೆದರಲಬೆರಕೆಗಂಪಿನ ಪೊಂಪುಳಿಯೊಳಂ ಬಂದೊಂದೆಡೆಯೊಳ್ತಾಪಸತ್ತೀರ್ವಪ್ರುವಕಮಂಡಲುಗಳನುಣ್ಮುವ ಕಳಕಳಧ್ವ

೧೧೫. ಪ್ರಮಾಣಪೂರ್ವಮಪ್ಪ—ಪೂರ್ವವೃತ್ತಾಂತಜ್ಞಾನಸಾಧನವಪ್ಪ.

೧೧೬. ಪೀರ್ದ್ದಂ—ಪಾನಮಾಡಿದನು; ಪ್ರುರುಡಿಂ—ಸ್ಪರ್ಧೆಯಿಂದ ; ಪೆರ್ಬ್ಬಂದಿ—ಮಹಾಪರಾಕ; ಗುಣ್ಪಿಂದೆ—ಆಳದಿಂದ ; ಪೆಂಪ್ರುವಡೆಗುಂ—ವಿಸ್ತಾರವನ್ನು ಹೊಂದಿತ್ತು.

೧೧೭. ಪ್ರೊಕ್ಕುರ್ಳಿಯೊಳ್ —ತಾಡನೆಯಿಂದ ; ಪರಿವರಿಯಾದ—ಕಲಕಲ್ಪಟ್ಟ ; ಉಳ್ಳಲರ್ದ—ಅರ್ಧವಿಕಸಿತವಾದ ; ತನಿವಂಡಿನ—ಪಕ್ವವಾದಮಕರಂದದ ; ಪೀಲಿಗಣ್ಗಳೊಳಂ—ನವಿಲುಗರಿಕಣ್ಣುಗಳಾಕಾರದಂತಿರುವ ರೇಖೆಗಳಿಂದಲೂ ; ಎಕ್ಕೆಕ್ಕೆಯಿಂ—ಗುಂಪುಗುಂಪಾಗಿ ; ಸೊಕ್ಕಿಂ—ಮದ್ಯದಿಂದ ; ಜಲಚರಂಗಳ—ಮೀನುಗಳ, ಪೊಳಪಿನ, ಥಳಥಳ್ಯದ ; ಎಸಕದಿಂ—ವ್ಯಾಪ್ತಿಯಿಂದ ; ಮಸಗಿ—ಹೆಚ್ಚಿ ; ಅಲೆಪದಿಂ—ಹೊಡೆತದಿಂದ ; ತೂಪ್ಪರ್ನಿಯ—ಹಾಂದಹನಿಗಳ , ಪರೆದ—ವ್ಯಾಪ್ತವಾದ ; ಬೆರಕೆಗಂಪು

*[ನೊಗೆವಂತೆ ಮೋಗೊನೆಯ]

ನಿಗಳೊಳ್ ಮೋರನ್ನ ಮಾಗಿನೆಯ್ದಿಲ್ಪನದೊಳ್ದನಿಗೈದಾಡುವ್ರದರ್ಙಿಂ *[ದಱಿಯಲ್ಪರ್ಪಂಚೆವಿಂಡುಗಳೊಳಮಭಿಷೇಕಕ್ಕೆ ಬಂದಿಳಿದ ಪುಳಿಂದ ರಾಜಸುಂದರಿಯರ ನೆಲೆವೊಲೆಯ ಸಿರಿಕಂಡವಣ್ಸಿನಿಂ ಪೊರೆಮ ಬೆಳರ್ಪನಾಂತತೆರೆಗಳೊಳ ಮುಪಾಂತದೊಳ್ಪರ್ವಿದ ಪೊಂಗೇದಗೆಯ ರಜದಿಂಪುಳಿಲ್ಗಟ್ಟಿದ ಪೇರ್ವಡಂಗಳೊಳಂ] ಮುನಿಜನಂಗಳೊಗೆದಾರಲಿಕ್ಕಿದ ತಳಿಗ್ರಾಸೆಗಳ †[ಸೋರ್ದ್ದಬಣ್ಣದಿಂ ಬೆಳಗೆಂಪಿಡಿದು ತಡಿಯೊಳ್ಬೆಳೆದ ಮರಂಗಳಚೆಗುರ್ಗಳಿಂದೊಗೆದಲರಿಂ ತಣ್ಸುವೆತ್ತಿರ್ಪ ತೀರ ಜಲಂಗಳೊಳ್ ಮೆಡೆಪಿಡಿದಿವ ತಮಾಲವೀಥಿಯೊಳೊಗೆದ ಕತ್ತಲೆಯಿಂ] ಋಷ್ಯಮೂಕ ನಿವಾಸಿಯಪ್ಪ ಸುಗ್ರೀವನಿಂದವಲುಪ್ತಫಲವಾದ ಲತಾವಿತಾನದಿಂ ಮುನಿಜನದೇವತಾರ್ಚನೋಪಯುಕ್ತವಾದ ಕುಸುಮವಿಸರದಿಂ ಸೀರ್ವಕ್ಕಿಗಳ ಶಂಕೆಯಿಂದುಬಿರ್ದ ಪನಿಗಳಂ ನಾಂದುನುಣ್ಪುವೆತ್ತ ಲತಾಕಿಸಲಯಂಗಳಂ ಲತಾಮಂಟಪಂಗಳೊಳ್ತಾಂಡವಮನೊಡರ್ಚುವ ಶಿಖಂಡಿಮಂಡಲಂಗಳಂ ವನದೇವತಾನಿಶ್ವಾಸವಾಸಿತಂಗಳೆನಿಪ ಕುಸುಮಪರಿಮಳಂಗಳಂ ಮನಂಗೊಳಿಸುವ ವನರಾಜಿಗಳೊಳಂ ರಂಜಿಸುವುದಂತುಮಲ್ಲದೆಯುಂ ‖ ೧೧೭

ಕಂ ‖ ಮತ್ತಲ್ಲಿ ಮಹಾಂಬೋಧಿಯೊ । ಗೆತ್ತು ಮುಗಿಲ್ಬಱಗಿ ನೀರ
ಮೊಗೆವವೊಲಂದೇಂ ‖ ಕತ್ತಲಿಸಿ ಬಂದು ನೀರಾ । ಪತ್ತಿದ್ದಪುವು ಸುತ್ತುಮ
ಲ್ಲಿ ವನಕರಿನಿವಹಂ ‖ ೧೧೮

—ಮಿಶ್ರಗಂಧ ; ಪೊಂಪುಳಿಯೊಳಂ—ಆಧಿಕ್ಯದಿಂದ ; ತೀವುವ—ನೀರನ್ನು ತುಂಬುವ ; ಓರನ್ನವಾಗಿ—ಒಂದೇಬಣ್ಣವಾಗಿ ; ಅಱಿಯಲ್ಪರ್ಪ—ಹಂಸಪಕ್ಷಿಗಳೆಂದು ತಿಳಿಯುವದಕ್ಕಾಗುವ ; ಸಿರಿಕಂಡವಣ್ಪಿನಿಂ—ಶ್ರೀಗಂಧಾನುಲೇಪನದಿಂದ ; ಪುಳಿಲ್ಗಟ್ಟಿದ—ಕಟ್ಟಲ್ಪಟ್ಟ ಮಳಲಗುಡ್ಡೆಯುಳ್ಳದ್ದಾಗಿರುವ ; ತಳಿಗ್ರಾಸೆಗಳ—ಕಾವೀಬಟ್ಟೆಗಳ ; ಅವಲುಪ್ತಫಲವಾದ—ಬರಿದುಮಾಡಲ್ಪಟ್ಟ ಹಣ್ಣುಗಳುಳ್ಳ ; ನಾಂದು—ತೊಯ್ದು ಹೋಗಿ.

*[ದಱಿಯಲ್ಬರದೆ ನಿಪ್ಪಂಚಿರಮಲ್ಲದಂಚೆವಿಂಡುಗಳೊಳಮಭಿಷೇಕಕ್ಕೆ ಪುಳಿಂದ ರಾಜಸುಂದರಿಯರನೆಲೆವೊಲೆಯ ಸಿರಿಕಂಡವಣ್ಪಿನಿಂ ಪೊರೆದೂಱುವಿಡಿದು ಪರ್ವಿದ ಪೊಂಗೇದಗೆಯ ರಜಂದಿಪುಳಿಲ್ಗಟ್ಟಿದ ಪೇರ್ದರೆಗಳೊಳಂ]

†[ಬೆಳಗೆಂಪಿನೊಳಂ ಪೊರೆದುಮೆ ನಿಪಕೆಂದಳಿರ್ಗಳಲೆಪ ದಿಂದೊಗೆವ ತಣ್ಣೆಲರ ತಣ್ಪಿನೊಳಂ ತಮಾಲವೀಥಿಯ ಮಬ್ಬುಗತ್ತಲೆಯೊಳಂ]

ವ ॥ ಅಂತಗಾಧಮುಮತರ್ಕ್ಯಮುಮನಂತಮುಮೆನಿಸಿದ ಪಂಪಾಸ
ಸರೋವರದಪಡುವಣತಡಿಯೊಳ್ದಶರಥಸುತನ ಶರಪ್ರಹಾರಜರ್ಝರಿತಮ
ಪ್ಪತಾಳತರುಷಂಡಸಮೀಪದೊಳ್ ॥ ೧೧೯

ಪೃ ॥ ಮರಗಟ್ಟೆಂಬಂತೆ ಸುತ್ತುಂಪೊದಲೊಳಜಗರಂ ಸುತ್ತಿ ದಿಕ್ಚ
ಕ್ರವಾಳಾಂ । ತರಮಂ ನೋಡಲ್ಕೆನೀಳ್ದಂತಿರೆ ಬೆಳೆದಮಹಾಶಾಖೆಗಳ್ ತಾಂಡ
ವಾಡಂ ॥ ಬರದೊಳ್ನಾನಾವಿಧಂನರ್ತಿಪ ನಟನಭುಜಾದಂಡವೋ ಪೇಳ
ಮೆಂಬಂ । *[ತಿರವೋಯು] ಸ್ಕಂಧಮುಂಸಂಧಿಸೆ ಜರಠಮಹಾಶಾಲ್ಮಲೀವೃಕ್ಷ
ಮಿಕ್ಕುರ್ಗಂ ॥ ೧೨೦

ಭಯದೊದವಿಂದೆ ಮಾಣದೆ ನಭಸ್ಥಲದೊಳ್ಪರಿಯುತ್ತಮಿಪ್ಪರ್ಕತ ।
ನ್ನಯ ಪರಿಖೇದದಿಂದೆ ಕಡುಸೇದೆಯನಾಂತಪತಂಗ †[ನೂಢವಾ] ॥ ಜಿಯ
ಕಪೆವಾಯ್ಗಳಿಂದುಗುವಫೇನವಿತಾನದೊಳಾದ ‡[ಪೊಂದಿ] ಸಂ । ಶಯಮ
ನೆಮೊಳ್ಪಸಾಮುರವ ತೂಱಲಗೊಂಬಿನತೂಲರಾಶಿಗಳ್ ॥ ೧೨೧

ಪಿರಿದುಂ ತೀಂಟೆತ್ತಿ ಗಂಡಸ್ಥಳಮನನುದಿನಂ ಕಾಡಸೊಕ್ಕಾನೆಗ
ಳ್ಬಂ । ದೊರಸಲ್ಪುತ್ತಿಂ §[ಜಗಿಲ್ತ] ಗ್ಗಲಿಸಿದ ಮದದಿಂ ಕಗ್ಗತದ್ಗಂಧಮಂ
ಕ ॥ ಪ್ಪುರಿಗೊಂಡೋರಂತೆ ಸುತ್ತಿರ್ದ್ದಳಿಕುಳದೆಸಸುಂ ಶೃಂಖಲಾಬದ್ಧಮೆಂ
ಬಂ । ತಿರೆಕಲ್ಪಸ್ಥಾಯಿ ಯಾಗಿದ್ದುದು ಗಿರಿಕಟಕಸ್ಥೂಲಮಾ ವೃಕ್ಷ
ಮೂಲಂ ॥ ೧೨೨

---

೧೨೦. ಮರಗಟ್ಟು—ಪಾತೆ ; ಪೊದಲೊಳ್—ಬುಡದಲ್ಲಿ ; ನೀಳ್ದಂತಿರೆ—ಬೆಳದಾಗಿ ; ನಟನ—ಈಶ್ವರನ ; ಅಮೋಘ—ಅಳತೆಮಾಡುವದಕ್ಕಾಗದ.

೧೨೧ ಭಯದ—ಅರುಣ ಕಶಾಪ್ರಹಾರದ ಭೀತಿಯು ; ಕಡುಸೇದೆಯುಂ—ಬಹು ಶ್ರಮವನ್ನು ; ಊಢ—ರಥಕ್ಕೆ ಕಟ್ಟಿದ ; ಉಗುವ—ಸುರಿಯುವ ; ಅದಂ—ಅತ್ಯಂತವಾಗಿ ; ತೂದಲಗೊಂಬಿನ—ಸಣ್ಣ ಕೊನೆಗಳಲ್ಲಿರುವ ; ತೂಲರಾಶಿಗಳ್—ಹತ್ತಿಯ ಸಮೂಹವು.

೧೨೨. ತೀಂಟೆತ್ತಿ—ನವೆಯುಂಟಾಗಿ ; ಸೊಕ್ಕಾನೆಗಳ್—ಮದಗಜಗಳು ; ಜಗಿಲ್ತು—ಅಂಟಿಕೊಂಡು ; ಅಗ್ಗಲಿಸಿದ—ಹೆಚ್ಚಿದ ; ಕಗ್ಗ—ಕಪ್ಪಾಗಿ ; ಕಪ್ಪುರಿಗೊಂಡು—ಬಹಳ ಸಡಗರವನ್ನು ಹೊಂದಿ.

*[ತಿರಿನಾಣು] †[ನೊಣುಮಾಡಿಮ] ‡[ಪೊಂದಿ] §[ಜಿಗುಲ್ತು]

ವ ॥ ಮತ್ತಮದು ದುರ್ಯೋಧನನಂತುಪಲಕ್ಷಿತಶಕುನಿಪಕ್ಷಪಾತಮುಂ ಪದ್ಮನಾಭನಂತೆ ವನಮಾಲೋಪಗೂಢಮುಂ ಜಳದವ್ಯೂಹದಂತೆ ನಭೋವಿಭಾಗಪ್ರಭೂತೋನ್ನತಿಯುಮೆನಿಸುವುದಂತುಮಲ್ಲದೆಯುಂ ॥ ೧೦೩

ಕಂ ॥ ಭುವನತ್ರಯಮುಮನತ್ಯು । ತ್ಸವದಿಂದಂ ನೋಡಲಿದುವೆ ದ ಲ್ಪನದೇವೀ ॥ ನಿವಹಕ್ಕೆ ಮಹಾಪ್ರಾಸಾ । ದವೆನಿಸಿ ತೋಱುವುದು ತನ್ನೊಳಾದುನ್ನತಿಯಿಂ ॥ ೧೦೪

ವ ॥ ಮತ್ತಮದು ವಿಂಧ್ಯಾಚಳ ಸೋದರಮುಂ ದಂಡಕಾರಣ್ಯಾದಧಿಪತಿಯುಂ ವನ ಸ್ಪತಿಗಳ ನಾಯಕನುಮೆನಿಸಿತದಱೊ ॥ ೧೦೫

ವೃ॥ ತಳಿರ್ಗಳಿಱುಂಬಿನಲ್ಲಿ ತುದಿಗೊಂಡಮೊನಲ್ಗಳತಾಣದಲ್ಲಿ ನಾ । ಗ್ಗಳಪೊರೆಯಲ್ಲಿ *[ಪ್ರೋಳ್ಗಳೆಡೆ] ಯಲ್ಲಿ ಕವಲ್ಗಳ ನೆಯಲ್ಲಿ ಸುತ್ತಲುಂ ॥ ಗಿಳಿಗಳಹಿಂಡುಗಳ್ನೆರೆದು ಕೂಡಿಯಿರ್ಪಲ್ಲಿಸಹಸ್ರಮುಂ ನಿರಾ । ಕುಳಮನುರಾಗದಿಂಪಲವುವೇಶದೊಳಿರ್ಪುವು ಬಂದುಭೂಪತೀ ॥ ೧೦೬

ಪರಿವೃತಪಲ್ಲವಾಂತರದೊಳುನ್ನತವಲ್ಕಲಮಧ್ಯದೊಳ್ನಿರಂ । ತರವಿಟಪಾಗ್ರದೊಳ್ವಿಪುಳಕೋಟರಸಂಕುಳದೊಳ್ವಿಶಾಲಕಂ ॥ ಧರಗತಸಂಧಿಯೊಳ್ನಿಚಿತ ನೀಡನಿಕಾಯಮನೆಯ್ದೆ ಸುತ್ತಲುಂ ವಿರಚಿಸಿ ನಿರ್ಭಯಂಪಲವುಮಿರ್ಪುವು ಕೀರಕುಳಂ ನಿರಾಕುಳಂ ॥ ೧೦೭

---

೧೦೩. ಶಕುನಿ—ಶಕುನಿವಿಷಯಕನಾದ ; ಪಕ್ಷಪಾತಂ—ಪ್ರೀತಿಯುಳ್ಳವನು ; ಶಕುನಿ—ಪಕ್ಷಿಗಳ ; ಪಕ್ಷ—ರೆಕ್ಕೆಗಳ : ಪಾತಂ—ಬಡಿಯುವಿಕೆಯುಳ್ಳದ್ದು ; ವನಮಾಲೆ—ವೈಜಯಂತೀ ಮಾಲಿಕೆ, ವನಪಙ್ತ್ತಿ ; ನಭೋವಿಭಾಗ—ಶ್ರಾವಣ ಮಾಸ, ಆಕಾಶಪ್ರದೇಶ.

೧೦೬. ಇಱುಂಬು—ನಡುವೆ ; ಪೊರೆಯಲ್ಲಿ--ಪದರುಗಳಲ್ಲಿ ; ಪ್ರೋಳ್ಗಳ—ಪೊಟ್ಟರೆಗಳ ; ಪಲವು ವೇಶದೊಳ್—ವೇಷದಿಂದ. ನೃಪತೀ—ಇಲ್ಲಿ ಶ. ಮ. ೧೨೩ನೇ ಸೂತ್ರಪ್ರಕಾರ ನೃಪತಿ ಶಬ್ದದಮೇಲ ಸಂಬೋಧನಾರ್ಥದಲ್ಲಿ ದೀರ್ಘ ಬಂದಿದೆ:

*[ಪೊಳಲೆಡೆ]

ಕಂ ॥ ಎಲಸಂ ಮಡಲ್ತುದೆನೆ ಯೆಲೆ । ಕೆಲಕೆಲನಾಗಿರ್ದ್ದ ಮೆಲೆಯ ಪ್ರಮವಿಂದವಿಕ ॥ ತ್ತಲಿಸಿದವ್ರೋಲಿರ್ಪ್ಪವಂದ । ಗ್ಗಲಸಿದ ಗಿಳಿವಿಂಡುಗಳ ಪೊದಳ್ದಪಸುಪ್ಪಿಂ ॥ ೧೨೮

ವ॥ ಮತ್ತಮಾವನಸ್ಪತಿಯೊಳ್.

ವೃ ॥ *[ಎಲೆಕಾಳಂದೀಪ್ರಪಾಪಶೋತ್ಕರವೊ ಸುರಗಜಶೋನ್ಮೀಲಿತಾಕಾಶಗಂಗಾ । ನಲಿನೀ ಸಂತಾನವೋ ಮೇಣ್ಪರಿಕಿಸೆ ದಿನಕೃದ್ವಾಜಿರಾಜಿ ಪ್ರಭಾವಮಂ । ದಲವೋ ಸಂಚಾರಿಗಾರುತ್ಮತರುಚಿರಧರಾಭಾಗವೋ ಶಕ್ರಚಾಪಾ । ವಲಿಯೋ ಪೇಳೆಂಬಿನಂ ಪೋಪುವು ಕುಟುಕುಗೊಳಲ್ಕಿಚ್ಚೆ ಮಾಂ ಮು ಕೀರಜಾಳಂ] ॥ ೧೨೯

ಕಂ ॥ ಬಿಸಿಲೆಸಕದಿಂದೆ ಕೊರಗಿದ । ದೆಸೆವೆಣ್ಗಳ ಬಿಸುಪನಾಱಿಪಂತಿರೆ ಗಿಳಿಗ ॥ ಳ್ಪಸುರೆಱಕೆಯೆಂಬ ಚಾಳೆಯ । ಪೊಸಬಿಜ್ಜಣಿಗೆಗಳ ನೆಸಗಿಪ್ಪುವುತಣ್ಣೆಲರಂ ॥ ೧೩೦

ಕಂ ॥ ಶುಕಶಕುನಿಗಳ್ಕೃತಾಹಾ । †[ರಕಂಗಳತಿ] ಪಕ್ಷಪಾತದಿಂದಂ ನಿಜಶಾ ॥ ಬಕತತಿಯುನೆಯ್ದಿ ಚಂಚು । ಪ್ರಕರದೆ ನೀಡುವುವು ಕುಟುಕನುತ್ಕಂಠಂಗಳ್ ॥ ೧೩೧

---

೧೨೮. ಎಲಸಂ—ಬೂರುಗ ; ಪ್ರಮವಿಂದ—ಸಮೂಹದಿಂದ ; ಮಡಲ್ತುದು—ಚಿಗುರಿತು.

೧೨೯ ಎಲೆ—ಅಶ್ವತ್ಥ ; ದಿನಕೃತ್—ಸೂರ್ಯನ ; ಕುಟುಕುಗೊಳಲ್—ಮೇವನ್ನು ಸಂಪಾದಿಸುವದಕ್ಕಾಗಿ.

೧೩೦ ಎಸಕ—ಹೀಗೆ ; ಬಿಸುಪಂ—ತಾಪವನ್ನು ; ಪಸುರೆಱಕೆ—ಹಸರುರಕ್ಕೆ ; ಬಿಜ್ಜಣಿಗೆ—ಬೀಸಣಿಗೆ ; ಎಸಗಿಪ್ಪುವು—ಉಂಟುಮಾಡುವವು.

೧೩೧ ಪಕ್ಷಪಾತದಿಂದಂ—ಪ್ರೇಮದಿಂದ ; ಉತ್ಕಂಠಂಗಳ್—ಎತ್ತಲ್ಪಟ್ಟಕಂಠಗಳುಳ್ಳವು.

* [ಎಲೆಕಾಳಂದೀಪ್ರಪಾ ಹಪ್ರಸನಸೋಗಗನಾಂಭೋಜಿನೀರಾಜಹಂಸಾ । ವಲಿಯೋತ್ಸೈನಾಲಿಮೇಣ್ಪ್ರಕರಮೊದಿನಕೃದ್ವಾಜಿರಾಜಿಪ್ರಭಾವನ್ಮ ॥ ಡಲಮೋಸಂಚಾರಿಕಾರತ್ನಕರುಚಿರತಾನಭೋಗವೊ ಚಕ್ರಚಾಪಾ । ವ ಯೋಹಪ್ಲಿತ್ತೇನಲ್ಪೋಪುವುಕುಟುಕುಗೊಳಲ್ಕಿಚ್ಛೆಯಿಂಕೀರಜಾಳಂ.]

†[ರಸಕಗಳತೆ]

ಅಂತಾಪಶುಕಸಂತತಿ ಸಿ । ಕ್ಕಿಂತದಿನಿರ್ದ್ದಲ್ಲಿ ಜೀರ್ಣಕೋಟರವಿರಳಾ ॥ ಭ್ಯಂತರದೊಳಿರ್ದ್ದದೊಂದು ಶು । ಕಂ ತನ್ನಯ ಜಾಯೆವೆರಸು ಪರಿಣತ ವಯಸಂ ॥ ೧೩೦

ಆವೃದ್ಧಶುಕಂಗೋರ್ವ್ವನೆ । ದೈವಾಧೀನದೊಳೆ ಪುಟ್ಟಿದೆಂ ಪಾಪಿಯೆ ನಿ ॥ ಸ್ನೇವೇಳ್ದಪೆಂ ಪ್ರಸೂತ್ಯು । ದ್ಭವದಿ ನೆಮ್ಮವ್ವೆ ಕಳಿದ ಳಂತಾಕ್ಷ ಣದೊಳ್ ॥ ೧೩೩

ವ ॥ ಅಂತ ಕಳಿಯೆ ಜಾಯಾವಿಯೋಗದಿಂ ದುಃಖಿತನಾಗಿಯು ಮೆ ನ್ನತಂದೆ *[ಪುತ್ರಸ್ನೇಹದಿಂದಳವಿಗಳಿದ] ಹೃದಯ ಶೋಕಮ ನಡಂಗಿಸಿ ದ್ರ್ದ ಮತ್ಪ್ರಾಣನ ಪ್ರಯತ್ನತತ್ಪರನಾಗಿ ॥ ೧೩೪

ಕಂ ॥ ಕಳಲಲ್ಕಿಜತನು ಪ್ರೊಂದೆರ । ಡುಳಿಯಲ್ಗಱಿವೀಳ್ದು ಕುಳಿ ಯಲಾ ಕರ್ಣಂ ಜೋ " ಲ್ದಿಳಿಯಲ್ಮುಯ್ಪುಗಳಾವಗ । ವಳಿಯಲ್ಕಲವಾಱ ದಂತು ಮುಪ್ಪಿಂಪೊಱಲ್ ॥ ೧೩೫

ವ ॥ ಅಂತು ಮುಪ್ಪಿಂ ಪಾಱಲಾಱದೆ.

ವೃ ॥ ಪಕ್ಕಿಗಳಲ್ಲಿ ತಿಂದುಳಿದ ನೆಲ್ಗಳ ನುಚ್ಚುಗಳಂ ಫಲಂಗಳಂ । ಪಕ್ಕದೊಳಿರ್ದ್ದ ಗೂಡುಗಳ ನಾಯ್ದೆನಗಿಕ್ಕುವ ನಕ್ಕಱಿಂದೆ ತಾಂ ॥ ಮಿಕ್ಕನ †[ನುಂಡಪಂ ಕಡಿಮನೆಲ್ಗಳ ನಂಟವ] ತಾಳವಣ್ಣ ಬ । ಣ್ಣಕ್ಕೆಸೆಯಾದ ಚಂ ಚುಪುಟದಿಂದಮೆ ಮಜ್ಜನಕಂ ಮಹೀಪತೀ ॥ ೧೩೬

೧೩೩. ಪಾಪಿಯೆಂ—ಪಾಪಿಯಾಗಿದ್ದೇನೆ; ಪ್ರಸೂತ್ಯುದ್ಭವದಿಂ—ಹೆರಿಗೆಯಿಂದ; ಕಳಿದಳ್—ಮೃತಳಾದಳು; ಶಮ. ೪೧ ಸೂತ್ರಪ್ರಕಾರ ಪಾಪಿ ಎಂಬ ಸಂಸ್ಕೃತ ಗುಣವಾಚಕದಮೇಲೆ ಎೞ್ ಎಂಬ ಅಖ್ಯಾತ ಪ್ರತ್ಯಯವು ಬಂದಿದೆ.

೧೩೪. ಪ್ರಾಣನ—ಪೋಷಣೆ

೧೩೫. ಕಳಲಲ್—ಸಡಿಲವಾಗಲು; ಬೀಳ್ದು—ಬಿದ್ದು; ಕುಳಿಯಲ್—ಕುಳಿಬೀಳಲು; ಮುಯ್ಪುಗಳ್—ರೆಕ್ಕೆಗಳ ಬುಡಗಳು; ಬಲಂ, ಅಳಿಯಲ್, ಪಾರಲ್; ಆಱದು—ಸಮರ್ಥವಾಗದು.

೧೩೬. ತಾಳೆವಣ್ಣ—ತಾಳೆಹಣ್ಣಿನ.

*[ಪುತ್ರಸ್ನೇಹಾಂತರ] †[ನುಂಡುನೆಲ್ಲಡಿಮುಮುಪ್ಪಿನೊಳಂಟಿವ]

ವ ॥ ಅಂತಾತನೆನಗ ಕುಟುಕನಿಕ್ಕಿ ಮಿಕ್ಕುದಂ ತನಗಶನಮುಂ ಮಾಡಿ ಜೀವಿಸುತ್ತಮಿರೆಯಿರೆ.

ವೃ ॥ ಅರುಣಮರೀಚಿ ರಕ್ತನಳಿನೀದಳದಿಂ ದೆಸೆವ ಭ್ರಪಂಕಜಾ । ಕರತಟದಿಂದಮಿಾಗಳಪರಾಬ್ಧಿಗೆ ಬರ್ಪ್ಪರ್ ಜರನ್ಮರಾಳವೋ ॥ ಪಿರಿದುಮೆನಲ್ಕೆ ಮೆಲ್ಲಸಿಳದತ್ತು ವಿಯತ್ತಳಮಧ್ಯಭಾಗದಿಂ । *[ಪರಿಣತರಂಕುರೋಮತತಿ] ಪಾಂಡುರಮುಂದುಶಶಾಂಕಮಂಡಲಂ ॥ ೧೩೩

ಕಂ ॥ ಅದುಸಂಧ್ಯೋಪಾಸ್ತಿಗೆ ಪೊ । ರ್ದ್ದಿರ್ದಪುದು ಮಾನಸಸರಕ್ಕ ಮಿಾಗಳೆದೆಂಬಂ । ದದಿನುತ್ತರಾಶೆಯುಂ ಪೊ ॥ †[ರ್ದ್ದಿರ್ದತ್ತುಸಪ್ತರ್ಷಿ] ಮಂಡಲಂ ಕ್ರಮದಿಂದಂ ॥ ೧೩೪

ಕಂ ॥ ಕರಗಿರ್ದ್ದಪುವೋ ತರದಿಂ । ದರಗಿನ ಸರಿಗೆಗಳಿವಲ್ಲವಾನೆಯ ನೆತ್ತ ॥ ರ್ಪ್ಪೊರೆದಿರ್ಪ್ಪವೊ ಸಿಂಹದ ಕೇ । ಸರಂಗಳೆನಲೊಗೆದವರುಣತರಣಿಕರಂಗಳ್ ॥ ೧೩೫

ವೃ ॥ ‡[ಪರಿದಪ್ಪಂ] ಬರುದಪಂ ವಿಹಾಳಿಗೆನುತರುಣಂ ವ್ಯೋಮವಿಸ್ತೀರ್ಣರಂಗಾಂ । ತರವೀಥೀಭಿನ್ನತಾರಾಸ್ಫಟಿಕ ಶಕಲಮುಂ ನೂಂಕುತಂ ಚಾರುಚಾಮಿಾ ॥ ಕರಯಂತ್ರವ್ರಾತದಿಂ ಕುಂಕುಮಘನರಸಮುಂ ಸಿಂಪಿಸುತ್ತಿರ್ದ್ದನೆಂಬಂ । ತಿರ ಲೆತ್ತಂ ಸೀಳ್ದುಪೊಣ್ಮಿತ್ತುದಯಸಮಯದೊಳ್ಶೋಣಸೂರ್ಯಾಂಶುಜಾಲಂ ॥ ೧೩೬

---

೧೩೩. ಪಿರಿದುಂ—ಬಹುಶಃ ; ರಂಕು—ಹುಲ್ಲೆ.

೧೩೪. ಪೊರ್ದಿರ್ದಪುದು—ಹೊಂದುತ್ತದೆ ; ಉತ್ತರಾಶೆಯುಂ—ಉತ್ತರದಿಕ್ಕನ್ನು.

೧೩೫. ತರದಿಂ—ಸಾಲಾಗಿ ; ಅಲ್ಲಂ—ಅಥವಾ.

೧೩೬. ಸೂರ್ಯನು ಕುಮಾರನು ವಿಹಾರಕ್ಕಾಗಿ ಬರುತ್ತಾನೆಂದು ಅರುಣನು, ಆಕಾಶವೆಂಬ ಮಾರ್ಗದಲ್ಲಿ ನಕ್ಷತ್ರಗಳೆಂಬ ಕಲ್ಲುಗಳನ್ನು ಗುಡಿಸಿ, ಕುಂಕುಮಕೇಸರಿಯ ನೀರನ್ನು ಚಿನ್ನದ ಪಿಚಕಾರಿಯಿಂದ ಚಿಮುಕಿಸುತ್ತಾನೋ ಎಂಬಂತೆ ಉದಯಕಾಲದಲ್ಲಿ ಕೆಂಪಾದ ಸೂರ್ಯಕಿರಣಗಳು ಕಾಣುತ್ತಿದ್ದುವೆಂದು ತಾತ್ಪರ್ಯ.

*[ಪರಿಣತಶಾರಂಗತತರ] †[ರ್ದ್ದಿರ್ದುದುಸಪ್ತಋಷಿ] ‡[ಪರಿದಪ್ಪ]

ಗಗನಾಂತರ್ಭಾಗದೊಳ್ತೀವಿದ ನಿಜಕರಸಂದೋಹದಿಂದೆಯ್ದೆ ಮಿತ್ರಂ। ಮಿಗೆ ನೂಂಕಲ್ತಾರಕಾಸಂಕುಲ ಮುದಿರ್ದಾವ್ರೊ ಪೇಳೆಂಬಿನಂ ಸಂಪುಟಂಪ ॥ ತ್ತುಗೆವಿಟ್ಟೋರಂದದಿಂ ಸಿಂಪುಗಳುಗುಳೆ ಸಿಡಿಲ್ತಂದ ಮುಕ್ತಾಫಲಶ್ರೇ। ಣಿಗಳಿಂದಂ ಪಶ್ಚಿಮಾಂಭೋಧಿಯ ಪುಳಿನಚಯಂ ಬೆಳ್ಪನಾಳ್ದಿರ್ದುದಾಗಳ್ ॥ ೧೪೧

ಕಂ ॥ ಕಱಿಸುವು ಪನಿ ಪುಲ್ಗಳ ಕ। ಣ್ದೆಱೆದುವು ನವಿಲೆದ್ದುದ ಕರಿಣಿ ಕರ್ಣಂಗಳನೆ ॥ ಚ್ಚಱಿಸಿದುವಾ ಗಳ್ಬಾಯಂ। ತೆಱೆದುವು ಪಿಂಗಳಿಗಳಲ್ಲಿ ಮುನ್ನೇಸಱಿನೊಳ್ ॥ ೧೪೨

ಅರುಣಂಗೆ ವನಂ ಪಲ್ಲವ। ಕರಂಗಳಿಂ ದರ್ಘ್ಯವೆತ್ತುತಿರ್ದುದೆಪನೆಂಬಂ ॥ ತಿರೆಪನಿವ ಪುಲ್ಲನೀಗ್ಗ್ರ। ಳ್ಬೆರಸಲರುಮರುತ್ತಮಿರ್ದುವಂತಾಕ್ಷಣದೊಳ್ ॥ ೧೪೩

ವನದೇವೀಪ್ರಾಸಾದಮಿ। *[ದೆನಿಪಗ] ಕುಳದೊಳ್ಪ್ರೋತಸಂಹತಿ ನೆಗೆದ ॥ ತ್ತೆನಿಪುವು ಧರ್ಮಪತಾಕೆಗ। ಳೆನಿಸಿದ ಮುನಿವಹ್ನಿ ಧೂಮತತಿ ತದ್ದಿನದೊಳ್ ॥ ೧೪೪

---

೧೪೧. ಎಯ್ದೆ—ಚೆನ್ನಾಗಿ ; ಸಿಂಪುಗಳ್—ಚಿಪ್ಪಗಳು ; ಸಂಪುಟಂ—ಭರಣಿಯು ; ಪತ್ತುಗೆವಿಟ್ಟು—ಸೇರುವೆಯನ್ನು ಬಿಟ್ಟು ; ಸಿಡಿಲ್ತಂದ—ಹಾರಿಬಂದ. ಉದಿರ್ದಾವೆಂಬಲ್ಲಿ ಶ. ಮ. ೭೭ನೇ ಸೂತ್ರಪ್ರಕಾರ ಹ್ರಸ್ವೋಪಾಂತವಾದ ರೇಫಕ್ಕೆ ಪರವಲ್ಲಿ ವಕಾರವಿರುವದರಿಂದ ದ್ವಿತ್ವವು ಶಿಥಿಲವಾಗಿದೆ.

೧೪೨. ಪುಲ್ಗಳ ಪನಿ ಕಱಿದುವೆಂಬನ್ವಯು. ಕಱಿದುವು-ಸುರಿದವು ; ಎಚ್ಚಱಿಸಿದುವು-ಅಲ್ಲಾಡಿಸಿದವು ; ಪಿಂಗಳಿಗಳ್—ಸಿಂಹಗಳು ; ಬಾಯುಂತೆಱೆದುವು—ಆಕಳಿಸಿದವು ; ಮುನ್ನೇಸರಿನೊಳ್—ಅರುಣೋದಯದಲ್ಲಿ ; ಪನಿ, ಕರಿಣಿ ಎಂಬ ಶಬ್ದಗಳು ಜಾತ್ಯೇಕ ವಚನಗಳಾಗಿರುವವರಿಂದ ಶಮ. ೧೩೭ನೇ ಸೂತ್ರದ ಪ್ರಕಾರ ಕ್ರಿಯಾಪದಗಳು ಬಹುವಚನಗಳಾಗಿರುವವು.

೧೪೪. ಎನಿಪ—ಎನಿಸಿಕೊಳ್ಳುವ ; ಅಗಕುಲದೊಳ್—ವೃಕ್ಷಸಮೂಹದಲ್ಲಿ.

*[ದೆನೆಘನ]

ವೃ॥ ಲತಿಕಾಲಾಸ್ಯೋಪದೇಶವ್ಯಸನಿ ವನಲತಾಂದೋಳಿತಾಮೋದಸಂತ । ರ್ಪಿತಚಂಚಚ್ಚಂಚರೀಕಂ ಕಮಲವನ ರಜೋರಂಜಿತಾಂಗಂ ಪ್ರಳಾದೀ ॥ ರತಘರ್ಮಸ್ವೇದವಿಚ್ಛೇದನಪಟು ಮೃಗಸಂದೋಹರೋಮಂಥಫೇನೋ । ದ್ಗತಬಿಂದುಸ್ಯಂದಿ ತೀಡಿತ್ತೆಸಗಿ ಸುರಭಿ ವೈಭಾತಿಕಂ ಮಾತರಿಶ್ವಂ ॥ ೧೪೫

ಕಂ॥ ಬೆಳಗಾಯ್ತೆಂಬವಸರದೊ । ಳ್ನಳಿನವನಶ್ರೀ ಪ್ರಬೋಧಮಾಗಧಿಯುಬ್ಬರ್ಗಂ ॥ ದೆಳಸಿ ಪೊಗಳ್ದಪ್ಪರೆಂಬಿನ । ಮಳಿಸಂಕುಲನಿನದಮೊಗೆದುದಬ್ಜಾಕರದೊಳ್ ॥ ೧೪೬

ಡಿಂಡಿಮರವದೊಳ್ಸನವೇ । ತಂಡವು ನೆಚ್ಚರಿಸುತಿರ್ಪ್ಪವೋಲ್ಸಾಗುಯಿಸುಗುಂ ॥ ಗಂಡಸ್ಥಲಮನಸಾರಭ । ಮಂಡಳಿತ ಭ್ರಮರಮಧುರ ಮಂದ್ರಧ್ವಾನಂ ॥ ೧೪೭

*[ಕರಗಿದರಗಿಂ ಪಗಿಲ್ತಂ । ತಿರೆ ತಳ್ತಮೆ ಯೈಕಿಲೆಲರಿನೆಚ್ಚೆತ್ತಾ ಪೊ॥ ಳ್ತರೆಯೊಳ್ ಕಣ್ದೆರೆವತ್ತೂ । ಷರಶಯ್ಯಾಧೂಮ್ರರೋಮಹರಿಣಸಮೂಹಂ] ॥ ೧೪೮

ದಿನಮುಖದೊಳ್ಸಂಚರಿಸುವ । ವನಕರಿಗಳ ಕರ್ಣತಾಳಗಂಭೀರತರ ॥ ಧ್ವನಿಗೆಳಸಿ ರಾಗದಿಂ ಸೋ । ಗೆನವಿಲ್ಗಳ ಪಿಂಡು †[ನಲಿದು ನರ್ತಿಸಿತಾಗಳ್] ॥ ೧೪೯

---

೧೪೫. ರೋಮಂಥ—ಮೆಲುಕುಮಾಡುವದರಿಂದಹುಟ್ಟಿದ ; ಫೇನ—ನೊರೆ ; ತೀಡಿತ್ತು—ಬೀಸಿತು.

೧೪೭. ಡಿಂಡಿಮ—ವಾದ್ಯವಿಶೇಷ ; ಮಂದ್ರಧ್ವಾನಂ—ಗಂಭೀರಧ್ವನಿ.

೧೪೮. ಪಗಿಲ್ತಂತೆ—ಅಂಟಿಕೊಂಡಂತೆ ; ತಳ್ತಮೆ—ಬತ್ತಾಗಿ ಸೇರಿಕೊಂಡಿರುವ ಕಣ್ಣುರಪ್ಪೆ ; ಐಕಿಲೆಲರ್—ಹಿಮದಗಾಳಿ ; ಪೊಳ್ತರೆ—ಪ್ರಾತಃಕಾಲ.

೧೪೯. ಎಳಸಿ—ಅಪೇಕ್ಷಿಸಿ ; ಸೋಗೆನವಿಲ್—ಗಂಡುನವಿಲು.

*[ಕರಗಿದರಗಸಿ ಕೊ । ತ್ತಿರೆಪೆಯ್ಗಳ ಸೆಲೆಯೈಕಿಲೆಲವುತ್ತಾನುಂ ॥ ಪರೆಯೊಳ್ಕಂಡೆಚ್ಚತ್ತೋ । ಪರಶಯ್ಯಾದಳಿಸಂ ವರಾಹಸಮೂಹಂ]

†[ನಲಿದ ಕಿರಿಸಿದಾಗಳ್]

ವ ॥ ಅಂತು ನೇಸರ್ಮ್ಮೂಡಲೊಡನೆ ಗೂಡುಗಳಿಂ ಗಿಳಿಗಳೆಲ್ಲಂ ಕು
ಟುಕುಗೊಳಲೆಂದು ಪೋಗೆ ಶಾಬಕನಿಕರಸನಾಥಮಾಗಿಯುಂ [ನಿಶ್ಶಬ್ದತೆ
ಯಿಂ] ಶೂನ್ಯಮಂತಿರ್ದ್ದ ಶಾಲ್ಮಲಿವನಸ್ಪತಿಯೊಳ್ ॥ ೧೫೦

ಕಂ ॥ ಕುಡುಕುಗೊಳಪೋಪ ಶಕುನಿಗ । ಳೊಡಪೋಗಲ್ಜನಕನಾ
ಅಜದಿರ್ದ್ದಪಮಾನುಂ ॥ ಮಿಡುಕಲಣಮಱಿಯದಿರ್ದ್ದೆಂ । ಪೊಡರದ ಗಱಿ
ಯುವನೆ ತನ್ನ ತಂದೆಯ ಕೆಲದೊಳ್ ॥ ೧೫೧

ವೃ ॥ ಚಕಿತೋದ್ವೃತ್ತಕ್ಷಿಪಕ್ಷಸ್ವನದೊಳಮರ್ದ ಕೋಳಾಹಳಧ್ವಾ
ನದಿಂ ಕೊ । ರ್ವ್ವಿಕರೀಂದ್ರೋದ್ಭೂತಪೂತ್ಕಾರ *[ದೆಪುದಿದು] ಗುಹಾನೀಕ
ಸುಪ್ತೋತ್ಥಸಿಂಹ ॥ ಪ್ರಕರಪ್ರೋನ್ನಾದದಿಂ ತಳ್ತುಪಗತ ವನದೇವೀಚಯ
ಸ್ವಾಂತಸಂತ್ರಾ । ಸಕರಂ ಪೊಣ್ಮಿತ್ತು ವಿಂಧ್ಯಂ ನಡುಗೆ ಘನರವಸ್ಪರ್ಧಿ †[ಕೈ
ರಾತಘೋಷಂ] ॥ ೧೫೨

ಕಂ ॥ ಅಂತಶ್ರುತಪೂರ್ವಧ್ವನಿ । ಯುಂ ತೊಟ್ಟನೆ ಕೇಳ್ದು ಕೇಳ್ದು ಕಿವಿ
ಯೊಡೆವಪುದೆಂ ॥ ಬಂತಾಗೆ ಘೀಳಿಡಲೆನ್ನಾ । ಕ್ಕೆಂ ತಂದೆಯ ಶಿಥಿಲಪಕ್ಷಸಂಪು
ಟದೆಡೆಯೊಳ್ । ೧೫೩

ವ ॥ ಅಂತಾಸಮಯದೊಳ್.

ವೃ ॥ ಇದೆ ಪರ್ವ್ವಿತ್ತು ಮತಂಗಜೋಚ್ಚಲಿತ ಕಂಜಾಳೀರಜಸ್ತೋ
ಮಮಿಂ । ಇದೆ ತೀಡಿತ್ತು ವರಾಹಸಂಕುಳದಳನ್ಮುಸ್ತಾ ಕ್ಷರಾಮೋದ
ಮಿಂ ॥ ಇದೆ ಬಂದತ್ತಿಭಯೂಥ ನಾಥದಳಿತೋದ್ವೃತ್ತಸಲ್ಲಕೀಗಂಧಮಿಂ । ಇದೆ
ತೋರಿತ್ತು ‡[ಮದಾಂಧಸೈರಿಭಖುರಪ್ರೋದ್ಧೂತರೇಣುವ್ರಜಂ] ೧೫೪

೧೫೧. ಅಜದಿರ್ದ್ದಪೆ—ಕಯ್ಲಾಗದಿರಲು; ಮಿಡುಕಲ್—ಚಲಿಸುವದಕ್ಕೆ; ಅಣಂ—ಸ್ವಲ್ಪವಾದರು; ಪೊಡರದ—ಹುಟ್ಟದ.

೧೫೨. ಅಮರ್ದ—ಸೇರಿದ; ಕೊರ್ವ್ವಿ—ಹೆಚ್ಚಿ; ಪುದಿದು—ವ್ಯಾಪ್ತವಾಗಿ; ಕೈರಾತ—ಕಿರಾತಸಂಬಂಧಿಯಾದ.

೧೫೪. ಪರ್ವ್ವಿತ್ತು—ಹಬ್ಬಿತು; ತೀಡಿತ್ತು—ಬೀಸಿತು.

*[ದನೊಗೆದ] †[ಘೋರಾಬ್ಧಿಘೋಷಂ]

‡[ಮದಾಂತಸೈರಿಭಕರಪ್ರೋದ್ವೃತ್ತರೇಣುವ್ರಣಂ]

ರುರುಗಣ ಮಿತ್ತಲಿತ್ತ ಚಮರೀಮೃಗಸಂಕುಳ ಮಿತ್ತಲಿತ್ತ ಸೂ | ಕರೇಣಯು ಮಿತ್ತಲಿತ್ತ ವನಸೈರಿಭಸಂಕುಳ ಮಿತ್ತಲಿತ್ತ ಕುಂ | ಜರಕುಳ ಮಿತ್ತಲಿತ್ತವೆ ಟಿಟ್ಟಿಭಕುಲಸ್ವನ ಮಿತ್ತಲಿತ್ತಕೇ | ಸರಿರವ ಮಿತ್ತಲಿತ್ತಮೆನು ತ್ತಿರ್ಪ್ಪರವಂ ನೆಗೆವತ್ತು ಸುತ್ತಲುಂ || ೧೫೫

ಕಂ || ಇದೆ ಚಳಿತಲಾವುಕಸ್ವನ | ಮಿದೆ ಹರಿನಖಭಿನ್ನಕುಂಭಕುಂ ಜರರವಮಿಂ || ತಿದೆ *[ಕುರರಕುಲಸ್ವನ] ಮಿಂ | ತಿದೆ ಕುಕ್ಕುಟರಭಸ ಮಿ ದೆಕಪಿಂಜಲ †[ನಿನದಂ] || ೧೫೬

ವ|| ನಸುಮೊಲ್ದಜ್ಜಗರುಂಕೆ ಸೂಸುತಿದೆ ಪೋಪತ್ತಲ್ಲಿ ನಾನಾಮೃಗಂ | ಮುಸುಱುತ್ತಿರ್ಪ್ಪವು ಗುಂಗುರೀ ಯೆಡೆಯೊಳಂ ಪೋಪತ್ತು ಸೊಕ್ಕಾನೆಪೆ || ಗ್ಗೆಸರಾಗಿರ್ಪ್ಪದು ಬಟ್ಟೆ ಪೋದವಿದರೊಳ್ಪೆಬ್ಬೆಂದಿ ಗಳ್ನೆತ್ತರುಂ | ಬಸಿ ವುತ್ತಿರ್ಪ್ಪದು ಪೋದವಿಕ್ಕೆ ಮರಿಯುಂ ಪುಲ್ಲಟ್ಟೆಯೊಳ್ಪುಲಿಗಳ್ || ೧೫೭

ಕಂ || ಬರೆವರೊ ಪತ್ರಮನೆಂಬಂ | ತಿರೆ ಪಜ್ಜೆಗಳೆಸೆಯೆ ನಾಂದು ನೆತ್ತರೊಳೆತ್ತಂ || ಕರಿಮಸ್ತಕಮುಕ್ತಿಕವಂ | ತುರವೀಥಿಯು ತೋಱುವಪ್ಪು ದು ಮೃಗಪತಿಮಾರ್ಗಂ || ೧೫೮

ವ|| ನಡೆಸಲ್ವಿಲ್ವಿಡು ಸಾಚ್ಛರ್ಮುಜ್ಜರ ಮರನಂ ಬಂದೇಱು ಬಿಲ್ವೀ ಸುತಂ | ಜಡಿ ಸೋಂಕಾಂಕು ತರಳ್ಚು [ನೋಪು] ಕಡುಗೆಯ್ದೇಳ್ವಿಂ ದುಕೇಳ್ವಾದ್ಗಳಂ || ಬಿಡು ಕೋಲಂ ತುಡು ಸಾದ್ರ್ದಪ್ರೋದ್ದ್ರಸೆನುತಂ

---

೧೫೬. ಲಾವುಕ—ಲಾವಕಪಕ್ಷಿ; ಕುರರ—ಅಳಲೀಕುಂಚ.

೧೫೭. ಇದೆಪೋದತ್ತು—ಈಗತಾನೆ ಹೋದುದು; ಮುಸುಱುತ್ತ—ಮುತ್ತುತ್ತ; ಗುಂಗುರ್—ಸಣ್ಣಪೊದೆ; ಬಟ್ಟೆ—ಮಾರ್ಗ; ಬಸಿವುತ್ತಿರ್ಪ್ಪದು—ಸೋರುತ್ತಿರುವದು; ಪುಲ್ಲಟ್ಟೆ—ಹುಲ್ಲಿನಪೊದರು.

೧೫೮. ದಂತುರವೀಥಿಯು—ನ್ಯೂನ್ಯಾದಸಾಲುಗಳು; ಮೃಗಪತಿಮಾರ್ಗಂ—ಸಿಂಹದಮಾರ್ಗವು. ತೋಱುವಪ್ಪುದು—ಕಾಣುವದು.

೧೫೯. ಸಲ್—ಸುಗ್ಗು; ಸಾಚ್ಛರ್—ಸಮಾನಸಕ್ಕೆಸೋಗು; ಅನುಜ್ಜರ—ಸಾಗಿಸು; ಜಡಿ—ಪದರಿಸು; ತರಳ್ಚು—ಹಾರಿಸು; ಕಡುಗೆಯ್ದು—[illegible],

*[ಕುರವಕನಿಸ್ವನ] †[ನಿಕರಂ]

ತುಡುವೆಸ್ಸೆಳೆಸಾರೆಪೊರ್ವರೆಸೊ । ಳ್ನುಡಿ ಪೊಂದಬ್ಬರ ಮುಬ್ಬಿರ್ತಾಗಳೆ
ನಸುಂ ವಿಂಧ್ಯಾಟವೀಮಧ್ಯದೊಳ್ ॥ ೧೫೯

ವ॥ ಅನಂತರಮನೇಕ ಶಬರಸಂಘಾತದಿಂದಳಿಯೆ ನೊಂದು *[ಮೃದಂಗಧ್ವಾನಧೀರವಾಗೆ] ಜೆಟ್ಟಿಗಳ್ಮಾರ್ದನಿಗುಡೆ ಗಜಱಿಗರ್ಜಿಪ ಕಂಠೀರವರವಂಗಳೆಳೆ ಬೆದಱಿ ಬೆಚ್ಚಿ ಕಡುಪುಗಳಂಬಿಟ್ಟು ಪರಿದೊಂದಿನಿಂದು ಭೂಮಿತಾಡನಂಗೆಯ್ದು ಮುಗಿಲ್ಗಳ್ಮೊಳಗುವಂತೆ ಮೊಳಗುವ ಯೂಥಪತಿಗಳ ಬೃಂಹಿತಂಗಳೊಳಂ ಪರಿದು ಪತ್ತಿ ನಾಯ್ಗಳುಲಿದು ತಿನೆ ಜೋಲ್ದು ಕೆಡೆದ ಹರಿಣಂಗಳ ಕೂಜಿತಂಗಳೊಳಂ ಬಳಸಲ್ಕೆ ಮಱಿಗಳ್ವೆರಸು ಕಳಕಳಕ್ಕೆ ಕೆಕ್ಕರಿಸಿ ಪರಿವೃತ ಮಾಗಳಾಗಳೆ ಬೀಳ್ದ ನಿಜಯೂಥಪತಿಗಳಂ ಕಂಡು ಪೋಗಲಾಱದೆ ಸುಳಿಸುಳಿದುನಿಲ್ವ ಕರಿಣಿಗಳ ಚೀತ್ಕಾರದೊಳಂ ಅಗಳೆ ಪೆತ್ತ ಮಱಿಗಳಂ ಬಿಟ್ಟು ಬೆದಱಿ ಪೋಗಲಾಱದೆಳಸಿ ನಿಲಲಾಱದೆ ಬಾಯ್ವಿಟ್ಟೊದಱಿ ಪೆಳಱಿಪರಿವ ಖಡ್ಗಧೇನುಕಂಗಳ ಕರುಣಾಕ್ರಂದನಂಗಳೊಳಂ ಮರದತುದಿಗೂಡುಗಳಂ ತಱಗೆಲೆಗಳಂತೆ ಬೆದಱಿ ನೆಲಕ್ಕೆ ಬೀಳ್ವಪಕ್ಕಿಗಳುಲುಪುಗಳೊಳಂ ಭೂಮಿಕಂಪಮಾಗೆ ಪರಿವ ಮೃಗಯುಗಳ ಚರಣಘಾತಶಬ್ದಂಗಳೊಳಂ ಮಹಿಷಸ್ಕಂಧಪೀಠಪಾತಿತಂಗಳಪ್ಪ ಬಾಳ್ಗಳ ಬಾಯ್ಧಾರೆಗಳ ನಿನಾದದೊಳಂ †[ಎಡೆವಿಡದೆ ಬೆದೆವೆರಸಿದ ಕುರರಕೂಜಿತಂಗಳಂ ತೊಗೆವಸರಳ ಮೊರೆಪದೊಳಂ ಕೂಡೆ ವಿಂಧ್ಯಾಟವಿಯೆಲ್ಲಂ ಪ್ರಚಲಿತವಾದಂತಾಗೆ]॥ ೧೬೦

ತುಡು—ಬಾಣವನ್ನು ಜೋಡಿಸು ; ಸಾರ್ವು—ಸೇರಿ ; ಪೊರ್ವು—ಸಮೀಪಕ್ಕೆ ಹೋಗು; ಇಸು—ಬಾಣವನ್ನು ಹೊಡಿ.

೧೬೦. ಕಡುಪು—ಕ್ರೂರತನ ; ಪರಿದು—ಓಡಿ ; ಒಂದಿ—ಸೇರಿ ; ಮೊಳಗುವ—ಗರ್ಜಿಸುವ ; ಪತ್ತಿ—ಹಿಮ್ಮಟ್ಟಿ ; ಕೆಕ್ಕರಿಸಿ—ಸದರಿ ; ಒದಱಿ—ಕೂಗಿ ; ಪೆಳಱಿ—ಭಯಪಟ್ಟು ; ಖಡ್ಗಧೇನುಕಂಗಳ್—ಹೆಣ್ಣುಗೆಂಡಗಳು ; ಉಲುಪು—ಸದ್ದು ; ಬಾಳ್ಗಳ—ಕತ್ತಿಗಳ ; ಬೆದೆವೆರಸಿದ—ಕಾಮುಕಗಳಾದ ; ಮೃಗಯು—ಬೇಟೆಗಾರರು.

*[ಮೃದಂಗಧ್ವಾನದಿಂಬಧಿರವಾಗೆ]

†[ಎಡೆವಿಡದೆ ಬೆದರಿಸಿ ಕುರರವಕೂಜಿತಂಗಳಂ ತೆರಣರ್ಮ್ಮಗತಿದೊಗೆವ ಸರಲಮೊರೆಪದೊಳಂ ಕೂಡೆವಿಂಧ್ಯಾಟವಿಯೆಲ್ಲಂ ಕಿತ್ತಲೆಯುಂಕವಿಯುಂಕಲ್ಲಯುವಾಗೆ]

ಕಂ ॥ ಆಂ ಜನಕನೆಱಕೆಯೊಳಗಿ । ರ್ದ್ದಂಜುತ್ತಂ ಕೇಳುತಿರ್ದ್ದೆ ನಿಪ್ಪಂನೆವರಂ । ಬಿಂಜಡವಿಯೊಳಗೆಲ್ಲಂ । ನಂಜಿನ ಮಳೆಗೊಂಡು ಬಿಟ್ಟ ತೆಱನಾಯ್ತಾಗಳ್ ॥ ೧೬೧

ಅದು ಮೊಳಗುವಮಾರ್ದ್ದಕಾಗ್ಗ । ಲದ ಮುಗಿಲದು ಕಡೆಪ ಮುಡುಗಿದಂಬುಧಿಯೆಂಬಂ ॥ ದದಿ ನಡವಿ ಮೂಗುವಟ್ಟ । ರ್ದ್ದದು ಬೇಟೆಯೊಳಾದ ಕಳಕಳಂ ಪಿಂಗುವಿನಂ ॥ ೧೬೨

ವ ॥ ಅಂತಾಕಳಕಳರವಮುಪಂಗಲೊಡನೆ * [ಯುದ್ಭ್ಯಾತವಿಸ್ಮಯನಾಗಿ] ತಂದೆಯಿರಿಸಿದ ಪಕ್ಷಸಂಪುಟದೊಳಗಣಿಂ ಪೊಱಮಟ್ಟದೇನೆನುತ್ತಮಾಂ ಪೊಳಲೊಳಗಿರ್ದ್ದು ಮೆಲ್ಲನೆ ನಿಕ್ಕಿನಿಕ್ಕಿ ಪೆಪ್ಪಳಿಸಿ ನೋಳ್ಪಂನೆಗಮಲ್ಲಿ ॥ ೧೬೩

ವೃ ॥ ಇದು ನವಕಾಳಮೇಘಚಯಮಲ್ಲಿದು ಘೋರಮಹಾಂಧಕಾರಮ । ಲ್ಲಿದು ವಿಚರತ್ತಮಾಳವನ ಮಲ್ಲಿದು ಘೋರಕೃತಾಂತಸೈನ್ಯಮ ॥ ಲ್ಲಿದು ಕಲಿಕಾಲಬಂಧುಕುಲಮಲ್ಲಿದು ದುರ್ಧರದಾನ ವೌಘಮೆಂ । ಬುದನೆನಿಸುತ್ತಮಲ್ಲಿ ಬರುತಿರ್ದ್ದುದನಂತಕಿರಾತಸಂಕುಳಂ ॥ ೧೬೪

ವ ॥ ಅಂತುತ್ಪಾತವೇತಾಳವಡೆಯಂತೆ ಭಯಂಕರಾಕಾರಮಾದ ಬೇಡವಡೆ ಯು ನಡುವೆ.

ವೃ ॥ ಕಬ್ಬೊಗಂನಿಂದಂ ವಿಧಾತ್ರಂ ಸಮೆದನಿವನ ನೆಂಬೊಂದು ಕಾರ್ಕಶ್ಯದಿಂದಂ । ಸಬ್ಬಾಂಗಂ ಕಣ್ಗುರ್ವ್ವಂ ಪಡೆಯುಲಡವಿಯುಂ ಕೂಡೆ ಕಾಳಿಂದಿ ಯೆತ್ತಂ ॥ ಪಬ್ಬಿತ್ತಂಬಂತೆ ನೀಳೋತ್ಪಳದಳರುಚಿರಶ್ಯಾಮದೇ

---

೧೬೧. ಎಱಕೆಯೊಳಗೆ—ರಕ್ಕೆಯೊಳಗೆ ; ಬಿಂಜ—ವಿಂಧ್ಯ.

೧೬೨. ಕಡೆಪಮುಡುಗಿದಂಬುಧಿ—ಮಥಿಸಿಬಿಡಲ್ಪಟ್ಟ ಸಮುದ್ರ ; ಮೂಗುವಟ್ಟು—ನಿಶ್ಶಬ್ದವಾಗಿ.

೧೬೩. ಪೊಳಲ್—ಪೊಟರೆ ; ನಿಕ್ಕಿ—ಇಣುಕಿ ; ಪೆಪ್ಪಳಿಸಿ—ಮಿಟುಮಿಟನೆ.

೧೬೪. ಕಬ್ಬೊಗಂ—ಕಬ್ಬಿಣ; ಸಮೆದಂ—ನಿರ್ಮಿಸಿದನು; ಅಗುರ್ವ್ವಂ—ಭಯವನ್ನು.

*[ಯುದುತವುಯುವಾಗಿ]

ಪಾಂಶು ಪಟ್ಟಿ । ಶ್ರೋಣ್ಯಗ್ರಂ ಬಂದಂ ಪುಳಿಂದಪ್ರಕರ ಬಹುಳಸೇನಾಪರೀ ತಂಕಿರಾತಂ ॥ ೧೬೫

ವ ॥ ಅದಲ್ಲದೆಯುಂ ಯೂಥಪತಿಪ್ರಥ *[ಮೋದ್ಭಿನ್ನ] ದಾನಲೇ ಖಾನುಕಾರಿಶ್ಮಶ್ರುಲೇಖನುಂ ಗಜಮದಮಳಿನಕೇಸರಿಜಟಾಕುಟಿಳಕುಂತಳ ಕಳಾಪನುಂ ಕಾತ್ಯಾಯನೀತ್ರಿಶೂಲಲಾಂಛನಪ್ರತಿಮತ್ರಿಪತಾಕಭ್ರುಕುಟಿವಿ ಕಟಲಲಾಟಪಟ್ಟನು ಮುತ್ತುಂಗಘೋರಘೋಣನುಂ ಕರ್ಣಾಭರಣೀ ಕೃತ ಫಣಾಮಣಿಪ್ರಭಾರುಣಿತವಾಮಪಾರ್ಶ್ವನುಂ ಕಾಳಾಗರುಪರಿಮಳಾಮೋದಿ ತಮದಕರ್ದಮಕೃತಾಂಗರಾಗನುಂ ಅಂಗರಾಗಪರಿಮಳಪ್ರಬದ್ಧಮಂಡಲಾ ಳಿರಂಜಿತಮಯೂರಪಿಂಛಾತಪತ್ರನುಂ ವಿಂಧ್ಯಾಟವೀಕರತಲಾನುಕಾರಿಕರ್ಣ ಪಲ್ಲವಾಪನೋದಿತಕಪೋಲಮಂಡಲೀಸ್ವೇದನುಂ ಅಕಾಲಸಂಧ್ಯಾಪ್ರದಾನಪ್ರ ವೀಣಲೋಹಿತಲೋಚನನುಂ ಚಂಡಿಕಾರುಧಿರಧಾರಾವಿನಿಹಿತಪಸ್ತ್ರೋಲ್ಲೇಖ ನವಿಷಮಿತಭುಜಯುಗಳನುಂ ಮೃಗರುಧಿರಶೀಕರರಂಜಿತಸ್ವೇದೋದಬಿಂ ದುಮಾಲಾಲಂಕೃತವಿಶಾಲವಕ್ಷಸ್ಥಳನುಂ ಅನವರತಶ್ರಮಾಭ್ಯಾಸಕೃಶೋದರ ನುಂ ಬದ್ಧಕೌಶೇಯವಸನನುಂ ಇಭಮದಮಲಿನೀಕೃತಾಲಾನಸ್ತಂಭಪ್ರ ಯೋಪಮಾನೋರುಯುಗಳನುಂ ಕಾಳಾಯಸನಿಗಳಬದ್ಧವಾಮಪಾದನುಂ ಅರಣ್ಯದಂತೆ ಖಡ್ಗಧೇನುಕಾ †[ಸಹಿತನುಂ] ಅಭಿನವಜಲಧರದಂತೆ ಮ ಯೂರಪಿಂಛವಿಚಿತ್ರಚಾಪಧರನುಂ ‡ [ಬಕನಂತೆ] ಗೃಹೀತೈಕಚಕ್ರನುಂ ಗರುಡನಂತೆ ಸಮುದ್ಧೃತಾನೇಕನಾಗದಶನನುಂ ಸಿದಾಘದಿವಸದಂತಾವಿ ಷ್ಕೃತಮೃಗತೃಷ್ಣನುಂ ಹಿರಣ್ಯಾಕ್ಷನಂತೆ ಮಹಾವರಾಹವಿದೀರ್ಣವಕ್ಷಸ್ಥ ಳನುಂ ರಾಗಿಯಂತೆಬಹುವಿಧಪರಿಗ್ರಹನುಂ ಅಭಿನವಯೌವನನಾಗಿಯುಂ ಕ್ಷಪಿತವಯಸನುಂ ಕೃಷ್ಣನಾಗಿಯುಂಅಸುದರ್ಶನನುಂ §[ಕ್ಷಿತಿಭೃತ್ಪಾದಾ ನುವರ್ತಿಯಾಗಿಯುಂ ರಾಜಸೇವಾನಭಿಜ್ಞನು] ಮೆನಿಸಿದನಂತುಮಲ್ಲದೆ ಯುಂ ॥ ೧೬೬

೧೬೬. ತ್ರಿಪತಾಕಭ್ರುಕುಟಿ—ಮೂರುಗಂಟುಳ್ಳಹುಬ್ಬು.

*[ಮಾಭಿನ್ನ] †[ಸಾದನುಂ] ‡[ಪೀತಾಂಬರನಂತೆ]

§[ಕೃತವ್ಯತತ್ಪರಾವರ್ತಿಯಾಗಿಯುಂರಾಜಸೇನಾಭಿಜ್ಞನು]

ವೃ ॥ ಪೊರೆದರೊ ನೆತ್ತರಿಂದೆಸೆವ ನಾಲಗೆ ಯಿಂಬಿಡೆ ಕೀಳ್ತ ಸಿಂಹ
ಕೇ । ಸರದಪ್ರೋಲಿರ್ದ್ದ ದಾಡೆಗಳ ಕಾಂತಿಯನಾಂತ ವರಾಹಘೋತಜ ॥ ಝುರ್ಝರ
ತನುಗಳ್ಳಿ ಜಶ್ರವುವ ನೊಯ್ಯನೆ ನಾಲಗೆಯಿಂದೆ ತೋಱುವಂ । ತಿರೆ ಬಳಿ
ಸಂದುವಾಶಬರನಾಯಕನಂ ಕಿರುನಾಯ ಕುನ್ನಿಗಳ್ ॥ ೧೬೭

ಕಂ ॥ ಕಾಯುಳ್ವೇಳ್ವುದು ಸಿಂಹನಿ । ಕಾಯುಮನೆಂದಭಯದಾನವಂ
ಬೇಡುವ ಸಿಂ ॥ ಹೀಯೂಥವೊಂದಿನಂ ಕಾ । ಳೇಯಕುಟುಂಬಿನಿಗಳೆಸೆದು
ವಾತನ ಕೆಲದೊಳ್ ॥ ೧೬೮

ವೃ । ಕರಿದಂತಂಗಳನಾಂತು ಪೀಲಿವೊಱೆಯುಂ ತಳ್ಕೈಸಿ ಗಂಧೇ
ಭಬಂ । ಧುರಮುಕ್ತಾಫಳಭಾರಮಂ ತಳೆದು ಮಾಸವಾತ್ರಮಂ ಪೊತ್ತು
ಕೇ ॥ ಸರಿಚರ್ಮವ್ರಜಮುಂ ತೆರಳ್ಚಿ ಚಮರೀವಾಲಂಗಳಂ ತಾಳ್ದು ಬಂ । ದರ
ನೇಕಬ್ಬರ್ಗಳಿಸಂದು ಕಾಡೊಡೆಯನಂ ಕಾಂತಾರದೊಳ್ ಲುಬ್ಧಕರ್ ॥ ೧೬೯

ವ॥ ಅಂತನೇಕಶಬರಪರಿವೃತನಾಗಿ ಬರುತಿರ್ದ್ದನಂತುಮಲ್ಲದೆಯುಂ.

ಕಂ ॥ *[ಪಡೆದಂ] ವಿಂಧ್ಯನಗೇಂದ್ರ । ಕ್ಕೊಡವುಟ್ಟಿದನಂ †[ತಕಂಗೆ]
ನಂಟುಂ ಪಾಪ ॥ ಕ್ಕೊಡನಾಡಿ ಕಲಿಗೆಸಿಪ್ಪಂ । ಪೊಡವಿಯೊಳನ್ನಾತನಿಂಭ
ಯಂಕರನಾವಂ ॥ ೧೭೦

ಕಂ ॥ ಆತನಪೆಸರಂ ಕೇಳ್ದಂ । ಮಾತಂಗಕನೆಂದು ಬಳಿಯು ಮಾ
ಶಬರಂಸಂ । ಜಾತಶ್ರಮಂ ಕಿರಾತಸ । ಮೇತಂ ಶಾಲ್ಮಲಿಮಹೀಜಮಂ ಸಾ
ರ್ದಂದಂ। ೧೭೧

---

೧೬೭. ಪೊರೆದರೊ—ಲೇಪಿಸಿದರೊ ; ಇಂಬಿಡೆ—ತೋರುತ್ತಿರಲು.

೧೬೮. ಕಾಳೇಯಕುಟುಂಬಿನಿ—ಬೇಡನ ಹೆಣ್ಣುನಾಯಿ ; ಕೆಲದೊಳ್—ಪಾರ್ಶ್ವದಲ್ಲಿ.

೧೬೯. ಪೀಲಿ—ನವಿಲುಗರಿ ; ತೆರಳ್ಚಿ—ಸಂಗ್ರಹಮಾಡಿಕೊಂಡು ; ಬಳಿಸಂದು—ಸಮೀಪವನ್ನು ಹಿಡಿದು.

೧೭೦. ಪಡೆದಂ—ಮಗನು ; ಒಡನಾಡಿ—ಜೊತೆಗಾರ.

*[ಒಡೆಯಂ] †[ತಕಣ್ಗೆ]

ವ॥ ಅಂತು ನೆಳಲ್ಗೆ ವಂದುದ್ದಂಡಮಪ್ಪ ಕೋದಂಡಮಂ ಮರದವೊದ ಲೊಳ್ಸಾರ್ಚ್ಚಿ ಪರಿಜನೋಪನೀತ ಪಲ್ಲವಾಸನದೊಳ್ಕುಳ್ಳಿರ್ಪ್ಪುದುಂ॥ ೧೩೨

ವೃ॥ ಕೊಳದೊಳ್ ಪೊಕ್ಕು ನೂಂಕಿ ಸರಸೀಜರಜಂಗಳನಲ್ಲಿ ಚಂ
ದ್ರಮಂ । ತಳವೊಜಿನತ್ತು ಮುತ್ತುಗಳೊಸರ್ದ್ದವೆನಿಪ್ಪ ಹಿಮೋದಕಂಗ
ಳಂ ॥ ಕುಳಿರ್ವ ಸರೋಜಪತ್ರಪುಟದಿಂದಮೆ ತೆಕ್ಕನೆ ತೀವಿ ತಂದು ಕೋ ।
ಮಳಬಿಸಕಾಂಡಮಂ ಬೆರಸು ನೀಡಿದನಾಗಳದೋರ್ವ್ವಲುಬ್ಧಕಂ ॥ ೧೩೩

ವ॥ ಅಂತು ನೀಡೆ ನೀರನೀಂಟಿ ಶಶಿಕಳೆಗಳಂ ಮೆಲ್ವ ಸೈಂಹಿಕೇಯನಂತೆ ಮೃಣಾಳನಾಳಂಗಳಂ ಮೆಲ್ದು ವಿಗತಪರಿಶ್ರಮನಾಗಿ ಬಳಲ್ಕೆಗಳೆದು ಮಾತಂಗಂ ಜೇಡವಡೆವೆರಸು ನಿಜನಿವಾಸಕ್ಕೆ ಪೋಪನಂನೆಗಮಿತ್ತಲ್॥ ೧೩೪

ವೃ॥ ಜರೆಯಿಂದಾಪ್ಪುಬ್ಬ್ಬ ಜೋಲಲ್ತೆರೆ ತರತರದಿಂ ದಂಷ್ಟ್ರೆ ಪೊ
ಣ್ಮಲ್ಕೆಗಂಟ । ಲ್ಮುರಿದತ್ತಂದೊಂದಜೋಳ್ತಳ್ತೊಗೆಯೆ ನೆರೆಗಳೊತ್ತಂಬ
ದಿಂಬರ್ಪ್ಪಕೆಂಪಿಂ ॥ ಬಿರಿಯಲ್ಬೆಟ್ಟಂಗಳಾಬಟ್ಟೆಯೊಳಸಿತಜಗುಂ ತನ್ನ ಕ
ಯ್ಸಾರದೆಂದಾ । ತುರಿಸುತ್ತಂ ಭ್ರಾಂತಿಯಿಂದೆನ್ನಯ ಮರದಡಿಯೊಳ್ನಿಂದ
ನೋರ್ವ್ವಂಪುಳಿಂದಂ ॥ ೧೩೫

[ಜೇಡಿವೊಡೀಯುನ್ನೈದೆ ಬಿಯದರ್ ಮೃಗಮಾಂಸದ ರಕ್ತವರ್ಣದಿಂ] ।
ಕೂಡಿದಕಣ್ಗಳಿಂ ಶುಕಸಿಶುಯುದ ಜೀವಮನೆಯ್ದೆ ಪೀರ್ವ್ವವೋಲ್ ॥ ಲ್ಗೂಡು
ಗಳಂ ತಗುಳ್ದ್ದಸಪ್ರೋಲ್ಲಿಸಗಾಮಿಷಲಾಭಲೋಲುಪಂ । ನೋಡಿದನಾಚರ
ಚ್ಛಬರನಾಯಕ ನಾವುರನಂ ಮಹೀಪತೀ ॥ ೧೩೬

---

೧೩೩. ಒಜಿನತ್ತು — ಸ್ರವಿಸಿತು; ಮುತ್ತುಗಳ್ ಒಸರ್ದ್ದವು — ನೀರಾಗಿಸ್ರವಿಸಿದವು; ಕುಳಿರ್ವ — ತಣ್ಣಗಿರುವ; ತೆಕ್ಕನೆ — ಬೇಗನೆ; ತೀವಿ — ತುಂಬಿ.

೧೩೫. ತೆರೆ — ಮುಖದಲ್ಲಿ ಉಂಟಾಗುವ ಚರ್ಮದಸುಕ್ಕು; ಮುರಿದತ್ತ — ತಿರುಗಿಸಿದಕಡೆಯಲ್ಲಿ; ನೆರೆಗಳ್ — ನರಗಳು; ಒಗೆಯೆ — ಹುಟ್ಟಲು; ಒತ್ತಂಬದಿಂ — ಒತ್ತುವಿಕೆಯಿಂದ.

೧೩೬. ಐದೆ — ಹೊರಟುಹೋಗಲು; ಬಿಯದರ್ — ಬೇಡರು; ಪೀರ್ವ್ವಪೋಲ್ — ಪಾನಮಾಡುವಹಾಗೆ; ತಗುಳ್ದು — ಮುಟ್ಟಿ.

ವ॥ ಅಂತು ನೋಡುತ್ತಮನೇಕತಾಳೋತ್ಸೇಧಮುಮಭ್ರಂಕಷಮುಂ ದುರಾರೋಹಮುಮಪ್ಪುದೊಂದಂ ಬಗೆಯದೆ ಬಳಸಿದ ಬಳ್ಳಿವಿಡಿದಡರ್ದೇರಿ॥ ೧೭೭

ವೃ॥ ಜಳಜದ ಮೊಗ್ಗೆಯಂತೆ ಮುಗುಳಂತೆಳೆಯೆಕ್ಕೆಯ ಕಾಯ್ಗಳಂತೆ ಶಾ। ಲ್ಮಲಿಕುಸುಮಂಗಳಂತೆ ತರುನೀಡನಿಕಾಯದಿ ನೆಲ್ಲಮಾಗಳಾ॥ ಗಳೆ ಗರಿವೊಯ್ದು ಕಂಡುಱಿವ ತುಪ್ಪುಳೊಡಚ್ಚುಱಿವ ಕೆಂಪನಾಳ್ದ ಕೋ। ಮಳ ಶುಕಶಾಬಕಪ್ರಕರಮಂ ತೆಗೆದಂ ದಯೆಗೆಟ್ಟು ಲುಬ್ಧಕಂ॥ ೧೭೮

ಕಂ॥ ಪೆಱಪುಱಗರಿ ಚುಂಚುಗಳುಂ। ಮುಱಿದುವು ತಲೆನಡುಗುತಿರ್ದ್ದುವೆನ್ನದೆ ತರದಿಂ ಬಱಿಗೆಯ್ಯುತ್ತಿರ್ದನಾಯ್ದುಱು। ಗುಲಿಕರ್ವೇಡನಲ್ಲಿ ಮುದುಗಿಳಿಗಳುಮಂ॥ ೧೭೯

ವ॥ ಅಂತವೆಲ್ಲಮನೊಡನೊಡನೆ ಗಂಟಲಂ ಮುರಿದು ನೆಲಕ್ಕೀಡಾಡುತಿರ್ದ್ದ ಬೇಡನಂ ತೊಟ್ಟನೆ ನೋಡಿ ಪ್ರಾಣಾಪಹಾರಮುಮಪ್ರತೀಕಾರಮುಮಪ್ಪ ಕಷ್ಟಮುಮಂ ಕಂಡು ಭಯಂಗೊಂಡು॥ ೧೮೦

ಕಂ॥ ಬಸವಳಿದು ಕಣ್ಣನೀರಿಂ। ದೆಸೆಗೆಟ್ಟೆಲೆಮಗನೆ ನಿನ್ನನಿನ್ನಾ ರ್ಕ್ಕಾರಯ॥ ಕ್ಕೆ ಸಮರ್ಥರೆನುತ್ತಾಗ। ಳ್ಬಿಸುಸುಯ್ದಂ ನೋಡಿ ಜನಕನೆನ್ನಯ ಮೊಗಮಂ॥ ೧೮೧

ವ॥ ಅದಲ್ಲದೆಯುಂ.

ವೃ॥ ನಿನ್ನಯ ತಾಯನೊಯ್ವ ಪಡದೊಳ್ಜವನಕ್ಕಟ ನೋಡುಕಂದ ಬಂ। ದೆನ್ನುಮನಂತೆ ಕೂಡಿದೊಡನೊಕ್ಕಲು ಪೋಗಿಸನೇಕೆ ಬಯ್ತ್ಸನಂ॥

೧೭೮. ಗರಿವೊಯ್ದು—ರೆಕ್ಕೆಯನ್ನು ಬಡಿದುಕೊಳ್ಳುವ; ತುಪ್ಪುಳೊಡಚ್ಚುಱಿವ—ತುಪ್ಪುಳುಹುಟ್ಟುವ.

೧೭೯. ಬಱಿಗೆಯ್ಯುತ್ತಿರ್ದ್ದಂ—ಬರಿದು ಮಾಡುತ್ತಿದ್ದನು; ಅಱುಗುಲಿ—ಘಾತುಕ; ಕರ್ವೇಡ—ಕರಿಬೇಡ.

೧೮೧. ಬಸವಳಿದು—ಸೊಕ್ಕುಹೋಗಿ; ದೆಸೆಗೆಟ್ಟು—ಕಂಗಾಣದೆ; ಬಿಸುಸುಯ್ದಂ—ನಿಟ್ಟುಸಿರುಬಿಟ್ಟನು.

೧೮೨. ಒಯ್ವಪಡದೊಳ್—ತೆಗೆದುಕೊಂಡು ಹೋಗುವಕಾಲದಲ್ಲಿ; ಕೂಡಿದ

ನಿನ್ನನೆ ನೋಡಿ ಶೋಕಮನಡಂಗಿಸಿ ಬಾಳ್ಕೆಯೆ ಲೇಸೆನುತ್ತಮಿ । ರ್ಪ್ಪನ್ನೆಗ ಮಮ್ಮ ನಿನ್ನನೊಪಗೊಂಡು ಮುಳುಂಗುವ ಕಾಲವಾದುದೋ ॥ ೧೮೨

ವ ಎಂದುಸ್ಸೈರಿಸಲಾರದೆ.

ಕಂ॥ ಇಱುಕಿ ತೊಡೆಯಡೆಯೊಳೆನ್ನಂ । ಪಱಿವೆರಕೆಗಳಿಂದೆ ಮುಚ್ಚಿ ಮರೆಪದೆ ತಾತಂ । ಮಱುಗುತ್ತಿರ್ಪ್ಪಿನಮೆಯ್ದಿದ । ನಮಗುಳಿ ಕರ್ಬೇಡನೆನ್ನ ಪೊಳಲಿಂಗಾಗಳ್ ॥ ೧೮೩

ವೃ॥ ಅಡಸುವ ಕಾಳದಂಡ ಮೆರೆಗೊಳ್ವಸಿತೋರಗ ನೆಂಬ ಶಂಕೆನೂ । ರ್ಮಡಿಸಿರೆ ಕಾಱಪಮದಿಗಳ ಬಲ್ಲಣದಿಂ ಪೊಲಸಟ್ಟಿನಾರ್ದ್ರ ಜೀವ ॥ ಪ್ರಿಡೆಗಳ ಪ್ರುಣ್ಗಳಿಂ ತೊರೆದ ನೆತ್ತರಕಯ್ಯಡುಗಳ್ಕೆ ಸೀಟಿಸೆ । ಕಡೆಯಿಡೆ ಗಂಟಲಂ ಮುಱಿದನೊರ್ವ್ವಿಯ ನಿರ್ಘೃಣ ನೆನ್ನ ತಂದೆಯಂ ॥ ೧೮೪

ಕಂ॥ ಬೆಱೆತುಳಿದೆನಾಗಿಯುಂ ತನು । ಕಿಱಿದಾಗಿಯು ಮತ್ತಮಾಯುಮುಂಟಾಗಿಯು ಮೇ । ಣಱಿಯಂ ಕಾಣಂ ತಂದೆಯ । ಗಱಿಯೊಳಗಿರ್ದ್ದವನನೆನ್ನ *[ನಂದುನೃಶಂಸಂ] ೧೮೫

ವ॥ ಅಂತು ಜೀವಮಂ ಬಿಟ್ಟು ಗೋಣೆಳಲ್ವೆನ್ನ ತಂದೆಯಂ ಮರದ ಮೇಗಣಿಂ ನೆಲಕ್ಕೀಡಾಡಲಾನುಂ ತೊಡೆಯೆಡೆಯೊಳಿರ್ದ್ದಡ ಸಂದು ಸುಟ್ಟುರೆಯು ತರಗೆಲೆಯಂತೆ ತಿರ್ರನೆತಿರುಗಿ ಬೀಳ್ವಲ್ಲಿರುಂಕಿದೆರಂಕೆಯೊಳಗಣಿಂ

ಎನ್ನುವುದಂ ಎಂದು ಅನ್ವಯವು ; ಬಕ್ಕಲು ಪ್ರೋಗಿಸಂ—ಸಂಸಾರಸಹಿತವಾಗಿ ಕೊಲ್ಲಲಿಲ್ಲ; ಪೋಗಿಸಂ ಎಂಬುವದು ಪ್ರತಿಷೇಧಕ್ರಿಯೆ, ಅಮ್, ಎಂಬ ಆಖ್ಯಾತಪ್ರತ್ಯಯವು ಭೂತಾರ್ಥದಲ್ಲಿ ಬಂದಿದೆ ಶಮ ಸೂತ್ರ ೨೭೦. ಆಪಕೆಬಿಯ್ತಂ—ನಾನೇತಕ್ಕೆ ಮರೆಯಾದೆನು.

೧೮೩. ಪಱಿವೆರಕೆ—ಪರಕುರಕ್ಕೆ; ಮಱುಗುತ್ತಿರ್ಪ್ಪಿನಂ—ವ್ಯಸನಪಡುತ್ತಿರುವಷ್ಟರಲ್ಲಿ.

೧೮೪. ಮೆರೆಗೊಳ್ವ—ಆಹಾರವನ್ನು ತೆಗೆದುಕೊಳ್ಳುವ; ಪೊಲಸಟ್ಟ—ಕೊಳಚಾಗಿ; ಜೀವಡೆಗಳ ಪ್ರುಣ್ಗಂ—ಬಿಲ್ಲನಹುರಿಯನ್ನು ಎಳೆಯುವದರಿಂದುಂಟಾದ ಹುಣ್ಣುಗಳಿಂದ ; ಸೀಟಿಸುತ್ತೆ—ಸಿಬಿಕಿರಿಬಿಕೊಳ್ಳುತ್ತಿರಲು.

೧೮೫. ಬೆಱೆತು—ಸೆಡೆತುಕೊಂಡು.

*[ನಾನಿಸ್ತ್ರಿಂಸಂ]

ಸಿಡಿಲ್ದು ದೈವವಶದಿಂ ಗಾಳಿಯೊಳ್ ತೆರಳ್ದು ತರಗೆಲೆಯ ರಾಶಿಯೊಳ್ ಪೋಗಿ ಬಿರ್ದ್ದ ॥ ೧೮೬

ಕಂ ॥ ಕಳಿದಿರ್ದ್ದ ತಂದೆಯುಂ ಬಿಸು । ಟಳಲುಮ ನಿನಿಸರಿಯದೆಳ
ವೆಯೊಳ್ಪಾತಕನೇಂ ॥ ಪಳೆಯ ತರಗೆಲೆಗಳೊಳಗಿ । ರ್ದ್ದಳಿದೆಂ ಬಳನಿಳ
ನು ಕಾಣ್ಗುವೆಂಬೀಭಯದಿಂ ॥ ೧೮೭

ವ॥ ಅನ್ನೆಗಮಿತ್ತಲ್.

ಕಂ॥ ಇಳಿದು ಮರದಿಂದ ಮಾಗಳ್ । ಕೆಳಗೆಲ್ಲಂ ಪರೆವು ಬಿರ್ದ್ದ ಶು
ಕಸಂತತಿಯಂ ॥ ಗಳಗಳಿಸಿ ಕಟ್ಟಿ ನಡುಬೆ । ನ್ನಿಳವಿನೆಗಂ ಪೊತ್ತುಪೋದ
ನಾಮುದುಬೇಡಂ ॥ ೧೮೮

ವ॥ ಅಂತಾಬೇಡಂ ಬೇಡವಡೆಯುಂ ಬಳಸಂದು ಪೋಗೆವೋಗೆ.

ಕಂ॥ ತಂದೆ ಕಳಿದ ಳಲಬೇಗೆಯೊ । ಳಂ ದೂರದೆ ಬಿರ್ದ್ದದೊಂ
ದು ಕಡುಸೇದೆಯೊಳಂ ॥ ಬಂದೆನ್ನಂ ಪರವಶತೆಯೊ । ಳೊಂದಿಸಿದತ್ತಾಗಳಾ
ಪಿಪಾಸೋದ್ರೇಕಂ ॥ ೧೮೯

ವ ॥ ಅಂತಾಪಿಪಾಸೆ ಪುಟ್ಟಲೊಡಂ.

ಕಂ॥ ಅಱಿಯೆಂ ಪಾರಲ್ಬಾಯುಂ । ಬಱಬಱಬತ್ತಿತ್ತು ಪೋಪೆನೆಂ
ದೇಳಲ್ಪುಮವಾ ॥ ತಱಗೆಲೆ ಗಿಱುಕನೆ ಬೇಡಂ । ಪೊಱೆಗೆಯ್ದಿದನೆಂದು ಭಯ
ದೆಮಱುಗಿದೆನಾಗಳ್ ॥ ೧೯೦

ವ। ಮತ್ತಂ ಮೆಲ್ಲನೇಳ್ದು ದೆಸೆಗಳೆಲ್ಲಮಂ ನೋಡಿ ಪೊರ್ಬ್ಬರುಮುಂ ಕಾಣದಿರ್ದೆಯುಂ ನೀವಿಕೊಂಡು ನೀರ್ದ್ದಾಣಕ್ಕೆ ಪೋಗಲುದ್ಯೋಗಂಗೆಯ್ದು.

---

೧೮೭. ಅಳಲು—ದುಃಖ; ಎಳವೆ—ಬಾಲ್ಯ.

೧೮೮. ಇಳಿವಿನೆಗಂ—ಕುಗ್ಗುವಹಾಗೆ.

೧೮೯. ಕಡುಸೇದೆ—ಅತ್ಯಾಯಾಸ; ಪಿಪಾಸೋದ್ರೇಕಂ—ಹೆಚ್ಚಾದಬಾಯಾರಿಕೆ.

೧೯೦. ಪೊಱೆಗೆ—ಸಮೀಪಕ್ಕೆ.

ವೃ॥ ಗಜಿ ಪಾದಕ್ಕಿಲ್ಲ ಕಾಲುಂ ಬಲಿಯವು ನಡೆಯಲ್ಕೆಟ್ಟೆತೆಂಬಂತೆ ಮೂಗುಂ । ಮೊಱಿವನ್ನಂ ಮುಂದೆವುಗ್ಗುತ್ತೆ ಡೞಲದೊಗಗಾಂ ಬೀೞುತುಂ ಪಕ್ಕಗೂಡಾ ॥ ಗೊಱಗುತ್ತುಂಪ್ರೋಗಿ ಮಧ್ಯಾಹ್ನದ ಬಿಸಿಲೞುರಲ್ಕಣ್ಮಲರ್ಟ್ಟಿಸುದ್ಗುೞ್ । ಪ್ರೊಜಿಮುಟ್ಟೊಂದೊಂಪಸಟ್ಟುತ್ತಿರೆ ಪಿರಿಮುಮಳಲ್ದಿನ್ನೊಳಂ ತೆಂದೆನಾಗಳ್ ॥ ೧೯೧

ವೃ॥ ಬಸವಲ್ತೆಂತು ಮೆಸಿಪ್ಪವಸ್ಥೆಗಳ ನೆಯ್ದುತ್ತಿರ್ಪ್ಪನಂ ಜೀವಮಂ । ಬಿಸುಡಲ್ಜ್ಞೀವಿಗಪೇಕ್ಷೆ ಪುಟ್ಟದು ಪಲಂ ಪ್ರೋ ಜೀವದಿಂ ಬಿಟ್ಟಪೇಕ್ಷಿಸುವಂತಪ್ಪ *[ದೆಕಾ] ಗೆಸಿಂತು ಸಲೆ ತಾತಂ ದುಃಖಮೆಯ್ದಿದರ್ದ್ದಿ । ಲ್ಲಸು ವೆನ್ನಿಂ ಕೃಪೆಗೆಟ್ಟನಂ ಪೆರನದೋರ್ವ್ವಂ ಸತ್ತಪ್ರೋಲಿರ್ದ್ದನಂ ೧೯೨

ವೃ॥ ಎನ್ನಯ ತ್ರಾಯಿ ಸತ್ತೞಲನಾದವಡಂಗಿಸಿ ಮುಪ್ಪಿನೊಳ್ಮರ । ಲ್ದೆನ್ನನೆ ನೋಡಿ ತತ್ತಿ †[ವಿಡಿ] ದಿಂದುವರಂ ಪಿಡಿವಿರ್ದ್ದ ಯತ್ನದಿಂ ನಂ ನಡಪುತ್ತಮಿರ್ದ್ದದುವು ನೊರ್ಮ್ಮೆಯೆ ದ ‡[ಲ್ಮರೆವೀ] ಕೃತಘ್ನನ । ಪ್ಪೆನ್ನಸು ನಿರ್ಘೃಣಂ ಬಳಸಲಲ್ಕಣಮಾಱಿದು ತಂದೆ ಸಾವಿಯುಂ ॥ ೧೯೩

ಕಂ॥ ಅತಿಕಷ್ಟಮಪ್ಪವಸ್ಥಾ । ತತಿಯುಂ ಮರೆಯಿಸಿ ಜಳಾಭಿಲಾಷೆಯ ನೀಜೀ ॥ ವಿತತೃಷ್ಣೆ ಮಾಡಿತೀಜೀ । ವಿತಾಶೆಯುಂ ಬಿಟ್ಟು ಕಷ್ಟಮಾವುದುಮುಂಟೇ ॥ ೧೯೪

---

೧೯೧. ಬೆಟ್ಟೆತೆಂಬಂತೆ-ಗಟ್ಟಿಯಾಗಿದೆ ಅನ್ನುವಹಾಗೆ; ಪಕ್ಕಗೂಡಾಗಿ - ರಕ್ಕೆ ಮುದುರಿಕೊಂಡು; ಆೞುರಲ್—ಆವರಿಸಿಕೊಳ್ಳಲು; ನಟ್ಟೆ—ಸ್ತಬ್ಧವಾಗಲು.

೧೯೨. ಬಸವಲ್ತು—ಶಕ್ಯವಲ್ಲ: ಪ್ರೋ—ತೆಗೆ: ಜೀವದಿಂಬಿಟ್ಟಪೇಕ್ಷಿಪಂತಪ್ಪದೆ—ಜೀವ ಹೊರತಾಗಿ ಮತ್ತೊಂದನ್ನು ಅಪೇಕ್ಷಿಸುವಂತೆ ಆದೀತೆ; ತಾತಂಸಲೆ—ತಂದೆ ಸಾಯಲು; ಪೆರನದೋರ್ವ್ವಂಸತ್ತಪ್ರೋಲಿರ್ದ್ದನಂ—ದೂರದೋ ಒಬ್ಬ ಅನ್ಯ ಪುರುಷ ಸತ್ತರೆ ಹ್ಯಾಗೋ ಹಾಗಿದ್ದಂಥಾ; ಎನ್ನಿಂ—ನನಗಿಂತಲೂ; ಕೃಪೆಗೆಟ್ಟನಂ—ಕರುಣವಿಲ್ಲದವನನ್ನು; ಕಾಣೆಂ—ಕಾಣೆನು.

೧೯೩. ಮರಲ್ದ—ವಿಕಸಿತನಾದ ಅಂದರೆ ಹುಟ್ಟಿದ ಎಂಬಭಿಪ್ರಾಯವು; ತತ್ತಿವಿಡಿದು—ಮೊಟ್ಟೆಮೊದಲುಮಾಡಿಕೊಂಡು; ಆದಂ+ಅಡಂಗಿಸಿ=ಆದವಡಂಗಿಸಿ. ಶಮ. ಸೂ ೧೦೩.

*[ದುಗಾ] †[ವೊಡೆ] ‡[ಲ್ಮರುದಿ]

ಕಂ॥ ಪೆಱತೇಂ ನಿಷ್ಪರ್ಣಾನೆಂಬುದ। ನಱಿವೆಂ ಪಿತೃಮರಣ *[ಜಾತ ದುಃಖಮನೀಗಳ್] ॥ ಮಱೆದು ಮನಂ ನೀಗ್ಗ್ರತಿಯು। ಲ್ಕಱುಗಿದಪುದು ಕುಡಿವೊಡೆನಗೆ ನೀರುಂ ದೂರಂ ॥ ೧೯೫

ವೃ॥ ಅದೆ ದೂರಂ ನಸುಗೇಳಲಾಯ್ತು ಜಳದೇವೀ ನೂಪುರಾರಾವದಂ । ಪದೆ ಹಂಸಸ್ವನ ಪಾರಿ ಬಂದುವದೆ ನಾನಾಸಾರಸೋತ್ತಾರ ಸಂ ॥ ಮದಕೋಳಾಹಳಮೆಯ್ದೆವ †[ತ್ತದುವೆತಾನುಲ್ಲಾಸಿ] ದಿಗ್ದೇವತಾ । ವದನೋತ್ಸರ್ಪ್ಪಣವಿಪ್ರಕರ್ಷವಿರಳಂ ಪಂಕೇಜಿನೀಸಾರಭಂ ॥ ೧೯೬

ವ॥ ಅದಲ್ಲದೆಯುಂ.

ಕಂ॥ ಕಱುಪ್ರೊತ್ತಾದುದು ರವಿಯುಂ । ನಡುವಗಲೊಳ್ಕಿಂದು ಕೆದರಿದಂ ಕರತತಿಯಿಂ ॥ ಕಿಡಿಗಳನೆನೆ ಬಿಸುವಿಸಿಲುಂ । ಸುಡುತಿರೆ ನೀರಡಿಕೆ ತಿಣ್ಣಮಾದತ್ತಾಗಳ್ ॥ ೧೯೭

ವೃ॥ ಬಟ್ಟೆಯುದಳದಾವೆ ಮೊದಲಾದುದು ಪೋದಪೆನೆಂಬ ಮೆಯ್ಜ್ಞಮಂ । ಗೆಟ್ಟು ಪಿಪಾಸೆಯಿಂ ಪೊಡರಲಾರ್ತ್ತಪುದಿಲ್ಲೆರ್ದೆಗೆಟ್ಟೆನೀಗಳೀ ॥ ದಿಟ್ಟಿ ಮರಳ್ದು ನಂದಿದಪುದೆನ್ನುಮ ನಾನರಿಧಪ್ಪೆನಿಲ್ಲ ಪೋ । ಜೆಟ್ಟಿದನಾಗಿ ತಾನೆ ವಿಧಿಕೊಂದಪನೀಗಳೆ ಸಾಯುದಿದೆರ್ದ್ದೊಡಂ ॥ ೧೯೮

ವ॥ ಎಂದು ಚಿಂತಿಸುತ್ತಿರೆಯಿರೆ.

ಕಂ॥ ಪ್ರತ್ಯಾಸನ್ನದೊಳಪ್ಪುದು । ಯತ್ಯಾಶ್ರಮ ಮಲ್ಲಿ ನೆಗಳ್ದ ಜಾಬಾಲಿಗಳಿಂ ॥ ಬತ್ತ್ಯುತ್ತಮ ಯತಿಪತಿಗಳ । ಪತ್ಯಂ ‡[ಹಾರೀತನಾಮನಾ ವನದೊಳ್ವರ್ಂ] ॥ ೧೯೯

೧೯೬. ಉತ್ತಾರ—ಬಹಳಗಟ್ಟಿಯಾದ.

೧೯೮. ದಾವದಾವೆ—ಘೋರವೆಂಬವೊಗೆ; ಪೊಡರಲಾರ್ತ್ತಪುದಿಲ್ಲ—ಚಲಿಸಲು ಸಮರ್ಥವಾಗಲಿಲ್ಲ; ಮರಳ್ದು—ಕಣ್ಣುಗುಡ್ಡೆ ಮೇಲಕ್ಕೆ ಹೋಗುವಹಾಗೆ ತಿರುಗಿ; ನಂದಿದಪುದು—ಕಾಂತಿ ಹೀನವಾಗುವದು; ಜೆಟ್ಟಿದನಾಗಿ—ಕ್ರೂರನಾಗಿ.

೧೯೯. ನೆಗಳ್ದ—ಪ್ರಸಿದ್ಧನಾದ; ಆನನದ—ಆವನದಲ್ಲಿ;

*[ಶೋಕದುಃಖಮನೀಗಳ್] †[ದೆಸೆಯಿಮೊಲ್ಲಾಸಿ]

‡[ಹಾರಿತ ಕುಮಾರನಾವನದೊಳ್ವರ್ಂ]

ಕಂ॥ ಸಮಸಮಸರ್ಕೆಲಗೊಳ್ಮುನಿ । ಕುಮಾರರೀರ್ವರ್ಬ್ಬರುತ್ತಮಿರೆ *[ಬಹುವಿದ್ಯಂ] ॥ ಕಮಳಾಕರಮಂ ಮೀಯು । ಲ್ಕುಮರಂ ಬಂದಂ ಸನತ್ಕುಮಾರನ ದೊರೆಯಿಂ ॥ ೨೦೦

ಕಂ॥ ಇದುರಬಿಂಬದಿ ನೊಗೆವ । ತ್ತಿದು ಮಿಂಚಿನ ಗೊಂಚಲಿಂದೆ ಮೇಣ್ಮ್ಮಾಡಿದುದಿಂ । ತಿದು ಕನಕದ್ಯುತಿಯಿಂ ಪೂ । ಸಿದುದೆನೆ ಪೊಳೆದತ್ತು ಮೂರ್ತಿ ತನ್ಮುನಿವರನಾ ॥ ೨೦೧

ಕಂ॥ ಎಳೆವಿಸಿಲೆಱಗಿದುದೋ ಬನ । ದೊಳಗೆನೆ ಮೆಯ್ವೆಳಗು ಬಳಸೆ ಖಾಂಡವಮಂ ತ ॥ ಳ್ತಳುರುತಿರೆ ವಟುಕವೇಷಮ । ನೆಳಸಿದ ಪಾವಕನ ನಿಸಿಸನನುಕರಿಸಿದ್ದಂ ॥ ೨೦೨

ವ॥ ಅದಲ್ಲದೆಯುಂ.

ಕಂ॥ ಬಳೆದು ಪೊರಮುಯ್ಯುವರೆಗಂ । ತಳೆದು ಕನತ್ಕನಕಪಿಂಗರುಚಿಯಂ ತೀ ॥ ರ್ಥಾವಳಿಜಲಪೂತಂಗಳ್ಕ । ಣ್ಗೊಳಿಪುವು ಮುನಿವರನ ಮಿಸುಪ ಕೆಂಜಡೆಮುರುಗಲ್ ॥ ೨೦೩

ಕಂ॥ ಬಿಸುಟಂ ಸಮಸ್ತವಿಷಯದ । ದೆಸೆಯಂ ನಿಶ್ಚಯದೆ ಮೂಱುಸೂಳ್ವರಮೆಂಬಂ ॥ ತೆಸೆದತ್ತು ನಾಡೆಯುಂ ಪೆಱ । ನೊಸಲೊಳ್ಭಸಿತತ್ರಿಪುಂಡ್ರಕಂ ಮುನಿವರನಾ ॥ ೨೦೪

ಕಂ ॥ ಗಗನಗಮನಕ್ಕೆ ಹಂಸಂ । ಮೊಗಸಿದುದೆನೆ ನಿಮಿರ್ದ ಕೊರಳ ನುಳ್ವೆಳಗಿನ ಗುಂ ॥ ಡಿಗೆ ಮುನಿಯ ಕಯ್ಯೊಳೆಸೆದುದು । ಜಗಕೆಲ್ಲಂ ಸ್ವರ್ಗಮಾರ್ಗಮಂ ತೋಱುವವೋಲ್ ॥ ೨೦೫

೨೦೦. ಕಮಲಾಕರಮಂ—ಕಮಲಾಕರಕ್ಕೆ ; ದೊರೆಯಿಂ—ಸಾಮ್ಯದಿಂದ.

೨೦೨. ಅಳುರುತಿರೆ—ಆವರಿಸುತ್ತಿರಲು.

೨೦೩. ಪೊರಮುಯ್ಯು—ಹಿಮ್ಮಡಿ.

೨೦೪. ಮೂಱುಸೂಳ್ವರಂ—ಮೂರು ಆಸೆಯವರಿಗೂ ; ಬಿಸುಟಂ—ಬಿಟ್ಟನು, ಅಂದರೆ ಖಂಡಿತವಾಗಿ ಬಿಟ್ಟನೆಂಬಭಿಪ್ರಾಯವು.

೨೦೫. ಮೊಗಸಿದುದೆನೆ—ಉಪಕ್ರಮಿಸಿತೋ ಎಂಬುವಹಾಗೆ ; ನಿಮಿರ್ದ—ಮೇಲಕ್ಕೆ ನೀಡಿದ ; ಗುಂಡಿಗೆ—ಕಮಂಡಲು.

*[ಬಹುಶಿಷ್ಟಂ]

ಕಂ॥ ಉರದ ಬರಿಯೆಲುವನೆಣಿಪಂ । ತಿರಲೆಲರಿಂ ನಡುಗುತಂ ತಪಸ್ವಿಯ ಕೊರಲೊಳ್ ॥ ಕರಮೆಸೆದುತೋಱುವುದು ತಾ । ವರೆದಂಟಿನ ವಿಸುಪನೂಲ ಪೊಸಜನಿವಾರಂ ॥ ೨೦೬

ಅಗುಳ್ದು ತುದಿಗೊಂಬಿನೊಳ್ಕೆ । ಲ್ಲಗೆ ಪೊತ್ತಭಿಷೇಕ ಮೃತ್ತಿಕೆಯನೊಡಸಂದ । ತ್ತಗಲದಿನಿಸುಂ ತಪೋವನ । ಮೃಗವಾ ಮುನಿವರನೊಳಾದ ಪರಿಚಯದಿಂದಂ ॥ ೨೦೭

ವ॥ ಅದಲ್ಲದೆಯುಂ ಗಿರಿಯಂತೆ ಮೇಖಳಾಳಂಕೃತನುಂ ದ್ರೋಣನಂತೆ ಸಹಾಯಕೃಪಾನುಗತನುಂ ನಕ್ಷತ್ರಚಕ್ರದಂತೆ ನಾನಾಮೃಗಕೃತ್ತಿಕಾಶ್ಲೇಷೋಪಶೋಭಿತನುಂ ಘರ್ಮಸಮಯದಂತೆ ಕ್ಷಪಿತದೋಷನುಂ ಹರಿಯಂತಪಗತನರಕಭಯನುಂ ನೀತಿಯುಳ್ಳರಸನಂತೆ ಗೂಢಮಂತ್ರಸಾಧನಕ್ಷಯಿತವಿಗ್ರಹನುಂ ವನಚರನಾಗಿಯುಂ *[ಮಹಾಲಯಪ್ರವೇಶನುಂ] ಅಸಂಯಮನಾಗಿಯುಂ ಮೋಕ್ಷಾರ್ಥಿಯುಂ ಸಾಮಪ್ರಯೋಗನಾಗಿಯುಂ ಗೃಹೀತದಂಡನುಂ ಸುಪ್ತನಾಗಿಯುಂ ಪ್ರಬುದ್ಧನುಂ ವಿಶಾಲಲೋಚನದ್ವಯನಾಗಿಯುಂ ತ್ಯಕ್ತವಾಮಲೋಚನನುಮೆನಿಸಿದ ಮುನಿಕುಮಾರಂ ಬರುತಿರ್ದ ಬಟ್ಟೆಯೊಳ್ ಕಂಠಗತಪ್ರಾಣನಾಗಿರ್ದೆನ್ನಂ ಕಂಡು ॥ ೨೦೮

ಕಂ॥ ಗುಣಿಗಳ ಮನಮೆಂದುಮಕಾ । ರಣದೊಳೆ ಕರುಣಾರಸಾರ್ದ್ರಮಾರೊಳಮದುಕಾ ॥ ರಣದಿಂದೆ ಮುನಿಕುಮಾರಾ । ಗ್ರಣಿ ಕರುಣಿಸಿ ಕೆಳದ ಮುನಿಕುಮಾರಗೆಂದಂ ॥ ೨೦೯

---

೨೦೭. ಅಗುಳ್ದು—ಅಗೆದು ; ಒಡಸಂದತ್ತು—ಸಂಗಡ ಬಂತು,

೨೦೮. ಮೇಖಲಾ—ತಪ್ಪಲು, ಉಡಿದಾರ ; ಕೃಪಾನುಗತ—ಕೃಪಾಚಾರ್ಯನಿಂದಕೂಡಿದ, ದಯೆಯಿಂದಕೂಡಿದ ; ಮೃಗಕೃತ್ತಿಕಾ—ಮೃಗಚರ್ಮ ; ದೋಷ—ರಾತ್ರಿ, ಪಾಪ ; ಗೂಢಮಂತ್ರ—ಗುಪ್ತಾಲೋಚನೆ ; ವಿಗ್ರಹ—ಯುದ್ಧ, ಶರೀರ ; ಅಸಂಯಮ—ಬದ್ಧನಲ್ಲದವನು ; ಮೋಕ್ಷ—ಬಿಡುಗಡೆ, ಕೈವಲ್ಯ ; ಸಾಮ—ಸಾಮೋಪಾಯ, ಸಾಮವೇದ ; ದಂಡ—ದಂಡೋಪಾಯ, ವೇಣುದಂಡ ; ಸುಪ್ತ—ಸಮೀಚೀನವಾದಜಡೆಯುಳ್ಳ, ಮಲಗಿರುವ.

*[ಮಹಾರ್ಘಪ್ರವೇಶನುಂ].

ವೃ॥ ತಲೆವಾಗುತ್ತಿರ್ದ್ದುವೆಂಬಂತೆಱಪ ಲತೆಗಳಿಂದರ್ಚಿಸುತ್ತಿರ್ದ್ದುವೆಂಬಂ । ತಲರ್ಗಳ್ತಳ್ತಲ್ಲಿಗುತ್ತಿರ್ದ್ದಪಳ ತರುನಿಕಾಯಂಗಳಿಂ ಕೂಡೆಬದ್ಧಂ । ಜಳಿಯಾಗುತ್ತಿರ್ದ್ದುವೆಂಬಂತೆಸೆವ ಕಿಸಲಯಾಬದ್ಧ *[ಸಂಛನ್ನಶಾಖಾ । ಕುಲದಿಂ] ಚೆಲ್ವಾದ ಖುಷ್ಯಾಶ್ರಮದ ರಚನೆಯಂ ನೋಡುತುಪೋದೆನಾಗಳ್ ॥ ೨೨೧

ವ॥ ಅಂತುಟಜಾಂಗಣದೊಳ್ ಪರಪಿದ ಪಲತೆಱದ ಫಲಂಗಳಿಂ ಶ್ರುತಿಮುಖರಮುಖಂಗಳಪ್ಪ ಶುಕಶಾರಿಕೆಗಳಿಂ ಮುನಿಕುಮಾರಕರ ನೆಳಸಿಮೆಲ್ಲಮೆಲ್ಲನೆ ನೆಕ್ಕುವೆಳೆವುಲ್ಲೆಗಳಿಂ ಜರದಂಧತಾಪಸರ ಕಯ್ಯಂ ಪಿಡಿದೆಡಪಲೀಯದೆ ನಡೆಯಿಸುವ ಚಪಳಮರ್ಕಟಂಗಳಿಂ ಮುನಿಜನಂಗಳ್ಗೆ ಕೋಡುಗಳಿಂ ಕಂದಮೂಲಫಲಂಗಳನಗುಳ್ದು ಕೊಡುವ ವನಹರಿಣಂಗಳಿಂ ಕರಪುಷ್ಕರಂಗಳಿಂ ತಂದು ಪೂಗಿಡುಗಳ್ಗೆ ನೀರೆಱೆವ ಮಱಿಯಾನೆಗಳಿಂ ಮುನಿಕುಮಾರರ್ಗ್ಗೆ ಹಂದಿಗೆಡ್ಡೆಯಂ ದಾಡೆಯಿಂದಗುಳ್ದು ನೀಡುವ ವನವರಾಹಂಗಳಿಂ ತಮ್ಮೆಱಂಕೆಯ ಗಾಳಿಯಿಂ ಪೊಗೆಯಂ ನಂದಿಸಲೀಯದೆ [ಹೋಮಾನಲಪ್ರಜ್ವಲನಮನೆಸಗುವ] ಸೋಗೆನವಿಲ್ಗಳಿಂ ಸೊಗಯಿಸುವುದನ್ತುಮಲ್ಲದೆಯುಂ॥

ಕಂ॥ ಚರುಚಾರುಗಂಧದೊಳ್ಮೆ । ಯ್ವೆರೆದು ಪುರೋಡಾಶಪುಣ್ಯ †[ತರಪರಿಮಳದೊಳ್] ಪೊರಳ್ದಾ ॥ ಜ್ಯಾಹುತಿರವದೊ । ಳ್ನೆರೆದೆಸೆವುದು ಪಾವನಂತಪೋವನಪವನಂ ॥ ೨೨೩

---

೨೨೧. ಅಲರ್ಗಳ್ + ತಳ್ತು + ಅಲ್ಲಿ + ಉಗುತ್ತಿರ್ದ್ದ; ಅಲ್ಲಿ—ವಿಂಧ್ಯಾಟವಿಯಲ್ಲಿ; ಅಲರ್ಗಳ್—ಪುಷ್ಪಗಳು; ತಳ್ತು—ಸಾಂದ್ರವಾಗಿ; ಉಗುತ್ತಿರ್ದ್ದ—ಬೀಳುತ್ತಿದ್ದ; ತರುನಿಕಾಯಂಗಳಿಂ—ವೃಕ್ಷಸಮೂಹದಿಂದ, ಯಾವ ವೃಕ್ಷಗಳ ದೆಸೆಯಿಂದ ಅಲರ್ಗಳ್ ಉಗುತ್ತಿದ್ದವೊ ಆ ವೃಕ್ಷಗಳಿಂದ ಎಂದಭಿಪ್ರಾಯವು; ಉಗುತ್ತಿರ್ದ್ದ ಎಂಬಲ್ಲಿ ಅಪಾದನಾರ್ಥದಲ್ಲಿ ಕೃ ತ್ಪ್ರತ್ಯಯ ಬಂದಿದೆ; ಶಬ್ದಾನುಶಾಸನ ಸೂತ್ರ. ೫೬೩.

೨೨೨. ಪರಪಿದ—ಹರಡಿದ; ನಕ್ಕುವ—ನೆಕ್ಕುವ; ಎಡಪಲೀಯದೆ—ಎಡವಗೊಡದೆ; ಹಂದಿಗೆಡ್ಡೆ—ಕೊನ್ನಾರಿಯಗೆಡ್ಡೆ; ನೀಡುವ—ಕೊಡುವ; ಸೋಗೆನವಿಲ್—ಗಂಡುನವಿಲು.

೨೨೩. ಪೊರೆದು—ವ್ಯಾಪ್ತವಾಗಿ; ನೆರೆದು—ಕೂಡಿ.

*[ದಿಂದಾಕಳಿತಂ] †[ತರುಮಂಡಲದೊಳ್)

ವೃ॥ ಜಲರುಹಬೀಜರಾಜಿಗಳ ನಾಱುವ ಪರ್ಣಕುಟೀರಕಂಗಳಂ ।
ನಿಲಿಸುವ ದಂಡಮೊತ್ತುವ ಮೃಗಾಜಿನಮಂ ಪೊಲುತಿರ್ಪ ಮುಂಜಮೇ ।
ಖಲೆಗಳ ನೊಪ್ಪಮಾಡುವ ಸಮಿತ್ಕುಶಮಂ ತರಮೋಪ ಧೌತವ । ಲ್ಕಲಮ
ನಲುಂಬುವ ಕ್ಷಮಣಿಯಂ ಸಮೆಮೀವ್ಯವಸಾಯಮೆತ್ತಲುಂ ॥ ೧೦೪

ವೃ॥ ಅತಿಥಿಯನಾದರಿಪ್ಪ ಪಿತೃದೈವಮನರ್ಚಿಪಧರ್ಮಶಾಸ್ತ್ರಸಂ।ಗತಿಗ
ಳೊಳಿರ್ಪ ಯಜ್ಞವಿಧಿವೇಳ್ವ ಪುರಾಣಮನೋದುವಾಗಮ । ಪ್ರತತಿಗಳಂ ವಿ
ಚಾರಿಸುವ ತತ್ವನಿರೀಕ್ಷಣೆಗೆಯ್ವ ಯೋಗದು । ನ್ನತಿಕೆಯ ನಪ್ಪುಗೆಯ್ವ ಮು
ನಿಸಂಘದಿ ನೊಪ್ಪುವುದಾ ತಪೋವನಂ ॥ ೧೦೫

ವ॥ ಮತ್ತಮಸುರಾರಿಯಂತೆ ಪ್ರಕಟಿತಹರಿವರಾಹಮುಂ ಸಾಂಖ್ಯ
ದಂತೆ ಕಪಿಳಾಧಿಷ್ಠಿತಮುಂ ಉದಯನನಂತಾನಂದಿತವತ್ಸಕುಳಮುಂ ಸಮು
ದ್ರದಂತೆ ವನಗಹನಮಧ್ಯಸುಪ್ತಹರಿಯುಂ ಮಾತಂಗಕುಳದೂಷಿತಮಾ
ಗಿಯು ಮತಿಪವಿತ್ರಮು ಮುಲ್ಲಸಿತಧೂಮಕೇತುಶತಮಾಗಿಯುಂ ಪ್ರಶಾಂ
ತೋಪದ್ರವಮುಂ ಪರಿಪೂರ್ಣದ್ವಿಜರಾಜಸನಾಥಮಾಗಿಯುಂ ತರುಗಹನಾಂ
ಧಕಾರಿತಮು ಮಪ್ಪುದನ್ತು ಮಲ್ಲದೆಯುಂ ॥ ೧೦೬

ಕಂ॥ ಅಸವಸದಿಂ ಕಲಿಕಾಲದ । ದೆಸೆಯುಂ ಮೊದಲಾಗಿ ಪೊರ್ದಲಱಿ
ಯದು ಮಱೆದುಂ ॥ ಪುಸಿಯೆಂತುಂ ಕಂಡಱಿಯದು । ಕುಸುಮಾಸ್ತ್ರಂ
ಪೊರ್ದಿಯಱಿಯ ನಾಮುನಿಪದಮಂ ॥ ೧೦೭

---

೧೦೪. ಕುಟೀರಕಂಗಳಂ—ಗುಡಿಸಲುಗಳನ್ನು; ಪೊಲುತಿರ್ಪ—ಹೊಲೆಯು

ತ್ತಿರುವ; ಅಲುಂಬುವ—ತೊಳೆಯುವ.

೧೦೬. ಕಪಿಲಾಧಿಷ್ಠಿತಂ—ಕಪಿಲ ಋಷಿಯಿಂದ ಸ್ಥಾಪಿಸಲ್ಪಟ್ಟದ್ದು, ಗೋವಿ

ಶೇಷಗಳಿಂದ ಆಶ್ರಯಿಸಲ್ಪಟ್ಟದ್ದು; ವತ್ಸಕುಲ—ವತ್ಸರಾಜನವಂಶ, ಕರುಗಳಗುಂಪು; ವನ—ನೀರು, ಅರಣ್ಯ; ಹರಿ—ವಿಷ್ಣು, ಸಿಂಹ; ಮಾತಂಗ—ಆನೆ, ಅಂತ್ಯಜರು; ಧೂಮಕೇತು—ಅಗ್ನಿ, ಬಾಲಚುಕ್ಕಿ; ದ್ವಿಜರಾಜ—ಚಂದ್ರ, ಬ್ರಾಹ್ಮಣಶ್ರೇಷ್ಠ.

೧೦೭. ಕಲಿಕಾಲದದೆಸೆ—ಕಲಿಯಸಂಬಂಧಿ; ಅಸವಸ—ಸಂಭ್ರಮ; ಪೊ

ರ್ದಲಱಿಯದು—ಸೇರಲಾರದು.

ವ॥ ಮತ್ತಂ ಮಲಿನತೆ ಹೋಮಧೂಮದೊಳ್ ಮುಖರಾಗಂ ಗಿಳಿಗಳೊಳ್ ತೀಕ್ಷ್ಣತ್ವಂ ಕುಶಾಗ್ರಂಗಳೊಳ್ಸುಚಳತ್ವಂ ಕದಳೀವನಂಗಳೊಳ್ ನಯನರಾಗಂ ಕೋಕಿಲಂಗಳೊಳ್ ಕಂಠಗ್ರಹಣಂ ಕಮಂಡುಲಂಗಳೊಳ್ ಸ್ತನಸ್ಪರ್ಶನಂಹೋಮಧೇನುಗಳೊಳ್ ವಸುಸಂಕೀರ್ತನಂ ದಿವ್ಯಕಥೆಗಳೊಳ್ ರಾಮಾನುರಾಗಂರಾಮಾಯಣದೊಳ್ ಭ್ರಮಂ ಹೋಮಾಗ್ನಿ ಪ್ರದಕ್ಷಿಣಂಗಳೊಳ್ ಮುಖಭಂಗವಿಕಾರಂ ಜರೆಯೊಳ್ ಶಕುನಿವಧಂ ಭಾರತದೊಳ್ ವಾಯುಪ್ರಲಪಿತಂ ಪುರಾಣದೊಳ್ ದ್ವಿಜಪತನಂ ವಯಃಪರಿಣತಿಯೊಳ್ ಜಾಡ್ಯ ಮುಪವನಶ್ರೀಖಂಡತರುಷಂಡಂಗಳೊಳ್ ನೃತ್ಯಪಕ್ಷಪಾತಂ ನವಿಲ್ಗಳೊಳ್ ಗೀತವ್ಯಸನಂ ಮೃಗಂಗಳೊಳ್ ಭೋಗಂ ಭುಜಗಂಗಳೊಳ್ ಶ್ರೀಫಳಾಭಿಲಾಷಂ ಕಪಿಗಳೊಳ್ ಅಧೋಗತಿ ಬೇರ್ಗಳೊಳಲ್ಲದೆ ತನ್ನೊಳಿಲ್ಲೆನೆಸಿಬೇಱೊಂದು ಬ್ರಹ್ಮಲೋಕದಂತಿರ್ಪುದನ್ತುಮಲ್ಲದೆಯುಂ॥೨೮

ವೃ॥ ತಳಿರ್ಗಳಱುಂಬಿನೊಳ್ತರದೆ ಪೇರಿದ ಕೃಷ್ಣಮೃಗಾಜಿನಂಗಳಿಂ। ಜಳಕಲಶಂಗಳಿಂಮುನಿಕುಮಾರಿಯರಿಕ್ಕಿದಪಿಷ್ಟಚರ್ಚೆಯಿಂ॥ ಬಳಸಿಯುಮೇಣಶಾಬತತಿ ನೀರುಣೆ ಕಣ್ಗೊಳಿಪಾಳವಾಳಮಂ। ಡಳದಿ ಸದೊಂದು ಮುಂದೆಸೆದು ತೋಱಿದುದಾಗಳಶೋಕಭೂರುಹಂ॥ ೨೯

ವ॥ ಮತ್ತಂ ಗೊಮಾಯಾವಲಿಪ್ತಭೂತಲಮುಂ ಕುಸುಮೋಪಹಾರರಮಣೀಯಮುಂ ವಿಸ್ತೀರ್ಣತರಾವಕಾಶಮುಮೆನಿಸಿದ ರಕ್ತಾಶೋಕತರುವಿನ ತಣ್ಣೆಳಲೊಳ್॥ ೩೦

ವೃ॥ ಕುಳಶೈಳವ್ರಾತದಿಂದಂ ಬಳಸಿದ ಕನಕಕ್ಷ್ಮಾಧರೇಂದ್ರಂ ಸಮುದ್ರಾ। ವಳಿಯಿಂ ಸುತ್ತಿರ್ದ ಲೋಕಂ ಹುತವಹತತಿಯಿಂ ವೇಷ್ಟಿಸಿರ್ದಧ್ವರಂ ಪ್ರ॥ ಜ್ವಳಿತಾರ್ಕಾನೀಕದಿಂದಂ ಬಳಸಿದ ಗಗನಾಭೋಗಮೆಂಬಂದದಿಂ ಕ। ಣ್ಗೊಳಿಸುತ್ತಂ ಯೋಗಿವೃಂದಾರಕರ ನಡುವೆ ಜಾಬಾಲಿ ಯೋಗೀಂದ್ರನಿರ್ದಂ॥ ೩೧

---

೨೯. ತಳಿರ್ಗಳಱುಂಬಿನಲ್ಲಿ—ಚಿಗುರಿನ ಒತ್ತಿನಲ್ಲಿ; ತರದೆ—ಸಾಲಾಗಿ; ಪೇರಿದ—ಹೇರಿದ.

೩೦. ತಣ್ಣಿತು+ನೆಳಲ್=ತಣ್ಣೆಳಲ್; ಇಲ್ಲಿ ಉತ್ತರಪದದ ಆದಿಯನಕಾರಕ್ಕೆ ಣಕಾರ ಬಂದಿದೆ; ಶಮ. ಸೂ. ೧೫೪.

ವ॥ ಮತ್ತಂ ಶಾಪಭೀತೆಯಂತೆ ಕಂಪಿತದೇಹೆಯುಂ ಪ್ರಣಯಿನಿಯಂತೆ ವಿಹಿತಕೇಶಗ್ರಹೆಯುಂ ಕ್ರುದ್ಧೆಯಂತೆ ಕೃತಭ್ರೂಭಂಗೆಯುಂ ಪ್ರಸಾಧಿತೆಯಂತೆ ಪ್ರಕಟಿತತಿಳಕೆಯುಂ ಗೃಹೀತವ್ರತೆಯಂತೆ ಭಸ್ಮಪಾಂಡುರೆಯುಮೆನಿಸಿದ ಜರೆಯಿಂದೆ ಧವಳವಿಗ್ರಹನಾಗಿರ್ದನನ್ತು ಮಲ್ಲದೆಯುಂ ॥ ೨೩೨

ಕಂ॥ ಯತಿಗಳನನೇಕರಂತ। ನ್ನತಪದೆ ಗೆಲ್ದೆತ್ತೆ ಪೊಳೆವ ಧರ್ಮಪತಾಕಾ ॥ ತತಿಯೆಂದದೆ ಸೊಗಯಿಸಿದುವು । ಯತಿಪತಿಯ ಜರಾತಿಧವಳಮೆನಿಸಿದಜಡೆಗಳ್ ॥ ೨೩೩

ತ್ರಿಪಥಗೆಯ ಮೂಱುಪೊನಲಿಂ। ದೆಪ್ಪೊಳೆವ ಹಿಮಗಿರಿಶಿಲಾ ತಳಕ್ಕೆಣೆಯೆನಿಸಿ ॥ ತ್ತು ಪರಚಿತ ರುಚಿರಭಸ್ಮ । ತ್ರಿಪುಂಡ್ರಲಾಂಛಿತಲಲಾಟವಾಮುನಿವರನಾ ॥ ೨೩೪

ಥಳಥಳಿಸಿ ಪೊಳೆವ ಚಂದ್ರನ। ಕಳೆಗಳ್ಕವಿದಿರ್ದುವೆರಡಿವೆಂಬಿನೆಗಂಕ ॥ ಣ್ಗಳಮೇಲೆ ಕವಿದು ತೋಱುವು । ವಳಿಶಿಥಿಲಭ್ರೂಲತಾಯುಗಂ ಮುನಿವರನಾ ॥ ೨೩೫

ವೃ॥ ಪೆಱತೇಂಸತ್ಯಪ್ರರೋಹಂ ತುಱುಗಿದಪುದು ವಿದ್ಯಾಗುಣಾನೀಕಮಾಮ । ಮಿಱುಗುತ್ತಿರ್ದತ್ತು ಕಾರುಣ್ಯದ ರಸದ ಪೊನಲ್ಪರ್ವುತಿರ್ದತ್ತಿದೆಂಬೀ ॥ ತೆಱದಿಂ ದಂತಾಂಶುಜಾಳಂ ಪಸರಿಸೆ ಮುಖದಿಂದಭ್ರಗಂಗಾ ಪ್ರವಾಹಂ । ಪೊಱಪೊಣ್ಮುತ್ತಿರ್ದಪನ್ನವ್ರತಿಯ ಮಹಿಮೆಯುಂ ತಾಳ್ದದಂ ತಾಪಸೇಂದ್ರಂ ॥ ೨೩೬

---

೨೩೪. ಪೊನಲ್—ಪ್ರವಾಹ; ಲಲಾಟಂ+ಆಮುನಿವರನಾ ಎಂದು ಪದವಿಭಾಗವು, ಇಲ್ಲಿ ಬಿಂದುವಿಗೆ ಸ್ವರಪರದಲ್ಲಿರುವವಲಿಂದ ಬಿಂದುವಿಗೆ ಆದೇಶವಾಗಿ ಬಂದ ಮಕಾರಕ್ಕೆ ವಕಾರದೇಶ ಬಂದಿದೆ; ಶಮ. ಸೂ. ೧೦೪. ಮುನಿವರನಾ—ಇಲ್ಲಿ ಷಷ್ಠಿಗೆ ದೀರ್ಘಾದೇಶ ಬಂದಿದೆ ಶಮ. ಸೂ. ೧೧೩.

೨೩೫. ಭ್ರೂಲತಾಯುಗಂತೋಱುವು—ಎಂದನ್ವಯವು, ಇಲ್ಲಿ ಯುಗಳಾರ್ಥದ ಬಹುವಚನಕ್ಕೆ ಭ್ರೂಲತಾಯುಗಂ ಎಂದು ಏಕವಚನವಾಗಿದೆ; ಶಮ. ಸೂ. ೧೪೪.

೨೩೬. ಪ್ರರೋಹ—ಅಂಕುರ; ತುಱುಗಿದಪುದು—ತುಂಬುತ್ತಿರುವದು; ಪರ್ವುತ್ತಿರ್ದತ್ತು—ಹಬ್ಬುತ್ತಿತ್ತು;

ಕಂ॥ ಅಪೀತಸೋಮರಸಗಂ । ಧೋಪೇತಮೆನಿಪ್ಪ ಸುಯ್ಗೆ ಸುಳಿ ವ್ವಳಿನಿಕರಂ ॥ ಶಾಪಾಕ್ಷರನಿಕುರುಂಬಂ । ರೂಪಂ ಕಯ್ಕೊಂಡು ಮುಂದೆ ನಿಂದವೊಲೆಸೆಗುಂ ॥ ೨೩೭

ಸಿತದೀರ್ಘರೋಮನಿಕರಾ । ಸ್ವಿತಮಾದುದು ಕರ್ಣಯುಗಳವಿವ ರಂನಿಮಾರ್ಗಂ ॥ ಸತೆಯಿಂದೆ ಗಂಡಗರ್ತ । ದ್ವಿತಯಂ ನಿಮ್ನತರಮಾದುದಾ ಮುನಿಪತಿಯಾ ॥ ೨೩೮

ಅತಿಚಪಳ ಮೆನಿಪ್ಪಿಂದ್ರಿಯ । ತತಿಯಂ ತೆಗೆದೊಳಗೆ ಪಿಡಿದು ಕಟ್ಟಿದ ರಜ್ಜು ॥ ಪ್ರತತಿಯಿದೆಂಬಿನೆಗಂ ಯತಿ । ಪತಿಗೆಸೆದುವು ಕೊರಲೊಳಮರ್ದ ಸೆರೆಗಳತುಱುಗಲ್ ॥ ೨೩೯

ವೃ॥ ಕೊರಲೊಳ್ ಯಜ್ಞೋಪವೀತಂ ಪೊಳೆಯೆ ಬರಿಗಳೊ ಳ್ತೋಱುತಿರ್ಪೆಲ್ಗಳುಳ್ಪಂ । ಜರಿಸಿರ್ದಂತೆಯ್ದೆ ಬೇರ್ಪಟ್ಟಿರೆ ತೆರೆದುಱುಗ ಲ್ಗಾಳಿಯಿಂದಾಡೆ ಯೋಗೀ ॥ ಶ್ವರನಂತಾ ಬೇಗದೋಳ್ಕೋಮಳಯುಗಳ ಮೃಣಾಳಂ ಪೊದಳ್ದಿರ್ಕೆ ತೇಂಕ । ಲ್ತರದಿಂ ರಂಗತ್ತರಂಗಂ ನೆಗೆಯಲೆಸೆವ ಗಂಗಾಪ್ರವಾಹಂಬೊಲಿರ್ದಂ ॥ ೨೪೦

ಕಂ॥ ಅಕ್ಷಣದೊಳ್ ಶುದ್ಧಸ್ಫಟಿ । ಕಾಕ್ಷಾವಳಿಯಂ ಮಗುಳ್ಚೆ ಬೆರಲಿಂ ಭವ್ಯಾ ॥ ನ್ನಕ್ಷತ್ರಚಕ್ರಮಧ್ಯದ । ಸಾಕ್ಷಾದ್ಧ್ರುವನೆನಿಸಿದಂ ಮಹಾ ಮುನಿಮುಖ್ಯಂ ॥ ೨೪೧

---

೨೩೯. ತೆಗೆದು—ಎಳೆದು ; ಸೆರೆಗಳತುಱುಗಲ್—ನರಗಳಸಮೂಹವು ; ಇಲ್ಲಿ ತುಱುಗಲ್ ಎಂಬ ಏಕವಚನ ಕರ್ತೃವಿಗೆ ಎಸೆದುವು ಎಂಬ ಕ್ರಿಯೆ ಬಹುವಚನವಾಗಿದೆ; ಶಮ. ಸೂ. ೧೩೭.

೨೪೦. ಬರಿಗಳೊಳ್—ಪಕ್ಕಗಳಲ್ಲಿ ; ಎಲ್ಗಳ್—ಮೂಳೆಗಳು ; ಉಳ್ಪಂಜರಿಸಿರ್ದಂತೆ—ಒಳಗೆ ಹೆಣೆದಿದ್ದಹಾಗೆ ; ಬೇರ್ಪಟ್ಟಿರೆ—ವಿರಳವಾಗಿರಲು ; ತೆರೆದುಱುಗಲ್—ಶರೀರದ ಸುಕ್ಕುಗಳ ಸಮೂಹವು ; ಅಂತು—ಹಾಗೆ ; ಆ—ಪ್ರಸಿದ್ಧವಾದ ; ಬೇಗದೊಳ್—ವೇಗದಿಂದ ; ತೇಂಕಲ್—ತೇಲಲು.

ಕಂ॥ ಸೆರೆವಮುಖುಗಳ್ಮೆಯ್ಯೆಲ್ಲಮು । ನಿರದಡರೆ ಜರಲ್ಲತಾ ವಿತಾನದಿನೆತ್ತಂ॥ ಪರಿವೇಷ್ಟಿಸಿರ್ದ್ದ ಪರಿಣತ । ಸುರತರುವಂ ಪೋಲ್ತು ಸೊಗಯಿಸಿರ್ದ್ದಂಮುನಿಪಂ ॥ ೨೪೨

ಮಿಸುಗುವ ಚಂದ್ರಮರೀಚಿ । ಪ್ರಸರಂಗಳನೆಯ್ದೆ ನೆಯ್ದುವೆಂಬಿನೆಗಂವಮಾ ॥ ನಸಸಲಿಲಧೌತ ಮಮಲಮು । ದೆಸೆದುವು ಮುನಿಪತಿಯ ಪೊಳೆವ ವಲ್ಕಲಯುಗಳಂ ॥ ೨೪೩

ಪಳುಕಿನ ಗುಂಡಿಗೆ ಗಂಗಾ । ಜಳದಿಂದಂ ತೀವಿ ತನ್ನ ಪಕ್ಕದೊಳಿರೆಕ । ಣ್ಗೊಳಿಸಿರ್ದ್ದ ನಂಚೆಪದಪಿಂ । *[ನೆಲಸಿದ] ಸಿತಕಮಳವನದವೋಲ್ಮುನಿಮುಖ್ಯಂ ॥ ೨೪೪

ವೃ॥ ಧರಣಿಗೆ ಧೈರ್ಯಮಂಬುಧಿಗೆ ಗುಣ್ಪು ಸಹಸ್ರಕರಂಗೆ ತೇಜಮುಂ । ಬರಕೆ ಮಹತ್ವ ಮಿಂದುಗುಪಶಾಂತತೆ ಮೇರುಗೆ ಬಿಣ್ಪು ತನ್ನದೊಂ । ದಿರವಿನೊಳಿಂದುಮೆಂಬಿನ ಮುದಾರಗುಣಪ್ರಕರಂಗಳಿಂದಳಂ । ಕರಿಪ ನಿಜಪ್ರಭಾವಮುಮಿವೋನ್ನತಿಯಿಂ ದೆಸೆವಂ ಮುನೀಶ್ವರಂ ॥ ೨೪೫

ಕಂ॥ ಶಾಂತತೆಯನೆ ತಳೆದುಂ ದೂ । ರಾಂತಿದು ಕಾಗ್ರಾಲಮಿಂಚಿದೆನೆ ಕರ್ಗ್ಗೊಂಡ್ಡು । ಶಾಂತಿರೆ ಪೊಳೆಯುತ್ತಿರ್ದ್ದಪು । ದೆಂತಕ್ಕುವೆನೊ ತಪದ ಮಹಿಮೆ ಮುನಿಪುಂಗವನಾ ॥ ೨೪೬

ವೃ॥ ಭಾವಿಸೆ ಸುಸ್ಥಿರೋರುದೃತಿ ತಪದೊಳ್ ಕರ್ಮಕ್ಷಯಂಗೆಯ್ದು ಮುಂದೋ । [illegible] ಕಾಣ್ಬುದಕ್ಕಾರ್ಗಮುಳಕ ಫಳಮೆನಲ್ಕಾಣ್ಬ ಯೋಗೀಂದ್ರನಿಂತ । [illegible] ಸಮನಿಸಿದೊಡೆ ಪಾಪಕ್ಷಯಂ ಪ್ರಾಣಿಗೆಂದಂ । ದು [illegible] ಮುದಯಿಸಲಾ [illegible] ॥ ೨೪೭

೨೪೨. [illegible] : [illegible] । [illegible] ಡುವಿಕಲ್ಪವು. ಶಶಾ. ಸೂ ೫೩೧.

೨೪೪. ಗುಂಡಿಗೆ—[illegible] ; ತೀವಿ—ತುಂಬಿಟ್ಟು ; ನೆಲಸಿದ—ವಾಸವಾಗಿರುವ.

೨೪೭. [illegible]—ಕ್ರಮವಾಗಿ ; ಸಮನಿಸಿದೊಡೆ—[illegible] ; ಎಂದಂದು—ಎಂದು ಹೇಳುವಾಗ.

*[ದೆಳಸಿದ]

ಕಂ॥ ಪಾವನ ಮಾದತ್ತೊಂದುತ । ಪೋವನಮೆಂದಲ್ತು ಸಕಳವಸು
ಧಾತಳಮುಂ ॥ ಪಾವನಮಾದುದು ನಿಖಿಳಧ । ರಾಮಳಯಬ್ರಹ್ಮನೆನಿಪ ಮು
ನಿವರನಿಂದಂ ॥ ೨೪೮

ವೃ॥ ಪರಿಹೃತತೃಷ್ಣಮಾಹಿತರಸಂ ದ್ವಿಜಸನ್ನಿಹಿತಂ ಗಭೀರತಾ ।
ನಿರತ ಮತಿಪ್ರಸಾದಸುಭಗಂ ವಿಬುಧಪ್ರಜಸೇವ್ಯಮೆಂಬಿನಂ ॥ ಸುರುಚಿರ
ಮಾದ ಸನ್ಮುನಿಯ ಮಾನಸದೊಳ್ನೆಲಸಿರ್ದ್ದ ಹಂಸಿಯುಂ । ತಿರೆ ಮುಖ
ಪದ್ಮದೊಳ್ನೆರೆವ ಭಾರತಿಯುಂ ಕೃತಕೃತ್ಯಳಾದಳೋ ॥ ೨೪೯

ಕಂ ॥ ಕಲಿಕಲುಷಿತ ವಿದ್ಯಾಸಂ । ಕುಳಮಾ *[ಮುನಿತಿಳಕನಿಂ]
ಪ್ರಸಾದಮನಾಗಳ್ । ತಳೆದೇನೆಸೆವುದೊ †[ಶಾರದ । ನಳಿನಸರೋವರದ]
ತೆಱದೆ ನಿಖಿಳಾವನಿಯೊಳ್ ॥ ೨೫೦

ಮುನಿಪತಿ ನೆಲಸಿದ ನಿಖಿಳಾ । ವನಿತಳಮಂ ನೋಡಿದಂಬರ ‡[ಕ್ಕೆಂ
ಸಪ್ತ ॥ ರ್ಷಿನಿವಾಸ] ನಾದೆ ನಾನೆಂ । ಬಿನಿತೊಂದಭಿಮಾನ ಮಳಿಯದಿರ್ಕ್ಕು
ಮೆಪಿರಿದುಂ ॥ ೨೫೧

ವೃ॥ ಉರಿಯೊಳ್ದುಗ್ಧಾಂಬುಧಾರಾತತಿ ಹರನ ಜಟಾಜೂಟದೊಳ್
ಗಂಗೆಯೆಂತಂ । ತಿರೆ ನಿರ್ವ್ಯಫೇನ ಪುಂಜಪ್ರತಿಮ ಧವಳೆ ತಾಂಭೀತಿಯುಂ ಪತ್ತು
ವಿಟ್ಟಂ ॥ ಜರೆಯುಂ ತಾಂ ಮೋಹಿಬೀಳ್ವ ಜ್ವಾಳಯ ಸಮಯತೀವ್ರಾಂಶುವೋ
ಲಿರ್ದ್ದಯೋಗೀ । ಶ್ವರ ಪಿಂಗೋದ್ಯಜ್ಜಟಾ ಮಂಡಳದೊಳೆನಗಿದಾಶ್ಚರ್ಯ
ಮಾದಪ್ಪುದೀಗಳ್ ॥ ೨೫೨

---

೨೪೯. ಪರಿಹೃತ—ಹೋಗಲಾಡಿಸಲ್ಪಟ್ಟ; ತೃಷ್ಣಂ—ಆಸೆಯುಳ್ಳ, ದಾಹವುಳ್ಳ; ಆಹಿತ—ಕೂಡಿದ; ರಸಂ—ಕರುಣಾರಸವುಳ್ಳ—ನೀರುಳ್ಳ; ದ್ವಿಜ—ಬ್ರಾಹ್ಮಣರಿಂದ, ಪಕ್ಷಿಗಳಿಂದ; ಸನ್ನಿಹಿತಂ—ಸೇವಿತವಾದ; ಗಭೀರತಾ—ಗಾಂಭೀರ್ಯ, ಆಳ; ಪ್ರಸಾದ ಪ್ರಸನ್ನತೆ, ನೈರ್ಮಲ್ಯ; ವಿಬುಧ—ವಿದ್ವಾಂಸರು, ದೇವತೆಗಳು; ಮಾನಸದೊಳ್—ಮನಸವೆಂಬ ಮಾನಸ ಸರೋವರದಲ್ಲಿ; ನೆರೆವ—ಕೂಡುವ.

೨೫೨. ಭೀತಿಯುಂ ಪತ್ತುವಿಟ್ಟು—ಭಯವನ್ನು ಬಿಟ್ಟು;

*[ಮುನಿ ನಿಖಿಳನ] †[ಸಾರದ ಮಾನಸರಾಸನದ] ‡[ಕ್ಕೆನೆಸಪ್ತಂಮುನಿವಾಸ]

ಕಂ॥ ಯತಿಪತಿತಪಃಪ್ರಭಾವೋ । ನ್ನತಿಗಳ್ಕಿದ ತೆಱದೆ ತರಣಿಕಿರಣ ಚಯಂಗಳ್ ವಿತತ ಬಹುಳಾಜ್ಯಧೂಮ । ಪ್ರತಾನದಿಂ ನುಸುಳವೀತಪೋವನದತ್ತಲ್ ॥ ೧೫೩

ಇವೆ ಮಂತ್ರಪೂತ ಮೆನಿಸಿದ । ಹವಿಗಳ ನಿದಿರೇಳ್ದು ಸಲೆ ಶಿಖಾಂಜಳಿಪುಟದಿಂ ॥ ದವೆ ಸುತ್ತುಂ ಕಯ್ಕೊಂಡಿ । ರ್ಪುವು ಹುತವಹನಿವಹ ಮೆಂದೊಡಿನ್ನೇವೊಗಳ್ವೆಂ ॥ ೧೫೪

ವಿಲುಳಿತ ದುಕೂಲಪಲ್ಲವಂ । ಚಳವೊಯ್ಯನೆ ಭೀತನಂತೆ ಮುನಿಪನ ಸುತ್ತುಂ । ಕೆಲಕೆಲದೊಳ್ಸುಳಿವಪ್ಪುದು । ಬಲಿಕುಸುಮಾಮೋದ ಬಂಧುರಂ ಗಂಧವಹಂ ॥ ೧೫೫

ತಮ್ಮತ್ತಿರ್ಯಗ್ಜಾತಿಗ । ಳೊಮ್ಮೆಯೆ ಮಱೆವುಂ ನಿಸರ್ಗವೈರಮನೆಂದುಂ ॥ ತಮ್ಮೊಳ್ಮತ್ಸರಮುಂ ಮಱೆ । ದೊಮ್ಮೆಯುಮನುಭವಿಪ್ಪುವಾ ತಪೋವನಸುಖಮಂ ॥ ೧೫೬

[illegible] ನ್ಮೆ । ಬಳಸಿಮೆ ನೋಡುತಿರ್ಪ ಹರಿಣಂಗಳ ಕಂಗಳ ಕಾಂತಿಯಿಂದೆಕ । ಣ್ಗೊಳಿಪೆಳೆವುಲ್ಲ ನುಣ್ಬಸಲೆಯುಂ ಪುಗುವಂದದೆ ಶಂಕೆಗೆಟ್ಟು ತ । ಳ್ತಳುರ್ವ ಬಿಸಿಲ್ಗೆ ಸೈರಿಸದೆ ಪೊಕ್ಕಪುದಿಂತಿದೆ ಪಾವು ಪೀಲಿಗ । ಣ್ಗಳ ಪರಭಾಗದಿಂದೆಸೆವ ತೋಱುವ ಸೋಗೆಯ ತಳ್ತಸೋಗೆಯುಂ ॥ ೧೫೭

---

೧೫೪. ಇದಿರೇಳ್ದು — ಪ್ರತ್ಯುತ್ಥಾನವನ್ನು ಮಾಡಿ; ಕಯ್ಕೊಂಡಿರ್ಪುವು — ಅಂಗೀಕರಿಸುವವು.

೧೫೫. ಸುಳಿವಪ್ಪುದು — ಸಂಚರಿಸುತ್ತಿರುವದು; ಇಲ್ಲಿ ವಮುಬ ವಿಕರಣ ಪ್ರತ್ಯಯದ ಪಕಾರಕ್ಕೆ ದ್ವಿತ್ವಬಂದಿದೆ; ಶಮ. ೨೭೭.

೧೫೭. ನುಣ್ಬಸಲೆ — ನುಣುಪಾದ ಹಸರು ಬೆಳೆದಿರುವ ಸ್ಥಲ; ಅಳುರ್ವ — ವ್ಯಾಪಿಸುವ; ಪೀಲಿಗಣ್ಗಳ — ನವಿಲುಗರೀಕಣ್ಣುಗಳ; ಪರಭಾಗದಿಂದ — ವರ್ಣೋತ್ಕರ್ಷದಿಂದ; ಸೋಗೆಯ — ನವಿಲಿನ; ತಳ್ತಸೋಗೆಯುಂ — ಸಂಪ್ರಾಪ್ತವಾದ ಗರಿಯನ್ನು.

ಕಂ॥ ಪರಿಪರಿಸಿ ತನ್ನ ತಾಯಂ | ಪರಿಚಯದಿಂ *[ಕೇಸರಂಗಳೊಗೆ ಯುಪವನಕೇ ॥ ಸರಿ] ಶುಗಳೊಡನೆ ಮೃಗಶಿಶು | ಬರೆತೆಗೆದೂಡಿದುದು ತೊರೆದಸಿಂಹೀಸ್ತನಮಂ ॥ ೨೫೮

ಎಳವೆಱೆಗಳನಿಳಿಪ ಸಟಾ | ವಳಿಯುಂ ಬಿಸವಿಸರವೆಂದು ಕರಿಕಳಭಂಗಳ್ ॥ ಸೆಳೆಯುತ್ತಿರೆ ಸೈರಿಸಿ ಕ | ಣ್ಗಳನರೆಮುಚ್ಚಿರ್ದ್ದುದನ್ತದೊಂದುಮೃಗೇಂದ್ರಂ ॥ ೨೫೯

ಮದಸಾರಭಕ್ಷ್ಯ ಬಂದೆಱ | ಗಿದ ಮಱಿದುಂಬಿಗಳ ಬಂಬಲಂ ಪಯ್ಯೆ ಯಿಂಸೋ | ವದೆ ಕರ್ಣ್ನತಾಳದಿಂದಂ | ಮದಾಂಧನಾಗಿರ್ಪ್ಪುದಂತದೊಂದು ಗಜೇಂದ್ರಂ ॥ ಅದಲ್ಲದೆಯುಂ— ೨೬೦

ಮ॥ ಸ್ರ॥ ಫಲಮೂಲಂಗಳ್ ಸಾಂತು ವಲ್ಕಲವಿ ಸೊಪ್ಪಂಬೆತ್ತು ಕೃಷ್ಣಾ ಜಿನಂ | ಗಳ ನೀತಾಪಸಹೋಮಧೂಮತತಿಯಿಂದಂ ತಾಳ್ದಿ ನಿರ್ಮುಕ್ತಸಂ ॥ ಗಳುಮಿರ್ದ್ದಪ್ಪುವು ಪರ್ಣ್ನಶಾಲೆಯುಮಂ ತಾಳ್ದಿರ್ದ್ದಪ್ಪವೋಲಪ್ಪರು ಹಂ | ಗಳವೆಂದಂದು ಮುನೀಂದ್ರನುನ್ನತಿಯನಾಂತುಂತೆಸಲ್ಬರ್ಕ್ಕರ್ಮವೋ ॥

ವ॥ ಎಂದುತನ್ಮುನಿಪ್ರಭಾವಮನೆ ಮನದೊಳ್ ಪರಿಭಾವಿಸುತ್ತ ವಿ ಪ್ರರ್ಗಂನೆಗಮಾರಕ್ತಾಶೋಕತರುವಿನ ತಣ್ಣೆಳಲೊಳ್ | ೨೬೨

---

೨೫೮. ಪರಿಪರಿಸಿ—ಬಿಟ್ಟು ; ಬರೆತೆಗೆದು—ಎಳದುಕೊಂಡು ; ಊಡಿದುದು—ಕುಡಿಯಿತು ; ತೊರೆದ—ಹಾಲುತುಂಬಿದ.

೨೫೯. ಎಳವೆಱೆಗಳಂ—ಬಾಲಚಂದ್ರನನ್ನು ; ಇಳಿಪ—ತಿರಸ್ಕರಿಸುವ ; ಅರೆಮುಚ್ಚಿರ್ದುದು—ಅರ್ಧವಾಗಿಮುಚ್ಚಿಕೊಂಡಿತ್ತು.

೨೬೦. ಬಂಬಲಂ—ಸಮೂಹವನ್ನು ; ಸೋವದೆ—ಅಟ್ಟದೆ.

೨೬೧. ಈ ತಾಪಸ ಹೋಮಧೂಮತತಿಯಿಂದಂ ತಾಳ್ದಿ ಎಂದನ್ವಯವು—ಕೃಷ್ಣಾಜಿನಗಳಂ—ಮೃಗಚರ್ಮವನ್ನು ; ತಾಳ್ದಿ—ಧರಿಸಿ ; ಇರ್ಪ್ಪುವು ಎಂಬ ಉತ್ತರಕಾಲ ಕ್ರಿಯೆ ಯೊಡನೆ ಸಮಾನ ಕರ್ತೃಕವಾದ ತಾಳ್ದು ಎಂಬ ಧಾತುವಿನ ಮೇಲೆ ಇಕಾರಾದೇಶಬಂದುತಾಳ್ದಿ ಎಂದಾಯಿತು ; ಶಮ. ಸೂ. ೨೩೬.

*[ಕೇಸರಂಗಳಿಂ ಹೋಗೆನವಿಲ್ಲಬರೆ]

ಕಂ॥ ಪರಮತಪೋನಿಧಿ ಯೆನಿಸಿದ । ಗುರುವಿಂಗಭಿವಂದಿಸುತ್ತೆ ಹಾ
ರೀತಂಕು ॥ ಳ್ಳರೆ ನಿಮಗಿದೆತ್ತಣಿಂದಂ । ದೊರೆಕೊಂಡತ್ತೆಂದು ತಾಪಸರ್ಬೆ
ಸಗೊಂಡರ್ ॥ ೧೬೩

ವ॥ ಅಂತುಬೆಸಗೊಳ್ವುದುಂ ಹಾರೀತಕನೆಂದನಾಂ ಸ್ನಾನಾರ್ಥಂಪೋ
ಗುತ್ತಿರೆ ಪಂಪಾಸರೋವರದ ಪಶ್ಚಿಮದಿಸೆಯ ಪೆರ್ಮರದ ತುದಿಗೋಡಗೂಡಿ
ನಿಂ ಬಿರ್ದ್ದು ದೆಸೆಗೆಟ್ಟು ನಡುವಗಲ ಬಿಸಿಲಳುರೆ ಕಿಡಿಯಿಡುವ ಪುಡಿಯೊಳ್
ಪೊರಳುತ್ತಂ ಕಂಠಗತಪ್ರಾಣನಾಗಿರ್ದ್ದೀ ಗಿಳಿಯಂ ಕಂಡು ಕರುಣಿಸಿ
ತಂದೆಂ ನಮಗೆ ಗುರುಮೂಡಿದ ಬಳಿಕ್ಕಂ ಪೋಱುಪೋಕುಮಕ್ಕಿದಂ ಪರಿಚಯ
ದಿಂ ನಿಕ್ಕೆಂದೆನ್ನ ಸಂಬಂಧಮಂ ನುಡಿವುತ್ತಿರೆ ಜಾಬಾಲಿಮುನೀಂದ್ರನಾಪವಿ
ತ್ರಂ *[ಕೇಳ್ದು ನಿಷ್ಕಾಮವಶಿತ] ಕಂಧರ ನಿದೆತ್ತಣಿಂ ಬಂದುದೆಂದು ಪ್ರಜ್ಞಾಜಲದಿಂ
ಪ್ರಕ್ಷಾಳಿಸುವಂತೆ ಶಾಂತದೃಷ್ಟಿಗಳಿಂದೆನ್ನಂ ಮುನ್ನಂ ಕಂಡಱಿವನಂತೆ
ನೀಡುಂ ಭಾವಿಸಿ ನೋಡಿ ॥ ೧೬೪

ಕಂ॥ ಈತಂ ಮುನ್ನಿನ ಭವದೊ । ಳ್ನೀತಿಯನುಳಿದೆಸಗಿ ಪೋದ
ದಿಂದಂ ತಿರ್ಯ । ಗ್ಜಾತಿಗೆ ಬಿಳ್ದಿರ್ದಂ ದದಿ । ನೀತಿಯಿಂ ಕರ್ಮಫಲಮನುಂತ
ಪನತ್ತೀ ॥ ೧೬೫

ವ॥ ಎಂದು ಕಾಲತ್ರಯವೇದಿಗಳಪ್ಪುದಱಿ ಮುನಿಗಳೆಲ್ಲರುವಿಸ್ಮಿತಾಂ
ತಃಕರಣರಾಗಿ ಮುನೀಂದ್ರನ ನಿಂತೆಂದರ್ । ೧೬೬

ಕಂ॥ ಮುನ್ನಾವನವಿನಯಮನೀ । ನಂನಿಗಳ್ದಂ ವಿಹಗಯೋನಿಯೆಂ
ತಾದಂನು । ತ್ರಿನ್ನೀನಾದವ ನೆನುತಂ ಬೆನ್ನವಿಪ್ರತ್ಯಂತೆ ಮನದೊಳಾದಪ್ರದೀ
ಗಳ್ ॥ ೧೬೭

---

೧೬೩. ದೊರೆಕೊಂಡತ್ತು—ಸಿಕ್ಕಿತು. ಇಲ್ಲಿ ಪ್ರಥಮ ಪಾದದ ಪ್ರಾಸಸ್ಥಕ
ವರ್ಣದಲ್ಲಿ ಇತ್ತು [illegible] ದೋಷವಿದೆ ; ಶಬ್ದ. ಸೂ. ೧೦೬.

೧೬೪. ಅಳುರೆ—ಆವರಿಸಲು, ಕಿಡಿಯಿಡುವ—ಸುಡುವ : ನಡು—ನಡು.

೧೬೫. ಎಸಗಿ—ಪ್ರವರ್ತಿಸಿ.

*[ಅಕ್ರಂದಕಂಧರರು]

ಅದುಕಾರಣದಿಂ ॥ ವೃ ॥ ಬೆಸಸಲ್ವೇೞ್ಪುದಿಂತೀಗಿಳಿಯ ಮೞಿ ಯ ವೃತ್ತಾಂತಮಂ ತಾಮೆನಲ್ಕಾ । ಪ್ರಸನ್ನಂವಕ್ತ್ರಾ ಮುನೀಂದ್ರಂ ಕಥೆಯಿಂ ದು ಮಹಾಶ್ಚರ್ಯ ವಿಭಾರಾತ್ರಿಯೊಳ್ಸಂ ॥ ತಸವಿಸ್ತಾರಂತಾಗೆ ತಾಂಕೇಳಿಸಿ ದಪೆ ನವಱಿಂ ದೇೞ್ದು ನೀವೆಲ್ಲರುಂ ಪ್ರಾ । ರ್ಥಿಸದೀವ-ಧ್ಯಾಪ್ನ ಕಾಲೋಚಿತ ಸಮಯದೊಳಾಸಕ್ತಿಯುಂ ತಾಳ್ದಿರಾಗಳ್ ॥ ೨೬೮

ಕಂ ॥ ಎಂದು ಮುನಿಗಳ್ಗೆ ಬೆಸಸು । ತ್ತಂ ದಿವಸೋಚಿತಮೆನಿಪ್ಪ ನಿ ಯಮಕ್ರಿಯೆಗೆ ॥ ಲ್ಲಿಂದೇೞ್ದು ಪೋದನಾಮುನಿ । ವೃಂದಂಬೆರಸಾ ಮುನೀಂ ದ್ರನಂದವನಿಪತೀ ॥ ೨೬೯

ವ ॥ ಅಂತು ನಿತ್ಯನಿಯಮವ್ಯಾಪಾರಂಗಳಂ ತೀರ್ಚುತ್ತಮಿರ್ದ್ದ ॥

ಕಂ ॥ ದಿನಕರಕಿರಣ ಮನುಷ್ಣಾಪ । ರನಿಸಿದ ಮುನಿಜನದ ಹೋ ಮಧೂಮಂ ಪೀರ್ದ್ದ । ತ್ತೆನಲೊಯ್ಯನೊಯ್ಯನಾಗಳ್ । ಇನನಪಗತತೇಜ ಮುಡುಗಲೊಪರಿಚಿತಾಗಳ್ ॥ ೨೭೦

ತನುತನುಗೆತ್ತುವ ಮುನಿಜನ । ಸಮಿತಿಯ ಹರಿಚಂದನಾರ್ಘ್ಯ ಸಲಿ ಲವ್ಯಾತಿ ಸಂ ॥ ಕ್ರಮಿಸಿತ್ತೆನಲ್ಕೆ ಪ್ರದಿವರು । ಣಿಮದಿಂದಂ ತರಣಿಬಿಂಬ ಮೆ ಸೆದತ್ತಾಗಳ್ ॥ ೨೭೧

ಆದುದು ಸಮಸ್ತಮುನಿನಿವ । ಹೋದಯಮುಂ ಸೋಂಕಲಾಗದವ ರ್ಗಳನಾನೆಂ ॥ ದಾದಂ ದಿನಾಧಿಪತಿ ನಿಜ । ಪಾದಂಗಳ ನುಡುಗಿ ಗಗನತಳ ದಿಂದಿೞಿದಂ ॥ ೨೭೨

---

೨೬೮. ಬೆಸಸಲ್ ವೇೞ್ಪುದು—ನೀವು ಆಜ್ಞಾಪಿಸಬೇಕು ; ತಾಂ—ಋಷಿಗಳು ; ಎನಲ್—ಎಂದು ಹೇಳಲು ; ಸಂತಸವಿಸ್ತಾರಂತಾಗೆ—ಸಂತೋಷದೊಡನೆ ಕೂಡಿದುವಹಾಗೆ ಆಗಲು ; ಕೇಳಿಸಿದಪೆಂ—ಹೇಳುವೆನು ; ಸಮಯದೊಳ್—ಆಚಾರದಲ್ಲಿ ಅಂದರೆ ನಿಯಮದಲ್ಲಿ ; ತಾಳ್ದಿಂ—ಪಡೆಯಿರಿ ; ತಾಳ್ದಿಂ ಎಂಬಲ್ಲಿ ತಾಳ್ದು ಎಂಬ ಧಾತುವಿನ ಪರ ವಿಧ್ಯರ್ಥದಲ್ಲಿ ಇರ್ ಎಂಬ ಆಖ್ಯಾತ ಪ್ರತ್ಯಯಕ್ಕೆ ಇಂ ಎಂಬಾ ದೇಶಬಂದಿರುವದು ; ಶಶಾ. ಸೂ. ೪೬೨.

೨೭೨. ಮುನಿನಿವಹೋದಯಮುಂ—ಸಪ್ತರ್ಷಿ ಮಂಡಲೋದಯವೂ ; ಆದುದು—ಆಯಿತು ; ಆದಂ—ಅತ್ಯಂತವಾಗಿ ; ಅವರ್ಗಳಂ ಸೋಂಕಲಾಗದು—ಮುಟ್ಟಕೂಡದು ; ಉಡುಗಿ—ಸಂಕೋಚ ಮಾಡಿಕೊಂಡು.

ವೃ॥ ಜಲನಿಧಿಶಯ್ಯೆಯೊಳ್ನೆಲಸಿದಂಬುಜನಾಭನ ನಾಭಿಯಲ್ಲಿ ಕೋ।
ಮಳಮಧುಧಾರೆಗಳ್ಕಿವಿರ್ದು ಕಣ್ಗೊಳಿಪೊಂದರವಿಂದಮೆಂಬಿನಂ॥ ಪೊಳೆ
ವರುಣಾಂಶು ಪಿಂದೆಸೆವ ತನ್ನಯ ಮಂಡಳ ಮಬ್ಧಿಯಲ್ಲಿ ಮಾ। ಪ್ಪೊರ್ಗಳೆ
ಪಿನೆಗಂ ಸರೋಜಸಖ ನೊಯ್ಯನೆ ಪೊರ್ದಿದನಸ್ತಶೈಲಮಂ ॥ ೧೭೪

ಕಂ॥ ಮುನಿನಿವಹ ಮಾಱಲಿಕ್ಕಿದ। ತನುತರ ಕಾಷಾಯವಲ್ಕವಸ
ನಂಗಳಸಂ॥ ದೆನಸುಂತಾಳ್ದುವೆನೆ ಬೈ। ಗಿನ ಕೆಂಬಿಸಿಲಳುರಲೆಸೆದುವಾ
ಶ್ರಮಮತರುಗಳ್ ॥ ೧೭೫

ವ॥ ಅನಂತರಂ ದಿವಸಕರನಪರವಾರ್ಧಿಗೆ ಮಗ್ನನಾಗೆ ॥ ೧೭೬

ಕಂ॥ ಪವಳದ ಬಳ್ಳಿಯ ತುಱುಗ। ಲ್ಪವಣಿಲ್ಲದೆ ತಳ್ತು ಬೆಳೆದು
ಕುಡಿವಿಟ್ಟಸರಾ। ರ್ಣವತಟದೊಳ್ಪೊಱನಪ್ಪದಂ। ಬಪ್ಪೊಲಿರದೆಸೆದತ್ತು ಸಾಂ
ದ್ರಸಂಧ್ಯಾರಾಗಂ ॥ ೧೭೭

ವೃ॥ ವನರುಹಕಾಂತಕುಟ್ಮಳಕಮಂಡಲುರಾಜಿನಿಹಂಸಮಾಲಿಕಾ।
ತನುಸಿತವಲ್ಕಭಾಜಿನಿ ಮೃಣಾಳಲತಾಲಲಿತೋಪವೀತರಂ ॥ ಜನಿವಳತದ್ವಿರೇ,
ಫಸಿತಪಾಕ್ಷಸಮಾಜಿನಿ ಶೋಕದಿಂ ಸರೋ। ಜಿನಿ ದಿನಕೃದ್ವಿಯೋಗಿನಿ ತಪ
ಸ್ವಿನಿಯಂತೆಪೊಲಾವವೊಪ್ಪಿದಳ್ ॥ ೧೭೮

ಕಂ॥ ಅಂಬರತಳದಿಂದಿನನಪ। ರಾಂಬುಧಿಯೊಳ್ಬೀಳೆ ನೆಗೆದ ಸೀ
ರ್ಪನಿಗಳೊ ಪೋ॥ ಳೆಂಬಿನೆಗಂ ತಾರಾನಿಕು। ರುಂಬಂ ಸೊಗಯಿಸಿದುವೆ
ಯ್ದೆ ಗಗನಾಂತರದೊಳ್ ॥ ೧೭೯

ತನತನಗೆ ಸಿದ್ಧಕನ್ಯಾ। ನಿವಹಂ ಸಂಧ್ಯಾರ್ಚನಕ್ಕೆ ಸೂಸಿದ ಕು
ಸುಮಾ॥ ಳಿವೊಲೆಸೆದು ಪರೆದು ಕಣ್ಗೊಳಿ। ಪ್ಪವು ತರದಿಂ ತುಱುಗಿಮಿ
ಱುಪ ತಾರಾನಿಕರಂ ॥ ೧೮೦

---

೧೭೫. ಎನಸುಂತಾಳ್ದುವೆನೆ—ಸ್ವಲ್ಪಕಾಲ ಪರ್ಯಂತ ಧರಿಸಿದವೋ ಎಂಬಹಾಗೆ.

೧೮೦. ಪರೆದು—ಹರಡಿಕೊಂಡು; ಮಿಱುಪ—ಹೊಳೆಯುವ.

ಮುನಿಜನನಿವಹಂ ಸಾಯಂ । ತನ ಸಮಯದೊಳಿತ್ತ ವರ್ಘ್ಯಜಲ ದಿಂದಂ ಭೋಂ ॥ ಕೆನಲೆಯ್ದೆ ಕರ್ಚಿಕಳೆದ । ತ್ತೆನೆ ಪೋದುದು ಪರೆದು ಸಿಥಿಳಸಂಧ್ಯಾರಾಗಂ ॥

೨೮೧

ಇನನ ಬಳಸಂದ ಸಂಧ್ಯಾ । ವನಿತೆಯು ಪಿಂಗಿದ ವಿರಕ್ತಿ ಪ್ರಟ್ಟಲ್ಕಾ ಪ್ತಾ ॥ ಜಿನಮಂ ತಾಳ್ದಿದಳೊ ಸಿತಾಂ । ಗನಯೊಂಬಿನ ಮಬ್ಬಿರ್ಗಮಬ್ಬ ಪರ್ಬಿತ್ತಾಗಳ್ ॥

೨೮೨

ವೃ॥ ವಳಯೀಭೂತ ತಮಸ್ತಮಾಳಗವನಂ ಸಾಪಾಷ್ಟಸಪ್ತರ್ಷಿಸಂ। ಕುಳಸಂಪ್ರಾತವರುಂಧತೀಸ್ಥಿತಿಸುತಂ ಮೂಲಾನ್ವಿತಂ ಪ್ರೋಷಮುಮಂ । ತಳ ಮಾಯಾಶ್ರಮಮೊಂದು ಬಂದೆಳಸಿದಂ ವೈರಾಗ್ಯದಿಂಧಾತ। ವಲ್ಕಲಶೋಭಾಂಬರ ನಂದುಮಿತ್ರವಿರಹೋದ್ವೇಗಾತುರಂ ಚಂದ್ರಮಂ ॥

೨೮೩

ಕಂ॥ ಸುರಸವಿಯುವಗಾಢದ ಸಿಂ । ದುರಮೆಲ್ಲಂ ತೋರ್ಪ ಪೋಗೆ ಪೊಳೆವಿಂದ್ರದಿಶಾ ॥ ಕರಿಕುಂಭಮುಂತಳಕ್ಕೇಂ । ದೊರದಯಾದುದೊ ಮುಂತ ಳಂಗಿಸಾಧೀಶ್ವರನಾ ॥

೨೮೪

ವೃ॥ ಪ್ರಾಲೇಯಾಂಶುವಿಭೂಷಿತಂ ತರಳತಾರಾನೀಕಕಾಪಾಲಮಾ । ಲಾಲಂಕಾರ ಮೆಸಲ್ಕೆ ಸಂದುದಯ [ರಂಧ್ರಪ್ರೋಮಶೀರ್ಷಾಗ್ರದಿಂ] ॥ ಭೂಲೋಕಕ್ಕಿಳಿತಂದುದುಜ್ಜ್ವಳಿಸುತಂ ದಿಕ್ಚಕ್ರಮಂ ಚಂದ್ರಿಕಾ। ಜಾಲಂ ದೇವನದೀಪ್ರವಾಹದ ಪ್ರಾಲತ್ವಕ್ಕೆ ವರ್ಗಮಪ್ಪನ್ನೆಗಂ।

೨೮೫

ಕಂ ॥ ಕುಳಿರ್ವೆಳಗುದೆಂಬ ತೀಗೆಯೊಳ್ । ದೊಳಗೊಂದ್ಯನೆ ಚಂದ್ರಕಾಂಬುಮಂ ಕುಡಿಯಲ್ಕಂ । ದೊಳ್ಪೊಕ್ಕಮರ್ದಿನ ಕೊಳ್ಗೆಸ । ಜಿಳ್ಳದೆಸೆಸಿತ್ತು ನಿಶ್ಚಿಂತದಿಂ ಹರಿಣಂ ।

೨೮೬

ವೃ॥ ಸುರಿವ ತುಷಾರದೊಳ್ ಸ್ಫುರದ ರಜ್ಜುಸಿತಾಂಬುಜ ದಿವ್ಯಗಂಧದೊ। ಳ್ಪೊರೆದು ಮದಲ್ಪು ತೀಂಕಟಿಪ ವನ್ಯಮೃಗಂಗಳ ಮಗ್ನರೋಮ್ಮಂ ॥

---

೨೮೨. ಇನನ—ಸೂರ್ಯನ ಮತ್ತು ಪತಿಯ; ಬಳಸಂದ—ಜೊತೆಯಲ್ಲಿ ಹೋದ, ಸಹಗಮನವನ್ನು ಮಾಡಿದ; ಪಿಂಗಿದ—ಬಿಟ್ಟ.

೨೮೬. ಕುಳಿರ್ದ—ತಣ್ಣಗಿರುವ; ಅಮರ್ದಿನ—ಅಮೃತದ; ಕೊಳ್ಗೆಸ. ಜಿಳ್—ಮಂದವಾದ ಕೆಸರಿನಲ್ಲಿ,

ದಿರಿದು ಹಿಮಾಂಶುರಶ್ಮಿಗಳಿ ನುಜ್ಜ್ವಳಿಸಿದರ್ದ್ಘಟಜಾಂಗಣಂಗಳೊ | ಳ್ಪರಿದೆ ಸಗಿತ್ತ್ರಿಪ್ರಮದಕಾರಣ ನಂದು ನಿಶಾಸಮೀರಣಂ ॥ ೨೮೭

ಕಂ ॥ ಅಂದಾಬೆಳ್ದಿಂಗಳೊಳಾ | ನಂದದಿ ನಾಂಬೆರಸು ಮುನಿಸಮಾಜಸಮೇತಂ ॥ ತಂದೆಯು ಕೆಲಕ್ಕೆ ಮೆಲ್ಲನೆ | ಬಂದಂ ಹಾರೀತನುಚಿತವಿನಯೋಪೇತಂ ॥ ೨೮೮

ವ॥ ಆಗಳಾಜಾಲಪಾದನೆಂಬ ಶಿಷ್ಯಂ ತಾಳವೃಂತದಿಂ ಬೀಸುತ್ತಿರೆ ಸನ್ನಿಧಿಕೃತವೇತ್ರಾಸನರಾಗಿರ್ದ್ದ ಗುರುಗಳನೆಂದಂ ನೀವೀವಿಹಂಗಶಿಶುವಿನ ವೃತ್ತಾಂತಮನಿರುಳ್ ಬೆಸಸಿದಪೆವೆಂದುದಱಿಂ ಮುನಿಸಮಾಜಂ ತತ್ಕಥಾಶ್ರವಣತತ್ಪರಮಾಗಿರ್ದ್ದುದೆಂಬುದುಂ ಜಾಬಾಲಿಮಹಾಮುನಿಗಳ್ಪೇಳಲ್ತಗುಳ್ದರದೆಂತೆನೆ ॥ ೨೮೯

ಕಂ॥ ಪ್ರಿಯಮಿಂದೆ ಮಹಾಕಾಳಾ | ಹ್ವಯ ನೀಶಂ ನೆಲಸೆ ನಗರಿಯೊಂದಧಿಕಖ್ಯಾ | ತಿಯಿನೆಸೆದು ತೋರ್ಪ್ಪುದುಜ್ಜಯಿ | ನಿಯೆಂಬ ಪೆಸರಿಂದವಂತಿವಿಷಯಾಂತರದೊಳ್ ॥ ೨೯೦

ಇದು ಕೃತಯುಗಕ್ಕೆ ನೆಲೆಯೆನಿ | ಸಿದ ಬೇಱೊಂದವನಿಯೆಂದು ಬಂದಂಬುಧಿಸು ॥ ತ್ತಿದುದೆನಿಸಿ ನಗರಿಯುಂ ಬಳ | ಸಿದುದು ರಸಾತಳಗಭೀರಪರಿಖಾವಳಯಂ ॥ ೨೯೧

ಘನಸಿಕ್ಕೆದಾಣ ಮೊಂದೆಂ | ದುವಿಶೇಷಪ್ರೀತಿಯಿಂದೆ ಕೈಲಾಸನ ಗೇಂ ॥ *[ದ್ರುಮೆ ಬಳಸಿದುದೆಂಬಂತಿರೆ] | ಧವಳಪ್ರಾಕಾರಮಲ್ಲಿ ಸೊಗಯಿಸಿ ತೋರ್ಕ್ಕುಂ ॥ ೨೯೨

೨೮೭, ತುಷಾರದೊಳ್ ಪರಿದು — ಹಿಮದೊಡನೆ ಸೇರಿ ; ಗಂಧದೊಳ್ ಪೊರೆದು — ಗಂಧದಿಂದ ಪ್ರಸನ್ನನಾಗಿ ; ಸುಗ್ಗಿಯೊಳ್ — ವಸಂತದಲ್ಲಿ ; ತೆರಪಿರಿದು — ಅವಕಾಶವನ್ನು ಕೊಟ್ಟು ; ಮಸಲ್ದು — [illegible] ; ಪಸಿದಸಗಿತ್ತು — [illegible].

೨೯೨ ಇಕ್ಕೆದಾಣ — ವಾಸಸ್ಥಾನ.

*[ದ್ರುಮಿದೆಂಬಂತೆ ನಿಸಿದುದಾ]

ಕಂ॥ ಜಳಧಿಯು ನಗಸ್ತ್ರೀಯಂಟ । ಲ್ತ್ರೊಳಗಿದಪ್ರವೃತ್ತಳದೆಂಳಪಿಳನಾನಾ
ರತ್ನಂ॥ ಗಳನಲ್ಕೆ ಸಕಲರತ್ನಂ । ಗಳ ಪಸರದಿ ನೆಸೆದುವಲ್ಲಿ ವಿಪಣಿಪದಂಗಳ್ ॥

ಸುರದನುಜ ಸಿದ್ಧವಿದ್ಯಾ । ಧರಕಿನ್ನರಪನ್ನಗೋಪಯುಕ್ತ ವಿಮಾ
ನೋ ॥ ತ್ಕರ ಮಲ್ಲಿ ಗಗನದಿಂ ದವ । ತರಿಸಿದುದೆನೆ ಚಿತ್ರಶಾಲೆಗಳ್ಸೊಗಯಿ
ಸುಗುಂ ॥ ೧೯೪

ವೃ॥ ಕ್ಷೀರಸಮುದ್ರಮಂಥನದೆ ಪಾಂಡುರಮುಂ ತಳೆದಿರ್ದ ಮಂದ
ರಾ । ಕಾರಮನಾಂತು ಕಾಂಚನಮಯಾಮಳ ಸಾರಸಕೇಸರಾಗ್ರವಿ ॥ [ಸ್ಫು
ರಿಸಿತ] ಧ್ವಜಂಗಳೆಲರಿಂ ನಿಮಿರಲ್ಕಮರಾಪಗಾ ಪಯಃ । ಪೂರಮನಾಂತ
*[ಹೈಮ] ನಗವಂತಿರೆ ದೇವಕುಲಂಗಳೊಪ್ಪುಗುಂ ॥ ೧೯೫

ವಿತತೋದಂಚತ್ಪತಾಕಾ ವಸನವಿಲಸಿತಂ ವಿದ್ರು †[ಮೋತ್ತಂಭಿತ
ಸ್ತಂ] । ಭತತೋದ್ಯಚ್ಛಮರೌಘಾಂಚಿತ ‡[ಮನಿಲರಣತ್ಕಾಂತ] ಸೌಭಾಗ್ಯ
ಘಂಟಾ ॥ ಸ್ವಿತಮಾಗಿರ್ದೊಪ್ಪಮಂ ತಾಳ್ದುವ ಮಕರಪತಾಕಾಳಿಯಿಂ ಕೋ
ದು ದೇವಾ । ಯತನಂಗಳ್ಸುತ್ತಲುಂ ಕತ್ತಲಿಸುವ ವನದಿಂ ರಂಜಿಸುತ್ತಿರ್ಪ್ಪ
ವೆತಂ ॥ ೧೯೬

ಕಂ॥ ಮುರಜಧ್ವಾನಗಭೀರಮಪ್ಪ ರವದಿಂದಂ ರತ್ನಧಾರಾಗೃಹೋ । ತ್ಕರ
ಧಾರಾಳಿಗಳಿಂದ್ರಚಾಪ ಲತಿಕಾಸಂದೋಹ ಮೆಂಬಂದದಿಂ ॥ ಸುರಿಯಲ್ಸೋ
ಗೆಯ ಚೆಲ್ವುಕಣ್ದೆ ಱದುದೋ ಪೇಳೆಂಬಿನಂ ಪೀಲಿಗ । ಳ್ತುರದಿಂ ಕಣ್ಗೊಳ
ಸಲ್ಕೆ ನರ್ತಿಸುಗುಮುದ್ಯಾನಂಗಳೊಳ್ಸೋಗೆಗಳ್ ॥ ೧೯೭

---

೧೯೫. ಪಾಂಡುರಮುಂ—ಬಿಳುಪನ್ನು ; ಎಲರಿಂ ನಿಮಿರಲ್ಕೆ—ಗಾಳಿಯಿಂದ ಚ
ಲಿಸಲು ; ಸಾರ—ಶ್ರೇಷ್ಠವಾದ ; ಸಕೇಸರ—ಕಲಶಗಳೊಡನೆ ಕೂಡಿರುವ ; ಅಗ್ರ—
ಅಗ್ರಭಾಗದಲ್ಲಿ ; ದೇವಕುಲಂಗಳ್—ದೇವಾಲಯಗಳು ; ಹೈಮನಗದಂತಿರೆ—ಹಿಮವ
ತ್ಪರ್ವತದಹಾಗೆ.

೧೯೭. ಸೋಗೆಯ—ಗರಿಯುದೊಂದೆಯ ; ಚೆಲ್ವು—ಸೊಗಸು ; ಕಣ್ದೆಱದು
ದೊ—ಪ್ರಕಾಶವಾಯಿತೊ ; ಪೀಲಿಗಳ್—ಗರಿಗಳು.

*[ಹರ್ಮ್ಯ] †[ಮಸ್ತಂಭಿತಾಸ್ತಂ] ‡[ಮಳನರ ಣ್ರೋತ್ಕಾಂತ]

ಕಂ॥ ಅನಿಮಿಷ ರಮಣೀಯಂಗಳ್ । *[ವಿನಿದ್ರಕುಮುದಾಯು] ತೋತ್ಪಳಂಗಳ್ಕೆಳೆಯ ॥ ವನದೊಳ್ಸರೋವರಂಗ । ಳ್ನೆನೆಯಿಪುವು ಸಹ ಸ್ರನೇತ್ರ ನಯನೋತ್ಕರಮಂ ॥ ೨೯೮

ಮಿಸುಪ ಕದಳೀವನಂಗಳ । ಪಸುರಿಂ ಬಾಸಣಿಸಿ ದೆಸೆಗೆ ಪೊಸನು ಣ್ಬೆಳಗಂ ॥ ಪಸರಿಸು †[ವದನ್ತವಲಭಿ] । ಪ್ರಸರಂಗಳ ನೆಸೆದು ನಗರಿ ಸೊ ಗಯಿಸಿ ತೋರ್ಕುಂ ॥ ೨೯೯

ವೃ॥ ಪವಪಿಂದಂ ತಾಳ್ದನಿಂದಳ್ಗಗನನದಿ ಮಹಾಕಾಳದೇವೋತ್ತ ಮಾಂಗಾ । ಗ್ರದೊಳಂಬೊಂದೀರ್ಪ್ಪೆಯಿಂದಂ ಭ್ರುಕುಟಗಳವೆ ಪೊಣ್ಮುತ್ತ ಮಿರ್ದ್ದಪ್ಪವೆಂಬಂ ॥ ದದೆ ಮಾಧ್ಯನ್ಮಾಳವೀ ಪೀವರಕುಚಕಲಶಾಲೋಲಕ ಲ್ಲೋಲದಿಂದಂ । ಪುದಿದೊಪ್ಪಂಬೆತ್ತ ಶಿಪ್ರಾನದಿ ಬಳಸಿರಲುಜ್ಜೈನಿ ಕ ಣ್ಗೊಪ್ಪಿತೋರ್ಕುಂ ॥ ೩೦೦

ತರದಿಂದಂ ವ್ಯೋಮದಿಂ ಬೆಳ್ಮುಗಿಲೊಗೆದು ಪೆನಲ್ತೋರ್ಪ್ಪ ಸೌಧಂ ಗಳೊಳಸ್ಸಂ । ದರಿಯುಪ್ಪಾಡುತ್ತಿರಲ್ಪೋಲ್ತ ಪೊಲೆಳಸಿ ರಥಾಶ್ವವ್ರಜಂ ಮುಂದೆ ಮುಗ್ಗ ॥ ತ್ತಿರೆ ಚಂಚದ್ವೈಜಯಂತೀ ಪಟವೆಳಲೆ ಮಹಾಕಾಳ ದೇವಂಗೆ ನಿಚ್ಚಂ । ಪಿರಿದುಂ ಸದ್ಭಕ್ತಿಯಿಂ ಬಂದೆಱಗುವ ತೆಱದಿಂ ತೋರ್ಪ್ಪ ನಂಭೋಜಮಿತ್ರಂ ॥ ೩೦೧

ಅಗಲವು ಚಕ್ರವಾಕ ಮಿಥುನಾವಳಿ ದೀಪನಿಕಾಯಕಾಂತಿಗ । ಳ್ಮಿಗಿ ಲೆನೆ ವಾರಕಾಂತೆಯರ ಭೂಷಣಕಾಂತಿಯು ಕೆಂಬಿಸಿಲ್ಗಳಾ ॥ ವಗ ಮೊಸೆಯು ತ್ತಿರಲ್ವಿಷಮಬಾಣನ ತೀವ್ರಶರಾಸಳಾರ್ಭಟಗ । ಳ್ತಗುಳ್ದುವೆನಲ್ಕೆ ತೋ ರ್ಪ್ಪವು ತಮಸ್ವಿನಿಗಳ್ವಿಧುವಿಪ್ರಲಂಭದಿಂ ॥ ೩೦೨

ತೊಳಗುವ ಮಾಳವೀ ಮುಖಸರೋರುಹಕಾಂತಿಗೆ ಸೋಲ್ತು ಚಂ ದ್ರಮಂ । ಡಳದ ಕಳಂಕಮಂ ಕಳೆವಸಲ್ಗಗೀ ಲಲಿತಾಂಗಿ ನಿಕ್ಕುತೋ ॥

---

೩೦೨. ತಮಸ್ವಿನಿಗಳ್—ರಾತ್ರಿಗಳು; ವಿಧುವಿಪ್ರಲಂಭದಿಂ—ಚಂದ್ರವಿರಹದಿಂ ದಕೊಡಿ; ತೋರ್ಪ್ಪವು—ಪ್ರಕಾಶಿಸುವವು.

*[ಮನುದರಕುಮುದಾ] †[ವುದಂತುಧವಳ]

ಳ್ಗಳನೆನೆ ಕೂಡೆ ಕಣ್ಗೊಳಿಸಿ ತೋರ್ಪ್ಪುವು ಮಂದನಿಶಾಸಮೀರಸಂ । ಚಳನಚಳದ್ದುಕೂಲಪಟಪಲ್ಲವರಾಜಿತಕೇತನಾಳಿಗಳ್ ॥ ೨೦೩

ಕಂ॥ ಎಳವೆಂಡಿರ್ಸ್ನಿಗ್ಧಲೀವಾಡದೊ । ಳೆಳಸಿರೆ ನಡೆನೋಡಿ ಸೋಲ್ತು ವ್ರೀಳ್ಚಂದ್ರಂ ಮಾ ॥ ಪ್ರ್ಸ್ವಳಿವ ನೆವದಿಂ ಪೊರಳ್ವಂ । ಮಳಯಜರಸಸಿಕ್ತರತ್ನಕುಟ್ಟಿಮತಳದೊಳ್ ೨೦೪

ವ॥ ಮತ್ತಂತರಳತೆ ಹಾರಂಗಳೊಳ್ ದ್ವಂದ್ವವಿಯೋಗಂ ಚಕ್ರವಕ್ಕಿಗಳೊಳ್ ವರ್ಣಪರೀಕ್ಷೆ ಕನಕಂಗಳೊಳ್ ಚಂಚಲತ್ವಂ ಧ್ವಜಪತಾಕೆಗಳೊಳ್ ಮಿತ್ರದ್ವೇಷಂ ಕುಮುದಂಗಳೊಳ್ಲ್ಲದಿಲ್ಲವೆಲ್ಲಿಯುಂ ॥ ೨೦೫

ವೃ॥ ಸ್ಮರಭಸ್ಮಾಲಂಕೃತಾಂಗಂ ರತಿವಲಯಸಮಭ್ಯರ್ಚಿತಾಂಘ್ರಿದ್ವಯಂ ಭೀ । ಕರಶೂಲೋದ್ದಾರಿತಾಂಧಾಸುರ ನಗತನಯಾನೂಪುರೋದ್ಘೃಷ್ಟಜೂಟಂ ॥ ಸುರವಂದ್ಯಂ ಸಂದಕೈಲಾಸಮುಮ ನಿಳಿಸಿನಿಂದಂ ಮಹಾಕಾಳನಾಮಂ । ಗಿರಿಶಂ ತಾನೆಂದೊಡುಜ್ಜೈನಿಯಮಹಿಮೆಯನೇಂಬಣ್ಣಿಸಲ್ಬಲ್ಲನಾವಂ ॥ ೨೦೬

ವ॥ ಅನ್ನಾನಗರಿಯೊಳ್ನೃಗನಹುಷಯಯಾತಿ ದುಂಧುಮಾರ ಭಗೀರಥ ಪ್ರತಿಮನುಂ ನಿಜಭುಜಾರ್ಜಿತ ಭೂಮಂಡಲನುಂ ಫಲಿತಶಕ್ತಿತ್ರಯನುಂ ನೀತಿಶಾಸ್ತ್ರಾಭಿಪ್ರಾಯಬುದ್ಧಿಯುಮಧಿಗತಸರ್ವಶಾಸ್ತ್ರನುಮನೇಕಸಪ್ತತಂತುಪೂತಮೂರ್ತಿಯುಮುಪಶಮಿತಜಗದುಪಪ್ಲವನುಮೆನಿಸಿ ಮಕರಧ್ವಜನಂತೆ ಸದಾಸನ್ನವಿಗ್ರಹನುಂ ದಶರಥನಂತೆ ಸುಮಿತ್ರೋಪೇತನುಂ ನಾಗರಾಜನಂತೆ ಕ್ಷಮಾಗುರುವುಂ ನರ್ಮದಾಪ್ರವಾಹದಂತೆ ಮಹಾವಂಶ ಪ್ರಭವನುಂ ಧರ್ಮಾವತಾರನುಂ ಪುರುಷೋತ್ತಮಪ್ರತಿನಿಧಿಯುಮೆನಿಸಿದಮಹಾನುಭಾವಂ ತಾರಾಪೀಡನಿರ್ಪ್ಪನಾತನಮಹಿಮೆಯಂ ಪೇಳ್ವೊಡೆ ॥

---

೨೦೫. ನೂಪುರ—ಕಾಲಕಡಗದಿಂದ ; ಉದ್ಘೃಷ್ಟ—ಉಜ್ಜಲ್ಪಟ್ಟ ; ಜೂಟಂ—ಜಟಾ ಭಾರವುಳ್ಳ ; ಇಳಿಸಿ—ತಿರಸ್ಕರಿಸಿ.

ಕಂ॥ ಬಿಸುಟು ಸರೋಜಸಿಗಳ ಸೇ। ಳಿಸಿ ಮಾಧವವಿಪ್ರಳವಕ್ಷವಂ ವೀರನೃಪ॥ ವ್ಯಸನದಿ ನಾನ್ಯನನೊಳ್ಸಂ। ತಸದಿಂದಂ ರಾಜ್ಯಲಕ್ಷ್ಮಿ ಸಲೆ ನೆಲಸಿರ್ಪಳ್॥ ೨೦೮

ವೃ॥ ರಾವಣನೊತ್ತಿ ಕಿೞ್ತ ರಜತಾದ್ರಿಯು ನಶ್ರಮದಿಂದವಾಮಹಾ। ದೇವನದೆಂತು ಮುನ್ನಿಱಿಸಿದಂ ಸ್ಥಿರಮಾಗಿರಲಂತಶೇಷದೋ॥ ಷಾವಿಳಮಪ್ಪದೊಂದು ಕಲಿಕಾಲಮದಾದಮೆ ಕಿೞ್ತುಧರ್ಮಮಂ। ಭೂವರನಾವಗಂ ನಿಲಿಸಿದಂ ನಿಖಿಳಾವನಿರಕ್ಷಣಕ್ಷಮಂ॥ ೨೦೯

ಕಂ॥ ಪತಿಯುಗಲ್ದ ವೇಗದಿಂ ದುಃ। ಖಿತೆಯಾಗಿರೆ ಕಂಡು ಕರುಣಮಗ್ಗಲಿಸಲುಮಾ॥ ಪತಿ ಪಡೆದಂ ಮತ್ತಂ ರತಿ। ಪತಿಯನೆನುತ್ತಿರ್ಪ್ಪದವನಿ ಜಗವಧಿಪತಿಯುಂ॥ ೨೧೦

ವೃ॥ ದಿನಪೇಂದುಪ್ರಚಯಾದ್ರಿಯಿಂದೆ . ಜಳದೇವೀವಂದ್ಯರಾಮಕ್ರಮಂ। ಕನಿಕಾಯಯಾಂಚಿತಸೇತು . ಚಕ್ರಧರಕೇಯೂರದ್ವಯೋದ್ಘೃಷ್ಟಮಂ॥ ದರಶೈಲಂ ಧನದಾಂಗನಾಭರಣಲಕ್ಷ್ಮೀಚುಂಕನದ್ಗಂಧಮಾ। ದನಮೊಂದೆಂತಿರ್ಪ್ಪ ಮೇರೆಯಾಗೆ ತಳೆದಂ ಭೂಚಕ್ರಮಂ ಭೂಭುಜಂ॥ ೨೧೧

ಕಂ॥ ಮಂದರ ಗಿರೀಂದ್ರನಿಂದೊಗೆ। ತಂದಸುಧಾಸಿಂಧುಲೇಖೆ ಯೆನೆ ನಿಖಿಳಜಗ॥ ನ್ಮಂಡಳಮಂ ಧವಳಿಸಿದ। ತ್ತುಂಗೋಜ್ಜ್ವಳಕೀರ್ತಿ ಕೀರ್ತಿನಾರಾಯಣನಾ॥ ೨೧೨

---

೨೦೮. ಏಳಿಸಿ—ತಿರಸ್ಕರಿಸಿ.

೨೧೦. ಪತಿಯುಗಲ್ದ—ಗಂಡನಗಲ್ಕೆಯಿಂದುಂಟಾದ; ವೇಗದಿಂ—ಭರದಿಂದ; ಅಗಲ್ದ ಎಂಬಲ್ಲಿ ದ್ವಿತ್ವಸ್ಥಿತಿಯಿಲ್ಲದ್ದು ಪ್ರಾಚೀನಪ್ರಯೋಗದಿಂದ ಸಾಧುವಾಗಿದೆ.

೨೧೧. ದಿನಪೇಂದು—ಸೂರ್ಯಚಂದ್ರರ; ಪ್ರಚಯ—ಉದಯದ; ಅದ್ರಿಯಿಂದೆ—ಪರ್ವತದಿಂದ ಅಂದರೆ ಉದಯಪರ್ವತ ಮೊದಲಾಗಿ ಸೇತುವೂ ಮಂದರಶೈಲವೂ ಗಂಧಮಾದನವೂ ಮೇರೆಯಾಗಲು ಭೂಚಕ್ರವನ್ನು ಪಾಲಿಸಿದನೆಂದಭಿಪ್ರಾಯವು; ಕ್ರಮ—ಪಾದವಿನ್ಯಾಸ; ಚುಂಕನ — [illegible]

ಕಂ॥ ವನನಿಧಿಪರೀತ ವಿಶ್ವಾ। ವನಿಪತಿಯ ಮಹಾಪ್ರತಾಪದಿಂ ಜೇ। ದ್ರ್ದಪಳಂ ॥ ಬಿನೆಗಂ ಛತ್ರಚ್ಛಾಯೆಯ। ನಿನಿಸಗಲದೆ ರಾಜ್ಯಲಕ್ಷ್ಮಿ ಸಲೆ ನೆಲಸಿಪ್ಪರ್ಳ್ ॥ ೩೧೩

ವ॥ ಅಂತಾನರೇಂದ್ರನರಸುತನದೊಳ್ಪಪಕ್ಷತೆ ಗಿರಿಗಳೊಳ್ ಪರತ್ವಂ ಪ್ರತ್ಯಯಂಗಳೊಳ್ ಛಿದಿರಪ್ಪುದು ಕನ್ನಡಿಯೊಳ್ ದುರ್ಗಾಶ್ರಯಂ ಶೂಲ ಪಾಣಿಯೊಳ್ ಉದ್ವೃತ್ತತೆ ಧ್ವಜಂಗಳೊಳ್ ದುಶ್ಶಾಸನಾಪರಾಧಂ ಭಾರತ ದೊಳ್ ದಂಡಗ್ರಹಣಂ ವಯಃಪರಿಣತಿಯೊಳ್ ವಕ್ರತೆ ವನಿತಾಕುಚಪತ್ರಂ ಗಳೊಳ್ ಬಂಧನಂ ಕುಸುಮಂಗಳೊಳ್ ತುಲಾರೋಹಣಂ ಗ್ರಹಂಗಳೊಳ್ ಆಯತಿಭಂಗಂ ಕೇಶನಖಂಗಳೊಳ್ ಮಲಿನಾಂಬರತ್ವಂ ಜಲದಾಗಮದೊಳ್ ತಾರಕೋದ್ಧರಣಂ ಕುಮಾರಸ್ತುತಿಯೊಳ್ ಗ್ರಹಣಂ ಚಂದ್ರಾರ್ಕರ್ಜೊಳ್ ಶೂನ್ಯಗೃಹದರ್ಶನಂ ನೆತ್ತದೊಳಲ್ಲದಿಲ್ಲವೆಲ್ಲಿಯುಂ ॥ ೩೧೪

ವೃ॥ ಆತಾರಾಹೀಡ ಭೂಭೃತ್ಪತಿಗೆ ಸಕಳಶಾಸ್ತ್ರಾನ್ವಿತಂ ವಿಪ್ರವಂಶ। ಖ್ಯಾತಂ ನೀತಿಪ್ರಯೋಗಪ್ರಭು ನಿಖಿಳದಯೋದಾರಗಾಂಭೀರ್ಯ ನಾಬಾ ॥ ಲ್ಯಾತಿಪ್ರೇಮಾರ್ದ್ರಚಿತ್ತಂ ಸಿತಮತಿ ಮಹಾಸತ್ವವೃತ್ತಂ ತ್ರಿವರ್ಗೋ। ಪೇತಂ ಷಾಡ್ಗುಣ್ಯಶೀಲಂ ವರಬುಧನಿವಹಸ್ತೋತ್ರಪಾತ್ರಂಪ್ರಶಸ್ತಂ ॥ ೩೧೫

ಕಂ [ರಾಮಂಗೆ ಕುಶಿಕತನಯಂ। ವೈಮಾನಿಕನಾಯಕಂಗೆ ವಾಚ ಸ್ಪತಿಯಾ ॥ ಭೀಮಂಗೆ ದಮನನೆನೆನಿ। ಸ್ಸೀಮಗುಣಂ ಮಂತ್ರಿಯೆನಿಸಿದಂ ಶುಕನಾಸಂ] ॥ ೩೧೬

ನರಕೋಗ್ರಾಸುರ ಶಾತಶಸ್ತ್ರನಿವಹೋದಗ್ರಪ್ರಹಾರಾತಿಭೀ । ಕರ ಮುಂ*[ಮಂದರಘರ್ಷಣಾತಿ ಕಠಿಣೋತ್ತುಂಗಾಂಸಪೀಠಾತಿಬಂ ॥ ಧುರಮುಂ]

೩೧೩. ಜೇದ್ರ್ದಪಳಂಬಿನೆಗಂ—ಹೆದರುತ್ತಾಳೆ ಎಂಬುವಹಾಗೆ: ಪ್ರತಾಪದಿಂ—ಪರಾಕ್ರಮವೆಂಬ ಬಿಸಿಲಿನಿಂದ.

೩೧೭. ಶಾತ—ತೀಕ್ಷ್ಣವಾದ ; ಪೀಠಬಂಧುರಮುಂ—ಪೀಠದಿಂದ ಕೂಡಿದ್ದು ; ಎನಿಸುವ—ಎನಿಸಿಕೊಳ್ಳುವ ; ನಿಂದಳಂ–ನೆಲೆಗೊಂಡಿರುವ ; ಅದಾವಗಾನಂ–ಅದೇನ ಸಾಧ್ಯ? ಎನಿಕುಂ—ಎನ್ನುವಹಾಗೆಮಾಡುವದು.

*[ಸ್ಥೈರ್ಯನಾಪ್ರಕರಸೊತ್ತುಂಗಾಗಪ್ರಿಯಕ್ಕ ಬಂಧುರಮುಂ]

ತಾನೆಸೆಸಿರ್ದ್ದ ವಿಷ್ಣುವಿನ ವಕ್ಷೋಭಾಗದೊಳ್ನಿಂದಳಂ । ಸಿರಿಯಂ ತಪ್ಪಿರ್ದ ದವಾವಗಾನವೆನಿಕುಂ ಪ್ರಜ್ಞಾಬಳಂ ಮಂತ್ರಿಯಾ ॥ ೩೧೭

ವ ಅಂತಾಮಂತ್ರಿಯೊಳ್ ಸಕಳರಾಜ್ಯಭಾರಮಂ ತಾರಾಪೀಡಂ ನಿಲಿಸಿ ನವಯೌವನೋಚಿತ ಸುಖೋನ್ಮುಖನಾದನದೆಂತೆನೆ ॥ ೩೧೮

ವೃ॥ ಪುಳಕನಿತಾಂತಜರ್ಝರಿತ ಕರ್ಣವತಂಸೆಯರಪ್ಪ ಕಾಂತೆಯು । ಕ್ಕಗಳ ದರಹಾಸ ಚಂದನರಸಾಭಿಷವಂ ಮಣಿಭೂಷಣಾಂಶುಸಂ ॥ ಕುಳಪಟವಾಸರೇಣುತತಿ ಬಾಹುಲತಾದೃಢಬಂಧ ವಿಕ್ಷಣೋ । ತ್ಪಳಹರಿ ತನ್ನೊಳೊಪ್ಪೆ ತಳೆದಂ ಮದನೋತ್ಸವಮಂ ಮಹೀಭುಜಂ ॥ ೩೧೯

ಸುರತಸ್ವೇದೋದಬಿಂದುಚ್ಯುತ ಮೃಗಮದಪತ್ರಂ ರದಸ್ಪಷ್ಟದಷ್ಟಾ । ಧರಬಿಂಬಂ ಪ್ರಸ್ಫುಲತ್ಕಂಕಣರಣಿತ ಕಚಾಕರ್ಷಣೋತ್ಕೀರ್ಣಕರ್ಣಾ ॥ ಭರಣಂ ಕನ್ಗೊಪ್ಪಿ ಕಾಂತಾತತಿಯೊಳಸೆಯೆ ಸಂಭೋಗಮಂ ರಾಗದಿಂ ಬಿ । ತ್ತರಿಸಂ ಪ್ರೇಮಪ್ರಕೋಪಾಹತಿ ಚರಣತಳಾಲಕ್ತಲೇಖಾಲಲಾಮಂ ॥ ಅದಲ್ಲದೆಯುಂ— ೩೨೦

ತರುಣೀಸಂಕುಳ ಹಸ್ತಯಂತ್ರವಿಗಳತ್ಕಾಶ್ಮೀರಧಾರಾ ಪರಂ । ಪರೆಗಳ್ಕಸ್ತ್ರಥಮುಕ್ತಪೇಮಮಯ ನಾರಾಚಾಳಿವ್ರೊಳ್ಬೆಳ್ವನಾ ॥ ವರಿಸಲ್ಬಂದನವಾರಿಬಿಂದುವಿಲಸತ್ಕಸ್ತೂರಿಕಾ ಸಾರಭೋ । ತ್ಕರಚಂಚತ್ತನು ಹೇಮಶೃಂಗಜಳಕೇಳೀ ಲೀಲೆಯಂತಾಳ್ದಿದಂ ॥ ಮತ್ತಂ— ೩೨೧

ಲಲನಾಲಕ್ತಕಸಿಕ್ತ ಹಂಸಯುಗಳಂ ಸೈತಂಬವಿಕ್ಷೋಭಸಂ । ಚಳಮುಚ್ಚಸ್ತನಚಂಗನೋಜ್ಜ್ವಳಮುದಂಚತ್ಕರ್ಣಪೂರೋತ್ಪಳಾ ॥ ವಿಳಮಾಕೀರ್ಣಕಚಪ್ರಸೂನಶಬಳಂ ಮಾಳ್ಪಂ ಸರೋಜಾಕರಂ । ಗಳನಂತಃಪುರಕಾಮಿನೀ ಪರಿವೃತಂ ನಿಡುಂ ಜಳಕ್ರೀಡೆಯೊಳ್ ॥ ೩೨೨

---

೩೧೯. ಪಟವಾಸ—ಗಂಧದಪುಡಿ ; ಹರಿ—ಕಾಂತಿ.

೩೨೨. ಜಲಕ್ರೀಡೆಯೊಳ್ ಕಾಮಿನೀಪರಿವೃತನಾಗಿ ಸರೋಜಾಕರಂಗಳಂ ಲಲನಾಲಕ್ತಕಸಿಕ್ತಹಂಸಯುಗಳಗಳುಳ್ಳುವಾಗಿರೋಣ ವ್ಯಾಗೋಹಾಗೆ ಮಾಳ್ಪಂ—ಎಂದನ್ವಯವು—ಇಲ್ಲಿ ಎಲ್ಲಾ ಪ್ರಥಮಾಂತಗಳಂತಿರುವ ಪದಗಳನ್ನು ಕ್ರಿಯಾವಿಶೇಷಗಳನ್ನಾಗಿ ಅನ್ವಯಿಸಬೇಕು.

ನೃ ತಡೆಪ್ಪೈ ಪಂಚಕ ಕೂರ್ತ್ತವ್ರೊಲ್ಕುಬ್ಜಪ್ರವೇಳ್ದಿಲ್ಲಿರ್ದ್ದ ಯೆಂದೊ
ಪೆರ್ಸ್ಮ್ರದ । ಕ್ಷ್ಣಮಗುತ್ತಂ ಪ್ರಣಯಪ್ರಕೋಪಭರದಿಂದೆಯ್ತಂದು ಕಾಂತಾಜ
ನಂ ॥ ಪಿಡಿತಂದೊರ್ವ್ವೆಯೆ ಕಂಕಣಂಗಳುಲಿಯಲ್ಪ್ರಾವಾಲೆಯಿಂ ಸೋಲೆ
ಪೊ । ಯ್ವುಡೆವಂ ಕೇಸರದಾಮಬದ್ಧಚರಣಂ ಶೃಂಗಾರಸಾರೋದಯಂ ॥ ೩೬೩

ವ ॥ ಮತ್ತಮಶೋಕತರುವಿನಂತೆ ತರುಣೀಪದಪ್ರಹಾರಸಂಕ್ರಾಂತಾಲಕ್ತಕರಾಗಮುಂ ತಾಳ್ದಿಯುಂ ಹಂಸನಂತೆ ರಮಣೀಯನೂಪುರನಿನಾದಾನಂದಿತಮಾನಸಸರೋವರದೊಳ್ ಚರಿಸಿಯುಂ ಭ್ರಮರದಂತೆ ಕುಸುಮಮಂಜರೀರಂಜಿತಲತಾಭವನಂಗಳೊಳ್ ಭ್ರಮಿಸಿಯುಂ ಕಾಮಿನೀಜನದತ್ತಸಂಕೇತಸದನಂಗಳೊಳ್ ಬಹುಳನಿಶಾಪ್ರದೋಷಂಗಳೊಳ್ ಭ್ರಮಿಸಿಯುಂ ವಿಘಟಿತಕನಕಕವಾಟವಾತಾಯನಂಗಳಪ್ಪ ಮಹಾಪ್ರಾಸಾದಸದನಂಗಳೊಳ್ ಸುಳಿದುಂ ಪರಿಮಿತಾಪ್ತಜನದೊಡನಂತಃಪುರಕಾಮಿನೀಪರಿವೃತನನೇಕವೀಣಾವೇಣುಮುರಜಮನೋಹರಂಗಳಪ್ಪ ಸಂಗೀತಂಗಳಂ ವಿಸ್ತರಿಸಿಯುಂ ಅತಿರಮಣೀಯಮಭಿಮತಮವಿರುದ್ಧಮೆನಿಪ ವಿಷಯ ಸುಖಾರ್ಣವದೊಳ್ ಮೂಡಿಮುಳ್ಕುತ್ತಮಿರ್ದ್ದನಂತುಮಲ್ಲದೆಯುಂ ॥ ೩೬೪

ಕಂ॥ ಪ್ರತಿಪಾಲಿಸಿ ವಸುಮತಿಯಂ । ಕೃತಾರ್ಥರೆನಲಿಂತು ವಿಷಯ
ತತಿಗೆಳಸಲ್ಭ ॥ ಪತಿಗಳ ಭೂಷಣಮೆನಿಸುಗು । ಮಿತರರ್ಗ್ಗೆ ವಿಷಯತತಿ
ವಿಡಂಬನಮಲ್ತೇ ॥ ೩೬೫

ಎನಿತೊಳವು ವಿಷಯಸಮುದಯ । ಮನಿತಱೊಳಂದಂದು ಪರಮ
ಸುಖಮಂ ಪಡೆದಂ ॥ ತನಯಮುಖಾಲೋಕನ ಸುಖ । ಮನದೊಂದನೆ
ಪಡೆದನಿಲ್ಲತಾರಾಪೀಡಂ ॥ ಅದುಕಾರಣದಿಂ— ೩೬೬

---

೩೬೩. ಕೂರ್ತವ್ರೋಲ್—ಪ್ರೀತಿಸಿದಹಾಗೆ; ಕುಬ್ಜಪ್ರವೇಳ್ದು—ಸಂಕೇತಸ್ಥಳವನ್ನುಸೂಚಿಸಿ; ಬವ್ಸ್ರದಲ್—ಪ್ರಾರಂಭದಲ್ಲಿ; ಸೋಲೆ—ಸೋತುಹೋಗುವಹಾಗೆ; ಪೊಯ್ವುಡೆವಂ—ಪೆಟ್ಟುತಿನ್ನುವನು.

೩೬೫. ಕೃತಾರ್ಥರೆನಲ್—ಕೃತಕೃತ್ಯರುಎಂದು ಜನರು ಹೇಳುತ್ತಿರಲು.

೩೬೬. ಒಳವು—ಇವೆಯೋ; ಅಂದಂದು—ಯೋಗ್ಯಕಾಲಗಳಲ್ಲಿ; ಪಡೆದಂ—ಪಡೆದಂಥಾವನು; ಇಲ್ಲ—ಆಗಲಿಲ್ಲ.

[illegible] ವೈ" ಧರಣೀಪಾಲಸಹಸ್ರ ಸಂವೃತ ನೆನಲ್ಪಂದಿರ್ದುಮೇಕಾಕಿಯಂ । ತಿರೆ ಪೃಥ್ವೀವಲಯಾವಲಂಬನೆನೆ ಸಂದಿರ್ದುಂ ನಿರಾಲಂಬನಂ ॥ ತಿರೆ ಕರ್ಣಾಂತವಿಶಾಲಲೋಚನ ನೆನಲ್ಪಂದಿರ್ದು ಮಂದಂಧನಂ । ತಿರೆ ತನ್ನಂ ಬಗೆವಂ ತನೂಜರಹಿತಂ ವಿಶ್ವಂಭರಾವಲ್ಲಭಂ ॥ ೩೧೭

ವ॥ ಮತ್ತಮಾ ಧರಾಧೀಶ್ವರಂಗೆ ಹರಜಟಾಕಳಾಪಕ್ಕೆ ಚಂದ್ರಲೇಖೆಯಂತೆ ನಾರಾಯಣ ವಕ್ಷಸ್ಥಳಕ್ಕೆ ಕೌಸ್ತುಭಪ್ರಭೆಯಂತೆ ದಿಗ್ಗಜಕ್ಕೆ ಮದಲೇಖೆಯಂತೆ ವಸಂತಸಮಯಕ್ಕೆ ಕುಸುಮೋದ್ಗಮದಂತೆ ಮಾನಸ ಸರೋವರಕ್ಕೆ ಹಂಸಮಾಲೆಯಂತೆ ಮಲಯಾಚಲಕ್ಕೆ ಚಂದನರಾಜಿಯಂತೆ ವಿಳಾಸವತಿಯೆಂಬಳಂತಃಪುರಪ್ರಧಾನೆಯೆನಿಸಿದ ಮಹಾದೇವಿಯರುರಮನೆಗೆ ದಿನದಿನಂ ತಾರಾಪೀಡನರೇಂದ್ರಂ ಬರುತ್ತುಮಿರಲನ್ನೆಗಂ ॥ ೩೧೮

ಕಂ॥ ಪನಿಯುಱಿಕೆಯ ಸಿಂಗುರಿವಿಡಿ । ವಡಪದ ಕನ್ನಡಿಯ ಪಡಿಗದಾಕೆಗಳಲ್ಲಿ ॥ ಮಿಡುಕಲಣಮಱಿಯದಿರ್ದರ್ । ದ್ದರ್ಡೆಯೊಳ್ಬಗಾಗಿ ಮೂಗರಂದವಿನಿರ್ದರ್ ॥ ೩೧೯

ವ॥ ಆಗಳಂತಃಪುರವೃದ್ಧಾಂಗನಾಶ್ವಾಸ್ಯಮಾನೆಯು ಮವಿರಳಾಶ್ರುಬಿಂದುಧಾರಾಪ್ರಕ್ಷಾಳಿತಮುಕುಳಿಯು ಮನಳಂಕೃತೆಯುಂ ವಾಮಕರತಳವಿನಿಹಿತಮುಖಕಮಳೆಯುಂ ಪರ್ಯಂಕೋಪವಿಷ್ಟೆಯುಮಾಗಳುತ್ತಿರ್ದ ವಿಳಾಸವತಿಮಹಾದೇವಿಯುಂ ತಾರಾಪೀಡನರೇಂದ್ರಂ ಕಂಡು ಕೃತಪ್ರತ್ಯುತ್ಥಾನೆಯಪ್ಪ ನಲ್ಲಳಂ ಮೆಲ್ಲನೆ ಕುಳ್ಳಿರಿಸಿ ತಾನುಂ ಮೆಲ್ಲನೆ ಕುಳ್ಳಿರ್ದಜ್ಞಾತಕಾರಣಂ ಬಾಷ್ಪವಿಸೆದಾತ್ಮಕರತಳದಿಂದಾಕುಟಿಲಾಳಕಿಯ ನಯನಜಲಂಗಳಂ ತೊಡೆದು ॥ ೩೨೦

---

೩೧೭. [illegible], [illegible], [illegible] ಎಂದು ಪದವಿಭಾಗ.

೩೧೮. ಅಂತಃಪುರಪ್ರಧಾನೆ—ರಾಣಿಯರಲ್ಲಿ ಮುಖ್ಯಳು ; ವಿಳಾಸವತಿಯೆಂಬಳ—ವಿಳಾಸವತಿಯೆಂದು ಹೆಸರುಳ್ಳ.

೩೧೯. ಮಿಯುಱಿಕೆ[illegible]—[illegible] ; ವಡಪದ—ತಾಂಬೂಲದ ಸಂಚಿಯ ; ಪಡಿಗದ—ಮುಖಪ್ರಕ್ಷಾಳನಪಾತ್ರೆಯ.

ವೃ॥ ನಸುದೆಱೆಯುತ್ತಮಿರ್ದ್ದ ಪೊಸಮುತ್ತಿನ ಸಿಂಪಿನ ಸಂಪುಟಂಗಳಂ। ನುಸುಳ್ದು ಸುಪಾಣಿಯಾಗಿ ಪೊರಪೊಣ್ಮುವ ಮುತ್ತಿನ ಮಾಲೆಯಂದದಿಂ ॥ ಮಿಸುಗಿ ನಿರಂಜನಂಗಳೆನಿಪಕ್ಷಿ ಪುಟಾಂತರದಿಂದಮೋಕೆ ಪೇ। ಳ್ಪ ಸರಿಸಿ ನೀಳ್ದು ಪೊಣ್ಮಿದುವು ಕಣ್ಬಸಿಗಳ್ತರಳಾಯತೇಕ್ಷಣೇ ॥ ೨೨೧

ಕಂ॥ ಕೆಂದಾವರೆ ಚೆಂಬಿಸಿಲಿಂ । ದೊಂದುವ ತೆಱದಿಂದೆ ನಿನ್ನ ಮೃದುಪದಯುಗಮಂ ॥ ದೆಂದಿನವೊಲಲಕ್ತಕರಸ । ದಿಂದಂ ಪೇಳೆಂದಿತಿಲ್ಲಿವೇನಿಂದುಮುಖೀ ॥ ೨೨೨

ಸ್ಮರರಾಜಕೇಳಿಕಮಲಾ। ಕರಕಳಹಂಸಂಗಳೆನಿಸಿ ಸೊಗಯಿಪ ಮಣಿನೂಪುರಯುಗಳಂ ನಿನ್ನ ಪದಾಂ। ಬುರುಹಮನೊಂದಲ್ಕೆ ಪಡೆಯದಿಂದಿನ ತೆಱನೇಂ ॥ ೨೨೩

ಊರುಯುಗಸ್ತಂಭೋನ್ನತ । ತೋರಣಮೆಂಬಂತೆ ಮಿಸುಗುವುಡಿನೂಲಿಂದೇಂ ॥ ಕಾರಣದಿಂ ಕಟ್ಟಿದು ನೀ। ರೇರುಹದಳನಯನೆ ನಿಜನಿತಂಬಸ್ಥಳದೊಳ್ ॥ ೨೨೪

ಮೃಗಲಾಂಛನಮಂಡಳದೊಳ್। ಮೃಗತನು ಮಿಸುಪಂತೆ ನಿನ್ನ ಕುಚಮಂಡಳದೊಳ್ ॥ ಮೃಗಮದವಿಚಿತ್ರಪತ್ರಂ। ಮೃಗಲೋಚನೆ ಬರೆಯದಿರ್ದ್ದದಿಂದಿನ ತೆಱನೇಂ ॥ ೨೨೫

---

೨೨೧. ಸಿಂಪಿನ—ಚಿಪ್ಪಿನ ; ನುಸುಳ್ದು—ನುಗ್ಗಿ ; ಸುಪಾಣಿಯಾಗಿ—ಥಳಥಳ್ಯವುಳ್ಳದ್ದಾಗಿ ; ಪೊಣ್ಮಿದುವು—ಹೊರಟುವು.

೨೨೨. ಚೆಂಬಿಸಿಲಿಂ—ಕೆಂಪಾದ ಬಿಸಿಲಿನಿಂದ ; ಕೆಚ್ಚನೆ+ಬಿಸಿಲ್=ಚೆಂಬಿಸಿಲ್ ಇಲ್ಲಿ ಕೆಚ್ಚನೆಯೆಂಬ ಆದಿಯ ಕಕಾರಕ್ಕೆ ಚಕಾರವೂ ದ್ವಿತ್ವಚಕಾರಕ್ಕೆ ಮಕಾರವೂ ಆದೇಶವಾಗಿವೆ, ಶಮ. ಸೂ. ೧೪೦. ಎಂದೆಂದಿನವೊಲ್—ಮುಂಚಿನಂತೆ.

೨೨೩. ಪಡೆಯದು—ಯೋಗ್ಯವಾಗದು.

೨೨೪. ಉಡಿನೂಲ್—ಬಡ್ಯಾಣ ; ಇಂದು+ಏಂಕಾರಣದಿಂ ; ಕಟ್ಟಿದು—ಕಟ್ಟಲ್ಪಡಲಿಲ್ಲ. ಇಲ್ಲಿ ಕರ್ಮಾರ್ಥದಲ್ಲಿ ಆಖ್ಯಾತಪ್ರತ್ಯಯ ಬಂದಿದೆ. ಆದರೆ ಅಲ್ಪಡು ಎಂಬ ಅನುಪ್ರಯೋಗವು ವಿಕಲ್ಪವೆಂದು ಕೆಲವರ ಮತ.

೨೨೫. ಬರೆಯದೆ—ಬರೆಯಲ್ಪಡದೆ, ಶಶಾ. ಸೂ. ೫೨೧.

ಕಂ॥ ಲಲಿತಲತಾಂಗುಲಿವಳಸಂ । ಕಲಿತಂ ಕರತಳಮಿದೇಕೆ ಕೋಮಲೆ ಕದಪಂ ॥ ತಳೆದುದು ದರದಳಿತರಕ್ತೋ । ತ್ಪಲದಂದದೆ ಕರ್ಣಪೂರಮಾದತ್ತೀಗಳ್ ॥ ೩೩೬

ಒಗೆತರ್ಪ ಬಹುಳಬಾಷ್ಪಾಂ । ಬುಗಳಿಂದಂ ಧೌತಮಾದುವೇಕೆಯೊ ನಿನ್ನೀ ಸೊಗಯಿಪ ಕಪೋಲಪಾಳೀ । ಯುಗಳದ ಕಾಶ್ಮೀರಮಕರಿಕಾಪತ್ರಂಗಳ್ ॥ ೩೩೭

ಪೊಳೆವೆಳೆವೆಱೆಯುಂ ತನ್ನಾ । ಳ್ತೆಳೆಯುದ ಕಾರಿರುಳ ತೆಱದೆ ಕುಸುಮಾವಳಿಯುಂ ತಳೆಯುದ ನಿನ್ನಬಳಲ್ಕುಡಿ । ಬಳಯಿಸಿದಪುದೆನ್ನ ಮನಕೆ ಖೇದಮನೀಗಳ್ ॥ ೩೩೮

ಜಡಿಪಿದ ನಿಜಖೇದಕ್ಕಾ । ವುದು ಕಾರಣ ಮತಿವಿರಕ್ತಮೆನಿಸಿದ್ದೆನ್ನಿಂ ಹೃದಯಂ ನವಪಲ್ಲವದಂ । ದದೆ ಕಂಪಿಸಿದಪುದು ಕಂಡು ನಿನ್ನೀ ತೆಱನಂ ॥ ೩೩೯

ವೃ॥ ಎನ್ನಿಂದಾದತ್ತೊ ಮೇಣೆನ್ನಯ ಪರಿಜನದಿಂದಾದುದೋ ನೋವು ನೋಳ್ಪಂ । ತೆನ್ನೊಳ್ತಪ್ಪುಳ್ಳೊಡೆಂದುಂ ಸಮನಿಸಿದುದ ನಾನೇನುಮಂಕಾಣೆನಿಂತಿ । ರ್ದೆನ್ನೀಸಾಮ್ರಾಜ್ಯಮುಂ ಜೀವಮುಮಿವು ನಿನಗಾಯತ್ತಮಾಗಿರ್ದ್ದುಂ ಪೇ । ಳ್ನಿನ್ನೀ ಶೋಕಕ್ಕದೇಂಕಾರಣಂ ಮಱೆದಪೆನಿಲ್ಲೀಗಳಂಭೋಜನೇತ್ರೇ ॥ ೩೪೦

---

೩೩೬. ಕರ್ಣಪೂರಮಾದತ್ತು — ಕರ್ಣಾಭರಣವಾಯಿತು, ಅಂದರೆ ಕಿವಿಯ ಸಮೀಪವನ್ನು ಸೇರಿತು ಎಂದಭಿಪ್ರಾಯ.

೩೩೭. ಒಗೆತರ್ಪ — ಹೊರಡುವ.

೩೩೮. ಪೆಳೆವೆಱೆಯುಂ — ಬಾಲಚಂದ್ರನನ್ನು, ಕಾರಿರುಳ — ಕಪ್ಪಾದರಾತ್ರಿಯ; ಕರಿದು + ಇರುಳ್ — ಕಾರಿರುಳ್, ಶಬ್ದಾ. ಸೂ. ೩೩೫.

೩೪೦. ಎನ್ನೊಳ್ತಪ್ಪುಳ್ಳೊಡೆ — ನನ್ನಿಂದ ತಪ್ಪುಂಟಾಗಿದ್ದ ಪಕ್ಷದಲ್ಲಿ; ನೋಳ್ಪಂತೆ — ಆಲೋಚಿಸುವ ಹಾಗೆ; ಎಂದುಂ — ಯಾವಾಗಲಾದರೂ; ಸಮನಿಸಿದುದಂ — ಉಂಟಾದ್ದನ್ನು; ಏನುಮಂ — ಯಾವುದನ್ನೂ; ಕಾಣೆಂ — ಕಾಣೆನು.

ವ॥ ಎಂದು ಶೋಕಕಾರಣಮನೆಂತು ಬೆಸಗೊಂಡೊಡಂ ಪೇಳದೆ ವಿಳಾಸವತಿಮಹಾದೇವಿ ಬಾಷ್ಪಾಂಬುಸಂತತಿಯನೆ ಸುರಿಯುತ್ತಮಿರ್ಪ್ಪುದುಂ ಕೆಲದೊಳಿರ್ದ್ದ ಸಶೋಕವಂಬದವೊಗಮಂ ನೋಡೆ ಸಂತತಸನ್ನಿಹಿತೆಯಪ್ಪ ತಾಂಬೂಲಕರಂಕವಾಹಿನಿ ಮಕರಿಕೆಯೆಂಬಳಿಂತೆಂದಳ್॥ ೩೪೧

ಕಂ॥ ಅರಸಿಯ ನೆಗಳ್ತೆ ನೋಡ । ಲ್ಪಿರಿದುಂ ವಿಸ್ಮಯಮನಾಗಿಪ್ಪುದು
ದೇವ ಮನೋ ॥ ಹರವೆನಿಪ ರಾಜ್ಯವಿಭವದ । ಪರಮಸುಖಂ ತನಗೆವಿಫಳ
ಮಾದವೊಲೀಗಳ್ ॥ ೩೪೨

ಮನೆಯೊಳ್ಮಱುಗುತ್ತಿರೆ ಮ । ಜ್ಜನಭೋಜನ ಭೂಷಣಂಗಳಂ
ಬಿಡುವುಂ ಪ್ರಾ ॥ ರ್ಥನೆಗೆಯ್ದು ದೇವನಿಚ್ಛೆಯು । ಮನುವಿಸಿ ನೆಗಳಿಪುದು
ಪರಿಜನಂ ಮಾನಿನಿಯಾ ॥ ೩೪೩

ವ॥ ಅದಲ್ಲದೆಯುಮಿಂದುವರಂ ದೇವರ ಮನಂ ನೊಂದಪ್ಪುದೆಂದು ಮನಂದೋರದಿರ್ಪ್ಪಳಿಂದು ಮಹಾಕಾಳದೇವರಂ ಪೂಜಿಸುತ್ತಮಿರ್ಪ್ಪಲ್ಲಿ ಭಾರತಕಥಾಶ್ರವಣದೊಳ್ " ಪುನ್ನಾಮ್ನೋನರಕಾತ್ತ್ರಾಯತಇತಿಪುತ್ರಃಅಪುತ್ರಾಣಾಂಕಿಲಗತಿರ್ನಾಸ್ತಿನವಾಸಂತಿಲೋಕಾಶ್ಶುಭಾಃ " ಎಂಬೀವಾಕ್ಯಾರ್ಥಮಂಕೇಳ್ದು ॥ ೩೪೪

ಕಂ॥ ಅಂತು ಮನೆಗಾಗಳೇ ಬಂ । ದಂತಸ್ಸಂತಾಪವೊದವೆ ಬಾಷ್ಪಾಂ
ಬುವ ನೋ ॥ ರಂತೆ ಸುರಿಯುತ್ತಮಿರ್ದ್ದಪ । ಳೆಂತುಂ ಸಂತೈಸಲಾರ್ತ್ತೆ
ನಿಲ್ಲವನಿಪತೀ ॥ ೩೪೫

---

೩೪೨. ನೆಗಳ್ತೆ—ಕಾರ್ಯ; ತನಗೆ—ಅರಸಿಗೆ.

೩೪೩. ಅನುವಿಸಿ—ಸಮಾಧಾನಪಡಿಸಿ; ನೆಗಳ್ಪುದು—ಮಾಡಿಸುವದು; ಮಾನಿನಿಯಾ ಪರಿಜನಂ ಎಂದನ್ವಯವು; ಮಾನಿನಿಯಾ—ಎಂಬಲ್ಲಿ ಷಷ್ಠಿಗೆ ದೀರ್ಘಾದೇಶ ಬಂದಿದೆ, ಶಮ. ಸೂ. ೧೧೩.

೩೪೫. ಆರ್ತೆನಿಲ್ಲ—ಸಮರ್ಥಳಾಗಲಿಲ್ಲ; ಅವನಿಪತೀ—ಎಲೈ ರಾಜನೇ, ಇಲ್ಲಿ ಸಂಬೋಧನೆಗೆ ದೀರ್ಘ ಬಂದಿದೆ, ಶಮ. ಸೂ. ೧೨೩.

ಇಲ್ಲಿಂದಿತ್ತಲ್ದೇವ । ರ್ಬಲ್ಲಿರೆನುತ್ತುಸಿರದಿರ್ಪ್ಪುದುಂ ಮಕರಿಕೆ ಭೂ ॥ ವಲ್ಲಭನಜಿದಾಗಳ್ನಿಜ । ವಲ್ಲಭೆಯುಂ ನೋಡಿದುಃಖದಿಂ ಬಿಸುಸುಯ್ದಂ ॥ ೨೪೬

ವೃ॥ ನಮಗಿಂತಾದುದು ದೈವಮಾತ್ಮಜಪರಿಷ್ವಂಗಾಮೃತಾಸ್ವಾದಸಾ । ಖ್ಯಮದೆಂತುಂ ದೊರೆಕೊಂಡಿತಿಲ್ಲ ಹೃದಯಕ್ಕೋರಂತೆ ಮುಂಪುಣ್ಯಕ ॥ ರ್ಮಮನಂತಾಗಿರೆ ಮಾಡದೀಗಳಳಲಿಂ ಪೇಳಂತಳುತ್ತಿರ್ದ್ದೊಡೆ । ಕ್ಕುಮೆ ಬೇಡಂಗನೆ ಮಾಣ್ಬುದೆಂದುಸಿರ್ದರ್ ತಾರಾಪೀಡಚಕ್ರೇಶ್ವರಂ ॥ ೨೪೭

ಗುರುಜನದಲ್ಲಿ ಮಾಡಧಿಕಭಕ್ತಿಯ ನಚ್ಚರಸು ದೇವರಂ ಮುನೀ । ಶ್ವರಪರಿಚರ್ಯೆಯೊಳ್ಪಿರಿದು *[ಮಾದೃತೆ] ಯಾಗು ದಿಟಕ್ಕೆದಲ್ಮುನೀ ॥ ಶ್ವರರ್ಗಳೆ ದೈವಮೆಂದವರ ಪಾದಪಯೋರುಹಸೇವೆಯಲ್ಲಿ ತ । ತ್ಪರರೆನಿಪರ್ಗೆ ಪೇಳ್ವುದೆಯಲಭ್ಯಮದೇಂ ತರಳಾಯತೇಕ್ಷಣೇ ॥ ೨೪೮

ಕಂ॥ ದನುಜಾರಿರಿಪು ಜರಾಸಂ । ಧನೆಂಬ ಸುತನತಿರಥಂ ಬೃಹದ್ರಥನಾಮಾ ॥ ವನಿಪಂಗೆ ಚಂಡಕೌಶಿಕ । ಮುನೀಂದ್ರನಿಂದಾದನೆಂಬುದಂ ಕೇಳ್ದರಿಯಾ ॥ ೨೪೯

ವೃ॥ †[ಶರನಿಧಿ] ಯಂದದಿಂದತಿಗಭೀರಗುಣೋನ್ನತಿಯಿಂದೆ ಸಂದಮಂ । ದರಧರಬಾಹುಗಳ್ಪಸುಮತೀ ತಳರಕ್ಷಣದಕ್ಷರಪ್ಪ ನಾ ॥ ಲ್ವರುಮಸೀಶರಂ ದಶರಥಂ ಪಡೆದಂ ತನುಜಾತರಂ ವಯಃ । ಪರಿಣತಿಯೊಳ್ವಿಭಾಂಡಕ ಮಹಾಮುನಿಮುಖ್ಯವರಪ್ರಸಾದದಿಂ ॥ ೨೫೦

೨೪೬. ಇಲ್ಲಿಂದಿತ್ತಲ್ದೇವರ್ಬಲ್ಲಿರ್—ಇಲ್ಲಿಂದಮುಂದಕ್ಕೆ ಮಾಡಬೇಕಾದದ್ದು ತಮಗೇ ವೇದ್ಯವಾಗಿದೆ ಎಂದರ್ಥವಿರಬಹುದು.

೨೪೭. ಒರಂತೆ—ಚೆನ್ನಾಗಿ; ಮುಂ—ಪೂರ್ವದಲ್ಲಿ; ಅಳುತ್ತಿರ್ದ್ದಳಕ್ಕುಮೆ—ರೋದನಮಾಡುವಂಥಾವಳಾಗ ಬಹುದೇ.

೨೪೮. ಅಪ್ಪತೆ—ಆಸಕ್ತಿಯುಳ್ಳವಳು ; ದಿಟಕ್ಕೆ—ಸತ್ಯದಿಂದ ; ಪದಪಯೋರುಹ—ಪದಸೇವೆಗೆ ಸಾಧ್ಯವಾದದ್ದು ; ಏಂ—ಯಾವುದು ?

೨೫೦. ಸಂದ—ಪ್ರಸಿದ್ಧವಾದ ; ಮಂದರಧರ ಬಾಹುಗಳ್—ವಿಷ್ಣುವಿನ ನಾಲ್ಕು ತೋಳುಗಳಂತಿರುವ ಎಂದರ್ಥ.

*[ಮಾರ್ತಿತೆ] †[ವರನದಿ]

ವ॥ ಎನುತ್ತೆ ವಿಶ್ವಾನಂದಭವನನಪ್ಪಾತ್ಮಸಂಭವನನಾಮುಹಾನುಭಾವಂ ಬಿಡದೆ ಭಾವಿಸಿ ನಿಜಪ್ರಾಣೇಶ್ವರಿಯ ಮೊಗಮಂ ನೋಡಿ ॥ ೩೫೧

ಕಂ॥ ಅಮೃತಕರನುದಯಮಾಗ । ಲ್ಸಮನಿಸೆ ತಳ್ತೆಂದ್ರದಿಗ್ವಧೂಮುಖದೊಳ್ಬೆ ॥ ಳ್ಪಮರ್ದಂತೆ ಗರ್ಭದಿಂದಂ । ಹಿಮಕರ *[ಮುಖಮುಖದೊಳೆಂದು] ಬೆಳ್ಪೆಸೆವಪ್ಪುದೋ ॥ ೩೫೨

ನಂದನಜನ್ಮೋತ್ಸವದೊದ । ವಿಂದಂ ಪರಿತಂದು ಪೂರ್ಣಪಾತ್ರಮನತ್ತಾ ॥ ನಂದವೊದವಲ್ಕೆ ಪರಿಜನ । ಮೆಂದೆಳೆಕುಳ್ಳಗೊಳ್ವ ತ್ವೈಪು ಸಮನಿಸಿದಪ್ಪುದೋ ॥ ೩೫೩

ವೃ॥ ಇನಬಿಂಬಂ ಕಣ್ಗಳುಂಬಂ ತೊಳಗಿಬೆಳಗೆ ಬಾಲಾತಪಂ ಸುತ್ತಲುಂ ಕೆಂ। ಪಿನಸೊಂಪಂ ಬೀಱೆ ಕಣ್ಗಿಟ್ಟಳವೆನಿಪ ನಭೋಲಕ್ಷ್ಮಿಯೆಂಬಂತಿರುತ್ಸಂ ॥ ಗಸಿಷಣ್ಣಂ ನಂದನಂ ಕಣ್ಗೊಳಿಸುತಿರೆ ಹರಿದ್ರಾಂಶುಕಾಲಿಂಗಿತಾಂಗಂ। ತನಗೊಪ್ಪಲ್ಕೆಂದು ಮದ್ವಲ್ಲಭೆ ಮನಕೆ ಮಹೋತ್ಸಾಹಮಂ ಮಾಡಿದಪ್ಪಳ್ ॥ ೩೫೪

ಪನೆಗಳ್ತೋರದ ಮಂದಹಾಸರುಚಿ ಮುದ್ದಂ ನಾಡೆಯುಂ ಬೀಱೆರೋ । ಚನದಿಂ ರಂಜಿಪ ನೂಲರಕ್ಕೆವಣಿಗಳ್ಬೆಲ್ವಾಗೆ ವಿಸ್ಫಾರಲೋ ॥ ಚನಯುಗ್ಮಂ ಮಿಸುಗಲ್ಮರಲ್ದೆಸೆವ ತೂಗುಂದೊಟ್ಟಿಲೊಳ್ಪಟ್ಟ ಪುತ್ರನವಕ್ತ್ರೇಂದುವ ನಂಜನಾಂಕಿತಮ ನಾನಿನ್ನೆಂದು ಪೇಳ್ಕಾಣ್ಬೆನೋ ॥ ೩೫೫

೩೫೨. ಉದಯಮಾಗಲ್—ಉದಿಸುವದಕ್ಕೆ; ಸಮನಿಸೆ—ಸನ್ನದ್ಧನಾಗಿರಲು; ಬೆಳ್ಪು, ತಳ್ತು ಎಂದನ್ವಯವು.

೩೫೩. ಒದವಿಂದಂ—ಪ್ರಾಪ್ತಿಯಿಂದ; ಪರಿತಂದು—ಓಡಿಬಂದು; ಪೂರ್ಣಪಾತ್ರಮಂ—ಉಡುಗೊರೆಯನ್ನು; ಎಳಕುಳಿಗೊಳ್ವ—ತೆಗೆದುಕೊಳ್ಳುವದಕ್ಕೆ ತ್ವರೆಪಡುವ.

೩೫೪. ಅಳುಂಬಂ—ಅಧಿಕವಾಗಿ; ಇಟ್ಟಳಂ—ಮನೋಹರವು.

೩೫೫. ಪನೆಗಳ್—ಹಲ್ಲುಗಳು; ನೂಲ—ನೂಲಿನಿಂದ ಮಾಡಲ್ಪಟ್ಟ; ರಕ್ಕೆವಣಿಗಳ್—ರಕ್ಷಾರ್ಥವಾದ ಗಂಟುಗಳು; ಮರಲ್ದು—ವಿಕಸಿತವಾಗಿ; ಮಿಸುಗಲ್—ಹೊಳೆಯುತ್ತಿರಲು; ಪಟ್ಟ—ಮಲಗಿದ; ತೂಗುವ + ತೊಟ್ಟಿಲ್ = ತೂಗುಂದೊಟ್ಟಿಲ್, ಶಮ. ಸೂ. ೧೭೦.

*[ಬಿಂಬದವೊಲೆಂದು]

ಕಂ॥ ಹೃದಯದೊಳೊದವಿದ ಕತ್ತಲೆ । ಚೆದಱುವಿನಂ ಮಂಗಳಪ್ರ
ದೀಪದವೊಲ ॥ ಭ್ಯುದಯಕರನೆನಿಪ ನಂದನ । ನದೆಂದು ತೊಳಗುವನೊ
ಕಾಂತೆಯರ ಕರತಳದೊಳ್ ॥ ೩೫೬

ಸಂಗಡಿಸಿದ ಕಿಱುಜಡೆಗಳ । ತೊಂಗಲ್ಗಳಿನೊಪ್ಪೆ ಜಾನುಚಂಕ್ರಮ
ಣಂ ಹ ॥ ರ್ಮ್ಯಾಂಗಣದೊಳೆಂದು ಸುಳಿಗುವೊ । ಸಿಂಗದಮಱಿಯಂತಿರೆಸೆ
ದು ತೋರ್ಪ್ಪಕುಮಾರಂ ॥ ೩೫೭

ವೃ। ಲಲಿತಾಮಂಜೀರನಾದಕ್ಕೆಳಸುವ ಕಳಹಂಸಂಗಳಂ ಕಂಡು ಬೆಂ
ಬೆ । ನ್ನೊಳೆ ನೀಡುಂಪೋಪ ಕಾಂತಾಭವನಪರಿಣತಾಬಂಗಳೇಳ್ತಂದು ಚಂ
ದ್ರೋ । ಪಳಭಿತ್ತಿಪ್ರಾಂತದೊಳ್ಮಾರ್ಪ್ಪೊಳೆಯಲೆನಗಿವಂತೆಂದು ನೀನೀವ್ರ
ದೆಂದಾ । ಗಳುಮಾದಂ ದಾದಿಗಾಯಾಸಮ ನೊಡರಿಪ ಮುದ್ದಾತ್ಮಜಂಗೆಂ
ದು ತೋರ್ಕ್ಕುರ್ಗಂ ॥ ೩೫೮

ಮಡಲೇಱಾಮುಂಡನಂ ಕಣ್ಗೊಳಿಸೆ ಕದಪಿನೊಳ್ನೀಳ್ದ ಕಸ್ತೂರಿ
ಕಾಪಂ । ಕದಿ ನಂಗುಲ್ಯಂಕುಶಾಕರ್ಷಣಮಮರೆ*[ಶಿರಂದೂಗುತಂತೆ]ತ್ತಿ ಕ
ಯ್ಯಂ ॥ ಕೆದಱುತ್ತಂ ಧೂಳಿಯಂ ಪ್ರೀತಿಯನೊದವಿಪ †[ಗಂಡೋಚ್ಚಲ
ತ್ತಿಂತಿಮುಗ್ಧಾ । ನದಿನೆಂದೋ ಮುಂದೆ ಮನ್ನಂವಸನೆಸೆವಗಜಕ್ರೀಡೆಯಿಂದಾ
ಡುತಿರ್ಪ್ಪಂ]॥ ೩೫೯

---

೩೫೬. ಕಾಂತೆಯರ—ಅಂತಃಪುರಸ್ತ್ರೀಯರ.

೩೫೭. ಸಂಗಡಿಸಿದ—ಸೇರಿದ; ತೊಂಗಲ್ಗಳಿಂ—ಸಮೂಹಗಳೊಡನೆ.

೩೫೮. ಪೋಪ, ಬಿಡರಿಪ, ಎಂಬೆರಡೂ ಕ್ರಿಯಾಪದಗಳು ಮುದ್ದುಎಂಬ ಕರ್ತೃವಿಗೆ ವಿಶೇಷಣಗಳು. ಮುದ್ದು—ಮುಗ್ಧತ್ವ; ಬೆಂಬೆನ್ನೊಳೆ—ಹಿಂದೆಹಿಂದೆ.

೩೫೯. ಕಯ್ಯಂ—ಹಸ್ತವನ್ನು, ಸೊಂಡಿಲನ್ನು; ಗಂಡೋಚ್ಚಲತ್ತಿಂತಿಮ ಧ್ವನಿಯಿಂ—ಮುಖದಿಂದ ಹೊರಡುವ ಬಿಂಟಿಸಿನಾದ್ಯವ ಧ್ವನಿಯುಳ್ಳಾಗಿರುವ ಧ್ವನಿಯಿಂದ.

*[ಚಿರಂರಾಗದಿಂದೆ]

†[ಗಂಧೋಚ್ಚಲಂತಿ ಮುಗ್ಧನದಿನೆಂದೋ ಮುಂದೆಮುಂನವಸನೆಸೆವಗಜ ಕ್ರೀಡೆಯಿಂದಾ
ಡುತಿರ್ಪ್ಪಂ.]

ಕಂ॥ ತಳರದಿಮಿಡುತಂ ಕುಪ್ಪೆವ । ತಳದೊಳ್ಮಾರ್ಪೊರ್ಗಳೆಯುತಿರೆ ನಿಜಪ್ರತಿಬಿಂಬಂ । ಗಳನೀಕ್ಷಿಸುತುರೆ ಕೌತುಕ । ಚಳನಯನದ ತನಯ ನೆಂದು ಬಳಸಂದಪನೋ ॥ ೩೬೦

ವೃ॥ ಬಾರೆಲೆ ತಂದೆ ಬಾರರಸ ಬಾಪ್ಪೊರೆವಾಳ್ದನೆ ಬಾಯೆನುತ್ತೆವಿ । ಸ್ತಾರಿತ ದೀರ್ಘಬಾಹುಯುಗಳಪ್ರಸರವೋತ್ಸವದಿಂವಶೇಷಧಾ ॥ ತ್ರೀರಮ ಣನ್ಮುರಲ್ಲು ಕರೆಯುತ್ತಿರೆಯುಂ ಮಣಿಭೂಷಣಾಂಶುವಿ । ಸ್ಫುರಿತ ನೇ ತ್ರನೆಂದು ಸುಳಿವಪ್ಪನೊ ಮುಂದೆ ಸಭಾಂತರಾಳದೊಳ್ ॥ ೩೬೧

ವ॥ ಎಂದಿವ್ರವೊದಲಾಗಿ ಪಲವುಂಮನೋರಥಂಗಳಂ ಚಿಂತಿಸುತ್ತ ಮಿರ್ದ್ದು ಮತ್ತಂಪ್ರಿಯಮಧುರಂಗಳುಂ ಶೋಕಾಪನೋದನಿಪ್ರಣಂಗಳುಂ ಧರ್ಮೋಪದೇಶಗರ್ಭಂಗಳುಮಪ್ಪ ವಚನನಿಚಯಂಗಳನೆಂತಾನುಂ ಸಂತೈ ಸಿ ನಿಜಪರಿಜನಂಬೆರಸರಸಂ ಬಿಜಯಂಗೆಯ್ದನಲ್ಲಿಂಬಳಿಕ್ಕಂ ವಿಳಾಸವತಿಮ ಹಾದೇವಿ ದುಃಖಮಂ ಪತ್ತುವಿಟ್ಟೆಂದಿನಂತಾಭರಣಂಗಳಂತೊಟ್ಟು ೩೬೨

ಕಂ॥ ಗುರುದೇವದ್ವಿಜಪೂಜಾ । ಪರಿಚರ್ಯೆಯ ನೆಸಗಿ ಭಕ್ತಿಯಿಂ ಮತ್ತಂ ಪೇ ॥ ಳ್ದರವಾತೆಲ್ಲಂಕೇಳ್ದಾ । ದರದಿಂದಂ ಗರ್ಭತೃಷ್ಣೆಯಿಂದೊ ಡರಿಸಿದಳ್ ॥ ೩೬೩

ವೃ॥ ವಿವಿಧನವಪ್ರಸೂನ ಫಳಪುಣ್ಯನದೀಜಳ ನೂತ್ನರತ್ನಪ । ಲ್ಲ ವ ನಿವಹಂಗಳಂವೆಸೆವ ಪೂಂಗಳಸಂಗಳನೆತ್ತಿ ಸುತ್ತುಮು ॥ ತ್ಸವದೊಳ್

---

೩೬೦. ತಳರದಿ—ತಪ್ಪಹೆಜ್ಜೆ ; ಕೌತುಕಚಳನಯನದ—ಕುತೂಹಲದಿಂದ ಚಪಲವಾದ ನೇತ್ರವುಳ್ಳ.

೩೬೧. ಪೊರೆವಾಳ್ದನೆ—ಕಾಪಾಡುವ ಪ್ರಭುವೆ ; ಮುರಲ್ದು—ಪುನಃಪುನಃ ; ಭೂ ಷಣಾಂಶು—ಅರಸರ ಆಭರಣಗಳ ಕಾಂತಿ; ಬಾರ+ಎಲೆತಂದೆ, ಬರ್‌ಧಾತುವಿಗೆ ಸಂಬೋ ಧನೆಯಲ್ಲಿ ಧಾತುವಿನಕಡೆಗೆ ಆತ್ವಬಂದಿರುವದು. ಶಮ. ೧೨೫.—೨೪೮.

೩೬೨. ಪತ್ತುವಿಟ್ಟು—ಬಿಟ್ಟು.

೩೬೩. ಒಡರಿಸಿದಳ್—ತಾನುಕೇಳ್ದವನ್ನೆಲ್ಲಾ ನಡಸಿದಳೆಂದಭಿಪ್ರಾಯ.

ಬಂದು ಗೋಪವನಿತಾನಿಕರಂ ಮಿಸಿಸಲ್ಪವತ್ಸಧೇ । ನುವಿನಡಿಯೊಳ್ವಿಲಾಸವತಿ ಮಿಾವಳನಾಕುಲಗೋಕುಲಂಗಳೊಳ್ ॥ ೩೬೪

ಸಲೆಸಿಲೆಬೇವ ಗುಗ್ಗುಳದ ಕರ್ಪ್ಪೊಗೆಯಿಂದ ಮಗುರ್ವ್ವನಾಳ್ದು ಕ । ತ್ತಲಿಸುವ ಚಂಡಿಕಾಭವನದೊಳ್ಧವಳಾಂಶುಕೆ ಶುದ್ಧಮೂರ್ತಿ ನಿ ॥ ಶ್ಚಳತರಮಪ್ಪಭಕ್ತಿಯಿನುಪ್ರೋಷಿತೆಯಾಗಿ *[ಕುಶೋಪಸ್ಥಾನಮಂ । ಗಳವಸುಧಾತಳೇಶಯನಸುವ್ರತಮಂ] ಲಲಿತಾಂಗಿ ತಾಳ್ದಿದಳ್ ॥ ೩೬೫

ಕಂ॥ ಪತ್ರಲಿಖಿತಮಂಡಲಸ್ಥಿತೆ । ಕೃತಾಷ್ಟದಿಗ್ದೇವತಾರ್ಚನಪ್ರಕರೆ ದೃಢ ॥ ವ್ರತೆ ಬಹುಳಚತುರ್ದಶಿಯೊ । ಳ್ಚತುಷ್ಪಥಸ್ನಾನವಿಧಿಯು ನಿರುಳೊಳ್ತಳೆದಳ್ ॥ ೩೬೬

ವೃ॥ ತಿಲಪಾತ್ರಪ್ರಕರಂಗಳಂ ಕೊಡುವ ಳಶ್ವತ್ಥಾದಿಭೂಜಂಗಳಂ । ಬಲವಪ್ಪರ್ಳ್ಬಲಿಭುಗ್ವ್ರಜಕ್ಕೆ ಬಲಿಯಂ ತಾನಿಕ್ಕುವಳ್ಮಾತೃಮಂ ॥ ಡಳಮಂ ಪೂಜಿಸುವಳ್ಪ್ರಸಿದ್ಧವಿಪ್ರಲೋಕಕ್ಕೆಂಬನಾಗಹ್ರದಂ । ಗಳೊಳಾವಮಾನಿನಿ ಮಂಗಳಾಚರಣದಿಂ ಮಿಾವಳ್ಮಹೋತ್ಸಾಹದಿಂ ॥ ೩೬೭

ಜಿಸಗೊಳ್ವಳ್ ಋಷಿಸಂಘಮಂ ಸಮುದಿತ ಸಿದ್ಧಾದೇಶಮಾದಂತೆ ಮ । ನ್ನಿಸುವಳ್ತಾನೊಲವಿಂ ಸಮಸ್ತಶಕುನಜ್ಞಾನೀಕಮಂ ಕೂಡೆನೋ ॥ ಡಿಸುವಳ್ಪ್ರಸಿದ್ಧಪರಂಪರಾಗತರಹಸ್ಯಾಚಾರಮಂ ಮಾಣದಾಗಿಸುವಳ್ವೇದಸಮೂಹಮಂ ಪಠಿಸಿಂ ಕೇಳ್ವಳ್ಪುರಾಣಂಗಳಂ ॥ ೩೬೮

ವ॥ ಮತ್ತಂಗೋರೋಚನಾರಚಿತ ಭೂರ್ಜಪತ್ರಗರ್ಭರಕ್ಷಾಮಣಿಗಳಂ ತಾಳ್ದಿಯುಂ ಓಷಧಿಸೂತ್ರಚಯಮಂ ತಳೆದುಂ ಉಪಶ್ರುತಿಗಳಂಕೇಳ್ದು ಮಧ್ಯಂಗಳೊಳ್ ಜಂಬುಕಂಗಳ್ಗೆ ಮಾಂಸಬಲಿ ಸಮನ್ವಿತೋಪಹಾರಂಗಳಂ

---

೩೬೪. ಮಿಸಿಸಲ್ — ಸ್ನಾನಮಾಡಿಸಲು, ಇಲ್ಲಿ ಮಿಸಾ ಎಂಬ ಧಾತುವಿಗೆ ಪ್ರೇರಣಾರ್ಥದಲ್ಲಿ ಇಸು ಪ್ರತ್ಯಯ ಪರವಾಗಿರುವದರಿಂದ, ಧಾತುವಿನ ಕಡೇ ದೀರ್ಘಕ್ಕೆ ಇಸಾದೇಶ ಬಂದಿದೆ, ಶಬಾ. ಸೂ. ೫೪೦.

೩೬೫. ಸಿಲೆಬೇವ — ಸಿಂತ್ರಾಣಿಯಮರ; ಅಗುರ್ವ್ವಂ — ಅತಿಶಯವನ್ನು; ಅಳ್ದು — ಹೊಂದಿ.

*[ಕುಶೋಪಸ್ಥಾನ ಗಾಢ ವಸ್ತ್ರಾವಾಸದ ಸನಸುವ್ರತವು]

ಮಾಡಿಸಿಯುಮಿಂತನೇಕವಿಧದಿಂ ವಿಳಾಸವತಿ ಮಹಾದೇವಿ ಪುತ್ರೋತ್ಪತ್ತಿ ನಿಮಿತ್ತಂ ಪಲವುದಿವಸಮಾಚರಿಸುತ್ತಮಿರ್ಪುದುಮೊಂದುದಿವಸಂ ॥ ೨೬೯

ವೃ॥ ಸುರುಚಿರಸೌಧದೊಳ್ಕಲಸಿರಲ್ನಿಜಕಾಂತೆಯ ವಕ್ತ್ರಬಿಂಬದೊ । ಳ್ಕರಿಣಿಯ ಸೃಕ್ವಮಂ ಪುಗುವ ಸೀರಜಕಾಂಡಮೆಸಲ್ಕಿಳಾಮನೋ ॥ ಹರ ಶಶಿಮಂಡಳಂ ಪುಗುವುದಂ ವಸುಧಾಧಿಪನಂದು ಕಂಡನ । ಚ್ಚರಿಯೆನಿಸಿರ್ದುದಂ ನೆನಸುವೋಲ್ಕನಸಂಬೆಳಗಪ್ಪಜಾವದೊಳ್ ॥ ೨೭೦

ಕಂ॥ ಅರಸನತಿಹರ್ಷವಿಕಸಿತ । ಸುರುಚಿರಲೋಚನ ನಮಾತ್ಯಮುಖ್ಯನನಾಗಳ್ ॥ ಕರೆದು ನಿಜಸ್ವಪ್ನಮನಾ । ದರದಿಂ ಪೇಳಲ್ಕೆ ಪುಳಕಿತಾಂಗಂ ಸಚಿವಂ ॥ ೨೭೧

ವೃ॥ ಪಲಕಾಲಕ್ಕೆ ಮನೋರಥಪ್ರಕರಮಿಂದೀಮೊಂದು ಪುಣ್ಯೋದಯಾ । ವಳಿಯಿಂದಂ ದೊರೆಕೊಂಡುದಿಂದು ಭುವನಕ್ಕಾನಂದಮಾದತ್ತುಮುಂ ॥ ಕೆಲವಾನುಂ ದಿವಸಕ್ಕೆ ದೇವಪಡೆವಯ್ಶ್ರೀಮಂಡನಕ್ಷಾತ್ರಮಂ । ಚಲಮಾರ್ಗೋಚಿತಗಾತ್ರನಂ ಬಹುಕಳಾಸತ್ಪಾತ್ರನಂ ಪುತ್ರನಂ ॥ ಅದಲ್ಲದೆಯುಂ— ೨೭೨

ಭುವನಾಧೀಶ ನಿಶಾವಸಾನಸಮಯಪ್ರಾಗ್ಭಾಗದೊಳ್ ಶಾಂತರೂ । ಪವಿನುತ್ಯಂ ವಿಲಸದ್ದುಕೂಲವಸನಾಲಂಕಾರ ನೊರ್ವ್ವಂ ದ್ವಿಜ ॥ ಪ್ರವರಂ ಮೌಕ್ತಿಕಮಾಲಿಕಾವಲಯಮುಂ ಪ್ರೋತ್ಫುಲ್ಲಮಂ ಪುಂಡರೀ । ಕವನಂ ದಲ್ತೆ ಮನೋರಮಾಂಕತಳದೊಳ್ತಂದಿಕ್ಕಿದಂ ಸ್ವಪ್ನದೊಳ್ ॥ ೨೭೩

---

೨೬೯. ನೋಡಿಸುವಳ್—ಶಕುನಜ್ಞರಿಂದ ಶಕುನವನ್ನು ನೋಡಿಸುವಳೆಂದರ್ಥ; ಮನ್ನಿಸುವಳ್—ಸಿದ್ಧಾದೇಶವನ್ನು ಮನ್ನಣೆಮಾಡುವಳೆಂದರ್ಥ.

೨೭೦. ಪುಗುವುದಂ, ಅಚ್ಚರಿಯೆನಿಸಿರ್ದುದಂ, ಕನಸಂ ಎಂದನ್ವಯವು; ನೆನಸುವೋಲ್—ಪುತ್ರೋತ್ಪತ್ತಿ ಸಂಕಲ್ಪಕ್ಕನುಸಾರವಾಗಿ ಎಂದರ್ಥ.

೨೭೩. ಮನೋರಮಾಂಕತಲದೊಳ್—ಮನೋರಮಾ ಮನೋರಮೆ ಯೆಂಬ ನನ್ನಪತ್ನಿಯ; ಅಂಕತಲದೊಳ್—ತೊಡೆಯಲ್ಲಿ.

ವ॥ ಅನುವಿನಾವರ್ಗದೊಳ್ಕಂಡೆನಂತು ನಿಶಾವಸಾನಸಮಯದೊಳ್ಕಂಡ ಕನಸುಗಳವಿತಥಂಗಳಪ್ಪುವದು ಕಾರಣದಿಂ ನಿಖಿಳರಾಜವಿಭವೋದಹೇತುಭೂತನುಂ ರಾಜಮಾಂಧಾತನುಮೆನಿಪ ಜಗತ್ಪ್ರಖ್ಯಾತಂ ಜನಿಯಿಸುಗುಮಲ್ಲದೆಯುಂ ॥ ೩೨೪

ಕಂ॥ *[ನವಕಮಲೋದ್ಗಮದಿಂದು] । ತ್ಸವಮಂ ತಾಂಗಂಧಗಜಕೆ ಕಮಳನಿ ಮಾಳ್ಪಂ । ತೆಪ್ರೊಲರಸ ನಿನಗೆಪರಮೋ । ತ್ಸವಮಂ ಮಾದೇವಿ ಮಾಳ್ಕುವಿನಾಕನಸಿಂದಂ ॥ ೩೨೫

ನಿನ್ನಯ ಸಂತಾನಮವಿ । ಚ್ಛಿನ್ನಂ ಕ್ಷಿತಿಭಾರಧಾರಣೋಚಿತಗುಣಸಂ ॥ ಪನ್ನಮೆನಲ್ಕೆಗಳ್ಗಂ ಭೂ । ಪೋನ್ನತ ದಿಙ್ನಾಗದಾನದಂದದಿನೆಂದುಂ ॥ ೩೨೬

ವ॥ ಎಂದುತಾರಾಪೀಡನರೇಂದ್ರನ ಕಯ್ಯಂ ಪಿಡಿದಂತಃಪುರಕ್ಕೆ ಪೋಗಿ ವಿಳಾಸವತಿಮಹಾದೇವಿಗೆ ತಾವೀರ್ವರುಂ ಕಂಡಕನಸುಗಳಂ ಪೇಳ್ದೆ ಕೇಳ್ದಾನಂದಪರಂಪರೆಯುನೆಯ್ದಿ ಕೆಲವಾನುಂ ದಿವಸದೊಳ್ ॥ ೩೨೭

ಕಂ॥ ವಿಲಸತ್ಪ್ರಭಾಳಿಶಶಿಮಂ । ಡಲಮಾಕುಮುದಾವಭಾಸಿಯೆನೆ ತಿಳಿಗೊಳದೊಳ್ । ನೆಲಸುವತೆಱದಿಂ ಗರ್ಭಂ । ನೆಲಸಿದುದು ವಿಳಾಸವತಿಗೆ ಪುಣ್ಯೋದರದೊಳ್ ॥ ೩೨೮

---

೩೨೬. ಭೂಪೋನ್ನತ—ರಾಜಶ್ರೇಷ್ಠನೇ ; ದಿಙ್ನಾಗದಾನದಂದದಿಂ — ಅವಿಚ್ಛಿನ್ನಂ, ಎಂದನ್ವಯವು.

೩೨೮. ಆ ಕುಮುದಾವಭಾಸಿಯನೆ—ಆ ಪ್ರಸಿದ್ಧವಾದ; ಕುಮುದ—ನೈದಿಲೆಗಳನ್ನು ; ಅವಭಾಸಿಪನೆ—ಅರಳಿಸುವಂಥಾದ್ದಾಗಿ ; ಕು—ಭೂಮಿಯ ; ಮುದಾ—ಸಂತೋಷವನ್ನು ; ಅವಭಾಸಿಯೆನೆ—ವೃದ್ಧಿಪಡಿಸುವದಾಗಿ.

೩೨೯. ಮಣಿದರ್ಪಣಶ್ರೀಯಂತಿರೆ—ರನ್ನಗನ್ನಡಿಯಹಾಗೆ ; ಸಂಕ್ರಾಂತವಪ್ಪ—ಸಂಬಂಧಿಸಿದಂಥ.

*[ನವಕಬಳೋದ್ಧತವಪ್ಪದು]

ಕಂ॥ ಅಂತುಕೆಲದಿವಸದೊಳ್ ನಿಜ । ಕಾಂತಪ್ರತಿಬಿಂಬಮುಂ ವಿಳಾ
ಸದೆ ತಳೆದ ॥ ಳ್ಕಾಂತೆ ಮಣಿದರ್ಪಣಶ್ರೀ । ಯಂತಿರೆ ಸಂಕ್ರಾಂತಮಪ್ಪ
ಗರ್ಭದನೆವದೊಳ್ ॥ ೩೭೯

ಇನಿಸಿನಿಸಾಗರ್ಭಂ ಪ್ರತಿ । ದಿನಮೊಯ್ಯನೆ ಬಳೆಯೆ ನಯದೆ ಪುಟ
ವೇಱಿ ನಿತಂ ॥ ಬಿನಿ ಕಾದೊಳಸೆವ ಕಾದಂ । ಬಿನಿಯುಂವದೆ ಮಂದಮಂದ
ಗಮನದೆ ನಡೆದಳ್ ॥ ೩೮೦

ಅಲಸಿಕೆ ಮೆಯ್ಗ್ಗನುಮು ಕ । ಣ್ಮಲರ್ಮ್ಗೆರದ್ದಿಸೆನುಪ್ರೊದವಿತಾಗು
ಳಿಕೆ ಶತಂ ॥ ಪಲವುಂ ವಸ್ತುಗಳೊಳ್ತನ । ಗೊಲವರಮಾಯ್ತುದ್ದು ಕಾಂತೆ
ಗಂದಳೆವಸಿಜದೊಳ್ ॥ ೩೮೧

ಮಳೆಗಾಲದಂತೆ ಕಪ್ಪಂ । ತಳೆದು ಪಯೋಧರಮುಖಂಗಳೆಸೆಯುತ್ತಿ
ರಲಾ ॥ ಲಲನೆ ನವಗರ್ಭಪಾಂಡುರ । ವಿಳಾಸದಿಂ ಕೇತಕೀವಿಳಾಸಮನಾಂ
ತಳ್ ॥ ೩೮೨

ವ॥ ಅಂತಱ್ಚರಿವಟ್ಟಿಂಗಿತಕುಶಲೆಯರಪ್ಪ ಪರಿಜನಂಗಳಱಿಯುತ್ತಿ
ರ್ದರಲ್ಲಿ ॥

ವೃ॥ ವನಿತಾರತ್ನದಗರ್ಭಚಿಹ್ನಚಯಮಂ ನಿರ್ವ್ಯಾಕುಳಂ ಕಂ
ಡು ಮು । ತ್ತೆನಗಿಂ ಮಾಣ್ದಿರಲೇಂ ಪ್ರಶಸ್ತಮೆನಿಸಿರ್ದೀ ರಾತ್ರಿಯೊಳ್ಪೋ
ಗಿ ಭೂ ॥ ವನಿತೇಶಂಗಿದ ನೆಯ್ದೆ ಬಿನ್ನವಿಪೆ ನೆಂದಾನಂದದಿಂ ವಂಶವ । ರ್ಧನೆ
ಯೆಂಬಾಕೆ ಮಹಾಮಹತ್ತರೆ ನರೇಂದ್ರಾಸ್ಥಾನಮಂ ಪೊರ್ದಿದಳ್ ॥ ೩೮೩

---

೩೮೦. ಇನಿಸಿನಿಸು—ಸ್ವಲ್ಪಸ್ವಲ್ಪವಾಗಿ ; ನಯದೆ—ನುಣುಪಿನಿಂದ ; ಪುಟವೇಱಿ—ಅವಯವಗಳಲ್ಲಿ ವೃದ್ಧಿಹೊಂದಿ.

೩೮೧. ಶತಂ—ಅನೇಕವಾದ ; ಆಗುಳಿಕೆ—ಆಕಳಿಕೆಗಳು ; ಬಲವರಂ—ಬಯಕೆ ; ಆಯ್ತು—ಉಂಟಾಯಿತು.

೩೮೩. ಇಂ—ಇನ್ನು ; ಮಾಣ್ದಿರಲ್—ಉದಾಸೀನವಾಗಿ ಬಿಟ್ಟಿರಲು ; ಎನಗೇಂ—ನನಗೇನು ಪ್ರಯೋಜನ ; ಮಹಾಮಹತ್ತರೆ—ಗಾಡಿಯರಿಗೆ ದೊಡ್ಡ ಯಜಮಾನಿತಿ.

ವೃ ಉರಗಾಧೀಶಫಣಾಮಣಿಪ್ರಕರದಿಂ ತಳ್ತಿರ್ದ್ದ ಲಕ್ಷ್ಮೀವಮನೋ। ಹರನೋ ತಾರಕಸಂಕುಳಂ ಬಳಸಿರಲ್ಕೆಲ್ಪಾದ ರಾತ್ರೀವಮನೋ॥ ಹರನೋ ಪೇಳವೆನಲ್ಪ್ರದೀಪನಿವಹಂಗಳ್ಸುತ್ತಲುಂ ಕೂಡಿತ। ಳ್ತಿರಲಾಸ್ಥಾನದೊಳಿರ್ದ್ದನಂದೆಸೆವು ತಾರಾಪೀಡಚಕ್ರೇಶ್ವರಂ ॥ ೩೮೪

ವ ಅಂತಿರ್ದ್ದವನಿಪತಿಯುಂಕಂಡು ಪೊಡವಟ್ಟು ವಂಶವರ್ಧನೆಕುಳ್ಳಿರ್ದ್ದು॥

ಕಂ॥ ಅವಸರವಂ ಪಡೆದು ವಿಳಾ। ಸವತಿಯೊಳಾದೊಂದು ಗರ್ಭವೃತ್ತಾಂತವನು ನಾ। ಭುವನಾಧೀಶಂ ಗಿನಿಸುಂ। ಕಿವಿಯುತ್ತಲ್ಪಾದರ್ದ್ದ ವೆಲ್ಲನುಸಿದಳಾಗಳ್ ॥ ಅಂತಱುಪಲೊಡನೆ.— ೩೮೫

ವೃ॥ *[ಅಗೆವ್ರೋದಂತಿರ್ಪ್ಪಪೂರ್ವಶ್ರುತ] ವಚನಸುಧಾಸಾರದಿಂ ಕಂಟಕಂಗ। ಳ್ನೆಗೆಯಲ್ಕ ಕ್ತಾಂಬುಜಾತಸ್ಮಿತವೆಸೆಯೆ ಮನೋಜಾತಸಂತೋಷವೆತ್ತಂ ॥ ಮೊಗದೊಳ್ತೋರ್ಪ್ಪಂತೆ ದಂತಪ್ರಭೆ ಪಸರಿಸಲಾನಂದಭಾಷ್ಪಾಂಬುಗಳ್ಕ। ಯ್ಮ್ರಗಲಾ ಲೋಲಾಯತಾಕ್ಷಂ ಸಚಿವನ ಮೊಗವಂ ನೋಡಿದಂ ಭೂಮಿಪಾಲಂ ॥ ೩೮೬

ವ॥ ಅಂತುನೋಳ್ಪುದುಂ ಶುಕನಾಸನಾಮ ಮಂತ್ರಿ ಪೊರ್ದ್ದನರೇಂದ್ರಂಗಿಂತೆಂದಂ ॥

ವೃ॥ ಮನದನುರಾಗದಿಂದ ಮುಲದೋರ್ಪ್ಪವ ಕಣ್ಮಲರಾಂತ ವಂಶವರ್ಧನೆಯ ವಚೋಮೃತಶ್ರವಣಕೌತುಕದಿಂದವೆ ನಿನ್ನ ಲೋಲಲೋ ॥ ಚನಮಿವು ನೀಳ್ದು ಕಂಣ್ಗೊಳಿಸಿ ತೋರ್ಪ್ಪಸಿತೋತ್ಪಳಕರ್ಣಪೂರವಂ। ನೆನೆಯಿಸಿದಪ್ಪು ವಾಕನಸಿನೊಳ್ಕಿರಿದುಂ ದಿಟಮಾಯ್ತು ಭೂಪತೀ ॥ ೩೮೭

---

೩೮೪. ತಳ್ತಿರ್ದ್ದ — ವ್ಯಾಪ್ತವಾಗಿದ್ದ ; ಎಸೆದು ಇರ್ದ್ದನೆಂದರ್ಥವು.

೩೮೬. ಅಪೂರ್ವಶ್ರುತವಚನ ಸುಧಾಸಾರದಿಂ ಅಗೆವ್ರೋದಂತಿರ್ಪ್ಪ ಕಂಟಕಂಗಳ್ ನೆಗೆವುಳ್ ಎಂದರ್ಥವು ; ಅಗೆವ್ರೋದಂತಿರ್ಪ್ಪ — ನೊಳಕೆಯಾದಂತಾಗಿರುವ ; ಕಯ್ಮ್ರಗಲ್ — ಹೆಬ್ಬಾಗಲು.

೩೮೭. ಕರ್ಣಪೂರವಂ ನೆನೆಯಿಸಿದಪ್ಪುವು ಅಂದರೆ ಕಣ್ಣುಗಳು ಸಂತೋಷದಿಂದ ಕಿವಿಯ ಪರ್ಯ್ಯಂತ ವಿಸ್ತೃತವಾದ ವೆಂದಭಿಪ್ರಾಯವು ; ಕನಸಿನೊಳ್ — ಸ್ವಪ್ನದಲ್ಲಿ ; ಕಿರಿದುಂ — ಸ್ವಲ್ಪವಾದರೂ ; ದಿಟಂ — ನಿಜವು ; ಅಯ್ತು.

*[ಅಗೆವ್ರೊತ್ತ ಪುಷ್ಪಪೂರ್ವಾಚಿತ]

ಕಂ॥ ಪವಣಿಲ್ಲದದೊಂದೌತ್ಸು । ಕ್ಯವ ನೊಳಕೊಂಡೆನ್ನ ಮನ
ಮುಪಾರೂಢ ಮಹೋ । ತ್ಸವಮಂ ಕೇಳಲ್ಪದೆದಪು । ದವನೀಶ ನಿವೇದಿಸೆ
ನಗಿದಂ ಬಿಡದೀಗಳ್ ॥ ೩೮೮

ವ॥ ಅಂತು ಶುಕನಾಸಂ ಬಿಸಗೊಳ್ವುದುಂ ದರಹಸಿತವದನಾರವಿಂದ ನಾಗಿ ನರೇಂದ್ರನಿಂತೆಂದಂ ॥

ವೃ॥ ಇವಳೀಗಳ್ಪೇಳ್ದ ಮಾತಾಕನಸ ನವಿತಥಂ ಮಾಳ್ಪಮಾತಪ್ಪ
ವಾಗಿ । ದ್ದುರ್ಗವವಂವಿಶ್ವಾಸಿಸಲ್ಬಂದಪುದೆ ಪಿರಿದುಮಂತಪ್ಪುದಂ ಕೇಳ್ವ
ಭಾಗ್ಯಂ ॥ ನಮಗೆಂತೀ ಮಾತಸಂಭಾವಿತದ ಪೊಲೆನಗಾದಪ್ಪುದಂತಿಲ್ಲ ಸಂದೇ ।
ಹ ವಿದೇಕೇಳ್ವೋಗಿ ನಾವಲ್ಲಿಯೆ ದಿಟಮದು ತಾನೆಂಬುದಂ ನೋಳ್ಪ
ಮಾಲ್ತೇ ॥ ೩೮೯

ವ॥ ಎಂದುನರೇಂದ್ರಂ ರಾಜಲೋಕಮಂ ಬಿಸರ್ಜಿಸಿ ತನ್ನ ವಂಶವ
ರ್ಧನೆಗಂಗಚಿತ್ತಮಂ ನಿತ್ತು ಶುಕನಾಸಂ ಬೆರಸಾಸ್ಥಾನ ಮಂಟಪದಿಂ ಪೊಱ
ಮಡುವಾಗಳ್ ೩೯೦

ಕಂ॥ ಚಲಿಯಿಸಿದಪು ದಸಿತೋತ್ಪಲ । ದಳ ದೆಲರಲಸಂಗಳಿಂದಿದೆಂಬಿ
ನೆಗಂ ಕೆ ॥ ತ್ತಲೊಡರ್ಚಿದತ್ತು ಬಲಗ । ಣ್ಣಲರಾ ಭೂಪತಿಗೆ ಪಿರಿದು ಮು
ತ್ಸವಮಾಗಲ್ ॥ ೩೯೧

---

೩೮೮. ಪವಣಿಲ್ಲದ—ಅಪರಿಮಿತವಾದ ; ಪದೆದಪುದು—ಇಚ್ಛೈಸುವದು.

೩೮೯. ಅವಿತಥಂಮಾಳ್ಪ—ದಿಟವನ್ನಾಗಿಮಾಡುವ ; ಅವಂ—ಆ ಮಾತುಗಳನ್ನು ; ಪಿರಿದುಂ—ಬಹುತರವಾಗಿ ; ವಿಶ್ವಾಸಿಸಲ್ ಬಂದಪುದೆ—ನಂಬುವದಕ್ಕೆ ಆದೀತೆ ; ಅಂತಪ್ಪುದು—ಹಾಗೆ ಗರ್ಭಿಣಿಯಾಗಿರುವ ಸಂಗತಿಯನ್ನು ; ಅಸಂಭಾವಿತ—ಸುಳ್ಳು. ನೋಳ್ಪಂ—ನೋಡೋಣ. ಸಂದೇಹಂ + ಇದು + ಏಕೆ + ಏಳ್ + ಪೋಗಿ.

೩೯೦. ಅಂಗಚಿತ್ತ—ಉಡುಗೊರೆ.

೩೯೧. ಅಲಸಂಗಳಿಂದ—ಹೊಡೆತಗಳಿಂದ ; ಕೆತ್ತಲೊಡರ್ಚಿದತ್ತು—ಹಾರುವದಕ್ಕೆ ಉಪಕ್ರಮಿಸಿತು.

ಕರದೀಪಿಕಾ ನಿಕಾಯಮುಂ । ತರದಿಂದಂ ಮುಂದೆ ತೊಲಗಿಸುತ್ತಿರೆ ಕಕ್ಷ್ಯಾಂ ॥ ತರತಿಮಿರಮುಂ ಧರಾಧೀ । ಶ್ವರನೊಯ್ಯನೆ ಪೋಗಿ ಪೊಕ್ಕನಂತಃಪುರಮಂ ॥ ೩೯೨

ವ॥ ಅಂತುತತ್ಸಮಯ ಸೇವಾಸಮುಚಿತ ವಿರಳಪರಿಜನಾನುಗಮ್ಯಮಾನಂ ಶುಕನಾಸಂಬೆರಸೊಳಗಂ ಪೊಕ್ಕು ವಸುಕೃತರಕ್ಷಾಸಂವಿಧಾನಮುಂ ನವಸುಧಾನುಲೇಪನಕಲಿತಮುಂ ಪ್ರಜ್ವಲಿತಮಂಗಳಪ್ರದೀಪಮುಂ ಪೂರ್ಣಕಲಶಾಧಿಷ್ಠಿತದ್ವಾರಪಕ್ಷಮುಂ ಪ್ರತ್ಯಗ್ರಲಿಖಿತಮಂಗಳಾಲೇಖ್ಯೋಜ್ವಳಭಿತ್ತಿಭಾಗಮುಂ ಉಪರಚಿತವಿತತಸಿತವಿತಾನಪರ್ಯಂತಸಕ್ತಮುಕ್ತಾಗಣಮುಂ ಮಣಿಪ್ರದೀಪಾವಭಾಸಮುಮೆನಿಸಿದ ನಿವಾಸಭವನದೊಳ್ ॥ ೩೯೩

ವೃ॥ ಸತತಾಸಂನಸ್ಥ ನಿದ್ರಾ *[ಕಲಶವಿಲ] ಸಿತಂ ಭೂತಿಸಿದ್ಧಾರ್ಥರಕ್ಷಾಂ। ಕಿತ ಮಾಕೀರ್ಣ ಪ್ರವಾಳಾವಳಿ ಲಲಿತ ಮಯಃಪಿಪ್ಪಲೀ ಪತ್ರಮಾಲಾಂ ॥ ಚಿತ ಮುದ್ಯತ್ಪಾದಸೀರಾನ್ವಿತಮತಿಧವಳ ಪ್ರಚ್ಛದಾಚ್ಛಾದಿತಂವಿ । †[ಸ್ತೃತಮಾದುತ್ತುಂಗ ಗರ್ಭೋರ್ಜಿತ ಶಯನ] ದೊಳಾಕಾಂತೆ ಕಣ್ಗೆಡ್ಡಮಾದಳ್ ॥ ೩೯೪

ಕ್ಷಿತಿಧರಗರ್ಭಿತಾವನಿ ಮೃಗಾಧಿಪಗರ್ಭಿತಮೇರುಮೇಖಳಾ । ಕೃತಿ ಸುರದಂತಿಗರ್ಭಿತ ಸುರಾಪಗೆ ಪೂರ್ವನಗೋತ್ಥ ಭಾನುಗ ॥ ರ್ಭಿತದಿನಲಕ್ಷ್ಮಿ ಪದ್ಮಭವಗರ್ಭಿತ ಪದ್ಮಿನಿ ಚಂದ್ರಬಿಂಬಗ । ರ್ಭಿತ ವರವಾರ್ಧಿವೀಚಿಯೆನೆ ಕಣ್ಗೆಸೆದಳ್ ಲಲಿತಾಂಗಿ ಗರ್ಭದಿಂ ॥ ೩೯೫

ವ॥ ಅಂತಿರ್ದ್ದಳಂ ಕಂಡು ನಿವಾಸಭವನಮಂ ಪುಗುತಪ್ಪಾಗಳ್ ॥

---

೩೯೪. ಸಿದ್ಧಾರ್ಥ—ಬಿಳಿಯಸಾಸುವೆ.

*[ಕಲಿತವಿಲಸಿತಂ]

†[ಸ್ತೃತಮಾದುತ್ತುಂಗಗರ್ಭೋರ್ಜಿತಶಯನದೊಳಾ]

ವೃ॥ ಪರಿಹಾಸವೇಳ್ದು ಕಯ್ಯುಡೆ ನಿತಂಬಿನಿ ಮೆಲ್ಲನೆ ವಾಮಜಾನುವಂ
ಕರತಳದಿಂದ ಮೂಱು ವಿಚಳನ್ಮಣಿಭೂಷಣಮಂಜುಳಸ್ವನಂ ॥ ಪರೆಯೆ
ತರಂಗಿತಾಂಗವೆಸೆಯಲ್ಕತಿಸಂಭ್ರಮದಿಂದ ಮೇಳೆ ಬೇ । ಡಿರಿಮಿರಿಮೆಂದು
ಕುಳ್ಳಿರಿಸಿದಂ ಪ್ರಿಯೆಯುಂ ವಸುಧಾಧಿನಾಯಕಂ ॥ ೩೯೬

ಕಂ॥ ಬಳಿವಿಂದರಸಂ ಕಾಂತೆಯು । ಕೆಲದೊಳ್ಕುಳ್ಳಿರೆ ಸವಿನಾಪ
ದೊಳ್ ಹೇಮಮಯೋ । ಜ್ವಲಪಾದಮಂಡಿತಾಸನ । ದೊಳಲ್ಲಿ ಶುಕನಾಸ
ಮಂತ್ರಿಯುಂ ಕುಳ್ಳಿರ್ದಂ ॥ ೩೯೭

ವ॥ ಅನಂತರಮುಪಾರೂಢಗರ್ಭೆಯಪ್ಪ ನಿಜವಲ್ಲಭೆಯುಂ ನೋಡಿ
ಹರ್ಷನಿರ್ಭರಮಾನಸಮರಸಂ ಪ್ರಸ್ತುತಪರಿಹಾಸವಚನದಿನಿಂತೆಂದಂ ೩೯೮

ವೃ ಮನದೊಂದುತ್ಸವದಿಂದೆ ಪೇಳ್ದಳೆಮಗಿಂದೇನಾನುಮಂ ವಂಶ
ವ । ರ್ಧನೆ ಬಂದಂತುಟದಪ್ಪುದಲ್ತೆ ದಿಟಮೆಂದಾನಂದದಿಂ ದೇವಿ ನಿ । ನ್ನ ನ
ಮಾತ್ಯಂ ಬೆಸಗೊಂಡಪಂ ಬೆಸಸೆನಲ್ಮಂದಸ್ಮಿತಂ ಪೊಣ್ಮೆ ಮಾ । ನಿನಿ ಲಜ್ಜಾ
ವನತಾಸ್ಯಮಂ ದಶನಕಾಂತಿವ್ಯಾಜದಿಂ ಮುಚ್ಚಿದಳ್ ॥ ೩೯೯

ಮತ್ತೆಯುಮಂತೆ ಪೇಳ್ನಲದೇನಱಿಯೆಂ ದಿಟದಿಂ ನರೇಂದ್ರ ಕಾ ।
ಡುತ್ತಿರಲೇಕೆ ಪೇಳ್ನೆಗೆ ಮಾಣದೆ ಲಜ್ಜೆಯನಿಂತಿರಲ್ಕೆ ಮಾ । ಡುತ್ತಿರಲೆಂ
ದು ಮೆಲ್ಲನುಸಿರುತ್ತಮೆ ಸೈರಿಸದಂತೆಗೆಯ್ದು ಭೂ । ಪೋತ್ತಮನಂ ವಿನ
ಮ್ರಮುಖಿ ವಾಮವಿಲೋಚನದಿಂದೆ ನೋಡಿದಳ್ । ೪೦೦

೩೯೬. ವಾಮಜಾನುವಂ ಕರತಳದಿಂದಂ ಊಱಿ — ಎಡದ ಮಂಡಿಯಮೇಲೆ ಕ
ಯ್ಯೂರಿ ; ತರಂಗಿತಾಂಗಂ — ವೃದ್ಧಿಹೊಂದಿದ ಅಂಗವು ;

೩೯೯. ಏನಾನುಮಂ — ಏನೋ ಒಂದು ಸಮಾಚಾರವನ್ನು ; ಅದು ಅಂತುಟು
ದಿಟಮಪ್ಪುದಲ್ತೆ ಎಂದನ್ವಯವು ;

೪೦೦. ಮತ್ತೆಯುಂ — ಪ್ರಸ ; ಅಂತೆ — ಮೊದಲಿನಂತೆಯೆ ; [ಅರಸಂ] ಪೇಳೆ
ನಲ್ — ಹೇಳೆಂದು ಕೇಳಲು ; ದಿಟದಿಂ — ನಿಜವಾಗಿ ; ಅದು ಆ ವಂಶವರ್ಧನೆ ಹೇಳಿದ್ದು ;
ಏನಱಿಯೆಂ — ಏನೊ ತಿಳಿಯೆನು ; ಇಂತಿರಲ್ಕೆ ನರೇಂದ್ರ ಕಾಡುತಿರಲೇಕೆ, ಲಜ್ಜೆಯಂ ಮಾ
ಡುತಿರಲೇಕೆ, ಎಂದನ್ವಯವು ; ಸೈರಿಸದಂತೆಗೆಯ್ದು — ಸಹಿಸದೇ ಇದ್ದವಳಂತೆ ತೋರ್ಪಡಿ
ಸಿಕೊಂಡು.

ವ॥ ಅನ್ತುನೋೞ್ಪುದುಂ ನರೇಂದ್ರಂ ನಸುನಗುತ್ತಮಿಂತೆಂದಂ ॥

ವೃ॥ ಆಂ ನುಡಿದೀಗಳೀನುಡಿಗೆ ಲಜ್ಜಿಸಿದಪ್ಪೆ ಲತಾಂಗಿ ಮಾಣ್ದೆ ನಾ।
ನಿಂನವ ನಂತದಿರ್ಕ್ಕೆ ವಿಳಸನ್ನವಚಂಪಕ ಚಾರುಕಾಂತಿಯಿಂ॥ ದಂ ನೆಱೆ
ದಿರ್ದ್ದ ಕಣ್ಗೊಳಿಪ ಕುಂಕುಮಪಂಕನವಾಂಗರಾಗದೊ। ಳ್ನಿಂನ ತನು
ಪ್ರಭಾಪ್ರಕರದಿಂದೆ ಬೆಳರ್ಪ್ಪನದೇಕೆ ಮಾಡಿದಾ ॥ ೪೦೧

ಕಂ॥ ಪಸರಿಸುವ ಗರ್ಭಸಂಪ್ರಾ । ಪ್ತಿಸುಧಾಸೇಚನೆಯೆ ಹೃದಯ
ಶೋಕಾಗ್ನಿಯು ನಂ॥ ದಿಸೆ ಪೊಣ್ಮುತಿರ್ಪ್ಪ ಧೂಮ । ಪ್ರಸರಮಿದೆನೆ ಕು
ಚದೊಳೇಕೆ ಕರ್ಪ್ಪಂ ತಳೆದಾ ॥ ೪೦೨

ತೊಳಗುವ ತೆಳ್ವಸಿಱೊಳ್ ಶಿಶು । ಬಳೆವಿನಮಭಿಷೇಕವಿಧಿಗೆ ನಿಲಿ
ಸಿದ ನೀಲೋ॥ ತ್ಪಲಪಿಹಿತಹೇಮಕಲಶಂ । ಗಳವೆನಿಸಿದವಲ್ತೆ *[ನೀಲಮು
ಖಕುಚಯುಗಳಂ] ॥ ೪೦೩

ಉದರಾರ್ಭಕಂಗೆ ಮೇಲೆ । ತ್ತಿದ ಕುಚಯುಗಮೆಂಬ ಪೊನ್ನ
ಮಳ್ಗೊಡೆಯುಂ ತಾ॥ ಳ್ದಿದ ನೀಲದಂಡಮೆಂಬಂ। ದದೆ ಸೊಗಯಿಪ ಬಾಸೆ
ಗರಸಿ ಲಜ್ಜಿಸವೇಡಾ ॥ ೪೦೪

ನುಡಿಪ್ರೌಢೆ ನಾಚಿಕೆಗಡ ನಿನ। ಗುಡಿನೂಲ್ಬಿಗಿವಿನೆಗ ಮಿಾವಳಿತ್ರಯ
ಮಿಾಗಳ್ ॥ ಕಿಡುತಿರ್ಪ್ಪುದು ಬಡತನಮುಂ । ಬಿಡುತಿರ್ಪ್ಪುದು ನಡುವು ಮಿಂ
ತಿದಕ್ಕೇಗೆಯ್ವೆ ॥ ೪೦೫

೪೦೧. ಇನ್ನು—ನೀನು ನಾಚಿಕೊಂಡಬಳಿಕ ; ಇದಂಮಾಣ್ದೆಂ—ಹೀಗೆ ಕಾಡುವ
ದನ್ನು ಬಿಟ್ಟೆನು ; ಅಂತದಿರ್ಕ್ಕೆ—ಅದು ಹಾಗಿರಲಿ ; ಅಂಗರಾಗದೊಳ್—ಅಂಗಲೇಪನ
ಕ್ಕೆ ; ಬೆಳರ್ಪ್ಪಂ—ಧಾವಳ್ಯವನ್ನು ; ಆದೇಕೆಮಾಡಿದಾ—ಯಾತಕ್ಕೋಸ್ಕರ ಉಂಟು
ಮಾಡಿದೆ ; ಅಂದರೆ ನಿನ್ನ ಶರೀರವು ಯಾತಕ್ಕೋಸ್ಕರ ಬಿಳುಪಾಯಿತೆಂದಭಿಪ್ರಾಯವು.

೪೦೩. ತೆಳ್ವಸಿಱೊಳ್—ಕೃಶವಾದ ಉದರದಲ್ಲಿ ; ಬೆಳೆವಿನಂ—ಬೆಳೆಯುತ್ತಿ
ರಲು.

೪೦೪. ಅಮಳ್ಗೊಡೆ—ಜೊತೆಯಾಗಿರುವ ಛತ್ರಿಗಳು ; ಬಾಸೆ—ರೋಮರಾಜಿ.

೪೦೫. ಉಡಿನೂಲ್—ಉಡ್ಯಾಣ ; ಬಿಗಿವಿನೆಗಂ—ಬಿಗಿಯುವಹಾಗೆ.

*[ನಿನ್ನ ಕುಚಮುಖಯುಗಳಂ]

ವ॥ ಎಂದು ತಾರಾಪೀಡಂ ಕಾಡುತಿರ್ಪ್ಪುದು ಮಂತರ್ನಿಗೂಢಹಾಸ್ಯಂ ಶುಕನಾಸನಿಂತೆಂದಂ ॥ ೪೦೬

ವೃ॥ ಇನಿತಾಯಾಸಮನೇಕೆ ಮಾಡಿದಪೆ ನಾಣ್ಬುತ್ತಿರ್ದ್ದಪಳ್ದೇವಿ ಭೂ। ವನಿತಾಧೀಶ್ವರ ನಿನ್ನ ಮಾತುಗಳನೀಗಳ್ನಾಡೆಯುಂ ವಂಶವ ॥ ರ್ಧನೆ ಪೇಳ್ದಲ್ಲಿಯ ಮಾತನೀಂ ಮಱೆ ಯೆನುತ್ತಲ್ಲಿಂದೆ ನರ್ಮಪ್ರಿಯಾ । ಛಿನುತಾ ಳಾಪದೆ ನೀಡುಮಿರ್ದ್ದು ಬಳಿಯಂ ಪೋದಂ ಪ್ರಧಾನೋತ್ತಮಂ ॥ ೪೦೭

ವ॥ ಇತ್ತಲ್ ಸನ್ನಿಹಿತಗರ್ಭದೋಹದಸಂಪಾದನದಿಂ ವಿಳಾಸವತೀ ಮಹಾದೇವಿಯುಂ ಪ್ರಮುದಿತೆಯುಪ್ಪಂತು ನೆಗಳುತ್ತಮಿರೆ ಕೆಲವಾನುಂದಿವಸ ದೊಳ್ಪ್ರಸವಸಮಯಪುಣ್ಯದಿನಮಾಗೆ ಗಣಕಗಣಂ ಗೃಹೀತಛಾಯಾಮಾನ ರಾಗಿ ಶುಭಲಗ್ನಮಂ ಪಾರುತ್ತಮಿರ್ಪ್ಪನ್ನೆಗಂ ॥ ೪೦೮

ಕಂ॥ ಒದವಲ್ನಿಜತೇಜಂ ಘನ । ದೊದವಿಂನವಮೇಘಮಾಲೆ ಗುದ ಯಿಪ ತೆಱದಿಂ ॥ ಹೃದಯಾನಂದಂ ಭುವನದೊ । ಳೊದವಲ್ಕೆ ವಿಳಾಸವ ತಿಗೆ ಸುತನುದಯಿಸಿದಂ ॥ ೪೦೯

ವ ॥ ಅಂತಾಮಹಾತ್ಮಜಾತಜನನೋತ್ಸವದೊಳ್ಸರಭಸಪ್ರಧಾವಿತ ಪರಿಜನ ಚರಣಸಂಕ್ಷೋಭ ಕ್ಷುಣ್ಣಕ್ಷಿತಿತಳಮುಂ ಭೂಪಾಲಾಭಿಮುಖಪ್ರ ಸೃತಕಂಚುಕಿಸಹಸ್ರಸಮ್ಮರ್ದನಿಷ್ಪಿಷ್ಯಮಾಣಕುಬ್ಜವಾಮನಗಣಮುಂ ವಿಷ್ಫಾರ್ಯಮಾಣಾಂತಃಪುರಜನಾಭರಣ ಝುಂಕಾರಮನೋಹರಮುಂ ಪೂ ರ್ಣಪಾತ್ರಹರಣವಿಲುಠ್ಯಮಾನವಸನಭೂಷಣಮುಂ ಸಂಕ್ಷೋಭಿತನಗರ ಮು ಮೆನಿಸಿ ಮಹಾಸಂಭ್ರಮಂ ವಿಜೃಂಭಿಸುವುದು ಮಂಭೋಧಿಗಂಭೀರ ದುಂದುಭಿಧ್ವಾನಪುರಸ್ಸರಮಾಗಿ ರಾಜಮಂದಿರದೊಳ್ ಮೃದುಮೃದಂಗಶಂಖ ಕಹಳಾರಾವನಿರ್ಭರಪಟಹರವಂಗಳೆಸೆಯ ಲನೇಕಸಹಸ್ರಜನಸಂಕುಲಂಗ ಳಿಂ ತ್ರಿಭುವನಮೆಲ್ಲಮಂ ತೆಕ್ಕನೆತೀವುವಾನಂದಬಹುಳಕೋಲಾಹಲಂನೆಗೆ

---

೪೦೮ ದೋಹದ—ಬಯಕೆ ; ಪಾರುತ್ತಮಿರ್ಪ್ಪನ್ನೆಗಂ—ನೋಡುತ್ತಿರುವಷ್ಟ ರಲ್ಲಿ.

೪೦೯. ಒದವಲ್—ಶುಭಲಗ್ನ ಪ್ರಾಪ್ತವಾಗಲು ; ನಿಜತೇಜಂ—ಮಿಂಚು. ಘನದೊದವಿಂ—ವರ್ಷಾಕಾಲೋದಯದಿಂದ.

ಯಿ ಸಮಸ್ತಸಾಮಂತಸಂತತಿಯುಂ ಮಶೇಷಾಂತಃಪುರಮುಂ ಮಖಿಳರಾಜಲೋಕಮುಂ ಆಬಾಲಗೋಪಾಲಪ್ರಕೃತಿಯೆಲ್ಲಮುಂ ಮತಿಹರ್ಷನಿರ್ಭರತೆಯಿಂ ಭೋರ್ಗರೆದಾರ್ದ್ದು ನಲಿದುನರ್ತಿಸುತ್ತಮಿರೆ ॥ ೪೧೦

ಕಂ॥ ಉದಯಿಸೆ ಚಂದ್ರಂ ನೆಲೆವೆ । ರ್ಚ್ಚಿದರ್ಣವಂಘೂರ್ಣಿಪಂತೆ ಭೋರೆಂದೋರಂ । ದದೆ ಭುವನಮ್ಮೈದೆ ಘೂರ್ಣಿಸಿ । ದುದದೆತ್ತಂ ರಾಜಪುತ್ರಜನನೋತ್ಸವದೊಳ್ ॥ ಅಂತಾಸಮಯದೊಳ್— ೪೧೧

ಶುಕನಾಸಸಮನ್ವಿತ ನು । ತ್ಸುಕಹೃದಯಂ ನೃಪತಿ ಸುತಮುಖಾಲೋಕನಕೌ ॥ ತುಕದಿಂ ಬಂದಂ ಮೌಹೂ । ರ್ತಿಕೋಪದಿಷ್ಟಪ್ರಶಸ್ತಲಗ್ನೋದಯದೊಳ್ ॥ ೪೧೨

ವ॥ ಆಗಳ್ಮಣಿಮಯಕಲಶವಿಲಸಿತಮುಂ ವಿವಿಧಪುತ್ರಿಕಾವಿಚಿತ್ರಮುಂ ಪಲ್ಲವನಿವಹನಿರಂತರಮುಂ ಕಾಂಚನಮಯಕಮಲಮುಸಲಹಲಕಲಿತಮುಂ ಸಿತಕುಸುಮಮಿಶ್ರಿತದೂರ್ವಾಪ್ರವಾಳಾಲಂಕೃತಮುಂ ವ್ಯಾಘ್ರಚರ್ಮಸಾಂದ್ರಮುಂ ವಂದನಮಾಲಾಂತರಾಳಘಟಿತಘಂಟಾಗಣಮುಮೆನಿಸಿದ ಸೂತಿಕಾಭವನದ್ವಾರದೇಶದೊಳ್ ನಿವಾರಿತಪರಿವಾರನಾಗಿ ಶುಕನಾಸಸಮನ್ವಿತಂ ಪುಗುವಲ್ಲಿ ಉತ್ತಾನವಿನಿಹಿತವರಾಟಕಪ್ರಕರದಂತುರಂಗಳುಂ ವಿವಿಧವರ್ಣರಾಗರುಚಿರಕಾರ್ಪಾಸಕುಸುಮಲಾಂಛಿತಂಗಳುಂ ಕುಸುಂಭಕೇಸರಲವಾಶ್ಲೇಷಲೋಹಿತಮುಖಂಗಳುಮಾಗಿರಂಜಿಸುವರಂಗವಲ್ಲಿಗಳುಮಂ, ವಿಕಚಪಕ್ಷಮಂಡಿತಶಿಖಂಡಿವಾಹನನುಂ ಆಲೋಲಲೋಹಿತಪಟಪತಾಕನುಂ ಉಲ್ಲಸಿತಶಕ್ತಿದಂಡನುಮೆನಿಸಿದ ಕಾರ್ತಿಕೇಯನುಮಂ, ಅಲಕ್ತಕಪಟಲಪಾಟಳರಪ್ಪ ಸೂರ್ಯಾಚಂದ್ರಮಸರುಮಂ, ಕುಂಕುಮಪಂಕಪಿಂಜರೀಕೃತಂಗಳುಮೂರ್ಧ್ವಪ್ರೋತಕನಕಮಯಯವನಿಕರಂಗಳುಂ ಅವಿರಳಗೌರಸಿದ್ಧಾರ್ಥಪ್ರಕರಂಗಳುಮೆನಿಸಿದ ಮೃಣ್ಮಯಂಗಳಪ್ಪ ಘಟಿಕಾಕದಂಬಂಗಳುಮಂ, ಚಂದನರಸಧವಳಿತಭಿತ್ತಿಭಾಗಾಂಚಿತ ಪಂಚರಾಗವಿಚಿತ್ರಚೇಲಕಳಾಪ ಚಿ

---

೪೧೩. ವರಾಟಕ—ಕವಡೆ; ಗೌರಸಿದ್ಧಾರ್ಥಕ—ಬಿಳಿಸಾಸುವೆ; ಘಟಿಕಾ—ಗಡಿಗೆ; ವರ್ಧಮಾನಕ—ಶರಾವೆಗಳು.

ಹ್ನಂಗಳುಮಂ, ವರ್ಧಮಾನಕಪರಂಪರೆಗಳುಮಂ, ಇನ್ನುಮನೇಕಪ್ರಸವಗೃಹಮಂಡನಂಗಳುಮಂ, ಸಂಪಾದಿಸುವಪುರಂಧ್ರಿಯರೊಳಂ ಗುಗ್ಗುಳಫಣಿಕಂಚುಕವಿಷಾಣರೇಣುಗಳಿಂದೆಕರ್ವೊಗೆಯಿಡುವ ಸರ್ವರಕ್ಷಾಧೂಪಧೂಮಂಗಳೊಳಂ ಶಾಂತ್ಯುದಕಮಂ ತಳಿವವನೀವೃಂದಾರಕವೇದಘೋಷಣಂಗಳೊಳಂ ಮಾತೃಗಣಪೂಜಾವಿಧಾನತತ್ಪರರಾದ ಧಾತ್ರೀಜನಂಗಳೊಳಂ ಮಂಗಳಮಂಪಾಡುವ ಶುದ್ಧಾಂತವೃದ್ಧಾಂಗನೆಯರೊಳಂ ಕನಕದಂಡಾಗ್ರಮಂಡಿತಮಾಗಿ ಬೆಳಗುವ ಮಂಗಳಪ್ರದೀಪಂಗಳೊಳ್ ಮುತ್ತಾತಾಸಿಲತಾಸನಾಥಪಾಣಿಗಳಪ್ಪ ರಕ್ಷಾಪುರುಷರೊಳಮೆಸೆವ ಸೂತಿಕಾಗೃಹಮಂ ತಾರಾಪೀಡನರೇಂದ್ರಂ ಪುಗುವುದುಂ ಪ್ರಸವಪರಿಕ್ಷಾಮಮಪಾಂಡುಮೂರ್ತಿಯುಪ್ಪ ವಿಳಾಸವತೀಮಹಾದೇವಿಯುತ್ಸಂಗದೊಳ್ತನ್ನ ಬೆಳಗೆಬೆಳಗಾಗೆ ॥ ೪೧೩

ವೃ॥ ಉದಯಮದಕೆಂಪಿನಿಂ ಪುದಿದಮೋದಿನಬಿಂಬಮೊ ಸಂಜೆಗೆಂಪಿನಿಂ । ಪುದಿದಸುಧಾಂಶುಮಂಡಳಮೊ ಮೋಣಿದರಲ್ಕೆಯೊಳಾದರಾಗದಿಂ । ಪುದಿದರುಣಾರವಿಂದಚಯಮೋ ತಳಗೊರ್ಂಚಲತಳ್ತ ಕೆಂಪಿನಿಂ । ಪುದಿದಮರಾಮನೀರುಹಮೊ ಪೇಳ್ನೆ ಬಾಲಕನಾದಮೊಪ್ಪಿದಂ ॥ ೪೧೪

ಕಂ॥ ಎಳೆವಿಸಿಲಿಂ ಪವಳದಕುಡಿ । ದಳರಿಂ ಮಾಣಿಕದಬೆಳಗಿನಿಂ ನಿರ್ಮಿಸಿದಂ ॥ ನಳಿನಭವ ನೆಂಬಿನಂಕ । ಣ್ಗೊಳಿಸಿರ್ದಂ ಜಿತಕುಮಾರನೆಂಬಕುಮಾರಂ ॥ ೪೧೫

ಸಹಜವಿಭೂಷಣದಂತಿರೆ । ಮಹನೀಯಚ್ಛನ್ನಲಕ್ಷಣಂ ಮಿಸುಗೆ ಶುಭಾ ॥ ವಹನೆನಿಸಿದನಂ ಕಂಡಂ । ಮಹಾತ್ಮನಂ ಸುತನನಕ್ಕಱಿಂದಾ ಮಹಿಪಂ ॥ ಅಂತುಕಂಡು ೪೧೬

ಕಂ॥ ಅಡಿಗಡಿಗಾನಂದಾಶ್ರುಗ । ಳ್ಡೆಮಿಡದುಣ್ಮುತ್ತಿರಲ್ಕೆ ನಿಡುಗ*[ಣ್ಮಲರಿಂ] ॥ ಪಿಡಿವಂದದೆ ಕುಡಿವಂದದೆ । ನುಡಿವಂದದೆ ಸುತನನಕ್ಕಱಿಂದೀಕ್ಷಿಸಿದಂ ॥ ೪೧೭

೪೧೪. ಅರಲ್ಕೆಯೊಳಾದ—ಅರಳಿದಾಗ ಉಂಟಾದ.

೪೧೫. ಜಿತಕುಮಾರಂ—ಜೈಸಲ್ಪಟ್ಟ ಕುಮಾರಸ್ವಾಮಿಯುಳ್ಳ.

*[ಣ್ಗೊಣರಿಂ]

ವ ॥ ಆಗಳ್ ಶುಕನಾಸಂ ಕುಮಾರನಂಗಪ್ರತ್ಯಂಗಂಗಳಂ ಪ್ರೀತಿವಿಸ್ಫಾರಿತಲೋಚನನಾಗಿ ನೋಡಿ ನರೇಂದ್ರಂಗಿಂತೆಂದಂ ॥ ೪೧೮

ಕಂ ದೇವಪೆಱತಾವುದವ್ಯ । ಕ್ತಾವಯವದೊಳಂ ಕುಮಾರನುನ್ನತಿಕೆಯುಮನು ॥ ದ್ಭಾವಿಸುತಿರ್ದಪು†[ದಂಪರಿ] । ಭಾವಿಸು ನೀಂ ಚಕ್ರವರ್ತಿಚಿಹ್ನೋತ್ಕರಮಂ ॥ ೪೧೯

ಪೆಱೆನೊಸಲೊಳ್ಬಿಸತಂತುವ । ತೆಱದಿಂ *[ಮಿಱುಗಿ ದಪುದೂರ್ಣೆ] ಭವನಾಂತರಮುಂ । ನೆಱೆಧವಳಿಸುತಿರ್ದಪುದೀ । ತುಱುಗೆವೊಗಣ್ಬೆಳಗು ಪುಂಡರೀಕೇಕ್ಷಣನಾ ॥ ೪೨೦

ದರದಳಿತಕಮಲಕುಟ್ಮಳ । ಪರಿಮಳವೆನಿಸಿರ್ದಸಹಜಮುಖಸೌರಭಮುಂ ॥ ಬರೆಪೀರುತಿರ್ಪುದೆಂಬಂ । ತಿರೆನಾಸಿಕನೀಳ್ಪುವೆತ್ತುದೀಬಾಲಕನಾ ॥ ೪೨೧

ಅರುಣೋತ್ಪಲದಳಲೋಹಿತ । ಕರಂಗಳೊಳ್ ಶಂಖಚಕ್ರಚಿಹ್ನಂಗಳನಾಂ ॥ ತಿರೆ ಮುರವೈರಿಯ ಕರದಂ । ತಿರೆಕರಮೆಸೆದಪುದುಕರಯುಗಂ ಬಾಲಕನಾ ॥ ೪೨೨

ವೃ ಕರಿತುರಗಾತಪತ್ರಶತಪತ್ರಪರಿಸ್ಫುಟರೇಖೆಗಳ್ಮನೋ । ಹರತರಮಾಗೆ ಕಲ್ಪತರುಕೋಮಲಪಲ್ಲವದಂತೆ ಮೆಲ್ಪಿನಿಂ ॥ ಪೊರೆದ ನರೇಂದ್ರವೃಂದಮಣಿಮೌಳಿಕದಂಬಕಚುಂಬನೋಚಿತಂ । ಚರಣಯುಗಂ ಮನಂಗೊಳಿಸುತಿರ್ದಪುದಿಂತಿದೆನಲ್ಕುಮಾರನಾ ॥ ೪೨೩

---

೪೧೯. ಪೆಱತಾವುದು—ಬೇರೆ ಹೇಳತಕ್ಕದ್ದೇನಿದೆ ; ಉನ್ನತಿಕೆಯುಂ—ಮಾಹಾತ್ಮ್ಯವನ್ನು ; ಉದ್ಭಾವಿಸುತ್ತಿರ್ದಪುದಂ—ವ್ಯಕ್ತಮಾಡುತ್ತಿರುವ.

೪೨೦. ಊರ್ಣೆ—ಚಕ್ರವರ್ತಿತ್ವಸೂಚಕಲಲಾಟರೇಖೆ ; ತುಱುಗೆವೊಗಣ್ಬೆಳಗು—ಒತ್ತಾಗಿರುವ ಱೆಪ್ಪೆಗಳುಳ್ಳ ಕಣ್ಣಿನ ಕಾಂತಿ.

೪೨೩. ಮೆಲ್ಪಿನಿಂ—ಮಾರ್ದವದಿಂದ ; ಪೊರೆದ—ಕೂಡಿದ ; ಇಂತಿದುಚರಣಯುಗಂ—ಈ ಪಾದಯುಗ್ಮವು ; ಚುಂಬನೋಚಿತಮೆನಲ್—ಚುಂಬನಯೋಗ್ಯವಾದದ್ದೆಂದು ಹೇಳುತ್ತಿರಲು.

*[ಮಿಱುಗಿಪುದು ಪೂರ್ಣೆ] †[ದಿಂತಿದೆ]

ಕಂ॥ ನಂದನರುದಿತಂ ಹೃದಯಾ । ನಂದಮನೆನಗೊವವಿಸುತ್ತ ವಿ
ದ್ದರ್ಪುದಿಂತೀ ॥ ದುಂದುಭಿಗಭೀರನಾದದಿ । ನೆಂದಿಂತಾಮಂತ್ರಿ ಪೇಳುತಿರೆ
ತತ್ಕ್ಷಣದೊಳ್ ॥ ೪೧೪

ವ॥ ಅಂತಃಪುರದ್ವಾರದೇಶದೊಳಿರ್ದ್ದ ರಾಜಲೋಕಮೆಲ್ಲಮುಂ ಸಂ
ಭ್ರಮಂಬೆರಸು ತೊಲಗಲೊರ್ವ್ವಪುರುಷಂ ಪ್ರಹೃಷ್ಟವದನಂ ತ್ವರಿತಗತಿ
ಯಿಂ ಬಂದುಪೊಡವಟ್ಟುಬಿನ್ನಪವೆಂದಿಂತೆಂದಂ ॥ ೪೧೫

ವೃ॥ ದೈವವಿದಿರ್ಚ್ಚಿಬಂದುದು ಜಗಜ್ಜಯಮಂ ತಳೆ ದೇವ ರೇಣು
ಕಾ । ದೇವಿಗೆ ರಾಮನುತ್ಸವದೆ ಪುಟ್ಟಿದವೊಲ್ ಶುಕನಾಸಮಂತ್ರಿಸಂ ॥ ಭಾ
ವಿತೆಯಪ್ಪ ಪಾರ್ವ್ವತಿಮನೋರಮೆಗತ್ತ ಭವತ್ಪ್ರಸಾದದಿಂ । ದೀವರಲಗ್ನದೊ
ಳ್ತನಯನತ್ಯಧಿಕೋತ್ಸವಮಾಗೆಪುಟ್ಟಿದಂ ॥ ಎಂದುಬಿನ್ನವಿಸೆ— ೪೧೬

ಕಂ॥ ಅರಸಂಕಲ್ಯಾಣಪರಂ । ಪರೆ ಸಮನಿಸಿತೆಂದು ತೆಗೆದುತಳ್ಕೈಸು
ತ್ತಂ ॥ ಸರಭಸವೊಲವಿಂಸಚಿವೋ । ತ್ತರೀಯಮಂ ಪೂರ್ಣಪಾತ್ರವೆಂದೆ
ಳೆಕೊಂಡಂ ॥ ೪೧೭

ವ॥ ಅನಂತರ ಮೊಸಗೆವಾತಂಪೇಳ್ದವಂಗೆ ಮುಚ್ಚುಗೊಟ್ಟಲ್ಲಿಂದೇ
ಳ್ದುಪೊಱಮಟ್ಟು ನೋಳ್ಪನ್ನೆಗಮಲ್ಲಿ ಕ್ವಣಿತಮಣಿನೂಪುರಸಹಸ್ರಮುಖ
ರಿತದಿಗಂತಮುಂ ಅತಿರಭಸೋಪಚಲಿತಮಣಿವಲಯಾವಳೀವಿಳಸಿತಭುಜಲ
ತಾಪ್ರತಾನಮುಂ ಮುತ್ತಾನಕರತಳ ನಳಿನಮುಂಮೃದಿತಕರ್ಣಪೂರಪಲ್ಲವ
ಮುಂ ಮನ್ಯೋನ್ಯಾಂಗಸಂಘಟ್ಟನಸಂದಷ್ಟಪಾಟಿತೋತ್ತರೀಯಮುಂ ನಿ
ಜಾಂಗರಾಗರಂಜಿತ ವಸನಮುಂ ಅವಶಿಷ್ಟಮಕರಿಕಾಪತ್ರಲೇಖಮುಂ ಆ

---

೪೧೬. ದೈವಮಿದಿರ್ಚ್ಚಿಬಂದುದು—ದೈವವು ಅಭಿಮುಖವಾಯಿತು ; ಪಾರ್ವತಿ—
ಬ್ರಾಹ್ಮಣಿತಿ.

೪೧೭. ಪೂರ್ಣಪಾತ್ರ—ಉಡುಗೊರೆ.

೪೧೮. ಮುಚ್ಚುಗೊಟ್ಟು—ಉಡುಗೊರೆಯನ್ನು ಕೊಟ್ಟು ; ಪಿಷ್ಟಾತಕ—ಗಂಧ
ದಹುಡಿ ; ಪ್ರನೃತ್ತ—ವಿಶೇಷವಾದ ನರ್ತನವುಳ್ಳ ; ಆಕೃಷ್ಟ—ಎಳೆಯಲ್ಪಟ್ಟ ; ಘೂ
ರ್ಣಮಾನ—ಜಾರುತ್ತಿರುವ ; ಬಸಗೆಮರುಳ್ಗೊಂಡು—ಶುಭವಾರ್ತೆಯಿಂದ ಉನ್ಮತ್ತರಾಗಿ.

ಲೋಲಹಾರಲತಾಸ್ಖಲಿತಕುಚಕುಂಭಸ್ಥಳಮುಂ ಸಿಂದೂರತಿಲಕಾರುಣಿತ ಚಿಕುರನಿಕರಮುಂ ಪಿಷ್ಟಾತಕಪಾಂಸುಪುಂಜಪಿಂಜರಿತಕೇಶಪಾಶಮುಂ ಪ್ರನೃತ್ತ ಷಂಡಮೂಕಕುಬ್ಜವಾಮನ ಕಿರಾತಜನಪುರಸ್ಸರಮುಮುತ್ತರೀಯಾಂಶುಕಾಕೃಷ್ಟಜರತ್ಕಂಚುಕಿ ನಿಕಾಯಮುಂ ವೀಣಾವೇಣುಮುರಜ ಕಾಂಸ್ಯತಾಳಲಯಾನುಗತ ಮೆನಿಸಿದಂತಃಪುರವಿಳಾಸಿನೀಜನಮುಂ ಪ್ರಚಲನ್ಮಣಿಕುಂಡಲಾಹತ ಗಂಡಮಂಡಲಮುಂ ಘೂರ್ಣಮಾನಕರ್ಣೋತ್ಪಲಮುಂ ಅಧೋವಿಗಳಿತವಿಲೋಲಶೇಖರಮುಂ ಡೋಲಾಯಮಾನವೈಕಕ್ಷಕ ಕುಸುಮಮಾಲಮುಂ ಭೇರೀಮೃದಂಗಮರ್ದಳಪಟಹ ಕಹಳಾಶಂಖರವ ಜನಿತರಭಸಮುಮೆನಿಸಿದ ರಾಜಪರಿಜನಮುಂ ನೃತ್ಯಪ್ರವೃತ್ತಚಾರಣಗಣಮುಮೊಸಗೆಯುರುಳ್ಗೊಂಡು ಭೋರ್ಗರೆದು ನಲಿದುನರ್ತಿಸುತ್ತಮೊಡನೆ ಬರೆವರೆ ॥ ೪೨೮

ವೃ॥ ವಿವಿಧವಿಲಾಸಮಂ ತಳೆದು ಮಂಗಳಕೇಳಿಯನಳ್ತಿವಟ್ಟುಮಾ ।
ನವಪತಿನೋಡುತಂ ಸಚಿವಮಂದಿರಮಂ ಪುಗುತಂದು ಸೂತಿಕಾ ॥
ಭವನಮನೆಯ್ದಿ ಪೆರ್ಮೆಗನುರೂಪಮೆನಲ್ನಿಜಮಂದಿರೋದ್ಗತೋ ।
ತ್ಸವಕಿದುನಾಡೆಯುಂ ದ್ವಿಗುಣಮೆಂಬಿನಮುತ್ಸವಮಂ ನೆಗಳ್ಚಿದಂ ॥ ೪೨೯

ವ॥ ಅಂತುನೆಗಳ್ಚಿ ದಶಮದಿನಪುಣ್ಯ ಸುಮುಹೂರ್ತದೊಳ್ಸ್ವರ್ಣಕೋಟಿಗಳಂ ದ್ವಿಜೋತ್ತಮರ್ಗಿತ್ತು ತದನಂತರದೊಳ್ ॥ ೪೩೦

ವೃ॥ ಮೊದಲೊಳ್ಬಂದಳ್ಕಱಿಂದೀತನ ಜನನಿಯ ವಕ್ತ್ರಾಬ್ಜದೊಳ್ಚಂದ್ರಮಂ ಪೊ ।
ಕ್ಕುದನಲ್ತೇ ಕಂಡೆನಾಂ ಸ್ವಪ್ನದೊಳೆನುತೆ ಮನಂಗೊಂಡು ತತ್ಸ್ವಪ್ನಸಾದೃ ॥
ಶ್ಯದೆ ಚಂದ್ರಾಪೀಡನೆಂಬೀಮೊದಲಪೆಸರನಿಟ್ಟಂ ತನೂಜಂಗೆ ಮೂಲೋ ।
ಕದೊಳಂ ಮಾಂಗಲ್ಯತೂರ್ಯಧ್ವನಿಪಸರಿಸಿ ಪರ್ವುತ್ತಿರಲ್ಸಾರ್ವಭೌಮಂ ॥ ೪೩೧

ಕಂ॥ ಮನುಮಾರ್ಗದೊಳೇಕಾದಶ । ದಿನದೊಳ್ತನಯಂಗೆ ವಿಪ್ರ ಜನಸಮುಚಿತಮಾ ॥ ಪ್ಪಿನೆ ಸಚಿವಂ ವೈಶಂಪಾ । ಯನನೆಂಬೀ ಪೆಸರನಿಟ್ಟ ನಧಿಕೋತ್ಸವದಿಂ ॥ ೪೩೨

೪೩೨. ಮನುಮಾರ್ಗದೊಳ್—ಶಾಸ್ತ್ರಪದ್ಧತಿಯಿಂದ.

ವ॥ ಅನಂತರಮೊಳ್ ಪಡೆವ ಪಾಡಿವದಚಂದ್ರನಂತೆ ಚಂದ್ರಾಪೀಡಂ ಪ್ರತಿದಿನಂಪ್ರವರ್ಧಮಾನನಾಗೆ ಚೂಡಾಕರಣಾದಿಕ್ರಿಯಾಕಲಾಪಮುಮಂ ಮಾಡುತ್ತಮಿರೆಶೈಶವಮಂಪತ್ತುವಿಡುವುದುಂ ಕ್ರೀಡಾವ್ಯಸನಮುಗಲ್ವಂತು ಬಹಿರ್ನಗರದೊಳಮರಮಂದಿರಾನುಕಾರಿಯಪ್ಪವಿದ್ಯಾನಿಕೇತನಮಂ ಮಾಡಿಸಿ ನಿಖಿಳವಿದ್ಯಾಚಾರ್ಯರುಮಂ ಮಹಾಪ್ರಯತ್ನದಿಂ ನಿಲಿಸಿ ಶುಭದಿನದೊಳ್ ಧವಳಮಂಗಳಪ್ರಸಾಧನಾಲಂಕೃತನು ಮಾಚಾರ್ಯಕುಲಪರಿವೃತನುಮಪ್ಪನಿಜನಂದನನಂ ವೈಶಂಪಾಯನಂಬೆರಸು ವಿದ್ಯಾಧಿಗಮನದೊಳ್ ಸಮರ್ಪಿಸಿ ಪಂಜರಸ್ಥಿತಮದಕೇಸರಿಕಿಶೋರಕದಂತೆಗೆಯ್ದು ಖಿಳವಿದ್ಯಾಭ್ಯಾಸಂಗೆಯ್ಯುತ್ತಮಿರೆ ॥ ೪೩೩

ಕಂ॥ ಪೊಳೆದೆಸೆವರತ್ನದರ್ಪಣ । ದೊಳಗೆ ತಳತ್ತಳಿಪತರಣಿಕಿರಣಾವಳಿವೊಲ್ ॥ ತೊಳಗಿಬೆಳಗಿದುವುವಿದ್ಯಾ । ವಳಿ ನಿಜ *[ನಂದನನ] ವದನಮಣಿದರ್ಪಣದೊಳ್ ॥ ೪೩೪

ವ॥ ಅಂತುಸಕಳಕಳಾಕಳಾಪಮುನಪ್ಪಗೆಯ್ದು ಶಸ್ತ್ರಶಾಸ್ತ್ರದೊಳತ್ಯಂತಪರಿಣತನಾಗುತ್ತಮಿರೆಯಿರೆ ॥ ೪೩೫

ಕಂ॥ ವಿರಳಪರಿವಾರಪರಿವೃತ । ನರಸಂ ಮಾದೇವಿವೆರಸು ನಿಚ್ಚಂ ಬಂದಾ ॥ ದರದಿಂದೆ ನೋಡಿಪೋಪಂ । ಗುರುಜನಪರಿವೃತನೆನಿಪ್ಪನಿಜನಂದನನಂ ॥ ೪೩೬

ಸಕಳಶ್ರಮಂಗಳಿಂಪಂ । ವೃಕೋದರನತೆಜದಿನಂದು ಶೈಶವದೊಳ್ †[ಲೋ ॥ ಕಕೆಚಿತ್ರಮಪ್ಪಿನಂ] ರಾ । ಜಕುಮಾರಂ ತಾಳ್ದಿನಂ ಮಹಾಪ್ರಾಣತೆಯಂ ॥ ೪೩೭

---

೪೩೩. ಪತ್ತುವಿಡುವುದುಂ—ಕಳೆಯುತ್ತಲು ;

೪೩೭. ಸಕಲಶ್ರಮಗಳಿಂ—ಸಮಸ್ತಾಭ್ಯಾಸದಿಂದ ; ಮಹಾಪ್ರಾಣತೆಯಂ—ಶಕ್ತಿಯನ್ನು.

*[ದಿವಿಬುಧ] †[ಲೋಕಕವಂತನೆಂಬಿನಂ]

ಲೀಲೆಯೊಳ್ ಪಿಡಿದು ನಿಲಿಸಂ । ವ್ಯಾಳೇಭಮನೊಂದುಪೊಯ್ಲಿನಿಂ
*[ದವೆ ಕಡಿವಂ ॥ ತಾಳಂಗಳ] ನುಚ್ಚಿರ್ಸುವಂ । ಶೈಲಶಿಲಾತಳಮನೆಳ
ವೆಯೊಳ್ ನೃಪತನಯಂ ॥ ೪೩೮

ಗುಣಮುಂ ರೂಪುಂ ವಿದ್ಯಾ । ಗಣಮುಂ ತಳ್ತಿರ್ದು ತನ್ನೊಳೆ
ಸೆದು ಲ್ವಿಬುಧಾ ॥ ಗ್ರಣಿಯೆನಿಪ ಕುಮಾರನೊಳಂ । ದಿಣೆಯಾದಂ ಸಚಿವ
ತನಯು ನಾಕ್ರಮದಿಂದಂ ॥ ೪೩೯

ವೃ॥ ಪುರೋನಾಸಾರ್ಯ ಗುರುತ್ವದಿಂದೆ ಸಹಪಾಂಸುಕ್ರೀಡನಾಭ್ಯಾಸ
ದಿಂ । ದೆ ಕಳಾಜ್ಞಾನವಿಶೇಷದಿಂ ದುಚಿತಸೇವಾಜಾತಚಾತುರ್ಯದಿಂ ॥ ದೆ ಕ
ರಂಚಿತ್ರಮನಸ್ಸಂಗಯ್ದು ದೀರ್ಘವಿಸ್ರಂಭಕ್ಕೆ ಮಾವಾಸಮಾ । ಗಿ ಕುಮಾರಂಗೆ
ಮಹಾಪ್ರಧಾನತನಯಂ ಮಿತ್ರತ್ವಮಂ ತಾಳ್ದಿದಂ ॥ ೪೪೦

ಕಂ॥ ದಿನಪತಿಯುಂ ದಿನಮುಂ ಬಿಡ । ದನುಬಂಧದಿ ನಗಲದಂತೆವೊ
ಲ್ವಿಂದ್ರಾಪೀ ॥ ಡನು ಮಂತ್ರಿವೈಶಂಪಾ । ಯನನುಂ ಪದಪಿಂದ ಮೊರ್ವ್ವ
ರೋರ್ವ್ವರ ನಗಲರ್ ॥ ೪೪೧

ವೃ॥ ಕಮಲವನಕ್ಕೆ ನೋರ್ಪಯು ವಿರುಳ್ಗಮೃತಾಂಶುಸಮುದ್ಗಮಂಸು
ರ । ದ್ರುಮಕೆ ನವಪ್ರಸೂನನಿಭವಂ ನವಿಲಿಂಗೆ ಕಳಾಪವರ್ಣವಂ ॥
ತಮರ್ದಮುಗಿಲ್ಗೆ ಶಕ್ರಧನುವಪ್ರೋಲ್ಭವನತ್ರಯಮಂಗಳಾಭಿರಾ । ಮಮಿ
ದೆನೆ ರಾಜಸೂನುಗೆ ನವತ್ತ್ವನಮುಂ ನವಯೌವನೋದಯಂ ॥ ೪೪೨

ಕಂ॥ ಅವಸರಮಿದೆನೆಗೆನುತ್ತ ಭಿ । ನವಸೇವಕನಂತೆ ಮೆಲ್ಲಮೆಲ್ಲನೆ
ಮದನಂ । ನವಯೌವನ ವಿಸ್ರುತಪು । ರ್ಣವಿಳಾಸಮನಾಂದು ಪೊರ್ದ್ದಲು
ದ್ಯತನಾದಂ ॥ ೪೪೩

ವೃ॥ ಬಿರಿಯೊಡನೊಂದಿ ಚಿತ್ತರಿಸಿದತ್ತು ದು ರಸ್ಥಳಮುನ್ನಭೂಮಿಪ್ರೋ ।
ತ್ಕರದೊಡ ನಾದವೊಂದಿ ತನುಮಾರ್ದು ಮಧ್ಯಮುದಾರತಾಸಿರಂ । ತರತೆ

---

೪೪೧. ಬಿಡದ—ಎಡೆಬಿಡದ; ಅಂತು—ಚಂದ್ರಾಪೀಡನಾಗೆ; ಪದಪಿಂ—ಪ್ರೀ
ತಿಯಿಂದ.

೪೪೩. ಭಿನವ—ನೂತನನಂತೆ; ಮದನಂ—ಉದ್ಯತನಾದಂ ಎಂದನ್ವಯವು.

*[ಬಳಿಗಳಂವಂತಾಳಂಶವು]

ಯೊಳೊಂದಿ ನೀಳ್ದುದು ಭುಜದ್ವಿತಯಂ ಭುವನಾವಭಾಸಿ ಸ | ಚ್ಚರಿತ
ದೊಳೊಂದಿ ಚೆಲ್ವನೊಳಕೊಂಡುವು ಕಣ್ಮಲರ್ಗಳ್ಕುಮಾರನಾ ॥ ೪೪೪

ಕಂ॥ ತೊಳತೊಳತೊಳಗುವ ಷೋಡಶ | ಕಳೆಯಿಂ ಕಣ್ಗೊಳಿಪ
ಚಂದ್ರನಂದದಿ ನತ್ಯು ॥ ಜ್ವಳತನು ಷೋಡಶವರ್ಷಂ | ಗಳಂದೆ ಕಣ್ಗೆಸೆದ
ನಂದುಚಂದ್ರಾಪೀಡಂ ॥ ೪೪೫

ವ॥ ಅಂತುಪಾರೂಢಯೌವನೋದಯನುಂ ಪರಿಸಮಾಪ್ತ ಸಕಲಕ
ಲಾವಿಜ್ಞಾನನುಮಾದನಿಜನಂದನನಪ್ಪ ಚಂದ್ರಾಪೀಡನಂ ತಾರಾಪೀಡನರೇಂ
ದ್ರಂ ಬರಿಸಲೆಂದು ಬಲಾಧಿಕೃತನಪ್ಪ ಬಲಾಹಕನೆಂಬನಂ ಬೆಸಸೆ ಬಹುತು
ರಂಗಪದಾತಿಬಲಪರಿವೃತನಾಗಿ ಬಲಾಹಕಂ ಕುಮಾರನಿರ್ದ ವಿದ್ಯಾನಿಕೇತನ
ಕ್ಕೆ ಬಂದು ದೌವಾರಿಕನಿವೇದಿತಂ ಪೊಕ್ಕು ವಿಬುಧಚಿಂತಾಮಣಿಯುಂ ಕಂಡ
ವನಿತಳನಿಹಿತ ಚೂಡಾಮಣಿಯಾಗಿ ಪೊಡವಟ್ಟು ಸಮುಚಿತಾಸನದೊಳ್ಕು
ಳ್ಳಿರ್ದು ವಿನಯಪುರಸ್ಸರ ಮಿಂತೆಂದಂ ॥ ೪೪೬

ವೃ॥ ಎನ್ನ ಮನೋರಥಕ್ಕೆ ಪರಿಪೂರ್ತಿಯನೆಯ್ದಿಸೆ ಶಸ್ತ್ರಶಾಸ್ತ್ರ
ಸಂ | ಪನ್ನತೆಯಿಂ ವಿರಾಜಿಸೆ ನಿರೀಕ್ಷಿಸಲು *[ತ್ಸುಕೆಯರ್ಕಳಾದಪ] ॥ ತ
ನ್ನಯ ತಾಯ್ವಿರೆಂದು ಜನಕಂ ಬಳಿಯಟ್ಟಿದ ನಳ್ಕಱಿಂ ಪುರ | ಕ್ಕಿನ್ನಡೆ
ತಂದು ದೇವ ಪಡೆ ಪೌರಜನಂಗಳ ಕಣ್ಗೆ ಪರ್ವಮಂ ॥ ೪೪೭

---

೪೪೪. ಅದು—ಆ ಕುಮಾರ ಸಂಬಂಧಿಯಾದ ; ಉರಸ್ಥಳಂ—ಎದೆಯು ; ಸಿರಿಯೊಡನೊಂದಿ—ಸಂಪತ್ತಿನೊಡನೆಕೂಡಿ ; ಬಿತ್ತರಿಸಿದತ್ತು—ವಿಸ್ತಾರವಾಯಿತು, ಅಂದರೆ ಈ ಕುಮಾರವಕ್ಷಸ್ಥಳವೂ ವಿಸ್ತಾರವಾಯಿತು ಐಶ್ವರ್ಯವೂ ಹೆಚ್ಚಿತು ಎಂದಭಿಪ್ರಾಯವು. ಇದರಂತೆ ಉಳಿದವುಗಳನ್ನೂ ಅನ್ವಯಿಸಿಕೊಳ್ಳತಕ್ಕದ್ದು ; ಅನ್ಯಭೂಮಿಪೋತ್ಕರ—ಶತ್ರುರಾಜಸಮೂಹ ; ಚೆಲ್ವನೊಳಕೊಂಡುವು—ಸಮೀಚೀನತ್ವವನ್ನು ಪಡೆದವು.

೪೪೫. ತೊಳತೊಳತೊಳಗುವ—ಅತ್ಯಂತವಾಗಿ ಪ್ರಕಾಶಿಸುವ ; ಇಲ್ಲಿ ಆಧಿಕ್ಯಾರ್ಥದಲ್ಲಿ ತ್ರಿರುಕ್ತಿಯು ; ಶ.ಮ. ಸೂ. ೧೯೫.

೪೪೭. ತನ್ನಯ—ಆತನ ; ತಾಯ್ವಿರ್—ಮಾತೃಗಳು ; ನಿರೀಕ್ಷಿಸಲ್—ಆತನನ್ನು ನೋಡುವದಕ್ಕೆ ; ಉತ್ಸುಕೆಯರ್ಕಳಾದಪರ್—ಅಪೇಕ್ಷೆಯುಳ್ಳವರಾಗಿದ್ದಾರೆ ; ಎಂದು—ಎಂದು ಹೇಳಿ.

*[ಉತ್ಸುಕನಾಗುತಿರ್ದಪ]

ಕಂ॥ ಅದೆ ಪೊಱಗಿಂದ್ರಾಯುಧಮೆಂ । ಬುದೊಂದು ದಿವ್ಯಾಶ್ವಮಟ್ಟಿ
ದಂ ನಿನಗೇ ಐ । ಳ್ಕದ ನನಿಲಗರುಡಜವಮೆನಿ । ಸಿದುಪಂ ತ್ರಿಜಗಕ್ಕೆ ರತ್ನ
ಮುಂ ನಿಜಜನಕಂ ॥ ೪೪೮

ಜಳನಿಧಿಜಳದಿಂ ಪೊಱಮ । ಟ್ಟೞಗವತರಿಸಿದು ದಯೋನಿಸಂಭವ
ಮೀವಂ । ಗಳಪಯು ವೆಂದೊಲ್ದೈಸಿದ । ನಿಳಾಧಿನಾಥಂಗೆ ಪಾರಸೀಕಾಧೀಶಂ ॥

ವ॥ ಅವಲ್ಲಿಯುಂ ಮೂರ್ಧಾಭಿಷಿಕ್ತಪಾರ್ಥಿವಕುಲಪ್ರಸೂತರುಂ ವಿನಯೋಪಪನ್ನರುಂ ಕೋವಿದರುಂ ಕುಲಕ್ರಮಾಗತರುಮಪ್ಪ ರಾಜಪುತ್ರಸಹಸ್ರಮುಮಂ ನಿನಗೆ ಪರಿವಾರಾರ್ಥ ಮಟ್ಟಿದಮವರೆಲ್ಲರುಂ ಪೊಱಗೆ ತುರಗಾರೂಢರ್ ಪ್ರಣಾಮಲಾಲಸರಾಗಿ ಬಾಗಿಲೊಳ್ ಪಾರ್ದಿರ್ಪ್ಪರೆಂದು ಬಲಾಧಿಕಂ ಬಿನ್ನವಿಸುವುದುಂ ನೃಪರೂಪಚಂದ್ರಂ ತಂದೆಯಾಜ್ಞೆಯಂ ತಲೆಯೊಳ್ತಾಳ್ದಿ ಪೊಱಮಡಲೆಂದಭಿನವ ಜಳಧರಧ್ವಾನಗಭೀರವಚನದಿ ನಿಂದ್ರಾಯುಧಮಂ ಪುಗಿಸೆಂದು ಬೆಸಸಿದಾಗಳ್ ॥ ೪೫೦

ವೃ॥ ಎರಡುಂ ಪಕ್ಕಂಗಳೊಳ್ಕಾಂಚನ ಕಟಕ *[ಖಲೀ] ನಾಗ್ರಸಂ
ಲಗ್ನರೀರ್ವರ್ । ಭರದಿಂ ಕೀಳ್ವಿನೆಂತೆಗೆದು ಬರೆ ಮಹೋದಗ್ರದೇಹ
ಪ್ರಮಾಣಂ ॥ ಬರೆಪೀರ್ವ್ವರ್ಂತೆತ್ತ ಮಾಕಾಶಮ ನನಿಲಜವೋದ್ರೇಕದಿಂ
†[ಪಾಱುನೀಡುಂ । ಖುರಘಾತೋದ್ಧತಧಾತ್ರೀರಜಮತಿರುಚಿರಂ] ಬಂದು
ದಿಂದ್ರಾಯುಧಾಶ್ವಂ ॥ ೪೫೧

ಕಂ॥ ಪಿರಿದೆಸೆಸಿ ಧರದೆ ನಡೆವುದಲ್ । ಘುರುಘುರಿಸಲ್ ಘೋರ ಘೋಣ
ಪಿವನಂ ಕಿ‡[ಡಿರ । ಬ್ಬರದಿಂ] ತೀವಿದುದಾಶಾಂ । ತರವಮಂ ಜವದಿಂದೆ ಗರುಡ
ನಂ ತರ್ಜಿಸುವ್ವೋಲ್ ॥ ೪೫೨

---

೪೫೦. ಪಾರ್ದಿರ್ಪ್ಪರ್—ಕಾದಿರುವರು ;

೪೫೧. ಖಲೀನ—ಕಡಿವಾಣ; ಕೀಳ್ವಿನ್—ಕಡಿವಾಣದಹಗ್ಗ ; ತೆಗೆದು—ಎಳೆದು ; ನೀಡುಂ—ಅತ್ಯಂತವಾಗಿ ; ಪಾಱು—ಮೇಲಕ್ಕೆ ನೆಗೆದು.

೪೫೨. ಕಿಡಿರಬ್ಬರದಿಂ—ಕೋಪಾವೇಶದಿಂದ ; ತರ್ಜಿಸುವ್ವೋಲ್—ಗದರಿಸುವಹಾಗೆ.

*[ಮುಖೀ] †[ನೂಱು ನಾಗಬ್ರ್ಗಿಸಮಂ ಮುಟ್ಟುತ್ತೆ ಮೊಂಬರೆ ನಿನಮಿದಿರಂ]

‡[ಕಿಡಿಬ್ಬರದಿಂ]

ಸುರಚಾಪದಂತೆ ಸುಮನೋ | ಹರವರ್ಣಂ ತನ್ನೊಳೊಪ್ಪುತಿರೆ ರನ್ನದಪ || ಕ್ಕರೆಯಿಂದಂ ಕಣ್ಗೊಳಿಸುವ | ಕರಿಕಳಭದತೆಱದಿ ನೆಸೆದುದಾ ದಿವ್ಯಾಶ್ವಂ || ೪೫೩

ಜಲಧಿಯೊಳಿರ್ದ್ದ ಮರ್ದ್ದನದ ಮು | ಕ್ತಳನುಗುಳುತ್ತಿರ್ಪಗೆವಂದುದೆನಿಸಿ ಖಲೀನ || ಸ್ಥಲನಭವ ಬಹುಳಲಾಲಾ | ಜಲಮುಗುತರೆ ತುರಗರತ್ನಮೆಸೆದತ್ತಾಗಳ್ || ೪೫೪

ತೊಡರ್ದ್ದುವು ಸಮುದ್ರದಿಂ ಪೊಱ | ಮಡುವವಸರದಲ್ಲಿ ಮೌಕ್ತಿಕಪ್ರಕರಮೆನ || ಲ್ಕಡುಪಿಂದೆ ರೋಮರೋಮದೆ | ಡೆಡೆಸೆದುವು ಪಡಿಗೆ ಬೆಮರಬಿಂದುಗಳಾಗಳ್ || ೪೫೫

ವೃ|| ಮೊಗದಿಂದಂ ನೇರ್ಪ್ಪಡರ್ದ್ದ ನಾಳ್ಕುತುರದಿಂ ನಗಲಿತಾದಂತೆ ಪಾರ್ಶ್ವಂಗಳಿಂ ನೂಲ್ದೆಗೆದತ್ತೆಂಬಂತೆ *[ಪಾಶ್ಚಾತ್ಯದೆ] ಸವಣಿಸಿತೆಂಬಂತಿರುದ್ಗ್ರೀವದಿಂದ || ಪರ್ದ್ದಗೆವೆತ್ತಂತಂಗಕಾಂತಿಪ್ರಕರದೆ ಪಸರಿಪ್ಪಂತೆ ಮುಂಗಾಲ್ಗಳಿಂದಂ | ಮುಗಿಲಂ ಮುಟ್ಟಿಪ್ಪದೆಂಬಂತತಿ ಜವಮಿದಿರೊಳ್ಪಂದು ದಿವ್ಯಾಶ್ವಂ ||

†[ಪಿರಿದೆಂದಾಯಿಂದ್ರನುಚ್ಚೈಶ್ಶ್ರವಮನೆ] ನಡೆನೋಡುತ್ತಮಿರ್ಕ್ಕೆಂದು ರತ್ನಾ | ಕರಮುಲ್ಲೋಲಂಗಳಿಂದಂ ಮಱೆಯಿಸಿ ಜನಪಂಗಿಂದ್ರಚಾಪ

---

೪೫೩. ರನ್ನದಪಕ್ಕರೆ—ರತ್ನಮಯವಾದ ಜೀನು.

೪೫೫. ತೊಡರ್ದ್ದುವು—ಅಂಟಿಕೊಂಡುವು ;

೪೫೬. ಮೊಗದಿಂದಂ—ಮುಖದಿಂದ ; ನೇರ್ಪ್ಪಡೆದಂತೆ—ಅಂದವನ್ನು ಪಡೆದಿರುವಂತೆ ; ನೂಲ್ದೆಗೆದತ್ತೆಂಬಂತ—ಸೂತ್ರಹಿಡಿದು ಸಮಮಾಡಿದಹಾಗೆ ; ಪಾಶ್ಚಾತ್ಯದೆ—ಹಿಂಭಾಗದಲ್ಲಿ ; ಸವಣಿಸಿತೆಂಬಂತೆ—ದ್ವಿಗುಣವಾದಂತೆ ; ಉದ್ಗ್ರೀವದಿಂ—ಎತ್ತರವಾದ ಕುತ್ತಿಗೆಯಿಂದ ; ಪರ್ದ್ದಗೆವೆತ್ತಂತೆ—ವಿಸ್ತೀರ್ಣವನ್ನು ಪಡೆದಹಾಗೆ ; ಪಸರಿಪ್ಪಂತೆ—ವ್ಯಾಪಿಸುವಹಾಗೆ.

೪೫೭. ಆಯಿಂದ್ರಂ ಉಚ್ಚೈಶ್ರವಮನೇ ಪಿರಿದೆಂದು ನಡೆನೋಡುತ್ತಮಿರ್ಕ್ಕೆ—ಆ ಇಂದ್ರನು ಉಚ್ಚೈಶ್ರವವೆಂಬ ಕುದುರೆಯನ್ನೇ ದೊಡ್ಡದೆಂದು ತಿಳಿದುಕೊಂಡು ನೋಡುತ್ತಿರಲಿ ; ಉಲ್ಲೋಲಂಗಳಿಂದ—ದೊಡ್ಡ ಅಲೆಗಳಿಂದ ; ಮಱೆಯಿಸಿ—ಮರೆಮಾಡಿ ; ಜನಪಂಗೆ—ತಾರಾಪೀಡನಿಗೆ.

*[ಪಾರ್ಶ್ವತ್ವದೆ] †[ಪಿರಿನಂ ದೇವೇಂದ್ರನುಚ್ಚೈಶ್ರವಮನೆ]

ಪ್ರಭಾಭಾ ॥ ಸುರವಂ ತ್ರೈಲೋಕ್ಯಸಾಮ್ರಾಜ್ಯದ ಫಳಮೆನಿಸಿಪೀವಾಜಿಯಂ ಕೊಟ್ಟೆಸೆಂದಾ । ನರದೀವಂ ನೋಡಿದಂ ವಿಸ್ಮಯಮೊದವುವಿನಂ ಚಿತ್ತದೊಳ್ ರಾಜಪುತ್ರಂ ೪೫೭

ಕಂ ಪರಿಹರಿಸಿದನಿಲ್ಲಿನ್ನುಂ । ಗರುಡನ ನೇಱುವುದ ನಜಿತನೆಂದಿಂದೆ
ನಗ ॥ ಚ್ಚರಿಯನಾಗುತಿ *[ಪ್ಪುರ್ದಿಲ್ಲಿಂ । ಹರಿಯುಂ ತಾನರಿದನಾ] ಗದಿಕ್ಕುರ್ವೆ
ಪಿರಿದುಂ ॥ ೪೫೮

ಭುವನತ್ರಯದುರ್ಲಭಮೆನಿ । ಸುವ ವಸ್ತುಗಳಿನ್ನು ಮೊಳವೆ ಭು
ವನದೊಳಿಂತ । ಕ್ಕುಮೆ ದಿವಿಜರಾಜವಿಭವ । ಕ್ಕುವಿದಗ್ಗಳ ಮೆನಿಸಿವತ್ತು
ತಂದೆಯ ವಿಭವಂ । ೪೫೯

ಇದಱ ಮಹಾಪ್ರಾಣತೆಗಿ । ನ್ನಿದಱೊದವಿದ ತೇಜದೇಳ್ಗೆ ಗಚ್ಚರಿಯಾಗಿ ॥
ರ್ದುದು ದೇವತಾತ್ಮಸೋ ಪೇ । ೞದು ದಿಟಮೋಱಲ್ಕೆ ಶಂಕೆಪುಟ್ಟಿದುದೀಗಳ್ ॥

ವ ॥ ಮುನ್ನಂ ಸ್ಥೂಳಶಿರನೆಂಬ ತಾಪಸನಿತ್ತ ಶಾಪದಿ ನಖಿಳಲೋಕದೊಳ್ ರೂಪಿಂದಚ್ಚರಿಯಪಾದ ಚ್ಚರಿಯಪ್ಪ ರಂಭೆ ಸುರಲೋಕಮಂ ಬಿಟ್ಟು ಸ್ವಸ್ತಿಕಾವತಿಯೆಂಬ ರಾಜಧಾನಿಯೊಳಿರ್ಪ ಶತಧನ್ವನೆಂಬರಸನ ಮನೆಯೊಳ್ ಗೋಳಿಗೆಯಾಗಿ ಪಲವುಕಾಲಮಿರ್ದ್ದಳದುಮಲ್ಲದೆಯುಂ ಪಲಬರ್ಮಹಾತ್ಮರ್ಮಹಾಮುನಿಜನಶಾಪದಿಂ †[ಪರಿಹೃತಪ್ರಭಾವರಾಗಿ] ಪಲವುಮಾಕೃತಿಗಳಂ ತಳೆದು ಮರ್ತ್ಯಲೋಕದೊಳ್ ಚರಿಯಿಸುತ್ತಮಿರ್ಪ್ಪರೆಂಬುದುಮಂ ಕೇಳ್ದುದಿಲ್ಲಕ್ಕುಮೆ ಎನುತ್ತಮಾದಿಪ್ಪ್ರುಶ್ನಮನಚ್ಚರಿಪಟ್ಟು ನೋಡುತ್ತಮಿರ್ದ್ದ ॥ ೪೬೧

೪೫೮. ಅಜಿತಂ—ವಿಷ್ಣುವು; ಅಚ್ಚರಿಯಾಗುತಿರ್ಪ್ಪುದಿಲ್ಲ—ಆಶ್ಚರ್ಯಉಂಟಾಗುವದಿಲ್ಲ; [illegible] ಅರಿಗದಿಕ್ಕುರ್ವೆ—ಅವಿಷ್ಣುವು ಈ ಕುಮಾರಿಯನ್ನು ಬಹುಶಃ ಕಾಣದೆ ಇರಬಹುದೆ.

೪೫೯. ಭುವನದೊಳಿಂತಕ್ಕುಮೆ—ಲೋಕದಲ್ಲಿ ಹೀಗುಂಟೆ.

೪೬೧. ಅಚ್ಚರಿಯಪಾದ—ಆಶ್ಚರ್ಯಕರವಾದ; ಅಚ್ಚರಿಯಪ್ಪ—ಅಪ್ಸರಸ್ತ್ರೀಯಾದ; ಗೋಳಿಗೆ—ಹೆಣ್ಣು ಕುದುರೆ.

*[ಬಿರ್ದ್ದುದಲ್ಲಿಂ ಹರಿಯುಂ ತಾನರಿಯದಾ] †[ಪರಿಭ್ರಷ್ಟರೂಪರಾಗಿ]

ವೃ॥ ಇದು ಸಾಮಾನ್ಯದ ವಾಜಿಯಲ್ತು ಪಿರಿದುಂ ನೋಡಲ್ಕಸಿಂ ದ್ರೋಗ್ರತಾ | ಪದಿ ನೋರ್ವ್ವಂ ದಿವಿಜಂ ನಿಜಾಕೃತಿಯನಾದಂ ಬಿಟ್ಟು ದಿವ್ಯಾಶ್ವರೂ ॥ ಪದಿನೀಲೋಕದೊಳಿರ್ದ್ದನೆಂದು ಬಗೆಯುತ್ತಲ್ಲಿಂದ ಮೇಳ್ತಂದನಂ | ದುದಿತಾರ್ಕಪ್ರಭನೇಱಲೆಂದು ಹಯಮಂ ರಾಜಾಧಿರಾಜಾತ್ಮಜಂ ॥ ೪೬೨

ಕ್ಷಮೆಯುಂ ಮಾ*[ಹಶ್ವನೀನಾರ] ಜಿಯೆ ನವಱನ್ನಿಂತೀಮಹಾರೋಹಣಾತಿ | ಕ್ರಮಕೆಂದಾಮಂತ್ರಣಂಗೆ †[ಯ್ವ್ವದ ಮದುಬಗೆಗೊಂಡಂತಿರಾಕೇಕರಾಲೋ] ॥ ಕಮುಖಂ ನೋಡುತ್ತ ಮೇಱಲ್ಕೆರೆಮತೆಱದೆ ಹೇಷಾರವಂ ಪೊಣ್ಮೆ ಭೂಭಾ | ಗಮ ನತ್ಯುತ್ಸಾಹದಿಂ ದಕ್ಷಿಣಾಪುರದೆ ಬೆಱಂಟಿತ್ತು ದಿವ್ಯಾಶ್ವಮಾಗಳ್ ॥ ೪೬೩

ಕಂ॥ ಘನಪೇಷಿತದಿಂ ದತ್ತಾ | ಭ್ಯನುಜ್ಞನಾದಂತೆ ಲಘುತೆಯಿಂ ದೇಱಿದನಾ ॥ ಸನದೃಢತೆ ರೂಪ್ರವಡೆದ | ತ್ತೆನಲಿಂದ್ರಾಯುಧಮ ನಂದು ಚಂದ್ರಾಪೀಡಂ ॥ ೪೬೪

ವ॥ ಅಂತವನೇಱಿ ದಿವ್ಯವಾಜಿಯ ಮಹಾಜವಮಂ ಕಂಡು ಭುವನತ್ರಯಮುಂ ಪ್ರಾದೇಶಮಾತ್ರಮಾಗಿ ಬಗೆದು ಪೊಱಮಡುವನ್ನೆಗಮಲ್ಲಿ ॥ ೪೬೫

ಕಂ॥ ಮಿಸುಗುವ ರವಿಬಿಂಬಂಗ | ಳ್ಮಸೆವಲಗುಗಳಂ ಪಳಂಚಿ ಮಿಂಚುವ ಕಾಂತಿ ॥ ಪ್ರಸರದೆ ನೀಲೋತ್ಪಳಕಾಯಮು | ವಸವಾಜಮು ನಿಳಿಸಿ ಪೊಳೆದುವಂಬರತಳದೊಳ್ ॥ ೪೬೬

---

೪೬೩ ಆ ಮಂತ್ರಣಂಗೆಯ್ವ್ವದಂ--ಕರೆದು ಹೇಳುವವನ್ನು; ಬಗೆಗೊಂಡಂತೆ ಪೊಲ್—ಮನಸ್ಸಿನಲ್ಲಿ ಬಿಪ್ಪಿದಂತೆ; ಕೇಕರ—ಕೇಕರಸಂಜ್ಞೆಕವಾದ; ಆಲೋಕ—ದೃಷ್ಟಿಯಿಂದಕೂಡಿದ; ಮುಖಂ—ಮುಖವುಳ್ಳ; ಆದ ದಿವ್ಯಾಶ್ವಂ—ಆ ಇಂದ್ರಾಯುಧಾಶ್ವವು.

೪೬೬. ಪಳಂಚಿ—ತಗಲಿ, ಇಳಿಸಿ—ತಿರಸ್ಕರಿಸಿ.

*[ಡೂದನೀನಿನ್ನ] †[ಯ್ವ್ದದುಬಗೆಗೊಡೆಪ್ರೋವಲ್ಕೆ ಕರಾಳೋ]

ಪಿರಿದೆನಿಪ ಲಯಸಮುದ್ರದ । ತೆರೆಗಳ್ ನೊರೆವೆರೆದುನೆರೆದು ನೆಗೆದಪ್ರವೆಂಬಂ ॥ ತಿರೆ ಫೇನಪುಂಜಧವಳತ । ತುರಂಗ ಸಂದೋಹ ಸೈನ್ಯವೆಸೆದತ್ತಾಗಳ್ ॥ ೪೬೭

ವ॥ ಅಂತುಚಂಪೋದಯಕ್ಷುಭಿತ ಸಾಗರದಂತೆ ಬಾಗಿಲೊಳ್ ಘೂರ್ಣಿಸುತ್ತಿರ್ದ್ದ ರಾಜಲೋಕಮುಮಮುಹಮಿಕೆಯಿಂ ಪ್ರಣಾಮಲಾಲಸರಾಗೆ ಬಲಾಧಿಕಾರಿಯುಪ್ಪ ಬಲಾಪಕನವರವರ ಪೆಸಗೊಂಡು ಪೊತಮುಡಿಸೆ ॥ ೪೬೮

ಕಂ॥ ಎಱಗುವ ನರೇಂದ್ರನಿಕರದ । ಮಿಱುಗುವ ಮಣಿಮೌಳಿ *[ಮುಂಜಳ] ಪ್ರಭೆ ತನ್ನೊಳ್ ಱುಗೆ ನೃಪನಂದನಂ ಕೆ । ನ್ನೈದಿಲು ಮುಗಿಲೊಳ್ಪೊಳೆವ ಚಂದ್ರಮಂಗೆಣೆಯಾದಂ ॥ ೪೬೯

ವ॥ ತದನಂತರ ಮಾನರೇಂದ್ರಚಂದ್ರಮಂ ಯಥಾಕ್ರಮದಿಂ ತುರಂಗಾರೋಹಣಪ್ಪ ವೈಶಂಪಾಯನಂಬೆರಸು ಪುರಾಭಿಮುಖನಾಗಿ ಬಿಜಯಂಗೆಯ್ವಾಗಳ್ ॥ ೪೭೦

ಮ॥ ಇದು ರಾಜದ್ರಾಜ್ಯಲಕ್ಷ್ಮೀ ನಿವಸನವಿಲಸತ್ಪುಂಡರೀಕೋದಯಮುಂ ಮೇ । ಣಿದು ನಾನಾಕ್ಷೋಣಿಪಾಲೇಕ್ಷಣ ಕುಮುದ ವಿಕಾಸೇಂದುಬಿಂಬೋದಯಂ ಮೇ ॥ ಣಿದು ಭೂಭಾರಾರ್ಪಣಪ್ರೋದ್ಧತ ಫಣಿಪಫಣಾಮಂಡಲಾಭೋಗ ಮೆಂಬಂ । ದದೆ ರಾಜೇಂದ್ರಾತ್ಮಜಂಗೆತ್ತಿದುದು ಮಣಿಮಯದಾಧ್ರಶುಭ್ರಾತಪತ್ರಂ ॥ ೪೭೧

ಕಂ॥ ಅಲರ್ದಿರ್ದ್ದ ಪುಂಡರೀಕದ । ಕೆಲದೊಳ್ಪರ್ತಿಸುವ ಹಂಸಯುಗಮೆನೆ ಭೂಭೃ ॥ ತ್ತಿಲಕನ ಸಿತಾತಪತ್ರದ । ಕೆಲದೊಳ್ನರ್ತಿಸಿತು ಧವಳಚಾಮರಯುಗಳಂ ॥ ೪೭೨

---

೪೬೯. ಕೆನ್ನೈದಿಲು ಮುಗಿಲೊಳ್—ಕೆಂಪಾದ ದಂಪತಿಗಳಿಗಿಕಾಣಿಸುವ ಮೇಘದಲ್ಲಿ.

*[ಮಾಣಿಕ]

ಚಮರೀಜಕಾಂತೆಯರ್ಸಿತ । ಚಮರದ ವಿಕ್ಷೇಪದಿಂದ ಮೆಸೆದ ಭುಜಾಪ್ರೋ । ತ್ತಮ ವರತನುವಿಂಬಮತಿ । ಕ್ರಮಿಸುವ ಲಾವಣ್ಯರಸದೊಳೋಲಾಡುವವೊಲ್ ॥ ೪೭೩

ವ॥ ಅದಲ್ಲದೆಯುಂ ಪಲತೆರದ ಪಟಹಗಳೆಡೆಯೊಳ್ ಬಾಜಿಸುವ ಪದಿರಪಟಿಗಳುಂ ಮೊತ್ತುವ ಸನ್ನೆಗಾಳೆಗಳುಂ ಪೂರಿಸುವಶಂಖಂಗಳುಂ ಪೋದುವ ವಂದಿಮಾಗಧರ ಜಯಜಯಾದಿಮಧುರರವಂಗಳುಮೆಸೆಯೆ ರಾಜಧಾನಿಗಭಿಮುಖನಾಗ ಮಾನುಜೇಂದ್ರಚಂದ್ರ ನೇಳ್ತಪ್ಪಾಗಳ್ ॥ ೪೭೪

ಕಂ॥ ಭುವನಜನಮೆಲ್ಲ ಮೋಪ್ಪೆಗೆಯೆ । ಕವಿದು ಪೆನಲ್ತಮ್ಮ ತಮ್ಮ ಸಿರಿಯಿಳಮ್ಯಾಪಾ । ರವ *[ನುಳಿದ] ರಸನ ನೋಡುವ । ತವಕದೆ ಮಿಗೆನಗರಲೋಕ ಮೆಯ್ದಿತ್ತಾಗಳ್ ॥ ೪೭೫

ವೃ॥ ಸುಮತೀರತ್ನ ಕರೀಂದ್ರರತ್ನ ಹಯರತ್ನಾನೀಕರತ್ನಾದಿರ । ತ್ನದ ಮೇಳಾಪಕದಿಂದ ವೀಕ್ಷಣಸಮುತ್ಥಾನೇಕಸಂಮರ್ದನಂ ॥ ಮದಕೋಲಾಹಲದಿಂದಮಾನಗರಿ †[ನಾನಾ] ಕ್ಷ್ಮಾಧರಕ್ಷೋಭ ಮು । ಣ್ಮಿದ ರತ್ನಾಕರಲಕ್ಷ್ಮಿಯಂತೆವೊಲ್ ನೃಪವರಂ ಬಹುಮೊತ್ತಮಿರ್ದ ಬಂದಾಗಳೆಸೆದಿತ್ತೋ ॥ ೪೭೬

ಶರದಭ್ರಾಕಾರ ಸೌಧಪ್ರಕಟವಿಘಟಿತಾಪೂರ್ಣ ನಾನಾಗವಾಕ್ಷೋ । ತ್ಕರದಿಂದಂ ನೋಡುವಂತುನ್ನತ ವಿತತಪತಾಕಾಂಚಲಾನೀಕದಿಂದಂ ॥ ಕರೆವಂತಾಬದ್ಧ ಶೋಣೋಪಲ ರುಚಿವಿಲಸತ್ತೋರಣಾನೀಕ ನಿರ್ಯ । ತ್ಕರದಿಂದಾಲಿಂಗಿಪಂತಾ ನಗರಿನೃಪವರಂಗೆಷ್ಟಮಾಗಿರ್ದುದಾಗಳ್ ॥ ೪೭೭

---

೪೭೩. ಚಮರೀಜಕಾಂತೆಯರ್—ಚಾಮರವನ್ನು ಬೀಸುವ ಕಾಂತೆಯರು ;

೪೭೪. ಪದಿರಪಟಿಗಳ್—ಕೌಶಲ್ಯಪ್ರದರ್ಶಕ ಸೂಕ್ಷ್ಮವಾದ್ಯಗಳು ; ಬತ್ತುವ—ಊದಲ್ಪಡುವ ; ಸನ್ನೆಗಾಳೆಗಳ್—ಸನ್ನಾಹಬೋಧಕಕಹಳೆಗಳು.

೪೭೬. ಅನೀಕರತ್ನ—ಶ್ರೇಷ್ಠವಾದ ಸೈನ್ಯವೆ ; ಆದಿ—ಮೊದಲಾದ; ರತ್ನದ—ಉತ್ತಮವಸ್ತುಗಳ ; ಮೇಳಾಪಕದಿಂದಂ—ಸಂಯೋಗದಿಂದ.

೪೭೭. ನಿರ್ಯತ್ಕರದಿಂದೆ—ನೀಡಿದ ಕಯ್ಯಿಂದ ; ಎಷ್ಟಮಾಗಿ—ಮನೋಹರವಾಗಿ.

*[ನೊಲ್ದ] †[ಹೇಮ]

ವ॥ ಅಂತೆಸೆವ ನಗರೀರತ್ನ ರಚಿತೋತ್ತುಂಗಮಂಗಳತೋರಣಂಗಳಂ ನುಸುಳುತ್ತುಂ ಬರ್ಪ ರೂಪವಿದ್ಯಾಧರನಂ ನೋಡಲೆಂದು ನೆಲೆಮಾಡಂಗಳ ನೇರ್ವ ನೀಱೆಯರಲಕ್ತಕ ರಾಗರಂಜಿತಪದಪಲ್ಲವಂಗಳನವನಿತಳಮೆಲ್ಲಂ ಪಲ್ಲವಿಸಿದಂತೆಯುಂ ಆಸಿತಂಬಿನಿಯರ ವದನೇಂದುಬಿಂಬ ನಿಕುರುಂಬದಿ ನಂಬರತಳಂ ಚಂದ್ರಮಂಡಲಮಯ ಮಾದಂತೆಯುಂ ಆಲಾವಣ್ಯಾವತಿಯರಾತಪಕ್ಕೆತ್ತಿದ ಕೆಂದಳಂಗಳ ಸಂದಣಿಯಿಂ ದಿಕ್ಚಕ್ರಮೆಲ್ಲಂ ಕೆಂದಾವರೆಗೊಳನಲರ್ದಂತೆಯುಮಾರಮಣೀಯ ರಮಣಿಯರಾಭರಣಕಿರಣಕಳಾಪಂಗಳಂ ತರಣಿಕಿರಣಂಗಳೆಲ್ಲ ಮಿಂದ್ರಚಾಪಲತಾವಿತಾನದಂತಿರೆಯುಮಾಕಾಮಿನಿಯರ ಕಮನೀಯಲೋಚನಮರೀಚಿಗಳಿಂದಂ ದಿನಂ ವಿಕಸಿತನೀಲನೀರಜಾಕರದಂತಿರೆಯುಂ ಮತಿಕೌತುಕದಿಂದೀಕ್ಷಿಸುವಲ್ಲಿ ॥ ೪೭೮

ಕಂ॥ ನೆಲೆಮೊಲೆಯಿಂದಂ ಮೇಲುಮು । ತೊಲಗಲ್ ಹಾರಾಂಶುಮಂ ನಿಜಾಂಶುಕಮೆಂದಂ । ದಲಘುಕುಚಕೆ ಮೇಲ್ಗೊಳುತ್ತಾ । ಕುಳತೆಯಿನೆಯ್ತಂದು ನೋಡಿದಳ್ ನೃಪವರನಂ ॥ ೪೭೯

ವ॥ ಮತ್ತಮಪರಿಸಮಾಪ್ತಪ್ರಸಾಧನೆಯರಾಗಿ ಬಂದು ನೋಡುವಲ್ಲಿ ಮತ್ತಮೊರ್ವಳ್ ॥

ಕಂ॥ ಉಡೆಸಾರಲಲ್ಕಾಲ್ಪಿಡಿಲ । ಲ್ಕುಡಿಪರೆಯಲ್ ಹಾರಲತೆಯು ನಕ್ಷಾವಳಿಯುಂ ॥ ಪಿಡಿವಂತೆ ಪಿಡಿದು ತುರಿಪದೆ । ನಡೆತಂದಳ್ಕಾಮಯೋಗಿನೀವಿಭ್ರಮದಿಂ ॥ ೪೮೦

ಪಿಡಿದುಮೆರ್ದೆಪಸಕೆ ಪಾಜಿಸು । ತಿರೆ ಭಂಗಂಬೆತ್ತು ಹಾರಲತೆ ಘನಕುಚಕದೊ । ಳ್ಕರವಿಕ್ಷೇಪದೆ ನರ್ತಿಸೆ । ಸುರೇಂದ್ರನಂದನನ ನೊಲ್ದು ನೋಡಿದಳೊರ್ವಳ್ ॥ ಮತ್ತಲ್ಲಿ— ೪೮೧

---

೪೭೮. ನೆಲೆಮಾಡ—ಉಪ್ಪರಿಗೆಯ ಮನೆ ; ಕೆಂದಳಂಗಳ—ಕೆಂಪಾದ ಕೈಯ್ಯಗಳ.

೪೭೯. ಮೇಲ್ಗೊಳುತ್ತೆ—ಮೇಲಕ್ಕೆ ಎಳೆದುಕೊಳುತ್ತಾ.

೪೮೦. ಉಡೆ—ಸೀರೆಯು ; ಸಾರ್—ಜಾರು ; ಪಿಡಿದು—ಹಿಡಿದುಕೊಳ್ಳಲು ; ಅಕ್ಷಮಾಲೆಯಂ—ಜಪಮಾಲೆಯನ್ನು ; ತುರಿಪದೆ—ತವಕಿಸದೆ.

೪೮೧. ಎರ್ದೆಪಸಕೆ—ಸ್ತನಮಂಡಲದ ಕೆಳಭಾಗವು ; ಪಾಜಿಸುತ್ತಿರೆ—ಬಾರಿಸಲ್ಪಡುತ್ತಿರಲು ; ಭಂಗಂಬೆತ್ತು—ಬಳಿದು, ವ್ಯತ್ಯಸ್ತವಾಗಿ.

ಪೊಂದಾನಿಲರಗಳ್ | ಇನಿತ್ತು ಪಾರೆನ್ನಂ ತ್ರಿವಳಿಗತಿಕೆ | ಪಿಡಿಪೋಲುದ ಸೀಗಳ್ಲಲಿತಲತಿಕೆ | ಸೌಂದರ್ಯಸಿಯುಂ ಸೂವಗಿಸಕ್ಕು ನಿನ್ನ | ಜೋಲ್ದುಡೆಯುಂ ನೋಡೆಲೆ ಮರುಳೆ ಮುನ್ನ | ಆವ್ರೊಕ್ಕಪುದೆಲೆ ಮದನಾಂಧೆ ಮುಂದೆ | ಮೌಕ್ತಿಕನಿಕರಂ ನಿಜಹಾರದಿಂದೆ | ಕಾಂಚೀದಾಮಮು ನೋಸರಿಸು ಮುಗ್ಧೆ | ಬಿಡದೆ *[ನೀನೆನಿನೀಕ್ಷಿಸುವ ಪಿದಗ್ಧೆ] | ತೊಲಗುತ್ತಿದೆ ಘನಕುಚಯುಗಳದಿಂದೆ | ನೋಡಿದೆ †[ಸಿಚಯಮುಂ] ಸಿನ್ನಯಮುಂದೆ | ಯಿರ್ದ ಪಡಪಡಪಾರ್ದ್ರಪ್ರದೇಶಕೆ ಕೆಳದಿ | ತೋಳ್ಗಳಂ ಪಿಡಿ ಮೃದುಹಸ್ತತಳದಿ | ಪೆಱಪಿದಪಿತನ್ನಿ ಪೂವಳಿಗಳಲರ | ಆಸವಮದದಿಂ ಸಗಿಸಿದಪೆ ಪಲರ | ನವ ‡[ಯೌವನೆ ಮರುಳಾದೆ ಯಿಾತಂಗೆ] | ಗುಱಿಮಾಡಿದಪೆ ನಿನ್ನ ಮನುಮತಂಗೆ | ಮನದೊಳ್ ಸಂಕಲ್ಪಿತಸುರತಸುಖವ | ನನುಭವಿಸುವೆ ಯದಟ್ಟಾ ನೋಡು ಮುಖವು | ನುಸುರಿಕ್ಕುವುದುಮುನೇಂ ಮಱೆವೆ ಕಾಂತೆ ! ಬಂದಪನದೆ ಮುಂದೆ ಜಯಂತನನ್ತೆ | ಮುತ್ತಿನ ಬೆಳ್ಗೊಡೆಗಳ ಬಳಗದೊಳಗೆ | ಚಾಮರತತಿ ಕೆಲದೊಳೆ ಮಿಳಿರ್ವತೆಱಗೆ | ಸೊಗಯಿಸುತುಂ ಚಂದ್ರಾಪೀಡದೇವ | ನುದಿತಾರ್ಕಸಹಸ್ರಸಮಪ್ರಭಾವ | ನಾನೋಡಿದಪ ನಿತ್ತನೃಪಕುಮಾರ | ನಾಲಾವಣ್ಯರೂಪಜಿತಕುಮಾರ | ನಾವೈಶಂಪಾಯನನೊಡನೆ ನೋಡ | ನಸುನಗೆ ದಶನಪ್ರಭೆಯಿಂದೆ ಕೂಡ | ಱೆದೆಸೆ ಧವಳಿಸಿದಪ್ಪೊಲಾಯ್ತು ರಯ್ಯ | ನಾವೀಳಯಕೆ ನೀಡಿದಪಂ ಕಯ್ಯ | ನೀಕಮಳಾಂಕಿತ ಕರತಳಮನಾವ | [ಸುಂದರಿ ಪಿಡಿವಳೊ ಧನ್ಯೆಯಮಳೀವ |] ಸುಂಧರೆಯೊಳನುತ್ತಂ ರಾಗದಿಂದೆ | ಮೆಯ್ಯಱಿಯದೆ ಪಲರುತ್ಕಂಠೆಯಿಂದೆ | ಸವಿಳಾಸಸೋನ್ಮಾದಸಾಧ್ವಸೂಯ | ಸಸ್ಪೃಹ ಸೇರ್ಷ್ಯಾದಿರಸಾನುಮೇಯ | ರಮಣೀಯರಾಗಾಪಕಟಾ [ಪದಿಂದ | ಮೆಸೆದುದು ರಮಣೀತತಿ ಚೆಲ್ವಿನಿಂದ ॥ ಮತ್ತಲ್ಲಿ— ೬೮೨

ವೃ॥ ಕರೆವಪರೊಲ್ದು ಭೂಷಣಗಣಾವ್ಯಸಿಯಿಂ ನವರತ್ನರಂಜಿತಾ | ಭರಣಸಿಕಾಯರಶ್ಮಿತತಿಯಿಂ ಬಿರಸುತ್ತಿಪ [ರಾಕುಲೀಕ್ಷ] ರೋ | ತ್ಕರಪ್ರ

೬೮೨. ಪಾರ್—ಕಾಬರು ; ಸೂವಗಿಸು—ಸವಿಮಾಡು ; ಆ—ಅದೊ ; ಒಕ್ಕುವುದು—ಚೆಲ್ಲುತ್ತಿದೆ ; ಸಿಚಯಂ—ಮೇಲುಹೊದಿಕೆ ; ಮೆಯ್ಯಱಿಯದೆ—ಜ್ಞಾನವಿಲ್ಲದೆ.

*[ನಿಸಂಘಾವಿಸುವವಿದಗ್ಧೆ] †[ಸಾಚರಿ] ‡[ಯೌವನವನುರಿದೇತಂಗೆ]

ಹಿಡಿವೆ ಪೀನಸ್ತನಪರೆನಲ್ಕಗರಾಂಗನೆಯುನ್ಮಿರ್ಗಪೋತ್ಸವಂ। [ದೊರೆದುದೆ
ನುತ್ತ] ಲಂಪ್ರುಮಿಗೆ ನೋಡಿದ ರಾಮನುಜೇಂದ್ರಚಂದ್ರನಂ ॥ ೪೮-೩

ಕಂ॥ ಬಲವಿಂ ನೋಡುವ ಭಾವಿಪ । ಲಲನಾಸಂಕುಲದ ಹೃದಯ
ದೊಳ್ಳೆಸೆದುದು । ಜ್ವಲಮಣಿದರ್ಪಣತಲದೊ । ಳ್ಳೆಲಸುವವೊಲ್ ರೂಪು
ರೂಪವಿದ್ಯಾಧರನಾ ॥ ೪೮-೪

ವ॥ ಮತ್ತಮಾಲತಾಂಗಿಯರ್ ಸೂಸುವ ಕುಸುಮಮಿಶ್ರಲಾಜಾಂಜ
ಲಿಗಳ ನಿಬಿಗೊರ್ಗಳುತ್ತುಂ ಜನಗಿರಿಯಿಂ *[ಪ್ರವಸ್ಥಾಲಾವಳಿನ] ಕುಂಜರಘಟಾಭಿ
ರಂಜಿತಮುಂ ಉಷ್ಣಂಪಘನಸಂಘಾತಪತ್ರಸಂಛನ್ನಮುಂ ಮನೇಕದ್ವೀಪಾಂತರಾಗ
ತವೂತಸಮಾಕೀರ್ಣಮುಂ ಮಪ್ಪ ರಾಜಭವನದ್ವಾರದೊಳ್ ಇಂದ್ರಾಯುಧದಿಂದವ
ನಿತಳಕ್ಕವತರಿಸಿ ವೈಶಂಪಾಯನಕರಕಮಲಸಿಷ್ಟಿತಪ್ರಕೋಷ್ಠನುಂ ಬಲಾ
ಹಕೋಪದಿಶ್ಯಮಾನ ಮಾರ್ಗನುಮಾಗಿ ಪೊಕ್ಕನೇಕಸಹಸ್ರಜನಸಂಕುಳ
ಮಪ್ಪ ಸಪ್ತಕಕ್ಷ್ಯಾಂತರಂಗಳ ನತಿಕ್ರಮಿಸಿ ಬರ್ಪಲ್ಲಿ ॥ ೪೮-೫

ವೃ॥ ಸುರಚಾಪಾಕಾರನಾನಾಮಣಿಮಯವಿಲಸತ್ತೋರಣಂ ಚಿತ್ರ
ಚೀನಾಂ । ಬರರಮ್ಯಂ ಚಂದ್ರ †[ಶಾಲಾ] ಪ್ರಕರಪರಿವೃತಂ ‡[ವೇದಿಕಾ]
ನೀಕಶೋಭಾ । ಕರ ಮಹೋತ್ತುಂಗದಾತ್ತಕೂಟಂ ವಿಘಟಿತಮಣಿವಾತಾಯ
ನಾತ್ಯಂತಕಾಂತಂ । ಕರಮಸಾದಂ ನಾಡೆ ಚೆಲ್ವಂ ತಳೆದುದು ಪಲವುಂ ಬಳ್ಳ
ಮಾಡಂಗಳಿಂದಂ ॥ ೪೮-೬

ಕಂ॥ ಕರುಮಾಡದ ಬಾಗಿಲನೆ । ಯ್ದುರೆ ತಂದೆಯ ಕೆಲದೊಳಿಸೆವ
ರಾಜಕುಮಾರರೊ ॥ ತ್ಸರ ಮಹದೇವೇಂದ್ರತನಯರುಂ । ಗಿರಿಬಿದಿರೇಳ್ದತ್ತು ರಭ
ಸವೊದವಲ್ಕಾಗಳ್ ॥ ೪೮-೭

೪೮-೫. ಪ್ರಕೋಷ್ಠ—ಹಿಡಿದವನ್ನು ; ಕಕ್ಷ್ಯಾಂತರಂಗಳಂ—ತೊಟ್ಟಿಗಳನ್ನು.

೪೮-೬. ಬಳ್ಳಮಾಡಂಗಳಿಂದಂ—ಸಣ್ಣಸಣ್ಣ ಉಪ್ಪರಿಕೆಗಳಿಂದ

೪೮-೭. ಬಾಗಿಲ—ಬಾಗಿಲನ್ನು ಕುರಿತು ; ಏಯ್ದುರೆ—ಬರಲು ; ಇದಿರೇಳ್ದತ್ತು—ಪ್ರತ್ಯುತ್ಥಾನಮಾಡಿತು.

*[ಪ್ರಾಗ್ರ್ಯಾವಣಸಮೂಹ] †[ಕನಂತ] ‡[ಭೂಮಿಕಾ]

ಕಂ॥ ಅಪಮೆಪಮಿಕೆಯಿಂದ್ದೆಱಗುವ । ಮಹೀಶಶತಮಕುಟಕಾಂತಿ
ತನ್ನ ಪದಾಂಭೋ॥ ರುಹಲಕ್ಷ್ಮಿಯಿಂದೆ ಶೋಭಾ। ವಹಮಾಗೆ ನರೇಂದ್ರನಂ
ದನಂಪುಗುತಂದಂ ॥ ೪೮೮

ವೃ॥ ಲಲನಾಸಂವೀಜನೋದ್ಯಚ್ಚಾಮರರುಹಚಯೋದ್ಭಾಸಿತಂ ರಾಜ
ಹಂಸೋ । ಜ್ಜ್ವಲಚೀನಪ್ರಚ್ಛದಾಚ್ಛಾದಿತಶಯನತಲಾಲಂಕೃತಂ ಲೋಲ
ವೀಚೀ ॥ ಲುಳಿತಸ್ವರ್ವಾಹಿನೀ ವಾರಿಯೊಳಮರಗಜಂ ಕೇಳಿಯಿಂದಿರ್ಪ್ಪ
ವೊಲ್ಕಂ । ಗೊಳಿಸಿರ್ದ್ದಂ ಚಂಡಬಾಹಾಬಲ ನಿಭೃತಮಹೀಮಂಡಲಂ ಸಾ
ರ್ವಭೌಮಂ ॥ ೪೮೯

ವ॥ ಅಂತಿರ್ದ್ದ ನಿಜಜನಕನಂ ನಯರತ್ನಾಕರಂ ದೂರದೊಳ್ ಕಂ
ಡವನಿತಳನಿಹಿತಚೂಡಾಮಣಿಯಾಗಿ ಪೊಡಮಡುವುದುಂ ॥ ೪೯೦

ವೃ॥ ಪರಮಪ್ರೀತ್ಯಾದರದಿಂದಂ ಪರಸಿ ಮಗನನಾನಂದದಿಂ ಕಂಡ ಬಾ
ಯಿಂ। ದಿರದಾನಂದಾಶ್ರುಬಿಂದುಸ್ರುತತಿಸುರಿಯೆ ರೋಮೋದ್ಗಮಂ ಕೂಡೆ
ಪೊಣ್ಮಿ ॥ ತ್ತಿರೆ ಬಾಹುದ್ವಂದ್ವದಿಂದಂ ಬರ್ತೆಗೆದಪ್ಪಿ ತಳ್ಕೈಸೆಯುಂ ತಾತ
ಪಾದಾಂ । ಬುರುಹಕ್ಕಾನಮ್ರನಾದಂ ನಿಖಿಳನೃಪಸಭಾಂಭೋಜಿನೀರಾಜ
ಹಂಸಂ ॥ ೪೯೧

ವ॥ ಅಂತು ವಿನಯೋನ್ನತಿವೆತ್ತ ನಿಜನಂದನನ ನರ್ಧಾಸನದೊಳಾ
ನೃಪಂ ಕುಳ್ಳಿರಿಸೆಯುಂ ಮೆಂತುಮೊಲ್ಲದಾತ್ಮೀಯತಾಂಬೂಲಕರಂಕವಾಹಕ
ಪ್ರಸಾರಿತಾಂಬರಾಂಚಲಮುಮಂ ಚರಣಾಗ್ರದಿಂ ನೂಂಕಿ ಚಂದ್ರಾಪೀಡಂ
ನೆಲದೊಳ್ಕುಳ್ಳಿರೆ ॥ ೪೯೨

ಕಂ॥ ವಿನಯದಿ ನಾವ್ಯೈಕಂಪಾ। ಯನನೆಱಗೆ ನರೇಂದ್ರನಳ್ಕಱಿಂದ
ಪ್ಪಲ್ಕಾ ॥ ತನು ಮಾಗಳ್ತಾರಾಪೀ । ಡನರೇಂದ್ರಾತ್ಮಜನ ಪಕ್ಕದೊ
ಳ್ಕುಳ್ಳಿರ್ದ್ದಂ ॥ ೪೯೩

ವೃ॥ ಅಡಿಗಡಿಗಾತ್ಮನಂದನಮುಖೇಂದುವ ನುತ್ಸವದಿಂದೆ ನೋಡುತಂ।
ನುಡಿಯುತ ಮಾನೃಪಂ ಕರಸರೋರುಹದಿಂ ಚುಬುಕಾಗ್ರಭಾಗಮಂ ॥
ಪಿಡಿದು ನಿಜಾಂಬಿಕಾಪದಪಯೋಜಮ ನೀಕ್ಷಿಸು ಪೋಗು ಸಂತಸಂ। ಬಡಿ
ಸು ವಿಲೋಕನೋತ್ಸುಕೆಯರಂ ವಿನಯಾರ್ಣವ ನಿನ್ನ ತಾಯ್ವಿರಂ ॥ ೪೯೪

ವ॥ ಎಂದು ನಿಜಜನಕಂ ಬೆಸಸಲಂತೆಗೆಯ್ವೆನೆಂದು ವೈಶಂಪಾಯನ ದ್ವಿತೀಯನುಂ ಅಂತಃಪುರಪ್ರವೇಶಯೋಗ್ಯ ಪರಿಮಿತಪರಿಜನೋಪದಿಶ್ಯ ಮಾನ ಮಾರ್ಗನುಮಾಗಿ ಶುದ್ಧಾಂತಕಾಂತಾಪ್ರಧಾನೆಯುಪ್ಪ ನಿಜಾಂಬಿಕೆಯ ಮನೆಯಂ ಪ್ರಗುವಲ್ಲಿ ವಸನಾಭರಣಕುಸುಮಪಟವಾಸತಾಂಬೂಲತಾಳವೃಂ ತಾಂಗರಾಗಭೃಂಗಾರುಧಾರಿಣಿಯರಪ್ಪ ವಾರವಿಳಾಸಿನಿಯರೊಳಂ ಉಭಯ ಪಾರ್ಶ್ವೋದ್ಧೂತಧವಳಚಾಮರೆಯರಪ್ಪ ಚಮರೀಜಕಾಂತೆಯರೊಳಂ ಪುರಾಣಕಥಾಕಥನತತ್ಪರಪರಿವ್ರಾಜಿಕಾಸಮೂಹದೊಳ್ ಮುಪಾಸ್ಯಮಾನೆ ಯಾಗಿರ್ದ್ದಳಂತುಮಲ್ಲದೆಯುಂ ॥ ೪೯೫

ಕಂ॥ ಎರಡುಮುಚಲಂಗಳೆಡೆಯೊಳ್ । ಪರಿವಮರನದೀಪ್ರವಾಹದಿಂ ಡೆಸೆವ ಮಸುಂ ॥ ಧರೆಯುಂದದಿ ನಲಘುಪಯೋ । ಧರವಿಲಸಿತಹಾರಲತಿಕೆ ಸತಿ ಸೊಗಯಿಸಿದಳ್ ॥ ೪೯೬

ಪ್ರೋಳೆವ ರವಿಬಿಂಬದೊಳ್ಬಂ । *[ದೊಳಪ್ರೋಕ್ಕ] ಮೃತಾಂಶು ಬಿಂಬ ಮೆನೆ ನಿಜಶಯ್ಯಾ ॥ ತಳನಿಹಿತ ರತ್ನದರ್ಪಣ । ತಳದೊಳ್ಮಾರ್ಪ್ಪೊಳೆದು ದಾನನಂ ಮಾನಿನಿಯಾ ॥ ೪೯೭

ವ॥ ಅಂತಿರ್ದ್ದಳಂ ಗೆಂಟೆನೊಳ್ಕಂಡು ವಿನಯರತ್ನಾಕರಂ ಸಾಷ್ಟಾಂ ಗಪ್ರಣತನಾಗೆ ॥ ೪೯೮

ಕಂ॥ ಅರಸಿ ನಲವರಕೆಯಿಂದಂ । ಪರಸುತ್ತಿಂದೆನ್ನ ತಂದೆ ಬಂದನೆ ನುತ್ತಂ ॥ ತೊರೆದೆಸಸುಂ ಮೊಲೆವಾಲುಗು । ತರೆ ತನಯನನಳ್ಕಱಿಂ ದಪ್ಪಿದಳಾಗಳ್ ॥ ೪೯೯

---

೪೯೫. ಉಪದಿಶ್ಯಮಾನ—ತೋರಿಸಲ್ಪಡುವ ; ಭೃಂಗಾರು—ಚಿನ್ನದಭರಣಿ ; ಪ್ರರಿವ್ರಾಜಿಕಾ—ಯೋಗಿನಿ.

೪೯೮. ಗೆಂಟಿನೊಳ್—ದೂರದಲ್ಲಿ.

೪೯೯. ನಲವರಕೆಯಿಂದಂ—ಪ್ರೀತಿಯಿಂದ ; ತೊರೆದು—ಹಾಲುತುಂಬಿ ; ಉಗು ತರೆ—ಸ್ರವಿಸುತ್ತಿರಲು.

*[ದೆಳಸಿತ್ತೆ]

ವ॥ ಅನಂತರಂ ವೈಶಂಪಾಯನನುಮನಲ್ಲಿಯಿಂ ತಳ್ಕೈಸಿ ವಿಳಾಸವತಿಮಹಾದೇವಿ ಕುಳ್ಳಿರ್ದರ್ ವಿನಯದಿಂ ನೆಲದೊಳ್ಕುಳ್ಳಿರ್ದ ವೈಶಂಪಾಯನನುಮಂ ಮಗುಳ್ಮಗುಳೆ ತೆಗೆದುತಳ್ಕೈಸುತಮಿರ್ದರ್॥ ೨೦೦

ವೃ॥ ವಿನಯದೆ ನಿನ್ನ ತಂದೆಯ ಪ್ರಸಾದದಿನಿಂತು ಸಮಸ್ತಸತ್ಕಳಾ। ವನಿತೆಯರೊಳ್ಮಹೋತ್ಸವದೆ ಕೂಡಿದಿರಿಂತಿರೆ ಬೇಗದಿಂ ವಧೂ। ಜನದೊಡಗೂಡಿ ಮೆಂದುಪಿರಿದಳ್ಕಱಿನೊಳ್ಪರಸುತ್ತೆ ಮಾತ್ರಸಂ। ದನಶುಕನಾಸನಂದನನನಾಸತಿ ಕಣ್ಮಲರಾರೆ ನೋಡಿದಳ್॥ ೨೦೧

ವ॥ ತದನಂತರಂ ಸಮಸ್ತಜನನಿಯರುಮಂ ಯಥಾಕ್ರಮದಿನಭಿವಂದಿಸಿ ರಾಜಮಂದಿರಮಂ ಪೊಱಮಟ್ಟು ಸಕಲರಾಜಲೋಕಂಬೆರಸು ಮಹಾಮಾತ್ಯಶುಕನಾಸನರಮನೆಗೆ ಬಂದು॥ ೨೦೨

ಕಂ॥ ತಂದೆಗೆ ತಾಯ್ಗೆ ಮಹೋತ್ಸವ। ದಿಂದಂ ಪೊಡಮಡುವ ತೆಱದೆ ಸಚಿವಂಗಂ ತ॥ ತ್ಸುಂದರಿಮನೋರಮೆಗಮಾ। ನಂದದೆ ಪೊಡಮಟ್ಟನಂದು ಚಂದ್ರಾಪೀಡಂ॥ ೨೦೩

ವ॥ ಅಂತುಪೊಡವಟ್ಟು ಪರಮಾಶೀರ್ವಾದಂಗಳನಾಂತು ತದನಂತರದೊಳ್ ಪೊಱಮಟ್ಟು ಬರ್ಪಾಗಳ್॥

ಕಂ॥ ತನಗೆಂದು ಬೇಱೆಮುನ್ನಮೆ। ಜನಕಂ ಮಾಡಿಸಿದ ನೆಲೆಯ ಕರುಮಾಡಂ ಕಾಂ॥ ಚನಕಲಶತತಿಯಿನಸೆದುದು। ಕನಕಾದ್ರಿಯ ನಲ್ಲಿಕಡೆದು *[ತಂದಿರಿಸಿದವೊಲ್]॥ ೨೦೪

ವ॥ ಅದಲ್ಲದೆಯುಂ ಮಾಬದ್ಧಚಂದನಮಾಲಾಭಿರಂಜಿತಮುಂ ಮುದ್ಗತಸಿತಪತಾಕಾಸಹಸ್ರಸಂಕುಳಮುಂ ಮಭ್ಯಾಹತಮಂಗಳಪಟುಪಟಹರವಾಪೂರಿತಮುಂ ಉಪಪಾದಿತಾಶೇಷಗೃಹಪ್ರವೇಶಮಂಗಳಮುಮಪ್ಪ ನಿಜಮಂ

---

೨೦೧. ಕಣ್ಮಲರ್—ನೇತ್ರಕಮಲವು; ಆರೆ—ತೃಪ್ತಿಪಡಲು; ವಿನಯದೆ ನಿನ್ನ ತಂದೆಯ ಪ್ರಸಾದದಿ. ಇಲ್ಲಿ ಪ್ರಯೆಂಬ ರೇಫಸಂಯುಕ್ತಾಕ್ಷರವಿದ್ದರೂ ಪೂರ್ವದ ಯಕಾರವು ಲಘುವಾಗಿರುವದು. ಶಮ. ಸೂ. ೨೯.

೨೦೫. ಅಭ್ಯಾಹತ—ಬಾಜಿಸಲ್ಪಟ್ಟ; ಉಪಪಾದಿತ—ಮಾಡಲ್ಪಟ್ಟ.

*[ಕಂಡರಿಸಿದವೊಲ್]

ಪಿರಮುಂ ಪ್ರೋಕ್ಷಿಸಿ ಸರೇಂದ್ರಚಕ್ರಮಂ ಯಥಾಕ್ರಮದಿಂ ಮನ್ನಿಸಿ ಮಜ್ಜನ ಭೋಜನಾದಿದಿವಸವ್ಯಾಪಾರಮಂ ತೀರ್ಚಿ ॥ ೫೦೪

ಕಂ॥ ಭುವನತ್ರಯಮುಮಂ ಕೃಪಾ । ಗ್ರಗವಿದಖು ನೆಂಬಂತೆ ತನ್ನ ಮಣಿಮಯಶಯ್ಯಾ ॥ ಭವನಾಂತರಾಳದೊಳ್ಕ । ಟ್ಟವೇಳ್ದ ಸಿಂದ್ರಾಯುಧಾ ಕ್ಷಮಂ ನೃಪತನಯಂ ॥ ೫೦೫

ವ॥ ಅಂತು ತುರಂಗರತ್ನಮನೆ ನೋಡಿ ಪೊಳ್ತುಗಳೆಯುತ್ತ ಮಿ ಪ್ಪುರ್ದುಂ ॥

ವೃ॥ ದಿನಲಕ್ಷ್ಮೀಕಾಂತೆ ಮೆಯ್ವೆಟ್ಟಳಿದು ಗಗನರಂಗಾಗ್ರದಿಂ ವಾರು ಣೀಸೇ । ವನೆಗೆಯ್ತಪ್ಪಲ್ಲಿ ಕಾಲಿಂ ನವಮಣಿಮಯಮಂಜೀರಕಂ ನುಣ್ಚ ತಂ ತೀ ॥ ವಿ ಸಿಜಪ್ರದ್ಯೋತದಿಂ ಪಶ್ಚಿಮಶಿಖರಿಶಿರೋಭಾಗದೊಳ್ಬಳ್ದ ದೆಂಬಂ । ತಿನಬಿಂಬಂ ರಂಜಿಸಿತ್ತಸ್ತಮಯ ಸಮಯದೊಳ್ಮುಕ್ತಪಾದಾ ವಲಂಬಂ ॥ ೫೦೬

ಕಂ॥ ಇನಸರಥಚಕ್ರಮಾರ್ಗವ । ಸನುಸರಿಸಿ ಜಲಪ್ರವಾಹಮೇಪ ರಿದಪ್ಪುದೆಂ ॥ ಬಿನ ಮೆಸೆವತ್ತಪರದಿಶಾಂ । ಗನೆಯತ್ತಲ್ ರಾಗರುಚಿರದಿವ ಸಾಲೋಕಂ ॥ ೫೦೭

ನಳಿನೀಪರಿಮಳಪರಿಚಿತ । ಲಳಿತಭ್ರಮರಾಳಿ ಕಾಲಪಾಶಂಗಳ್ಪೋ ಲ್ ॥ ಬಳಸೆ ಕೊರಲಂ ರಥಾಂಗಂ । ಗಳಗಲ್ವವು ವಿರಹತಾಪನಿಷ್ಪಾಳಿ ತಂಗಳ್ ॥ ೫೦೮

---

೫೦೬. ಮೆಯ್ವೆಟ್ಟು—ಶಂಕೆಯನ್ನು ಬಿಟ್ಟು; ವಾರುಣೀಸೇವನೆಗೆ—ಪಶ್ಚಿಮದಿಕ್ಕ ನ್ನು ಸೇವಿಸುವದಕ್ಕೆ, ಮದ್ಯಪಾನಕ್ಕೆ; ಸಿಜಪ್ರದ್ಯೋತದಿಂ—ತನ್ನ ಕಾಂತಿಯಿಂದ ಮ ಧ್ಯಭಾಗವನ್ನು ತುಂಬಿ; ಪಾದಾವಲಂಬಂ—ಕಿರಣ, ಕಾಲು; ಅಸ್ತಮಯ—ಅಸ್ತ ಯುವುಳ್ಳ.

೫೦೭. ರಾಗರುಚಿರದಿವಸಾಲೋಕಂ—ಸಂಧ್ಯಾರಾಗದಿಂದ ಮನೋಹರವಾದ ಹ ಗಲಿನ ಪ್ರಕಾಶವು.

೫೦೮. ಪರಿಚಿತ—ಸಂಜಾತಪರಿಚಯವುಳ್ಳ;

ಕಂ॥ ತೆಗೆದಂಬುಜಮಧುರಸಮಂ । ಪಗಲೆಲ್ಲಂ ಕರಪುಟಂಗಳಿಂ ಪೀರ್ದವನಾ ॥ ಗಗನಪಥಶ್ರಮದಿಂ ರವಿ । ಮಗುಳ್ದಂತಾಯ್ತು ಮಿಸುಪ ಕೆಂಬಿಸಿಲುಗಳುಂ ॥ ೫೧೦

ರವಿಮಂಡಲಂ ಪ್ರತೀಚೀ । ಯುವತಿಯ ಕರ್ಣಾವತಂಸರಕ್ತೋತ್ಪಲದಂ॥ ತೆಪ್ರೊಲಿರೆ ಚೆನ್ನೈದಿಲ್ಗೊಳ । ದಪ್ರೊಲಾಯ್ತು ಸಂಜೆಗೆಂಪಿನಿಂ ಗಗನತಳಂ ॥

ಇನನಿನಿಯನೆನಿಪ ನಗಲಲು । ಮನಿತಱೊಳಂ ಪುಗಿಸಿ ಮುಚ್ಚಿ ಮಧುಕರನೊಳ್ಪ ॥ ದ್ಮಿನಿ ನೆರೆದಳೆಂದೊಡೇಂ ಕಾ । ಮಿನಿಯೊಲವಂ ನಚ್ಚುವವನೆ ಗಾವಿಲನಲ್ತೆ ॥ ೫೧೨

ವ॥ ತದನಂತರಂ ಕೃಷ್ಣಾಗರುಪಂಕಲತೆಗಳಂತೆ ತಿಮಿರರೇಖೆಗಳ್ಮಿಮಿರೆಯುಂ ಪ್ರಾಸಾದಲಕ್ಷ್ಮಿಯ ಕರ್ಣೋತ್ಪಲಂಗಳಂತೆ ವಾತಾಯನವಿವರಂಗಳೊಳ್ ಪಾರವತಂಗಳೆಸೆಯೆಯುಂ ಚಂಪಕದೊಳ್ಳಾರಂಗಳಂತೆ ದೀಪಿಕಾಸಹಸ್ರಂಗಳ್ ಮಣಿಬದ್ಧಭೂಮಿಭಾಗಂಗಳೊಳ್ ಪಾಪ್ರ್ವಳಿಯೆಯುಂ ರವಿವಿರಹಾರ್ತನಳಿನೀವಿನೋದನಾಗತಬಾಲಾತಪಂಗಳಂತೆ ದೀಪಿಕಾಲೋಕಂಗಳ್ ಭವನದೀರ್ಘಿಕೆಗಳೊಳ್ ಪ್ರಜ್ವಳಿಸೆಯುಂ ಯಾಮಿಕನಂತಾರೋಪಿತಚಾಪನಾಗಿ ಕುಸುಮಚಾಪನಂತಃಪುರಮಂ ಪೊಕ್ಕು ತೊಳಲೆಯುಂ ನವಪಲ್ಲವಂಗಳಂತೆ ಸರಾಗಂಗಳಾದ ದೂತೀವಚನಂಗಳ್ ಕಾಂತಾಜನಕ್ಕೆ ಕರ್ಣಪೂರಂಗಳಾಗೆಯುಂ ಆನಿಶಾಸಮಯದೊಳ್ ನೃಪರೂಪಚಂದ್ರಂ ಸಂಧ್ಯಾಸಮಯೋಚಿತನಿಯಮಮಂ ನಿರ್ವರ್ತಿಸಿ ಮಣಿಮಯಮಂಟಪದೊಳ್ ವೈಶಂಪಾಯನದ್ವಿತೀಯ ನೋಲಗದೊಳಿರೆ ॥ ೫೧೩

೫೧೦. ಕರಪುಟಂಗಳಿಂ—ಕಿರಣಗಳೆಂಬ ಕರಪುಟಗಳಿಂದ ; ತೆಗೆದು—ಆಕರ್ಷಿಸಿ ; ಮಗುಳ್ದಂತೆ—ವಾಂತಿಮಾಡಿದಹಾಗೆ.

೫೧೨. ಇನಿಯಂ+ಎನಿಪ+ಇನಂ ; ಅಗಲಲುಂ—ಅಗಲಿದಕೂಡಲೆ ; ಗಾವಿಲ—ಮೂಢ.

೫೧೩. ಒಳ್ಳಿತು+ಆರ=ಒಳ್ಳಾರ—ಸಮೀಚೀನವಾದ ಹಾರ ; ಇಲ್ಲಿ ಗುಣವಾಚಕದ ಉಪಾಂತ್ಯಸ್ವರದೊಡನೆ ಕೊನೇ ಅಕ್ಷರಕ್ಕೆ ಲೋಪ ಶ. ಮ. ಸೂ. ೧೭೯. ದೀಪಿಕಾಲೋಕಂಗಳ—ದೀಪಕಾಂತಿಗಳು ; ಯಾಮಿಕ—ಸರದಿಯ ಕಾವಲುಗಾರ ; ತೊಳಲೆ—ಸುತ್ತುತ್ತಿರಲು ; ದೂತಿ—ಕುಂಟಣಿ.

ಕಂ॥ ಗುಣನಿಧಿಯಂ ನೋಡಲ್ಕಾ । ಫಣೀಂದ್ರನುತ್ಕಂಠನಾಗಿ ತಲೆದೋರ್ಪ ಫಣಾ ॥ ಮಣಿರುಚಿಗಳಂತೆ ಪೊಳೆದುವು । ಮಣಿಭೂಮಿಯೊಳೆಸೆವ ದೀಪಿಕಾಪ್ರಕರಂಗಳ್ ॥ ಅಂತಾಸಮಯದೊಳ್ ॥ ೫೧೪

ವೃ॥ ಉದಿತೇಂದುಪ್ರಭೆ ರಾಹುವಿಂಗಗಿದು ಕಾಂತಾರೂಪಮಂ ತಾಳ್ದಿಬಂ । ದುದೊ ಮೇಣ್ ರಾಜಕುಲಾಧಿದೇವತೆಯೊ ಬಂದಳ್ಮೂರ್ತಿಗೊಂಡೆಂಬಿನಂ ॥ ಸುದತೀರತ್ನಮದೋರ್ವಳೆಳ್ತರುತಮಿರ್ದ್ದಳ್ಸುತ್ತಲುಂ ನಾಡೆ ಪೊಣ್ಮಿದ ಲಾವಣ್ಯದೆ ಕಾಂಚನಾಕರರಜೋವಿಸ್ತಾರಮಂ ಮಾಳ್ಪವೋಲ್ ೫೧೫

ಕಂ॥ ಲಲಿತರಣನ್ಮಣಿನೂಪುರ । ವಿಲಸಿತ ಪದಯುಗಳದಿಂದೆ ಸುಂದರಿ ಕೂಜ ॥ ತ್ಕಲಹಂಸಾಕುಲಕಮಲಾ । ಕಲಿತ ಸರೋಜನಿಯ ತೆಱದಿನೇಳ್ತರುತಿರ್ದ್ದಳ್ ॥ ೫೧೬

ಲಲಿತಾಂಗಿ ಮೆಲ್ಲಮೆಲ್ಲನೆ । ನಳಿ ತೋಳಂ ಬೀಸೆ ಮಿಸುಗುವಸಿಯುಗುರ್ಗಳನು ॥ ಣ್ಬೆಳಗು ನಿಮಿರ್ದೆಸೆದು ಪೊಗೆವ । ಗ್ಗಲಿಸುವ ಲಾವಣ್ಯರಸದ ಧಾರಾವಳಿವೋಲ್ ॥ ೫೧೭

ಮಿಸುಗುವ ಬೆಳ್ದಿಂಗಳ್ದೆಸೆ । ದೆಸೆಯೊಳ್ಪಸರಿಸುವತೆಱದೆ ಹಾರಮರೀಚಿ । ಪ್ರಸರಂ ಬಳಸುತ್ತಿರೆ ಬ । ರ್ಪಸಿಯಳ್ಪಾಲ್ಗಡಲೊಳೆಸೆವ ಸಿರಿಯಂ ಪೋಲ್ತಳ್ ॥ ೫೧೮

ಗಿರಿರಾಜಂ ಗೌರಿಯನಾ । ಹರಂಗೆ ಶುಶ್ರೂಷೆಗೆಯಿಸಲೊಡಗೊಂಡೊಯ್ವಂ । ತಿರೆ ಸತಿಯ ಪೆಱಗೆ ಕಿಱಿದಂ । ತರದೊಳ್ಕೈಲಾಸನೆಂಬ ಕಂಚುಕಿ ಬಂದಂ ॥ ೫೧೯

---

೫೧೪. ಉತ್ಕಂಠನಾಗಿ—ತಲೆಯನ್ನು ಮೇಲಕ್ಕೆ ಎತ್ತಿ ; ತಲೆದೋರ್ಪ—ಕಾಣಬರುವ.

೫೧೫. ಕಾಂಚನಾಕರ—ಸುವರ್ಣದಗಣಿಯ ; ರಜೋವಿಸ್ತಾರಮಂ—ಧೂಳಿಯ ಪ್ರಸಾರಣೆಯನ್ನು ;

೫೧೭. ಅಸಿಯುಗುರ್ಗಳ—ತೆಳುವಾದ ಉಗುರುಗಳ ; ಅಗ್ಗಲಿಸುವ—ಹೆಚ್ಚುವ.

೫೧೯. ಪೆಱಗೆ—ಹಿಂದೆ ; ಕಿಱಿದಂತರದೊಳ್—ಸ್ವಲ್ಪದೂರದಲ್ಲಿ.

ವ॥ ಅಂತಾಕಾಂತೆವೆರಸು ಕಂಚುಕಿ ಬಂದು ಪ್ರೊಡವಟ್ಟು ಕೆಯ್ಗಳಂ ಮುಗಿದು ದೇವಾ ಬಿನ್ನಪವೆಂದಿಂತೆಂದಂ ॥ ೫-೭೦

ವೃ॥ ಮುನಿಸಿಂ ತ್ವಜ್ಜನಕಂ ಕುಳೂತಪುರಮಂ ನಿರ್ಮೂಲಿಸಲಂದಾ ಕುಳೂ । ತನರೇಂದ್ರಂ ಭಯದಿಂ ಕಳತ್ರಸಹಿತಂ ಪ್ರೋಗಲ್ಕುಳೂತೇಶನಂ ॥ ದನೆಯುಂ ಮತ್ತಮನೇಕರಂ ಸೆಱೆಗೆ ತಂದಿಟ್ಟಲ್ಲಿ ತದ್ರಾ । ಜನಂದನೆಯುಂ ಕನ್ನೆಯನಳ್ಕಱಿಂ ನಡಪಿದಳ್ಮಾದೇವಿ ಕಾರುಣ್ಯದಿಂ ॥ ೫-೭೧

ಅಂತುನಡಪುತ ಮಿರ್ದ್ದು ॥

ಕಂ॥ ಪಿರಿದುಂ ಮನ್ನಿಸಿ ನಡಪು । ತ್ತಿರೆ ಪರಮರಹಸ್ಯಭೂಮಿ ಯೆನಿಸಿದಳಿಂತೀ ॥ ಪರಿಚಾರಿಕೆ ತನಗೆಂದಾ । ದರದಿಂ ನಿಜಜನನಿ ಬೆಸಸಿ ಯಟ್ಟಿದಳೀಗಳ್ ॥ ೫-೭೨

ಧರೆಯೊಳ್ನೆಗಳ್ದ ಕುಳೂತೇ । ಶ್ವರನ ಮಗಳ್ಪತ್ರಲೇಖೆ ಯೆಂಬುದು ಪೆಸರಿಂ ॥ ಪರಿಜನಸಾಮಾನ್ಯದೆ ನೀಂ । ಪರೀಕ್ಷಿಸಲ್ವೇಡ ಸತಿಯು ನೀಗುಣ ವತಿಯುಂ ॥ ೫-೭೩

ವ॥ ಎಂದು ಪ್ರೊಡವಡಿಸೆ ಪತ್ರಲೇಖೆಯು ವಿಚಿತ್ರರೂಪನಾಕ್ಷತ್ರಿಯ ಪುತ್ರಂ ವಿಸ್ಮಯಾಕ್ಷಿಪ್ತಚಿತ್ತನಾಗಿ ನೋಡುತಿರ್ದ್ದು ದೇವಿಯಬ್ಬೆಸಸಿ ದಂತೆ ನೆಗಳ್ವೆನೆಂದು ಕಂಚುಕಿಯಂ ಕಳುಪಲಿತ್ತ ಪತ್ರಲೇಖೆಯುಭಿನವಸ ಮುಪಜಾತ ಸೇವಾರಸದಿ ನೊಂದುಪ್ರೊತ್ತಗಲದೋಲಗಿಸುತ್ತಿರಲಾಕೆಯ ಶೀ ಲಾಚಾರವಿನಯಮುಂ ಕಂಡು ತಾಂಬೂಲಕರಂಕವಾಹಿನಿಯುಂ ಮಾಡಿ ನೃಪ ರೂಪಚಂದ್ರಂ ನಿಜಜನನೀಜನಕರ ನೋಲಗಿಸುತಿರ್ದ್ದನನ್ನೆಗಮತ್ತಂ॥೫-೭೪

೫-೭೨. ಪಿರಿದುಂ—ಬಹಳವಾಗಿ ; ಮನ್ನಿಸಿ—ಮನ್ನಣೆಮಾಡಿ ; ನಡಪುತ್ತಿರೆ—ಕಾಪಾಡುತ್ತಿರಲು ; ಇಂತು—ಹೀಗೆ ; ಈ ಪರಿಚಾರಿಕೆ—ಈ ತೊತ್ತು ; ತನಗೆ—ದೇವಿಗೆ ; ಪರಮರಹಸ್ಯಭೂಮಿಯೆನಿಸಿದುದು—ಅತಿರಹಸ್ಯಕ್ಕೆ ಸ್ಥಾನವೆನಿಸಿಕೊಂಡಿತು.

೫-೭೩. ಎಂಬುದು [ಲೋಕಂ] ಕರೆಯುವದು ; ನೀಂಪರಿಜನಸಾಮಾನ್ಯದೆ—ಪರಿಜನರಲ್ಲಿರತಕ್ಕ ಸಾಮಾನ್ಯಬುದ್ಧಿಯಿಂದ ; ಪರೀಕ್ಷಿಸಲ್ವೇಡ—ಪರೀಕ್ಷೆಯನ್ನು ಮಾಡಬೇಡ.

ಕಂ॥ ಯುವರಾಜ ಪಟ್ಟಬಂಧೋ । ತ್ಸವಮಂ ಮಾಡಲ್ಕೆವೇಳ್ಕು ಮಿನ್ನಿರದೆ ವಿಲಾ । ಸವತೀಸುತಂಗೆನುತ್ತಂ । ದವನೀಶಂ ಸಚಿವನೊಳ್ಸಮಾಲೋಚಿಸಿದಂ ॥ ೫೦೫

ವ॥ ಅಂತಾ ಮಹಾಮಾತ್ಯನೊಳ್ಸಮಾಲೋಚಿಸಿ ತತ್ಕಾರ್ಯನಿಶ್ಚಯಾಗೆಯುದ್ಧ ಗೃಹಮಹತ್ತರರಂ ಕರೆದಲ್ಲಿಗೆ ತಕ್ಕುಮಂಗಳೋಪಕರಣಂಗಳಂ ಸಮುಕಟ್ಟಿಮೆಂದು ಬೆಸಸಿದಾಗಳವರಂತೆ ಗೆಯ್ವೆವೆಂದವರ್ಗಳ್ನಿಗಳುತ್ತಮಿರ್ದ್ದರಿತ್ತ ಯುವರಾಜಾಭಿಷೇಕಂ ಸಮೀಪಮೆನಲ್ಕೊಂದಿನಂದದಿ ನೋಲಗಿಸಲೆಂದು ಬಂದವಿನಯರತ್ನಾಕರನ ನಳ್ಕಱಿಂ ತೆಗೆದು ತಳ್ಕೈಸಿ ಕೆಲಕ್ಕೆ ಕರೆದು ಕುಳ್ಳಿರಿಸಿ ॥ ೫೦೬

ಕಂ॥ ವಿನಯಾರ್ಣವನಂ ಮಂದಾ । ಕಿನಿಕೂಡಿದುದೆನಿಸಿ ವಿಶದದಶನದ್ಯುತಿ ತ । ಳ್ತನವರತಂ ಬೆಳಗಿಲ್ಕಂ । ತ್ರನಿಧಾನಂ ನುಡಿದನಾ ನರೇಂದ್ರಾತ್ಮಜನಂ ॥ ೫೦೭

ವ॥ ಅದಂತೆನೆ ವಿದಿತವೇದಿತವ್ಯನು ಮಧೀತಸಕಲಶಾಸ್ತ್ರನು ಮೆನಿಪ್ಪನಿನಗುಪದೇಶಿಸಲ್ವೇಳ್ವುದೊಂದುಮಿಲ್ಲದೊಡಂ ॥ ೫೦೮

ಕಂ॥ ಕಪಿಸ್ದಾವಿಗೆಗಳ ಬೆಳಗಿಂ । ಕಾಯ್ದಿಸೆವ ಸಹಸ್ರಕಿರಣನಿಂ ಭೇದಿಸಲೇಂ ॥ ಗೆಯ್ದುಂ ಬಾರದು ದಲ್ತವೆ । ಮಾಯಿಸ್ದಾಜವ್ವನದೊಳೊಡಲೊಳ್ಪಡಿದಿರ್ದ್ದತಮಂ ॥ ೫೦೯

ಸಿರಿಯೆಂಬ ಸೊಕ್ಕ್ರರ್ತಿಳಿಯದು । ಪರಿಣಾಮದಿ ಸುಜನಂಗಳಿಂದ

೫೦೬. ಗೃಹಮಹತ್ತರರಂ—ಹರಿಕಾರರನ್ನು ; ಸಮುಕಟ್ಟಿಂ—ಸಿದ್ಧಮಾಡಿರಿ ;

೫೦೭. ವಿನಯಸಮುದ್ರನಾದಕಾರಣವೇದಶನದ್ಯುತಿಯನ್ನು ಮಂದಾಕಿನಿಯನ್ನಾಗಿಉತ್ಪ್ರೇಕ್ಷಿಸಿರುತ್ತಾನೆ.

೫೦೯. ತನೆ—ಅತ್ಯಂತವಾಗಿ : ಮಾಯ್ದು—ಮುತ್ತನಾದ ; ತಮಂ—ಅಜ್ಞಾನಾಂಧಕಾರವು—ಪಿಸುಗು—ಸಹಸ್ರಮುತ್ತದಿಂದಲೂ ; ಭೇದಿಸಲ್ಬಾರದು—ಹೋಗಲಾಡಿಸುವದಕ್ಕಾಗದು ; ದಲ—ನಿಶ್ಚಯವು

೫೧೦. ಸಿರಿಯೆಂಬಸೊಕ್ಕು—ಐಶ್ವರ್ಯವೆಂಬಗರ್ವವು; ಪರಿಣಾಮದಿಂ—ವಯಃಪರಿಣತಿಯಿಂದ ; ತೀರದು—ಉಪಶಾಂತವಾಗದು ; ಅಂದರೆ ಮುಪ್ಪಿನಲ್ಲಿಯೂ ಐಶ್ವರ್ಯ

ಮದೆಂತುಂ ॥ ಪರಿಹರಿಸ ಲರಿದೆನಿಪ್ಪ । ದಪರವೈಶ್ವರ್ಯಪ್ರಭೂತ ತಿಮಿ
ರಾಂಧತ್ವಂ ॥ ೫೩೦

ಶಿಶಿರೋಪಚಾರದಿಂದಂ । ವಶಮಲ್ಲದು ತೀವ್ರಮಪ್ಪ ದಾಹಜ್ವರ
[ಮಂ ॥ ಕುಶ] ಸಾಧ್ಯಮಲ್ಲದಿಂದ್ರಿಯ । ದಿಶಾಗಜಪ್ರಕರಮೆಂದು ಮಪಿನ
ಯನಿಯತಂ ॥ ೫೩೧

ವಿಷಮವಿಷಂಗಳ್ಗಂ ಪ್ರತಿ । ವಿಷಮೆನಿಸುವ ಮಂತ್ರನಿಚಯದೊ
ಳಮಾಗ್ಗೆಂದುಂ ॥ ವಿಷಯಮೆ ಮಾಣಿಸಲಿಂತೀ । ವಿಷಯವಿಷಾಸ್ವಾದಮೋ
ಹಮುಂ ನಿರ್ವಿಷಯಂ ॥ ೫೩೨

ಅರಸಾಗಲೊಡಂ ಮೆಯ್ಮಱೆ । ದು ರಾಜ್ಯಸುಖಸನ್ನಿಪಾತನಿದ್ರೆಯ
ಕಯ್ಕೊಂ ॥ ಡಿರುಳುಂ ಪಗಲುಂ ಜಾಡ್ಯದೆ । ಮರವಟ್ಟೆಚ್ಚಱುವರಲ್ಲ ಮೆಂತುಂ
ಭೂಪರ್ ॥ ಅದಲ್ಲದೆಯುಂ— ೫೩೩

ವೃ॥ ಪಿತೃಗಳುಪಾರ್ಜಿಸಿಟ್ಟಸಿರಿ ಜವ್ವನದೇಳ್ಗೆ ಪೆಱಂಗಿದಿಲ್ಲೆನಿ ।
ಪ್ಪತಿಶಯರೂಪು ಶಕ್ತಿಗಳಿವಲ್ಲವೆ ಹಾನಿಯ ಬಳ್ಳಿವಳ್ಳಿನಿ ॥ ಕ್ಷಿತಮಿವನೊಂ
ದನೊಂದನೆ ವಿಚಾರಿಪೊಡುಳ್ಳ ವಿನೀತಿಗೆಲ್ಲಮಾ । ಯತನ ಮೆನಿಪ್ಪದೋ
ರ್ವನೊಳವೆಲ್ಲವಿರಲ್ಬಳಿಕೇನನೆಂಬುದೋ ॥ ೫೩೪

ಮಾದತಪ್ಪದೆಂದಭಿಪ್ರಾಯವು. ಅಪರಂ—ಮತ್ತೊಂದಾದ ; ತಿಮಿರಾಂಧತ್ವಂ—ಅಜ್ಞಾನಾಂಧಕಾರವು ; ಅಂಜನಂಗಳಿಂದಂ ಎಂತುಂಪರಿಹರಿಸಲರಿದೆ ನಿಪ್ಪುದು ಎಂದನ್ವಯವು.

೫೩೨. ವಿಷಮವಿಷಂಗಳ್ಗಂ—ಕಠಿನವಾದ ವಿಷಗಳಿಗೂ ; ಪ್ರತಿವಿಷಮೆನಿಸುವ—ಪರಿಹಾರಕವಿಷವೆನಿಸುವ ; ಮಂತ್ರನಿಚಯದೊಳಂ —ಮಂತ್ರಸಮೂಹದಿಂದಲೂ; ಇಂತು—ಇಂಥಾ ; ವಿಷಯವಿಷಾಸ್ವಾದಮೋಹಮುಂ ; ಮಾಣಿಸಲ್—ಹೋಗಲಾಡಿಸುವದಕ್ಕೆ ; ನಿರ್ವಿಷಯಂ—ಸ್ವಚ್ಛಂದನಾದಿ ವಿಷಯಾನುಭವವಿಲ್ಲದೆ ; ಎಂದುಂ—ಯಾವಾಗಲೂ ; ಆಗ್ಗೆಂ—ಯಾರಿಗೂ ; ವಿಷಯಮೆ—ಸಾಧ್ಯವೆ.

೫೩೩. ಭೂಪರ್—ರಾಜರು ; ಅರಸಾಗಲೊಡಂ—ದೊರೆತನಬಂದಕೂಡಲೆ ; ಮರವಟ್ಟು—ಸ್ತಬ್ಧರಾಗಿ ; ಎಂತುಂ—ಯಾವವಿಧದಿಂದಲೂ ; ಎಚ್ಚಱುವರ್—ಜಾಗರೂಕರು.

೫೩೪. ಹಾನಿಯ—ಕೇಡಿನ ; ಬಳ್ಳಿವಳ್ಳಿ—ಪರಂಪರೆ ; ಉಳ್ಳವಿನೀತಿಗೆಲ್ಲಂ—ಇರತಕ್ಕ ದುರ್ನೀತಿಗಳಿಗೆಲ್ಲಾ ; ಆಯತನಂ—ಮನೆಯು.

ಕಂ॥ ಇರದೆಯೊಯ್ವುದು ತನ್ನಿಚ್ಛೆಗೆ । ವರಯೌವನದಂದು ಪುರುಷನಂ ಪ್ರಕೃತಿ ರಜಂ ॥ ಬೆರೆದು ತಿರುಪುತ್ತೆ ಸುಟ್ಟುಱಿ । ತೆರಳ್ಚಿ ತರಗೆಲೆಯನೊಯ್ವತೆಱದಿಂದೆತ್ತಂ ॥ ೫೩೫

ವಿಷಮು ಮೆನಿಪ್ಪುಪ್ಪನೀರುಂ । ಕಷಾಯಿತಾಸ್ಯಂಗೆ ಮಧುರತರಮಪ್ಪಂತಾ ॥ ವಿಷಯಂಗಳ್ ನವಯೌವನ । ಕಷಾಯಿತಾತ್ಮನ ಮನಕ್ಕನತಿಮಧುರಂಗಳ್ ॥ ೫೩೬

ಮಿಗೆ ತೃಷ್ಣೆ ಪುಟ್ಟಲಿಂದ್ರಿಯ । ಮೃಗಂಗಳಂ ಭೋಗವೆಂಬ ಮೃಗತೃಷ್ಣಿಕೆ ಮೆ ॥ ಯ್ದೆಗೆಯಲ್ಕೆ ಬಾರದಂತಿರೆ । ತೆಗೆದೊಡಗೊಂಡೊಯ್ವುದೆಂಬುದೊಂದಚ್ಚರಿಯೇ ॥ ೫೩೭

ಅಱಿವುಗೆಡಿಸುತ್ತ ಮೆಲ್ಲಂ । ತೆಱದಿಂ ದೆಸೆಗೆಡಿಸದಿರದು ವಿಷಯಸಮೂಹಮೆಱಗೆ ಬಿಡದಂತೆ ಪತ್ತುವ । ಮುಱುಕಂ ದಿಙ್ಮೋಹದಂದ [ದಿಂ ಮಾನಿ] ಸರಂ ॥ ೫೩೮

ವ॥ ಅವಱಿಂ ಸದುಪದೇಶಂಗಳ್ಗೆ ನಿನ್ನೊಂದಿಗರೆ ಭಾಜನರಪ್ಪರದೆಂತೆನೆ ॥

ಕಂ॥ ತೊಳಗುವ ಚಂದ್ರಾಂಶುಗಳಾ । ಪಳಂಕಿನ ಶಿಲೆಯೊಳಗೆ ಪೊಳೆದು ಪುಗುವಂತಿರೆ ನಿ ॥ ರ್ಮಳಹೃದಯದೊಳಗೆ ಪುಗುಗುಂ । ವಿಲಸಚ್ಛಿಷ್ಟೋಪದೇಶ ಗುಣನಿವಹಂಗಳ್ ॥ ಅದಲ್ಲದೆಯುಂ— ೫೩೯

---

೫೩೫. ತನ್ನಿಚ್ಛೆಗೆ—ತನ್ನ ಸ್ವೇಚ್ಛಾನುಸಾರವಾಗಿ; ರಜಂಬೆರೆದು—ರಜೋಗುಣವನ್ನು ಹೊಂದಿಸಿ, ಧೂಳನ್ನು ಹೊಂದಿಸಿ; ತೆರಳ್ಚಿ—ಹೊರಡಿಸಿ; ಸುಟ್ಟುಱಿ—ಸುಂಟರಗಾಳಿ.

೫೩೭. ಮೆಯ್ದೆಗೆಯಲ್ಕೆ—ಹಿಂಜರಿಯುವುದಕ್ಕೆ; ಬಾರದಂತಿರೆ—ಆಗದಹಾಗೆ; ತೆಗೆದು—ಎಳೆದುಕೊಂಡು.

೫೩೮. ಎಱಗಿ—ಪ್ರವೇಶಿಸಿ; ಬಿಡದಂತೆಪತ್ತುವಮುಱುಕಂ—ಬಿಡದಹಾಗೆ ಅಂಟಿಕೊಂಡಿರುವ ಮೋಹವು; ದಿಙ್ಮೋಹದಂದದಿಂ—ದಿಗ್ಭ್ರಮೆಯ ಹಾಗೆ; ದೆಸೆಗೆಡಿಸದಿರದು—ಗತಿಗೆಡಿಸದೆ ಇರುವುದಿಲ್ಲ; ನಿನ್ನೊಂದಿಗರ್—ನಿನ್ನಂಥವರು.

ಕಂ॥ ಗುರುಗಳ ವಚನಂ ನಿರ್ಮಳ । ತರವಾಗಿಯುಂ ಮುಕ್ತಸಲಿಲ ದಂ *[ತಿರೆ ಭವ್ಯೇ । ತರನ] ಪ್ಪನ ಕಿವಿಯೊಳ್ಪುಗೆ । ಪಿರಿದೆನಿಸುವ ಕರ್ಣ ಶೂಲೆಯಂ ಪುಟ್ಟಿಸುಗುಂ ॥ ೫೪೦

ವೃ॥ ವಿನಯಮ ನಾಗಿಸಲ್ಕೆ ಱಿಯ ದನ್ವಯಮುಂ ಶ್ರುತಮುಂ ಸ್ವಭಾವದು । ರ್ಜನನೆನಿಪಂಗವಂತುಟಿವಲಂ ಶಿಶಿರೈಕನಿಧಾನಮಪ್ಪಚಂ ॥ ದನ ದೊಳೆ ಪುಟ್ಟಿಕಿಚ್ಚು ಸುಡದಿರ್ಪ್ಪುದೆ †[ತತ್ಪ್ರಶಮೈಕಕಾರಣಂ । ವನನಿಧಿ ಯಾದೊಡೇ] ನುರಿಯದಿರ್ಪ್ಪುದೆ ವಳ್ಳಿಸಿ ಬಾಡಬಾನಲಂ ॥ ೫೪೧

ಕಂ॥ ಜನಪತಿಗ ಳ್ನುಡಿಯುತ್ತಾ । ರ್ದನಿಯಂತನುವದಿಸಿ ಬದ್ದ ಕಲೊಲ್ಲದೆ ಮಾಕ್ಕೊರ್ಂ ॥ ಡನುಚಿತಮಿದೆಂದು ಮಾಣಿಪ । ಮನುಜೋತ್ತಮರೆಲ್ಲಿಯಾನು ಮಿರ್ಪ್ಪರ್ಜಗದೊಳ್ ॥ ೫೪೨

ವ॥ ಎತ್ತಲಾನುಮುಪದೇಶಿಸುವ ರುಳ್ಳೊಡೆ ॥

ಕಂ॥ ಅಲರಂಬಿಂ ಬಿರಿದಿರ್ದೆಯೊ । ಳ್ನಿಲಲಱಿಗುಮೆ ಸದ್ಗುರೂಪದೇಶಾಮೃತಮೇಂ ॥ ಸಲೆ ತೀವ್ರತಿರ್ಷ್ಣಡಂ ಪೇ । ಳ್ನಿಲಲಱಿಗುಮೆ ಭಿನ್ನಭಾಂಡದೊಳ್ನೀರಿನಿತುಂ ॥ ೫೪೩

ವ॥ ಅದರಿನೇಗೆಯ್ದೊಡಂ ಕೇಳ್ವರಲ್ಲಂ ॥

---

೫೪೦. ಭವ್ಯೇತರನಪ್ಪನ—ನೀಚನಾದವನ.

೫೪೧. ಅವಂತುಟಿವಲಂ—ಅದುನಾಗೆಯೇಸರಿ ; ವನನಿಧಿ—ಸಮುದ್ರವು ; ತತ್ಪ್ರಶಮ—ಆಬಡಬಾನಲಶಾಂತಿಗೆ ; ಏಕಕಾರಣಂ—ಮುಖ್ಯಕಾರಣವು ; ಉರಿಯದಿರ್ಪ್ಪುದೆ—ಜ್ವಲಿಸದೆ ಇರುತ್ತದೆಯೆ. ?

೫೪೨. ಮಾರ್ದನಿಯಂತೆ—ಪ್ರತಿಧ್ವನಿಯಂತಾಗೆ ; ಅನುವದಿಸಿ—ಅನುಸರಿಸಿಹೇಳಿ; ಮಾಕ್ಕೊಂಡು—ಎದುರುಬಿದ್ದು ; ಮಾಣಿಪ—ದುರ್ಮಾರ್ಗವನ್ನು ಬಿಡಿಸುವ ; ಎಲ್ಲಿಯಾನು ಮಿರ್ಪ್ಪರ್—ಎಲ್ಲಿಯಾದರೂ ಇರುತ್ತಾರೆ.

*[ತಿರಭವ್ಯೇತ್ತರಮ] †[ತತ್ಪ್ರಸವೈಕಕಾರಣಂವನನಿಧಿಯುಂದದೇ]

ವೃ॥ ಮೊಱೆದು ಹಿತೋಪದೇಶಮನೆ ಕೇಳಲೊಡಂ ಸಿಡಿಲೇಳ್ಗೆಯೆ
ದ್ದ್ರವೆ । ಮ್ಮಱುಗಿ ನಯಂಕಿಡಲ್ಗಜನಿವಿಶಾಲನದಿಂ ದವಧೀರಿಸುತ್ತೆ ತ ॥
ಮ್ಮಿರಿತಮಿದೇತಕೆಂದು ಗುರುಸಂಕುಳಮಂ ಮಱೆದಿಂತು ಮಂಮಲಂ ।
ಮಱುಗಿಪರಲ್ತೆ ತಮ್ಮನಿಜಗರ್ವದೆ ಮೂಯ್ದುನೃಪರ್ಧರಿತ್ರಿಯೊಳ್ ॥ ೩೪೪

ಕಂ॥ ಸ್ಥಿರೆಯುಲ್ಲವವಳ ನತಿನಿ । ಷ್ಠುರೆಯುಂ ಭಟಖಡ್ಗಮಂಡಲೋ
ತ್ಪಲ ವನದೊ ॥ ಳ್ತರುಪೊರಡಿಯುಂ ನಜ್ಜಿನ । ಸಿರಿಯಂ *[ಭಾವಿಪ್ಪುದು
ಮುನ್ನಮೇ ಶುಭಕಾಮಂ] ॥ ಅದೆಂತೆಂದೊಡೆ— ೩೪೫

ವೃ॥ ಸುರೆಯಿಂ ಸೊರ್ಕ್ಕಂ ಸುರೋರ್ವೀರುಹಕಿಸಲಯದಿಂ ರಾಗ
ಮಂ ಕೌಸ್ತುಭಪ್ರ । ಸ್ತರದಿಂ ನೈಷ್ಠುರ್ಯಮಂ ದುರ್ವಿಷಮವಿಷದಿ ನು
ನ್ಮೋಹಮಂ ಮುಗ್ಧದೋಷಾ ॥ ಕರನಿಂ ವಕ್ರತ್ವಮಂ ದುಶ್ಚ್ಯವನನ ಹ
ಯದಿಂ ವೇಗಮಂ ತಾಳ್ದಿ ನೀರಾ । ಕರದಿಂ ದೇಳ್ತಂದಳಂತಾಸಿರಿ ಸಹಭವರಂ
ಪೋಲ್ವುದೇಂ ಚೋದ್ಯಮಾಯ್ತೇ ॥ ೩೪೬

ಕಂ॥ ವಾರಿಧಿಯೊಳ್ಮಂದರಗಿರಿ । ಘೋರನೆ ತಿರುಗುತ್ತಿರಲ್ಕೆ ಪುಟ್ಟಿದ
ಬಱಸಂ ॥ ಸ್ಕಾರಮದಿನ್ನುಂ ಬಿಡದಪ್ಪೊ । ಲೋರಂತಿರೆ ಕೂಡೆಲಕ್ಷ್ಮಿ ತಿ
ರಿಬ್ರನೆತಿರುಪಳ್ ॥ ೩೪೭

ವೃ॥ ಸ್ರುತಮಂ ಕಪ್ಪೊಕ್ಕಳಾಚಾರಮ ನವಘರಿಸಲ್ಸತ್ವಮಂ ಬಾರ್ತೆ
ಗೆಯ್ಯಳ್ । ಮತಿಯುಂ ಬಿಪ್ಪಂಡಿಪಳ್ ಲಕ್ಷಣಮನೆಣಿಸಳ್ದಾರ್ಯಮಂ
ಚಿಂತಿಸಳ್ಪಂ ॥ ಗತಿಯುಂ ವಿಶ್ವಾಸಿಸ ಳ್ಸುಂದರತರವಪ್ರಮಂ ನೋಡಳಿಂತುಂ
ವಿಶೇಷ । ಜ್ಞತೆಯುಂ ತಾನೇತಕೆಂಬ ಳ್ಸಿರಿಯನಱಿವ್ರತಂ ಬಂಣಿಸಂ ಗಾಂಪ
ನಲ್ತೇ । ಅಂತುಮಲ್ಲದೆಯುಂ— ೩೪೮

---

೩೪೪. ಸಿಡಿಲೇಳ್ಗೆಯೆದ್ದ—ಸಿಡಿಲಿನ ಏಳ್ಗೆಯಂತೆ ಎದುರುಬಿದ್ದ; ಏಳ್ಗೆ ಎಂಬ ರೂಪವು ಎದ್ದ ಎಂದಾಯಿತು. ಶ.ಮ. ಸೂ. ೭೪. ಮಮ್ಮಱುಗಿ—ಮನಸ್ಸಿನಲ್ಲಿ ಸಂಕಟಪಟ್ಟು; ಅವಧೀರಿಸುತ್ತೆ—ತಿರಸ್ಕರಿಸುತ್ತ.

೩೪೭. ಬಱಸಿ—ಚೆನ್ನಾಗಿ; ಕೂಡೆ—ಸೇರಲು; ತಿರುಪಳ್—ತಿರುಗುವಳು.

೩೪೮. ಬಾರ್ತೆಗೆಯ್ಯಳ್—ಲಕ್ಷ್ಯಮಾಡಳು; ಬಿಪ್ಪಂಡಿಪಳ್—ದೂಷಿಸುವಳು;

ಅಕ್ಕರ॥ ಧೀರನಪ್ಪನುಮಂ ಹಾಸ್ಯಂಮಾಳ್ಪಳ್ಮರುಳೆಂಬಿನಂ ಪೆಾವೆಂದು ದಾಂಟುವಳಭಿಜಾತನಂ । ವೀರನರಿಗುವೆಂದೊಲ್ಲಳು ದಾನಿಸಪ್ಪನಂ ಗಳಪನೆಂದಿಳಿಪಳ್ ಪುರುಡಿಂ । ಭಾರತೀಶನಂ ಸೋಂಕಳ್ ದಾಸಿಯಂ ಮುಟ್ಟಳಸ್ಪೃಶ್ಯನೆಂದು ವಿನೀತನಂ । ದೂರದಿಂ ನೋಡಿ ಪಾತಕನಿವನೆಂದು ತಿಳಿದು ಪೋಗಳಿಂದಿರೆ *[ನಂಬದಿರ್] ॥ ೫೪೯

ವ॥ ಮತ್ತಂ ಪಯೋರಾಶಿಯೊಳ್ಪುಟ್ಟಿಯುಂ ತೃಷ್ಣಾಕರೆಯುಂ ಅಮುರ್ದಿನೊಡವುಟ್ಟಿಯುಂ ಕಟುವಿಪಾಕೆಯುಂ ಪುರುಷೋತ್ತಮರತೆಯಾಗಿಯುಂ ದುರ್ಜನಪ್ರಿಯೆಯು ಮೆಸಿಸಿ ಪರಸ್ಪರವಿರೋಧಿಯಪ್ಪ ನಿಜಚರಿತ್ರಮಂ ಇಂದ್ರಜಾಲಮಂ ತೋರ್ಪಂತೆ ಮೆಱೆಯುತ್ತಿರ್ಪಳಂತುಮಲ್ಲದೆಯುಂ ॥ ೫೫೦

ಕಂ॥ ಎಂತೆಂತುತೊಳಗಿ ಬೆಳಗುವ । ಳಂತಂತತಿ *[ಮಲಿನಕಜ್ಜಳೋಪಮಕರ್ಮ] ॥ ಭ್ರಾಂತಿಯುಮಾಳ್ಪಳ್ ಲಕ್ಷ್ಮೀ । ಕಾಂತೆ ಕರಂ ಚಪಳೆ ಸೊಡರಕುಡಿ †[ಯಂ ಪೋಲ್ವಳ್] ॥ ಅದಲ್ಲದೆಯುಂ— ೫೫೧

ಪಿರಿಯಕ್ಕರ॥ ಎಸೆವಗುಣಮೆಂಬಕಳಹಂಸನಿಕರಕ್ಕೆ ಕಾಲದ ಪೆರ್ಮ್ಮಳೆ ವಿಷಮೇಂದ್ರಿಯ । ಪ್ರಸರಮೆಂಬ ಮೃಗಪ್ರಕರಕ್ಕೆ ಗೋವಿಯುದನಿ ಸಚ್ಚರಿತ್ರಂಗಳೆಂಬ । ಮಿಸುಪ ಚಿತ್ರಕ್ಕೆ ಕಂದಿಪಕರ್ಪ್ಪಗೆ ಧರ್ಮವೆಂಬಿಂದುಮಂಡಲಕ್ಕೆ । ಮುಸುಕುವ ಕಾಳರಾಹುವಿನಸಾಲಗೆ ಯೆಸಿಪಸಿರಿಯುಂ ಬಣ್ಣಿಪಂಗಾಂಪನಲ್ತೆ ॥ ೫೫೨

ಲಲಿತರಗಳೆ॥ ಗಂಧರ್ವನಗರಲೇಖೆಯು ತೆಱದೆ ಕಂಡಂತೆ । ಕಾಣಲ್ಕೆ ಬಾರಳಿದ್ದಾಯೆಡೆಯೊಳಿರ್ದ್ದಂತೆ । ವಿಷಯುವಿಷವಲ್ಲಿಯುಂ ಪೆರ್ಚ್ಚಿಸುವಜಳಧಾರೆ । ಸಾಧುತ್ವಮಂ ಕೆಡಿಸಿ ನಡೆಸುವ ದುರಾಚಾರೆ । ಕಪಟನಾಟಕತ

---

೫೫೧. ಕರ್ಮ್ಮಭ್ರಾಂತಿಯುಂ—ಕರ್ಮ್ಮದವಮನವನ್ನು ; ಮಾಳ್ಪಳ್—ಮಾಡುವಂಥಾ ; ಅಂದರೇ ತಾನು ಸೇರಿದ ಜನರಿಂದ ದುಷ್ಕೃತ್ಯವನ್ನು ಮಾಡಿಸುವವಳೆಂಬಭಿಪ್ರಾಯವು.

೫೫೨. ಗೋವಿಯುದನಿ—ಕೊಳಲಿನಶಬ್ದ

*[ಚಪಲಕಜ್ಜಳೋಚಿತಚಲಮಂ] †[ಯೋಲ್ಮಾಳ್ಪಳ್]

ತಿಗೆ ತಾನೆನೆಲೆಯೆನಿಸುವಳ್ । ಕೋಪಗ್ರಹಾವೇಶಜನ್ಮನಿಧಿ ಯೆನಿಸುವಳ್ । ಶಾಸ್ತ್ರದೃಷ್ಟಿಗೆ ತಿಮಿರಪಟಲತತಿ ಯೆನಿಸುವಳ್ । ದೋಷವೆಂಬಾಶೀವಿಷಕ್ಕೆ ಪ್ರತ್ನೆನಿಸುವಳ್ । ಚಿತ್ರಗತೆಯಾಗಿಯುಂ ನೋಡೆ ಸಂಚರಿಸುವಳ್ । ಕರುವಿಟ್ಟಿನ್ತಂ ನಿಲಿಸಲರಿದೆನಿಸಿ ಚಿದಱುವಳ್ । ಕಂಡರಿಸಿದೊಡಮಲ್ಲಿ ನಿಲಲಱಿಳೆನಿಸುವಳ್ । ಕೇಳ್ದೊಡಂ ತನ್ನ ಸನ್ಮುಖದಿನಿಷ್ಪ್ರದೆನಿಸುವಳ್ । ಬಲ್ದುಜಾನಿಸಿದೊಡಂ ತತ್ಕ್ಷಣದೆ ವಂಚಿಪಳ್ ॥ ೫೫೩

ವ॥ ಇಂತು ಚಂಚಳೆಯಪ್ಪ ಸಿರಿ ತವಗೆ ವಿಧಿವಶದಿ ನೆತ್ತಿಲಾನುವಪ್ಪುದುಂ ॥

ವೃ॥ ಮೊದಲೊಳ್ ರಾಜ್ಯಾಭಿಷೇಕಪ್ರಚಲಜಲವೆ ಕಚ್ಚಿರ್ತ್ತುದಾಕ್ಷಿಣ್ಯಮಂ ಪೋ । ಮದ ಧೂಮಂ ಚಿತ್ತದೊಳ್ ಪೊಕ್ಕನೆ ಮಲಿನತೆಯಂ ಪ್ರೋದ್ಧರಿಸಿತ್ತೊಪ್ಪಿರಲ್ಕ । ಛತ್ರದ ಪೆಟ್ಟಿಂ ಬರ್ಪ್ಪರಮುಪ್ಪಂ ಮುಚ್ಚಿಯಿಸಿತಧಿಕಸ್ತಾಂತಿಯುಂ ವಿಸ್ರಮರ್ಗಾ । ಸ್ವದದರ್ಭಾಸೀಕಸಂಮಾರ್ಜನಿ ಕಳೆದುದೆನಲ್ಕಪ್ಪರಪ್ಪರ್ನ್ನೃಪಾಲರ್ ॥ ೫೫೪

ಕಂ॥ ಪರಲೋಕಾಲೋಕನಮಂ । ಪರಿಹರಿಸಿದಿಪಲ್ತೆ ನೋಡಿಮೆಂಡಿಂಗಳುದಾ । ಪರಿಸುವ ತೇಜದಿಂ ಪಿಡಿಯಿಪ । ರರಸುಗಳ್ ಡೆವಿಡದೆ ಮೋಘಡಂಬರತತಿಯಂ ॥ ೫೫೫

ಪರೆವ್ಯಸನ್ಯಸ್ಥಗುಣಮಂ । ಬಿಡೆ ನಾಳ್ಗಡಿಗಳ್ ವತೆಬದೆ ನಡೆನಡೆಯೊಂಬ । ಪ್ರತಿದಿನಸ್ವಾರ್ಥಭಕ್ತಿಗಳಂ । ನುಡಿವವರಂ ಮಾಣಿಸಂದದಿಂ ಪಡಿಯೊಱರ್ ॥ ೫೫೬

---

೫೫೩. [illegible]—ತನ್ನ [illegible] ; [illegible]—[illegible] ಹೊಂದುವಾಗ್ಯೂ [illegible]—[illegible] ; ಕಂಡರಿಸಿದೊಡಂ—ಕೆತ್ತಲ್ಪಟ್ಟವಳಾದಾಗ್ಯೂ ; ಕೇಳ್ದೊಡಂ—ಪ್ರಸಿದ್ಧಳಾಗಿದ್ದಾಗ್ಯೂ.

೫೫೪. [illegible]—[illegible] ; [illegible]—[illegible] ; ವಿಸ್ರಮರ್ಗಾಸ್ವದ—[illegible] [illegible].

೫೫೬. ನಾಳ್ಗಡಿ—ದೇಶದವಲ್ಲೆಯುದೆಸೆಯಿಂದ ; [illegible]—[illegible] [illegible] ; [illegible]—[illegible]

ಕಂ॥ ಬಿಡೆಬಿಡಿಸುವಂತೆ ನೃಪರೊ। ಳ್ನುಡಿಯಂ ಬೀಸುವುದು ಚಾಮರಾವಳಿ ಜಸಮಂ॥ ತೊಡೆವಂತೆ ವೈಜಯಂತಿಗ। ಳೆಡವರಿಯದೆ ಮುಂದೆಮಿಳಿರ್ದು ಮೋಳಿಸಿತೋರ್ಕ್ಕರಂ॥ ಮತ್ತಂ— ೫೫೭

ಪಲತೆಱದ ವಿಷಯದತ್ತ। ಲ್ತಲೆವಟ್ಟಿರ್ದಿಂದ್ರಿಯಂಗಳೈದಾಗಿರ್ದುಂ। ಸಲೆಶತಸಹಸ್ರಸಂಖ್ಯೆಯಿ । ನಲೆಯದೆ ಮಾಣ್ದಪ್ಪವೆ ಮಾಯ್ದಸಿರಿಯುಳ್ಳವರಂ॥ ೫೫೮

ತನಗೆಡೆವಿಡದತಿಚಪಲಂ। ಮನಮದು ನೋಡೊಂದೆ ನೂಱುನೂರ್ಛಾಸಿರಮಾ॥ ಯ್ತೆನೆ ಬಿಡದೆ ಪಿಡಿದು ನೃಪರಂ। ಕನಲ್ಚಿ ತನ್ನಿಚ್ಚೆಗೊಯ್ವುದೊಂದಚ್ಚರಿಯೋ॥ ೫೫೯

ಪಿರಿದುಮಧರ್ಮದೆ ಗತಿಗೆಟ್ಟ। ರಸುಗಳಿಲೆ ಪೆಳವುಗೊಂಡರೆಂಬಂತೆ ವಲಂ॥ ಕರವಿಡಿದು ಸಾರ್ಚ್ಛುವೆತ್ತುವ। ತುರಿಪವೆ ಕಯ್ಗುಡುವುದಕ್ಕೆ ಲಜ್ಜಿಸರರೆಬರ॥ ೫೬೦

ಇರದೀಗಳ್ಸತ್ತಪರೆನಿ। ಪರವೊಲ್ನಂಟರುಮ ನರಿವರಲ್ಲ ಭೂರ್ಭುಪ। ರ್ಪಿರಿದುಂ ಕಣ್ಗಾಣವರಂ। ತಿರೆ ಕಾಣಲ್ಕಾಱರಲ್ತೆ ತೇಜಸ್ವಿಗಳಂ॥ ೫೬೧

*[ಪುಸಿನುಡಿಯ ವಿಷವಿಪಾಕದ]। ಮುಸಕವೆ ಮುಟರೋಗಮಾದ ಪೋಲಿನಿತಾನುಂ॥ ಬಸವಲ್ಲದುಸಿರ್ವರೆಂದುಂ। ಪೊಸಸಿರಿಯಿಂ ಮೈಮೆವೆತ್ತ ಮಾಯ್ದಮನುಷ್ಯರ್॥ ೫೬೨

---

೫೫೭. ಒಳ್ನುಡಿಯಂ—ಸತ್ಯವಾಕ್ಯವನ್ನು ; ಎಡವಱಿಯದೆ—ತಡೆಯಿಲ್ಲದೆ ; ಬಿಡೆಬಿಡಿಸುವಂತೆ—ಸಂಪೂರ್ಣವಾಗಿ ಬಿಡಿಸುವಂತೆ.

೫೫೮. ತಲೆವಟ್ಟಿರ್ದ—ಲಂಪಟವಾಗಿದ್ದ ; ಶತಸಹಸ್ರಸಂಖ್ಯೆಯಿಂ—ಲಕ್ಷಸಂಖ್ಯೆಯಿಂದ ; ಅಲೆಯದೆ—ಪೀಡಿಸದೆ ; ಮಾಯ್ದ—ಮತ್ತರಾದ.

೫೫೯. ನೋಡೆ—ಯೋಚಿಸಿದರೆ ; ತನಗೆ—ಅರಸಿಗೆ ; ಎಡೆವಿಡದೆ—ನಿರಂತರವಲ್ಲಿಯೂ ; ಅತಿಚಪಲಂ—ಅತಿಚಂಚಲವಾದ ; ಒಂದೆಮನಂ ನೂರು ನೂರ್ಛಾಸಿರಮಾಯ್ತೆಂದನ್ವಯವು. ಕನಲ್ಚಿ—ರೇಗಿಸಿ.

೫೬೧. ಎನಿಪರವೊಲ್—ಎನ್ನಿಕೊಳ್ಳುವವರಹಾಗೆ ; ಅಱರಲ್ತೆ—ಅಸಮರ್ಥರಲ್ಲವೆ.

*[ಪುಸಿಯನೆ ನುಡಿವವಿಪಾಕದ]

ಕಂ ॥ ಪ್ರೌಢಮದುಗ್ರರ ವತಿಕೋಪದೆ । ಪಿಡಿದುದು ಪುಲಿ ಗಾಳಿ ಸೋಂಕಿದತ್ತು ಪಿಶಾಚಂ ॥ ತೊಡರ್ದುದು ಭೂತಂ ಬನ್ನಂ । ಬಡಿಸಿದುದೆನೆ ಸಿರಿಯೊಳರಸುಗಳ್ಮೆಯ್ಯಱಿಯರ್ ॥ ೫೬೩

ಜನಪತಿಗ*[ಳ್ನೋಡಲ್ಕತಿ] । ಮನೋಹರಾಕೃತಿಗಳಾಗಿಯುಂ ನಾಡೆ ಜಗ ॥ ಜ್ಜನಸಂಕುಲಕ್ಕೆ ಪಿರಿದುಂ । ವಿನಾಶಹೇತುಗಳಕಾಲಫಲಕುಸುಮದವೊಲ್ ॥ ೫೬೪

ವ ॥ ಅನ್ತು ಗರ್ವಪರ್ವತಾರೂಢರಪ್ಪುರ್ವರಾಧೀಶ್ವರರ ಸರ್ವಸ್ವಮಂ ವಂಚಿಸಿ ಕೊಳಲೆಂದವರ್ಗಳ ಸಮೀಪದೊಳ ಗಾಮಿಷಕ್ಕೆಱಗುವ ಪರ್ದುಗಳುಮಾಸ್ಥಾನಮೆಂಬ ಕೊಳದೊಳಗೆ ಪಾರ್ವ ಬಕಂಗಳುಮೆನಿಪಂತಿರ್ದು ತಮ್ಮ ಕಜ್ಜಕ್ಕೆ ಕೆಲಧೂರ್ತರರಸುಗಳಂ ಪ್ರತಾರಿಸುತಿರ್ಪ್ಪರದೆಂತೆನೆ ॥ ೫೬೫

ಪಿರಿಯಕ್ಕರ ॥ ಗುರುವನಿದಿರಿಪುದೆ ನಿಜಪ್ರಭುತೆ ಜೂದು ವಿನೋದಂ ಕಳ್ಗುಡಿವುದೆ ವಿಲಾಸಂ । ಪಿರಿದುಬೇಂಟೆಯಾಡುವುದೆ ಶಕ್ತಿ ಗೆಹೇತು ಕುಲಪಥ ತ್ಯಾಗಮೆ ನಿರ್ವ್ಯಸನಂ ॥ ನೆರೆದು ಪರದಾರಮಂ ಕಲೆವುದೆ ಚತುರತ್ವಂ ಸೊಕ್ಕುವುದೆ ಬಂಟುತನ ವಸ್ತ್ಯ । ಪ್ಪರಿಭವಿಸಿದೊಡಂಜುವುದೆ ಸ್ಥೈರ ಗೆತರಳತೆಯ್ಕೆ ನೋಡುತ್ಸಾಹಮೆಂಬರ್ಧೂರ್ತರ್ ॥ ೫೬೬

ವ ॥ ಅಪ್ಪುದರಿಂ ಪಲವುಂದೋಷಗಳಂ ಗುಣಂಗಳಾಗೇಱಿಸಿ ತಮ್ಮಿಳ್ಕಬ್ಬೊಬ್ಬನಗುತ್ತುಂ ಪ್ರತಾರಣಕುಶಲರಪ್ಪ †[ವಂಚಕಾಕರ ಮಾನುಷೋಚಿತರಪ್ಪ] ಶ್ರೋಗಳ್ತಿಂ ಶ್ರೋಗಳಂತ್ತ ಮಿರಲನನಿತಥವೆಂದು ಬಗೆದು ಮಿಥ್ಯಾಮಹಾತ್ಮ್ಯಗರ್ವನಿರ್ಭರರಾಗಿ ॥ ೫೬೭

---

೫೬೩. ಗರ—ಗ್ರಹ; ಗಾಳಿ—ವಾಯು; ಪಿಶಾಚಂ—ರಾಕ್ಷಸ [illegible]; ಮೆಯ್ಯಱಿಯರ್—ಪ್ರಜ್ಞಾಶೂನ್ಯರಾಗಿರುವರು.

೫೬೬. ಇದಿರಿಪುದು—ಪ್ರತಿಭಟಿಸುವುದು; ಕಲೆವುದೆ—ಕೂಡುವುದೆ; ಬಂಟುತನ—ಶೌರ್ಯ; ತರಳತೆ—ಮನಶ್ಚಾಂಚಲ್ಯ.

೫೬೭. ಏಱಿಸಿ—ಆರೋಪಿಸಿ

*[ನುಡಿಯಲ್ಕಮ] †[[illegible]]

ವೃ ॥ ಮುನಿದೊಡೆ ಭಸ್ಮಮಾದಪ್ಪುದು ಲೋಕಮೆನಲ್ಕೆ ನೆಲೆಕೊಳ್ವಧಾ
ತ್ರೀಯಬಲೋ । ಜನ ಮೆಮಗುಂಟು ತೋಳಮಱೆಯಿಂದಮ ತೋಱಿಪ್ಪವಿ
ಲ್ಲೆನುತ್ತ ವಿಪ್ರಾ ॥ ಮನುಜರ ಗೆಯ್ತಮಂ ಬಿಸುಟು ದೇವರೆಮೆಂಬಭಿಮಾನ
ಮೋಱೆಮು । ದ್ಯೋನೆಗಳನೋಳ್ಪರಿಸ್ಕರದ ತೋಳ್ಗಳವೆಂಬವ್ರೋ ಉ
ರ್ವರೇಶ್ವರರ್ ॥ ೩೬೮

ಮೊದಲೊಳ್ತಮ್ಮನೆ ನೋಡಲಿತ್ತಪದದೊ ಳ್ಕೈಕೊಂಡವತ್ತಾರ್
ಮೆನೆನೋ । ಡಿದೊಡೋರಂತು ಪಕಾರಮಂ ಮೊಱೆದವಮ್ಮಾರ್ತಾಡಿದಂದ
ರ್ಧರಾ ॥ ಜ್ಯವ ಪೊಸಂ ದಯೆಗೆಯ್ದವ ಜ್ಞಾನಸಿದಂದಾಗ ಳ್ವರಂಗೊ
ಟ್ಟವ । ಪ್ಪದಪಿಂಮುಟ್ಟಿದುದ್ದಿ ರಕ್ಷಿಸಿದವ ಭೂರ್ಧ್ವಪದ್ಧರಾಜ
ಕ್ರದೊಳ್ ॥ ಅಂತುಮಲ್ಲದೆಯುಂ— ೩೬೯

ಕಂ ॥ ಗುರುಗಿದಿರೇೞ್ವರೆ, ಪ್ರೊಡವಡು ! ವರದೇವರನರ್ಚಿಸುವರೆ
ಪೂರ್ವರನರಿದಾ ॥ ದರಿಪರೆ ಮಾನ್ಯರ ಮನ್ನಿಸು । ವರೆ ಪ್ರೂ*[ಜ್ಯರ ಪಿರಿದೆ
ನಿಸುವಗರ್ವದೆಭೂಪರ್] ॥ ೩೭೦

---

೩೬೮. ತೋಳಮಱೆಯಿಂ—ಚರ್ಮದಮರೆಯಿಂದ ; ದೇವರೆಂ—ದೇವರಾಗಿದ್ದೇವೆ; ಇಲ್ಲಿದೇವರ್—ಎಂಬನಾಮ ನಾಚಕದಮೇಲೆ. ಏಮ—ಎಂಬಾಖ್ಯಾತ ಪ್ರತ್ಯಯ ಬಂದು ವಿಶೇಷಣವಾಗಿದೆ. ಶಮ. ಸೂ. ೨೧೯.

ಮುಯ್ಯ+ಜೊನೆ=ಮುಯ್ವೆನೆ—ಭುಜಾಗ್ರಸ್ಸ; ಇಲ್ಲಿ ಮಕಾರಕ್ಕೆ ವಕಾರಾದೇಶವು. ಶಮ. ಸೂ. ೬೦.

೩೬೯. ಮೊದಲೊಳ್—ಪ್ರಾರಂಭದಲ್ಲಿ; ತಮ್ಮನೆ ನೋಡಲ್—ತಮ್ಮ ದರ್ಶನಕ್ಕೆ; ಇತ್ತಪದದೊಳ್—ಅವಕಾಶವನ್ನು ಕೊಟ್ಟಮಾತ್ರದಿಂದ; ಕಯ್ಕೊಂಡವರ್—ಅನುಗ್ರಹಿಸಿದವರು; ಅಂದರೆ ಅರಸುಗಳು ತಮ್ಮದರ್ಶನವನ್ನು ಅನ್ಯರಿಗೆ ಕೊಟ್ಟಮಾತ್ರದಿಂದಲೆ ತಾವುದರ್ಶನಕ್ಕೆ ಬಂದವರಿಗೆ ಅನುಗ್ರಹ ಮಾಡಿದವರಂತಾದೆವೆಂದು ಭಾವಿಸುವರೆಂದಭಿಪ್ರಾಯವು; ತಾಮೆನೋಡಿದೊಡೆ ತಾವೇ ಮತ್ತೊಬ್ಬರನ್ನು ನೋಡಿದರೆ; ಉಪಕಾರವಂ ಮೊಱೆದವರ್ ಉಪಕಾರವನ್ನು ಮಾಡಿದವರಂತೆ ತಮ್ಮನ್ನು ತಾವುಭಾವಿಸಿಕೊಳ್ಳುವರು.

೩೭೦. ದೇವರಂ—ದೇವರಿಗೆ; ಪೊಡವಡುವರೆ—ನಮಸ್ಕಾರಮಾಡುತ್ತಾರೆಯೆ; ಮಾಡುವದಿಲ್ಲವೆಂದಭಿಪ್ರಾಯವು.

*[ಜಿಪರೆಸುಗರ್ವದಿಂದುರ್ವೀಶರ್]

ಕಲ್ಪ್ಪ ಮಱೆಯದಹೋರಾತ್ರಂ ಕ । ಯ್ಮಱೆದಿಲ್ಲದ ಗುಣಪನಂತೆ ಬೆಸದೇೞಿಸಿಪ್ರೊ (ೞ್ಕಱಿಸುತ್ತ) ವಿಪ್ರ್ಪಟಿಗೆ ಗ್ಗ ಅಗುವ ರಱವಿಲ್ಲದ ವನಿಪಾಲಜ್ಜಗದೊಳ್ ॥ ೫೭೧

ಅವರನೆ ಪೊರೆವ ಪ್ರೆಕ್ಷ್ಕಿನಪ । ರವರನೆ ಸಾರಿರಿಪ ರವರ ನವರೊ ಳ್ ನುಡಿ ನೋ । ಡಪಗಳ್ ನಂಟ ಕೆಯ್ಕಾಡುವ । ರವರೊಳ್ ಮನ್ನಿಪ್ರನು ಮವರ ನವರೊಳ್ ಕೂಟಂ ॥ ೫೭೨

ವ ॥ ಅಂತೆನಿಸಿದರಸುಮಕ್ಕಳ್ಗೆ ತ್ರಿನೃಶಂಸಮಪ್ಪ ಕೌಟಿಲ್ಯ ಶಾಸ್ತ್ರ ಪ್ರಮಾಣದಿ ನುಪದೇಶಮಂ ಮಾಳ್ಪನಿಪ್ರಣನೇ ಪರಮಪಂಡಿತನೆನಿಸುಗುಂ ಅಭಿಚಾರಕ್ರಿಯಾಕ್ರೂರಪ್ರಕೃತಿಯಪ್ಪ ಪುರೋಹಿತನೆ ಗುರುವೆನಿಸುಗುಂ ಪರದಾರಾಭಿಗಮನಮಂ ನಿಯೋಜಿಸುವ ದುಷ್ಟನೇ ವಿಶ್ವಾಸಭೂಮಿ ಯೆನಿಸಿದ ಮಿತ್ರನೆನಿಸುಗುಂ ಸ್ನೇಹಾರ್ದ್ರಹೃದಯ ರ್ನಿರ್ಮಲರುಮಪ್ಪ ಸಹೋದರರುಮಂ ನಿನಗಪ್ಪರ್ಗೆವರೆಂದವರ್ಗೆ ಭಂಗಮಂ ಮಾಡಿ ಕೆಳ್ಳು ಕಳೆಯಿಸುವ ಮಹಾಪಾತಕನೇ ಸಚಿವೋತ್ತಮನೆನಿಸುಗುಮಱಿಂತಪ್ಪ ದುಷ್ಟಚೇಷ್ಟಾಸಹಸ್ರ ದಾರುಣಮಪ್ಪ ರಾಜ್ಯತಂತ್ರದೊಳಿಂತಪ್ಪನುಂ ಮೋಹಿಸದಿರನದು ಕಾರಣದಿಂ ॥ ೫೭೩

ವೃ ॥ ಬೆಸನಂಗಳ್ಗೆ ಸುಖಿಕ್ಕೆಗೊಯಪ್ಪುವವದಱಿಂ ಲಕ್ಷ್ಮೀವಿಡಂಬಂ ವಿಡಂ । ಬಿಸದಂತಾಗಿರ ಮಾಪ್ಪರೆಲ್ಲತೆಱದಿಂದಂ ಪ್ರೋಕ್ಷ್ಯ ನಿಸ್ವಂಚಟೂ ॥ ರಿಸ

---

೫೭೧. ಕಲ್ಪ್ಪುಱಿದು—ಅಭ್ಯಾಸಿಸಿಪ್ಪ; ಪ್ರೋಕ್ಷ್ಯಱಿಸುತ್ತಂ—ಉಬ್ಬಿಸುತ್ತ; ವಿಪ್ರ್ಪ್ಪಗೆ—ವಿಟನಿಗೆ.

೫೭೨. ಅವರ—ಅಧಿಕ್ಷರಾದ ನೀಚರನ್ನು; ಸಾರಿರ್ಪರ್—ಸಮೀಪದಲ್ಲಿಟ್ಟು ಕೊಳ್ಳುವರು. ನೋಡು—ಆಲೋಚನೆ; ಅವರೊಳ್—ಅವರ ಸಂಗಡಲೆ; ಕೂಡುವರ್—ಸೇರಿಕೊಳ್ಳುವರು. ಕೂಟಂ—ಸ್ನೇಹವು.

೫೭೩. ಉಪದೇಶವನ್ನೆ—ಪದೇಶಮಾಡಕೂಡಿ; ಅಭಿಚಾರಕ್ರಿಯಾ—ಕೊಲ್ಲಲು ಮಾಡುವ ಕಾರ್ಯ; ಪರದಾರ—ಶತ್ರುಗಳ; ಕೆಳ್ಳು ಕಳೆಯಿಸುವ—ಅಧಿಕಾರದಿಂದ ತೆಗೆಯಿಸುವ.

೫೭೪. ತನುವ—ಉಂಟುಮಾಡುವ; ಇಚ್ಛೆಗೆ—ಅಭಿಲಾಷೆಗೆ; ಅಂದರೆ ವಿಷಯಾಭಿ

ಮಂತಾಗಿರೆ ಕಾಮಿನೀಸಂತತಿ ವಿಲಾಸಾಪಾಂಗದಿಂದಂ ಪ್ರತಾ। ರಿಸದಂತಾಗಿರೆ ಲಾತ್ರವಂತನೆನಿಸೆಂದುಂ ರಾಜವಿದ್ಯಾಧರಾ ॥ ೫೭೪

ವ॥ ಅದಲ್ಲದೆಯುಂ ಯುವರಾಜ್ಯಾಭಿಷೇಕಮುಂ ಕಯ್ಕೊಂಡು ಕುಲಕ್ರಮಾಗತ ರಾಜ್ಯಭಾರಧೌರೆಯನಾಗಿ ಸಕಲದಿಗ್ವಿಜಯೋದ್ಯೋಗಂಗೆಯ್ದು ಸಪ್ತದ್ವೀಪಾಲಂಕಾರೆಯಪ್ಪ ವಸುಂಧರೆಯ ನೇಕಚ್ಛತ್ರಮಪ್ಪಂತಿರಾಳ್ ॥ ೫೭೫

ಕಂ॥ ನಗವಂತುಜಗಂ ಗುರುಗಳ್ । ಪೊಗಳ್ವಂತನುಜೀವಿಗಳ್ಗೆ ಶುಭಮಪ್ಪಂತು । ಜ್ಜಿಗಮಾಗದಂತು ನಂಟ । ರ್ಗ್ಗಗಣಿತಗುಣನೆನಿಸಿ *[ನಿಲ್ವುದಾಕಲ್ಪಾಂತಂ] ॥ ೫೭೬

ವ॥ ಎಂದುನುಡಿದ ಶುಕನಾಸೋಪದೇಶ ವಚನಾಮೃತನಿಚಯದಿಂ ಪ್ರಕ್ಷಾಳಿತನಾದಂತೆಯುಂ ಕರ್ಗ್ದಿದಂತೆಯು ಮಲಂಕೃತನಾದಂತೆಯುಂ ಪವಿತ್ರೀಕೃತನಾದಂತೆಯು ಮತಿಪ್ರೀತಹೃದಯನಾಗಿ ಕಿಱಿದುಬೇಗಮಿರ್ದ್ದು ನಿಜಮಂದಿರಕ್ಕೆ ಚಂದ್ರಾಪೀಡಂ ಪೋಪ್ಪುದುಮಿತ್ತಲ್ ನೃಪಮುಹೂರ್ತ್ತರ್ ಮುನ್ನಮೆಸಮಕಟ್ಟಿದ ಮಣಿಕುಟ್ಟಿಮದ ನಟ್ಟನಡುವೆ ಪೊಳೆವ ಪಟ್ಟವಣೆಯ ನಾಲ್ದೆಸೆಯೊಳಸೆವ ರತ್ನಭೃಂಗಾರುಘಟಂಗಳಿಂ ಪಸುರ್ಪ್ಪೆಸೆವ ನಿಮಿರ್ದ್ದ ಜಾಗರಗಳಿಂ ತೊಳಗುವ ಮಣಿದರ್ಪಣಾಲಂಕೃತಂಗಳಪ್ಪ ಕಾಂಚನದ್ರೋಣಿಗಳಿಂ ಸುರಭಿ ಸಲಿಲ ಪರಿಮಳಕ್ಕೆಱಪ ಮುಱಿಮುಂಚಿಯ ಬಂಬಲಿಂ ನೀಲಾಂಬರದಿಂ ಬಾಸಣಿಸಿದಂತಿರ್ದ್ದ ಶಾತಕುಂಭ ಕಲಶಂಗಳನಭಿಷೇಕವಿಲಾಸಮಂ ನೋಡಲೆಂದಿಳಿತಂದ ವಿದ್ಯಾಧರವಿಳಾಸವತಿಯರೆನಿಪ ವಾರವಿಳಾಸಿನಿಯರಿಂ ಬಳಸಿದ ಗಾಯಕ ವಾದಕ ವಾಂಶಿಕ ವೈಣಿಕ ವೈತಾಳಿಕ ವಾಗ್ಮಿಕ ನಿಕಾಯದಿಂ ದೆಸೆವಭಿಷೇಕಮಂಟಪದೊಳ್ ಸಕಲ ರಾಜಲೋಕಮುಂ

ಲಾಷೆಗೆ ಎಂದಭಿಪ್ರಾಯವು ; ಚಟುಲಾರಿ ಸವಂತಾಗಿರೆ—ಮೋಸಮಾಡದಹಾಗೆ ; ಪ್ರತಾರಿಸದಂತಾಗಿರಲ್—ವಂಚನೆಮಾಡದಹಾಗೆ ;

೫೭೭. ಜಾಗರಂಗಳಿಂ—ಮಂಗಳಾರ್ಥವಾದ ಪೈರುಗಳಿಂದ ; ಬಾಸಣಿಸಿದಂತೆ—ಮುಚ್ಚಿದಂತೆ ;

*[ನಲ್ವಕಲ್ಪಾಯುವರಂ]

ಮಂತ್ರಿಮಂಡಳಮುಂ ಸಾಮಂತನಿಕಾಯಮುಂ ಮೌಹೂರ್ತಿಕ *[ಪ್ರಕರ
ಮುಂ ನೆಱೆದಿರೆ] ॥ ೫೭೭

ವೃ ॥ ತಾರಾಪೀಡಂ ನರೇಂದ್ರಪ್ರಕರಪರಿವೃತಂ ಯೌವರಾಜ್ಯಾಭಿ
ಷೇಕ । ಪ್ರಾರಂಭಪ್ರೀತಿಯಿಂದಿಟ್ಟವ ಬಳಿಗೆ ಮಗಂ ಬರ್ಪ್ಪುದಂ ಮಂಗಳ
ವ್ಯಾ । ಪಾರಂ ಪಾರ್ದಿರ್ಪ್ಪುದುಂ ತಂದೆಯ ಪದಯುಗಮಂ ಬಂದು ಕಂ
ಡಂ ಮನೋಜಾ । ಕಾರಂ ಮುಗ್ಧಾಂಗನಾಪೀವರಕುಚವಿಲಸತ್ತಾರಹಾರಂ
ಕುಮಾರಂ ॥ ೫೭೮

ವ ॥ ಅನ್ತು ಬಂದ ನಿಜನಂದನನಂ ಶುಭಲಗ್ನೋದಯದೊಳನೇ
ಕಮಂಗಳಭೇರೀ ಮೃದಂಗಪಟಹ ಪಟುರವಂಗಳೆಸೆಯೆ ನೃಪೇಂದ್ರಂ ಮ
ಜ್ಜನಪೀಠಮನಲಂಕರಿಸಿದಾಗಳ್ । ೫೭೯

ವೃ ॥ ನವರತ್ನವ್ರಾತ ಸರ್ವೌಷಧಿಫಲಮಿಳಿತಾಂಭೋಧಿತೀರ್ಥಾಪ
ಗಾವಾ । ರಿವಿರಾಜಚ್ಚಂದ್ರಕಾಂತೋಪಲಕಲಶಮನಂದೆತ್ತಿ ಭೂಪಾಲಕಂಠೀ
॥ ರವನಾನಂದಾಶ್ರುಧಾರಾತತಿ ನಿಮಿರ್ಪಿನೆಗಂ ಯೌವರಾಜ್ಯಾಭಿಷೇಕೋ ।
ತ್ಸವಮಂ ಪುತ್ರಂಗಮಾತ್ಯಪ್ರಕರಪರಿವೃತಂ ಮಾಡಿದಂ ಸಾರ್ವಭೌಮಂ ॥

ಕಂ ॥ ಮರದಿಂ ಮರಕ್ಕೆ ದಾಂಗುಡಿ । ವರಿವೆಳೆಲತೆಯಂತೆ ನೀತಿಮಾಂ
ಧಾತನೊಳಾ ॥ ವರಿಸಿದ್ಧ ರಾಜವಿದ್ಯಾ । ಧರನಲ್ಲಿಗೆ ರಾಜ್ಯಲಕ್ಷ್ಮಿ ನಿಲುಕಿದ
ಳಾಗಳ್ ॥ ೫೮೧

ವೃ ॥ ಪುದಿದೆಳೆಮಿಂಚುಗಳ್ಪೊಳೆದವೊಲ್ ಸುಲಿಪಲ್ಗಳ ಕಾಂತಿ ಪೊ
ಣ್ಮೆ ಪೂ । ಸಿದ ಸಿರಿಕಂಡ ಮುಜ್ಜಳಿಪ ಲೋಚನ ಮುಟ್ಟ ಸಿತಾಂಬರಂ ತು
ಱುಂ ॥ ಬಿದ ನವಮಾಲಿಕಾಕುಸುಮ ಪಿಕ್ಕಿದ ಮುತ್ತಿನಲಂಬಣಂ ತೊಡ ।
ರ್ಚ್ಚಿದ ಕುಸುಮಾವತಂಸಮಮರಲ್ಕೆಸೆದಂ ನೃಪರೂಪಚಂದ್ರಮಂ ॥

---

೫೮೧. ದಾಂಗುಡಿವರಿದ—ಹಬ್ಬಿದ ; ನಿಲುಕಿದಳ್—ಸೇರಿದಳು.

೫೮೨. ಸುಲಿಪಲ್ಗಳ—ನಿರ್ಮಲವಾದ ಹಲ್ಲುಗಳ ; ಪೂಸಿದ—ಲೇಪಿಸಿದ ;
ತುಱುಂಬಿದ—ಮುಡಿದ ; ಲಂಬಣಂ—ಹಾರ.

*[ಬೇರಸು]

ವೃ ॥ ಜನತಾಶಿರ್ಘ್ಲೋಷಮುಂ ಮಂಗಳಪಟುಪಟಹಾಟೋಪಮುಂ ವಿಪ್ರ ವೇದ । ಧ್ವನಿಯುಂ ಘೋರಿಂದು ಪ್ರೋಚ್ಚ್ರತ್ತಿರೆ ನಿಜಜನಕಾದೇಶದಿಂ ಬಂದು ಸಿಂಹಾ । ಸನದೊಳ್ಕುಳ್ಳಿರ್ದು ನಾನಂದಿತಗುರುನಿಕರಂ ತರ್ಪಿತಾಶೇಷವಿದ್ವ । ಜ್ಜನವತ್ಯುತ್ಸಾಹಿತೋರ್ವೀಭುವನಪತಿ ಸಭಾಂಭೋಜನೀರಾಜಹಂಸಂ ॥ ೫೨೩

ವ ॥ ಅಂತು ಕಿಱಿದುಂ ಬೇಗಮಿರ್ದ್ದ್ದು ದಿಗ್ವಿಜಯಪ್ರಯಾಣ ಸೂಚಕಮುಂ ಪರಿಕುಲಪ್ರಳಯಸಿವೇದಕಮುಂ ಮೆಸಿಸಿ । ೫೨೪

ವೃ ॥ ಪ್ರೊಡೆದತ್ತು ವರ್ರೆಯುಂ ಯುಗಾಂತದಸಿಡಿಲ್ಮೇಘಂ *[ತಟದ್ದಂಡ ದಿಂ । ಬಡಿದ] ತ್ತಾದಿವರಾಹ †[ಘೋಣಹತಿಯಿಂ] ಪಾತಾಳಗರ್ಭಂಸಿಡಿ ॥ ಲ್ಡೊಡೆದತ್ತಬ್ಧಿಯೊಳಿಂದು ಮಂದರನಗಂ ಬಿದ್ದಂತೆ ನಲ್ಲೋಕದೊ । ಳ್ಬಿಡ ದುಣ್ಮಿತ್ತು ಸುವರ್ಣ ಕೋಣಹತಿಯಿಂ ಪ್ರಸ್ಥಾನಭೇರೀರವಂ ॥ ೫೨೫

ವ ॥ ಅಂತಾತ್ರೈಲೋಕ್ಯಕ್ಷೋಭಕಾರಿಯಪ್ಪ ಭೇರೀರವಂ ಪ್ರೊಣ್ಮ ಲೊಡನೆ ॥ ೫೨೬

ಕಂ ॥ ದೆಸೆದೆಸೆಯೊಳ್ ಭೇರೀರವ । ಮೆಸೆಯುತ್ತಿರೆ ರತ್ನರಚಿತಸಿಂ ಹಾಸನದಿಂ ॥ ವಸುಧಾಧಿಪನೆಳ್ದಂರಿಪು । ವಸುಧಾಧಿಪತತಿಯ ಲಕ್ಷ್ಮಿಯೊಡ ನೇಳ್ವನೆಗಂ ॥ ೫೨೭

ವ॥ ಅಂತೇಳ್ವುದುವಾಗಳ್ಸರಭಸದಿಂ ದೊಡನೇಳ್ವ ರಾಜಲೋಕದ ಪರಸ್ಪರ ಸಂಘಟನದಿಂ ವಿಘಟಿತವಾಗಿ ದಿಗ್ವಿಜಯದೊಳಲ್ಲಸುವ ಮಂಗಳ ಲಾಜಾವರ್ಷದಂತೆ ಹಾರನಿಕರಂಗಳಿಂದುಚ್ಚಳಿಸುತ್ತ ಮಲ್ಲಗುವ ಮೌಕ್ತಿ ಕನಿಕಾಯದ ನಡುವೆ ॥ ೫೨೮

---

೫೨೩. ಉತ್ಸಾಹಿತ—ಸಂತೋಷಪಡಿಸಲ್ಪಟ್ಟ ; ಉರ್ವೀಭುವನ—ಭೂ ಲೋಕದ ; ಪತಿ—ನಾಯಕರಾದ ಅರಸುಗಳುಳ್ಳ.

೫೨೫. ಮೇಘಂ—ಪ್ರಳಯಕಾಲದ ಮೇಘವು ; ತಟಿದ್ದಂಡದಿಂ—ಮಿಂಚಿನ ಬ ದಂಡದಿಂದ ; ಬಡಿದತ್ತು—ಬಡಿಯಲ್ಪಟ್ಟಿತು.

೫೨೭. ರಿಪುವಸುಧಾಧಿಪತತಿಯ—ಶತ್ರುರಾಜಮಂಡಲಿಯ ; ಲಕ್ಷ್ಮಿ—ಲಕ್ಷ್ಮಿ ಯು ; ಪೇಳ್ವನೆಗಂ—ಏಳುತ್ತಿರಲು ; ಅಂದರೆ ಬಿಟ್ಟುಹೋಗುತ್ತಿರಲು ಎಂದಭಿಪ್ರಾಯವು.

*[ತಟಿದ್ದಂಡದಿಂ] †[ನೊಂದುಗಪಿಯಿಂ]

ವೃ॥ ಬಿಳಿಯ *[ಮುಗುಳ್ಗಳಂಸುರಿವ] ಕಲ್ಪಮಹೀರುಹಮಾಲೆ ಸುತ್ತಿ ಕ । ಣ್ಗೊಳಿಸುವ ಪಾರಿಜಾತಮೆನೆ ಸೀಕರಮುಣ್ಮುವ ದಿಗ್ಗಜವ್ರಜಂ । ಬಳಸಿದ ದಿವ್ಯದಂತಿಯೆನೆ ನೀರ್ವ್ವನಿಯಂ ಸುರಿವಂಬುದಾಳಿಮಂ । ಪಳಿಸಿದ ವೋಘಕಾಲಮೆನೆ ಕಣ್ಗೆಸೆದಂ ನೃಪರೂಪಚಂದ್ರಮಂ ॥ ೫೮೯

ವ॥ ಅನಂತರಂ ನಿಜಜನನೀಜನಕರ ಚರಣಕಮಲಂಗಳ್ಗೆ ಱಗಿ ಪರಮಾಶೀರ್ವ್ವಾದಂಗಳನಾಂತು ಪತ್ರಲೇಖಾ †[ಸಮಧ್ಯಾಸಿ] ತಾಂತರಾಸನೆಯುಮಂ ಪ್ರಸ್ಥಾನೋಚಿತಮಂಗಳಾಲಂಕಾರೆಯುಮಪ್ಪ ಪಿಡಿಯಂ ಚಂದ್ರಾಪೀಡನೇಱಿದಾಗಳ್ ॥ ೫೯೦

ಕಂ॥ ಮುಂದರದಿಂ ಕಡೆದಿಂಗಡ । ಲಿಂದುಣ್ಮಿದ ಸುಳಿಯಿದೆನೆ ದಶಾಸ್ಯನ ಕರದೊಳ್ ನಿಂದರಜತಾದ್ರಿಯೆನೆ ನೃಪ । ನಂದನಧವಳಾತಪತ್ರಮೆಸೆದತ್ತಾಗಳ್ ॥ ೫೯೧

ವ॥ ಅಂತು ಬಿಜಯಂಗೆಯ್ಯುತ್ತಮಿರೆ ರಾಜಮಂದಿರದ್ವಾರದಿಂ ಪೊಱಗೆ ॥ ೫೯೨

ವೃ॥ ಭುವನಾಧೀಶಪ್ರತಾಪಾನಲ ಬಹುಳಶಿಖಾಜಾಲವೋ ವೈರಿನಾಶೋ । ದ್ಭವ ಸರ್ವವ್ಯಾಪಿ ದಿಗ್ದಾಹವೊ ನೃಪವರನಾನಂದದಿಂ ಬರ್ಪ್ಪದೊಂದು । ತ್ಸವದಿಂ ಭೂಕಾಂತೆ ರಾಗಾತ್ಮಿಕೆಯೆಸಿಸಿದಳೋ ಪೇಳವೆಂಬಂತೆ ಭೂಭೃ । ನ್ನಿವಹವ್ಯಾಕೀರ್ಣನಾನಾಮಕುಟಮಣಿಗಣಜ್ಯೋತಿಪರ್ವಿರ್ದ್ದುದಾಗಳ್ । ೫೯೩

ವ॥ ಅನಂತರಂ ನರೇಂದ್ರನಂದನಪ್ರಕರಂ ಚಂದ್ರಾಪೀಡಂಗವಮಹಮಿಕೆಯಿಂ ಪ್ರಣಾಮಂಗಳಂ ಸಲಿಸಿರಲ್ । ೫೯೪

---

೫೯೦. ಪತ್ರಲೇಖಾ—ಪತ್ರಲೇಖೆಯೆಂಬ ಪರಿಚಾರಿಕೆಯಿಂದ; ಸಮಧ್ಯಾಸಿತ—ಅಧ್ಯಾಸಿಸಲ್ಪಟ್ಟ; ಅಂತರಾಸನೆಯುಂ—ಹಿಂಭಾಗದ ಪೀಠವುಳ್ಳ ; ಪಿಡಿಯುಂ—ಹೆಂಣಾನೆಯನ್ನು.

*[ಮುಗಿಲ್ಗಳಲ್ಪುಗುವ] †[ಸಮಾಧ್ಯಾಸಿ]

ಕಂ॥ ವಿನಯದಿನೆಱಗುವ ಭೂಪಾ। ಲನಿಕಾಯಚೂಡಾಮಣಿಪ್ರಭಾ
ಮಂಡಳ ಮಂ॥ ದಿನಮಂಡಲಸಮುದಯದಿಂ। ದೆಸೆಮಿರ್ಪ ಕೆಂಗದಿರ್ಗಳೆ
ಸಕಮಂ ಮಸುಳಿಸುಗುಂ॥ ೩೯೫

ವ॥ ಅಂತೆಱಗಿದ ನರಪತಿಸಹಸ್ರಮಂ ನಿಮ್ಮನಿಮ್ಮ ವಾಹನಂಗಳ
ನೇಱಿಮೆಂದು ಬೆಸಸಿ ಬಿಜಯಂಗೆಯ್ವಲ್ಲಿ ಪೆಱಗೆ ಢಕ್ಕಾರವದಿಂ ಬಧಿರಿತದಿ
ಗಂತರಾಳಮೆನಿಸಿ ಬರುತ್ತಂ॥ ೩೯೬

ವೃ॥ ಎಳಪಿಸಿಲಿಂದಲಂಕರಿಸಿ ಬಾಂದೊಱೆಯೊಳ್ಪೊನಲಿಂದಮೊಂದಿ
ಮಂ। ಡಳಿಸಿದ ಧಾರೆಯಿಂ ತೊಳಪ ಶೃಂಗದಿನೊಪ್ಪುವ ಮೇರುವಿಲ್ಲಿಬಂ॥
ದೆಳಸಿತೆನಲ್ಕೆ ಸಿಂದುರದ ಹಾರದ ಮಾಲೆಯ ಕಾಂತಿ ತಳ್ತು ವ। ಜ್ಜಳಿ
ಸುವ ಕುಂಭಮಂ ತಳೆದು ಪಿಂತೆಸೆದಿರ್ಪುದು ಗಂಧಸಿಂಧುರಂ॥ ೩೯೭

ಅದಲ್ಲದೆಯುಂ॥

ಕಂ॥ ತೊಳಗುವ ರತ್ನಾಭರಣಂ। ಗಳ ರುಚಿ ನಿಜರೋಮಕಾಂತಿ
ಯೊಳ್ತಳ್ತು ತೆಱಂ॥ ಬೊಳೆಯಲ್ಕಿಂದ್ರಾಯುಧಮೇಂ। ಪೊಳೆವುದೊ ನೃಪ
ಸುತನ ಮುಂದೆ ತೆಗೆದುಬರುತ್ತಂ॥ ೩೯೮

ವ॥ ಆನಂತರಮೆರಡನೆಯ ಯುವರಾಜನಂತೆ ಪಿಡಿಯನೇಱಿ ಬಲಗೆ
ಲದೊಳಿರ್ದ ವೈಶಂಪಾಯನಂ ನಾಲ್ದೆಸೆಯೊಳಂ ಮದಗಜಾರೂಢರಾಗಿ ಪ
ರಿವೇಷ್ಟಿಸಿರ್ದ ನರಪತಿಸಹಸ್ರಂಬೆರಸು ನೃಪರೂಪಚಂದ್ರಂ ಚಂದ್ರಾಪೀ
ಡದೇವಂ ಪಿಡಿಯನೇಱಿ ಇಂದ್ರದಿಶಾಭಿಮುಖನಾಗೆ॥ ೩೯೯

---

೩೯೫. ಸಮುದಯದಿಂದೆ—ಉದಯದಿಂದ ; ಕೆಂಗದಿರ್ಗಳ—ಕೆಂಪುಕಿರಣಗಳ ; ಎಸಕಮಂ—ಪ್ರಕಾಶವನ್ನು ; ಮಸುಳಿಸುಗುಂ—ತಿರಸ್ಕರಿಸುವವು.

೩೯೭. ಅಲಂಕರಿಸಿ—ಅಲಂಕರಿಸಲ್ಪಟ್ಟು ; ಮಂಡಳಿಸಿದ—ಸುತ್ತಿಕೊಂಡಿರುವ ; ಧಾರೆಯಿಂ—ಜಲಧಾರೆಯಿಂದ ; ಸಿಂದುರದ—ಚಂದ್ರದ ; ಹಾರದ—ಮುಕ್ತಾಹಾರದ ; ಮಾಲೆಯ—ಪುಷ್ಪಮಾಲಿಕೆಯ.

೩೯೮. ತೆಱಂಬೊಳೆಯಲ್ಕೆ—ವಿಚಿತ್ರವಾಗಿ ಹೊಳೆಯುತ್ತಿರಲು ; ತೆಗೆದು—ಎಳೆಯಲ್ಪಟ್ಟು.

೩೯೯. ವೈಶಂಪಾಯನಂ—ಮತ್ತು ನರಪತಿಸಹಸ್ರಂ ; ಬೆರಸುಎಂದನ್ವಯವು.

ಕಂ ಎಡೆವಿಡದೆ ನೂಂಕಿ ಗಜಘಟೆ । ನಡೆಯಲ್ಕೆಲೆಸೆದು ಪಾಂತಬಿ
ಳಿಗ್ಗಡೆಗಳ್ಸೆ ಗ್ಗಡಲ ತೆರೆವುಜುಗಲೊಳಗ್ಗ । ವ್ಯರ್ಕ್ಕಡಿಯೆನೆ ವಮಾತ್ರೆರ್
ಳಗು ವಿಂದುವೆಂಡಲ ತತಿವ್ರೋಲ್ ॥ ಮತ್ತಂ— ೬೦೦

ವೃ॥ ತುರಗವುಯುಂ ನೆಲಂ ಚಮರಜಾಲಮುಯಂ ದಿನಮಾತಪತ್ರ
ಪೞಂ । ದುರಮುಯ ಮಂತರಿಕ್ಷಮಿಭಯುಾಥಮುಯಂ ದೆಸೆ ಸೃಷ್ಟಿ ಭೂ
ತಳೀ । ಶ್ವರಮುಯ ಮಾತಪಂ ಮಣಿಕಿರೀಟಮುಮಂ ಭುವನತ್ರಯಂ
ಜಯ । ಸ್ವರಮುಯ ಮಂಬರಂ ಧ್ವಜಮುಯಂ ಮದಗಂಧಮುಯಂ ಸವಿಾ
ರಣಂ ॥ ೬೦೧

ವ ಅಗಳಾನರೇಂದ್ರ ನಂದನನ ಮುಂದೆ ಪರಿವ ಪಲತೆಱದ ಪಡೆ
ಯ ಬಹುಳಕೋಲಾಹಲಂಗಳುಂ ಎಡೆಯೆಡೆಯೊಳೆಸೆವ ಬಹುವಿಧಕಹ
ಳಾರವಂಗಳುಂ ತಮ್ಮನೆಳಲ್ಗೆ ತಾವೆ ಪೆಳಱು ಬೆಚ್ಚಿರ್ಚ ಪೊಳೆದುಚ್ಚಳಿಸುವ
ತುರಂಗಮಂಗಳ ಹೇಷಾರವಂಗಳುಂ ಕುಲಪರ್ವತಂಗಳೆನಿಪ ಗಜಂಗಳ
ಬೃಂಹಿತಂಗಳುಂ ಗತಿವಶದಿ ನರ್ತ್ತಿಪ ಘೋಷಣಾಯಮಾನ ಘಂಟಾರವಂಗ
ಳುಂ ಜಯಘಂಟಾರವಸಂಮಿಳಿತಘಕ್ಕಾರವಂಗಳುಂ ಪಂಚವಾದ್ಯಾನುಕಾರಿ
ಕಂಠರವಸಂವರ್ಧಿತ ಪ್ರಯಾಣಪಟಹರವಂಗಳು ಮೊಂದೊಂದಱೊಳ್ತಳ್ತು
ಸಕಲಭುವನಮುಂ ಶಬ್ದಾತ್ಮಕಮಾದಂತಿರ್ದುವಾಗಳ್ । ೬೦೨

‡ವೃ॥ ಒಂದೆಡೆ ಜೀರ್ಣವಿಮಾನತನುಭೂಮ್ರ ಮದೊಂದೆಡೆ ರಲ್ಲಕಾ
ಭಮುಂ । ತೊಂದೆಡೆ ಯುಾರ್ಣತಂತುಪರಿಪಾಂಡುರ ಮುಷ್ಪ್ರಸಟಾವಭಾಸಿ
ಮೇ । ಸೊಂದೆಡೆ ಮತ್ತಮೊಂದೆಡೆ ಜರತ್ಕಪಿಕೇಸರ ಜಾಲಪಿಂಗ ಮಾ।
ಗಂದೊರೆದತ್ತನೇಕವಿಧವರ್ಣಧರಾತಳರೇಣುಸಂಚಯಂ ಮತ್ತಂ ೬೦೩

‡ಕಂ॥ ಕ್ಷೀರೋದಫೇನಮಾಲಾ । ಗೌರಕ್ಷಿತಿರೇಣುಗಣದಿ ಸಿತಿಮಂಬ
ರಮೇಂ । ರಾರಾಜಿಸಿದುದೆಂ ವಿಕಸಿತ । ಕೈರವವನಮಂತಿರಿಕ್ಷಿಸಗ್ಗರದಾ
ಗಳ್ ॥ ೬೦೪

೬೦೦ ವಮಾತ್ರೆರ್ಗಳಗುವ—ಪ್ರತಿಬಿಂಬಿಸಿ ತೋರ್ಪುದು.

* ಈ ಗುರುತು ಹಾಕಿರುವ ಪದ್ಯಗಳು ಪ್ರತಿಯಲ್ಲಿಲ್ಲದೆ ಕಥಾಸಂದರ್ಭ ಕೆಟ್ಟಿದ್ದ ಕಾರಣ,
ಶ್ರೀಮದ್ಭಾಗವತದ ಅನ್ಯಾನ್ಯ ಕವಿಗಳಿಂದ ಬರೆದ ಪುಸ್ತಕಗಳಿಂದ ಆರಿಸಲ್ಪಟ್ಟು
ಇಲ್ಲಿ ಸೇರಿಸಲ್ಪಟ್ಟಿರುತ್ತವೆ.

§ವ॥ ಇಂತೊಗೆದುಪರೆದ ಪಾಂಸುಪಟಲಂ ಕರಿಕರಾಗ್ರಶೀಕರಾಸಾರ
ದೊಳ್ ಮೊಸರ್ವದಾನಧಾರೆಯೊಳ್ ಮೊಕ್ಕಕುದುರೆಗಳ ಲಾಲಾಜಲಜಾಲ
ಕದೊಳಂ ಪರಿಪಡಲೊಡಂ ಕಡಲನಡುವಿಂ ದೊಗೆತಂದಂತಿರಳವಿಗಳಿದ ದಳ
ಮ ನವಲೋಕಿಸಿ ವಿಸ್ಮಯಂಬೆತ್ತು ವೈಶಂಪಾಯನಂ ಚಂದ್ರಾಪೀಡಂಗಿಂ
ತೆಂದಂ ॥ ೬೦೫

§ಕಂ॥ ಆಡಲದೇಂ ನರಪತಿಕುಲ । ಚೂಡಾಮಣಿಯೆನೆ ನೆಗಳ್ತೆವೆರ
ಸಿದ ತಾರಾ ॥ ಪೀಡಂ ನೀಡುಂ ಜೈಸದ । ನಾಡೊಳವೆ ಅದಾವನಾಡ ಗೆಲ
ಲಾಟಿಸುವಯ್ ॥ ೬೦೬

§ವೃ॥ ಮಣಿಯುದ ಮಾನವಾಧಿಪರದಾರ್ತ್ತಲೆಬೊಳ್ತ್ತಳೆದಬ್ಜಕುಟ್ಮಲ।
ಕ್ಕೆಣೆಯೆನೆ ರಂಜಿಪಂಜಲಿಯ ಸೇವಿಸದಿರ್ಪ್ಪರಸರ್ಕಳಾರ್ ಪಿಜಾ ॥ ಮಣಿಗ
ಣಮುಂ ತ್ವದಂಘ್ರಿಯುಗಪೀಠದೆ ಸಾಣೆಯನಿಕ್ಕದಿರ್ದ್ದಧಾ । ರಿಣಿಯೊರೆಯು
ರ್ಕ್ಕಳಾರೊಳರಿಳಾತಳದೊಳ್ ಯುವರಾಜಶೇಖರಾ ॥ ೬೦೭

§ಕಂ॥ ಉಸಿರಲ್ಕರಿದೆನೆ ಪತ್ತುಂ । ದೆಸೆಗಳ ನಾವರಿಸಿ ಮಸಗುಮೀ
ನೃಪಸೇನಾ ॥ ಪ್ರಸರಂ ತಳ್ತೀಲಗಿಸುಗು । ಮೆಸಕಂಮಿಗೆ ನಿನ್ನ ನವನಿಪಾಲ
ಲಲಾಮಾ ॥ ೬೦೮

§ಕುಲಶೈಲಸಂಧಿಬಂಧಂ । ಕಳಚಮುಮಂ ಸೈನ್ಯಭರದಿನಿಳಿವಳೆದಾ
ಕುಂ ॥ ಡಲಿಪನ ವಿಪುಲ ಫಣಾಮುಂ । ಡಲಿ ಬಿರಿಯುಮುಮಂ ಸಮಂತುಚಿತ್ರ
ಮಿದಲ್ತೇ ॥ ೬೦೯

§ಬಲಭರಸಂಕ್ಷೋಭಭಯಂ । ದಳೆವಂಬರಕೊಗೆವ ನವಿಗಳೆನೆ ನಿಬಿ
ಲದಿಶಾ ॥ ಕುಲವುಂ ಬಾಸಣಿಸುಗು ಮು । ತ್ಪಲಭಾಂಧವ ಧವಳವೆನಿಸಿದೀ
ಧ್ವಜಪಟಲಂ ॥ ೬೧೦

§ವ॥ ಇಂತುಸಿರ್ದುದನಾಲಿಸುತ್ತಮೆ ಸಮುಚ್ಛ್ರಿತತೋರಣಮುಮ
ನೇಕಪಟಮಂಟಪೋಪಶೋಭಿತಮುಮಪ್ಪ ನಿವಾಸಭೂಮಿಯಂ ಪೊಕ್ಕರ
ಸುಗಜ್ಜಮಂ ತೀರ್ಚ್ಚಿ ಪಿತೃವಿಯೋಗಖಿನ್ನಮಾನಸಂ ಚಂದ್ರಾಪೀಡನಮಾತ್ಯ

೬೦೫. ಪರಿಪಡಲ್—ಬೀಳಲು ; ಅಳವಿಗಳಿದ—ಅಪರಮಿತವಾದ.

ನರಪತಿಗಳ್ವೆರಸು ಬಿನದಂಮಿಗೆ ಪಗಲಂಕಳೆದಾಯಿರುಳೆಡೆವಟ್ಟಿರ್ದ್ದ ವೈಶಂಪಾಯನನೊಳಂಪತ್ರಲೇಖೆಯೊಳಂ ಜನನೀಜನಕರ ಸಂಬಂಧಿಯುಮಪ್ಪಾಲಾಪಂಗೆಯ್ಯುತ್ತಮಿರ್ದ್ದ ಕಿಱಿದುಂನಿದ್ರೆಗೆಯ್ದು ಬೆಳಗಪ್ಪುದುಮೇಳ್ದು ॥ ೬೧೧

ವೃ॥ ಧರೆಯುಂ ಪೊಳ್ಮೊಗಿಸುತ್ತಂ ನಡುಗಿಸುತಮಗವ್ರಾತಮುಂ ತುಳ್ಕಿಸುತ್ತಂ । ತೊರೆಯುಂ ದುರ್ಗ್ಗಂಗಳಂ ಪಾಳ್ಗೊಳಿಸುತ ಮಟವೀವ್ರಾತಮಂ ಚೂರ್ಣಿಸುತ್ತಂ ॥ ನೆರಪುತ್ತಂ ನಿಮ್ನಮುಂನಿಮ್ನಮತೆಮರನೊಡರ್ಚ್ಚುತ್ತಮಾತ್ಮೀಯಸೈನ್ಯೋ । ತ್ಕರದಿಂದಂ ರಾಜವರ್ಗ್ಗಂ ಬೆರಸಿರೆ ಪೊರಮಟ್ಟಂ ಮಹೀಭೃನ್ಮಹೇಂದ್ರಂ ॥ ೬೧೨

ದುರುಳರನೊಕ್ಕಲಿಕ್ಕಿ ಮಣಿಪ್ರೋಕ್ಕರ ರಕ್ಷಿಸಿ ದೇಶದೇಶದೊ । ಳರಗುವರಗ್ಗೊರ್ಗ್ಗಡರ್ಚ್ಚಿ ನೃಪಪಟ್ಟವನಾರ್ಜ್ಜಿಸಿ ರತ್ನರಾಶಿಯುಂ ॥ ನಿರವಿಸಿ ನಾಡನೇಳ್ಪ್ಪ ನಿಜಮುದ್ರೆಯನೇರಿಸಿ ಶಾಸನಂಗಳಂ । ಬರಸಿ ಬುಧರ್ಗ್ಗೆ ಬಿತ್ತರಿಸಿದಂ ಜಸಮುಂ ಯುವರಾಜಚಂದ್ರಮಂ ॥ ೬೧೩

ವೃ॥ [ನೆಲನೆಲ್ಲಂಬಲವಂದು ಗೆಲ್ದಖಿಲ ಧಾತ್ರೀನಾಥರಂ ತನ್ನದೋ । ರ್ಬ್ಬಲದಿಂ ಪೂರ್ವಸಮುದ್ರತೀರದೆ ನಿವಾಸಂಗೆಯ್ದರಂ ವ್ಯಾಧರಂ] ॥ ಪಲರಂ ಪೊಂದಿಸಿ ತತ್ಸುವರ್ಣಪುರಮಂ ಕೈಲಾಸಶೈಲಾಂತರ । ಸ್ಥಲದೊಳ್ ಶೋಭಿಸುತಿರ್ಪ್ಪುದಂ ನೃಪಸುತಂ ಕೈಕೊಂಡನುತ್ಸಾಹದಿಂ ॥ ೬೧೪

ಕಂ॥ ಜಲನಿಧಿಪರಿವೃತಧಾತ್ರೀ । ತಲಮುಂ ಬಲವಂದು ಪಿರಿದುಮಾಸತ್ತಬಲಂ ॥ ನಿಲವೇಳ್ಕುಮೆಂದು ನೃಪಕುಲ । ಲಲಾಮನಂತಲ್ಲಿ ಪಲವುದಿವಸಮುಮಿರ್ದ್ದಂ ॥ ೬೧೫

---

೬೧೧. ಸಮುತ್ಕ್ರಾಂತ—ಮೇಲಕ್ಕೆ ಎತ್ತಿ ಕಟ್ಟಲ್ಪಟ್ಟ; ಅರಸುಗಜ್ಜಮುಂ—ರಾಜಕಾರ್ಯವನ್ನು: ಎಡೆವಟ್ಟಿರ್ದ್ದ—ಸಮೀಪದಲ್ಲಿದ್ದ.

೬೧೨. ನಿಮ್ನಮುಂ—ತಗ್ಗನ್ನು; ನೆರಪುತ್ತಂ—ತುಂಬುತ್ತ; ತೆಮರಂ—ತಿಟ್ಟನ್ನು; ನಿಮ್ನಮನೊಡರ್ಚುತ್ತಂ—ತಗ್ಗನ್ನಾಗಿ ಮಾಡುತ್ತ.

೬೧೩. ನಾಡನೇಳ್ಪ್ಪ—ದೇಶಕ್ಷೋಭವನ್ನು; ನಿರವಿಸಿ—ಒಟ್ಟುಮಾಡಿ.

೬೧೫. ಆಸತ್ತ—ಆಯಾಸಪಟ್ಟ; ಪಲವುದಿವಸಮುಂ—ಅನೇಕದಿವಸಗಳಲ್ಲಿ; ಇರ್ದ್ದಂ—ವಾಸಮಾಡಿದನು; ಪಲವುದಿವಸಮುಂ ಎಂಬಲ್ಲಿ ಕಾಲಾರ್ಥಕವಾದ ದಿವಸ ಶಬ್ದದಮೇಲೆ ದ್ವಿತೀಯಾ ವಿಭಕ್ತಿ ಬಂದಿದೆ. ಶಮ. ಸೂ. ೧೭೮.

ವ॥ ಅಂತಿರುತ್ತಮಿರೊಂದು ದಿವಸಂ ಯುವರಾಜನಿಂದ್ರಾಯುಧಮ
ನೇಱಿ ಬೇಂಟೆಯವಿನೋದದಿಂ ತೊೞಲುತ್ತಮಿರ್ಪಿರೆ ॥ ೬೧೬

ಕಂ॥ ಪಿರಿದಪ್ಪಾಶ್ಚರ್ಯಪರಂ । ಪಱಿಸಮಿಸಿಸಲದ್ರಿಶಿಖರದಿಂದಿೞಿದಾ
ಡು॥ತ್ತಿರೆಯಿರೆ ನಿಜೇಚ್ಛೆಯಿಂ ಕಿ । ನ್ನರಮಿಥುನಮ ನವನಿಪಾಲತನಯಂ
ಕಂಡಂ ॥ ೬೧೭

ವ॥ ಆಗಳ್ ಸಮುಪಜಾತಕುತೂಹಲಂ ವಿಸ್ಮಯಕ್ಷಿಪ್ತಚಿತ್ತನಾಗಿ.

ಕಂ॥ ಜಗದೊಳಗಪೂರ್ವಮೆಂಬೀ । ಬಗೆಯಿಂ ತಾಂಪಿಡಿವ ತವಕದಿಂ
ಭೋಂಕನೆ ಬಂ । ದಗಣಿತಜವನಂ ಕಿನ್ನರ । ಯುಗವಸವಿಾಪಕ್ಕೆ ಬಿಟ್ಟ
ನಿಂದ್ರಾಯುಧಮಂ ॥ ೬೧೮

ವ॥ ಆಗಳತ್ತಮೆಮ್ಮಡೆಗೆಯ್ತರ್ಪುದಂ ಕಂಡದೃಷ್ಟಪೂರ್ವಮಪ್ಪ
ದಱಿಂ ಕಿನ್ನರದ್ವಯಮತಿಭೀತಿಯಿಂ ಪಱಿಯೆ ॥ ೬೧೯

ವೃ॥ ಪಿಡಿದಪನೀಗಳಾ ಪಿಡಿಯಲಿರ್ದಪನಾ ಪಿಡಿದಪ್ಪನೀಗಳಾ । ಪಿಡಿ
ದನೆ ಕಿನ್ನರದ್ವಯಮನೆಂಬಿನೆಗಂ ಬಳಸಂದು ತನ್ನ ಸಂ । ಗಡದವರುಂ ಪರಿ
ಗ್ರಹಮುಮೆಯ್ತರಲಾಱದೆ ಪಿಂದೆ ನಿಲ್ವಿನಂ । ಕಡುಪಿನೊಳಂದು ಬಿಟ್ಟನತಿ
ಶೀಘ್ರಮೆ ವಾಜಿಯನಾನೃಪೋತ್ತಮಂ ॥ ೬೨೦

ಮಡವಲಿನೂಂಕೆ ವಾಜಿ *[ಗರುಡಂಗಮದಿರ್ಮ್ಮಡಿ] ವಾಯುವಿಂಗೆ
ಮೂ । ರ್ಮ್ಮಡಿಯೆನಿಪ್ಪೊಂದು ತನ್ನ ಜವದಿಂ ಪರಿಯಲ್ಕೆ ಮುಹೂರ್ತಮಾ

---

೬೧೮. ಬಗೆಯಿಂ—ಅಭಿಪ್ರಾಯದಿಂದ ; ಭೋಂಕನೆಬಂದು—ವೇಗಬಂದು ;

೬೨೦. ಪಿಡಿದಪನೀಗಳ್—ಅದೊ ಈಗ ಹಿಡಿಯುತ್ತಾನೆ ; ಕಿನ್ನರದ್ವಯಂ—
ಕಿನ್ನರಮಿಥುನವನ್ನು ; ಪಿಡಿದನೆ—ಹಿಡಿದಂಥವನೆ ; ಎಂಬಿನೆಗಂ—ಎನ್ನುತ್ತಿರಲು ; ಪರಿ
ಗ್ರಹಮುಂ—ಪರಿಜನವೂ ; ಪಿಂದೆನಿಲ್ವಿನಂ—ಹಿಂದೆನಿಲ್ಲುತ್ತಿರಲು ; ಕಡುಪಿನೊಳ್—
ಶಕ್ತಿಯಿಂದ.

೬೨೧. ಮಡವಲಿ—ಕಾಲಿನಿಂದ ; ಮೂರ್ಮ್ಮಡಿ ಎಂಬಲ್ಲಿ ಮೂಱುಶಬ್ದದ
ಱಕಾರಕ್ಕೆ ರೇಫಾದೇಶವು. ಶಶಾ. ಸೂ. ೩೫೨.

*[ಗರುಡಂಗೆಪದಿರ್ಮ್ಮಡಿ]

ತ್ರದೊಳ್ ‖ ಗಡಪಡಿಸೈದುಯೋಜನಮನೊರ್ವನೆ ಸಂದಿಸಿ ಪೋದನಂದು ಪೇ। ರಡವಿಯೊಳಾತುರಂಗಮದನರ್ಕಳ ಬೆಂಬಳಿಯುಂ ಮಹೀಭುಜಂ ೬೨೧

ಕಂ॥ ಛಲದಿಂಪರಿಸಂ ತಾಂ ಬೆ। ನ್ನೊಳೆ ಪರಿದೆಳ್ಬಟ್ಟೆ ಪಿಡಿಯಲನುಗೆಯ್ವುದು ಮ ‖ ಸ್ಖಲಿತಂ ಮುಂದಣತಾರಾ। ಚಲಶಿಖರಮ ನೇಱದತ್ತು ಕಿನ್ನರಮಿಥುನಂ ‖ ೬೨೨

ವೃ॥ ಏಕೆ ನಿರರ್ಥಕಂ ಮಗುವಿನಂದದೆ ಕೋಟಲೆಗೊಂಡೆ ನಕ್ಕಟಂ। ತೇಕೆಯೊ ಕಿನ್ನರದ್ವಯದ ಬೆಂಬಳಿಯಂ ತಗುಳುತ್ತೆ ಬಂದೆ ನಿಂ ‖ ತೇಕೆಯೊ ಮೂರ್ಖನಂತೆ ಮತಿಗೆಟ್ಟೆನಿದಂ ಪಿಡಿದಲ್ಲಿ ಬಪ್ಪುದೇಂ। ವ್ಯಾಕುಲನಾಗುತಂ ಪಿರಿಯದಿರ್ದ್ದೊಡೆ ಪೇಳ್ಕಡುಪೊಂದುವಸ್ತುವೇಂ ‖ ೬೨೩

ಏನಾನೊಂದನೆ ಮಾಡಿದೆಂ ಮಗುವಿನಂತೇನಾನುಮೊಂದಕ್ಕೆ ಪೇ। ಳೇನೋಕೌತುಕದಿಂದ ಬಂದೆನೆನಗೀ ದುರ್ಮೋಹದುದ್ಯೋಗಮಿಂ। ತೇನಾನೊಂದ ನೊಡಚ್ಚಿರ್ತಿಂತಿದೆನುತಂ ತದ್ವೇಗದಿಂ ವಿಸ್ಮಯ। ಧ್ಯಾನಾಧೀನಮನಸ್ಕನೊಂದಿನಿಸುಬೇಗಂ ನಿಂದನುರ್ವೀಶ್ವರಂ ‖ ಅಂತುನಿಂದು. ೬೨೪

ಕಂ॥ ಪಿರಿದುಜವಮುಳ್ಳುದಜೀನಿ। ಹರಿ ನಿಮಿಷಕೆಪಿರಿದುವರಿಗು ಮನಿತಜೊಳೆನಿತಂ ‖ ತರಮನೆಡೆವರಿಗುಮೋ ಚಕೆ। ಚ್ಚರದಿಂ ಬಳಸಂದು ಮುಱುಗಿ ಬಪ್ಪೆನಬಲಾ ‖ ಎಂದುಮತ್ತಂ. ೬೨೫

---

೬೨೨. ಬೆನ್ನೊಳೆ—ಹಿಂದೆ; ಪರಿದು—ಓಡಿ; ಎಳ್ಬಟ್ಟೆ—ಅನುಸರಿಸಿ;

೬೨೩. ಕೋಟಲೆಗೊಂಡೆಂ—ಆಯಾಸಪಟ್ಟೆನು; ತಗುಳುತ್ತೆ—ಅನುಸರಿಸಿಬಡುತ್ತ ಮೂರ್ಖನಂತೆ ಇಂತು ಏಕೆ ಮತಿಗೆಟ್ಟೆನೊ ಅಂದರೆನಾನು ಮೂರ್ಖನಂತೆ ಹೀಗೆ ಯಾತಕ್ಕೆ ಬುದ್ಧಿಹೀನನಾದೆನು ಎಂದಭಿಪ್ರಾಯವು. ಇದಂ—ಈಕಿನ್ನರಮಿಥುನವನ್ನು ಪಿಡಿದಲ್ಲಿ—ಹಿಡಿದರೆ.

೬೨೪. ಮಗುವಿನಂತೆ—ಹುಡುಗನಹಾಗೆ; ಏನಾನೊಂದನೆ—ಯಾವದೋಒಂದನ್ನು ಮಾಡಿದೆಂ—ಮಾಡಿದೆನು. ಆಲೋಚಿಸದೆಯೇ ಮಾಡಿದೆನೆಂದರ್ಥ. ಏನಾನುಮೊಂದಕ್ಕೆ—ಯಾವದೋ ಒಂದು ಕೆಲಸಕ್ಕೆ; ಏನೋಕೌತುಕದಿಂದೆ—ಯಾವದೋ ಕುತೂಹಲದಿಂದ, ಬಂದೆಂ, ಇಂತು—ಹೀಗೆ; ಏನಾನೊಂದಂ—ಯಾವದೊ ಒಂದನ್ನು; ಒಡಚ್ಚಿರ್ತು—ಮಾಡಿತು. ತದ್ವೇಗದಿಂ—ಆ ಕಳವಳದಿಂದ, ಒಂದಿನಿಸುಬೇಗಂ—ಒಂದುಸ್ವಲ್ಪಹೊತ್ತು.

೬೨೫. ಎನಿತಂತರಮಂ—ಎಷ್ಟುದೂರವನ್ನು; ಎಡೆವರಿಗುಮೊ—ವಿಚ್ಛಿತ್ತಿಯನ್ನು ಹೊಂದಿತೊ; ಚೆಚ್ಚರದಿಂ—ವೇಗದಿಂದ.

ವೃ॥ ತಱಿಗೆಲೆಬಳ್ಳಿಯೆಂಬಿವಱ ತಿಂತ್ರಿಣಿಯೊಳ್ತುರಗಾತಿವೇಗದಿಂ। ದಱಿಯುಲೆ *[ಬಂದುದಿಲ್ಲ ಪಥಮುಂ ಬರುತಂ] ಮಗುಳ್ವಂದವೆಂತೊ ಮೇ॥ ಣ್ಮೆಱೆದು ಪರಣ್ಯದೊಳ್ಸ್ವಳವಸಿಲ್ಲ ಸರಂ ಸರದೋಱುವನ್ನನೇ। ತೆಱದೊ ಳುವೆಂತು ಪೋಪೆನೊ ಸುವರ್ಣಪುರಕ್ಕೆಸುತಂ ನರಾಧಿಪಂ॥ ೬೦೬

ವ॥ ಅನ್ತುಚಿಂತಿಸುತಮಿರ್ಪ್ಪದುಂ—

ಕಂ॥ ವಸುಧೆಯ ಬಡಗಣದೇಶ। ಕ್ಕೆ ಸೀಮೆಯೆನಿಪ್ಪುದು ಸುವರ್ಣ ಪುರಮತ್ತಲ್ಲಿ॥ ಸಿಸರಿಲ್ಲದಡವಿ ಬಳಿಕ। ತ್ತೆಸೆವುದು ಕೈಲಾಸವೆಂಬುದಾ ನಗಮಿದಿರೊಳ್॥ ೬೦೭

ವೃ॥ ಅವಱಿಂದೋರ್ವನೆ ಶಂಕಲಾವುದೆನುತಂ ನೋಡುತ್ತಮಿಂ ಪೋಗ †[ವೇ। ಳ್ಪುದಿದಂತಲ್ಲದೆ] ಜೇಱುಪಾಯಮುಮಿಲ್ಲಂತಲ್ತೆ ತಂತಮ್ಮ ಮಾ॥ ಡಿನುದಂ ತಾಮುಣವೇಳ್ಕುಮೆಂದು ಪಿರಿದೊಂದುದ್ವೇಗದಿಂದಂ ಮ ಗು। ಳ್ಚಿದನಿಂದ್ರಾಯುಧಮಂ ನೃಪಾಲತನುಜಂ ರಾಜಾಧಿರಾಜಾತ್ಮಕಂ॥

ವ। ಅಂತುಕುದುರೆಯಂ ಮಗುಳ್ಚಿ ಮತ್ತಮಿಂತೆಂದಂ—

ವೃ॥ ದಿನಲಕ್ಷ್ಮೀರಸನೈಕಮಧ್ಯಮಣಿಯಾದಂ ಭಾಸ್ಕರಂ ಕ್ರಾಂತಿ ಯುಂ। ಘನಮಾದತ್ತು ತುರಂಗಮಕ್ಕದಱಿನಾಂ ನೀದ್ರ್ಘಣಮಂ ನೋಡಿ ಮೆ। ಲ್ಲನೆ ಸಾರ್ದ್ದಲ್ಲಿ ಬಳಲ್ಕೆಯಂ ಕಳೆನು ಪೋಪೆಂ ಬಳಿಕ್ಕೆಂದು ವಾ। ರಿನಿವಾಸಂಗಳನಲ್ಲಿ ನಾಲ್ದೆಸೆಗಳೊಳ್ನೋಳ್ಕಂ ಮಹೀವಲ್ಲಭಂ। ೬೦೯

---

೬೦೬. ಅಱಿಯುಲೆಬಂದುದಿಲ್ಲ—ತಿಳಿಯಬರಲಿಲ್ಲ. ಮಗುಳ್ವಂದಂ—ಹಿಂತಿರುಗಿ ಹೋಗುವ ರೀತಿಯು, ಸರದೋರುವನ್ನಂ—ಧ್ವನಿಯನ್ನು ತೋರಿಸುವಂಥ,

೬೦೮. ನೋಡುತ್ತಂ+ಇಂ; ಇದಿಂತಲ್ಲದೆ—ಇದು ಹೀಗಲ್ಲದೆ; ಅಂತಲ್ತೆ—ಹಾಗೇಅಲ್ಲವೆ?; ತಂತಮ್ಮಮಾಡಿನುದಂ—ತಾವುತಾವು ಮಾಡಿದ್ದನ್ನು; ತಂತಮ್ಮ ಎಂಬಲ್ಲಿ ವೀಪ್ಸಾರ್ಥದಲ್ಲಿ ದ್ವಿರುಕ್ತಿ ಬಂದಿರುವದರಿಂದ ಪೂರ್ವಪದದ ಕಡೇ ವಿಭಕ್ತಿಗೆ ಲೋಪವು—ಶಶಾ. ಸೂ. ೩೯೩. ಮಾಡಿದುದಂ ಎಂಬಕೃದ್ಯೋಗದಿಂದ ತರ್ಕ್ಯಾರ್ಥದಲ್ಲಿ ತಮ್ಮ ಎಂದು ಷಷ್ಠೀವಿಭಕ್ತಿಯು. ಶಶಾ. ಸೂ. ೨೦೬

೬೦೯. ನೋಳ್ಕಂ—ನೋಡಿದನು. ಇಲ್ಲಿ ಕುಂಎಂಬ ಆಖ್ಯಾತಪ್ರತ್ಯಯವು ಭೂತಾರ್ಥದಲ್ಲಿ ಬಂದಿರುವದು. ಶಮ. ಸೂ. ೨೦೩.

*[ಬಾತುಪಥಮಿಂಬರುತಂ] †[ವೇಡಿದುದಂತಲ್ಲದೆ]

ವ॥ ಅಂತುನೋಡುತ್ತ ಮಿರೆಮಿರೆ ॥

ವೃ॥ ಕೆಳೆದಿಂದಂ ತೆಗೆದೊಟ್ಟಿಕೊಂಡ ಕುಮುದಾಂಭೋಜಾತ ಕಲ್ಹಾರಕ । ಟ್ಟಲಕಾಲೂಕಮೃಣಾಳಜಾಲಮನಿಡುತ್ತೀಡಾಡುತಂ ಪಾದಪಂ॥ ಗಳ ಪ್ರಪುಷ್ಪ ಸ್ತಬಕಂಗಳಂ ಮುಱುವುತಂ ಪೋಗಲ್ಕೆ ದೇಭಂಗಳಾ । ಗಳದೇಂ ಪೀಡಿಸುದೋ ಸುಗಂಧಬಹುಳಂಬಂದೊಂದು ಮಂದಾನಿಲಂ ॥ ೬೩೦

ವ ಅಂತುನಿರೀಕ್ಷಿಸುತ್ತಂ ಬಂದ ಸುರಭಿಗಂಧವಹಸೂಚ್ಯಮಾನ ಗಜಯೂಥಮಾರ್ಗಂಬಿಡಿದನೇಕ ಚಮತ್ಕಾರಿಯಪ್ಪ ಕೈಲಾಸತಟದೊಳ್ ಪೋಗೆವೋಗೆ ॥ ೬೩೧

ಕಂ॥ ಗಿರಿಶಾಸ್ತ್ರೀಂದ್ರದ ಪೂರ್ವೋ । ತ್ತರದಿಶೆಯೊಳ್ಕಾಮ್ಯಮಾರ್ಗಿಲ್ಗಳೆಜಗಿದುವೆನೆ ಕಾ । ರಿರುಳಿಳಸಿತೆನೆ ಕಱಂಗಿದ ॥ ತರುಷಂಡಮ ನವನಿಪಾಲತನಯಂ ಕಂಡಂ ॥ ೬೩೨

ವ॥ ಅಂತುನಿರೀಕ್ಷಿಸುತ್ತಂ ಪೋಗೆವೋಗೆ

ವೃ॥ ಕುಸುಮಪರಾಗಂಗಳೊಳ್ಪೊರೆದು ವಾಃಕಣಜಾಲಮ ನಾಂತು ಕೂಡೆ ಪಿ । ರ್ವಿಸಿ ತರಂಗಮಾಲಿಕೆಗಳೊಳ್ಕಲಹಂಸ *[ನಿನಾದಬಭ್ರಮ]॥ [illegible]ರಸಿ ಮಾರುತನೊಯ್ಯನೆ ಬಂದು ತೀಡಿದ । ತ್ತಮ [illegible] †[[illegible]] ಕರೆವಂತೆವೋಲಾ ಮನುಜೇಂದ್ರಚಂದ್ರನಂ॥ ೬೩೩

ವ॥ ಆಸ್ತಾತರುಷಂಡಮಂ ನೋಳ್ಪಾಗಸೆಗಮಲ್ಲಿ॥

ವೃ॥ [illegible]ಡೆ ಕರಗಿಪುದಂತಲ್ತು ರುದ್ರಾಟ್ಟಹಾಸಂ। [illegible]ಲ್ತು [illegible]ರಸಾಕಾರಮಾಯ್ತಲ್ತು ಹೈಮಾ ॥ [illegible] ಪರಿಣಮಿಸಿದುದಂತಲ್ತು ಸ್ವರ್ಮಲ್ಯಶೋಭಾ । [illegible]ಲ್ಲು [illegible]ಷಂಡಂ॥ [illegible] ೬೩೪

೬೩೦. [illegible]; [illegible]—[illegible] ತೆಗೆದುಬಿಸಾ [illegible].

೬೩೨. [illegible]—[illegible]; ಎಳಸಿತು—ಬಂದುನೆಲಸಿತು ; ಕಱಂಗಿದ—ಕಪ್ಪಾದ.

*[ನಿಕಾಯಜಭ್ರಮ] †[ಕಾಳ್ಪ]

ವೃ॥ ವಸುಧೆಯ ಚಂದ್ರಕಾಂತಮಣಿಭೂಗೃಹಮೆನ್ನದೆ ಘೂರ್ಣಿ ತಾರ್ಣವ। ಪ್ರಸವಸಮಗ್ರಸಿರ್ಗಮಸವರ್ಗಮಿದೆನ್ನದೆನೋಡೆ ಪರ್ವಿ ದಾ॥ ಗಸದವತಾರಮೆನ್ನದೆ ಜಗತ್ರಯಸಂಚಿತಪುಣ್ಯಸಂಚಯಂ। ರಸಮ ಯಮಾದುದೆನ್ನದೆ ಸರೋವರಮಂ ಪೆಱತೇನನೆಂಬುದೋ॥ ೬೩೫

ವ॥ ಮತ್ತಮದುತೆಕ್ಕನೆತೀವಿಯುಱ ಮತಿನಿರ್ಮಲತೆಯಿಂ ರಿಕ್ತಮಾ ದಂತಿರ್ಪ್ಪದಂತುಮಲ್ಲದೆಯುಂ॥ ೬೩೬

ಎಸಗುವ ಮಂದಾನಿಲನಿಂ। ಕುಸುಮರಜಂಬೆರೆದು ಪೊಣ್ಮಿ ಮಳಿ ದೆರೆಗಳನೇಂ॥ ನೆಸೆಪುದೊ ಸುರಚಾಪಂಗ। ಳ್ಪಸರಿಸಿದಂಬರಮೆನ ಲ್ಸರೋ ವರಮಾಗಳ್॥ ೬೩೭

ಪ್ರತಿಬಿಂಬದನೆವದಿಂ ವನ। ತತಿ ಶೈಲಗ್ರಹಸಿಕಾಯ *[ತಾರಾಂಕ] ಜಗ॥ ತ್ರಿತಯಮನಬ್ಜೋದರನಾ। ಕೃತಿಯುಂ ತನ್ನೊಳಗೆ ತಳೆಮತಿಳಿ ಗೊಳನೆಸೆಗುಂ॥ ೬೩೮

ವೃ॥ ತಡಿವಿಡಿದೊಪ್ಪಿ ತೋಱುವ ತಮಾಲವನಂಗಳ ಮರ್ವ್ವ ಪರ್ವ್ವಿ ಕ। ಮ್ಮರ್ಗಮಗಳೊಳೆಯ್ದೆ ಮಾತ್ತೊರ್ಗಳಗೆ ನೀಲಸರೋಜವ ನಂಗಳಲ್ಲಿ ತ॥ ಳ್ತಿಡಿವಿರೆ ಕಾಳಗತ್ತಲೆತಗುಳ್ದಿರುಳಾದುದೆಗೆತ್ತು ತಮ್ಮೊಳ। ದ್ದೆಡೆಯಿನಗಲ್ವವಂಜಿ ಕೆಲವುಂ ಪೊಣರ್ವಕ್ಕಿಗಳಬ್ಜಷಂಡದೊಳ್॥ ೬೩೯

ವ॥ಅಂತುಮಲ್ಲದೆಯುಂ॥

---

೬೩೫. ಅರ್ಣವಪ್ರಸವ—ನೀರು.

೬೩೭. ಎಸಗುವ—ಬೀಸುವ; ಅಱಿದೆರೆ—ಸಣ್ಣಸಣ್ಣತೆರೆ.

೬೩೯. ಮರ್ವ್ವ—ಕತ್ತಲೆ; ಕರಿದು+ಮುಗಿಲು=ಕಮ್ಮುಗಿಲು—ಕಪ್ಪಾದಮು ಗಿಲು—ಇಲ್ಲಿಕರಿದು ಶಬ್ದದಕೊನೆಯಉಕಾರಕ್ಕೆ ಉಪಾಂತ್ಯಸ್ವರದೊಡನೆ ಲೋಪವು. ಶಮ. ಸೂ. ೧೭೯. ಮಾತ್ತೊರ್ಗಳಗೆ—ಪ್ರತಿಬಿಂಬಿಸಲು; ಇರುಳಾದುದೆಗೆತ್ತು —ರಾತ್ರಿಯೇ ಆಯಿತೆಂದು ತಿಳಿದು; ಪೊಣರ್ವಕ್ಕಿಗಳ್—ಚಕ್ರವಾಕ ಪಕ್ಷಿಗಳು.

*[ತಾರಾಕ್ಷ]

ವೃ॥ ಪೃಥ್ವೀವೃತ್ತ॥ ಅದೊಂದೆಡೆ ಜಲೇಶ *[ಹಂಸಮುಖದಾರಿ] ತಾಂಭೋಜ ಮಂ । ತದೊಂದೆಡೆ ದಿಶೇಭಜರ್ಜರಿತ ನೀಲನೀರೇಜಮಂ ॥ ತದೊಂದೆಡೆ ವೃಷಾಂಕಪುಂಗವ ವಿಘಟ್ಟಿತೋತ್ತೀರಮಂ । ತದೊಂದೆಡೆ ಕೃತಾಂತ ಸೈರಿಭವಿಕೀರ್ಣಫೇನೋತ್ಕರಂ ॥ ಅಂತುಮಲ್ಲದೆಯುಂ॥ ೬೪೦

ಕಂ॥ ವಿರಹಿಗಳಂತೆ ಮೃಣಾಳೋ । ತ್ಕರವಲಯಾಂಕಿತ ಶರಣ್ಯದಂತೆ ವಿಜೃಂಭೋ ॥ ದ್ಧುರ ಪುಂಡರೀಕಸಂಕುಳ । ಮುರಗಾನ್ವಯದಂತನಂತ †[ಪದ್ಮೋಪೇತಂ] ॥ ೬೪೧

ವೃ॥ ದಿವಿಜರಗೇಂದ್ರದಿಂ ಕಡೆದ ಪಾಲ್ಗಡಲಂತಿರೆ ನೀಲಕಂಠಪೀ । ತವಿಷಮನಂಗಕೇತನವವ್ರೊ ಲ್ಮಕರಾಂಕಿತ ಮುರ್ವರೇಶ್ವರಾಂ ॥ ಘ್ರಿವೊಲನಿಮೇಷಕೂರ್ಮಲಲಿತಂ ಮಲಯಾದ್ರಿನಿಕುಂಜದೇಶದಂ । ತೆವೊಲ ತಿಸಾರಭಾಕಲಿತಚಂದನಶೀತವನಂ ಸರೋವರಂ ॥ ೬೪೨

ಕಂ॥ ಆವುವ್ರಳಿದೆಡೆಗಳೆಂದು ಸ । ರೋವರಮಂ ನೋಡುತಿರ್ಪ್ಪಬಗೆಯಿಂ ಕೈಲಾ ॥ ಸಾವಾಸಮಂಬಿಡಂ ಗೌ । ರೀವಲ್ಲಭ ನೆಂದೊಡಾರಿದಂ ನೆರೆ ಪೊಗಳ್ವರ್ ॥ ೬೪೩

ಅಳವಜಿಯದೆ ತುರಗಮುಖ । ಕ್ಕಳ ಬಳಿವಳಿಯನೆ ತಗುಳ್ದುಬಂದುದು ಮಿಗ ॥ ಳ್ಪಳವಾವತ್ತ್ರೊಂದಜಿಯೆ । ಕೊಳನು ಕಂಡುದಜೊಳೆನುತೆ ಮತ್ತಂಭೂಪಂ ॥ ೬೪೪

---

೬೪೦. ಪುಂಗವ—ವೃಷಭ.

೬೪೧. ವಿಜೃಂಭೋದ್ಧುರ—ಅಕ್ಕರೆಯಿಂದ ಕೂಡಿದ; ಪುಂಡರೀಕ—ಹುಲಿಗಳ ಸಂಕುಲಂ—ಸಮೂಹವುಳ್ಳದ್ದು.

೬೪೨. ನೀಲಕಂಠ—ಈಶ್ವರ, ನವಿಲು; ವಿಷ—ನಂಜು, ನೀರು; ಅಂಘ್ರಿ—ಪಾದವು; ಅನಿಮೇಷ ಕೂರ್ಮಲಲಿತಂ—ಮತ್ಸ್ಯರೇಖೆ ಕೂರ್ಮರೇಖೆಗಳಿಂದ ಮನೋಹರವಾದದ್ದು.

೬೪೩. ಉಪವನಗಳ್—ಇದು ಮೊದಲು ಅತಿಮನೋಹರಗಳಾದ ವಿಶ್ರಾಂತಿಸ್ಥಾನಗಳು; ಆವುವು—ಯಾವವು; ಎಂದು—ಎಂಬದಾಗಿ.

೬೪೪. ಬಳಿವಳಿಯನೆ—ಹಿಂಬಾಲಿಸಿ; ತಗುಳ್ದು—ಅನುಸರಿಸಿ ಹಿ.ತಿ.

*[ಮುಖಂಸಿ] †[ಪದ್ಮಾನ್ವಿತಂ]

ವ॥ ಅಗಳುಪೋವಲ್ಲಭಪದಪದ್ಮಮುದ್ರಾಂಕಿತಮುಂ ದ್ವಿಜರಾಜಗೆ ಜಗಂಡಸ್ಥಳಗಳಿತಮದಜಲಸಿಕ್ತಮುಂ ಭಗವತೀಸಿಂಹಾವತರಣಮಾರ್ಗ ಮುಮಪ್ಪ ದಕ್ಷಿಣತೀರದ ಕುಸುಮಲತಾಮಂಟಪದ ಮುಂದೆ ತುರಂಗದಿಂ ದವನಿತಳಕ್ಕವತರಿಸಿ ಪಲ್ಲಣಮಂಬಿಟ್ಟು ತದನಂತರದೊಳ್ ॥ ೬೪೫

ಕಂ॥ ಮಹಿತಳಲುಠಿತೋತ್ಥಿತಮಂ । ಗೃಹೀತಕತಿಪಯತೃಣಾಂಕು ರಗ್ರಾಸಮನಾ ॥ ಮಹಿಪಂ ಪೀತಾಂಬುವನಂ । ಮ ದಯಮವನಾಸನ್ನವಿಟಪಿ ಯೊಳ್ನಿಯಮಿಸಿದಂ ॥ ೬೪೬

ಲಲಿತನಿಜಕನಕಮಯಶೃಂ । ಖಲೆಯಿಂ ಹರಿಚರಣಯುಗಳಮಂ ನಿಯಮಿಸಿ ಶಾ ॥ ದ್ವಲತೃಣತತಿಯಂ ಬಿಸ್ಗದಿ । ನಿಕಾಘಿಸಂ ಕೊಯ್ದುಮುಂ ದೆ ಸೊಚ್ಚೈದನಾಗಳ್ ॥ ೬೪೭

ವ॥ ಅನಂತರಮಾವಿಬುಧಕಮಳಾಕರ ರಾಜಹಂಸನಾಕಮಳಾಕರ ದೊಳ್ ಕರಚರಣವದನಪ್ರಕ್ಷಾಲನಂಗೆಯ್ದು ಜಾತಕನಂತೆ ಕೃತಜಲಾಹಾರ ನಾಗಿ ಚಕ್ರಾಹ್ವಯದಂತೆ ಮೃಣಾಳನಾಳಂಗಳಂ ಮೆಲ್ದು ವಿಯೋಗಿಯಂತೆ ನಳಿನದಳಂಗಳನುರದೊಳೊತ್ತಿಕೊಂಡು ತನ್ನೊಳಿಂತೆಂದಂ ॥ ೬೪೮

ಕಂ॥ ಅಂಚೆಗಳಿಂಚರದಿಂ ತ । ಣ್ಪಿಂ ಚೆಲ್ವಿಂ *[ಸವಿಯಿಂ] ಸಪ್ರಘನ ಸೌರಭದಿಂ ॥ ಕಾಂಚನಕಮಳಾಕರಮಿದು । ಪಂಚೇಂದ್ರಿಯಸುಖಮನೆನಗೆ ಪಡೆದಪ್ಪುದೀಗಳ್ ॥ ವ ಎನುತಮಲ್ಲಿಂ ಪೊಱಮಟ್ಟು॥ ೬೪೯

ಕಂ॥ ಲಲಿತಲತಾಗೃಹದಿಂದಂ । ಪಲಮಂ ಸಾರ್ದ್ದಂಡೆಸುತ್ತಿ ನೋಲು ವನಾಗಳ್ ॥ ತಲೆಗಿಂಬುಮಾಡಿ ನೃಪಕುಲ । ತಿಲಕಂ ಪಟ್ಟಿರ್ದ್ದನಿಪ್ಪದಂ ತತ್ಕ್ಷಣದೊಳ್ ॥ ೬೫೦

ವೃ॥ ಮುರಿದಕೊರಲ್ಬಳಲ್ದಳದ ಲಾಟದಮೆಯ್ಕಡೆವಾಯ ಲೋಳೆ ಯೊ । ಳ್ಸೂರೆದುಗುತ್ತಿರ್ಪ ಪಚ್ಚೆಪಸಿಯುಚ್ಚಗಲುಂಕೆ ಮರಲ್ದದಿಟ್ಟ ಕ ತ್ತರಿಮೊನೆಗೊಂಡೆಳಲ್ಕೆಕಿವಿ ಸೂಚಿಸಿದಪ್ಪುದು ಸೋಲ್ತಭಾವಮಂ । ತುರ ಗಮಿದೇನ ನಾಲಿಸುತಮಿರ್ದ್ದಪ್ಪದೆಂದು ನರೇಂದ್ರಚಂದ್ರಮಂ ॥ ೬೫೧

---

೬೪೫. ಪಲ್ಲಣಮಂ—ಜೀನನ್ನು ; ಬಿಟ್ಟು—ಬಿಚ್ಚಿ.

*[ಸವಿಯ]

ವ॥ ಅಂದವನೆತ್ತರಿಪಟ್ಟು ಪೀಠಾಸಿದ್ಧಾರ್ಥರಂ ಭಾವಿಸಿನೋಡುತ್ತಮಿರ್ದ್ದನನ್ನೆಗಂ॥

ವೃ॥ ಎಲೆ ಪೊಲ್ಪುಂಬೆಯು ಗಾವರಂ [ಬೊರೆದು] ಕ್ರೋಣ್ಯಾಶ್ರಿತ್ವ ಪ್ರವಾಸಸ್ತ್ರೀಕಾ । ಪಲತಾಬ್ಯಾರವವಂತವಾಸುವವೆನಿಸಿಪ್ಪಂದೋಳದೊಳ್ಪಂದ ಕಾ । ಕಲಿಯಿಂದಂ ಪ್ರವಿದೊಯ್ಯನೊಯ್ಯನೆ ವಿಪಂಚೀನಾದ *[ವಿಾಗಳ್ಪಂ]॥ ಜತಿಪ್ರತ್ತಿದ್ಧಪ್ರದತ್ತಿ ಸಂಬ್ವದಿತಗ್ಗಂಧರ್ವರಂ ನೋಲಿಸಲ್ ೬೨೨

ಇದಂ ನುಜಗ್ಗರ್ಗೋಚರವೆನಿಸ್ಪ ಚರಾವ್ರಿರುತಪ್ಪಲಕ್ಷ್ಮಿಗೇ । ಯುಜದನಿ ನಂಬ್ಬವತ್ತ್ರನೆಯುತಿದ್ದರ್ಕಾಪ್ರಯೋಗಳ್ ಪೋಗಿ ನೋಳ್ಪೆನಾ । ನಿವನೆನುತಂ ಕಾಂತಾಕಲಿತವಾದಾನಂದು ನರೇಂದ್ರನಂದನಂ । ಕುದುರೆಯುಬೆಂಗೆಮಂದು ನಡೆದಂ ಮೃಗನೂಚಿತಗೇಯಮಾರ್ಗದಿಂ । ೬೨೩

ವ॥ ಅಂತುಪ್ರೋರ್ಗೆಪ್ರೋಗೆ ॥

ಸ್ರ॥ ಗಿರಿಜಾಕರ್ಣಾವತಂಸೋತ್ಪಲಮನಲೆಯುತಂ ಪಾರಿಜಾತಪ್ರಸೂನೋ । ದರದಿವ್ಯಾಮೋದಮಂ ಬೀರುತು ಮಘವನ್ನಾಥೀಶರೋಮಂ ಥಘೋನೋತ್ಕರದೊಳ್ ಲೀಲೆಯುಳ್ಳತಂ ಧೂರ್ಜಟಿ †[ನಿಟಿಲ] ಜಟಾಟೀಂದ್ರ ಪೀಠಾವನೀಪಂ । ಪರಮಾನಂದಾವಹಂ ಬಂದೆಸಗಿದುದಘವಾದ್ರೀಂದ್ರಕಾಸಾರ ಸವಿಾರಂ ॥ ೬೨೪

ವ॥ ಅಂತು ಬಂದಮಂದಮಾರುತನಂ ನರೇಂದ್ರನಂದನನಿದಿರ್ಗ್ಗೊಂಡು ಪೋಗೆಪೋಗೆ ತದ್ಗಿರೀಂದ್ರಚಂದ್ರಪ್ರಭಮೆಂಬುಪಾಂತಪರ್ವತದ ಪಕ್ಷ್ಮಪ್ರಾಂತದೊಳ್ ವಿಕೀರ್ಣಮಾನಕುಸುಮಂಗಳಪ್ಪ ಕನಕಕೇತ

---

೬೨೨. ಗಾವರಂಬೊರೆದು—ಸದ್ದುಮಾಡದೆ; ಬಂದೋಳದೊಳ್ಪಂದ—ಬಂದೇನಿಧವಾಗಿ ಸೇರುವ; ಕಾಕಲಿಯಿಂದಂ—ಸೂಕ್ಷ್ಮವಾದ ಧ್ವನಿಯಿಂದ; ಪ್ರವಿದ—ಪ್ರಾಪ್ತವಾದ; ವಿಪಂಚೀನಾದಂ ಬಿದ್ದ್ಯಾಧರ್ವ್ವನಿಗಳಿಂದ ಪ್ರತ್ತಿಗ್ರಹವು ಎಂದರ್ಥ.

೬೨೩. ಗೆಯ್ದದನಿ—ಗಾನದ್ಧ್ವನಿ; ಪ್ರಯೋಗಳ್ಪ್ರಮ—ನಂಬಿಗ್ರಹದೆ; ಮೃಗನೂಚಿತ—ಮೃಗಗಳಿಂದ ಸೂಚಿಸಲ್ಪಟ್ಟ.

೬೨೪. ಅಲೆಯುತಂ—ಅಲ್ಲಾಡಿಸುತ್ತ; ಬೀರುತ್ತುಂ—ಸೂಸುತ್ತ.

*[ವಿಂಶೀವಳಂ] †[ನಿಕಟು]

ಕೀವ್ರಜಂಗಳೊಳಂ ಮತ್ತಮಧುಕರಝಂಕಾರಂಗಳಪ್ಪ ಸಹಕಾರಂಗಳೊಳಂ ಪರಿವೇಷ್ಟಿತಮಧುವ್ರತಂಗಳಪ್ಪ ತಮಾಲಂಗಳೊಳಂ ಅನ್ಯೋನ್ಯಕಲಹಕುಪಿತಕಪೋತಪೋತಪಾತಿತಂಗಳಪ್ಪ ಪೂಗಳೊಳಂ ನಯನಾನಂದಂಗಳಪ್ಪ ಚಂದನಂಗಳೊಳಂ ಶುಕನಿಕರಾವೃತಂಗಳಪ್ಪ ಫಲಭರಿತದಾಡಿಮೀನೀಡಂಗಳೊಳಂ ವಸಂತಸಾಮಜಘಟಾಪಿನದ್ಧಕದಳಿಕಾನಿಕಾಯಮಾಯಮಾನಂಗಳಪ್ಪ ಕದಳೀವನಂಗಳೊಳಂ ಹರಿದ್ವಿತಾನೋಪಮಾನಂಗಳಪ್ಪ ಲತಾಪ್ರತಾನಂಗಳೊಳಂ ನಿಜಸೌರಭಾಕೃಷ್ಟಮಧುಕರಕುಲಂಗಳಪ್ಪ ವಕುಳಂಗಳೊಳಂ ಕೃತಪುಲಕಂಗಳಪ್ಪ ತಿಲಕಂಗಳೊಳಂ *[ಕಂಗೊಳಿಪ] ಕೈಲಾಸತರಂಗಿಣೀತರಂಗಿತಕಾಂಚನಸಿಕತಿಲಭೂಭಾಗದೊಳ್ ಸೂರ್ಯಕಾಂತಮಣಿಮಯಶೂಲಪಾಣಿದೇವಾಯತನಮಿರ್ದ್ದುದನನತಿದೂರದೊಳ್ ನೋಡಿ ॥ ೬೫೫

ವೃ॥ ಇದು ಸಿದ್ಧಾಯತನಂ ಮನಂಗೊಳಿಸಿ ತೋರುತ್ತಿರ್ಪ್ಪುದಿಲ್ಲಿಂದೆ ಬಂ । ದುದು ವೀಣಾಧ್ವನಿ ತಪ್ಪದೀಯೆಡೆಯೊಳಿರ್ದ್ದಾರ್ಬ್ಬಾಜಿಸುತ್ತಿರ್ದ್ದರೆಂ ॥ ಬುದನಾಂ ನೋಡುವೆ ನೀಗಳೆಂದು ಮನದೊಳ್ ನಿಶ್ಚೈಸುತಂ ಮೆಲ್ಲನೆ । ಯ್ದಿದನಾಸ್ಥಾನಮನಂದನಂತಮಹಿಮಂ ಭೂಪಾಲವಿದ್ಯಾಧರಂ ॥ ೬೫೬

ವ॥ ಅಂತದನೆಯ್ದಿ ನೋಳ್ಪನ್ನೆಗಮಲ್ಲಿ ॥

ವೃ॥ ಹರಹಾಸಾವಯವಂಗಳಂತಿರಲನಂತಾನಂತಭೋಗಂಗಳಂ । ತಿರೆ ಪೂರ್ಣೇಂದುಕಲಾಳಿಯಂತಿರೆ ಸಿತಾಬ್ಜಾಸೀಕಮೊಪ್ಪಲ್ ಪಿರಿಂ ॥ ತರದೊಳ್ನಿರ್ಮಲನಿತ್ಯಮೌಕ್ತಿಕಶಿಲಾಲಿಂಗಂ ಚತುರ್ವಕ್ತ್ರಸುಂ । ದರಮಲ್ಲಿರ್ಪ್ಪುದು ರತ್ನಪೀಠಘಟಿತಂ ದೇದಿಪ್ಯಮಾನಪ್ರಭಂ ॥ ೬೫೭

ವ॥ ಅಂತಿರ್ಪ್ಪ ಚರಾಚರಗುರುವಪ್ಪ ಶೂಲಪಾಣಿದೇವರಂ ಕಾಣ್ಬುದುಮಾಪರಮೇಶ್ವರನ ಸಕಳಜಗದಭೀಷ್ಟಫಲದಾಯಕಮಪ್ಪ ದಕ್ಷಿಣಾಮೂರ್ತಿಯನಾಶ್ರೈಸಿ ॥ ೬೫೮

---

೬೫೫. ಕದಳಿಕಾ—ಧ್ವಜ; ಕೃತಪುಲಕಂಗಳಪ್ಪ—ರೋಮಾಂಚವನ್ನುಂಟುಮಾಡುವ; ಸಿಕತಿಲ—ಮರಳುಳ್ಳ.

೬೫೭. ಖಾಂತರದೊಳ್ ಸಿತಾಬ್ಜಾಸೀಕಮೊಪ್ಪಲ್ ಎಂದನ್ವಯವು.

*[ಮೋಕ್ಷೇನ]

ವೃ' ಅಮೃತಾಂಭೋರಾಶಿಪೂರಪ್ರಶಮ ನಿಜತಪಸ್ಸಂಚಯಂ ಪರ್ವಿ ತ್ತೋ ಲೋ । ಕಮನೆಂಬಂತಿರ್ದ್ದ ದೇಹಾಂಶುಗಳ ಬಳಗದಿಂ ಕಾನನಾನೀ ಕಮಂ [ವಂ ॥ ತ] ಮಯುಂಮಾಳ್ಪಂತೆ ತಾರಾಚಳವನಸದಳಂ ನುಣ್ಣಿಪಂ ತೋರ್ವ್ವಳತ್ಯು । ತ್ತಮ ದಿವ್ಯಾಕಾರೆ ಕುಳ್ಳಿರ್ದ್ದತನುಹರನನಾರಾಧಿಸುತ್ತಿ ರ್ದ್ದಳಾಗಳ್ ॥ ಅಂತುಮಲ್ಲದೆಯುಂ— ೬೫೯

ಕಂ' ತಳತಳಿಸಿ ಪೊಳೆವ ಪಳುಕಿನ । ನಿಲಯದೊಳ್ಮೃತಾಬ್ಧಿಜ ಲದೊಳಭ್ರಕಪಟಲಂ । ಗಳಮುಱಿಯೊಳಿರ್ದ್ದಳೆನೆ ಮಿ । ಯ್ವಳಗಿಂ ನೆಱಿ ಯುಱಿಯಲಾದುದಿಲ್ಲಂಗನೆಯುಂ ॥ ೬೬೦

ಸೊಗಯಿಸವೊಂದು ಪೃಥಿವ್ಯಾ । ದಿಗಳೆನಿಸುವ ಪಂಚಭೂತವೆಲ್ಲವ ನುಳಿದಾ ॥ ವಗವುಜ್ಜ್ವಳಾಂಗಿಯಂ ಧವ । ಳಗುಣದೆ ನಿರ್ಮಿಸಿದನಾಗವೇ ಳ್ಕುಂ *[ಧಾತ್ರಂ] ॥ ಅಂತುಮಲ್ಲದೆಯುಂ— ೬೬೧

ವೃ' ಪತಿಯನೆ ಜೇಡಿ ರುದ್ರನ ಸಮೀಪದೊಳುಗ್ರತಪಕ್ಕೆ ನಿಂದ ಳೋ । ರತಿ ಶಶಿಲೇಖೆಯಂ ನೆನೆದು ಬಂದಳೊ ಮೇಣಮೃತಾರ್ಣವಾಧಿ ದೇ ॥ ವತೆ ಶಿತಿಕಂಠಕಂಠತನುವಂ ಕಳೆವಾಗ್ರಹದಿಂದೆ ಬಂದಳೋ । ಕ್ಷಿತಿ ಗಮೃತಾಂಶುಮೂ *[ತ್ರಿಯೆನಲೇೞಿಸೆಪಿ] ದ್ರ್ದದೊ ರೂಪು ಕಾಂತೆಯಾ ।

ಪ' ಪಸಹಾಸದ್ಯುತಿ ಮೂರ್ತಿಗೊಂಡುದೊ ವಿರಿಂಚಬ್ರಾತಿ ಲೋ ಕಂಗಳೊ । ಳ್ಪರಿದಾಯಸದಿ ಸಿಂದುದೋಕಲಿಯುಗಂ ಸಿಮೂರ್ಲಿಸಲ್ದರ್ಮ ಮಂ ॥ ಪಿರಿದುಂ *[ಶೋಕದೊಳಾತ್ರಯಿಾಪಧು ವನಂಜೊ] ಕ್ಕಿರ್ದ್ದಳೋ ಪೇಳಸು । ಚ್ಚ್ವರಿಯೆಂಬಂತಿರೆ ದಿವ್ಯಸುಂದರಿ ಮನಕ್ಕಾನಂದವಂ ಮಾಡಿ ದಳ್ ॥ ೬೬೨

---

೬೫೯. ತಾರಾಚಲವಂ—ಕೈಲಾಸಪರ್ವತವನ್ನು ; ಅಸದಳಂ—ಅಧಿಕವಾಗಿ; ನುಣ್ಣಿಪಂತೆ—ನುಣುಪುಮಾಡುವಹಾಗೆ.

೬೬೦. ಅಭ್ರಕಪಟಲ—ಕಾಗೆಭ್ರಂಗೆ.

೬೬೧. ಆಗವೇಳ್ಕುಂ—ಆಗಿರಬಹುದು.

*[ಪ್ರೇಕ್ಷಂ] †[illegible] ‡[illegible]

ಕಂ॥ ಬರಲಿರ್ದ ಕೃತಯುಗದ ಬೀ । ಜರುಚಿರಕಳೆ ಪೆಣ್ಣರೂಪ ದಿಂದಿರ್ದುದೊ ಭೂ ॥ ಸುರಶೇಷದೀಪರುಚಿ ತಾಂ । ಧರೆಗವತರಿಸಿರ್ದುದೆನೆ ಕರಂ ಸೊಗಯಿಸಿದಳ್ ॥ ೬೬೪

ದಶವದನೋನ್ಮೂಲನಭಯ । ವಶದಿಂ ಕೈಲಾಸಲಕ್ಷ್ಮಿ ಬಂದಳೊ ಬಳಭ ॥ ದ್ರಶರೀರಕಾಂತಿ ಮಧುಮದ । ವಿಶೇಷಘೂರ್ಣನದಿನಲ್ಲಿ ಬಂದಿರ್ದಪಳೋ ॥ ೬೬೫

ದ್ವೀಪಾಂತರಮಂ ಶ್ವೇತ । ದ್ವೀಪಸ್ತ್ರೀ ನೋಡಲೆಂದು ಬಂದಳೊ ಭುವನ ॥ ವ್ಯಾಪಿಸಿತಪಕ್ಷಸಂತತಿ । ರೂಪಂ ಕೈಕೊಂಡು ನಿಂದುದೆನೆ ಸೊಗಯಿಸುಗುಂ ॥ ೬೬೬

ವೃ॥ ಕಡೆದರೊ ಶಂಖದಿಂ ತೆಗೆದರೋ ನವಮೌಕ್ತಿಕದಿಂ ಮೃಣಾಳದಿಂ । ಪಡೆದರೊ ದಂತದಿಂ ನೆಸೆಯಿಮಾಡಿದರೋ ರುಚಿರೋಜ್ವಲಾಂಗಮಂ ॥ ಬಿಡದಮೃತಾಂಶುರಶ್ಮಿಗಳ ಕುಂಚಿಗೆಯಿಂ ನವ ಕರ್ಪೂರಪಾಂಸುವಂ । ದೊಡೆದರೊ ಪೇಳ್ ಸ್ಫುರದೆಮೆಕಣ್ಗೆಸೆದಿರ್ದುದು ರೂಪು ಕಾಂತೆಯಾ । ೬೬೭

ಕಂ॥ ಪೊಳೆವ ರಜತಾಭ್ರಕದ್ಯುತಿ । ಗಳ ನಮೃತರಸಪ್ರವಾಹದಿಂದಭಿಷವಮಂ ॥ ಗ್ಗಳಿಸೆ ರಸತಳಿಸಿ ತೋಱುವ । ಪಳುಕಿನ ಪುತ್ಥಳಿಕೆಯಂತೆ ಕರಮೆಸೆದಿರ್ದಳ್ ॥ ೬೬೮

ವೃ॥ ಪೊಳೆವೆಳನೇಸಱಂತೆಗೆದ ರಶ್ಮಿಗಳಂತೆ ಮಸಲ್ತು ಕಾಂತಿಯುಂ । ತೆಗೆದೆಳೆಯಂಚೆನೋಳ್ಪುಳಗಳಂತೆ ಕವಲ್ತು ಮೃಗಾಂಕಮೌಳಿನಿ । ರ್ಮಳ ಭವಭಸ್ಮರೇಣುಗಳನಲ್ಲವಮಜ್ಜನಪಾಕಜಾಂಗಗಳಂ । ತಳೆದು ಬೆಗಲ್ವರಂಬಳೆದು ರಂಜಿಸುಗುಂ ಜಡೆಗಳ್ ಮೃಗಾಕ್ಷಿಯಾ ॥ ೬೬೯

---

೬೬೭. ತೆಗೆದರೊ—ಮಾಡಿದರೊ ; ಕುಂಚಿಗೆ—ಕುಂಚ ; ಕರ್ಪೂರ—ತೊಳೆದು ; ಪಾಂಸುವಂತೊಡೆದರೊ—ಪಾವರಸವನ್ನು ಸವರಿದರೊ.

೬೬೮. ದ್ಯುತಿಗಳಿಂ—ರಸಗಳಿಂದ ; ಅಭಿಷವಂ—ಅಭಿಷೇಕ.

೬೬೯. ಮಸಲ್ತು—ಹಬ್ಬಿ ; ಬೆಗಲ್ವರಂ—ಬೆಗಲಿನವರೆಗೆ.

ಕಂ॥ ಶಿವನಾಮಾಂಕಿತಮಂ ರ । ತ್ನವಿರಚಿತಮನುತ್ತಮಾಂಗದೊ ಳ್ವಿಡಿಯುಂ ॥ ಗ್ಮವನೆಸೆಯೆ ತಳೆದು ಭಕ್ತಿಯೆ । ಭವಸನ್ನಿಧಿಯಲ್ಲಿ ರೂ ಪುಗೊಂಡಂತಿರ್ದ್ದರ್ಗಳ್ ॥ ೬೭೦

ತೊಳಗುವ ತಾರಾಚೂರ್ಣೋ । ಜ್ಜ್ವಳಭಸಿತಲಲಾಮದಿಂದೆ ಪೆರೆ ವೆರಸುತಳ ॥ ತ್ತಳಸುವ ಪೇವಾಚಳವೋ । ಖಳೆಯುಂತಿರೆ ಕಾಂತೆಕಣ್ಗೆ ಕರ ಮೆಸೆದಿರ್ದ್ದರ್ಗಳ್ ॥ ೬೭೧

ಪಿರಿದೆನಿಪ ಭಕ್ತಿಭರದಿಂ । ದರಲ್ದ ಸಿರಿನೆಲಸಿತೋರ್ಪ್ಪ ಕಣ್ಮಲ ರ್ಗಳ್ನ ॥ ಟ್ಟಿರೆ ಮುಗುಳೆ ದೇವನಂ ಪುಂ । ಡರೀಕಮಾಲೆಗಳನರ್ಚಿಪಂ *[ತೆಸೆದಿರ್ದ್ದರ್ಗಳ್] ॥ ೬೭೨

ವೃ ರಸವೊಸರ್ವಂತು ಪಾಡುತಿರೆ ಶುದ್ಧಮನೋಮಣಿದೀಪ್ತಿ ಪೊ ಣ್ಮಿ ರಾ । ಜಿಸಿದಪುದೋ ಸ್ತುತಿಪ್ರಕರನಿರ್ಮಳವರ್ಣಸಮೂಹವೊ [ತ್ತು ಗೊಂ ॥ ಡೆಸೆವುದೊ] ಪೇಳೆಸಲ್ವೊಳೆವ ದಂತಮರೀಚಿಗ †[ಳಂದವಿಾಶ್ವ ರಂ । ಗೊಸೆದ] ಭಿಷೇಕಮಂ ಮುಗುಳೆಮಾಡುವವೋ ಲ್ಬಗೆಗೊಪ್ಪಿ ತೋ ಱಿದಳ್ ॥ ೬೭೩

ವನಗುಹನಾಭನಾಭಿಸಿತಪಂಕಜಬೀಜವೊ ಪದ್ಮಗರ್ಭನಾ । ನನದೆ ಪ್ರೊದಳ್ದ ವೇದವಿಮಳಾಕ್ಷರಮಾಲೆಯೊ ಕಯ್ಯಸೋಂಕು ಮಾ ॥ ವನತರ ಮೊಂದು ಸಪ್ತಮುನಿಮುಂಡಲಮಿಸ್ಪರ್ದೊ ಬಂದುಪೇಳೆನ । ಲ್ವನಿತೆಯ ಮಾಕ್ತಿಕಾಕ್ಷವಲಯಂ ಕರಲೊಳ್ಕರವೊಪ್ಪಿ ತೋಱುಗುಂ ॥ ೬೭೪

ಕಂ॥ ತೊಳಗುವ ಮೋಕ್ಷದ್ವಾರದ । ಕಳಸಂಗಳವೆನಿಸಿ ತೋರ್ಪ್ಪ ಕುಚಯುಗದಿಂ ಕೋ ॥ ಮಳೆ ಹಂಸಮಿಥುನದಿಂದಂ । ವಿಳಸಿತಮಾದ ಮರನದಿಯ ನನುಕರಿಸಿರ್ದ್ದಳ್ ॥ ೬೭೫

---

೬೭೦ ಪಾಮಾಮುಗ್ಮಮಂ—ಪಾದುಕಗಳ ಜೊತೆಯನ್ನು.

೬೭೧. ತಾರಾಚೂರ್ಣ—ಮುತ್ತಿನಪುಡಿ.

೬೭೨. ಸಿರಿ—ಕಾಂತಿ.

೬೭೩. ಒತ್ತುಗೊಂಡು—ಸಾಂದ್ರವಾಗಿ.

*[ತೊಲಿದಿರ್ದ್ದಳ್] †[ಳಿಂದುಮರಂಗೆಸೆವ]

ಕಂ॥ ಎಳವೆಱೆಯೊಳ್ ದಿಗ್ಗಳ್ಬಂ । ದೆಳಸಿದವೀಶ್ವರನ ಸನ್ನಿಧಾನ ದೊಳಿಸೆನೀ ॥ ಲಲಿತಾಂಗಿಯ ನೆಂಬಿನೆಗಂ । ಪ್ರೋಳಿಯುತ್ತಂ ಬ್ರಹ್ಮಸೂತ್ರ ಮೇನೊಪ್ಪಿದುದೋ ॥ ೬೭೬

ಸತಿ ಪದ್ಮಾಸನದೊಳರ । ಕ್ತಿರುಚಿರೋತ್ತಾನ ಚರಣತಳರುಚಿ ಯಿಂ ಲೋ ॥ ಹಿತವಾದ ದುಗೂಲದಿಂದಂ । ನಿತಂಬವಿಸ್ತಾರವೇಂಮನಂ ಗೊಳಿಸಿದುದೋ ॥ ೬೭೭

ವ॥ ಮತ್ತಂಹಾರಲತೆಯಂತೆ ಕಂಠಯೋಗ್ಯಮುಂ । ಗ್ರಹಪಙ್ಕ್ತಿ ಯಂತೆ ಧ್ರುವಪ್ರತಿಬದ್ಧಮುಂ । [ಮತ್ತನಂತೆ] ಘೂರ್ಣಿತಮಂದ್ರತಾರ ಮುಂ । ವಿಾಮಾಂಸೆಯಂತೆ ಭಾ [ವನಾ] ನುವಿದ್ಧಮುಮಪ್ಪ [ಗೀತಿಯಿಂ] ವೀಣೆಯಂ ಬಾಜಿಸುತ್ತಮಿರ್ದ್ದಳಂತುಮಲ್ಲದೆಯುಂ ॥ ೬೭೮

ಕಂ॥ ಪಳುಕಿನ ಭಿತ್ತಿಗಳೊಳ್ಮಾ । ತ್ತೋರ್ಗುವ ನಿಜತನುಗಳಿಂದೆ ತನ್ನಂದದ ಕೋ ॥ ಮಳೆಯರ್ವ್ವೀರಸೀಶನ ಪವ । ನಳಸಮ ನಾರಾಧಿಪಂತೆ ಸತಿಸೊಗಯಿಸಿದಳ್ ॥ ೬೭೯

ಬದವಿದ ಭಕ್ತಿಯಿನೀಶನ । ಹೃದಯದೊಳಿರ್ದ್ದಪಳೆನಲ್ಕೆ ನವಮೌಕ್ತಿಕಲಿಂ ॥ ಗದ ನಡುವೆ ರೂಪ್ರಮಾತ್ತೊರ್ಳ । ಗಿದುದೆತ್ತಂ ವಿಮಲಕಮಲದಳಲೋಚನೆಯಾ ॥ ೬೮೦

ದಿವಿಜತೆಯಿಂ ದಿವಸಂಗಳ । ಪಮಣರಿಯಲ್ಬಾರದಾಮೊಡಂ ಸೊಗಯಿಸಿ ತೋ ॥ ರ್ಪ್ಪವಯವದಿಂದಂ ಪದಿನೆಂ । ಟುಬರಿಸದಾಕೃತಿಯಿ ನಬ್ಜಮುಖಿಕಣ್ಗೆಸೆದಳ್ ॥ ೬೮೧

---

೬೭೮. ಧ್ರುವಪ್ರತಿಬದ್ಧಮುಂ—ಧ್ರುವವೆಂಬತಾಳದಿಂದ ; ಧ್ರುವನಕ್ಷತ್ರದಿಂದ, ಪ್ರತಿಬದ್ಧಂ—ಯುಕ್ತವಾದ ; ಘೂರ್ಣಿತ—ತಿರುಗಿಸಲ್ಪಟ್ಟ ; ಮಂದ್ರ—ಅಲಸವಾದ, ತಾರಂ—ಎತ್ತರವಾದ ಧ್ವನಿಯುಳ್ಳ ; ಕರೀಗುಡ್ಡೆಯುಳ್ಳ ; ಭಾವನಾನುವಿದ್ಧಂ—ಭಾವನಾ—ಶಬ್ದವ್ಯಾಪಾರದಿಂದ, ಕರ್ಮಪ್ರವರ್ತನೆಯಿಂದ ; ಅನುವಿದ್ಧಂ—ಸಂಗತವಾದ.

೬೭೯. ಪಳುಕಿನ—ಸ್ಫಟಿಕದ ; ಮಾತ್ತೊರ್ಳಗುವ—ಪ್ರತಿಬಿಂಬಿಸುವ ; ಪವಣ—ಪ್ರಮಾಣ, ಅಂದರೆ ಅಳತೆ.

ವ॥ ಅಂತುವಿರೂಪಾಕ್ಷದೇವರನಾರಾಧಿಸುತ್ತಮಿರ್ದ್ದ ॥

ಕಂ॥ ಅತಿಗಂಭೀರೆಯು ನೂರ್ಜಿತ । ಮತಿಯುಂ ನಿರ್ಮ್ಮಳೆಯು ನಮಳಧೈರ್ಯ್ಯಾದಿಗುಣಾ ॥ ಸ್ವಿತೆಯುಂ ದೃಢಪಾಶುಪತ । ವ್ರತೆಯುಂ ಕನ್ಯಕೆಯನಂದು ಕಂಡಂ ಕ್ಷಿತಿಪಂ ॥ ೬೮೨

ವ॥ ಅಂತುಕಂಡವನಿತಳಕ್ಕವತರಿಸಿ ತುರಂಗಮನೊಂದುತರುಶಾಖೆಯೊಳ್ಕಟ್ಟಿ ಭಗವದಿಂದುಮೌಳಿಯಪುರೋಭಾಗದೊಳ್ನಿಂದು ಪೊಡವಟ್ಟು ದಿವ್ಯಕಾಂತೆಯ ರೂಪಸಂಪತ್ತಿಗಂ ಕಾಂತಿಗಮುಪಶಾಂತಿಗಂ ವಿಸ್ಮಯಂಬಟ್ಟು ನೋಡುತ್ತಮಿರ್ದ್ದ ೬೮೩

ವೃ॥ ಕಿನ್ನರಯುಗ್ಮಮೆತ್ತ ವನಮೆತ್ತ ಸರೋರುಹಷಂಡಮೆತ್ತಗೀ । ತನ್ನಯದಿಂದೆ ಬಂದೆಸಪುದೆತ್ತ ಭವಾಲಯಮೆತ್ತ ಭೋಂಕನೀ ॥ ಕನ್ನೆಯ ಕಾಣ್ಕೆಯೆತ್ತ ಮನುಜಂಗೆನಗೆಂದು ನರೇಂದ್ರನಂದನಂ । ತನ್ನೊಳೆ ತಾನೆ ವಿಸ್ಮಯದೆ ಭಾವಿಸುತಿರ್ದ್ದನದೊಂದುಜಾವಮಂ ॥ ೬೮೪

ಆನ್ತು ಭಾವಿಸುತ್ತಮಿರ್ದ್ದ ॥

ವೃ॥ ಮನುಜನನೆನ್ನನೀಕ್ಷಿಸಿ ಭವಾದ್ರಿಯನೇರದೆ ನಾಡೆನೋಡಿ ತೊ । ಟ್ಟನೆಕೊಳೆ ಮಾಯವಾಗದೆ ನಭಕ್ಕೊಗೆದಾಗಳೆ ಪೋಗದಿದ್ದೊರ್ದ್ದ ತೊ । ಯ್ಯನೆ ಬೆಸಗೊಳ್ವೆನಾಗ್ರ್ದ ಸತಿನೀಂ ಪೆಸರೇಂ ನಿನಗಿಂತು ತೋರ್ಪ್ಪ ಜ । ಪ್ಪನದೊಳಗೀತಪಕ್ಕೆ ಗುಱಿಮಾಡಿಸಿದುಬ್ಬೆಗವಾವುದೆಂಬುದಂ ॥

ವ॥ ಎಂದುಭಾವಿಸುತ್ತ ಮಾರಮಣೀಯದೇವಾಯತನ ನೂತ್ನಸ್ತಂಭಮಂ ನೆಮ್ಮಿನಿಂದಿರ್ದ್ದ ತದಂಗನಾಗೀತಾವಸಾನಸಮಯಮಂ ಪಾರುತ್ತಮಿರ್ಪ್ಪುದಂ ॥ ೬೮೬

---

೬೮೪. ಸರೋರುಹಷಂಡ—ಸರೋವರ; ಎಸಪ್ಪುದು—ಉಂಟಾಗುವುದು; ಇಲ್ಲಿ ಎಸಗು ಎಂಬಧಾತುವಿಗೆ ಭಾವಾರ್ಥದಪ್ಪುದು ಪ್ರತ್ಯಯ ಸೇರುವುದರಿಂದ ಧಾತುವಿನಕಡೇ ಅಕ್ಷರಕ್ಕೆ ಲೋಪವೂ ಪ್ರತ್ಯಯದ ಪಕಾರಕ್ಕೆ ಸಕಾರವೂ ಬಂದಿರುವವು. ಶಬ್ದ. ಸೂ ೨೩೨. ಗೀತಂ + ನಯದಿಂದೆ = ಗೀತನ್ನಯದಿಂದೆ. ಶಬ್ದ. ಸೂ. ೧೬೧.

೬೮೫. ತೊಟ್ಟನೆಕೊಳೆ—ಭಗ್ನನೆಗ್ರಹಿಸುವಷ್ಟರಲ್ಲಿ; ಉಬ್ಬೆಗಂ—ಮನೋವ್ಯಥೆ.

ಕಂ॥ ಮೃದುಮಧುರವಲ್ಲಕೀಗೇ । ಯದ ದನಿಮಾಣಲ್ಕೆ ಗೀತದವ ಸಾನದೊಳು ॥ ನ್ಮದಮಧುಕರಸ್ವನಂ *[ಮಾ । ಣ್ದಿದ] ಕುಮುದಿನಿಯಂತೆ ಕಾಂತೆಕಣ್ಗೆಸೆದಿರ್ದಳ್ ॥ ೬೮೭

ವ॥ ಅನಂತರಮಾತ್ರೈಲೋಕ್ಯರಕ್ಷಾಮಣಿಯಂ ಪ್ರದಕ್ಷಿಣೀಕರಣ ಪೂರ್ವಕಂ ನಮಸ್ಕರಿಸಿ ॥

ವೃ॥ ಬಸೆದಾಶ್ವಾಸಿಸುವಂತೆ ಪುಣ್ಯತತಿಯಿಂದಂ ಮುಟ್ಟುವಂತಚ್ಛತೀ। ರ್ಥಸಮೂಹಾಂಬುಗಳಿಂದ ಮಂದಭಿಷವಂಮಾಳ್ಪಂತೆ ಪೂತತ್ವಮಂ । ಪಸ ರಿಪ್ಪಂತೆ ಬರಂಗಳಂ ಪದಪಿನಿಂದೀವಂತೆ ದೃಕ್ತೃಪ್ತಿರಾ । ಜಿಸೆ ದಿವ್ಯಾಂಗನೆ ನೋಡಿದಳ್ತಗುಳ್ದು ಚಂದ್ರಾಪೀಡಭೂಪಾಲನಂ ॥ ೬೮೮

ಕಂ॥ ಸ್ವಾಗತವೇ ನಿನಗೆ ಮಹಾ । ಭಾಗ †[ನೆಮವ್ವೃವಿಗೆಂತು] ಬಂದಯ್ನಿನ ॥ ಭ್ಯಾಗತನಾಗಲ್ವೇಳ್ಕಂ । ದಾಗಳ್ ನೃಪಸುತನನಳ್ಕಱಿಂ ಸತಿನುಡಿದಳ್ ॥ ೬೮೯

ವ॥ ಅಂತುನುಡಿದಸಿತಱೊಳೆ ಕೃತಾರ್ಥನಾದೆನೆಂದು ಬಗೆಯುತ್ತಂ ದೇವಿಯಬ್ಬೆಸಸಿದಂತೆ ಗೆಯ್ವೆನೆಂದಾಕಾಂತೆಯಬೆಂಬಳಿವಿಡಿದು ನಡೆವಶಿಷ್ಯ ನಂತೆ ಪೋಗೆಪೋಗೆ ಕಿಱಿದಂತರದೋಳ್ ॥ ೬೯೦

ವೃ॥ ಕಾಲದಮುರ್ವ ಪರ್ವಿದವೊಲಿರ್ದ ತಮಾಲವನಂಗಳಿಂದೆ ಭೃಂ । ಗಾಳಿಯುಗಾವರಂ ಪುದಿದಪುಷ್ಪಲತಾಗೃಹದಿಂದೆ ಚಂದ್ರಿಕಾ ॥ ಜಾಲ ದವೊಲ್ಕೆಲಂಬಿಡಿದು ಭೋರ್ಗರೆಯಲ್ಪುರಿತರ್ಪ ನಿರ್ಝರ । ಸ್ಖಲನಶೀ ಕರ ಪ್ರಸರದಿಂದೆಸೆದತ್ತು ಬೃಹದ್ಗುಹಾಂಗಣಂ ॥ ೬೯೧

ವ॥ ಅಂತಾಗುಹಾಂಗಣದ ಮುಂದೆನಿಂದು ನೋಳ್ಪಲ್ಲಿ ॥

ವೃ॥ ಅದು ಸುರಭೂಜವಲ್ಕವಸನದ್ವಯ ಮಂತದು ದಂಡಮಲ್ಲಿನೇ। ಲಿಪುದದು ಜೋಗವಟ್ಟಗೆ ಕಮಂಡಲಮಂತದು ಭಸ್ಮಕಯ್ಯೆಯುಂ ॥ ತದು

೬೮೭. ಮಾಣ್ದಿದ—ನಿಂತುಹೋದ.

೬೮೮. ಬರಂಗಳಂ—ವರಗಳನ್ನು ; ದೃಕ್ತೃಪ್ತಿ—ನೇತ್ರಾನಂದ.

೬೯೨. ನೇಲಿದುದು—ಜೋಲಾಡುವದು ; ಜೋಗವಟ್ಟಗೆ—ಯೋಗಪಟ್ಟಕೆ.

*[ಪೊಣ್ಮಿದ] †[ಭವದ್ವೃವಿಗೆಯ್ದೆ]

ಶಶಿಮಂಡಲಾಕೃತಿವೊಲಿರ್ದುದು ಶಂಖದಪಾತ್ರೆಯೆಂದು ನೋ । ಡಿದನತಿವಿ
ಸ್ಮಯಂಬೆರಸು ತದ್ಗೃಹೆಯಂ ನೃಪರೂಪಚಂದ್ರಮಂ ॥ ೬೯೨

ವ॥ ಅನಂತರಮಾದಿವ್ಯತಪಸ್ವಿನಿ ಮಾಳ್ಪತಿಥಿಪೂಜೆಯಂ ವಿನಯಪು
ರಸ್ಸರಂ ಕಯ್ಕೊಂಡು ದರ್ಭಾಸನದೊಳ್ಕುಳ್ಳಿರಲಾನಿತಂಬಿನಿ ॥ ೬೯೩

ಕಂ॥ ರಕ್ಷಾಂಕಿತತನು ಮೆಲ್ಲನೆ । ವೃಕ್ಷಂಗಳ ಕೆಳಗೆಪೋಗಿನಿಂದಿರ್ದ್ದ
ಗಳ್ ॥ ಭಿಕ್ಷಾಂದೇಹಿಯೆನಲ್ಕಂ । ತಾಕ್ಷಣದೊಳ್ತೀವಿದತ್ತು ಭಿಕ್ಷಾಪಾತ್ರಂ ॥

ವ॥ ಅಂತುತೀವಿದ ಭಿಕ್ಷಾಪಾತ್ರದಪಣ್ಣಲಂಗಳಂ ತಂದುಕುಡೆ ನಿ
ರ್ಝರಜಲಂಗಳೊಳ್ಮಿಂದು ಅಮೃತರಸಸ್ವಾದುಗಳಪ್ಪ ತತ್ಫಲಂಗಳಂಮೆ
ಲ್ದು ನೀರಂಕುಡಿದೊಂದುದೆಸೆತೊಳಗಿಪ್ಪುದು ಮಾಕನ್ನಿಕೆಯುಂ ಕೃತಫಲ
ಜಲಾಹಾರೆಯಾಗಿ ಬಂದೊಂದು ಶಿಲಾತಳದೊಳ್ಕುಳ್ಳಿರ್ದ್ದ ನೋಡುತ್ತ
ಮಿಪ್ಪುದುಮಾಗಾಂಭೀರ್ಯ್ಯರತ್ನಾಕರ ನುಮನತಿದೂರಮಪ್ಪ ಶಿಲಾತಲ
ದೊಳ್ವಿಶ್ರಮಿಸಿ ತನ್ನಬಂದವೃತ್ತಾಂತಮನೆಲ್ಲಮಂ ನೆಱೆಯೆಪೇಳ್ದು ಮತ್ತ
ಮಾದಿವ್ಯಕಾಂತೆಯನಿಂತೆಂದಂ ॥ ೬೯೪

ವೃ॥ ಪಿರಿದೆನಿಸಿರ್ದ್ದ ನಿಮ್ಮಯಪ್ರಸಾದಮನಾಂ ಪಡೆದೊಂದುಗರ್ವ
ದಿಂ । ಪರಿಚಿತನಂತೆ ಬಿನ್ನವಿಸಲುಂಬಗೆದಂದಪೆನಂತುಟಲ್ತೆ *[ಬಿ ॥ ತ್ತರಿ
ಪೊಡಧೀರರಪ್ಪ]ಮನುಜಪ್ರಭುಗಳ್ದಯೆಯಿಂದೆ ತಮ್ಮನಾ । ದರಿಸಿದೊ
ಡಾಗಳಂತೆ ಗಳಪಲ್ಬಗೆಪಪ್ಪುದಿದಾವವಿಸ್ಮಯಂ ॥ ಆದೊಡಂ ॥ ೬೯೫

ಕಂ॥ ಮನುಜಂಗೆ †[ಕೌತುಕಾವಹ] । ಮಿನಿತೊಂದಾಶ್ಚರ್ಯ ಮ
ದಱಿನಿಂಬೆಸಗೊಳ್ಳ ॥ ಲ್ಕನುಗೆಯ್ಯುತ್ತಿರ್ದ್ದಪುದೀ । ಮನಮನನುಗ್ರಹಿಸಿ
ದೇವಿ ಪೇಳಲ್ವೇಳ್ಕುಂ ॥ ೬೯೬

---

೬೯೩. ರಕ್ಷಾಂಕಿತತನು—ಭಸ್ಮೋದ್ಧೂಳಿತ ಶರೀರವುಳ್ಳ ಆ ತಪಸ್ವಿನಿಯು.

೬೯೪. ಪಣ್ಣಲಂಗಳಂ—ಹಣ್ಣುದಫಲಗಳನ್ನು ; ನೆಱೆಯೆ—ಚನ್ನಾಗಿಯೆ.

೬೯೫. ಅಂತುಟಲ್ತೆ—ಹಾಗೆಯೇಸರಿ ; ನಿಸ್ತರಿಪೊಡೆ—ನೆರವೇರಿಸುವದಕ್ಕೆ ; ಅ
ಧೀರರಪ್ಪ—ಧೈರ್ಯಶಾಲಿಗಳಲ್ಲದ ; ಮನುಜಸ್, ತಮ್ಮಂ, ಪ್ರಭುಗಳ್ ದಯೆಯಿಂದ ಆದರಿಸಿ
ದೊಡೆ ಎಂದನ್ವಯವು ; ಅಂತೆ—ಅಕ್ಷಣದಲ್ಲೀ.

೬೯೬. ಅದಱಿಂ+ಇನ್+ಬೆಸಗೊಳ್ಳಲ್ಕೆ ;

*[ನಿಸ್ತರಿಪೊಡಧೀರರಪ್ಪ] †[ವಿಸ್ಮಯಾವಹ]

ವೃ॥ ಸುರಮುನಿಸಿದ್ಧಖೇಚರರೊಳಾವಕುಲಂ ನಿಜಜನ್ಮದಿಂದಲಂ । ಧರಿಸಿತೊ ಪಂಚಭೂತಮಯಮಾಗಿಯುಮೀತನು ಮಿಂದುಕಾಂತಿಯಂ ॥ ತಿರೆ ಪೊಳೆಯುತ್ತುಮಿರ್ದ್ದಪುದಿದೇಂ ಪೊಸಜವ್ವನದೇಳ್ಗೆಯೊಳ್ತಪ । ಶ್ಚರಣಮಿದೇಂ ಪೊದಳ್ದಿಡಿದ ಕಾನನದೊಳ್ಬಡದೊಬ್ಬರಳಿಪ್ಪರದೇಂ ॥ ೧೯೮

ವ॥ ಎಂದುಬೆಸಗೊಳ್ವುದುಂ ಕಿಱಿದುಬೇಗಂ ತನ್ನೊಳ್ತಾನೆಭಾವಿಸಿ।

ವೃ॥ ಪೊಳೆವಲರ್ಗಂಗಳಿಂ ಮಿಳಿರ್ವಬೆಳ್ಪುರಸಾತ್ಮಕಮಾಗಿ ಗಂಡಮಂ । ಡಳತಳದಿಂದಮುಂದಿಳಿಯುತಿರ್ದ್ದುದೆನಲ್ನಯನಾಂಬುಲೋಚನಂ ॥ ಗಳನಿರದುಣ್ಮೆ ಶಬ್ದಮಣಮಿಲ್ಲದೆತೊಟ್ಟನೆ *[ಕಣ್ಮಗುಳ್ದಳ । ಗ್ಗಳಪಳವಿಂದೆ] ಮಾನಿನಿ ಮನಕ್ಕತಿವಿಸ್ಮಯಮಾಗೆ ಭೂಪನಾ ॥ ೧೯೯

ವ॥ ಅಂತಾಕಾಂತೆ ಶೋಕಾಕ್ರಾಂತೆಯಾಗಿ ॥

ವೃ॥ ರಸೆಯುಂತಾಂತಾಂಕಿ ಕಲ್ಪಾಂತವಬಱಸಿಡಿಲೆಯ್ತಂದು ಪೊಯ್ಯಲ್ಕೆಲಂ ಕಂ । ಪಿಸುವಂತತ್ಯಂತಶೋಕಾಕುಲತೆಯಿ ನಳುತಿರ್ದ್ದಪ್ಪಳೋರಂದದಿಂ ಮು ॥ ಗ್ಗಿಸಲಿನ್ನಾರಾಪ್ಪರೀಶೋಕಮನೆನುತೆ ಭಯಂಗೊಂಡಿದೆತ್ತತ್ತಲೀಗ । ಳ್ಬಸಗೊಂಡೆಂ ಕೇಂಮನೆಂದುನ್ಮಳಿಸಿ ಪಿರಿದುಮುಂದಾನ್ನೃಪಂ ವ್ಯಗ್ರನಾದಂ ॥ ೨೦೦

ವ॥ ಅಂತುನೃಪನತಿ ವ್ಯಗ್ರನಾಗಿ ಮುಖಪ್ರಕ್ಷಾಳನಾರ್ಥಂ ಪೇರಡವಿಯೊಳಂಜುಳಿಯಿಂ ಜಲಮಂತಂದು ದೇವಿಯುರವಧಾರಿಸುವುದೆಂದು ಭೂಪನಿಳಿಂಪನುಪರೋಧಿಸುತ್ತುಮೆಱೆಯೆ ॥ ೨೦೧

---

೧೯೯. ಅಗ್ಗಳಿಪ—ಹೆಚ್ಚುವ ; ಅಳವಿಂದೆ—ರೋದನದಿಂದ ಕೂಡಿ ; ಕಣ್ಮುಗುಳ್ದಳ್—ಕಣ್ಣನ್ನುಮುಚ್ಚಿದಳು ಅಂದರೆ ಕಣ್ಣನ್ನುಮುಚ್ಚಿಅತ್ತಳೆಂದಭಿಪ್ರಾಯವು ಅಳ್ಎಂಬ ಧಾತುವಿಗೆ ಭಾವಾರ್ಥದವು ಪ್ರತ್ಯಯವು ಪರವಾದದ್ದರಿಂದ ಧಾತುವಿನ ಕಡೇಅಕ್ಷರಕ್ಕೆ ಅಕಾರಾದೇಶಬಂದು ಅಳವು ಎಂದಾಯ್ತು. ಶಮ. ಸೂ. ೨೧೦.

೨೦೦. ಕಲ್ಪಾಂತದ ಬಱಸಿಡಿಲ್, ತಾಂ, ಎಯ್ತಂದು, ರಸೆಯಂ, ತಾಂಕಿ, ಪೊಯ್ಯಲ್ ಎಂದನ್ವಯವು ; ಮುಗ್ಗಿಸಲ್—ಕಡಮೆಮಾಡುವವಕ್ಕೆ ; ಉನ್ಮಳಿಸಿ—ಚಿಂತಿಸಿ ; ವ್ಯಗ್ರನಾದಂ—ಕಳವಳ ವುಳ್ಳವನಾದನು.

೨೦೧ ಎಱೆಯೆ—ನೀರನ್ನುಹನಿಸಲು.

*[ತಳ್ತುಗುಳ್ದಳ । ಗ್ಗಳಿ ಪಳವಿಂದೆ]

ಕಂ॥ ಅಳವಿಲ್ಲದಳುತ್ತಿರೆ ಕೆಂ। ಪೆಳಸಿದ ಬಾಷ್ಪಾಂಬುಪೂರ್ಣಲೋಚನವಮಂ ತ॥ ಜ್ಜಳದಿಂದೆ ಕರ್ಚ್ಚೆವಲ್ಕಾಂ। ಚಲದಿಂ ನಿಜವದನಬಿಂಬವಮಂ ಸತಿತೊಡೆದಳ್ ॥ ೨೦೨

ವ॥ ಅಂತಾಕಾಂತೆ ಶೋಕಾಕ್ರಾಂತೆಯಾಗಿಪ್ಪುದಂ ಕಂಡಿಂತಪ್ಪವರುಮಳುವಂದವು *[ದ್ಭುತವೆಂದು] ಮನದೊಳ್ಭಾವಿಸುತ್ತುಮಿರೆ ॥ ೨೦೩

ವೃ॥ ಉರಗಮುಖೋಗ್ರದಂಷ್ಟ್ರಸಹಜಾತೆಯು ನೂರ್ಜಿತಕಾಲಪಾಶನಿ। ಷ್ಠುರತರರೂಪೆಯುಂ ಸಹಜಶಾಕಿನಿಯುಂ ವಿಷಕನ್ಯಕಾಸಮೋ॥ ದರಿಯುನಮೋರಘೋರದುರಿತಾರ್ಣವ †[ಜಾತೆ]ಯು ನಾತ್ಮವಲ್ಲಭಾಂ। ತರಿತೆಯು ನಿನ್ನನಣ್ಣಬೆಸಗೊಳ್ವುದೆ ಪೇಳ್ವೆನೆತತ್ಪ್ರಪಂಚಮಂ ॥ ೨೦೪

ಕಂ॥ ಗತಭಾಗ್ಯೆಯೆನಿಪ ಪಾಪಾ। ನ್ವಿತೆಯುಂ ಪತಿದುಃಖಭಾಜನೆಯವೃತ್ತಾಂತ॥ ಸ್ಥಿತಿಯನದೇಂ ಕೇಳ್ದಪೆನೃಪ। ಸುತ ಕೌತುಕಮೆಂಬೆಯಪ್ಪೊಡುಸುರ್ದಪೆನೀಗಳ್। ಅದೆಂತೆಂದೊಡೆ ೨೦೫

ಕಂ॥ ತ್ರಿದಿವದೊಳಚ್ಚರಸಿಯರಿ। ಪ್ಪುದುವಿದಿತಂ ನಿಮಗಮಂತವರವಂಶಂಗ। ಳ್ಪದಿನಾಲ್ಕೆನೆ ಪೆಸರಿಂನೆಗ। ಳ್ದುದಯಿಸಿದುವು ಬೇಱೆಬೇಱೆ ನೃಪಕುಲತಿಲಕಾ॥ ಅದೆಂತೆನೆ ೨೦೬

ಧರೆಯಿಂ ಕಡಲಿಂ ‡[ದೆಲರಿಂ]। ಹರಿಯಿಂ §[ದಮರ್ದಿಂದೆ] ಮೃತ್ಯುವಿಂದಬ್ಜಜನಿಂ॥ ಸ್ಮರನಿಂ ಜಲದಿಂ ವೇದೋ। ತ್ಕರದಿಂ ವಿದ್ಯುನ್ನಿಕಾಯದಿಂ ಹುತವಹನಿಂ ॥ ೨೦೭

---

೨೦೪. ಅಂತರಿತೆಯುಂ—ವಿಯುಕ್ತೆಯುಸ್ಸು ; ಬೆಸಗೊಳ್ವುದೆ—ಕೇಳಬಹುದೆ ; ಪೇಳ್ವೆನೆ—ಹೇಳಲಾವೆನೆ.

೨೦೫. ಕೌತುಕಂ ಎಂದೆಯಪ್ಪೊಡೆ—ಕುತೂಹಲವುಂಟೆಂದು ನೀನುಹೇಳುವ ಪಕ್ಷದಲ್ಲಿ.

೨೦೬. ಪೆಸರಿಂ, ಬೇಱೆಬೇಱೆ ಎನೆ, ಪದಿನಾಲ್ಕುವಂಶಂಗಳ್ ಉದಯಿಸಿದುವು ಎಂದನ್ವಯವು.

೨೦೭. ಹರಿಯಿಂದೆ—ಸೂರ್ಯಕಿರಣದಿಂದ ; ಅಮರ್ದಿಂದೆ—ಚಂದ್ರಕಿರಣದಿಂದ ;

*[ಭೂಭಾವಿಸುವಪ್ಪುದೆಂದು] †[ದಾಗ್ರೆ] ‡[ಗಡಲಿಂ] §[ದಂಮೃತ್ಯು]

ವ॥ ಅದಲ್ಲದೆಯುಂ ದಕ್ಷಪ್ರಜಾಪತಿಗೆ ಪುಟ್ಟಿದಮುನಿಯುಮರಿಷ್ಟೆ ಯುಮೆಂಬೀರ್ವರ್ಕನ್ನೆಯರಿಂ ಗಂಧರ್ವಕುಲಮುದಯಿಸಿದುದಲ್ಲಿ ಚಿತ್ರ ಸೇನಾದಿಗಳಪ್ಪ ಪದಿನೈವರಿಂ ಪಿರಿಯನೆನಿಸಿ ॥ ೨೦೮

ಕಂ॥ ಚಿತ್ರರಥನೆಂಬನೊರ್ವ್ವಂ । ಪುತ್ರಂ ಗಂಧರ್ವರಾಜನಮರೇಂದ್ರಂಗಂ ॥ ಮಿತ್ರನೆನೆ ಪೆಂಪುವಡೆದು ಜ । ಗತ್ರಯವಿಖ್ಯಾತಕೀರ್ತಿ ಮುನಿಗುದಯಿಸಿದಂ ॥ ೨೦೯

ವ॥ ಅಂತಾಚಿತ್ರರಥನಿಂ ಚೈತ್ರರಥಮೆಂಬಬನಮುಂ ಮಚ್ಛೋದಮೆಂಬ ಸರೋವರಮುಮಾದುದಲ್ಲದೆಯುಂ ತುಂಬುರಪ್ರಭೃತಿಗಳಪ್ಪಱುವರಿಂ ಪಿರಿಯನೆನಿಸಿ ॥ ೨೧೦

ಕಂ॥ ಪುರುಷಾರ್ಥನಿಧಿಪುರಂದರ । ಪರಮಪ್ರಿಯಮಿತ್ರನೊರ್ವ್ವನುದಯಿಸಿದಂಸುಂ ॥ ದರರೂಪನರಿಷ್ಟೆಗೆ *[ಚಿ । ತ್ರರಥಾನನಪುಂಡರೀಕಹಂಸಂಹಂಸಂ] ॥ ೨೧೧

ವ॥ ಅದಲ್ಲದೆಯುಮಲ್ಲಿಗನತಿದೂರದೊಳ್ ಹೇಮಕೂಟಮೆಂಬನಗೇಂದ್ರಂ ಕಿಂಪುರುಷಾವಾಸಸ್ಥಾನಮಾಗಿರ್ಪ್ಪುದಲ್ಲಿ ॥ ೨೧೨

ಕಂ॥ ಆತ್ತಯಶಗ್ಗಂಧರ್ವಕು । ಲೋತ್ತಮರಾತಮ್ಮುತೀರ್ವ್ವರುಂ ನಿಖಿಲಗುಣೋ ॥ ದಾತ್ತರೆನಲ್ ರಾಜ್ಯಂಗೆ । ಯ್ಯುತ್ತಂ ಸುಖಸಂಕಥಾವಿನೋದದಿನಿರ್ಪ್ಪರ್ ॥ ೨೧೩

ವ॥ ಮತ್ತಮಾಸೋಮಮಯೂಖಸಂಭವೆಯರಪ್ಪಚ್ಚರಸಿಯರೊಳಗೆ ॥

---

೨೧೧. ಹಂಸಂ—ಸೂರ್ಯನಾದ ; ಹಂಸಂ—ಹಂಸನೆಂಬಗಂಧರ್ವನು ; ಅರಿಷ್ಟೆಗೆ—ಅರಿಷ್ಟೆಯೆಂಬವಳಲ್ಲಿ ; ಉದಯಿಸಿದಂ.

೨೧೩. ಆ ತಮ್ಮುತೀರ್ವ್ವರುಂ—ಆತಾವಿಬ್ಬರೂ ; ತಮ್ಮುತೀರ್ವ್ವರೆಂಬಲ್ಲಿ ತಮ್ಮ ಎಂಬಶಬ್ದಕ್ಕೆ ಸ್ವರಾದಿಯಾದ ಸಂಖ್ಯಾವಾಚಕಶಬ್ದವು ಪರದಲ್ಲಿರುವವರಿಂದ ನಡುವೆ ಉತ್ ಎಂಬಾಗಮ ಬಂದಿರುವದು. ಶಮ. ಸೂ. ೧೪೮.

*[ಚಿ । ತ್ರರಥಾನನವನಜವಿಕಚಹಂಸಂಹಂಸಂ]

ಕಂ॥ ಅಮೃತಕರಭಾಸುರೋದ್ಯ।ತ್ಕಮನೀಯೆ *[ಕಲಾಕಲಾಪಲಾವಣ್ಯರುಚಿ] ॥ ಸಮುದಿತೆ ಯೆನಲ್ಕೆ ಪುಟ್ಟಿದ। ಳಮೃತಾಂಶುನಿಭಾಸ್ಯೆ ಗೌರಿಯೆಂಬಳ್ಸರಿಂ ॥ ೨೧೪

ಇಂಗಡಲಿಂಗಮರನದೀ।ಸಂಗಂ ಸಂಘಟಿಪ ತೆಱದೆ ಗಂಧರ್ವಕುಲೋ॥ತ್ತುಂಗನೆನಲ್ಕೆಗಳ್ವಾ ಹಂ। ಸಂಗಾದುದು ಗೌರಿಯೊಳ್ವಿವಾಹೋತ್ಸಾಹಂ ॥

ಸಮವಂಶದೆ ಸಮರೂಪದೆ। ಸಮವಿಭವದೆ ಸಮವಯೋವಿಲಾಸದೆ ಸಮಸ॥ತ್ವಮನದೆ ಸಮಾನುರಾಗದೆ। ಸಮಸಂದತ್ತವರ್ಗೆ ಸಮವಯೋಬೋಗಸುಖಂ ॥ ೨೧೬

ವೃ॥ ನಿನಗೇಂಪೇಳ್ದಪೆ ನಾಂ ಮಹಾತ್ಮರೆನಿಸಿದರ್ವರ್ ತಂದೆಗಂ ತಾಯ್ಗಮೋ। ರ್ವನೆ ನಿರ್ಭಾಗ್ಯನಿವಾಸೆಯೆಂ ನಿಖಿಲಪಾಪಾಕಾರೆಯೆಂ ದುಃಖಭಾ॥ಜನೆಯೆಂ ಪುಟ್ಟಿದೆ ನೆನ್ನನೀಕ್ಷಿಸಲೊಡಂ ತಾತಂ ಮಹಾಶ್ವೇತೆಯೆಂ। ದನುರಾಗಂಬೆರಸಿಟ್ಟನೆನ್ನ ಪೆಸರಂ ಗಂಧರ್ವಚಕ್ರೇಶ್ವರಂ ॥ ೨೧೭

ವ॥ ಅಂತು ನಿಜಜನನೀಜನಕರ್ಪಲಕಾಲ ಮನಪತ್ಯರಪ್ಪುದಱಿಂ ಪುತ್ರಸಿಂದಗ್ಗಳಮಪ್ಪ ಪರಮಪ್ರೀತಿಯಿಂ ನಡೆಪುತ್ತಮಿರೆ ಕೆಲವುದಿವಸದೊಳನಿವಿತಸ್ನೇಹಶೋಕಾಯಾಸಮಪ್ಪ ಶೈಶವಂ ಪತ್ತುವಿಡುವುದುಂ ॥ ೨೧೮

ವೃ॥ ಎಸೆವ ವಸಂತಮಾಸದೆ ವಸಂತಮನಾಂತ ಕುಜಾತಪಲ್ಲವ। ಪ್ರಸರದಿ ನಾವಸಂತಸಮಯಂ ಕುಸುಮಾವಳಿಯಿಂದೆ ಪಲ್ಲವಂ ॥ ಮಿಸುಪ

---

೨೧೬. ಸಮ—ಸಮಾನವಾದ; ಸತ್ವ—ಸ್ಥಿತಿಯುಳ್ಳ, ಮನದೆ—ಮನಸ್ಸಿನಿಂದ ಅಥವಾ ಸತ್ವ—ಸತ್ವಗುಣವುಳ್ಳ, ಮನದೆ—ಮನಸ್ಸಿನಿಂದ; ಸಮಸಂದತ್ತು—ಸಮಾನವಾಗಿ ಉಂಟಾಯಿತು.

೨೧೭. ನಿರ್ಭಾಗ್ಯ—ದೌರ್ಭಾಗ್ಯಕ್ಕೆ; ನಿವಾಸೆಯೆಂ—ವಾಸಸ್ಥಾನಳಾದ; ಪಾಪಾಕಾರೆಯೆಂ—ಪಾಪಾಕಾರೆಯಾದ; ಒರ್ವನೆ—ಒಬ್ಬಳೇ ಆದ; ಎಂ—ನಾನು. ಒರ್ವ್+ಎ+ಎಸ್+ಎ=ಒರ್ವನೆ. ಶಮ. ಸೂ. ೯೯, ೨೦೯, ೨೧೯.

೨೧೮. ವಸಂತಮಾಸದೆ—ಚೈತ್ರಮಾಸದಲ್ಲಿ; ವಸಂತಮನಾಂತ—ಕೆಂಪುಬಣ್ಣವನ್ನು ಹೊಂದಿದ; ಪಲ್ಲವಪ್ರಸರದಿಂ—ಚಿಗುರಿನಸಮೂಹದಿಂದ; ಆ ವಸಂತಮುಯುಂ ರಂಜಿಸುವಂತೆ ಎಂದನ್ವಯುವು.

*[ಕಲಾಸಮೆತ್ತಲಾವಣ್ಯರುಚಿ। ಸ್ಸಮುದಮಮಾಸೆಯುಳ್] V

ಳಿವಮಾಲೆಯಿಂ ಕುಸುಮಮಂಜರಿ ರಂಜಿಸುವಂತಿರಲ್ವಿಜೃಂ | ಭಿಸಿದುದು ಯೌವನೋದಯವಿಲಾಸ ಮನುಕ್ರಮದಿಂ ಮದಂಗದೊಳ್ ‖ ೭೮

ತದನಂತರಂ ‖

ವೃ‖ ಸ್ಮರರಾಗಾಂಧತ್ವದಿಂದಂ ಪಗಲೊಳಮಸತೀಕೇಳಿ ಪ್ರೊಣ್ಮಲ್ವಿಯೋಗಾ | ತುರಜೀವಾಹಾರದಿಂದಂ ರತಿಪತಿ ತಣಿಯಲ್ಪುಷ್ಪಚಾಪಾಸ್ತ್ರಟಂಕಾ ‖ ರರನ್ವೋದ್ಭಿನ್ನ ಪ್ರಪಾಂಥಪ್ರಕರಹೃದಯ ರಕ್ತಾಂಬುಗಳ್ಮಾರ್ಗಮಾರ್ಗಾಂ | ತರದೊಳ್ಸೂಸುತ್ತಿರಲ್ಬಂದುದು ಶಿಶಿರನೃಪೋದ್ಯತ್ಕೃತಾಂತಂ ವಸಂತಂ ‖ ೭೦

§ವ‖ ಅಂತುಬಂದ ವಸಂತದೊಳುಳ್ಳಲರ್ದನವನಳಿನಕುಮುದಕುವಲಯಕಲ್ಹಾರಂಗಳಿಂ ಕಂಗೊಳಿಪಚ್ಛೋದಸರಸಿಗೆ ಜನನಿವೆರಸು ಮಜ್ಜನಕ್ಕೆಂದು ನಡೆತಂದು ನೋಳ್ಪಲ್ಲಿ ಶಿಖರರಾಜನಂದಿನಿ ಪೂಜಿಸಲೆಂದು ತಟಶಿಲಾತಲದೊಳ್ ಬರೆದ ವೃಷಡನ ಪಡಿವರಿಜಂ ಕಂಡು ಕುಂಬಿಟ್ಟಾಸರಸ್ತೀರದೇಶದಲ್ಲಿ ‖ ೭೧

§ವೃ‖ ಇದು ಮದಭೃಂಗಕೀರ್ಣ ಕುಸುಮೋತ್ಕರರಮ್ಯಲತಾವಿತಾನದಿಂ | ಇದು ಪಿಕತುಂಡಖಂಡಿತಗಳದ್ರಸಕೋರಕಸಾಲಸಾಲದಿಂ ‖ ಇದು ಶಿಖಿನಾದಭೀತಫಣಿವರ್ಜಿತಚಂದನಭೂಜರಾಜಿ ಯಿಂ | ದೊಪದಿದರಾಗದಿಂದದ ನಭೀಕ್ಷಿಸುತಾಂ ಚರಿಸುತ್ತಮಿರ್ಪಿನಂ ‖ ೭೨

§ಕಂ ‖ ಇಳಿಕ್ಕೈದುಳಿನಲರ್ಗಳಪರಿ | ಮಳಮಂ ಘ್ರಾಣೈಕತರ್ಪಣಂ ಮಿಳದಳಿಸಂ ‖ ಕುಳ ಮೋನೆಸಗಿತ್ತೊವನಾ | ನಿಳನೀತಂ ಕುಸುಮಗಂಧ ಮೋರೆಯೊಂದೆಡೆಯಿಂ ‖ ೭೩

---

೭೦. ಅಸತೀಕೇಳಿ—ಜಾರೆಯರವಿಹಾರವು ; ಪೊಣ್ಮಲ್—ವೃದ್ಧಿಯಾಗುತ್ತಿರಲು ; ರಕ್ತಾಂಬುಗಳ್, ಮಾರ್ಗಾಂತರದೊಳ್—ಮಾರ್ಗಮಧ್ಯದಲ್ಲಿ ; ಸೂಸುತ್ತಿರಲ್—ಚೆಲ್ಲುತ್ತಿರಲು ; ವಸಂತಂ ಬಂದುದು ಎಂದನ್ವಯವು.

೭೧. ಉಳ್ಳಲರ್ದ—ಅರ್ಧವಿಕಸಿತವಾದ ; ಪಡಿವರಿಜಂ—ಪ್ರತಿಕೃತಿಅಂದರೆ ಪ್ರತಿಮೆ ; ಕುಂಬಿಟ್ಟು—ನಮಸ್ಕರಿಸಿ.

§ಈ ಗುರುತಿನ ಪದ್ಯಗಳು ಆಸ್ಥಾನ ಕವಿಗಳಾದ ಬಸಪ್ಪಶಾಸ್ತ್ರಿಗಳಿಂದ ರಚಿಸಲ್ಪಟ್ಟವು ; ಮೂಲಪುಸ್ತಕದಲ್ಲಿರಲಿಲ್ಲ.

ಸ್ರ॥ ಅಂತುಬಂದಮಾನುಷಕುಲೋಚಿತಮು ಮನಾಘ್ರಾತಪೂರ್ವಮುಮೆಸಿಪ ಕುಸುಮಗಂಧಮನಾಘ್ರಾಣಿಸುತ ಮಿದೆತ್ತಣದೆಂದುಕೌತುಕಂ ಮಿಗಲವರಬಳಿವಿಡಿದು ॥ ೨೦೪

ಕಂ॥ ಅರಸಂಚೆಗಳೊಡವರೆ ನೇ। ವುರದಿಂಚರಕೊಲ್ದು ಪೋಗಲಾಂ ಕಿರಿದೆಡೆಯಂ ॥ ಸರಸಿಗೆ ಮಿಾಯಲ್ಕೆಂದೈ । ತರುತಿರ್ದ್ದಂ ಮುಂದೆ ಮುನಿಕುಮಾರಕನೊರ್ವ್ವಂ ॥ ೨೦೫

ಗಿರಿಶನಯನಾನಲಾರ್ಚಿಯಿ । ನುರಿದಂ ಸ್ಮರನೆಂದು ದಂದುಗಂಮಿಗೆ ತಪಮಂ । ಚರಿಯಿಪ್ಪ ವಸಂತನವೊಲ್ । ಕರಮೆಸೆದಂ ರಮ್ಯ ಗಾತ್ರನಾ ಮುನಿಪುತ್ರಂ ॥ ಮತ್ತಂ— ೨೦೬

ಪರಿಪೂರ್ಣಬಿಂಬದೊಂದೈ । ಸಿರಿಯಂ ಪಡೆಯಲ್ಕೆ ಬಯಸಿ ಪಿರಿಗುರುವ್ರತಮಂ ॥ ಧರಿಸಿದ ಗಿರಿಶಶಿರಕ್ಕೇ। ಖರೇಂದುವೆನೆ ಮೆರೆದನಾಮುನೀಂದ್ರಕುಮಾರಂ ॥ ೨೦೭

ವ॥ ಅಂತುಮಲ್ಲದೆಯುಂ—

ಕಂ॥ ಜ್ವಲದನಲಶಿಖಾಂತರದೊ । ಳ್ಪೊಳೆವ ತಟಿಲ್ಲತೆಯೊಳುಷ್ಣಕರಮಂಡಳದೊ । ಳ್ಪೊಳೆದಪನೆನೆ ದೇಹದ್ಯುತಿ। ಬಳಸಿರೆ ನೆಱೆಯುಱಿಯಲಾದುದಿಲ್ಲಾ ಮುನಿಯಂ ॥ ೨೦೮

ನೊಸಲಂ ಪಚ್ಚರ್ಸಿದಂತಿರೆ । ಜಡಂಗುವಡೆದೆಸೆವ ಮುನಿಯ ದೇಹದ್ಯುತಿಯುಂ ॥ ಕಡುಗಪಿಲಮಾಗಿ ಕಾಂಚನ। ದಡವಿಯ ನನುಕರಿಸಿ ತದ್ವನಂ ಸೊಗಯಿಸುಗುಂ ॥ ೨೦೯

ಎಸೆವಂತಿರೆ ಗೋರೋಚನ। ರಸದಿಂದಂ ತೊಯ್ದನೇತ್ರಸೂತ್ರದ ತೆರದಿಂ ॥ ಮಿಸುಗುವ ಕೆಂಜೆಡೆಗಳ್ ರಂ। ಜಿಸುತಿರ್ದ್ದುವು ಭಾವಿಸಲ್ಕೆ ತನ್ಮುನಿವರನಾ ॥ ೨೧೦

---

೨೦೯. ಪಚ್ಚರ್ಸಿದಂತಿರೆ—ಹತ್ತಿಸಿದಹಾಗೆ ; ಕಡುಗಪಿಲಮಾಗಿ—ಅತ್ಯಂತ ಹೊಂಬಣ್ಣವುಳ್ಳದ್ದಾಗಿ.

೨೧೦. ತೊಯ್ದನೇತ್ರಸೂತ್ರದ—ನೆನೆದವಸ್ತ್ರದಬತ್ತಿಯ.

ಕಂ॥ ಮೊದಲೆೊಳ್ಭಸ್ಮದಿನಿಯು ನೊಲಿ । ಸಿದ ತಿಲಕಂ ತಾಸಿದೆಸಿಪ ತಿಲಕಂ ನವಭ ॥ ಸ್ಮದಿ ನೆಸೆಯಲದು ಪುಳಿಲ್ಗ । ಟ್ಟಿದ ಗಂಗೆಯು ಪ್ರಿನಲ ನಿನಿಸನನು ಕರಿಸಿದ್ದರ್ಗಂ ॥ ೭೩೧

ವನಹರಿಣಕುಲಂ ನಿಜಲೋ । ಚನಶೋಭಾಸಂವಿಭಾಗಮಂ ಕೊ ಟ್ಟಿದೊ ಲೋ ॥ ಚನಮಾಲೆ ನಿಮಿರ್ದುದೋ ಮೇ । ಣೆನೆ ಮುನಿಪನ ದೀರ್ಘಲೋಚನದ್ವಯಮೆಸೆಗುಂ ॥ ೭೩೨

ನವಯೌವನರಾಗಂ ಚಿ । ತ್ತವನೆಂದುಂ ಪುಗಲೆ ಪಡೆಯದಿದ್ರ್ದುದೊ ಪೊಱಗೆಂ ॥ ಬವೊಲೆಸೆದು ಪಕ್ವಬಿಂಬ । ಚ್ಛವಿಯಂ ಮಾರ್ಕೊಳ್ವುದಧರ ಮಣಿ ಮುನಿವರನಾ ॥ ೭೩೩

ಮೊಗಮಿಸೆ ಬಿಱರ *[ದಿದ್ರ್ದಂ] । ಸೊಗಯಿಪ ತನ್ಮುನಿಕುಮಾರ ವದನಾಬ್ಜಂ ದಿ ॥ ಟ್ಟಿಗೆ ಚೆಲ್ವವೆತ್ತುಮುಱಿದಂ । ಬಿಗಳೆಱಗದ ಕನಕಕ ಮಲವಮಂ ನೆನೆಯಿಸುಗುಂ ॥ ೭೩೪

ಅದು ಮದನಚಾಪಗುಣಮಂ । ತಮ ಪರಮತಪಸ್ತಟಾಕ ಕಮಲಿನಿಯೊಳಗು ॥ ಣ್ಮಿದ ನವಮೃಣಾಳಮೆನಲೆಸೆ । ದುದು ಮುನಿಗತ್ಯಂತ [ಧವಳ] ಮೆನಿಪ್ಪುಪವೀತಂ ॥ ೭೩೫

ವೃ ॥ ಕರತಳಮೊಂದಱೊಳ್ ಮಣಿಕಮಂಡಲು ನಾಳಸಮೇತಮಪ್ಪ ಕೇ । ಸರಫಲದಂತಿರಿದ್ರ್ದುದು ಮನೋಜವಿನಾಶ †[ದಿನಳ್ವ] ತನ್ಮನೋ ॥

೭೩೧ ಭಸ್ಮದಿಂ—ಭಸ್ಮದಿಂದರಚಿಸಲ್ಪಟ್ಟ, ಅದುತಿಲಕಂ—ಆತಿಲಕವು ; ಎಸೆಯಲ್—ಪ್ರಕಾಶಿಸಲು ; ಪುಳಿಲ್ಗಟ್ಟಿದ—ಮಳಲುಕಟ್ಟಿದ ;

೭೩೨. ಸಂವಿಭಾಗಮಂ—ಮನೋಹರತ್ವವನ್ನು ; ಲೋಚನ—ಜನಲೋಚನಗಳ ; ಮಾಲೆ—ಪಙ್ತಿಯು ; ನಿಮಿರ್ದುದೋ—ವಿಸ್ತಾರವಾಯಿತೋ ; ಎನೆ—ಎಂಬಂತೆ.

೭೩೩. ಪುಗಲೆ—ಪ್ರವೇಶಮಾಡುವದಕ್ಕೆ ; ಪಡೆಯದೆ—ಅಪೇಕ್ಷಿಸದೆ ; ಪಕ್ವಬಿಂಬಚ್ಛವಿಯಂ ಮಾರ್ಕೊಳ್ವುದು—ಪ್ರತಿಭಟಿಸುವದು ; ಅಂದರೆ ತೊಂಡೆಹಣ್ಣಿನಕಾಂತಿಗಿಂತಲೂ ಅತಿಶಯವಾದ ಕಾಂತಿಯುಳ್ಳದ್ದೆಂದಭಿಪ್ರಾಯವು.

*[ದೆತ್ತಂ] †[ವೆನಿಕ್ಪ]

ಹರಿಯ ಪ್ರೇಂಖತ್ಕರ್ಣನಿಗಳಂತಮಲಸ್ಫಟಿಕಾಕ್ಷಮಾಲೆ ಸುಂ | ದರತರ
ಮಾಪುದೊಂದು ಕರಪಲ್ಲವದೊಳ್ಮುನಿಪಾಗ್ರಗಣ್ಯನಾ ॥ ೨೩೬

ಕಂ ॥ ನಿರವದ್ಯ ನಿಖಿಲವಿದ್ಯಾ | ತರಂಗಿಣೀಸಂಗದಲ್ಲಿ ತೋಱುವ
ಸುಳಿಯುಂ ॥ ತಿರೆ ಸುರುಳ್ದ ಮುನಿಕುಮಾರನ | ಸುರುಚಿರಗಂಭೀರನಾಭಿ
ಮಂಡಲಮೆಸೆಗುಂ ॥ ೨೩೭

ಇಂಬಾಗಿರೆ ಬಾಂದೊಱೆಯೊಳ | ಲುಂಬಿದ ಮಂದಾರವಲ್ಕವಿರಚಿತ
ಸವದಿ ॥ ವ್ಯಾಂಬರವಾ ಮುನಿವರನೊ | ಳ್ಬಿಂಬಿಸಿತು ಜರಚ್ಚಕೋರಲೋ
ಚನರುಚಿರಂ ॥ ೨೩೮

ವ ॥ ಅನ್ತುಮಲ್ಲದೆಯುಂ ಬ್ರಹ್ಮಚರ್ಯಕ್ಕಲಂಕಾರಮುಂ ಧರ್ಮಕ್ಕೆ
ನವಯೌವನಮುಂ ಸರಸ್ವತಿಗೆ ಲೀಲಾವಿಲಾಸಮುಂ ವಿದ್ಯಾಪ್ರತತಿಗೆ ಸ್ವ
ಯಂವರಪತಿಯುಂ ಸಮಸ್ತಶ್ರುತಿಗಳ್ಗೆ ಸಂಕೇತನಿಕೇತನಮುಮೆನಿಸಿದನಲ್ಲ
ದೆಯುಂ ॥ ೨೩೯

ವೃ ॥ ತನಗನುರೂಪಮೆಂಬಿನೆಗಮೋರ್ವ ಕುಮಾರತಪಸ್ವಿ ದೇವ
ತಾ | ರ್ಚನೆಗೆ ವನಕ್ಕೆ ಬಂದು ಪ್ರಸವಂಗಳ ನರ್ತಿಯೊಳಾಯ್ದು ಕೊ
ಯ್ದುಬೆ ॥ ಮ್ಮನೆ ಬರಲೀವನಾಂತರಸರೋವರದಲ್ಲಿಗೆ ಮೀಯಲೆಂದು ಮೆ |
ಲ್ಲನೆ ಬರುತಿರ್ದ್ದ ತನ್ಮುನಿಕುಮಾರನ ನಾಂ ಬೆಡೆನೋಡಿದೆಂ ನೃಪಾ ॥೨೪೦॥

ಅಂತು ನೋಳ್ಪನ್ನೆಗಂ—

ವೃ ॥ ಸ್ಮರಶರಾಂತರಾತತಘರ್ಮಬಿಂದುಚಯಮೋ *[ವಿಹಸಾಂಕಮು
ಕ್ತೀಭಜಾ | ಮದಮೋ] ಸಂಪದಲಕ್ಷ್ಮಿಯೊಳ್ನಗೆಯೊ ತಾಂ ಮಂದಾನಿಲಂ
ತಂಕಣಂ ॥ ಬರೆ ಚೈತ್ರಾಂಕುಡುಮರ್ಪ್ಪಲಾಜತತಿಯೋ ಪೇಳೆಂಬಿನಂ ಪ್ರಸ್ವ
ಮಂ | ಜರಿಯುಂ ತನ್ಮುನಿಕರ್ಣಪೂರಕಮನತ್ಯಾಶ್ಚರ್ಯದಿಂ ನೋಡಿದೆಂ ॥೨೪೧

೨೩೮. ಅಲುಂಬಿದ—ತೊಳೆದ; ಬಿಂಬಿಸಿತು—ಪ್ರಕಾಶಿಸಿತು.

*[ಮೋಹಾರಿತೇಕಾಮನಿ | ರ್ಝರಮೊ]

ಕಂ॥ ಗುಂಜನ್ಮದಾಳಿಮಾಲಾ । ಮಂಜರಿ ಬೆನ್ನಟ್ಟಿಬಂದ ನವಸಾ ರಭವಂ ॥ ರಂಜಿಸಿ ತೋಱುವ ಸುಮನೋ । ಮಂಜರಿಯಿಂ ಬಂದುದೆಂದು ಪರಿಭಾವಿಸಿದಂ ॥ ॥ ೭೪೨

ವ॥ ಅಂತುಭಾವಿಸುತ್ತ ಮಾಮುನಿಕುಮಾರವದನೇಂದುಬಿಂಬಮಂ ನೋಡಿ ॥

ವೃ॥ ಸಿರಿಸಲೆಮಿಂಪವಿಪ್ಪ ನೆಲೆ ಕಣ್ಗಳ ಪರ್ವ ಮೆನಿಪ್ಪ ಪಂಕಜೋ। ತ್ಕರಮುಮ ನಿಂದುಮಂಡಲಮುಮಂ ಮೊದಲೊಳ್ ಮೆವಬ್ಜಜಂ ಮನೋ ॥ ಹರಮೆನೆ ಮಾಡಿದೀಮೊಗದ ಪೋಲ್ವೆಗೆ ಮುನ್ನೆಗಳಲ್ತಗುಳ್ದು ಚಿತ್ತರಿಸಿದ ನಲ್ಲದಿಂತು ಸಮವಸ್ತುಗಳಂ ಪಡೆವಂತು ಗಾಂಪನೇ ॥ ಮತ್ತಂ— ೭೪೩

ವೃ *[ಕೇಳಿಸುಷುಮ್ನೆಯೆಂಬ ಕರದಿಂ ಗಡ]ಚಂದ್ರಕಲಾಕಲಾಪ ಮಂ । ಕಾಲದೊಳುಂಡುವಾಲಿ ತೆಗೆದೀಂಟುವನೆಂಬುದಸತ್ಯ ಮಾಪ್ರಭಾ ॥ ಜಾಲಕಮೆಲ್ಲ ಮೀತನುಮಿನೊಳ್ಪುಗುತಿರ್ಪುದು ತಪ್ಪದಲ್ಲದಿಂ । ತೀಲಲಿ ತಾಂಗ ಮಾತಪದೊಳಿಂತಿರೆ ಕಾಂತಿಯ ನಪ್ಪುಕೆಯ್ಗುಮೇ ॥ ॥ ೭೪೪ ॥

---

೭೪೨. ಗುಂಜತ್—ಧ್ವನಿಮಾಡುವ ; ಮದಾಳಿಮಾಲಾಮಂಜರಿ—ಮಂಜರಿ ಯಂತೆ ಗುಂಪಾಗಿರುವ ಭ್ರಮರಸಮೂಹದಿಂದ ; ಬೆನ್ನಟ್ಟಿ—ಅನುಸರಿಸಲ್ಪಟ್ಟು ; ತೋ ಱುವ—ಮುನಿಕುಮಾರನ ಕರ್ಣದಲ್ಲಿ ಕಾಣಿಸುವ.

೭೪೩ ಸಮೆದ—ಮಾಡಿದ ; ಅಬ್ಜಜಂ—ಬ್ರಹ್ಮನು : ಮನೋಹರಮೆನೆ— ಮನೋಹರವಾಗಿ ; ಮಾಡಿದ ಈಮೊಗದ—ಈ ಮುನಿಕುಮಾರಕನಮುಖದ ; ಪೋಲ್ವೆ ಗೆ—ಹೋಲಿಕೆಗಾಗಿ ; ಮುನ್ನ—ಮೊದಲು ; ನೆಗಳಲ್ತಗುಳ್ದು ; ಕಮಲಚಂದ್ರರನ್ನುಮಾ ಡುವದಕ್ಕೆ ಉಪಕ್ರಮಿಸಿ ; ಚಿತ್ತರಿಸಿದಂ—ಅಭ್ಯಾಸಮಾಡಿಕೊಂಡನು ; ಅಲ್ಲದೆ— ಹಾಗಲ್ಲದೆ ಇದ್ದರೆ ; ಇಂತು—ಹೀಗೆ ; ಸಮವಸ್ತುಗಳಂಪಡೆವಂತು—ಸಮಾನವಸ್ತುಗ ಳನ್ನುನಿರ್ಮಿಸುವಷ್ಟು : ಗಾಂಪನೇ—ಮೂಢನೆ ಅಂದರೆ ಚಂದ್ರಕಮಲಗಳಿಗಿಂತಲೂ ಈತನ ಮುಖವು ಸುಂದರವಾಗಿತ್ತೆಂದಭಿಪ್ರಾಯವು.

೭೪೪. ಸುಷುಮ್ನೆ—ಸುಷುಮ್ನೆಯೆಂದುಹೆಸರುಳ್ಳ ; ಕರದಿಂ—ಕಿರಣದಿಂದ ; ಕಾಲದೊಳ್—ಕೃಷ್ಣಪಕ್ಷದಕಾಲದಲ್ಲಿ ; ಈಂಟುವಂ ಎಂಬುದ ಕೇಳಿ ಎಂದನ್ವಯವು.

*[ಕೇಳಶುಶರ್ಮನೆಂಬಕರಗಂಗಡ]

ವ॥ ಎಂದು ರೂಪೈಕಪಕ್ಷಪಾತಮಂ ಭಾವಿಸುತ್ತಮಿರ್ಪ್ಪುದುಂ॥

ಕಂ॥ ನವಯೌವನದೊಳ್ ಗುಣದೊಳ್ । ಷವಿಚಾರಮನಿಂತು ಮಾಡಲೀಯದ ಭಾಗ್ಯೋ । ದ್ಭವನಿಂ ಪರವಶೆಯಾದೆಂ । ನವಕುಸುಮಾಸವದೆ ಸೊಕ್ಕಿದಳಿನಿಯ ತೆಱದಿಂ ॥ ॥ ೨೪೫ ॥

ವ॥ ಅನಂತರಮುಸಿರೊಡನೆಮೆಯಿಕ್ಕುವುದಂ ಮಱೆದು ಪರಿದು ಪತ್ತಲವ್ವಳಿಸಿ ಕಳವಳಿಸಿ ಕೊಂಕಿ ಬಳಸುವೆಳಸುವಲರ್ಗಂಗಳಿಂ ತದ್ರೂಪಲಾವಣ್ಯರಸಮನೀಕ್ಷಱಿಂ ಬರೆಪೀರ್ವ್ವಂತೆ ನಿನಗೊಳಗಾದೆನೆಂಬಂತೆ ಮನಸಂಗದ್ಯುಳ್ಳಿಕ್ಕೆ ತೋರ್ಪ್ಪನೆಂಬಂತೆ ತನ್ಮಯಮಾಗಲೊಡರಿಪೆನೆಂಬಂತೆ ಮದನನಲೆದಪಂ ಕಾಯೆನ್ನನೆಂಬಂತೆ ಶರಣ್ಬುಗುವೆನೆಂಬಂತೆ ಮನದೊಳೆಡೆಗುಡದೊಪ್ಪಳಪಂ ತೋಱುವಂತೆ ಕುಲಹೀನಕನ್ಯಕಾಜನೋಚಿತಮತಿಲಜ್ಜಾಕರಮನೋರಥವಿದೆನಗೆತಕ್ಕುದಲ್ಲದುದಂ ನೆಗಳ್ದೆನೆಂದಱಿವೆನಾಗಿಯುಂ ಅತ್ಯಾಸಕ್ತಿಯಿಂ ಮಱವಟ್ಟರಂತೆಯುಂ ಚಿತ್ರಿಸಿದರಂತೆಯುಂ ಮೂರ್ಛೆವೋದರಂತೆಯುಂ ಆರಾನುಂಪಿಡಿಕೆವೆತ್ತರಂತೆಯುಂ ಮಿಡುಕದೆನೋಡುತಿರ್ದ್ದನನ್ನೆಗಂ॥ ೨೪೬

ವೃ॥ ಪೂಗಣೆನಾಂಟಿದಂತೆ ತನುಕಂಪಿಸುತಿರ್ದ್ದುದು ಘರ್ಮ್ಮವಾರಿಯಿಂ । ದಾಗಳೆ ಕಜ್ಜಿರ್ದಂತೆ ನೆಱೆಪೋದುದು ಲಜ್ಜೆ ಮರಳ್ದು ತನ್ಮಹಾ ॥ ಭಾಗನ ರೂಪನೀಕ್ಷಿಸುವಪ್ಪೋೞ್ಪುಳಕಂ ತಳೆದೋಱಿದತ್ತು ಕಾ । ಮಾಗಮನಕ್ಕೆ ಪಕ್ಕುಗುಡುವಂತೆ ಪೊದಿರ್ದ್ದುದು ಸುಯ್ಯಿನಂತರಂ ॥ ೨೪೭

---

೨೪೬. ಉಸಿರೊಡನೆ—ಶ್ವಾಸದೊಡನೆ; ಎಮೆಯಿಕ್ಕುವುದಂ—ರೆಪ್ಪೆ ಹಾಕುವುದನ್ನು; ಪರಿದು—ಬಿಟ್ಟು, ಅಂದರೆ ಸ್ತಬ್ಧವಾಗಿ; ಪತ್ತಲವ್ವಳಿಸಿ—ಮೇಲೆಮೇಲೆ ಪದಕ್ಕೆ ಆತುರಪಟ್ಟು; ಕೊಂಕಿ—ವಕ್ರತ್ವವನ್ನು ಹೊಂದಿ; ಅಲೆದಪಂ—ಬಾಧಿಸುತ್ತಾನೆ; ಅಳಪಂ—ಅಪೇಕ್ಷೆಯನ್ನು; ಮಱವಟ್ಟರಂತೆ—ಸ್ತಂಭಿತರಾದವರಂತೆ; ಪಿಡಿಕೆವೆತ್ತರಂತೆ—ಬದ್ಧರಂತೆ.

೨೪೭. ಮರಳ್ದು—ಪುನಃ; ಪಕ್ಕುಗುಡುವಂತೆ—ಆಶ್ರಯವನ್ನು ಕೊಡುವ ಹಾಗೆ.

ಕಂ॥ ಇನ್ನವರೊವಲಾಗೊಪ್ಪೆಯೆ ಮದ । ನವಿಕಾರಂ ಪಲವುಮಾ
ಗಳಾಗುತ್ತಿರೆ ಮು । ನ್ನವ ನಱಿಯದವಳೆ ಸತ್ತ್ವಭಿ । ನವಸಾಧ್ವಸವಾಗ
ಲ್ಕೆ ತಳವೆಳಗಾದೆಂ ॥ ೨೪೮

ಅನ್ತು ಬೆಗಡುಗೊಂಡು—

ಕಂ॥ ನಿಯತೇಂದ್ರಿಯನೊಳ್ತೇಜೋ । ಮಯನೊಳ್ ರೂಪೈಕಪ
ಕ್ಷಪಾತದೆ ನೆಱೆಸೀ । ತಿಯ ನುೞಿದು ಮುನಿಪನೊಳ್ನಿ । ರ್ದಯನಂಗಜನೆ
ನ್ನನಿಂತಿರಲ್ಸೋಲಿಸುವೋ ॥ ೨೪೯

ಕೂರ್ತ್ತಂಗನೆಯನ್ನೀರ್ಗ್ಗತಿಯ । ವಾರ್ತೆಯುಮಂ ಬಿಸುಟು ಪತ್ತುವ
ಪ್ಪೃತ್ತಲೊಡಂ । ಧೂರ್ತೆಯಿವಳೆಂಗುವೋ ಎಂ । ತಾರ್ಪೆನಿಲ್ಲಾವತೆಱ
ದೊಳಂ ನಿಲೆಪಿಡಿಯಲ್ ॥ ೨೫೦

ವೃ॥ ಪಲಬರ್ಕಾಂತೆಯರೊಲ್ದು ಪ್ರೇಮರೊಳರೆಂತುಂ ಕಾಂತರೊ
ಳ್ಬೇಟವ । ಗ್ಗಲಿಸಲ್ಕಾಣದೆ ಲಜ್ಜೆಗೆಟ್ಟರೊಳರಿಂತೀಲೋಕದೊಳ್ ರೂಪು
ಗಾ । ಣಲೊಡಂ ತೊಟ್ಟನೆ ಲಜ್ಜೆಗೆಟ್ಟೞಿವುಗೆಟ್ಟೆನ್ನಂತೆ ಕಣ್ಗೆಟ್ಟುಪೇ ।
ಳೊಲವಿಂದಿಂತೆರ್ದೆಗೆಟ್ಟರಾರೆನುತು ಮತ್ತ್ಯೌತ್ಸುಕ್ಯಮಂತಾಳ್ದಿದೆಂ ॥ ೨೫೧

ವ॥ ಅಂತಾಶ್ಚರ್ಯವಮಂ ತಳೆದುಮನನ್ನನಾನೆಸಂತೈಸಿ ॥

ವೃ॥ ಎನ್ನೆವರಂ ಸಚೇತನೆಯೆ ನೆನ್ನೆವರಂ ಲಘುವಾಗದಿರ್ಪೆನೋ ।
ಅನ್ನೆಗಮೀಗಳೀಯೆಡೆಯಿನಾಂ ತೊಲಗಿರ್ಪುದು ಕಜ್ಜಮಲ್ಲದಂ । ದೆನ್ನ
ಯ ಮನ್ಮಥೋಚಿತವಿಕಾರಮ ನೀಕ್ಷಿಸಿ ಸೋಲ್ತುಳಕ್ಕಟಾ । ಎನ್ನದೆ
ಶಾಪಮಂ ಕುಡುವನಂತುಟೆ ಕೋಪಿಗಳಲ್ತೆ ತಾಪಸರ್ ॥ ೨೫೨

---

೨೪೮. ಮುನ್—ಮೊದಲು; ಅವಂ—ಆ ಮನ್ಮಥವಿಕಾರಗಳನ್ನು; ಅರಿಯದ
ವಳೆಂ—ಅರಿಯದನಾನು; ಸಾಧ್ವಸಂ—ಭಯದೊಡನೆಕೂಡಿದಸಂಭ್ರಮವು; ತಳವೆಳ
ಗಾದೆಂ—ತಲ್ಲಣಿಸಿದೆನು.

೨೫೦. ಪತ್ತುವರ್—ಮೇಲೆಬೀಳುವರು; ಎಂಗುವೋ—ಎಂದಾನೋ; ಎಂತಾ
ರ್ಪೆಂ—ಹ್ಯಾಗೆಸಮರ್ಥಳಾದೇನು; ನೆಲೆಪಿಡಿಯಲ್—ಚಿತ್ತಸ್ಥೈರ್ಯವನ್ನು ಹೊಂದುವ
ದಕ್ಕೆ; ಆವತೆರದೊಳಂ—ಯಾವರೀತಿಯಿಂದಲೂ; ಇಲ್ಲ—ಆಗುವದಿಲ್ಲ.

ವ॥ ಎಂದು ಪೋಗಲುದ್ಯೋಗಂಗೆಯ್ದು ನಿಖಿಳಜನಪೂಜಾರ್ಹರನ ಪ್ಪೆಣ್ಗೆಯ್ಯಲಾಗದೆಂದು ॥ ೨೫೩

ವೃ॥ ತೊಳಗುವ ಚೆನ್ನಪೂಗಳಲಕಾವಳಿಯೊಳ್ಮಿಱುಗಲ್ಕಪೋಲ ಮಂ । ಪಳಿತಳದೊಳ್ತೊಳಂಬೊಳೆಯೆ ಕೋಮಲಪಲ್ಲವ ಕರ್ಣಪೂರಮಂ ॥ ಜಳಮಣಿಕುಂಡಲಂ ಪಗಲೊಳಾಡೆ ಮರಳ್ದವೆಯಿಕ್ಕದಾಂ ಮನಂ । ಗೊ ಳಿಪ ಮುನೀಂದ್ರಸಾನನಮ ನೀಕ್ಷಿಸುತಂ ಪೊಡಮಟ್ಟ ನಳ್ಕಱಿಂ ॥ ೨೫೪

ತದನಂತರಂ—

ವೃ॥ ಮದನಂ ದುರ್ಜಯ ನಿಂದ್ರಿಯಂಗ ಳನಿವಾರ್ಯಂಗಳ್ವಸಂತಂ ಮದ । ಪ್ರದ ನಾಸ್ಥಾನವತೀವರವ್ಯ ಮೆನಗಂ ದುಃಖಂಬರಲ್ವೇಳ್ಕು ಮು । ಪ್ಪದಱಿಂ ಭಾವಿಸಿ ಮದ್ವಿಕಾರಮನೆ ನೋಡುತ್ತಿರ್ಪ್ಪುದುಂ ಗಾ ಳಿಗೊ । ಡ್ಡಿದ ದೀಪಾಂಕುರದಂತೆ ತನ್ಮನಿಯುಮಂ ಕಾಮಂ ಚಲಂ ಮಾಡಿದಂ ॥ ಅನ್ತುಮಾಡೆ— ೨೫೫

ವೃ॥ ಮನಮೆನ್ನಂ ಮುಂಬರಲ್ಕಿಂದುವರಿವುದನೆ ತೋರ್ಪ್ಪಂತೆ ನಿಳ್ದಿತ್ತು ಸುಯ್ಯೊಂ । ಕೆನಲಂತೆಯ್ತಪ್ಪ ಕಾಮುಂಗೊಲವಿನೊಳದಿರೇ ಳ್ವಂತೆ ರೋಮಾಂಚಮುಂ ತೊ ॥ ಟ್ಟನೆ ಮೊಯ್ದೋಱಿತ್ತು ವೀರವ್ರತವಳಿ ದಪ್ಪುದೆಂದು ನಟ್ಟುಂಜೆದಂತಾ । ತನ ಕಯ್ಯೊಳ್ರಂಜಿಪಕ್ಷಾವಳಿ ನಡುಗಿ ದುದಸ್ತಾಂತನಾಶ್ಚರ್ಯವಾಗಲ್ ॥ ಅಂತುಮಲ್ಲದೆಯುಂ— ೨೫೬

ಕಂ॥ ಕರಮೆಸೆದು ತೋಱುತಿರ್ದ್ದಪ್ರು । ದಿರದನೆಯ ವತಂಸಕುಸು ಮಮಂಜರಿ ಯೊಂಬಂ । ತಿರೆ ತತ್ಕಪೋಲದೊಳ್ಬ । ತ್ತರಿಸಿದುವು ಕೊನ ತ್ತರ್ಜಿಮುರ ಬಿಂದುಗಳಾಗಳ್ ॥ ೨೫೭

ವೃ॥ ವಸದೊಂದಕ್ಕಜೊಳೆಸ್ಸ ನೊಪ್ಪಿದನೆನೋಡುತ್ತಿರ್ಪ್ಪ ಮಂ ಕಣ್ಣಿಟೆ । ಳ್ವಿ ॥ ನಗುವ್ಪನಸ್ಥ ॥ ಳಮಂ ನಿತಾಬ್ಜಮುದುಮೊಂಬಂದಣೆಯುಂ

೨೫೫. ಅಜಿನೋಡುತ್ತಿರ್ಪ್ಪದುಂ—ದಿಟ್ಟಿಸಿ ನೋಡುತ್ತಿರಲು; ಕಣ್ಣಿಟೆ ಳ್ವಿದ—ನೇತ್ರಕಾಂತಿಯು; ಅಗುರ್ವ್ಪ—ಅಧಿಕವಾದ; ಅಸ್ಥಳದ—ಅವರು ನಿಂತಿದ್ದ

[[illegible]]

ಮೂಡಿ ಭೋಂ ॥ ಕೆನಲಚ್ಛೋದಸರೋಂಬುವಂ ಕುಮುದಷಂಡಂ ಬಿಟ್ಟುತ
ಳ್ತತ್ತು ಮೇ । ಲೆ ನಭೋಭಾಗಮನೆಂಬಿನಂ ಪಸರಿಸಿತ್ತಾಗಳ್ದಿಶಾಚಕ್ರಮಂ॥

ವ ॥ ಅಂತೆಯ್ದೆ ಮತ್ತಮೆನ್ನೊಳ್ಸಂಭೋಗ ಲೀಲಾನರ್ತನಕ್ಕೋಜ
ನಪ್ಪ ಮನೋಜಂ ವಿಲಾಸೋಪದೇಶಕ್ಕೋಜನಾಗಲೆವೇಳ್ಕು ಮಲ್ಲದಂದು
ರತಿರಸಾಸ್ವಾದಂಗಳನಱಿಯದನ ದಿಟ್ಟಿಗಮರ್ದನುಗುಳ್ವಂತೆ ಗೆಯ್ವಂದ
ಮುಂ ಬಸದುರ್ ಪರಿದಪ್ಪುದೆನಿಪ ರತಿರಸಮು ಮಾನಂದಬಾಷ್ಪಪ್ರಸ
ರಮುಂ ರಸಭಾರದಿಂ ನಡುಗುವಂತೆ ಸಂಚಳಿಸುವಂಗಮುಂ ಇನಿಸಪ್ಪೊ
ಡಂ ಪೊಡರ್ಪನಪ್ಪುಕೆಯ್ಯದಿಳಿಯೆ ಪೂದಳೆದುದೆನಿಪ ಪುರ್ಬಿನ ಕುಡಿವೆರ
ಸು ತೂಕಡನೊಳಕೊಂಡ ಜಾಡ್ಯಮುಂ ಸೊಕ್ಕು ಮುಕ್ಕುಳಿಸಿದಂತಿರ್ದಿ
ರವುಂ ಬಳಲ್ದಂತೆ ಜೋಲ್ದಂದಮುಂ ಮುನ್ನಮಭ್ಯಾಸಮಿಲ್ಲದುದಕ್ಕೆಂ
ತು ದೊರೆಕೊಳ್ಗುಮೆಂದು ಭಾವಿಸಿ ನೋಡುತ್ತಾತನೊ ಳವಸರಂಬಡೆದು
ಮೆಲ್ಲನೆಯ್ದೆವಂದು ॥ ೨೪೯

ವೃ॥ ಪೆಸರೇನಾಗ್ಗಿರ್ತ ನಿಜವ್ವನಿಗತವಸಿ ತೊಟ್ಟಿರ್ಪ್ಪ ಕರ್ಣಾವ
ತಂಸಂ । ಪೊಸತೀಲೊಕಕ್ಕಿದಾವಂಘ್ರಿಪದ ಪೊಳೆವ ಪೂಗೊಂಚ *[ಲಿಂದಾ
ದುದೋ] ನೀಂ ॥ ಬೆಸಸಲ್ವೇಳ್ಕುಂತಿದಂ ಕೌತುಕಮನೆನಗೆ ನುತ್ತಂ ನಮ
ಸ್ಕಾರಪೂರ್ವಂ । ಬೆಸಗೊಂಡೆಂತನ್ನುನೀಂದ್ರಾನುಚರಮುನಿಯು ನಾನಂದತಿ
ಪ್ರೀತಿಯಿಂದಂ ॥ ಅನ್ತು ಬೆಸಗೊಳೆ– ೨೫೦

ಸ್ಥಳವನ್ನು ; ಕುಮುದಷಂಡಂ—ಕುಮುದ ಸಮೂಹವು ; ಅಚ್ಛೋದ ಸರೋಂಬುವಂ ಬಿಟ್ಟು ನಭೋಭಾಗವಂ ತಳ್ತತ್ತು ಎಂಬಿನಂದಿಶಾ ಚಕ್ರವಂ ಪಸರಿಸಿತ್ತು ಎಂದನ್ವಯವು.

೨೪೯. ಓಜನಪ್ಪ—ಆಚಾರ್ಯನಾದ ; ಅಮರ್ದನುಗುಳ್ವಂತೆ—ಅಮೃತವನ್ನುವನ್ನು ವರ್ಷಿಸುವಹಾಗೆ ; ಗೆಯ್ವಂದಮುಂ—ಮಾಡುವರೀತಿಯೂ ; ಬಸದುರ್—ಸ್ರವಿಸಿ ; ಸಂಚಲಿಸುವ ; ಅಂಗಮುಂ—ರೀತಿಯೂ ; ಪೊಡರ್ಪನಪ್ಪುಕೆಯ್ಯದೆ—ಚಲಿಸದೆ ; ಇಳಿಯೆ—ದೃಷ್ಟಿಪಾತ ಉಂಟಾಗಲು ; ಪೂದಳೆದು ದೆನಿಪ—ಹುವ್ವನ್ನು ಧರಿಸಿತು ಎನ್ನಿಸಿಕೊಳ್ಳುವ ; ತೂಕಡ ನೊಳಕೊಂಡಂತೆ—ನಿದ್ರೆಯಿಂದ ಕೂಡಿದಂತೆ.

೨೫೦. ಆಗ್ಗಿರ್ತಂ—ಈತನು ಯಾರಸಂಬಂಧಿಯು ; ಪೊಸತು—ಆಶ್ಚರ್ಯಕರವಾದದ್ದು.

*[ಲೆಂದಿಂತಿದಂ]

ಕಂ॥ ಬೆಸಗೊ *[ಳ್ವುದಱಿಂದಿವನು] । ದ್ದಿಸವಾವುದು ತರುಣಿನಿನಗೆ ಕೌತುಕವೆನೆ ಕೇ ॥ ಳುಸಿರ್ದಪೆ ನೆಂದಾಮುನಿಪಂ । ನಸುನಗುತಂ ಪೇಳ ಲಾಗಳುದ್ಯತನಾದಂ ॥ ೨೬೧

ವ॥ ಅದೆಂತೆನೆ ಸಕಲಮುನಿವೃಂದವಂದಿತಚರಣನು ಮಖಿಲಮುನಿಜನಾನಂದನನುಂ ವಿದಿತನಿರವದ್ಯವಿದ್ಯಾಕಲಾಪನು ಮಪ್ರತಿಮರೂಪನು ಮಪ್ಪೊಬ್ಬ ಶ್ವೇತಕೇತುವೆಂಬ ಮಹಾಮುನಿ ಯಮರಲೋಕದೊಳಿರ್ಪ್ಪನಾತನೊಂದುದಿವಸಂ ಪುಂಡರೀಕವೆಂಬ ಸರೋವರಮಂ ಮೀಯಲೆಂದು ಬಂದಿರೆ ॥ ೨೬೨

ವೃ॥ ಅರವಿಂದಾಕರ ಸಾಂದ್ರ ಪದ್ಮವನಮಧ್ಯೋದ್ದೇಶದೊಳ್ ಲ
ಕ್ಷ್ಮಿ ಭಾ । ಸುರವಿಸ್ತೀರ್ಣಸಿತಾಬ್ಜದಲ್ಲಿ ಪದಪಿಂ ಪ್ರತ್ಯಕ್ಷಮಿರ್ಪ್ಪಳ್ ನಿರಂ ।
ತರ ಮಾಕೋಮಳೆ ಪದ್ಮಸದ್ಮತಟದೊಳ್ ನಿಂದಿರ್ದ್ದ ಸರ್ವಾಂಗಸುಂ । ದರ
ನಂ ದಿವ್ಯಮುನೀಂದ್ರನಂ ಪಿರಿದುಮೊಂದಾಸಕ್ತಿಯಿಂ ನೋಡಿದಳ್ ॥ ೨೬೩

ಅಂತುನೋಡೆ—

ವೃ॥ ನೋಡಲೊಡಂ ರತಾಂತಸುಖಮಾಗೆ ನಿಜಾಸನಪುಂಡರೀಕ
ದೊ । ಳ್ನೋಡೆ ಕೃತಾರ್ಥೆಯಾದಳದಱಿಂ ನಾಗಳೆ ಗಾಡಿನಾಡೆ ಕ ॥
ಣ್ಗೂಡಿರ ಲೋರ್ವ್ವನುದ್ಭವಿಸೆ ಕಂಡು ನಿಜಾತ್ಮಜನೀತ ನೆಂದವ । ಳ್ನೀ
ಡಿದ ಳಾಕುಮಾರಕನ ನಾಮುನಿಪಂಗೆ ಮನೋನುರಾಗದಿಂ ॥ ೨೬೪

ವ॥ ಆಗಳಾತಂ ಯೋಗದೃಷ್ಟಿಯಿಂ ನೋಡಿ ತತ್ಕುಮಾರನಂ ಕೈಕೊಂಡು ಬಾಲಜನ್ಮೋಚಿತಕ್ರಿಯೆಗಳಂ ಮಾಡಿ ಜನ್ಮಾನುರೂಪಮಾಗೆ ಪುಂಡರೀಕನೆಂದು ಪೆಸರಿಟ್ಟು ಶೈಶವಮಂ ಪತ್ತುವಿಡಲೊಡಮಖಿಳವಿದ್ಯಾಕಲಾಪದೊಳ್ ಪರಿಣತನಂ ಮಾಡಿ ಯತಿತ್ವಮಂ ಕಯ್ಕೊಳಿಸಿ ತದನುಷ್ಠಾ

---

೨೬೧. ಇದಂ — ಈ ಪೂರ್ವ್ವಕತ್ತ ಸಂಗತಿಯನ್ನು ; ಬೆಸಗೊಳ್ವುದಱಿಂ — ಕೇಳುವದರಿಂದ ; ಕೌತುಕವೆನೆ — ಕುತೂಹಲವಿದ್ದರೆ.

೨೬೪. ಗಾಡಿ — ಸೊಬಗು ; ನಾಡೆ — ಚೆನ್ನಾಗಿ, ಕೈಗೂಡಿರಲ್ — ಉಂಟಾಗಿರುವಹಾಗೆ.

*[ಳ್ವುದಱಿನಾಮುನಿಯಿ]

ನಪರಾಯಣಸಾದ ಮಹಾನುಭಾವ ನೀತಂಗೀವ್ರತವಿರುದ್ಧಮಪ್ಪ ಕುಸುಮ ಮಂಜರಿಯೆಂತು ಬಂದುದೆಂಬೆಯಪ್ಪೊಡೆ ॥ ೨೬೫

ಕಂ॥ ಇಂದು ಚತುರ್ದಶಿ ಯಪ್ಪುದ । ಱಿಂದಂ ಕೈಲಾಸವಾಸಿಯಂ ಕಾಣಲ್ಕಾ ॥ ನಂದನದಿಂ ದಿಬ್ಬರು । ವೊಂದಾಗಿ ಬರುತ್ತಮಿರ್ಪ್ಪರ್ ದುಂ ತತ್ಕ್ಷಣದೊಳ್ ॥ ೨೬೬

ವೃ॥ ಕುಸುಮವಿಭೂಷಣಾನ್ವಿತೆ ನವಪ್ರಸವಾಸವಪಾನಮತ್ತೆ ರಂ। ಜಿಸುವ ವಸಂತಲಕ್ಷ್ಮಿಯ ಕರಾಗ್ರದೊಳಿಕ್ಕಿ ಸಚಾಂಪಜಾಲಮಂ ಪಸರಿಸುತಿರ್ಪ್ಪ ತನ್ನ ಕರಮಂ ವನದೇವತೆ ಪಾರಿಜಾತದೊಂ। ದೆಸೆವ ಲತಾಂಚಲಂ ಪಿಡಿದು ನಾವನದೊಳ್ಬರುತೊರ್ಪ್ಪಳೊಪ್ಪಿದಳ್ ॥ ೨೬೭

ವ॥ ಅನ್ತು ಬಂದು ಪ್ರೋತವಟ್ಟು ಭುವನತ್ರಯಾಭಿರಾಮಮಪ್ಪ ನಿನ್ನ ಸೌಗುಮಾರ್ಯಕ್ಕೆ ತಕ್ಕಲಂಕಾರ ಮಿದು ದಿವ್ಯಕುಸುಮಮಂಜರಿಯನವತಂಸಂಮಾಡಿ ಪಾರಿಜಾತಜನ್ಮಮಂ ಸಫಲಮಮಾಳ್ಪುದೆಂದು ಬಿನ್ನವಿಸೆ ನಿಜರೂಪಸ್ತುತಿಗೆ ಲಜ್ಜಿಸಿ ಕೇಳದಂತೆ ಪೋಗೆ ಮತ್ತಂ ಬೆನ್ನನೆಸತ್ತು ಬರುತಿರ್ಪ್ಪ ದಮಗೆಂಕಂಡು ಕಾರುಣ್ಯದಿಂದೀಕಾಂತೆಗೆ ಸಂತೋಷಮಮಾಡಿ ಮೆನಲಿದೇಕೆ ಬೇಡವೇಡೆನೆಯುಂ ಕಿವಿಯೊಳಿತ್ತು ಡಬ್ಬಿರ್ ಪೋದಳೀಕುಸುಮಮಂಜರಿಯನೆಂದು ಸಹಚರಮುನಿ ಪೇಳೆ ಪುಂಡರೀಕಂ ದರಹಸಿತಾಧರಕಪೋಲತಲನಾಗಿ ॥ ೨೬೮

ವೃ॥ ಎಳಸುತ್ತಿರ್ದ್ದಪೆ ಪುಷ್ಪಮಂಜರಿಗೆ ಕೊಳ್ಳೀಸುತ್ತಿದೇಕೆಂದು ಸಂ। ಚಳಸುತ್ತಂ ನಿಜಕರ್ಣದಿಂ ತೆಗೆದು ಸೋಲ್ತಂಕೂಡುನೀನೆನ್ನೊಳಿಂ॥ ದಳಮಾಲಾರವದಿಂದೆ ಪೇಳ್ವ ಕಟದಿಂ ಮತ್ಕರ್ಣದೊಳ್ತಾರಕೋ। ಜ್ವಲಮಂ ರಂಜಿಪ ಪುಷ್ಪಮಂಜರಿಯ ನತ್ಯೌತ್ಸುಕ್ಯದಿಂ ದಿಕ್ಕಿದಂ ॥ ೨೬೯

---

೨೬೭. ಬರ್ಪ — ವನದೇವತೆ ತನ್ನ ಕರಮಂ ವಸಂತಲಕ್ಷ್ಮಿಯ ಕರಾಗ್ರದೊಳಿಕ್ಕಿ ಅಂದರೆ ವಸಂತಲಕ್ಷ್ಮಿಯ ಹಸ್ತಾವಲಂಬನವುಳ್ಳವಳಾಗಿ ಎಂದಭಿಪ್ರಾಯವು.

೨೬೯. ಈಸುತ್ತು — ಈ ವಕ್ರಮಾರ್ಗವು; ಏಕೆ — ಯಾತಕ್ಕೆ; ಕೊಳ್ — ತೆಗೆದುಕೊ; ತಾರಕೋಜ್ವಲಮಂ — ನಕ್ಷತ್ರಗಳಂತೆ ಹೊಳೆಯುವ.

ಕಂ॥ ಇಂಪೆಳ್ವುದೇನ ನೆನ್ನಕ । ದಂಪಿನ ನಸುಸೋಂಕಿನೊಂದು ಸುಖದಿಂದಾಪಂ ಕಂಪಿಸುತಿರೆ ಕರತಳದಿಂ । ದಂ ಪೋದತ್ತಕ್ಷಮಾಲೆ ಸಾಸ್ತ್ವಿರಸಾಗಳ್ ॥ ೨೨೦

ವ ಅಂತು ಪೋದೊಡಮಱಿಯದಿರೆ—

ಕಂ॥ ತೊಳಗುವ ಹಾರಮನಾಗ । ಳ್ತಳೆವಂತಿರೆ ನೆಲಕೆ ಬೀಳ್ವನಂ ಪಿಡಿದಸ್ತ್ರಾ । ವಳಿಯುಂ ಕೊರಲೊಳ್ತಳೆದಾಂ । ತಳೆದಂ ಮುನಿಪತಿಯ ತೋಳತಳ್ಕಿನ ಸುಖಮಂ ॥ ೨೨೧

ವ॥ ಅಂತಾವ್ಯತಿರೇಕದೊಳೆನ್ನಂ ಛತ್ರಧಾರಿಣಿ ನೋಡಿ ॥

ವೃ॥ ತಡೆವಿರಲಾಗದಿನ್ನು ಮೊಗಮಜ್ಜನಮಂ ನೆಱೆಮಾಡಿ ದೇವಿಯು । ಸ್ನರ್ಡೆಗೊಳಲಿರ್ದ್ದಪ ಪ್ಮರ್ನೆಗೆ ಮಜ್ಜನಕೇಗಳೆ ರಾಜಪುತ್ರಿ ನೀಂ॥ ನಡೆಪ್ರಸೆಸುತ್ತ ಮಿಱ್ಕಿಯುಣಮಿಲ್ಲದೊಡಂ ತೆಗೆವಳ್ಕರಂ ಮನಂ । ಕಿಡೆ ಪೊನತ್ತಪ್ಪಡೊಂದು ಪಿಡಿಗಂಕುಶಮಿಟ್ಟು ಮರಳ್ದುಮಂದದಿಂ ॥ ೨೨೨

ವ ಅಂತವಳೆನ್ನನೆತಾನುಂ ತೆಗೆಯೆ—

ವೃ॥ ಮದನಾಸ್ತ್ರಪಥದಿಂದೆ ಕೀಲಿಸಿದುದೋ ತದ್ವಕ್ತ್ರಲಾವಣ್ಯಪಂ । ಕದಿ ನಾಳ್ದತ್ತೊ ಕಪೋಲಕಂಟಕನಿಕಾಯಾಗ್ರಂಗಳಿಂ ಕೂಡೆ ನಾಂ ಟಿಮದೋ ಮೋಣ್ಮುಧಗತ್ತ್ವಮೆಂಬ ಗುಣದಿಂ ಪೋಲ್ದತ್ತೊ ಮೇಗೆಂ ಬಿನಂ । ಮನಮಿ ನಟ್ಟಿರೆ ದಿಟ್ಟಿಯುಂ ತೆಗೆದೆ ನೆಂತೆಂತಾನುಮುದ್ಯೋಗದಿಂ ॥

ವ॥ ಅಲ್ಲಿಂತಳವರ್ನ ಮತ್ತಲೊಡನೆಯೆ ಕುಮಾರನಾತನ ಧೈರ್ಯಸ್ಖಲನೆಯಂ ನೋಡಿ ॥

---

೨೨೧. ಬೀಳ್ವನಂ—ಬೀಳುವಸ್ಥಲದಲ್ಲಿ; ಪಿಡಿದು; ತಳ್ಕಿನ—ಆಲಿಂಗನೆಯ.

೨೨೨. ಮಿಱ್ಕಿ—ಸ್ನಾನಾಪೇಕ್ಷೆಯು; ಪಿಡಿಗೆ—ಹೆಣ್ಣಾನೆಗೆ; ಮರಳ್ದುಮಂದದಿಂ—ತಿರುಗಿ ಸುಮ್ಮನೆ; ತೆಗೆದಳ್—ಎಳೆದಳು.

೨೨೩. ಕೀಲಿಸಿದುದೋ—ಕೀಲಿಸಲ್ಪಟ್ಟಿತೋ; ಅಳ್ದತ್ತೊ—ಮುಳುಗಿತೋ; ಪೋಲ್ದತ್ತೊ—ಹೊಲೆಯಲ್ಪಟ್ಟಿತೊ.

ವೃ॥ ಎನಗನುರೂಪ ಮಲ್ತಿದು ನಿಕೃಷ್ಟಜನೋಚಿತಮಾರ್ಗ ಮೆಂಬಿದಂ । ಮನದೊಳಣಂ ವಿಚಾರಿಸದೆ ಸ್ವೈರಸೆಗೆಟ್ಟಱವೆತ್ತವೋದು ದೆಂ ॥ ಬಿನ ಮೆರ್ದೆಗೆಟ್ಟು ಮೆಯ್ಯಱಯದಂತಿರ ಲಕ್ಕುಮೆ ಪುಂಡರೀಕ ಭೋಂ । ಕನೆ ನಿನಗೀಗಳಿಂದ್ರಿಯದ ಡಾವರಮೆತ್ತಣಿ ನೆತ್ತಬಂದುದೋ ॥ ೭೭೪

ಕಂ॥ ಎಲ್ಲಿತ್ತೊ ಧೈರ್ಯ ಮುಸಶಮು । ಮೆಲ್ಲಿತ್ತೊ ಜಿತೇಂದ್ರಿಯ ತ್ವಗುಣಮೆಲ್ಲಿತ್ತೋ ॥ ಎಲ್ಲಿತ್ತೊ ನಿನ್ನಶೌರ್ಯಮು । ದೆಲ್ಲಿತ್ತುಪಭೋಗರಾ ಗ ವಿಷಯದ್ವೇಷಂ ॥ ೭೭೫

ಎಲ್ಲಿತ್ತೊ ವೇದಸಮುದಯ । ಮೆಲ್ಲಿತ್ತೋ ಬ್ರಹ್ಮಚರ್ಯ ಮಱ ಮೆಲ್ಲಿತ್ತೋ ॥ ಎಲ್ಲಿತ್ತೊ ಯತಿವರ ತ್ವಮು । ದೆಲ್ಲಿತ್ತೋ ಯೌವನಾನುಶಾಸ ನವಿಧಾಗಳ್ ॥ ೭೭೬

ಎಂದುಮಾಣದೆ—

ಕಂ॥ ಅತಿಶಯದಿಂ ವಿಷಯಾಸ । ಕ್ತತೆ ನಿನ್ನನ್ನರುಮ ನಿಂತು ಮಾಡಿ ತ್ತೆನಲಿಂ ॥ ಮತಿನಿಷ್ಫಲ ಮಾಗಮಸಂ । ತತಿ ನಿರ್ಗುಣಮಱವು ನಿಷ್ಪ್ರ ಯೋಜನಮಲ್ತೇ ॥ ೭೭೭

ಅಂತುಮಲ್ಲದೆಯುಂ—

ಕಂ॥ ಎಂತುಗಡ ನಿನ್ನಕೈಯಿಂ । ದಂ ತೊಟ್ಟನೆ ಬಿಳ್ದ ಜಪಮ ಣಿಯುಮ ನೆಲೆ ಮುಂ ॥ ದಂತೊಯ್ಯಲಱಯೆ ನೆನಲಿ । ನ್ನಿಂತಿರೆ ನಿನ್ನಂ ತೆ ವಿಗತಚಿತ್ತರುಮೊಳರೇ ॥ ೭೭೮

ವ॥ ಅದಱನಿನ್ನಾದೊಡಂ ನಿನ್ನ ಮನಮಂ ನೀಂ ನಿಲಿಸಿಕೊಳ್ಳೆಂದು ನುಡಿಯೆ ಲಜ್ಜಿತನಾದಂತೆಗೆಯ್ದು ॥

ಕಂ॥ ಬೆಸೆದು ಕಪಿಂಜಲ ನೀಂಬಾ । ವಿಸದಿ ಬ್ಬೆರೆಂದುತೆಱನ ನವಳನ್ನಂ ವಂ ॥ ಚಿಸಿದಪರಾಧಮನಾಂ ಸೈ । ರಿಸುವೆನೆ ನೋಡೆನುತ ಮೆ ಳ್ಳ್ದಿ ಪುಸಿಮುಳಿಸಿಂದಂ ॥ ೭೭೯

೭೭೪. ಡಾವರಂ—ಉಪಪ್ಲವ ಅಂದರೆ ಬಾಧೆ.

೭೭೮. ಎಲೆ—ಆಶ್ಚರ್ಯ; ಮುಂದೆ—ನಿನ್ನಎದುರಿಗೆ; ಅಂತು—ಹಾಗೆ.

ಕಂ॥ ಪಿರಿದುಂ ಪ್ರಯತ್ನದಿಂದಮೆ । ವಿರಚಿಸೆ ಕಣ್ಗೆಸೆವ ಭೀಷಣಭ್ರೂ
ಕುಟಿ ಪೊದ ॥ ಳ್ದಿರೆ ಚುಂಬನಾಭಿಲಾಷ । ಸ್ಫುರಿತಾಧರ ನಾಕುಮಾರತಾಪ
ಸನೆನ್ನಂ ॥ ೨೯೦

ಕುಡು ಚಪಳೆ ಜಪದಮಣಿಯುಂ । ಕುಡದಿನ್ನೊಂದಡಿಯು ನಪ್ಪೊ
ಡಂ ಪೋಗದಿರೆಂ ॥ ದೊಡೆ ಕೇಳ್ದು ಜಪದಮಣಿಗೆ । ತೊಡನೆಯೆ ಹಾರ
ಮಣಿ ತೆಗೆದೆ ನೆನ್ನಯುಕೊರಲಿಂ ॥ ೨೯೧

ವ॥ ಅನ್ತುಮಕರಧ್ವಜಲಾಸ್ಯಾರಂಭಲೀಲಾ ಪುಷ್ಪಾಂಜಲಿಯೆನಿಸಿದೇ
ಕಾವಳಿಯುಂ ತೆಗೆದುಕುಡುವುದು ಮಾತನುಂ ಮನ್ಮುಖಾಸಕ್ತದೃಷ್ಟಿಯಿಂ
ಮೆಯ್ಯುಱಿಯು ದಕ್ಷಾವಳಿಗೆತ್ತು ಕಳೆದುಕೊಳ್ವುದು ಮಾನಾಗಳಲ್ಲಿಂ
ತಳರ್ದು ॥ ೨೯೨

ಕಂ॥ ಕಳವಳಿಸಿ ಬೆಮತ್ತಾರ್ಗ । ಳ್ಕೊಳದೊ ಳ್ಮೀಯಲ್ಕತಿಪ್ರಯ
ತ್ನದಿ ನೊಯ್ದು ॥ ಕ್ಕಳದಿಯು ರೆಂಕಾನುಂ ತೆಗೆ । ದಳವಿಲ್ಲದೆ ಬಂದನ
ದಿಯು ನಿದಿರೇಱುವಪೊಲ್ ॥ ೨೯೩

ವ॥ ಅಂತೊಯ್ಯಲ್ಮಿಜಜನನಿಯೊಡ ನೆಂತಾನು ಮುದಮನೆಗೆ
ಬಂದು ಮದೀಯುಮುದಿರಮಂ ಪೊಕ್ಕು ತಪ್ಪಿಯೋಗವೊ ಳ್ಮೆಯ್ಯಱಿ
ಯದೆ ॥ ೨೯೪

ವೃ॥ ಮನೆಗೆಂಬಂದೆನೆ ಬಾರೆನೋ ಸಖಿಯರೊಳ್ ಕ್ರೀಡಿರ್ದೆ
ನೋ ಕೂಡವಿ । ರ್ದೆನೊ ಮೋಹದ್ರೊಳಿರ್ದೆನೋ ಪಿರಿದುಮೆಚ್ಚುತ್ತಿ
ರ್ದೆನೋ ಮೌನವಿ । ರ್ದೆನೊ ಮಾತಾಡುತಮಿರ್ದೆನೋ ಸ್ಮರನದೊ
ಳ್ನೊಂದಿರ್ದೆನೋ ರಾಗವಿ । ರ್ದೆನೊ ಪೇಳಾಂ ನಗುತಿರ್ದೆನೋ ಮನದೊ
ಳಂದಾಸಕ್ತಳಾತ್ತಿರ್ದೆನೋ ॥ ೨೯೫

---

೨೯೧. ಜಪದ ಮಣಿಗೆತ್ತು—ಜಪಮಾಲಿಕೆಯಿಂದು ಬಿಳಿದು.

೨೯೩. ಅಳವಿಲ್ಲದ—ಅಳತೆಯಿಲ್ಲದೆ, ಇದಿರೇಱುವಪೊಲ್—ಎದುರಾಗಿ ಹತ್ತುವ
ಹಾಗೆ.

ಕಂ॥ ಇದು ದಿವಸಮೋ ರಾತ್ರಿಯೊ ಮೇ । ಣಿದು ದುಃಖಮೊ ರುಚಿಯೊ ಕಳವಳಮೊ ಪೇಳದು ಪೊ ॥ ಲ್ಲದೊ ಹಾಸಿದೊಳ್ಳಿತೊ ಮೇ । ಣಿದೆಂಬುದಂ ಬಗೆಯಲಾರ್ತ್ತೆನಿಲ್ಲಾ ಕ್ಷಣದೊಳ್ ॥ ೩೮೬

ವೃ॥ ಅದಾವೆಡೆಗೆ ಪೋಪುದಿ *[ನ್ನುಡಿಮ್ರದಾರೊಳನ್ನಳ್ಕುಱಿಂ] । ದದಾ ವುದನೆ ಕೇಳ್ವೆನಿಂ ಪದದು ನೋಳ್ಪುದಿನ್ನೇನ ನಿ ನ್ನದಾಗ್ರ್ರದನೆ ಪೇಳ್ವೆ ನಿನ್ನೆ ನಗೆ ಬಾಳ್ಕೆ ಪೇಳಾವುದೆಂ । ದದೇನು ಮರಿಯಳ್ಕೆ ಚಾರದ ಮನೋ ಭವೋದ್ರೇಕದಿಂ ॥ ೩೮೭

ವ॥ ಅನಂತರಂ ಸಖೀಜನಮುಮಂ ನಿಃಶೇಷಪರಿಜನಮುಮಂ ಬಾಗಿ ಲ್ಗೊಳಿಸಿ ಕನ್ಯಾಂತಃಪುರಪ್ರಾಸಾದಮನೇಱಿ ತದೀಯಮಣಿಗವಾಕ್ಷನಿ ಕ್ಷಿಪ್ತ ಮುಖಿಯೆನಾಗಿ ॥ ೩೮೮

ವೃ॥ ಅದು ಪೀಯೂಷಪಯೋಧಿಪೂರಲಹರೀ ಸಂತಾನದಿಂ ಚೆಲ್ವು ವೆ । ತ್ತುದೊ ಮಾಣಿಕ್ಯನಿಧಾನದಿಂ ಸಮೆದುತ್ತೋರುತ್ತಿರ್ದುದೋ ಚಂದ್ರ ಬಿಂ ॥ ಬದಿ ನೊಪ್ಪಂಬಡೆದತ್ತೊ ಮೋಹ್ಯಾಸದನಂಗೊಂಡಿರ್ದುದೋ ಪೇಳೆನ । ಲ್ಪದೆಮಾಂ ನೋಡಿದೆ ನಾತನಿರ್ದೆಡೆಯುಂ ನಟ್ಟಾಲಿಬೀಳ್ವ ನ್ನೆಗಂ॥ ೩೮೯

ಅದಲ್ಲದೆಯುಂ ॥

ಕಂ॥ ಆದೆಸೆಯಿಂ ಬರ್ಪ್ಪೆಲರುಮ । ನಾದೆಸೆಯಿಂ ದೆಸೆವ ಕುಸುಮ ಪರಿಮಳಮುಮ ಸಂ ॥ ತಾದೆಸೆಯಿ ನೆಸೆವ ವಿಹಗನಿ । ನಾದಮುಮಂ ವಾರ್ತೆಗೇಳಲಾನೊಡರಿಸಿದೆಂ ॥ ೩೯೦

---

೩೮೯. ನಟ್ಟಾಲಿಗಳ್—ನಟ್ಟದೃಷ್ಟಿಗಳು ; ಬೀಳ್ವನ್ನೆಗಂ—ಸೋತುಹೋಗುವ ವರೆಗು.

೩೯೦. ಎಸೆವ—ವಾಸನೆಯೊಡೆಯುವ ; ವಾರ್ತೆಗೇಳಲ್—ಸಮಾಚಾರವನ್ನು ಕೇಳುವದಕ್ಕೆ ; ಒಡರಿಸಿದೆಂ—ಉದ್ಯುಕ್ತಳಾದೆ.

*[ನ್ನಳಿವುದಾವರೊಳಕ್ಕಱಿಂ]

ವ॥ ಮತ್ತಮಾತಂ ಕೈಕೊಂಡುದಱಿಂ ಋಷಿವೇಷಕ್ಕಗ್ರಾವ್ಯತೆಯುಂ ಆತನಂಪೊರ್ದ್ದಿರ್ದ್ದವ ಜವ್ವನಕ್ಕೆ ಸೌಂದರ್ಯಮುಂ ಆತನ ಕಿವಿಗವತಂಸಮಾದ ಪಾರಿಜಾತ ಕುಸುಮಮಂಜರಿಗೆ ಮನೋಹರತೆಯು ಮಾತನಿರವಿಂದಮೆ ಸುರಲೋಕಕ್ಕೆ ರಮಣೀಯತೆಯು ಮಾತನರೂಪಸಂಪತ್ತಿಯಿಂ ಕುಸುಮಾಯುಧಂಗೆ ದುರ್ಜಯತ್ವಮು ಮಾದುದೆಂದು ಬಗೆಯುತ್ತಮಾಸಾಭಾಗ್ಯನಿಧಿಯು ವಿಯೋಗದಿಂ ಜೀವವಿಯೋಗ ಮಾಗದಿರ್ಕ್ಕೆಂದು ತಗುಳ್ಚಿದ ರಕ್ಷಾವಳಿಯಂತೆ ಕೊರಲೊಳಿಕ್ಕಿರ್ದ್ದ ಕ್ಷಾವಳಿಯುಂ ಆತನ ರಹಸ್ಯಾಲಾಪದಂತೆ ಕಿವಿಗೆವಂದು ರಾಜಿಸುವ ಪಾರಿಜಾತಕುಸುಮಮಂಜರಿಯು ಮಾತನ ಕರತಲಸ್ಪರ್ಶಸುಖದಿಂ ಕಪೋಲತಲ ಕದಂಬಮುಕುಳ ಕರ್ಣಪೂರಮಂತುಣ್ಮಿರ್ದ್ದ ಪುಳಕಮುಂ ಬೆರಸು ಗದ್ಗದಚಿತ್ತೆಯೆ ನೇಕಾಕಿಯಾಗಿರ್ಪ್ಪುದು ಮನ್ನೆಗವೆನ್ನ ತಾಂಬೂಲಕರಂಕವಾಹಿನಿ ಮಕರಿಕೆಯೆಂ ಬಳ್ ಪೆಱಗೆಕಿಱಿದು ಬೇಗಂಮಿಾಯಲೆಂದು ನಿಂದನಂತರಂ ಮತ್ಸಮಿಾಪಕ್ಕೆ ಬಂದು ಮೆಲ್ಲನಿಂತೆಂದಳ್ ॥ ೭೯೧

ವೃ॥ ತೊಡಿಸಿದನಾವನೀ ಕುಸುಮಮಂಜರಿಯಂ ನಿನಗಾತನಕ್ಕ ತ।
ನ್ನೊಡವರುತಿರ್ದ್ದ ತಾಪಸಕುಮಾರನ ನಾಗಳೆವಂಚಿಸಲ್ಕೆ ತ ॥ ಳ್ತಿಡಿದ
ಲತಾ ಪ್ರತಾನ ದೊಳಪ್ರೋಕ್ಷ್ಯಳದೊಯ್ಯನೆ ಸಾರ್ದ್ದ ಮೆಲ್ಲೊಡಂ। ಬಡೆ
ಜೆಸಗೊಂಡನೆನ್ನ ನನುರಾಗದಿ ನೆಯ್ದಿ ಭವತ್ಪ್ರಪಂಚಮಂ ॥ ೭೯೨

ಅದೆಂತೆನೆ—

ಕಂ॥ ಈಕನ್ನೆ ದುರ್ಗ್ಗೆ ಪೆಸರೇ। ನೇಕಿಲ್ಲಿಗೆ ಬಂದಳಾರ ಮಗಳೆ
ನೆಸಬರ್ದ॥ ಬಚ್ಚಕರದಿ ನೆತ್ತ್ರೋಜಪ। ಳೀಕೆ ಯೆನಲ್ಕುನಿಕುಮಾರಕಂ
ಗಿಂತೆಂದೆಂ ॥ ೭೯೩

ವ॥ ಅದೆಂತೆಂದೊಡೆ ದಿನಕರಮರೀಚಿಯಿಂದಾದಪ್ಸರಸೆಯೊಳ್ ಉದಿಸಿದ ಗೌರಿಗಂ ಗಂಧರ್ವಲೋಕಾಧಿಪತಿಯಪ್ಪ ಹಂಸಂಗಂ ಮಗಳಾಗಿ

---

೭೯೧. ರಕ್ಷಾವಳಿಯು—ಯಂತ್ರದಸರವು ; ಪೆಱಗೆ—ಹಿಂದೆ ; ಕಿಱಿದುಬೇಗಂ—ಸ್ವಲ್ಪಹೊತ್ತು ; ಮಿಾಯಲೆಂದು—ಸ್ನಾನಮಾಡಬೇಕೆಂದು, ನಿಂದು.

೭೯೩. ಈ ಕನ್ನೆ ದುರ್ಗ್ಗೆ—ಈ ಕನ್ಯೆಕೆ ದುಃಖಗಳು.

X

ಮಹಾಶ್ವೇತೆಯೆಂಬ ಪೆಸರಿಂ ನೆಗಳ್ತೆವೆತ್ತಳದಲ್ಲದೆಯುಂ ಇಂದು ಜನನಿಯೊಡನೀ ಸರೋವರವಂ ಮಿಮಯಲೆಂದು ಬಂದಾತ್ಮನಿವಾಸಮಪ್ಪ ಹೇಮಕೂಟಾಚಲಕ್ಕೆ ಪೋಗುತಿರ್ದ್ದಪಳೆಂಬುದುಂ ಕಿಱಿದುಬೇಗ ಮೋನಾನುಮಂ ತನ್ನೊಳೆ ಬಗೆಯುತ್ತಿರ್ದ್ದನಂತರ ಮೆನ್ನನಿಂತೆಂದಂ ॥ ೨೯೪

ಕಂ॥ ಎಳಪೆಮೊಳಂ ಗಾಂಭೀರ್ಯಮ । ನೊಳಕೊಂಡ ಭವತ್ಸ್ವರೂಪಮಂ ಕಂಡೀಕೆಲೋ ॥ ಮಳೆಯಂ ಪ್ರಾರ್ಥಿಸಿದೊಡೆ ನಿ । ಷ್ಫಳಮಾಗದೆನುತ್ತೆ ಬಂದೆ ನಾನಿಂದುಮುಖೀ ॥ ೨೯೫

ವ॥ ಎಂದು ನುಡಿಯಲಾನಾಗಳಾಪರಂ ಜಿನಸು ಕೈಗಳಂ ಮುಗಿದು ॥

ವೃ॥ ಜಿನಸುವ್ರನಂತದಿಕ್ಕೆರ್ಣಮ ಭವದ್ವಿಧ ದಪ್ರತಿಮಪ್ರಭಾವರೀ । ಕ್ಷಿಸುವರೆ ಮುನ್ನ ಮದ್ವಿಧರನೆನ್ನ ವ್ರೋಲಾದಮೆ ನೋಂತಳಾವಳಂ ॥ ನುಸುರ್ವುದು ನನ್ನಿಯಂ ನುಡಿಯೆ ಕಾರ್ಯವನೆನ್ನ ವಳೀಕೆಯೆಂದು ಭಾ । ವಿಸಿ *[ಕೃತಕೃತ್ಯೆಯುಪ್ಪೆ ನೆನಲಾಗಳೆ] ಸಂತಸಮಂ †[ನೆಗಳ್ಚಿದಂ] ೨೯೬

ಅಂತುಮಲ್ಲದೆಯುಂ—

ವೃ॥ ಕೆಲದೊಳಳುತ್ತುರ್ಣ ಕಾಮರ್ಮ್ಮಗಿಲೆ ಪರ್ವ್ವಿನುದೆಂಜಿನೆಗಂ ಕಟಂಗಿಕ । ತ್ತಲಿಪ ತಮಾಲಪಾನಪದ ಪಲ್ಲವಮಂ ಹಿಳಿದೊಂದು ನಿಮ್ರಲೋ ॥ ಪಲತಲವಲ್ಲಿ ತದ್ರಸದಿ ನಾಗಳೆ ನೋಡಿ ನಿಜೋತ್ತರೀಯದ । ಲ್ಕಲವಸನೈಕದೇಶಮನೆ ಸಿಳ್ಳದರೊಳ್ಬರೆದಂ ತಳೋದರೀ॥ ಅನಂತರಂ ೨೯೭

ಕಂ ॥ ಏಕಾಂತದೊ ಳೀಲೇಖಮ । ನಾಕನ್ನೆಗೆ ಪೋಗಿ ಕುಡುವುದೆಂದಪ್ಪೈದ ನೆಂ । ದಾಕೆ ನುಡಿವೃತ್ತಮಂದ ॥ ಪ್ರಾಕಟಮದ ನಡಪದೊಳ್ಗಣಂ ತೆಗೆದಾಗಳ್ ॥ ೨೯೮

೨೯೬. ಅಂತದಿಕ್ಕೆರ್ಣಮ—ಅದುನಾಗಿರಲಿ; ಈಕ್ಷಿಸುವರೆ—ನೋಡುತ್ತಾರೆಯೆ?

೨೯೭. ಅಳುತ್ತುರ್ಣ—ಅವರಿಸಿ; ಹಿಳಿದು—ಹಿಂಡಿ, ಕಟಂಗಿ—ಕಪ್ಪಾಗಿ.

೨೯೮. ಅಂದು—ಆ ಕಾಲದಲ್ಲಿ. ಅಪ್ರಾಕಟಂ—ಗುಪ್ತವಾಗಿ; ಅದಂ—ಆ ಲೇಖನವನ್ನು; ಅಡಪದೊಳಗಣಿಂ—ತಾಂಬೂಲ ಕರಂಡದಿಂದ; ತೆಗೆದಾಗಳ್—ತೆಗೆದಕಾಲದಲ್ಲಿ.

*[ಕೃತಕೃತ್ಯವೊಳ್ಪುದೆನಲಾಗಳೆ] †[ತನೆಯ್ದಿದಂ]

ವೃ॥ ಅದು ಶಬ್ದಾತ್ಮಕವಾಗಿಯುಂ ಪಿರಿದು ಮುಂವಂತರ್ಗತಸ್ಪರ್ಶ
ಸಾ । ಮ್ಯದ ಪ್ರೋಲ್ಲಾಸಭೂತ ಮಾಗಳಂತೆ ಕಿವಿಪ್ರೊಕ್ಕುಂ ಮೆಯ್ಯೊಳಂತೆಯ್ದೆ
ಪ್ಪೊ । ಕ್ಕುದನುಪ್ಯತ್ಪುಳಕಂಗಳಿಂ ದಱಿಯಿಸುತ್ತಂ ಮನ್ಮಥಾವೇಶಮಂ । ತ್ರ
ವ ಪ್ರೋಲಾತನ ವಾರ್ತೆ ಮೆಯ್ಯೞಿಯು ದಿರ್ಪ್ಪಂತೆನ್ನನೇಂ ಮಾಡಿತೋ ॥

ವ॥ ಅನಂತರ ಮಾಲೇಖನಮಂ ಕಳೆದುಕೊಂಡು ನಿಮಿಚ್ಛೆ
ನೋಳ್ಪನ್ನೆಗಮಲ್ಲಿ ॥ ೮೦೦

ಆರ್ಯಾವೃತ್ತಂ॥ ದೂರಂ ಮುಕ್ತಾಲತಯಾ । ಬಿಸಸಿತಯಾ ವಿಪ್ರ
ಲೋಭ್ಯಮಾನೋಽಪಿ ॥ ಹಂಸಲವ ದರ್ಶಿತಾಶೋ ಮಾ । ನಸಜನ್ಮಾ
ತ್ವಯಾನೀತಃ ॥ ೮೦೧

ಕಂ॥ ಎನಗಾಸೆದೋಱು ಬಿಸಸಿತ । ಮೆನಿಸುವ ನಿಜತಾರಹಾರಲತೆ
ಯಿಂದಾ ದಂ ॥ ಸನ ಪ್ರೋಲ್ಲಾಸಸಸಂಭವ । ಮೆನಿಪ ಮದೀಯಾಭಿಮಾ
ನಮಂ ಕಟ್ಟೊಯ್ದಾ ॥ ೮೦೨

ವ॥ ಎಂಬೀ ಆರ್ಯೆಯುಂ ಭಾವಿಸಿ ನೋಡೆ—

ವೃ॥ ಮೊದಲೊಳ್ ಶ್ರೋತ್ರಿಯನಂಗೆ ಕಳ್ಳುಪದಿನಳ್ಕಿರ್ದಂಗೆ ದುರ್ನಿದ್ರೆ
ಕಾ । ಜ್ವರವಂಗುನ್ಮಾದ ಮಪ್ಪುದು ದಿಗ್ಭ್ರಮೆ ಪದಂಗೆಟ್ಟಂಗೆ ಪೈಶಾಚಿಕಂ॥
ಗ್ರ ಹಾವೇಶ ಮಧಾರ್ಮಿಕಂಗೆ ಕುಮತಂ ತತ್ತ್ವಪ್ರಮುಗ್ಧಂಗೆ ಬೀ । ಸಿದ
ಕಣ್ಣಾಪುದ ಕೂಂಚದಂತಿರೆನಗಾದತ್ತಾಗಳೇನೆಂಬುದೋ ॥ ೮೦೩

ತದನಂತರಂ—

೭೯೯. ಅದು—ಆ ತರಳೆಕೆ ಹೇಳಿದ ; ಆತನವಾರ್ತೆ—ಆ ಪುಂಡರೀಕನ ಸಮಾಚಾರವು ; ಆಗ—ಆ ಕಾಲದಲ್ಲಿ ; ಶಬ್ದಾತ್ಮಕವಾಗಿಯೂ, ಅಂತರ್ಗತ—ಅಂತರಂಗವನ್ನು ಹೊಂದಿದ ; ಸ್ಪರ್ಶಸಾಮ್ಯ ಪ್ರೋಲ್ಲಾಸಭೂತ—ಸ್ಪರ್ಶ[illegible] ಸಾಮ್ಯದಂತೆ ಸಂತೋಷವನ್ನುಂಟುಮಾಡುತ; [illegible]—[illegible]ದಂತೆ.

೮೦೩. ಶ್ರೋತ್ರಿಯನಂಗೆ—ಪುರೋಹಿತಗೆ ; ಕಳ್—ಮದ್ಯವು ; ಪದಂಗೆಟ್ಟಂಗೆ—ಮಾರ್ಗತಪ್ಪಿದವನಿಗೆ ; ಪೈಶಾಚಿಕಂಗೆ—[illegible]ಗ್ರಸ್ತನಿಗೆ ; ಕಣ್ಣಾಪುದ—ಕಣ್ಣುಕಟ್ಟುಮಾಡುವ ; ಕೂಂಚದಂತಿರೆ—ಮುಚ್ಚಿಸುವ ಕೂಂಚದಹಾಗೆ.

ವೃ॥ ಅಮರ್ದಂ ಪೀರ್ದ್ದರ್ಳೊ ಮೇಣ್ಸುರಾಂಗನೆಯರ್ಗೋ ಪ್ರಣಯೋದಯಂ ತನ್ನೊಳೇಂ। ಸಮಸಂದಿದ್ದುರ್ದೊ ನಾಕಲೋಕಸುಖಮಂ ಕೈಕೊಂಡಳೋ ದೈವಮೀ॥ ರಮಣೀರತ್ನದ ಮೇಲೆ ಮೇಣ್ನೆಲಸಿತೋ ತ್ರೈಲೋಕ್ಯ ರಾಜ್ಯಾಭಿಷೇ। ಕಮೆ ಕೈಸಾರ್ದ್ದುದಿವಳ್ಗೆನುತ್ತೆ ಪಿರಿದುಂ ದಾನಾಕೆಯಂ ನೋಡಿದೆಂ॥ ೪೦೪

ವ॥ ಅಂತು ನೋಡಿ ಪಿರಿದುಮಳ್ಕಱಿಂ ಕೆಲಕ್ಕೆ ಕರೆದು ಕುಳ್ಳಿರಿಸಿ॥

ಕಂ॥ ಪರೆದಿರ್ದ್ದ ಕುರುಳ್ಗಳ ನೋ। ಸರಿಸಿ ಕಪೋಲಂಗಳ ನೊಯ್ಯನೆಳಪುತ್ತಂ ದಾ॥ ಳರಸೆಂಬ ಭೇದ ಮೆಮ್ಮಿ। ರ್ಬ್ಬರೊಳಂ ಪಲ್ಲಟಿಸಿತೆಂಬಿನಂ ಮನ್ನಿಸಿದೆಂ॥ ೪೦೫

ಅಂತಾದರಿಸುತ್ತಮಿರ್ದ್ದ—

ಕಂ॥ ಎಂತೆಂತು ಕಂಡೆ ಕಣ್ಬರಿ। ಮೆಂತೆಂತೇನೆಂದು ನುಡಿದ ನಾತನ ಕೆಲದೊ॥ ಳ್ನಿಂತಡೆದ ಬೇಗಮೆನಿತೆನಿ। ತಂತರಮಂ ಬರುತಲಿರ್ದ್ದನೆಮ್ಮಯ ಬಳಿಯಂ॥ ಎಂದು— ೪೦೬

ಕಂ॥ ಒಡನೆಯುವ ರೆಲ್ಲರುಮ ನುಳಿ। ದಡಪಡವಳು ಮಾನುಮೊಂದು ಮಾಡದ ಮೇಲೆ॥ ರ್ದ್ದಡಿಗಡಿಗೆ ಮಗುಳ್ದು ಮಗುಳ್ದಾ। ನುಡಿಯನೆ ಕೇಳುತ್ತೆ ಕಳೆದೆ ನಂತಾಪಗಲಂ॥ ಅನ್ನೆಗಂ— ೪೦೭

---

೪೦೪. ಸಮಸಂದಿದ್ದುರ್ದೊ—ಉಂಟಾಗಿತ್ತೊ; ದೈವಂ—ಭಾಗ್ಯವು, ನೆಲಸಿತೊ—ಸ್ಥಿರವಾಗಿನಿಂತಿತೊ.

೪೦೫. ಪರೆದಿರ್ದ್ದ—ಕೆದರಿದ್ದ; ಎಳಪುತ್ತಂ—ಸವರುತ್ತ; ಪಲ್ಲಟಿಸಿತು—ವ್ಯತ್ಯಾಸ ವಾಯಿತು.

೪೦೬. ಎಂತೆಂತುಕಂಡೆ—ಆತನನ್ನು ಹ್ಯಾಗೆಹ್ಯಾಗೆ ನೋಡಿದೆ; ಕಣ್ಬರಿವು—[illegible]ವು, ಎಂತೆಂತು—ಹ್ಯಾಗೆಹ್ಯಾಗೆ, ಅಂದರೆ ನನ್ನನ್ನು ಎಷ್ಟುದೂರವವ[illegible]ವನು; ಅಡೆದಬೇಗಂ—ನೀನು ನಿಂತಕಾಲ; ಎನಿತು—ಎಷ್ಟು? ಎಮ್ಮಯ ಬಳಿಯಂ—ನಮ್ಮಹಿಂದುಗಡೆಯಲ್ಲಿ; ಎನಿತಂತರಮಂ—ಎಷ್ಟುದೂರದವರೆಗೆ; ಬರುತಲಿರ್ದ್ದಂ.

೪೦೭. ಒಡನೆಯುವರ್—ಸಂಗಡದವರು. ಮಗುಳ್ದುಮಗುಳ್ದು—ಪುನಃಪುನಃ.

ಕಂ॥ ಮದನಾತುರೆ ಯಪ್ಪೆನ್ನೀ । ಹೃದಯದ ರಾಗವನೆ ಪೆಚ್ಚುಗೊಂ
ಡಂತಿರೆ ಕೆಂ ॥ ಪೊಪಡಿದ ಪಡುವಣ ದೆಸೆಗೆ । ಯ್ದಿದ ನರುಣರುಚಿ ಪ್ರಕಾ
ಶನಪ್ಪ ದಿನೇಶಂ ॥ ೮೦೮

ಕೆಂದಾವರೆಗಳ್ಮಧುಕರ । ವೃಂದಮ ನೊಳಕೊಂಡು ಮುಗಿಯೆ
ರವಿವಿರಹದ ನೋ ॥ ಪಿಂ ದರವಿಂದಿನಿ ಮೂರ್ಛೆಗೆ । ಸಂದೆರ್ದೆ ಕತ್ತಲಿಸಿ
ದಂದಮಂ ಪ್ರಕಟಿಸುಗುಂ ॥ ೮೦೯

ವೃ॥ ಇಂದುಕಳಾವುರೀಚಿ ರುಚಿರೋಜ್ವಲ ಬಾಲಮೃಣಾಳಮಂ
ಮೆಲ್ದು । ಳೆಸ್ದಿಂದನೆ ಕಚ್ಚಿ ತದ್ವಿವರದಿಂ ದೆರಡುಂ ಬರೆಪೀರ್ದ ಪ್ರೋಲ್ನೆಗ॥
ಳೆಸ್ದಿಂದಱ ಚಿತ್ತಮಂ ತೆಗೆದು ಕೊಂಡು ವಿಯೋಗದಿ ನಾದದೊಂದು ಕಿ।
ಚ್ಚಂದಳುರ ಲ್ಕಗಲ್ದುವು ರಥಾಂಗ ಯುಗಂಗಳನಂಗತಾಪದಿಂ ॥ ೮೧೦

ವ॥ ಆಗಳೆನ್ನ ಕೊಡೆವಿಡಿದವಳ್ ಬಾಗಿಲಿಂ ಪರಿತಂದು—

ಕಂ॥ ಕೊಳನ ತಡಿಯಲ್ಲಿ ಕಂಡಾ । ಗಳನಿಬ್ಬರೊಳೊಬ್ಬ
ಮುನಿ ಕುಮಾರಂ ಭೂಭೃ ॥ ನ್ನಿಳಯದ ಬಾಗಿಲೊಳಕ್ಕಾ । ವಳಿಯಂ
ಬೇಡಲ್ಕೆ ಬಂದು ನಿಂದಿರ್ದಪ್ಪಂ ॥ ೮೧೧

ಎಂದವಳ್ಬಂದು ಪೇಳ್ವುದುಂ—

೮೦೮. ಪೆಚ್ಚುಗೊಂಡಂತಿರೆ—ಹೆಚ್ಚಿಕೊಂಡಹಾಗೆ; ಅರುಣರುಚಿಪ್ರಕಾಶನಪ್ಪ—ಕೆಂಪುಕಾಂತಿಯಿಂದ ಹೊಳೆಯುವ;

೮೦೯. ಮೂರ್ಛೆಗೆಸಂದು—ಮೂರ್ಛೆಯನ್ನು ಹೊಂದಿ; ಎರ್ದೆ—ಹೃದಯವು; ಕತ್ತಲಿಸಿದಂದಮಂ—ಅಜ್ಞಾನಾಂಧಕಾರವನ್ನು ಹೊಂದಿದರೀತಿಯನ್ನು.

೮೧೦. ರಥಾಂಗಯುಗಳಂಗಳ್—ಚಕ್ರವಾಕಯುಗ್ಮಗಳು; ಎರಡುಂ—ಪ್ರಸಿದ್ಧ ಪಕ್ಷಿಗಳೆರಡೂ, ಬಾಲಮೃಣಾಳಮಂ, ಮೆಲ್ದು—ಭಕ್ಷಿಸಿ; ಬರಪೆಕಚ್ಚಿ; ತದ್ವಿವರದಿಂ—ಆ ಮೃಣಾಳದ ರಂಧ್ರದಿಂದ; ಬರೆಪೀರ್ದಪ್ರೋಲ್—ಪಾನಮಾಡುವಂತೆ; ಬಂದ ಱಚಿತ್ತಮಂ—ಬಂದರಚಿತ್ತವನ್ನು; ತೆಗೆದುಕೊಂಡು—ಮತ್ತೊಮ್ಮೆ ತೆಗೆದುಕೊಂಡು; ವಿಯೋಗದಿಂ—ಅಗಲಿಕೆಯಿಂದ; ಆದ—ಉಂಟಾದ; ಅದೊಂದುಕಿಚ್ಚು—ಸಂತಾಪವು; ಅಂದು—ಆ ರಾತ್ರಿಯಕಾಲದಲ್ಲಿ; ಅಳುರಲ್ಕೆ—ಆವರಿಸಲು; ಅನಂಗತಾಪದಿಂ—ಮನ್ಮಥತಾಪದಿಂದ ಕೂಡಿ; ಅಗಲ್ದುವು—ದೂರವಾದುವು.

ಕಂ॥ ನಿನಗೇವೇಳ್ವುದೆ ನಾಂಭೋಂ । ಕೆನಲಾ ತಾಪಸಕುಮಾರನೆ
ಸಗೊರ್ಳ್ವುದು ಮಾ ॥ ತನಗೆತ್ತು ಬಾಗಿಲೊಳ್ತ । ಟ್ಟನೆ ಬಂದಿರ್ದಂತಿ
ರಾದೆ ನಿರ್ದಂತಿರ್ದಂ ॥ ೮೧೨

ವ॥ ಅಗಳೊರ್ವಂ ಕಂಚುಕಿಯುಂ ಕರೆದು ಬೇಗವೊಡಗೊಂಡು
ಬಾಯೆಂದು ಪೇಳಲೊಡನೆ ॥

ಕಂ॥ ಎಸೆದಿರೆ ಬೆಳ್ಪಿಂ ಬೆಳ್ಪಿಂ । ಗಳ ಬಳೆಯುಂ ಬರುತಮಿರ್ದ
ದೆಂಬಂತೆ ಕಪಿಂ । ಜಳನಾಗಳಾ ಜರಾನಿ । ಮರ್ಗಳನೆಸಿಸಿದ ನಾಪಿದ [ಲ್ಲ
ನೊಡ] ವರುತಿರ್ದಂ ॥ ೮೧೩

ವ॥ ಅಂತು ರೂಪಿಂಗೆ ಯೌವನಮುಂ ಯೌವನಕ್ಕೆ ಕಾಮನುಂ
ಕಾಮಂಗೆ ವಸಂತಸಮಯಮುಂ ವಸಂತಸಮಯಕ್ಕೆ ತಂಬೆಲರುಮೆಂ
ಬಂತೆ ಪುಂಡರೀಕಂಗೆ ಸಹಾಯನಪ್ಪ ಮುನಿಕುಮಾರನಂ ಕಂಡೆನ್ನೆಗಂ
ಮುನಿಪಂ ವ್ಯಾಕುಲನಂತೆ ಶೂನ್ಯನಂತೆ ದುಃಖಿತನಾಗಿರ್ದಂತೇನಾನುಂ
ಪ್ರಾರ್ಥಿಪನಂತೆ ಬರುತಿರ್ದನಿರ್ಪ್ಪದುಂ ತತ್ಕ್ಷಣದೊಳ್ ॥ ೮೧೪

ಕಂ॥ ಇದಿರೆದ್ದು ಪ್ರೀತವಡುತ್ತೇ । ಱಿದ ಕನಕಾಸನಮ ನಿತ್ತು
ಬೇಡೆನೆಯೆನೆ ತ ॥ ತ್ಪದಯುಗಮಂ ಕಟ್ಟಿರ್ ಪದಾ । ಬ್ಜದಿರ್ಪ್ಪ ನಾಂ
ತೊಡೆನೆ ನುತ್ತರೀಯವಾಂಚಲಕದಿಂ ॥ ೮೧೫

ನುಮಮುಖ್ಯನಿಪಂ ಬಗೆದೆ । ನ್ನತಪದವಳ್ ಕೆಲದೊಳಿರ್ದ್ದೊಡಾ
ಕೆಯ ನೆಸೆಯುಂ ॥ ಕಡೆಗಣ್ಣಿಂ ನೋೞ್ಪುದು ಮಾ । ಗಡೆ ಲಜ್ಜಿಸಿದಪ್ಪ
ನೆಂದು ನೋಟವಿ ನಟಿಪಿಂ ॥ ೮೧೬

---

೮೧೨. ತಾಪಸಕುಮಾರನೆ ಸಗೊರ್ಳ್ವುದುಂ—ತಾಪಕುಮಾರನೆಂಬ ಹೆಸರನ್ನು ಕೇಳಿದ ಕೂಡಲೆ, ಆತನಿಗೆತ್ತು—ಆ ಪುಂಡರೀಕನೇ ಎಂದುತಿಳಿದು; ಇರ್ದಂತಿರ್ದಂ—ಇದ್ದ ರೀತಿಯಲ್ಲಿದ್ದಾಗ್ಯೂ; ಬಾಗಿಲೊಳ್—ಬಾಗಿಲಲ್ಲಿ; ಬಂದು, ಇರ್ದಂತಿರೆ—ಇದ್ದ ಹಾಗೆ; ಆದೆಂ—ಆದೆನು.

೮೧೫. ಕಟ್ಟಿರ್—ತೊಳೆದು; ಇರ್ಪ್ಪಂ—ದ್ರವವನ್ನು.

ವ॥ ಆಗಳಱಿವಿವಳೆನ್ನ ಶರೀರದಿಂ ಬೇಱಲ್ಲ ಳ್ಮನಿಶಂಕರಾ ನೀಂ ಬೆಸಸಿ ಮೆಂಬುದುಂ॥ ೮೧೭

ಕಂ॥ ನುಡಿವೊಡೆ ಲಜ್ಜಿಸಿ ನಾಲಗೆ। ಪೊಡರ್ದಪುದಿಲ್ಲಕ್ಕ ಚಿಕ್ಕೆಯುಂ ಬೇರುಮನುಂ। ಪಡವಿಯೊಳ ಗಿರ್ಪ್ಪ ಮುನಿಗಳ। ನಡೆವಳಿಯೆತ್ತೆತ್ತ ಯುವತಿಜನದನುರಾಗಂ॥ ಅದಲ್ಲದೆಯುಂ— ೮೧೮

ವೃ॥ ನಗೆಗೆಡೆಯಾಗೆ ದೈವವೆನಗೇನ ನೊಡರ್ಚ್ಚಿರ್ದಸಿತೀ ಗಳಕ್ಕ ರಾ॥ ಗಿಗಳ ನಿಕೃಷ್ಟಚೇಷ್ಟೆಗನುಗೆಯ್ವಪೆ ನೆಂತಿವ ನಿನ್ನವುಂದೆ ಪೇ॥ ಳ್ಬಗೆ ಪ್ರೌಢೆ [illegible] ತಕ್ಕುದೊ ಮೋಹಶ್ವೊದೆವಿರ್ದ್ದ [illegible]। ರೆಗೆ ದೊರೆಯೋ ತಪಕ್ಕಿದನುರೂಪವೊ ಮೋಕ್ಷಸುಕೃತಕ್ಕುಪಾಯುಮೊ॥ ೮೧೯

ಅದೊಡಂ—

ವೃ॥ ಪೇಳಲೆ ಪೇಳಿವಪ್ಪುದು ಶರಣ್ಯೆಱತಾಪ್ಪುದು ಮಿಲ್ಲ ಕೇವಲಂ। ಪೇಳದಿರಲ್ಕನರ್ಥಮುಮಂ ದಸುವಂ ನೆಱಬಿಟ್ಟು ಪೋಗಲಾಂ॥ ಪಾಲಿಸ ಪೇಳ್ದ ನೆನ್ನಯ [illegible] ಜೀವಮನೊಂದ ಲಜ್ಜೆಯುಂ। ಪಾಲಿಸದೆಯ್ದೆ ಪೇಳಲನುಗೆಯ್ವನೆ [illegible]॥ ಅದೆಂತೆನೆ— ೮೨೦

ಕಂ॥ [illegible] ।ನಿ। ನ್ನಿ ದ।ರೊಳ್ಬಡೆ ಸುದಿ *[ಮುಬಿಟ್ಟುಮುನಿಪನ] [illegible]॥ [illegible] ಬಿಸುಟ್ಟು [illegible]। ಅದೆ ಮತ್ತ್ [illegible]॥ ೮೨೧

---

೮೧೮. ಪೊಡರ್ದಪುದಿಲ್ಲಕ್ಕ—ಚಲಿಸುವದಿಲ್ಲ; ಚಿಕ್ಕೆಯುಂ—ಗೆಡ್ಡೆಯನ್ನು;

೮೧೯. ರಾಗಿಗಳ—ಅನುರಕ್ತರ; ನಿಕೃಷ್ಟಚೇಷ್ಟೆಗೆ—ಹೀನವಾದನಡತೆಗೆ; [illegible]; [illegible]—ಉದ್ಯುಕ್ತನಾಗಲಿ; [illegible]; ಸುಕೃತಕ್ಕೆ—[illegible]. ಉಪಾಯವೊ—ಸಾಧನವೊ?

೮೨೦. [illegible]; ಕೇವಲಂ—[illegible]; [illegible]; [illegible].

೮೨೧. [illegible].

*[ಯುಬಿಟ್ಟುಮುನಿಪಂ]

ವ॥ ಅನ್ನೆಗಂ ಸೀಮುಂ ನಿಜಾವಾಸಕ್ಕೆ ವಂದಿರಾಗಳಾನೇಕಾಕಿಯಾಗಿರ್ದ್ದ ವೋಗೆಯ್ದುತ್ತಿರ್ದ್ದಪನೆಂದು ಕುತೂಹಲಂಬೆರಸು ಮುನ್ನಿನೆಡೆಗೆ ಬಂದು ನೋಡಿ ಕಾಣದೆ ವ್ಯಗ್ರಮನನಾಗಿ ॥ ೮-೨೨

ವೃ॥ ತರುಣಿಯು ಬೆನ್ನೊಳಂಗಭವ ನಾಡಿಸಿದಂದದೊಳಾಡಿ ಗೋರಿಗೊಂ। ಡೆರಳೆವೊಲಾಗಿ ಪೋದನೊ ಭಯಂಬೆರಸೆನ್ನ ಮೊಗಕ್ಕೆ ನಾಣ್ಚಿಮೆ॥ ಯ್ಗರೆದನೊ ಕೋಪದಾಗ್ರಹದಿ ನೆನ್ನನಗಲ್ದನೊ ಕಾಣದೆನ್ನನೆ। ಲ್ಲಿರದಱಸುತ್ತ ಮಿರ್ದ್ದಪನೊ ಬಾಲತಮಾಲ ವನಾಂತರಾಳದೊಳ್ ॥ ೮-೨೩

ಎಂದು ವಿಕಲ್ಪಿಸುತ್ತ ಮಿರ್ದ್ದ—

ಕಂ॥ *[ಕಿಱಿದೊಂದು ಪೊಳ್ತಗಲ್ದಿರ]। ಲಱಿಯದನಂ ಕ್ಷಣಮಗಲ್ದು ನಿಲಲಾಱದೆ ಮ॥ ಯ್ಮಱುಗಿ ಮದೀಯ ವಯಸ್ಯನ। ನಱಸುತ್ತುಂ ಮಗುಳೆ ಮನದೊಳಾಂ ಚಿಂತಿಸಿದೆಂ ॥ ೮-೨೪

ಮದನಮದೋದ್ರೇಕದಿ ನೆ। ನ್ನಿದಿರೊಳ್ ಧೃತಿಗೆಟ್ಟು ಸಿಗ್ಗಿನಿಂ ತನೆನ್ನೊಳೆವ್ವ ॥ ಲ್ಲವ ನೆತ್ತಾಚರಿಸುಗುಮೋ। ಬವವಿವ ಸಿಗ್ಗಿಂದ ಮಾರು ಮೋನನೊಡಚ್ಚರ್ ॥ ೮-೨೫

ವ॥ ಎಂದಱಿಸಿ ನೋಡುತ್ತ ಮೊತೆಂತು ಕಾಣವಿರ್ಪ್ಪನಂತಂತೇನುಮಂ ಮನದೊಳ್ಭಾವಿಸುತ್ತ ಮಿರ್ದ್ದ ॥ ೮-೨೬

ವೃ॥ ಇರಿಪ್ರುವಯುಕ್ತ ಮಿನ್ನೆನಗರಣ್ಯದೊಳೊರ್ವನೆಂದು ಶಂಕೆಯಿಂ। ತರುತಳದೊಳ್ ತಮಾಲವನದೊಳ್ ಘನಚಂದನವೀಥಿಯೊಳ್ ನಿರಂ॥ ತರ ಲತಿಕಾಗೃಹಂಗಳೊಳನೇಕಲತಾಭವನಂಗಳೊಳ್ ಸರೋ। ವರತಟದೊಳ್ತೊಳಲ್ದಱಸಿ ನೋಡಿದೆ ನುತ್ಪಲಲೋಲಲೋಚನೆ ॥ ೮-೨೭

೮-೨೩. ಗೋರಿಗೊಂಡ—ಕಾಮ ಪೀಡಿತವಾದ; ಮೆಯ್ಗರೆದನೊ—ಔತುಕೊಂಡನೊ.

೮-೨೪. ಕಿಱಿದೊಂದು ಪೊಳ್ತು—ಸ್ವಲ್ಪಹೊತ್ತು; ಅಗಲ್ದು—ವಿಯುಕ್ತನಾಗಿ; ಇರಲ್—ಇರುವದಕ್ಕೆ; ಅಱಿಯದನಂ—ತಿಳಿಯದವನನ್ನು, ಅಂದರೆ ಎಂದೆಗೂ ಅಗಲಲಾರದವನನ್ನು; ಆಂ—ನಾನು; ಕ್ಷಣಂ—ಅಗಲ್ದು ನಿಲಲಾರದೆ ಎಂದನ್ವಯವು.

*[ಕಿಱಿಯೆಂದುತೊಟ್ಟಗಲ್ದಾನ]

ವ॥ ಅನ್ತು ನೋಡುತಿರ್ಪನ್ನೆಗಮೊಂದುಸರಸ್ಸಮೀಪದೊಳ್ ವನ ನಿರಂತರತೆಯಿಂ ಕುಸುಮಮಯಮುಂ ಪರಭೃತಮಯಮುಂ ಮಯೂರ ಮಯಮುಮಾಗಿ ವಸಂತಜನ್ಮಭೂಮಿಯು ಮಾದಂತಿರಲತಿಮನೋಹರ ಮಾದ ಲತಾಗಹನದೊ ಳುತ್ಸೃಷ್ಟಸಕಲವ್ಯಾಪಾರನುಂ ವಿಗತನಿಮೇಷ ನುಮೆನಿಸಿ ಬರೆವನಂತೆಯುಂ ಕಂಡರಿಸಿದನಂತೆಯುಂ ಮಱವಟ್ಟನಂತೆಯುಂ ಯೋಗಸಮಾಧಿಸ್ಥಿತನಂತೆಯು ಮುಪರತವಶನಾದಂತೆಯು ಮಿರ್ದನಲ್ಲದೆ ಯುಂ ॥ ೮೨೮

ವೃ॥ ಹೃದಯದೊಳಿರ್ದ ವಲ್ಲಭೆಯ ನೀಕ್ಷಿಸಲೆಂದೊಳಪೊಕ್ಕು
ಮೆಯ್ಗೆಪ | ರ್ಪಿನ ಮದನಾನಲಂಗಗಿದು ಭೋಂಕನೆ ಮೆಯ್ಗರೆದಿರ್ದ
ಮೇಣಿನಂ ॥ ಕದಡಿದ ಚಿತ್ತಮೆಂಬ ಕಡಲೊಳ್ಪೊಡರಲ್ಕಣ ಮಾರದಿ
ರ್ದ್ದತಂ | ಗಿದುವು ಶರೀರದೊ ಳ್ವಿರಹದಿಂ ದಖಿಳೇಂದ್ರಿಯ ಮಾಮು
ನೀಂದ್ರನಾ॥ ಅದಲ್ಲದೆಯುಂ— ೮೨೯

ಕಂ॥ ಬಳಗೊಳಗಳರ್ವ ಮನೋಜಾ | ನಳಧೂಮ ಸ್ತೋಮ
ಮೆಯ್ಗೆ ಸುತ್ತಿರ್ದುದೋ ಕ ॥ ಣ್ಗಳ ನೆನೆ ತಳ್ತುಮೆದುಱುಗಲಿ | ನಿಳಿದುವು
ಮಿಗೆ ಬಾಷ್ಪವಾರಿ ಧಾರಾಪೂರಂ ॥ ೮೩೦

ಹೃದಯದೊ ಳಗುಣ್ಮಿಪೊಣ್ಮಿದ | ಮದನಾಗ್ನಿ ಜ್ವಾಲೆ ಯೆನಿಸಿದ
ಶರಾಂಕುರಗಳಂ ॥ ಪುದಿದ ಬಿಸುಸುಯ್ಗಳಂ ಕೊರ | ಗಿದುವು ಲತಾಕುಸುಮ
ಕೇಸರಪ್ರಸರಂಗಳ್ ॥ ೮೩೧

ಒದವಿದ ಚಿಂತಾಭಾರದೆ | ಕದಪಿನೊ ಳಿಕ್ಕಿರ್ದ ಮುನಿಯ ಕರ
ನಖರುಚಿಗಳ್ ॥ ಪುದಿದಡರ್ದ ಬೆಳಗಿದುವು ಪೂ | ಸಿದ ಚಂದನ ರಸಲ
ಲಾಮಮಂತಿರೆ ನೊಸಲೊಳ್ ॥ ೮೩೨

---

೮೨೮. ಬರೆವನಂತೆ—ಚಿತ್ರದಲ್ಲಿ ಬರೆಯಲ್ಪಟ್ಟವನಂತೆ; ಕಂಡರಿಸಿದನಂತೆ—ಕೆತ್ತಲ್ಪಟ್ಟವನಂತೆ; ಮರವಟ್ಟನಂತೆ—ಸ್ತಬ್ಧನಾದಂತೆ; ಉಪರತವಶನಾದಂತೆ—ಮರಣವಶನಾದಂತೆ.

ವೃ॥ ತೊಳಗುವ ಪಾರಿಜಾತದಲಗೊರ್ಂಚಲಿ ನೊಪ್ಪುವ ಕರ್ಣ ಪೂರಮಂ । ಕಳೆದೊಡಮಲ್ಲಿ ಸಂಕ್ರಮಿಸಿ *[ಪ್ರೋಗದಕಂ] ಪಸುಱ್ಕೆ ಕರ್ಣದ ॥ ತ್ತೆಳಸಿ ಜಿನುಂಗುತಿರ್ಪ್ಪನೆವದಿಂ ಸ್ಮರಮಂತ್ರಮ ನೋದುವಂತೆ ಕಣ್ಗೊಳಿಪಳಿಸಂಕುಳಂ ನೆನಯಿಸಿತ್ತಸಿತೋತ್ಪಳಕರ್ಣಪೂರಮಂ ॥ ೮೭೩

ಕಂ॥ ವಿರಹಜ್ವರದಿಂ ಪುಳಕೋ । ತ್ಕರಮೊಗೆದುವು ರೋಮಕೂಪ ಮೆನಿತನಿತಱೊಳಂ ॥ ಸ್ಮರನ ಸರಲ್ಗಳ್ಸಾಂಟಲ್ । ಶರೀರಮಂ ಪತ್ತಿಸಿದ †[ಪುಂಖಂಗ] ಳವೋಲ್ ॥ ೮೭೪

ಪುಳಕಂ ಗಳ್ದಕ್ಷಿಣಕರ । ತಳಸಂಸ್ಪರ್ಶನದಿ ನೊಗೆದುವೆನೆ ಕೆವ ಱುವ ನು ॥ ಣ್ಬೆಳಗಿಂ ಮುಕ್ತಾವಳಿ ಕ । ಣ್ಗೊಳಿಸಿದು ದಂಗಜಪತಾಕೆ ಯೆಂದದಿ ನುರದೊಳ್ ॥ ೮೭೫

ಪೊಗೆ ಪಬ್ಬುಗಲ್ಕಾಯ್ದ ಪುಣುಂ । ಖುಗಳಂ ಕುಸುಮಾಸ್ತ್ರನಿಸುತ ಮಿರ್ದ್ದಪನೆನೆ ಸಂ ॥ ಪಗೆಯು ಮುಗುಳ್ಗ ಳ್ಮೇಲ । ಲ್ಲುಗುತಿರ್ದ್ದುವು ಬಳ ಸಿದಳಿಕುಳಂ ಬೆರಸಾಗಳ್ ॥ ೮೭೬

ವೃ॥ ಅದಲ್ಲದೆಯುಂ ಮದನವಶೀಕರಣಚೂರ್ಣದಂತೆ ಮೇಲೆಕೆವ ಱುವ ಕುಸುಮರೇಣುಗಳುಂ ಆತ್ಮರಾಗಮಂ ಸಂಕ್ರಮಿಸುವಂತೆ ಮೇಲ ಲೆವ ರಕ್ತಾಶೋಕಪಲ್ಲವಮುಂ ವನಲಕ್ಷ್ಮಿಯೊಡಚ್ಚುವ ರತಾಭಿಷೇಕ ದಂತೆ ಸುರಿವ ಪುಷ್ಪಸ್ತಬಕಶೀಕರಂಗಳುಂ ಅತಿಬಹುಳ ವನಾಮೋದ ಮತ್ತಮಧುಕರಝುಂಕಾರಂಗಳೊ ಳ್ಪೊರೆವ ದಕ್ಷಿಣಾನಿಲನುಂ ವಸಂತಜ ಯಶಬ್ದ ಕೋಲಾಹಲಂಗಳಂತೆ ಕಳಕಳಿಪ ಕೋಗಿಲೆಗಳುಂ ಮತ್ತ್ಯಾಕುಲ ತೆಯುಂ ಮಾಡೆ ಜನ್ಮಾಂತರೋಪಗತನಾದಂತೆಯುಂ ರೂಪಾಂತರಮಂ ಕೈ

೮೭೫. ದಕ್ಷಿಣಕರ—ಪುಂಡರೀಕನ ಬಲಗಯ್ಯ; ಸಂಸ್ಪರ್ಶನದಿಂ—ಸೋಂಕಿ ನಿಂದ; ಪುಳಕಂಗಳ್, ಒಗೆದುವೆನೆ, ಕೆವಱುವ ನುಣ್ಬೆಳಗಿಂ, ಮುಕ್ತಾವಳಿ ಕಣ್ಗೊಳಿಸಿ ದುದು ಎಂದನ್ವಯವು.

೮೭೬. ಕಾಯ್ದ—ಕೆಂಪಗೆ ಕಾಯಿಸಲ್ಪಟ್ಟ; ಪುಣುಂಖುಗಳಂ—ಬಾಣಗಳ ನ್ನು; ಉಗುತಿರ್ದ್ದುವು—ಸುರಿಯುತ್ತಿದ್ದವು; ಮೇಲೆ—ತನ್ನ ಮೇಲೆ.

*[ಪೋಗರಕಂ] †[ಪುಂಖಾಗ್ರ]

ಕೊಂಡಂತೆಯುಂ ಮನ್ಮಥಾವೇಗದಿಂ ಪಱಿಯಲ್ಕೆ ಬಾರದಾಕಾರಮಂ ಭಾವಿಸಿನೋಡಿ ॥ ೮೩೭

ಕಂ॥ ಏನಂ ವಿಧಿಮಾಡಿದನೋ । ತಾನಿಲ್ಲಿಗುಪಾಯಮೆಂತು ಭೋಂಕನೆ ಬಱಿದೀ ॥ ಜ್ಞಾನಸಿಧಿ ಸೂರೆವೋ । ದಪುದಾನಿನ್ನೇಗೆಯ್ವೆ ನೆಂದುತಳವೆಳಗಾದಂ ॥ ಅದಲ್ಲದೆಯುಂ— ೮೩೮

ಕಂ॥ ಗುಣಿಯೆನಿಸಿದ ಚಾತುರ್ಯದ । ಕಣಿಯೆನಿಸಿದ ಮುನಿಕುಮಾರಕ ಪ್ರತತಿಯೊಳ್ ॥ ಗ್ರಣಿ ಯೆನಿಸಿದ ಮತ್ಸಜನಂ । ಕ್ಷಣಮಾತ್ರದಿನಿಂತಿರೆಳೆದು ಪೊಸೆಗುಮೆ ಮದನಂ ॥ ೮೩೯

ವ॥ ಎಂದಾತನಿರ್ಪ್ಪ ಲತಾಮಂಟಪದೊಳಗಣ ಚಂದ್ರಕಾಂತಶಿಲಾತಳಕ್ಕೆ ಬಂದು ॥ ೮೪೦

ಕಂ॥ ಪೊರೆದೊಳ್ಕಳ್ಳದ್ದೊರ್ಯ್ಯನೆ । ಕರತಳದಿಂದೆಳವಿ ತನುವನಿರ್ಗಳ್ಚಿನಿ ॥ ಪ್ಪಿರಪಿನ ಪರಿಯೋಸೆಂದಾಂ । ಸರೋಜಮುಖಿ ಮುಕುಳಿತಾಕ್ಷನಂ ಬೆಸಗೊಂಡೆಂ ॥ ೮೪೧

ವ॥ ಅಂತು ಬೆಸಗೊಳ್ವುದು ಮಾಗಳೆಡೆವಿಡದೆ ಮುಚ್ಚಿ ಬೆಚ್ಚಂತಿರ್ದ್ದ ಕಣ್ಗಳ ನೆಂತಾನುಂ ತೆಱೆದು ॥ ೮೪೨

ಕಂ॥ ಬಿಸವಲ್ಲವಳ್ತು ಕೆಂಪೇಱ । ರಿಸೆ ತೀವಿದೆ ಬಾಷ್ಪಸಲಿಲ ಮಟ್ಟಿಂಬುಗಳಿಂ । ಮುಸುಕಿದ ರಕ್ತಾಂಭೋರುಹ । ದೆಸಳಂ ಪೋಲ್ತೆಸೆವ ಕಣ್ಗಳಿಂ ದೀಕ್ಷಿಸಿದಂ ॥ ೮೪೩

---

೮೩೭. [illegible]; ಇಲ್ಲಿ [illegible] ೩೬೦

೮೩೮. [illegible] — [illegible]ಯಾಗುತ್ತಿದೆ.

೮೩೯. [illegible]

೮೪೧. [illegible]

೮೪೨. [illegible]

೮೪೩. [illegible]

ವ॥ ಅನ್ತು ಕಿರಿದುಬೇಗಮೆನ್ನಂ ಭಾವಿಸಿ ನೋಡಿ ॥

ಕಂ॥ ನೀಂತಿಳಿದಿರ್ದುಂ ಮದ್ವೃ । ತ್ತಾಂತಮ ನೇನೆಂದು ಕೆಳೆಯ ಬೆಸಗೊಂಡಪೆ ಯೆಂ ॥ ದಿಂತಿವನುಸಿರ್ದಂ ಲಜ್ಜೆಯಿ । ನೆಂತಾನುಂ ಶೀರ್ಯಮಾಣವಿರಳಾಕ್ಷರದಿಂ ॥ ೮೪೪

ವ॥ ಎಂಬುದುಮದುನೀನೆಂದಂತೆ ನಿಶ್ಚಯಮಪ್ಪುದಾದೊಡಂ ॥ ೮೪೫

ವೃ॥ ಇನಿತನೆ ಪುಂಡರೀಕ ಬೆಸಗೊಂಡಪೆ ನಿಂತಿದು ಧರ್ಮಶಾಸ್ತ್ರಸಂ । ಜನಿತ ರಹಸ್ಯವೋ ಯಮಮೊ ಪೇಳ್ಪೆಱತೇನಪವರ್ಗಮಾರ್ಗವೋ ॥ ಮನದೊಳಣಂ ವಿಚಾರಿಸದೆ ಸೈರಣೆಗೆಟ್ಟಱಿವೆತ್ತ ಪೋದು ದೀ । ಮನಸಿಜನೆಂಬ ಪಾತಕನಿ ನಿಂತಪಹಾಸ್ಯಮ ನೆಯ್ದಲಕ್ಕುಮೋ ॥ ೮೪೬

ಅದಲ್ಲದೆಯುಂ ॥

ವೃ॥ ಅಗರುವ ಧೂಪಧೂಮಲತೆಯೆಂದಸಿತಾಹಿಗೆ ಸಾರ್ವನೆಯ್ದಿಲೊ । ಳ್ಮುಗುಳನ ಮಾಲೆಯೆಂದಸಿಯ ನಪ್ಪುವ ಮಾಣಿಕಮೆಂದು ಕೆಂಡಮಂ ॥ ನೆಗಪುವ ಪುಣ್ಯಮೆಂದು ವಿಷವಲ್ಲಿಗೆ ನೀರೆಱೆವೆಗ್ಗನಂತೆ ಕೆಂ । ಮಗೆ ಸುಖಮೆಂದಸದ್ವಿಷಯ ಸೌಖ್ಯದೊಳಿಂತೆಱಗಲ್ಕೆ ತಕ್ಕುದೇ ॥ ೮೪೭

ವ॥ ಅದಲ್ಲದೆಯುಂ ಮತಿಬಹುಳರಜದೊಳ್ಪೊರೆದ ಪೊನಲ್ಗಳಂತುನ್ಮಾರ್ಗದಿಂ ಪರಿವಿಂದ್ರಿಯಂಗಳಂ ನಿವಾರಿಸದೆಯುಂ ಕನಲ್ವ ಮನಮಂ ನಿಯಾಮಿಸದೆಯುಂ ಇಂತಿರ್ಪುದುಚಿತಮಲ್ಲ ಮನಂಗನೆಂಬ ದುರಾಚಾರನಂ ನಿವರ್ತಿಸಲ್ವೇಳ್ಕು ಮೆಂಬುದುಮಾಕ್ಷೇಪಂಗೆಯ್ದು ಮನುಜುಂಗಲಿ ನಿಱಿವ ತೋರಕಣ್ಬನಿಗಳಂ ಬಸಿಯುತ್ತು ಮೆನ್ನನಿಂತೆಂದಂ ॥ ೮೪೮

---

೮೪೬. ಇನಿತನೆ—ಇಷ್ಟುಮಾತ್ರವನ್ನು: ಬೆಸಗೊಂಡಪೆಂ—ಕೇಳುತ್ತೇನೆ; ಇಂತಿದು—ಈ ನಿನ್ನ ಅವಸ್ಥೆಯು; ಯಮಮೊ—ಯಮವೆಂಬ ಯೋಗವೊ; ಪೆಱತು—ಬೇರೆವಿಧವಾದ; ಅಪವರ್ಗಮಾರ್ಗವೋ—ಮೋಕ್ಷಮಾರ್ಗವೊ.

೮೪೭. ಅಸಿತಾಹಿಗೆ—ಕೃಷ್ಣಸರ್ಪವನ್ನು; ಇಲ್ಲಿದ್ವಿತೀಯಾರ್ಥದಲ್ಲಿ ಚತುರ್ಥಿಯು ಶಮ. ಸೂ. ೧೩೬. ಬಳ್ಮುಗುಳಿನ—ಬಳ್ಳಿಮೊಗ್ಗಿನ; ನೆಗಪುವ—ಎತ್ತಿಕೊಳ್ಳುವ; ಎಗ್ಗನಂತೆ—ದಡ್ಡನಂತೆ.

೮೪೮. ಎಂಬುದುಂ—ಎಂಬಮಾತನ್ನು; ಆಕ್ಷೇಪಂಗೆಯ್ದು—ಆಕ್ಷೇಪಿಸಿ.

ಕಂ॥ ಅಪರಿಮಿತಶೋಕ್ತಿಯೊಳಂ *[ಸ । ತ್ವಪರೀತನೆ] ಮದನ ದಾ
ವದಹನಂ ತಳ್ತಿ । ರ್ದ್ದಪ್ಪದಿಲ್ಲ ನಿನ್ನ ನದಱಿಂ । ದುಪದೇಶಂಗಯ್ಯುತಿ
ರ್ಪ್ಪುದಿದು ಸುಖಮಲ್ತೇ ॥ ೮೪೯

ವೃ॥ ಆವಂಗಿಂದ್ರಿಯ ವರ್ಗಮುಂಟು ಮನಮುಂಟಾವಂ ದಿಟಂ ಕಾ
ಣ್ಬನಿ । ನ್ನಾವಂ ಕೇಳ್ವನದಂತೆ ಕೇಳ್ದನುಡಿಯುಂ ಕೈಕೊ ಳ್ವ ನಂತ
ಲ್ಲದಿ ॥ ನ್ನಾವಂ ಪೊಲ್ಲದಿದೊಳ್ಳಿತೆಂದಱಿವನಾತಂ ಕೇಳ್ದಪಂ ನಿನ್ನ ಸ । ದ್ಭಾ
ವಾಪೇತ್ತುಪದೇಶಮಂ ಕೆಳೆಯುಪೇಳೆನ್ನಂದಿಗಂ ಕೇಳ್ವನೆ ॥ ೮೫೦

ಪಿಱತೇ †[ನಾನಿಪ್ಪ] ವಸ್ಥಾಂತರದೊಳೆನಗೆ ನಿನ್ನನ್ನರಾಬ್ಬುರ್ಗಂಥುಗ
ಳ್ನಿಂ । ಪ್ರೋಜಗಾ ಗೀಮಾರ್ಗದಿಂದಂ ನಿಯಮಿಸುವವರಾರೆನ್ನ ನೇಗೆಯ್ವೆ
§[ನಾನಿ ॥ ನ್ನಱಿಸಿಂ] ನೋಡೆನ್ನ ನಾಂ ಸಂವರಿಸಲಣಮುಂ ಮಾತ್ರ್ರಮಪ್ಪೆನಿ
ಲ್ಲಿಂಗಳಾತೀ । ತೆಱನಂ ಕಂಡಿದ್ದು ನೀನೀ ಯೆಡೆಗಿದುಚಿತ ಮೆಂಬಂತುಟಂ
ನೀನೆಬಲ್ಲೈ ॥ ೮೫೧

ವ॥ ಅದೆಂತೆಂದೊಡೆ ಕಲ್ಪಾಂತೋದಿತ ದ್ವಾದಶದಿನಕರ ಕಿರಣಾತಪ
ತೀವ್ರಮಪ್ಪ ಮದನಸಂತಾಪಕ್ಕುಪಶಮನೋಪಾಯಮ ನಾಂಪ್ರಾಣಂಬೆರ
ಸೆನಿತುಪೇಗ ಮಿಪ್ಪೆನನ್ನೆವರ ಮಪೇಕ್ಷಿಸಿದಪ್ಪೆ ನಲ್ಲದೆಯುಂ ॥ ೮೫೨

---

೮೪೯. ಸತ್ವಪರೀತನೆ—ಸತ್ವಗುಣದಿಂದ ಕೂಡಿದ ಕಪಿಂಜಲನೆ.

೮೫೦. ಅಂತೆ—ಹಾಗೆ; ಕೇಳ್ದ—ಕೇಳಿದ, ಅದನುಡಿಯುಂ—ಆ ಮಾತನ್ನು; ಆತಂ—ಅವನು, ಕೇಳ್ದಪಂ—ಕೇಳುತ್ತಾನೆ;

೮೫೧. [illegible]—[illegible]ತಾಗಿ; ಎನ್ನಂ ಈ ಮಾರ್ಗದಿಂದಂ—ಈ ದುರ್ಮಾರ್ಗವನ್ನು ಬಿಡಿಸಿ: [illegible]—[illegible]ಕ್ಷಿಸುವವ್ಯರು? ಆಂ, ಇನ್ನು, ಹೇಗೆಮಾಡಲಿ, ಅಱಿಯೆಂ; ಸಂವರಿಸಲ್—ಸ[illegible] ಧಾರ ಮಾಡಿಸಿಕೊಳ್ಳುವದಕ್ಕೆ: ಅತ್ತರಪ್ಪೆನಿಲ್ಲ—ಸಮರ್ಥನಾದಂಥವನಾಗಿಲ್ಲ; ಉಚಿತಮೆಂಬಂತುಟಂ—ಯೋಗ್ಯ[illegible]ವನ್ನು.

*[ಸ್ವಸ್ತಪರೀತನೆ] †[ನೀನಿರ್ದ್ದು] §[ನಾನಿ । ನ್ನಱಿಯೆಂ]

ಸ್ರ। ಅನುವಂತಾದಪ್ಪು *[ಜೀಗಣೆ]ನ್ನ ವಯವಂಗಳನ್ಕಡೆ ಕಣ್ಣಾಲಿಗ । ಳ್ಳ್ನಡುವಂತಾದಪ್ಪು ದೇವೆನೆಸಿದ್ದ ಹೃದಯಂ ಜೀವಂತುಟಾದಪ್ಪುದೀ ॥ ಪ್ರೇಜಳೋರಂತು ರಿವಂಪವಾದಪ್ಪುದಿದಂ ನೀಂಪರಾಣಿಸಲ್ಕಾಪ್ಪೆರಯ । ಪ್ರ್ಹಡೆದಲ್ಕ್ರಾಣಿಪ್ರಪಂಚಿದಂ ನುಡಿದು ಮಾತಂ ಮಾಣ್ದನಬ್ಜಾಸನಂ ॥ ೮೧೪

ವ॥ ಅಂತುಸಿರದಿರೆ ಮತ್ತಮಾನಾತನಂ ಸಂಭೋಧಿಸಲೆಂದು ॥

ಕಂ॥ ಎಸೆತು ಪ್ರರಾಣೋಕ್ತಿಗಳಿಂ । ದೆಸೆತಾಗವು ವಿಷಯವಚನದಿಂ ದೆಸಿತುಸಿದ । ರ್ಜನದಿ ನನುನಯದೆ ಪೇಳ್ದನ । ದಸಿತುಂ ಕಿವಿಪ್ರೋಕ್ಕುದಿಲ್ಲ ತನ್ಮುನಿವರನಾ ॥ ೮೧೫

ವ॥ ಅಂತು ಮೆಯ್ಯಳುಂಬಿದ್ದನಂ ಕಂಡು ಭಯಂಗೊಂಡು ಪದೇಶಕ್ಕಂಪೆಡೆಯಿಲ್ಲದೆ ಪ್ರಾಣರಕ್ಷಣೋಪಾಯಮ ನಾಪೊಡಂ ಮಾಡ್ಪೆನೆಂದಲ್ಲಿಂದ ಪೊಳ್ದ ಚಿಕ್ಕೋದಕಸರೋವರಮಂ ಪ್ರೊಕ್ಕು ಸರಸಪ್ಪಲಾಳನಾಳಂಗಳುಮಂ ಜಲಲವಲಾಂಛಿತಂಗಳಪ್ಪ ನಳಿನೀದಳಂಗಳುಮಂ ಪರಾಗಪರಿಮಳಮನೋಹರಂಗಳಪ್ಪ ಕುಮುದಕುವಲಯಂಗಳುಮಂ ತಂದಾಲತಾಮಂದಿರದೊಳಗಣ ಚಂದ್ರಕಾಂತಶಿಲಾತಲಂಗಳೊಳ್ ಪಲವುಮನಲ್ಪತಲ್ಪಂಗಳುಮಂ ಮಾಳ್ಪುದು ಮಾತನಕ್ಕಿಗೆ ಮೆಯ್ಯನೀಡಾಡಿ ಕೆಲದೊಳಿರ್ದ ಚಂದನಪಲ್ಲವದೆಳದಳಗಳಂ ಕರತಳದಿಂ ಪಿಳಿದು ನಿಸರ್ಗಪರಿಮಳಮಂ ತಳೆದ ಹೈಮನಂತೆ ಕುಳಿಕ್ಕೊರೆಯುವ ತದ್ರಸದಿಂ ಲಲಾಟಂಮೊದಲಾಗಿ ಚರಣತಳಂಬರಂ ಅಂಗಚರ್ಚೆಯ ನೆವೆಪಿದಮೊದಚ್ಚೆಯುಂ ಅಭ್ಯರ್ಣಪಾದಪಸ್ಫಟಿತ ವಲ್ಕಲಂಗಳೊಳಂ ಕಟ್ಟಿದಕರ್ಪೂರರಜದ ಪ್ರೊಟ್ಟಣಂಗಳೊಳಂ ಸ್ವೇದಪ್ರತೀಕಾರಮ ನನವರತಂ ಮಾಡಿಯುಂ ತಿಳಿನೀರತುಂತುರ್ವನಿಗಳಿಂ ಪೊರೆದೆಳವಾಳೆಯ ಸುಳಿಯ ಬಿಜ್ಜಣಿಗೆಗಳ ನಡಿಗಡಿಗೆ ಬೀಸಿಯುಂ

---

೮೧೪. ಅನುವಂತೆ—ಅನಲ್ಪಡುವಂತೆ; ಮಾತಂಮಾಣ್ದಂ—ಸುಮ್ಮನಾದನು.

೮೧೬. ಪಿಳಿದು—ಹಿಂಡಿ; ಹೈಮನಂತೆ—ಹಿಮಸಮೂಹದಹಾಗೆ; ಕುಳಿಕ್ಕೊರೆಯುವ—ತಣ್ಣಗೆ ಕೊರೆಯುವ.

*[ನನ್ನನೆ]

ಮತ್ತಮನೇಕ ಶಿಶಿರೋಪಚಾರಂಗಳಂ ಮಾಡಿಯುಂ ಮವೆಲ್ಲಮುಂ ಪ್ರಂಡರೀಕಂಗುದ್ದೀಪನ ಪಿಂಡದಂತೆ ಕೇವಲಂ ಸಂತಾಪಮಂ ಮಾಳ್ಪುದು ಮೆನ್ನೊಳಂತೆಂದಂ ॥ ೯೫೫

ವೃ॥ ಜನಕಂ ಗಂಧರ್ವರಾಜಂ ತನಗೆನಿಸಿದ ವಿಖ್ಯಾತಿಯಂ ತಾಳ್ದಿ ಕಾಂತಾ । ಜನರತ್ನಂ ತಾನೆನಲ್ ಚಂದಶಿಚತುರೆ ಮಹಾಶ್ವೇತೆ ತಾನೆತ್ತಣಿಂ ದುಂ ವನವಾಸೈಕಾಗ್ರಚಿತ್ತಂ ಮೃಗಶಿಶುವಿನವೋಲ್ ಮುಗ್ಧನಪ್ಪೀತನೆತ್ತಂ । ಜನಿತಂ ತಾಂ ನೋಡದಿಂ ಮಾಡಿದನೊ ವಿರಹಸಂತಾಪಮಂ ಪುಷ್ಪಚಾಪಂ॥

ವ॥ ಅಂತು ದುರ್ನಿವಾರಮುಂ ದುಷ್ಕರಮುಂ ದುಸ್ಸಾಧ್ಯಮುಂ ದುರ್ಘಟಮುಂ ಮೆನಿಪೆವೆಯೊಳ್ದೆಗೊಟ್ಟದೊಂದವಜ್ಞೆಯಿಂದೆ ಸಗಿದಪಂ ವಿಪಿನದೊಳ್ ಮದನಕಾರಣದಿಂ । ೯೫೬

ವೃ॥ ಆವುದು ಮಾಳ್ಪುದೋ ಶರಣಮಾವುದೊ ಪೋಪೆಡೆ ಯಾವುದಿಲ್ಲಿಗೆ । ನ್ನಾವುದೊ ಕಾರ್ಯಮಂ ನೆರವದಾವುದುಪಾಯಮದಾವುದೋಪ್ರೊತಂ । ನಾವುದೊ ಬುದ್ಧಿ ಮತ್ತವನ ಜೀವಮ ನಾಂಪಿಡಿವಂದಮಾವುದೆ । ನ್ನೀ ವೆನೆಸುತ್ತ ಚಿಂತಿಸಿ ವಿಕಲ್ಪಿಸಿದೆಂ ಪಲವುಂ ಪ್ರಕಾರಮಂ ॥ ೯೫೭

ವ॥ ಅಂತು ಚಿಂತಿಸುತ್ತ ಮಿರ್ದ್ದ ಮೆನ್ನೊಳಾತೆಂದಂ ॥

ವೃ॥ ದೆಸೆಗೆಟ್ಟಿನಾನುಮಂ ಚಿಂತಿಸುತಿರೆ ಫಲಮೇಂ ಪೊಲ್ಲದಿನ್ನೊಳ್ಳಿತೆಂಬು । ದ್ದೆಸಮಂ ಮಾಣ್ದಿಂಗಳಿಲ್ಲಿಂ ಪದೆದೊಳಮೆನಗೆ ಮಾತ್ರಂ ಸುಹೃತ್ಪ್ರೇಮಂ ರ । ಕ್ಷಿಸವೇಳ್ಕುಂ ಜೀವನಂ ರಕ್ಷಿಸುವತೆರನು ಮೆಂತೆಂ

೯೫೬. ವಿಪಿನದೊಳ್—ವಿಪಿನದಲ್ಲಿ; ವಿರಗೊಟ್ಟು—ಧೈರ್ಯವನ್ನು ಮಾಡಿ; ಅವಜ್ಞೆಯಿಂದೆ—ಅಲಕ್ಷ್ಯದಿಂದ; ಸಗಿದಪಂ—ಸಾಯುತ್ತಾನೆ.

೯೫೭. ನೆರವು—ಸಹಾಯವು; ಬುದ್ಧಿ—ಆಲೋಚನೆ; ಪಲವುಂ ಪ್ರಕಾರಮಂ—ಎಂಬಲ್ಲಿ ಸಮಾಸದಲ್ಲಿ ಮಗಾಗಮವು. ಶಶಾ. ಸೂ. ೩೭೯.

೯೫೮. ಸಿನಾನುಮಂ—ಏನಾದರನ್ನಾದರೂ; ಪೊಲ್ಲದು—ಕೆಟ್ಟದ್ದು; ಇನ್ನು—ಮುಂದೆ; ಒಳ್ಳಿತು—ಒಳ್ಳೇದು; ಎಂಬ—ಎನ್ನುವ, ಉದ್ದೆಸಮಂ—ಉದ್ದೇಶವನ್ನು; ಮಾಣ್ದು—ಬಿಟ್ಟು; ಪದೆದು—ಪ್ರೀತಿಸಿ; ಒಡಂ—ಕೂಡಲೆ; ನಿಟ್ಟೆಯಿಂ ನಿಜವಾಗಿ.

ದೊಡಂ ನಿಶ್ಚಯಂ ಭಾ। ವಿಸಿನೋಳ್ಪಂದಾಕೆಯುಂ ತಪ್ಪದನುಳಿಯೆ ಬಳಿ
ಕ್ಕಿಲ್ಲಬೇಱೊಂದುಪಾಯಂ ॥ ೮೫೯

ವೃ॥ ಱುಯುಂ ಕೇಣದಿನೇನುಮಂ ಮುನಿಕುಮಾರಂ ಪೆಂಡಿರಿಂತೆಂದು
ಬಾ। ಯ್ದೊಱೆಯ ಲ್ಕಾಣ್ಬ ಮನೋರಥ ಸನಳತ್ತ ಲ್ಕಾ [ರ್ದ್ದ ಮಾತಾ
ಡಲ] ಳ್ಕಱು ವಿತ್ತಲ್ವಿಪಮೋಪ ಕಂಡಿರ್ದ್ದ *[ಮತ್ತೀ
ಗಳಿಂ] । ಪೆಱತೇಂ ಭಾವಿಪೆ ನೆನ್ನಮಿತ್ರನವಂ ಕಾಯಲ್ಕೆವೇಳ್ಕುಂ
ದೃಢಂ ॥ ೮೬೦

ವ॥ ಅದಱಿಂದಿನ್ನಾಕೆಯಲ್ಲಿಗೆಂತಾದೊಡಂ ಪೋಗೀತನವಸ್ಥಾಂತರ
ಮಂ ಪೇಳಲ್ವೇಡಿವಪ್ಪುದೆಂದು ಮತ್ತಂ ॥ ೮೬೧

ವೃ॥ ಎನಗಂಕೃತ್ಯಮಿದಲ್ಲದಿದೆರ್ದ್ದಡ ಮವಶ್ಯಂಪೋಪೆನೆಂತಾನುಮೆ।
ನ್ನನಿವಂ ಕುತ್ಸಿತವೃತ್ತಿ ಕಷ್ಟಮಿದು ಜೇಡೆಂದೆಂಗುಮೋ ಲಬ್ಧಚೇ ॥ ತನ
ನೆಂದಾತನ ಪಕ್ಕದಿಂಪುಸಿರದಿರ್ದ್ದ ನಾಗಳೇನಾನುಮೊಂ । ದುನೆಮಂ ಮಾತಿ
ಮಹೋತ್ಕಟತ್ವದೆ ದಿಟಂಬಂದೆಂ ಚಕೋರೇಕ್ಷಣೆ ॥ ೮೬೨

ಇದು ಮನ್ಮಿತ್ರನವಸ್ಥೆ ತದ್ವಿರಹಸಂತಾಪಾನುರಾಗಕ್ಕೆ ತ । ಕ್ಕುದ
ನಾಂ ಬಂದೆಡೆಗಂ ಮೃಗಾಕ್ಷಿನಿನಗಂ ಪೋಲ್ವಂತುಟಂ ನೀನೆಬ ॥ ಲ್ಲೆ ದಲೆಂ
ದಿಂತಿವಕೇ। ನನೆಂದಪಳೊ ಕೇಳ್ವೆಂ ಮಾತನೆಂದೇನು ಮೆ । ನ್ನದೆ ಮದ್ವ
ಕ್ತ್ರಮ ನಾಕಪಿಂಜಳಕ ನಾಗಳ್ನೋಡುತಿರ್ದ್ದಂ ನೃಪಾ ॥ ೮೬೩

---

೮೬೦. ಕೇಣದಿಂ—ಮುನಿಕುಮಾರನೆಂಬ ಭಿಮಾನದಿಂದ; ಪೆಂಡಿರ್, ಎಂಬ, ಬಂದುಮಾತಂ, ಬಾಯ್ದೆರೆಯಲ್, ನಾಣ್ಚುವಂ ಎಂದನ್ವಯವು. ಅವಳತ್ತಲ್ಪೋರ್ದ್ದ—ಆಕೆಯ ಸವಿಪಕ್ಕೆ ಹೋಗಿ; ಮಾತಾಡಲ್—ಅಳ್ಕಱುಂ—ಭಯವೂ ಕೂಡ.

೮೬೨. ಜೇಡ—ಎಂದು; ಎಂಗುಮೋ—ಹೇಳುವನೋ; ಮಹೋತ್ಕಟತ್ವ ದಿಂ—ಬಹಳವೇಗದಿಂ; ಆತನಪಕ್ಕದಿಂ, ಬಂದೆಂ ಎಂದನ್ವಯವು.

೮೬೩. ತದ್ವಿರಹ ಸಂತಾಪಾನುರಾಗಕ್ಕೆ, ಅಂಬಂದೆಡೆಗಂ, ನಾನು ಬಂದಕಾರ್ಯ ಕ್ಕೂ; ತಕ್ಕುದಂ, ನಿನಗಂ—ನಿನಗೂ, ಪೋಲ್ವಂತುಟುಂ—ಯೋಗ್ಯವಾದ್ದನ್ನೂ, ನೀನೆ ಬಲ್ಲೆ, ದಲ್—ನಿಶ್ಚಯವು, ಎಂದು—ಎಂದು ಹೇಳಿ.

*[ಮಾತೇನಗೀಂ]

ವೃ॥ ಅದನಾಂ ಕೇಳ್ದು ಸುಖಾಮೃತಾರ್ಣವದೊಳಾೞ್ದಂತಾನು ಮಂತೆ ಬೞ್ದಿಕೂ । ಟದೊಳಾದೊಂದನುರಾಗಮಂ ಪಡೆದೆನೆಂಬಂತಾನು ಮಂತೆ ಬೞ್ದಿಸ ॥ ನ್ಮದಸಂದೋಹಮ ನಾನೆ ಪೆತ್ತೆನಿದನೆಂಬಂತಾನು *[ಮಂತೆ ಬೞ್ದಿದೋ । ಹವ] ಮೆಲ್ಲಂ ನೆಱೆಬಂದು ಕೂಡಿತುಗಡೆಂಬಂತಾನು ಮಾದೆಂ ನೃಪಾ ॥ ೮೬೪

ವ॥ ಅಂತತೀಂದ್ರಿಯ ಸೌಖ್ಯಪರಮಕೋಟಿಯ ನೆಯ್ದಿ ನಾಣೊಱ ಕದಿಂದಿನಿತುಜೀಗಂ ತಲೆಯಂಬಾಗಿರಲೆಮೆಯಂ ಕಪೋಲತಲಮುಮಂ ಮುಟ್ಟದೊಂದಱ ಸಿಂದೊಂದಪಸಿ ಗುಡುಗುಡನೆ ಸುರಿವಾನಂದಜಲಬಿಂದುಗ ಳೆನ್ನನಿರತಿಶಯ ಹರ್ಷಮಂ ಪ್ರಕಟಿಸುತ್ತಿರ ಲೆನ್ನೊಳಂತೆಂದೆಂ ॥ ೮೬೫

ವೃ॥ ಎನಗೆಂತಂತಿರೆ ದೈವದಿಂ ಪ್ರಿಯನೊಳಂ ಸಂತಾಪಮಂ ಮಾಡಿ ತ । ನ್ನನುಕೂಲತ್ವವ ನೊಂದು ಮೆಯ್ಯೊಳೆನಗೀಗ ಳೊತ್ತೀಱಿಮಂ ನೆಟ್ಟ ನಾ ॥ †[ತನೆ ಮುಂತಾನಿನಿ] ತೊಂದವಸ್ಥೆಗೊಳಗಾಗ ಲ್ಕಾಮನಂ ಬಿಟ್ಟ ಪು । ತ್ತೆನಗಾ ಬ್ಬರ್ಗಂಧುಗಳಾಸ್ಸರ್ಹಾಯ ರುಪಕಾರಂಗೆಯ್ವರಾರಿ ರ್ದ್ದಪರ್॥ ೮೬೬

ಕಂ॥ ಕನಸಿನೊಳ ವಿಶಾಕಸಿಂಜಲ । ಮುನಿವದನದೊಳನೃತಭಾಷೆ ಪ್ರೊಱಮಡದಪಱುಂ । ಬಿನಗಾವುದಿಲ್ಲಿಗುತ್ತರ । ಮೆನುತುಂ ಬಗೆವುತ್ತ ಮಿ ರ್ದ್ದೆ ನಿಪ್ಪರ್ನ್ನೆವರಂ ॥ ೮೬೭

---

೮೬೪. ಅೞ್ದಂತಾನುಂ—ಮುಳುಗಿದಹಾಗೂ; ಅಂತು—ಹಾಗೆ; ಎಯ್ದಿ—ಚೆನ್ನಾಗಿ; ದೋಹದಂ—ಮನೋರಥವು; ಅೞ್ದಂತೆ ಎಂಬಲ್ಲಿ ಆೞ್‌ಧಾತುವಿನ ಆದಿಗೆ ಹ್ರಸ್ವವು. ಶಮ. ಸೂ. ೨೪೦.

೮೬೫. ನಾಣೊಱಕದಿಂ—ಲಜ್ಜೆಗೂಡಿದ್ದರಿಂದ; ಅಡಸಿ—ಒತ್ತಾಗಿ.

೮೬೬. ತನ್ನನುಕೂಲತ್ವಮಂ—ನನ್ನ ಅನುಕೂಲ್ಯವನ್ನು; ಒಂದು ಮೆಯ್ಯೊಳ್—ಒಂದುಭಾಗದಲ್ಲಿ; ಆತಂ—ಆ ಪುಂಡರೀಕನು; ಮುನ್—ನನಗಿಂತಲು ಮೊದಲು; ತಾನೆ—ತಾನಾಗಿಯೆ.

*[ಮೋಹದಾಸ್ಪದ] †[ತನುಮೆಂತಾಗಿನಿ]

ವ॥ ಆಗಳೀರ್ವರ್ಗಳತಿ ಸಂಭ್ರಮಂಬೆರಸು ದೌವಾ ರಿಕೆ ಬಂದು ಪೊಡವಟ್ಟು ರಾಜಪುತ್ರಿ ನೀನಸ್ವಸ್ಥಶರೀರಿಣಿಯಾಗಿರ್ದ್ದುದಂ ಪರಿಜನದಿಂ ಕೇಳ್ದು ಮಹಾದೇವಿಯು ನ್ನಿನ್ನಲ್ಲಿಗೆ ಬಿಜಯಂಗೆಯ್ದಪರೆಂಬುದುಮಂ ಕ ಪಿಂಜಲಂ ಕೇಳ್ದು ನೆರವಿ ಕವಿತಪ್ಪುದೆಂದಂಜಿ ಬೇಗಮೆಳ್ದು ॥ ೮೬೮

ಕಂ॥ ತಡೆದಿರಬಾರದು ನೇಸ । ರ್ಪ್ಪಡುತಂದುದು ಪೊಳ್ತು ಪೋಯ್ತು ಪೋದಪೆ ನೆಂತಾ ॥ ದೊಡ ಮೆನ್ನ ಕೆಳೆಯನಸುವಂ । ಪಿಡಿವುದು ಸೆಱಗೊ ಡ್ಡಿಬೇಡಿದೆಂ ಮೃಗನಯನೇ ॥ ೮೬೯

ವ॥ ಎಂದುನುಡಿದು ಮಱುಮಾತುಗುಡಲವಸರಮಿಲ್ಲದಿರೆ ಮಹೀ ಯಾಂಬಿಕೆಯ ಮುಂದೆ ಪರಿತಪ್ಪ ದೌವಾರಿಕೆಯರಿಂ ಸಪವಾಸಿಗಳಿಂ ಚಾಮರದಡಪದ ಕನ್ನಡಿಯ ಪರಿಚಾರಕಿಯರಿಂ ಕೂಡೆ ಸಂದಣಿಸಿದ ಬಾಗಿ ಲೊಳೆಂತಾನುಂ ನುಸುಳ್ದು ಪೋದನನ್ನೆಗಮಿತ್ತಲ್ ॥ ೮೭೦

ಕಂ॥ ದೀನಾಸ್ಯೆ ಜನನಿ ಬಂದೆನಿ । ತಾನುಂ ಪೊಳ್ತಿರ್ದು ಮನೆಗ ಪೋದಳ್ಗಡ ತಾ ॥ ನೇನೆಂದಳ ದೇಗೆಯ್ದಳ । ದೇನಾಯ್ತೆಂದಱಿಯೆ ನಾಗಳೆ ರ್ದೆಗೆಟ್ಟವಳಂ ॥ ೮೭೧

ವ॥ ಅನ್ನೆಗಮಿತ್ತಲಂಭೋಜಿನೀ ಜೀವಿತೇಶ್ವರ ನಸ್ತಂಗತನಪ್ಪುದುಂ ಪಾತಾಳ ಪಂಕಕಲುಷಿತ ಮಹಾಪ್ರಳಯಜಲಧಿಗಳ್ ಮೇರೆವಪ್ಪಿ ಕವಿದು ಭುವನಂಗಳೆಲ್ಲಮ ನೊಳಕೆಯ್ವಲುಕ್ಕಿದುವೆಂಬಂತಿಡಿದಡರೆ ಗೊಂಡು ಕಳ್ತಲೆ ಕವಿಯೆ ಕಿಂಕರ್ತವ್ಯತಾಮೂಢೆಯೆ ನಾಗಿ ತರಳಿಕೆಯನಿಂತೆಂದೆಂ॥

ಕಂ॥ ಮನಮು ಮಖಿಳೇಂದ್ರಿಯಂಗಳು । ಮಿನಿಸಪ್ಪೊಡ ಮೆನ್ನ ವಲ್ಲ ಮೇಗೆಯ್ವೆನೊ ಪೇ ॥ ಳೆನಗೀಗಳಾಕಪಿಂಜಲ । ಮುನಿ ನಿನ್ನಯ ಮುಂದೆ ನುಡಿದು ಪೋದುದ ನಱಿಯಾ ॥ ೮೭೨

---

೮೬೮. ನೆರವಿ—ಜನಸಂಘವು; ಕವಿತಪ್ಪುದು—ಮುತ್ತಿಕೊಳ್ಳುವದು.

೮೭೧. ಎನಿತಾನುಂಪೊಳ್ತಿರ್ದು—ಎಷ್ಟೋಹೊತ್ತಿದ್ದು; ಪೋದಳ್ಗಡ—ಹೋದಳಂತೆ.

೮೭೨. ಒಳಕೆಯ್ವಲ್—ಆವರಿಸಿಕೊಳ್ಳುವದಕ್ಕೆ; ಇಡಿದು—ವ್ಯಾಪಿಸಿ; ಅಡ ರೆಗೊಂಡು—ಮೇಲಬಿದ್ದು.

ವ॥ ಎಂದು ತಾನಿತರಕನ್ಯಕೆಯಂತೆ ನಾಣ್ಗೆಟ್ಟು ಸ್ವೈರಣೆಯಂ ಬಿಟ್ಟು ವಿನಯಮನೊಕ್ಕು ಜನಾಪವಾದಮಂ ಮಿಕ್ಕು ನಿಜಾಚಾರಮಂ ಮಱೆದು ಶೀಲಮಂ ತೊಱೆದು ಕುಲಕ್ರಮಮಂ ಪಾಲಿಸದೆ ರಾಗಾಂಧೆಯೆನಾಗಿ ॥ ೮೨೪

ಕಂ॥ ಗುರುಜನ ವಿಶಾಯದೆಯುಂ ಮು । ನ್ನಿರೆವಾತನ ನೆ *[ಯ್ದಿ ದ್ವೈದಯ] ಪ್ಪೊಡೆ ದೋಷಂ ॥ ಪರಿಭಾವಿಸಲೆನಗಿನ್ನಿದ । ಪರಿಹಾರ್ಯಮೆನಿಪ್ಪದೊಂದು ಮರಣಂ ಶರಣಂ ॥ ೮೨೫

ವೃ॥ ಮನೆಗೆ ಬರಲ್ಕಪಿಂಜಲಮಹಾಮುನಿಗಂ ಮಱುಮಾತನಿತ್ತನಿ । ಲ್ಲೆನಗವಱಿಂದಮಿಂ ಪ್ರಣಯಭಂಗಮದಾವುದೊ ಕೆಟ್ಟೆನತ್ತಲೋ ॥ ಪನುಮಿದ ನಿಂತೆ ಕೇಳ್ದೊಡೆ ನಿರಾಶೆಯೊಳಕ್ಕಟ ಸಾಗುಮಂತರಿಂ । ಮುನಿವಧದೋಷ ಮಾವತೆಱದಿಂ ಕಳೆಗುಂ ಕಮಲಾಯತೇಕ್ಷಣೇ ॥ ೮೨೬

ಎಂದುನುಡಿವ್ರತ್ತವಿಪ್ರರ್ನ್ನೆಗಂ ॥

ಕಂ॥ ಮುಳಿದು ತ್ರಿಮಿರೇಭಕುಂಭ । ಸ್ಥಳಮಂ ಶಶಿಸಿಂಹ ಮೊತ್ತಿಸೀಳಲ್ಕುಕ್ಕಾ ॥ ವಳ ಮೋಗೆ ನೆಗೆದುವೆನೆ ಕ । ಣ್ಗೊಳಿಸಿದು ವತಿವಿಮಲತರಳತಾರಾನೀಕಂ ॥ ೮೨೭

---

೮೨೫. ಗುರುಜನ ವಿಶಾಯದೆಯುಂ—ತಂದೆ ತಾಯಿಮೊದಲಾದ ಗುರುಜನರೂ ಕನ್ಯಾದಾನವನ್ನು ಮಾಡದೆ ; ಮುನ್—ಮೊದಲೆ ; ಎರೆವಾತನಂ—ಅಪೇಕ್ಷಿಸುವವನನ್ನು ; ಎಯ್ದಿ—ಹೊಂದಿ ; ಐದೆಯಪ್ಪೊಡೆ—ಪಾಣಿಗೃಹೀತಳಾದರೆ ; ಇದು— ಈ ದೋಷವು ; ಅಪರಿಹಾರ್ಯಮೆನಿಪ್ಪುದು.

೮೨೬. ಅದಱಿಂದಂ—ಪ್ರತ್ಯುತ್ತರವನ್ನು ಕೊಡದೇ ಹೋದದ್ದಕ್ಕಿಂತಲೂ ; ಇನ—ದೇವಿ ; ಪ್ರಣಯಭಂಗಂ—ವಿಶ್ವಾಸಭಂಗವು, ಆವುದೊ—ಯಾವದುಂಟು ; ಅತ್ತಲ—ಆ ಕಡೆಯಲ್ಲಿ ; ಸಾಗುಂ—ಸಾಯುವನು ; ಅಂತರಿಂ—ಆದಕಾರಣ ; ಕಳೆಗುಂ—ಬಿಟ್ಟುಹೋಗುವದು, ಇಲ್ಲಿ ಸಾ, ಕಳೆ ಎಂಬ ಧಾತುಗಳಮೇಲೆ ಭವಿಷ್ಯದಾಖ್ಯಾತ ಪ್ರತ್ಯಯಗಳಿಗೆ ಗುಮಾದೇಶಬಂದಿರುವದು. ಶಮ. ಸೂ. ೧೧೭.

ಕಂ॥ ಕುಸುಮರಜದಿಂದೆ ಸೊಗಯಿಪ। ವಸಂತವನರಾಜಿಯುಂತೆ ಚಂದ್ರೋದಯ ಮಿ॥ ನ್ನೆಸೆದಪುದೆನೆ ನಸುವೆಳಗಿಂ। ಮಸಗಿದುದಿನಿಸಿಂದ್ರದಿಗ್ವಧೂಮುಖಬಿಂಬಂ॥ ತದನಂತರಂ॥ ೮೭೮

ಇಳೆಯುಂ ನೋಡಲ್ಕೆ ರಸಾ। ತಳದಿಂ ಪೊಱಮಡುವ ನಾಗರಾಜನ ಪೆಡೆಯೊಳ್॥ ಪೊಳೆವರುಣಕಿರಣಮಣಿಮಂ। ಡಳದಂದವಿ ನೆಸೆಮದಿಂದು ಮಂಡಳವಾಗಳ್॥ ೮೭೯

ವೃ॥ *[ಪುರುಡಿಂ] ಕಾಯ್ದೊದೆಯಲ್ಕೆ ರೋಹಿಣಿಯ ಪಾದಾಲಕ್ತಕಂ ಮೆಯ್ಯೊಳಾ। ವರಿಸಿತ್ತೋ ವಿಕಟಾಬ್ಧಿವಿದ್ರುಮಮಯೂಖಂ ತಳ್ತುದೋ ಪೂರ್ವಭೂ॥ ಧರಸಿಂಹಂ ಪೊಯೆ ನೊಂದುದೋ ಹರಿಣನೆಂಬಂತಾಗಳತ್ಯಂತಸುಂ। ದರಮಾಗಿರ್ದ್ದುದು ಕಣ್ಗೆ ರಕ್ತರುಚಿಯಿಂ ಬಿಂಬಂ ಸುಧಾಸೂತಿಯಾ॥ ೮೮೦

ವ॥ ಅನ್ತಭಿನವೋದಯ ರಾಗರಂಜಿತನಪ್ಪ ರಜನಿಕರನಂ ನೋಡಲೊಡ ಮತ್ಯುಜ್ಜ್ವಲಮದನಾನಲಜ್ವಾಲಾಕಲಾಪೆಯಾಗಿಯುಂ ಮಂಧಕಾರ ಹೃದಯೆಯೆ ನೆನ್ನೊಳಂತೆಂದೆಂ॥ ೮೮೧

ವೃ॥ ಇತ್ತ ವಸಂತ ನಿತ್ತ ಮಲಯಾನಿಲ ನಿತ್ತ ಮಧುವ್ರತಾಳಿ ಮ। ತ್ತಿತ್ತ ಮದೋತ್ಕಕೋಕಿಲಕದಂಬಕ ಮೆಯ್ದೆ ವಿಜೃಂಭಿಸಿತ್ತು ತಾ॥ ನಿತ್ತಲಡರ್ದ್ದ ಚಂದ್ರಪತಕಂ ತಲೆದೋಱುವ ನೋವ್ರೊ ಕೆಟ್ಟನೀ। ಚಿತ್ತಜತಾಪ ಮಗ್ಗಲಿಸಿದಪ್ಪುದು ಮದ್ಧೃದಯಾಂತರಾಳದೊಳ್॥ ೮೮೨

---

೮೭೮. ಇನ್ನೆಸೆವಪುದೆನೆ—ಉಂಟಾಗುತ್ತದೆ ಎಂಬುವಷ್ಟರಲ್ಲೆ; ನಸುವೆಳಗಿಂ—ಸ್ವಲ್ಪಕಾಂತಿಯಿಂದ; ಮಸಗಿದದು—ಮೊಬ್ಬಾಗಿ ಕಾಣಿಸಿತು.

೮೮೦. ಪುರುಡಿಂ—ಅನ್ಯಾಂಗನಾಸಕ್ತನಾದನೆಂಬಅಸೂಯೆಯಿಂದ; ಕಾಯ್ದು—ಕೋಪಿಸಿಕೊಂಡು; ಪೊಯೆ—ಹೊಡೆಯಲು; ಇಲ್ಲಿ ಪೊಯ್‌ಎಂಬ ಯಕಾರಾಂತ ಧಾತುವಿಗೆ ಎ, ಎಂಬ ಕೃತ್ಪ್ರತ್ಯಯ ಪರವಾದ್ದರಿಂದ ದ್ವಿತ್ವನಿಷೇಧವು. ಶ ಶಾ. ಸೂ. ೬೦.

*[ಪುರದಿಂ]

ವೃ॥ ಉದಯಿಸಲಿಂದು ಚಂದ್ರಹತಕಂ ವಿಷಮುಜ್ವರಿತಂಗೆ ಮತ್ತೆ ಕೆಂ। ಡದ ಮಳೆಕೊಂಡು ದಗ್ಗಲಿಸಿದ್ದೈಕಿಲವಂಗೆ ಹಿಮಪ್ರಪಾತಮಾ ॥ ದುದು ಪಿರಿದಪ್ಪ ನಂಜುಪ್ರಗುಳುರ್ಬ್ಬಿದವಂಗ ಸಿತಾಹಿದಂಶ ಮಾ । ದುದು ದಿಟವೆಂದು ತಲ್ಲಣದಿ ನಾಗಳೆ ಭೋಂಕನೆ ಮೂರ್ಛೆವೋಪುದುಂ ॥ ೮೮೩

ವ॥ ಆಗಳತಿಸಂಭ್ರಮಂ ಬೆರಸು ತರಳಿಕೆ ತಂದ ಚಂದನದಚರ್ಚೆಗಳಿಂ ಮತ್ತಮನೇಕಶಿಶಿರೋಪಚಾರಂಗಳಿಂ ಮುಪಚರಿಸಲದಱಿ ನೆಂತಾನುಂ ಮೂರ್ಛೆಯಿಂದೆಚ್ಚತ್ತು ॥ ೮೮೪

ಕಂ॥ ಅಳಲಗ್ಗಳಸಲ್ಕಣ್ಣೀ । ರ್ಗ್ಗಳಗಳಿಸಿ ಕಪೋಲಯುಗಳದಿಂ ಪೆರ್ಮ್ಮೊಱೆಗಾ ॥ ಗಿಳಿತರ್ಪ್ಪಿನ ಮೆನ್ನಂ ಪಿಡಿ । ವಳುತಿರ್ದ್ದಳ ನಿನಿಸುನೋಡಿದೆಂ ತರಳಿಕೆಯುಂ ॥ ೮೮೫

ವ॥ ಅನ್ತುನೋಳ್ಪುದುಂ ಚಂದನಪಂಕಾರ್ದ್ರಂಗಳಪ್ಪ ಕರಕಮಲಂಗಳಂ ಮುಗಿದು ॥

ವೃ॥ ಇನಿತುಂ ಪ್ರಾರ್ಥಿಪೆನಕ್ಕೆ ನಿನ್ನ *[ನುಳಿಸೀಂ ಲಜ್ಜಾಭರಾವೇಶಮುಂ] । ನಿನಗೀತಂದೆಯು ತಾಯೊಳಪ್ಪ ಭಯಮೋಕೇಳ್ದೋಪ ಮಾನಾಱಿನಿ । ನ್ನಿನಿತಂ ನೋಡುತಮಿರ್ಪ್ಪೆ ನೀನಕರುಣಂ ಪೋಗ್ಪೋಗು ನಿನೆಂದು ಪೇ । ಳ್ಮನಮಿಂ ಮುನ್ನಮೆ ಪೋಗಿ ನಿನ್ನಿನಿಲುನಂ ತಂದಪ್ಪೆ ನಬ್ಜಾನನೇ ॥

ವ॥ ಎಂದು ತರಳಿಕೆ ನುಡಿಯೆ ॥

---

೮೮೩. ಕೊಂಡುದು—ಆಕ್ರಮಿಸಿತು; ಅಗ್ಗಲಿಸಿದ್ದೈಕಿಲವಂಗೆ—ಹೆಚ್ಚಾದ ತಣ್ಪುಳ್ಳವನಿಗೆ; ನಂಜುಪ್ರಗುಳುರ್ಬ್ಬಿದವಂಗೆ—ವಿಷದಗುಳ್ಕೆ ಹೆಚ್ಚಿದವನಿಗೆ.

೮೮೬. ತಂದೆಯುಭಯಮುಂ ಪಿಕೆ, ತಾಯೊಳಪ್ಪಭಯಮುಂ ಪಿಕೆ ಎಂದನ್ವಯವು; ಭಯಮುಂ+ಪಿಕೆ+ಪೆಳ್+ಪೋದು; ಆಱಿ—ಸಹಿಸಲಾರೆನು; ಎನಿತುಂ—ಎಷ್ಟು ಹೊತ್ತನ್ನು; ನೋಡುತಮಿರ್ಪ್ಪೆ—ನೋಡುತ್ತಿರುವೆ; ಇರ್ಪ್ಪೆಎಂಬಲ್ಲಿ ಮಧ್ಯಮಪುರುಷೈಕ ವಚನದ ಅರ್ಥ, ಎಂಬಾಖ್ಯಾತ ಪ್ರತ್ಯಯ ಪ್ರಯೋಗಸ್ಥಳದಲ್ಲಿ "ಎ" ಎಂಬ ಆಖ್ಯಾತ ಪ್ರತ್ಯಯವು ಪ್ರಯೋಗಿಸಲ್ಪಟ್ಟಿರುವದು. ಶಬ್ದ. ಸೂತ್ರ. ೩೭೦.

*[ನುಡಿರ್ಲಜ್ಜಾರವೇಷಮುಂ]

ವೃ॥ ಇದನೇನೆಂದಪ್ಪೆ ನಾನೆಂ ಗುರುಗಳುಮೆನಗಿನ್ನೇಕೆ ಪೇೞ್ದಪ್ರ ತ್ಯ *[ಪ್ರೊಲ್ಮ | ದಿನನಲ್ಲೇಚಂದ್ರನುಂ ತಾ] ನಿರದೆ ಕರುಣದಿಂ ದೊಯ್ವೊ ಡೇೞ್ಪೋಪ ಮಿಾದೇ॥ ಪದೊೞಿಂದೀಪ್ರಾಣಮುಳ್ಳನ್ನೆಗಮೆ ತಡೆಯದಾತ್ಮೇ ಶನಂ ಕಾಣ್ಬೆನೋ ಪು| ಣ್ಯಾಧಿಸೆಂದಾಂ ಜೇಪ್ಟಿಗೆಟ್ಟಂದವಳನೆ ಪಿಡಿದಲ್ಲಿಂದ ಮೆಂತಾನುಮೆಯ್ದಿಂ॥ ಅಂತೇೞಲೊಡನೆ ॥ ೮೮೭

ಕಂ॥ ಬಿದಿಮತ್ತೇನನಿದಂ ತೋ| ಱಿದಪನೊ ಪಾತಕಿಗೆನುತ್ತೆ ಭ ಯಮುಂ ಬೆತ್ತು॥ ಕೆಯ್ವಡವಿಸಿ ಬಲಗಣ್ಕೆತ್ತ | ಲ್ಮೊದಲಿಕ್ಕಿತು ದುರ್ನಿಮಿ ತ್ತಸೂಚಕಮಾಗಳ್॥ ೮೮೮

ವೃ॥ ಅದನೇವೇೞ್ವೆ ನನಂತರಂ ತ್ರಿಭುವನಪ್ರಾಸಾದರಮ್ಯ †[ಪ್ರ ಣಾ | ಳದ] ವೊಲ್ಕನ್ನೆಸೆವಿಂದು ಮಂಡಲದಿನೇಂ ಗಂಗಾಪ್ರವಾಹಂ ಗಳ॥ ನ್ನೆದುವೋ ಚಂದನವಾರಿಪೂರ ಮಿಳಿದತ್ತೋ ಕ್ಷೀರವಾರಾಶಿ ಪೊ| ನ್ನೆದು ದೋ ಪೇಳೆನೆ ಲೋಕದೊಳ್ಪರಿದು ಪರ್ವಿತ್ತಂದು ಚಂದ್ರಾತಪಂ॥ ೮೮೯

ವ॥ ಅನ್ತು ಪರ್ವಿದ ಬೆಳ್ದಿಂಗಳೊಳಖಿಳಜನಮೆಲ್ಲಂ ಶ್ವೇತದ್ವೀಪ ದೊಳಿರ್ದಂತಿರಲಾ ರಾತ್ರಿಯೊಳ್ಮದನವಿಹ್ವಲತೆಯಿಂ ಮೂರ್ಛೆವೋದೆನ್ನನೆ ಚ್ಚಱಿಸಲೆಂದು ನೊಸಲೊಳಿಕ್ಕಿದಮಂದವಪ್ಪ ಚಂದನದಣ್ಪಿನಿಂ ಪತ್ತಿ ಪಗಿಲ್ತು ಬೆಳ್ಪರಿಸಿದಳಕನಿಕರಮುಂ ಮುನ್ನಮೆ ಕೊರಲೊಳಿಕ್ಕಿರ್ದಕ್ಷಾವಳಿಯುಂ ಕಿವಿಯೊಳಿಕ್ಕಿರ್ದ ಪಾರಿಜಾತಕುಸುಮಮಂಜರಿಯುಂ ಪದ್ಮರಾಗಮಣಿಕಿ ರಣದಂತಿರ್ದ ರಕ್ತಾಂಶುಕಮುಂ ಮೆನ್ನೊಳಳವಡೆ ಗೃಹೀತವಿವಿಧಕುಸುಮ

೮೮೭. ಒಯ್ವೊಡೆ—ಕರೆದುಕೊಂಡುಹೋಗಬೇಕಾದರೆ; ಪೋಪಂ—ಹೋಗೋಣ.

೮೮೮. ದುರ್ನಿಮಿತ್ತಸೂಚಕಂ—ಕೆಟ್ಟಫಲವನ್ನು ಸೂಚಿಸುವಂಥಾದ್ದಾಗಿ; ಕೆತ್ತಲ್—ಹಾರುವದಕ್ಕೆ; ಮೊದಲಿಕ್ಕಿತು—ಮೊದಲಾಯಿತು.

೮೮೯. ಪ್ರಣಾಳದವೊಲ್—ಜಲಮಾರ್ಗದಹಾಗೆ.

೮೯೦. ಪತ್ತಿ—ಸೇರಿ; ಪಗಿಲ್ತು—ಅಂಟಿಕೊಂಡು; ಪರೆದ—ಹರಡಿಕೊಂಡ; ಅಳವಡೆ—ಒಪ್ಪುತ್ತಿರಲು; ಕರುಮಾಡ—ಉಪ್ಪರಿಕೆ; ಬೆಳ್ಪಸಿದ—ಬಿಳಿಪಾದ.

*[ಗಳ್ವ | ದಿನನಲ್ಲಂಚಂದ್ರನೆತ್ತ] †[ಪ್ರಮಾ | ಣದ]

ತಾಂಬೂಲರಾಶಿಯುಮಪ್ಪ ತರಳಿಕೆವೆರಸು ಮದೀಯಪರಿಚಿತಪರಿಜನಮು ಮುೞಿಯದಂತು ಕಱುವಮಾಡದಿಂದವನಿತಳಕ್ಕವತರಿಸಿ ॥ ೪೯೦

ಕಂ॥ ಶ್ರವಣನತಪಾರಿಜಾತ । ಸ್ತವಕೋದ್ಗತ ಪರಿಮಳಕ್ಕೆ ನಂದನ ಭೃಂಗೀ ॥ ನಿವಹಂ ಕವಿದೆನ್ನನುಮುಸುಂ । [ಕುವಿನಂ ಪೊಱಮಟ್ಟೆ ನಾಗಳ ತಿಸಂಭ್ರಮದಿಂ] ॥ ೪೯೧

ವ॥ ಅನ್ತು ತರಳಿಕೆವೆರಸು ಪ್ರಮದವನಪಕ್ಷದ್ವಾರದಿಂ ಪೊಱಮಟ್ಟು ಪೋಗುತ್ತುಂ ಪರಿಜನವಿರಹಿತೆಯೆ ನೆನ್ನೊಳಂತೆಂದೆಂ ॥ ೪೯೨

ವೃ॥ ಸರಭಸವಾಗಳೇೞಿಸಿದ ಬಿಲ್ವರಸಂಗಜನೆನ್ನ ಪಕ್ಕದೊಳ್ । ಬ್ಬುತ್ತಿರೆ ಬಿಜ್ಜಿಪಿಂದೆನಿಲೆ ಮುಂದೆಮದಿಂದ್ರಿಯವರ್ಗ ಮಾವಗಂ ॥ ಪರಿಯೆ ಸಿತಾಕರಂ ನಿಜಕರೆಗೊತ್ಕರದಿಂ ಪಿಡಿದೊಯ್ಯೆ ಬೇಱಿಪೇಳ್ । ಪರಿಜನಮೇ ವುದಿಂ ಮಱಸಿ ಪೋಪೆನಗಿಂತುಟೆ ದಲ್‌ಪರಿಗ್ರಹಂ ॥ ೪೯೩

ವ। ಎಂದೆನ್ನೊಳ್ ಚಿಂತಿಸುತ್ತುಂ ತರಳಿಕೆಯ ನಿಂತೆಂದೆಂ ॥

ಕಂ। ಎಂತೀಗಳೆನ್ನನೊಪ್ಪದ । ನಂತೋವದೆ ಕರಕಚಗ್ರಹಂಗೆ ಯ್ದು ಸಿತಾ ॥ ಕಾಂತಂ ತಡೆಯದೆ ನಮಗಿದಿ । ರೇಂತಕ್ಕರ್ನೆಮೆ ಜೀವಿತೇ ಶನಂ ತರಳಾಕ್ಷೀ ॥ ೪೯೪

ಎಂಬುದುಂ ತರಳಿಕೆ ಮುಗುಳ್ನಗೆನಗುತ್ತ ಮೆನ್ನನಿಂತೆಂದಳ್ ॥೪೯೫

ಕಂ। ಎಳೆಮುಗ್ಧ ಚಂದ್ರಮಂ ಕಾ । ದಲನಂತಂದಪನೆ ತಾನೆ ಮ ನ್ನಿಸ್ಸಂ ಕಾ ॥ ಣಲೊಡಂ ಮನ್ಮಥಶರದಿ । ಪ್ಪಳಿತನ ಪೋಲ್ನೋಡ ನೆಗ ಳುತ್ತಿರ್ದ್ದಪನಲ್ತೇ ॥ ಅದೆಂತೆಂದೊಡೆ ॥ ೪೯೬

೪೯೩. ಅಂ—ಅದಕ್ಕಿಂತಲೂ ; ಪರಿಜನಂ—ಸೇವಕಜನವು ; ಪಿರ್ದು—ಏನು ಮಾಡುವುದು ! ; ಪರಿಗ್ರಹಂ—ಪರಿಜನವು ; ಅಂತುಟೆ—ಅಂಥಾದ್ದು ; ದಲ್‌ನಿಶ್ಚಯವು.

೪೯೪. ಒಸದೆ—ಮನ್ನಿಸದೆ; ಕರಕಚಗ್ರಹಂಗೆಯ್ದು—ಕಿರಣಗಳೆಂಬ ಕೈಯಿಂದ ಮುಡಿಯನ್ನು ಹಿಡಿದು; ಇದಿರ್—ಮುಂದುಗಡೆಯಲ್ಲಿ; ತಕ್ಕರ್ನೆಮೆ—ಕಾತರವನೇ ಏನು.

೪೯೬. ನೋಡ—ನೋಡು ; ನೆಗಳುತ್ತಿರ್ದ್ದಪನಲ್ತೇ—ಚೆಲ್ಲುತ್ತಾನಲ್ಲವೆ ? ನೋಡ, ಎಂಬಲ್ಲಿ ನೋಡುಧಾತುವಿನ ಮೇಲೆ ಆ ಕ್ರಿಯಾರ್ಥದಲ್ಲಿ ಬಂದ ಎಂಬ ಅವ್ಯಯ ಪ್ರತ್ಯಯಕ್ಕೆ ಅಕಾರಾದೇಶ ಬಂದಿರುವುದು. ಶಂ. ಸೂ. ೪೬೮.

ವೃ॥ ಪ್ರತಿಬಿಂಬವ್ಯಾಜದಿಂ ನಿನ್ನಯ ಕದಪುಗಳಂ ಚುಂಬಿಸುತ್ತಂ ಕಲಾಪಂ । ಚಿತ್ರರತ್ನಾನೀಕಮಂ ಸೋಂಕುತ ಮೆಸೆವ ಕುಚಾಭೋಗದೊಳ್ನಿಂದು ಮೇಲ್ವಾ ॥ ಯುತ ಮುದ್ಯತ್ಕಾಂತಿ ಚಂಚನ್ನಖಗತತನುವೆಂತುಂ ಬಿಡಂಪತ್ತಿ ಕಾಲಂ । ಸತಿಬಿಳ್ದಿರ್ದಪ್ಪನಿಂತೀತನತೆಱನ ಸಿದಂ ಕಾಣೆ ನೀನುತ್ಪಲಾಕ್ಷೀ ॥ ೮೯೭

ವ॥ ಅದಲ್ಲದೆಯುಂ ವಿರಹವಿಹ್ವಲತೆಯಿಂ ಚಂದನಾನುಲಿಪ್ತನಾದಂತೆ ಬೆಳರ್ಪಿನಾವರಿಸಿಯುಂ ಮಾತ್ರೋರ್ಳಪ ನೆವದಿಂ ಪಳುಕಿನ ಪಾಸರೆಗಳೊಳ್ ಮೆಯ್ಯನೀಡಾಡಿಯುಂ ನೆಯ್ದಿಲ್ಗೊಳಂಗಳೊಳೋಲಾಡಿಯುಂ ಮೊಸರ್ವ ಚಂದ್ರಕಾಂತ ಶಿಲಾತಳಂಗಳೊಳ್ಕರಂಗಳ ನೆಳವಿಯುಂ ವಿಘಟಿತ ಚಕ್ರವಾಕಂಗಳಪ್ಪ ಕಮಲವನಂಗಳೊಳ್ ಪಾಯ್ದು ಮಿಂತು ಪಲತೆರದೆ ಕೋಟಲೆಗೊಳುತಿರ್ದಪ ನಿಂತಿವುಮೊದಲಾಗಿ ತತ್ಕಾಲೋಚಿತವಚನಂಗಳಂ ನುಡಿಯುತ್ತ ಮಿರಲಾಕೆವೆರಸಾಪ್ರದೇಶಮನೆಯ್ದಿ ವಪ್ಪರ್ಗಳ್ ೮೯೮

ವೃ॥ ಮೊದಲೊಳ್ ಕೇತ್ತಿದತ್ತು ಬಲಗಣ್ಣೆನಗೇನನೊಡರ್ಚಲಿರ್ದಪದೋ! ಬಿದಿ ಯೆನುತುಂ ಭಯಂಬೆರಸು ಮುನ್ನಮೆ ಶಂಕಿಸುತಿರ್ದೆ ನೋವ್ಯೋ ಮ ॥ ತ್ತಿದು ಪೆಱತೇನೆನುತ್ತ ಮಿರ್ದೆ ಪವ್ವನೆ ಪಾಱಲದೊಂಪು ಕೇಳಲಾ । ದುಮ ಪುರುಷಪ್ರಲಾಪರುಚಿತಸ್ವನ ಮಾಗಪನಾಂತರಾಳದೊಳ್ ॥

ಅದೆಂತೆಂದೊಡೆ ॥

ವೃ॥ ಉರಿದಿಂ ಬೆಂದೆ ನಿಶೇನನಿಂತು ನೆಗಳ್ದ್ಲ ನಿಸ್ತ್ರಿಂಶ ಪ್ರಷ್ಠಾಸ್ತ್ರನಿ । ಷ್ಟುರ ಪೇಳ್ದಿಲ್ಲದ ನೇನನಾಚರಿಸಿದಳ್ನಿನ್ನೊಳ್ಕ್ರಮಾಪ್ನೇತೆ ಭೀ ॥ ಕರದೋಷಾಕರ ಕೂಡಿತೇ ಬಗೆದುದುಂ ಚಂಡಾಲ ತೆಂಗಾಳಿ ಪೇ । ಳ್ದಱುದೊಂದುತ್ಸವಮಾಯ್ತೆ ಕೇಶನಱುವೈ ಮಾಲ್ಪೇತಕೇತುವ್ರತೀ ॥ ೯೦೦

---

೮೯೭. ಉದ್ಯತ್ಕಾಂತಿ—ಉತ್ಕೃಷ್ಟವಾದ ಕಾಂತಿಯಿಂದ; ಚಂಚತ್—ಹೊಳೆಯುವ; ನಖ—ಉಗುರುಗಳಲ್ಲಿ; ಗತ—ಪ್ರತಿಬಿಂಬಿಸಿದ; ತನು—ಶರೀರವುಳ್ಳಚಂದ್ರನು; ಕಾಲಂಪತ್ತಿ ಬಿಳ್ದಿರ್ದಪ್ಪಂ ಎಂತುಂ ಬಿಡಂ ಎಂದನ್ವಯವು.

೯೦೦. ನಿಸ್ತ್ರಿಂಶ—ಘಾತುಕ; ಬಗೆದುದುಂ—ಬಯಸಿದ್ದೂ ಕೂಡಾ; ಕೂಡಿತೇ—ಕೈಗೂಡಿತೆ ?

ಕಂ॥ ಶರಣಾರೊ ತಪಮೆ ಭುವನಾಂ। ತರದೊಳ್ ಕೈಕೊಳ್ವರಾರೊ ಧರ್ಮಮೆ ನಿನ್ನಂ॥ ಸುರಲೋಕಮೆ ಪಾಳಾದ್ಯೆ। ಸರಸ್ವತೀದೇವಿ ರಂಡೆಯಾದಾಸತ್ಯಂ॥ ೯೦೧

ವೃ॥ ಪರಿಚಯಮಿಲ್ಲ ಕಂಡಱಿಯೆಯೋ ಸಟತೊಟ್ಟನೆಲಿಂತು ಬಿಟ್ಟುಪೋ। ಪರೆ ಕಠಿನಾತ್ಮನಾದೆ ನೆರವಾರೆನಗಿರ್ದಪ ರೆತ್ತ ಪೋಪೆನೊ॥ ಬ್ಬರುಮೆನಗಾಸೆಯಿಲ್ಲ ದೆಸೆಪಾಳ್ಮಸಗಿರ್ದಪು ದಂಧನಾದೆ ನಾ। ಶ್ಯರಣೆ ನಗೆನ್ನ ಬಾಳ್ಕೆಯೆ ನಿರರ್ಥಕ ಮೆಂದೆನುತಂ ಪಲುಂಬುತಂ॥ ೯೦೨

ವೃ॥ ಉಸಿರದೆ ನೀನಿರಲ್ಕುಡಿವೆ ನಾರೊಡನಾಟಮ ನಾಡುತಿರ್ಪೆ ನೀ। ಪ್ರಸಿಮುಳಿಸೇಕೆ ಪೇಳ್ಕೆಳೆಯ ನಿನ್ನಯ ಕೂರ್ಮೆ ಯದೆತ್ತ ಪೋಯ್ತು ನೋ॥ ಯಿಸದಿನಿಸೆಳ್ದು ನೋಡಿ ನುಡಿಯೆಂದೆನಿತುಂ ತೆಱದಿಂ ಕಪಿಂಜಲಂ। ದೆಸೆದೆಸೆಗಂದು ಬಾಯ್ಬಿಡುತ ಮಿರ್ದುದ ನಾಲಿಸಿದೆಂ ಮಹೀಪತೀ॥

ಅವನಾಂ ಕೇಳ್ದೆರ್ದೆಗೆಟ್ಟು ಮಯ್ಮಱಗಿ ಸತ್ತಂತಾಗಿ ಕಣ್ಣೀರ ಪೂ। ರದಗುರ್ಪಿಂ ದೆಸೆಗಾಣದಂದೆಡಪುತಂ ತಾಗುತ್ತ ಮೋರಂತೆ ಮೋ॥ ಱದಱೊಳ್ಗುಲ್ಮಲತಾಳಿಗಳ್ತೊಡರಲೊರ್ವಂನೂಂಕಿಕೊಂಡೊಯ್ವ ಮಾ। ರ್ಗದೆ ಪೋದೆಂ ಬಳಿಕಾತನಿರ್ದೆಡೆಗೆ ಹಾಹಾಕ್ರಂದನಂಗೆಯ್ವುತಂ॥ ೯೦೪

ವ॥ ಅಸ್ತು ಯಥಾಶಕ್ತಿ ತ್ವರಿತಗತಿಯಿಂ ಪೋದೆನನ್ನೆಗಂ॥

ಕಂ॥ ಕೊಳದ ತಡಿಯಲ್ಲಿ ನೀರ್ಪನಿ। ಗಳ ತುಱುಗಲ ನುಗುಳ್ವ ಚಂದ್ರಕಾಂತದ ಶಿಲೆಯೊ॥ ಳ್ತೊಳವೆಳದಳಿರ್ಗಳ ಬಳಗದ। ಕುಳಿರ್ವಲರ್ದಲರೆಸಳ ಪಸೆಯ ಮೇಲೊಱಗಿರ್ದಂ॥ ೯೦೫

---

೯೦೨. ಪರಿಚಯಮಿಲ್ಲ—ನನ್ನ ಪರಿಚಯವಿಲ್ಲವೊ; ಕಂಡಱಿಯೆಯೊ—ನನ್ನನ್ನು ಕಾಣೆಯೊ; ತೊಟ್ಟನೆ—ಆಕಸ್ಮಿಕವಾಗಿ; ಪೋಪರೆ—ಹೋಗುವವರುಂಟೆ?; ನೆರವು—ಸಹಾಯವು; ಪಾಳ್ಮಸಗಿರ್ದಪುದು—ಶೂನ್ಯವಾಗಿ ಕಾಣುವದು.

೯೦೪. ಎರ್ದೆಗೆಟ್ಟು—ಧೈರ್ಯಕೆಟ್ಟು; ಮೆಯ್ಮಱಗಿ—ಮನಸ್ಸಿನಲ್ಲಿ ವ್ಯಸನಪಟ್ಟು; ಅಗುರ್ಪಿಂ—ಅತಿಶಯದಿಂದ; ಒರ್ವಂ—ಯಾರೋ ಒಬ್ಬನು; ನೂಂಕಿಕೊಂಡೊಯ್ವ—ತಳ್ಳಿಕೊಂಡುಹೋಗುವ; ಮಾರ್ಗದೆ—ರೀತಿಯಿಂದ, ಪೋದೆಂ—ಹೋದೆನು.

೯೦೫. ಕುಳಿರ್ವ—ತಣ್ಣಗಿರುವ; ಪಸೆ—ಹಾಸಿಗೆ; ಒಱಗಿರ್ದಂ—ಮಲಗಿದ್ದನು.

ಪೊಳೆವಿಂದುಗಳ್ಕೆ ಜೆಂಗುಡೆ । *[ವೊಳೆದುವು ಜೆನ್ನಿಂದ] ವೆರ್ದೆಗೆ
ಕದಿರ್ದುಱುಗಲೆನೆ ॥ ಲ್ತೊಳಗಿದುವು ಮದನಶಿಖಿವಿ । ಹ್ವಳಹೃದಯನ್ಯಸ್ತ
ಹಸ್ತನಖದೀಧಿತಿಗಳ್ ॥ ೯೦೬

ಪದೆದಾಂ ಬರುತ್ತಮಿರೆ ಮ । ತ್ಪದಶಬ್ದಮ ನಾಲಿಸುತ್ತಮಿರ್ದ್ದ
ನೊ ತನ್ನೊ ॥ ಳ್ಮದನಪರಿತಾಪಮಂ ಕೋ । ಪದೆ ಮಳ್ಗಿಸೆ ಕಿಱಿದುಸು
ಖದೆ ಮಱೆದೊಱಗಿದನೋ ॥ ೯೦೭

ಎನ್ನಿಂ ಪ್ರಿಯತರಮಪರಜ । ನಂ ನಿನಗಾವತ್ತು ಮತ್ತಮಿಪ್ಪೆನೆ
ಪೇಳಾ ॥ ನಿನ್ನಿಂದು ಮುನಿದತೆಱದಿಂ । ಮುನ್ನಮೆ ಪೋದತ್ತು ಪುಂಡರೀಕ
ನ ಜೀವಂ ॥ ೯೦೮

ತನಗೆ ಮದನವ್ಯಥಾಯಾ । ಸನಬಂಧನವಸುಗಳಿಂದಿವಂ ತನ್ನಿಂ
ತಾಂ ॥ ತನುವಿಂದೆ ಬಿಟ್ಟು ಸಿಕ್ಕೀ । ತನಸೌಖ್ಯಮ ನನುಭವಿಪ್ಪ ತೆಱದಿಂ
ದಿರ್ದ್ದಂ ॥ ೯೦೯

ಅದಲ್ಲದೆಯುಂ ॥

ಕಂ॥ ಕಾಣುತ್ತ ಮದಾಗಮನ । ಪ್ರೀಣ ತ್ಪ್ರಾಣಮನೆ ಮೆಚ್ಚು
ಗೊಟ್ಟಪೊಲಿರ್ದ್ದಂ ॥ ಜಾಣಂ ಪ್ರಾಣಪ್ರಿಯಗರ್ಗ್ಗೆ । ಪ್ರಾಣಮ ನೊಲಿದೀ
ವುದೆಂಬುದೊಂದಚ್ಚರಿಯೇ ॥ ೯೧೦

ವ॥ ಮತ್ತಮನಂಗರಚಿತಚಂದನಲಲಾಟಿಕಾತ್ರಿಪುಂಡ್ರನುಂ ಸರಸಬಿ
ಸಸೂತ್ರಯಜ್ಞೋಪವೀತನುಂ ಅಂಸಾವಸಕ್ತ ಬಾಲಕದಳೀದಳೋತ್ತರೀ

೯೦೬. ಜೆಂಗುಡು—ಜನ್ನನ್ನು ಬಡ್ಡಲು ; ಕದಿರ್ದುಱುಗಲ್—ಕಿರಣಸಮೂಹವು; ಎರ್ದೆಗೆ—ಎದೆಯಲ್ಲಿ ; ವೊಳೆದುವು—ಮೂಡಿದವು ; ಎನೆ—ಎಂಬುವಹಾಗೆ.

೯೦೭. ಪದೆದು—ಪ್ರೀತಿಸಿ ; ಮಳ್ಗಿಸೆ—ಶಮನ ಮಾಡಿಕೊಳ್ಳುವದಕ್ಕೆ ; ಕಿಱಿದು—ಸ್ವಲ್ಪಹೊತ್ತು.

೯೦೯. ಅಸುಗಳ್—ಪ್ರಾಣಗಳು ; ಮದನವ್ಯಥಾ—ಮನ್ಮಥವ್ಯಥೆಯಿಂದ ; ಆಯಾಸನ—ಆಯಾಸಪಡಿಸುವವಿಷಯದಲ್ಲಿ ; ಬಂಧನಂ—ಕಟ್ಟುಗಳು ; ತನ್ನಿಂತಾಂ—ಪುಂಡರೀಕನು ತಾನಾಗಿಯೆ.

*[ಬಳೆದನ್ನುಯೆನ್ನಿಂದ]

ಯನುಂ ವಿಕಾವಳೀವಿಶಾಲಾಕ್ಷಮಾಲನುಂ ಅವಿರಳಕರ್ಪೂರಪರಾಗಭಸ್ಮ ಪಾಂಡುರನುಂ ಆ ಬದ್ಧಮೃಣಾಳ ರಕ್ಷಾಪ್ರತಿಸರನುಮಾಗಿ ಮನೋಭವವ್ರತವೇಷಮಂ ಕೈಕೊಂಡು [ಮತ್ತ] ಮಾಗಮಮಂತ್ರಮಂ ಸಾಧಿಪಂತಿರ್ದ್ದನಂತುಮಲ್ಲದೆಯುಂ ॥ ೯೧೧

ವೃ॥ ಸುರಿಮುವು ಬಾಷ್ಪಮೆಯ್ದೆ ಪೆಱಗಿಂ ಸುರಿವಪ್ಪುದು ನೆತ್ತರೆಂಬಿನಂ । ಪರೆದಿರೆ ಕೆಂಪು ಕಂತುಶರಭೇದದ ವೇದನೆಗಳ್ಕಿದಂತೆ ಕ ॥ ಣ್ಣರೆಮುಗುಳಿರ್ದ್ದ ವಾಂ ಬಳಸಲಲ್ಲಡೆ ನೋಡಲಿಕಾರ್ತ್ತನಿಲ್ಲ ನಿ । ಷ್ಠುರೆ *[ತೊಲಗೆಂ] ದಲಂಪನೆಳೆಕೊಂಡಳಲಿಂ ಮುಳಿದೀಕ್ಷಿಪಂದದಿಂ ॥ ೯೧೨

ಕಂ॥ ನಸುದೆಱೆದಿರೆ ಬಾಯ್ದೆಱೆಬಂ । ದಸುವಂ ಕೊಳಲೆಂದು ಪೊಕ್ಕ ರಜನಿಕರಾಂಶು ॥ ಪ್ರಸರಂ ಪೊಱಮಟ್ಟಪ್ಪುದೆನೆ । ದೆಸೆಯಂ ಧವಳಿಸಿದುವೆಸೆವ ದಂತದ್ಯುತಿಗಳ್ ॥ ೯೧೩

ಬಳಸಿ ನಿಜಕಿರಣಪಾಶದೆ । ಮುಳುಗಿಸಿ ಲೋಕಾಂತರಕ್ಕೆ ಚಂದ್ರಂ ಪಿಡಿವೇ ॥ ನೆಳೆವಪನೊ ಪೇಳಮೆನೆ ಕ । ಣ್ಗೊಳಿಸಿದುದು ಮೃಣಾಳನಾಳವಲಯಂ ಕೊರಲೊಳ್ ॥ ೯೧೪

ಪ್ರಾಣಸಮಿ ಕೃಪೆಯುಳಿಯಂ ಮ । ತ್ಪ್ರಾಣದೊಳೊಡಗೂಡಿ ಪೋಗಲಾಗೆಂದೆನ್ನಂ ॥ ಪ್ರಾಣಪಪ್ರೇರಕಯುಳ್ಳಮನೋ । ಬಾಣಾಗ್ನಿಸ್ಫುರಿತಹೃದಯದೊಳ್ಸ್ವಾಗಿಯಿಸುಗುಂ ॥ ೯೧೫

---

೯೧೧. ಅನಂಗ—ಮನ್ಮಥ ...; ರಚಿತ—ಮಾಡಲ್ಪಟ್ಟ ; ಚಂದನ ಲಲಾಟಿಕಾ—ಚಂದನ ತಿಲಕವೆಂಬ ; ತ್ರಿಪುಂಡ್ರವುಂ—ತ್ರಿಪುಂಡ್ರವುಳ್ಳಂಥಾ ; ರಕ್ಷಾಪ್ರತಿಸರನುಂ—ರಕ್ಷಾರ್ಥವಾದ ಕಂಕಣವುಳ್ಳಂಥಾ.

೯೧೨. ಪೆಱಗೆ—ಅಡಗಿಹುದೆ ; ಇಂ—ಇನ್ನು ; ನೆತ್ತರ್—ರಕ್ತವು ; ಸುರಿವಪ್ಪುದು—ಸುರಿಯುತ್ತದೆ ; ...

೯೧೩. ಬಾಯ್ದೆಱೆ—ತುಟಿಗಳು.

೯೧೪. ಪಾಶದೆ—ಹಗ್ಗದಿಂದ ; ಬಳಸಿ—ಸುತ್ತಿ ; ಮುಳುಗಿಸಿ—ಕೆಡಿಸಿ.

೯೧೫. ಪೊಗಲಾಗ—ಹೊಗಕೂಡದು ; ...

ಕಂ॥ ಬಸೆದರ್ಪು ದಿದಲ್ತೆ ಚಂದನ । ರಸಮೆನೆ ಮಿಂಚುಗುರಮಿಸು ಪೆನುಸ್ಪೆಳಗೆನಸುಂ ॥ ಪಸರಿಸೆ ಮರಲ್ದ ಕರಮೊಂ । ದೆಸೆದುದು ಚಂದ್ರಾತಪಕ್ಕೆಮಱೆಯೊಡ್ಡಿದವೊಲ್ ॥ ೯೧೬

ಅಸು ಪೋದುದೀಗಳೆಂತೆ । ನ್ನಸಹಾಯನ ನುಳದೆನುತ್ತೆ ತನ್ಮಾರ್ಗಮನೀ । ಕ್ಷಿಸುವಂತೆ ನಿಮಿರ್ದ ಕೊರಲಿಂ । ದೆಸೆದುದು ಶಶಿಕಾಂತಮಣಿಕಮಂಡುಲು ಕೆಲದೊಳ್ ॥ ೯೧೭

ಘಳಿಲನೆ ಬಪ್ಪೆರ್ನ್ನಂ ಕಂ । ಡಳಲಿಮ್ಮಡಿಯಾಗೆ ಪತ್ತಿ ಕೆಳೆಯನ ಕೊರಲಂ ॥ ಪಳವಿಸಿ ಕಪಿಂಜಲಂ ಬಾ । ಯಳಿವಬ್ರಹ್ಮಣ್ಯಮೆಂದು ಬಿಡೆ ಪುಯ್ಯಲ್ಚಲ್ ॥ ೯೧೮

ವ॥ ಆಗಳ್ತತ್ಕ್ಷಣವಿಗತಜೀವಿತನಾಗಿರ್ದ್ದ ನಿಷ್ಪಾಪನೆನಿಪ ಮಹಾನುಭಾವನಂ ಮಹಾಪಾತಕಿ ಯೆನಿಪ್ಪ ಮಂದಭಾಗ್ಯೆಯೆಂ ಭೋಂಕನೆ ಕಂಡು ಮೂರ್ಚ್ಛೆವೋಗಿ ಬೀೞ್ದು ಪಾತಾಳತಲವಿವರಮಂ ಪೊಕ್ಕಂತೆ ಮಹಾಂಧಕಾರಂ ಕವಿಯೆ ॥ ೯೧೯

ಕಂ॥ ಏನಾದೆ ನೆಲ್ಲಿಬೀೞ್ದೆನ । ದೇನಂ ಬಾಯೞಿದು ಪಳವಿಸುತ್ತಿರ್ದ್ದೆನೊ ಪೇ ॥ ೞೇನನೊಡಚ್ಚರದೆ ನೆತ್ತಣೆ । ನಾನಾರ್ಗ್ಗೆಂದೇನುಮಱಿಯೆ ನಂತಾಕ್ಷಣದೊಳ್ ॥ ೯೨೦

ಹಾಗೆ; ಆಗ ಎಂಬಲ್ಲಿ ಆಗು ಧಾತುವಿನಮೇಲೆ ಅನರ್ಥಾರ್ಥದಲ್ಲಿ ಅಂದರೆ ಕೂಡದು ಎಂಬರ್ಥದಲ್ಲಿ ಅಪ್ರತ್ಯಯ ಬಂದಿರುವದು. ಶಶಾ. ಸೂ. ೫೪೪.

೯೧೬. ಮಿಂಚುಗುರ—ಹೊಳೆಯುವ ಉಗುರಿನ; ಎನಸುಂ—ಬಹಳವಾಗಿ; ಬಂದು—ಮತ್ತೊಂದು; ಮರಲ್ದ—ತಿರುಗಿಸಿದ; ಕರಂ—ಕಯ್ಯು.

೯೧೭. ಅಸು—ಪ್ರಾಣವು; ಎಂತು—ಯಾವ ಮಾರ್ಗವಾಗಿ; ಪೋದುದು—ಹೋಯಿತು. ನಿಮಿರ್ದ—ಮೇಲಕ್ಕೆ ನೀಡಿದ; ಅಂದರೆ, ಉದ್ದವಾದ.

೯೧೮. ಪತ್ತಿ—ಆಲಿಂಗಿಸಿ; ಪಳವಿಸಿ—ಪ್ರಲಾಪಿಸಿ; ಬಾಯಳಿದು—ಬಾಯಿಬಿಟ್ಟು; ಬಿಡೆ—ಬಹಳವಾಗಿ; ಪುಯ್ಯಲ್ಚಲ್—ಗೋಳಾಡಲು.

೯೨೦. ಆಂ—ನಾನು; ಆರ್ಗ್ಗೆ—ಯಾರವುಗಳು; ಎಂದು ಅಱಿಯೆಂ—ತಿಳಿಯಲಿಲ್ಲ. ಅಱಿಯೆಂ ಎಂಬುವದು ಭೂತಾರ್ಥಕವಾದದ್ದು. ಶವು. ಸೂ. ೨೨೨.

ವೃ॥ ಪಲವುಭವಂಗಳೊಳ್ನೆರಪಿದೆನ್ನಯ ಪಾಪವೊ ಮೇರೆಗೆಟ್ಟ
ಕೋ । ಟಲೆಗಳ ನುಣ್ಬನೆಂಬಳಲಸ್ಯೆರಣೆಯೋ ಕಡುಪಿಂ ತಗುಳ್ದ ನ ॥
ಟ್ಟಲೆವಸಮಾಸ್ತ್ರವಕ್ರತೆಯೊ ದೈವಿಕವೋ ನಿನಗೇನನೆಂಬೆನ । ಗ್ಗಲಿಸಿ
ಯೆ ನಿಂಮದೆಂತು ಮಸುಪೋಗದೆ ಕಲ್ಲೆರ್ದೆಯೆಂ ಮಹೀಪತೀ ॥ ೯೨೧

ಕಂ॥ ಇನಿಸಂ ಮೂರ್ಛೆಯಿನೆಳ್ಚ । ತ್ತನಂತರಂ ದೀರ್ಘಶೋಕವುಂ
ಬಿಡೆಸುಡೆ ಕಿ ॥ ಚ್ಚಿನ ಕಿಡಿಯಂದದೆ [ನೆಲದೊಳ । ಗ] ನಿಸುಂ ಮಿಡುಮಿಡ
ನೆಮಿಡುಕುವೆನ್ನಂ ಕಂಡೆಂ ॥ ೯೨೨

ವ॥ ಅಂತೆನ್ನ ಸಾವಿಲ್ಲದುದು ಮಾತನ ಸಾವು ಮದವಳಲನೊದವಿಸೆ
ಬಾಯುಳಿದು ಮೆಯ್ಯಱಿಯದವಳೆಂ ॥

ಕಂ॥ ಪರಿಹರಿಸಿ ಪೋಗಲಕ್ಕುಮೆ । ಕರುಣಿಸದೊರ್ವಳ ನನಾಥೆ
ಯುಂ ಭಕ್ತೆಯು ನಾ ॥ ತುರೆಯುಂ ದುಃಖಿತೆಯುಂ ಸ್ಮರ । ಪರಿಭೂತೆಯು
ನನ್ಯಗತಿಕೆಯುಂ ಬಾಲಕಿಯುಂ ॥ ೯೨೩

ವೃ॥ ತರಳಿಕೆ ಸಕ್ಕಿಯಲ್ತೆ ಬೆಸಗೊಳ್ ಯುಗಕೋಟಿವೊಲಾದು
ದಾ ಗಳಾ । ವಿರಹದೆ ಜೆಂ *[ದಿವಳ್ಗ] ಪಗಲೆಂಬುದ ನೀಮುಳಿಸೇಕೆ ನಿನ್ನ
ತ್ತೊ ॥ ಳ್ತರೊಳಸಿತ್ತೇಕೆ ಭಕ್ತಜನವತ್ಸಲ ನಿರ್ದಯನಾದೆ ನಾಥನೀಂ । ಕರು
ಣವಿ ನೊರ್ಮ್ಮೆ ಕಣ್ದೆಱೆದು ತೀರ್ಚು ಮದೀಯಮನೋರಥಂಗಳಂ ॥ ೯೨೪

ಕಂ॥ ಕರುಣಿಸು ದೈವಮೆ ಪಾಲಿಸು । ಹರಾದ್ರಿ ರಕ್ಷಿಸೆಲೆ ರಾತ್ರಿಪ
ರಣಾಗು ಸರೋ ॥ ವರಮೆ ವನದೇವಿಯರಿರಾ । ನೆರೆದೆಲ್ಲರುಮೆನಗೆ ಪುರು
ಷಭಿಕ್ಷಮನಿಕ್ಕಿಂ ॥ ೯೨೫

ಆವ ತೆಱದಿಂದ ಮೊಱೆಯುಂ । ಕಾವರುಮಂ ಕಂಡೆನಿಲ್ಲ ನಾಂಬಪ್ಪಿರ್ನ
ಮೆ । ಕ್ಕಾವಳ ನೀಸುಂ ವಲ್ಲಭ । ಜೀವಮ ನೋಸಿಸಿಸು ಪಿಡಿಯಲಾರ್ತ್ತೆಯು
ಮಿಲ್ಲಂ ॥ ೯೨೬

---

೯೨೨. ಬಿಡೆ—ಬಹಳವಾಗಿ, ಸುಡೆ—ಸುಡಲು.

೯೨೪. ಸಕ್ಕಿಯಲ್ತೆ—ಸಾಕ್ಷಿಯಲ್ಲವೆ? ಇವಳ್ಗೆ—ಈ ನನಗೆ ಆ ವಿರಹದಿಂ ಪಗಲ್, ಯುಗಕೋಟಿ ಪೋಲಾದುದೆಂಬುದಂ. ಬೆಸಗೊಳ್—ಕೇಳು; ಬೆಸಗೊಳ್ ಎಂಬ ಧಾತುಸ್ವರೂಪವೇ ವಿಧ್ಯರ್ಥವನ್ನು ಕೊಡುವದು. ಶಮ. ಸೂ. ೨೩೦.

*[ದಿವರ್ಗ್ಗ]

ವ॥ ಎಂದು ಪೋಗದೆ ಮತ್ತಮೀತನ ನೆತ್ತವೇಳ್ಕುಮೆಂದು ಕಪಿಂಜ
ಲಮಹಾಮುನಿಯಡಿಗಳೊಳಡಿಗಡಿಗೆ ಪೊರೞ್ದು ಪದಪಳಲೊದವೆ ತರಳಿ
ಕೆಯುನಪ್ಪಿ ಪಲತೆಱದೆ ಪಳವಿಸಿ ಪಲುಂಬಿ ಪಂಬಲಿಸಿಯುಂ ಆ ಮನೋಹ
ರನ ಮಂದ್ಯೈಸಿ ನಿಂದ ಜೀವನವಣ್ಣಿನಿಂ ಪಗಿಲ್ತು ಪತ್ತಿ ಬೆಳ್ಕುಱಿಸಿ ರಂಜಿಸುವ
ಕೆಂಜೆಡೆಯ ಮೊದಲಿಂ ಬೆಸಂಗುಪಡೆದು ಮಿಱುಪ ಪೆಱೆನೊಸಲೊಳಂ
ಕವಿವ ಜಡೆಯ ತೊಂಗಲಿಂ ಸಂಗಳಿಸಿ ಬೆಡಂಗನೊಳಕೊಂಡ ಗಂಡ
ಮಂಡಲಂಗಳೊಳಂ ಕೋಮಲ ಮೃಣಾಳೋತ್ತಂಸಿತಂ ಗಳಪ್ಪಂಸದೇ
ಶಂಗಳೊಳಂ ಮಲಯಜರಸ ಲುಳಿತ ನಳಿನೀ *[ದಳಾವಕುಂಠಿತ] ಮಾವ
ಮೆಲ್ಲೆರ್ದೆಯೊಳ ಮೋರೆಯೋರ್ಮೆ ಕಳವಳಿಸಿ ಕರತಳದಿ ನೆಳವಿಯುಂ
ಪುಂಡರೀಕನ ಪಕ್ಕದಿಂ ತೆರಳದೆಯುಂ ನಿಷ್ಕರುಣಿ ಯಾದೆಯೆಂದೋ
ರೋರ್ಮೆ ಸಂಭ್ರಮದಿ ನುಪಾಲಂಭನಂ ಮಾಡಿಯುಂ ಕೊರಲಂ ತಳ್ಕೈ
ಸಿಯುಂ ಬಿಡದಳವಿಲ್ಲದೆಡೆಯುಡುಗದಳ್ತು ಮೆಂದುಮನುಪದಿಷ್ಟಂಗಳು
ಮದೃಷ್ಟಪೂರ್ವಂಗಳು ಮತಿಕೃಪಣಂಗಳುಂ ಮಪ್ಪ ಚಾಟುಸಹಸ್ರಂಗ
ಳೊದವೆ ಕಣ್ಣೀರ ಪೂರದಿಂ ತೇಂಕಾಡುತ್ತ ಮಶ್ರುಪ್ರವಾಹಜನ್ಮಭೂಮಿಯುಂ
ಪ್ರಲಾಪಶಿಬಿರಸಹಸ್ರಸಂಭೂತೆಯುಂ ದುಸ್ಸಹದುಃಖಪ್ರಸೂತೆಯು ಮಾದೆ
ನೆಂದಾತ್ಮೀಯ ವೃತ್ತಾಂತಮ ನಾತಂಗೆ ನಿವೇದಿಸುತ್ತ ಮಿರ್ಪ್ಪದುಂ ॥ ೯೭

ಕಂ॥ ಪಿಂತಾದ ದುಸ್ಸಹಾವ । ಸ್ಥಾಂತರ ಸಂತತಿಯ ನಾಗಳನು
ಭವಿಸುತ ಮಿ ॥ ರ್ಪ್ಪಂ ತನ್ನರ್ಗಳ ಚೈತನ್ಯಮು । ನಂತಾಗಳೆ ಪರಿಯಿಸಿತ್ತು
ಮೂರ್ಛಾವೇಗಂ ॥ ೯೮

ವ॥ ಅಂತು ಮೂರ್ಛೆವೋಗಿ ಬೀಳ್ವುದುಂ ॥

---

೯೭. ಈತನಂ—ಇವನನ್ನು ; ಎತ್ತವೇಳ್ಕುಂ—ಬದುಕಿಸಬೇಕು—ಪಳವಿಸಿ—ಪ್ರಲಾಪಿಸಿ ; ಮಂದ್ಯೈಸಿ—ಸಾಂದ್ರವಾಗಿ ; ಪಗಿಲ್ತು—ಜಿಗಟಾಗಿ ; ಬೆಳ್ಕುಱಿಸಿ—ಬೆಳ್ಳಗಾಗಿ ; ಎಳವಿ—ಸವರಿ ; ತೆರಳದೆ—ಹೊರಟುಹೋಗದೆ ; ಉಪಾಲಂಭನಂಮಾಡಿ—ನಿಂದಿಸಿ ; ಎಡೆಯುಡುಗದೆ—ಅವಿಚ್ಛಿನ್ನವಾಗಿ ; ಸಂಭೂತೆ—ಜನ್ಮಭೂಮಿ.

*[ದಳಂಗಳೊಳಂವಿನಿಳೆಯ

ವೃ॥ ಬದವಿದ ತೆಲ್ಲಣಂಬೆರಸು ಚೀತ್ಕರದಿಂ ಪಿಡಿದೆತ್ತಿ ಶಂಕೆಯಿಂ । ಸುದತಿಯ ಪೊಂಗಿದೇನೆನುತ ಮಾಕೆಯ ಕಣ್ಮಲರಿಂದ ಮುಣ್ಕಿ ಮಾ॥ ಣದೆ ಸುರಿಯುತ್ತ ಮಿರ್ಪ ಜಲಧಾರೆಗಳಿಂದಮೆ ನಾಂದದೊಂದು ಮೇ। ಲುದಱ ಸೆಱಂಗಿನಿಂ ನಯುದೆ ಬೀಸಿದ ನಾಮನುಜೆಂದ್ರಚಂದ್ರಮಂ ॥ ೯೨೯

ವ॥ ಅನ್ತು ಬೀಸಿ ಮೂರ್ಛೆಯಿಂ ದೆಚ್ಚಱಸಿ ॥

ವೃ॥ ಇನಿವಿರಿದೊಂದವಸ್ಥೆಯುಮ ನೆಯ್ದಿಸಿದೆಂ ಬೆಸಗೊಂಡ ಪಾಪ ಕ । ರ್ಮನೆ ಸದಱಂದ ವಿಶಾಕಥೆಯೆ ಮಾಣ್ದಿದು ಕೇಳಲಸಹ್ಯ *[ಮೆಂ ಬುದೇಂ ॥ ಮನಕತಿ] ದುಸ್ಸಹಂ ಗಳೆಸಿಸಿರ್ಪ ಸುಹೃಜ್ಜನದುಃಖಸಂಕು ಲಂ । ನೆನೆ †[ದೊಡ ಮಂತೆ ಕೇಳ್ದೊಡೆ ನವ] ವ್ಯಥೆಯುಂ ನೆಱೆಮಾಡ ದಿಕ್ಕುರ್ವಮೇ ॥ ೯೩೦

ವ॥ ಅದಲ್ಲದೆಯುಂ ಮತ್ತಮಾ ಕಾಂತೆಗಿಂತೆಂದಂ ॥

ಕಂ॥ ಎಂತಾನುಂ ನಿಱೆಪಿದಿ ‡[ಯುಸು] । ಸಂತತಿಯಂ ಸ್ಮರಣಶೋ ಕಶಿಖಿಗಿಂಧನ ಮ ॥ ಪ್ಪಂತೆ ಸಗಲಾ §[ಗ ದಿವನೆಂ] । ದಿಂತುಸುರ್ದಂ ಕರು ಣದಿಂದ ಮುಗೆ ಕಣ್ಬನಿಗಳ್ ॥ ೯೩೧

ವ॥ ಎನುತ್ತಂ ನುಡಿದು ನಿಡುಸುಯ್ಯುಂ ಗುಡುಗುಡನೆ ಸುರಿವ ಕಣ್ಬನಿಗಳಂ ಮಿಡಿವುತ್ತಂ ಮತ್ತಮಿಂತೆಂದಳ್ ॥ ೯೩೨

¶ಸ್ರ॥ ಇವನೇನೆಂದಪ್ಪೆ ಲಜ್ಜಾಕರಮ ನರಸ ಪೋದಾಮಹಾರಾತಿ ಬೊಳೆಲ್ದ್ಯಾ । ಗದ ಮತ್ಪ್ರಾಣಂಗಳಂ ಪೋದಪ್ರವೆ ಕೊಲುತ ಮಿಪ್ಪರ್ಂ ತಕಂ ನೋಡಲುಂ ಪೇ । ನಿವನೆನ್ನಂ ಕಷ್ಟಿಯುಂ ಕಲ್ಲದೆಯವಳುಮ

೯೨೯. ಚೀತ್ಕಾರದಿಂ—ಧ್ವನಿ; ಪೊಂಗು—[illegible]; ನಯುದೆ—ಮೆಲ್ಲಗೆ.

೯೩೦. ಮನಕತ್ಸ್ರವೆ—ಮನೋವ್ಯಥೆ; ಮಾಣ್ದು—ನಿಲ್ಲಿಸಲು; ಎಂಬು ದೇಂ—ಎಂದು ಹೇಳತಕ್ಕದ್ದೇನು.

೯೩೨. ಇವಂ—ಈ ಪ್ರಾಣಗಳಲ್ಲಿ; ಅಗೆ—[illegible].

*[ಮೆಂಬಿನಂ ! ಮನಗತಿ]   †[ದಡಮಂತೆ ಕೇಳ್ದೊಡೆನ]

‡[ದಪು]   §[ದನಿವಗೆಂ]

ನೆಂದಂದು ಪೇಳ್ಸಾವೆಲ್ಲಿ । ರ್ಪ್ಪುದು ಮತ್ತಂ ನಿಸ್ತ್ರಪಾಗ್ರೇಸರೆಯೊಡ ನುಡಿವಲ್ಲಿಂದಮೇಂ ಕಷ್ಟಮುಂಟೇ ॥ ೯೩೩

ಕಂ॥ ಆ ವಜ್ರಪಾತದಿಂ ಮೇ । ಲೇವೆಳ್ದಪೆ ನಱಿದು ಪೇಳಲುಂ ಕೇಳಲು ಮಿ ॥ ನ್ನಾಮಂಗ ಮೆನಲ್ಕಾಶ್ಚ । ರ್ಯಾವಹ ಮೊಂದಾದು ದಾಗ ಳದನುಸಿರ್ದಪ್ಪೆಂ ॥ ಅದಲ್ಲದೆಯುಂ— ೯೩೪

ಕಂ॥ ಬಡವಿದ ಕೋಟಲೆಗಳ ಬಾ । ಳ್ಮೊದಲೆನಿಸಿದ ಬಾರ್ತೆಗೆಟ್ಟ ಕೃತಮಱಿಯದ ಮಾ ॥ ಯದನನ್ನೀ ಪೊಡಲಂ ನಿಲಿ । ಸಿದುದರ್ಕೇನಾನು ಮೊಂದು ನೆವಮುಸಿರ್ದಪ್ಪೆಂ ॥ ೯೩೫

ವ॥ ಅದೆಂತೆಂದೊಡಂತೀಯವಸ್ಥಾಂತರದೊಳೆಡೆವಿಡದಳುತ್ತಿರ್ದ ಡಪದವಳ ಮೊಗನುಂ ನೋಡಿ ॥

ವೃ॥ ತರಳಿಕೆ ಮಾಣಿಡಿನ್ನೆನಸನಳ್ತಪೆ ಸಂಗಡಿಸಿಂಧನಂಗಳಂ । ವಿರಚಿಸು ಬೇಗಮಿಂ ಚಿತಿಯ *[ನೇಂತಡ ವೀಕ್ಷಣಮೆನ್ನ] ಜೀವಿತೇ । ಶ್ವರನೊಡಮೋಗಮೇಳ್ಕು ಮೆನಗೆಂಬುದು ಮೊರ್ಮ್ಮೆಯೆ ಚಂದ್ರಮಂಡಲಾಂ । ತರದೊಳದೊರ್ವ್ವ ನಂದು ಪೊರಮಟ್ಟಳತಂದ ನಮರ್ತ್ಯಮಾರ್ಗದಿಂ ॥ ೯೩೬

---

೯೩೩. ಲಜ್ಜಾಕರಮಂ—ನನಗೆ ನಾಚಿಕೆಯನ್ನುಂಟುಮಾಡುವ; ಇದಂ—ಪೂರ್ವೋಕ್ತವಾದ ಮಾತನ್ನು; ಏನೆಂದಪ್ಪೆ—ಯಾಕೆ ಹೇಳುವೆ?; ಇರ್—ಇನ್ನು ಮೇಲೆ: ಪೋದಪುವೆ? ಅಂತಕಂಪೇಸಿದಂ ಎಂದಂದು—ಹೇಸಿದನು ಎಂದು ಹೇಳುವಾಗ, ಸಾವು ಮೆಲ್ಲಿರ್ಪ್ಪುದು—ಮರಣತಾನೇ ಎಲ್ಲಿದ್ದೀತು. ನಿಸ್ತ್ರಪಾಗ್ರೇಸರೆಯ—ಲಜ್ಜಾಶೂನ್ಯರಲ್ಲಿ ಮುಖ್ಯಳಾದ ನನ್ನ; ಬಡನುಡಿವಲ್ಲಿಂದಂ—ಸಂಗಡ ಮಾತಾಡುವದಕ್ಕಿಂತಲೂ; ಕಷ್ಟಮುಂಟೆ? ಬಡನುಡಿವ ಎಂಬಲ್ಲಿ ಬಡನೆಶಬ್ದದ ಕೊನೆಯ ನಕಾರಕ್ಕೆ ಲೋಪವು ಶಮ. ಸೂ. ೧೩೩.

೯೩೪. ಆ ವಜ್ರಪಾತದಿಂ ಮೇಲೆ—ವಜ್ರಪಾತಕ್ಕೆ ಸಮಾನವಾದ ಪುಂಡರೀಕನಮರಣಾ ನಂತರ; ಬಂದು—ಬಂದುಕಾರ್ಯವು.

೯೩೫. ಕೋಟಲೆಗಳ—ಕಷ್ಟಗಳ; ಬಾಳ್ಮೊದಲೆನಿಸಿದ—ಮೂಲಭೂತಳಾದ. ಬಾರ್ತೆಗೆಟ್ಟ—ಅಗಣ್ಯಾವಾದ; ಕೃತುಮಱಿಯದ—ಉಪಕಾರವನ್ನು ತಿಳಿಯದ.

೯೩೬, ಏಂತಡಂ—ಸಾವಕಾಶವೇಕೆ?

*[ದೇತಡವೀಕ್ಷಣತಂಗಿ]

ವ॥ ಅದೆಂತೆಂದೊಡೆ ತರಳತಾರಹಾರಾಲಂಕೃತನುಂ ವಿಶಾಲವಕ್ಷಸ್ಥಲನುಂ ಕೇಯೂರಕೋಟಿಲಗ್ನಪವನತರಳತರಧವಳೋತ್ತರೀಯಾಂಶುಕನುಂ ಕಾಮಿನೀಕುಚಕುಂಕುಮಪತ್ರಲತಾಲಾಂಛಿತಾಂಸದೇಶನುಂ ಮುಖದ ಕರ್ಣಾಂದೋಳಿತ ಮಕರಕುಂಡಲಮಣಿಪ್ರಭಾರಕ್ತಗಂಡಮಂಡಲನುಂ ಅಳಿಕುಲನೀಲಕುಟಿಲಕುಂತಳವಿಕಟಮೌಳಿಯುಂ ಉತ್ಫುಲ್ಲಕುಮುದಕೃತಕರ್ಣಪೂರನುಂ ದುಕೂಲಪಲ್ಲವಕಲ್ಪಿತೋಪ್ಣೀಷನುಂ ಕುಮುದಧವಳದೇಹನುಂ ಮಹಾಪ್ರಮಾಣಪುರುಷನುಂ ಮಹಾಪುರುಷಲಕ್ಷಣೋಪೇತನುಂ ದಿವ್ಯಾಕಾರನುಮೆನಿಸಿದ ಮಹಾನುಭಾವಂ ॥ ೯೩೭

ಕಂ॥ ಧವಳಾಂಗಪ್ರಭೆ ದೆಸೆಯಂ । ಧವಳಿಸೆ *[ತನಿಗಂಪನಾಳ್ದ ಕಡುದಪ್ಪೆನಸುಂ ॥] ಕವಿತರೆ ನೀಡಿದನಾಗಳ್ । ದಿವಿಜೇಭ ಕರಾನುಕಾರಿ ನಿಜಕರಯುಗಮಂ ॥ ೯೩೮

ವ॥ ಅಂತತಿಶೀತಲಸ್ಪರ್ಶಂಗಳಪ್ಪ ಮೃಣಾಳಕೋಮಲಂಗಳೆನಿಪ ಕರಾಂಗುಳಿಗಳನೆನ್ನ ಮುಂದುಪರತನಾದ ಪುಂಡರೀಕನ ನೆತ್ತಿಕೊಂಡು ॥

ಕಂ॥ ಬಗೆಗೆಟ್ಟು ಸಾವಬಗೆಯುಂ । ಮಗಳೆ ಮಹಾಶ್ವೇತೆ ಬಗೆಬುದಿಕ್ಕರ್ಣಡುವೆ ನೀಂ ॥ ಮಗುಳೆಯುಂ ವಿಾತನ ನೆನುತಂ । ಮಗುಳ್ದಾತಂ ಜಿರಸು ಗಗನಮಾರ್ಗಕ್ಕೆಗೆದಂ ॥ ೯೪೦

ವ॥ ಅಂತಾವ್ಯತಿಕರದೊಳೆನಗತಿಸಂಭ್ರಮಮುಂ ವಿಸ್ಮಯಮುಂ ಕೌತುಕಮುಂ ಪೊಗೆಯೆ ಬಿರಿದುಮುಂದೆ ಕಪಿಂಜಲನ ನಿದೇನೆಂದು ಬೆಸಗೊಳೆಯುಂ ಮಾತನೆನಗೆ ಮರುಮಾತುಗುಡದುನ್ಮುಖನಾಗಿ ॥ ೯೪೧

ಕಂ॥ ಎನಗಂ ಪೇಳದೆಯುಂ ಧೀರಾ । ಕೆನಲೆನ್ನಯ ಸಖನನೆತ್ತ ಪೊಯ್ದಪೆ ಮಾಣೆಂ ॥ ದೆನುತಂ ಕೋಪದ ನಾಪ್ಪುರು । ಷನ ಪೆಱಗನೆ ತಾನುಮಾತಂ ಕ್ಕೆಗೆದಂ ॥ ೯೪೨

---

೯೩೮. ತನಿಗಂಪನಾಳ್ದ—ಹೊಸ ವಾಸನೆಯನ್ನುಳ್ಳ; ಕಡುದಪ್ಪ—ಅತಿತಂಪು.

೯೪೦. ಬಗೆಗೆಟ್ಟು—ಮನಸ್ಸು ಕೆಟ್ಟು; ಬಗೆಮುದಿರ್—ಯೋಚಿಸಬೇಡ; ಬಗೆದಂ—ಹಾರಿದನು.

*[ತನಿಗಂಪನಾಳ್ದ ಕಡುಗಂಪೆನಸುಂ]

ವ॥ ಅನ್ತು ಮೂವರುಂ ನೋಡೆನೋಡೆ ಚಂದ್ರಮಂಡಲಮಧ್ಯದೊಳ್ಪುಗೆ ಕಪಿಂಜಲನಪ್ಪೋಗಿಂಗೆ ಶೋಕವಿಸ್ಮಯಡಿಯಾಗೆ ಕಿಂಕರ್ತವ್ಯತಾಮೂಢೆಯೆನಾಗಿ ॥ ೯೪೩

ವೃ॥ ತರಳಿಕೆ ಪೇಳದೇನಱಿವೆ ನೀನೆನಲನ್ನವ್ರೊಲಾಗಳಳ್ಕನಿಂ । ಪರವಶೆಯಾಗಿ ನಿಂದು ಮಗಳನ್ನಯ ಸಾವಿನೊಳಾದ ಶಂಕೆಯಿಂ ॥ ಕರುಣವನಪ್ಪುಕೆಯ್ದುಸಿರ್ದಳಾ ಸಖಿಯೊಂ ಸತಿ ಬಂದು ತಂದೆಯಂ । ತಿರೆ ಪದೆದಾಮಹಾಪುರುಷ ನಾಱಿಸಿದಂ ಭವದೀಯಶೋಕಮಂ ॥ ೯೪೪

ಕಂ॥ ಇನ್ನರ ನುಡಿಕನಸಿನೊಳಂ । ನನ್ನಿಯೆನಲ್ಕೇಳ ದಿವ್ಯಪುರುಷಂ ಪ್ರತ್ಯ । ಕ್ಷಂನಿನ್ನಮುಂದೆ ನುಡಿಯ । ಲ್ಕಿನ್ನುಮದೇನೆಂಬ ಸಂದೆಗಕ್ಕೆಡೆಯುಂಟೇ ॥ ೯೪೫

ವೃ॥ ನಿನ್ನಯ ಜೀವಿತೇಶ್ವರನ ಜೀವಮನಿಂ ಪಡೆವಟ್ಟಲೆಂದೆಲೋ । ಕೋನ್ನತನಪ್ಪ ದಿವ್ಯಪುರುಷಂ ವಿಗತಾಸುವ ನೊಯ್ದನಳ್ಕಱಿಂ॥ ನಿನ್ನುಮ ನೀಗಳಾಱಿಸಿದ ನಂತಿದಱಿಂದಿದು ನನ್ನಿಯಪ್ಪುದ । ಲ್ತೆನ್ನದೆ ಮಾಣ್ಬುದಕ್ಕೆ ಪೆಱತೇಂ ಮರ *[ಣವ್ಯವಸಾಯಮೊಂಬುದಂ] ॥ ೯೪೬

---

೯೪೩. ನೋಡೆನೋಡೆ—ನಾನುನೋಡುತ್ತಿರುವಾಗಲೆ, ಪೋಗಿಂಗೆ—ಗಮನಕ್ಕೆ. ಪೋಗಿಂಗೆ ಎಂಬಲ್ಲಿ ಷೇತ್ವರ್ಥದಲ್ಲಿ ಚತುರ್ಥಿಯು ಶಮ. ಸೂ. ೧೪೦.

೯೪೫. ಇನ್ನರ—ಇಂಥಾವರ; ಇನ್ನರ ಎಂಬಲ್ಲಿ ಇಂತಪ್ಪಎಂಬಪ್ರಕಾರ ವಾಚಕದಮೇಲೆ ಅನ್ನಾದೇಶ ಬಂದಿರುವವು. ಶಮ. ಸೂ. ೧೬೦.
ಕೇಳ—ಕೇಳು ಎಂಬುದಕ್ಕೆ ಮಧ್ಯಮಪುರುಷದ ಏಕವಚನದಲ್ಲಿ ಕೊನೆಗೆ ಅಕಾರ ದೇಶ ಬಂದು ಕೇಳ ಎಂದಾಯಿತು. ಶಮ. ಸೂ. ೧೨೫.

೯೪೬. ಇಂ—ಇನ್ನುಮೇಲೆ; ಪಡೆದು—ಉಂಟುಮಾಡಿ; ಅಟ್ಟಲೆಂದೆ—ಕಳುಹಿಸಬೇಕೆಂತಲೇ; ನಿನ್ನುಮಂ—ನಿನ್ನನ್ನೂ ಕೂಡಾ: ಇದು ನನ್ನಿಯಪ್ಪುದಲ್ತೆನ್ನದೆ—ಇದು ನಿಜವಾಗತಕ್ಕದ್ದಲ್ಲವೆನ್ನದೆ ಅಂದರೆ ನಿಶ್ಚಯವೆಂದು ತಿಳಿದು; ಮರಣ ವ್ಯವಸಾಯಮೆಂಬುದಂ, ಮಾಣ್ಬುದಕ್ಕೆ—ಬಿಡುವದಕ್ಕೆ; ಇದಱಿಂ—ಅಸಮಾಧಾನ ಪಡಿಸುವ ಈ ಮಾತಿಗಿಂತಲೂ; ಪೆಱತೇಂ—ಮತ್ತೊಂದು ಯಾವದುಂಟು.

*[ಣಾಭ್ಯವಸಾಯಮನೊಂದುಮಂ]

ಕಂ॥ ನಿಸದಂ ಕಪಿಂಜಲಂ ಜೇ । ವಿಸುತಿರೆ ನಿನ್ನಲ್ಲಿಗೆಯ್ದಿದರಸದಱಿಂ ರ ॥ ಕ್ಷಿಸವೇಳ್ಕು ಮಾವತೆಱದಿಂ । ಪಸುವಂ ನಿನ್ನಲ್ಲಿಗಾತನಸ್ಯುತ್ತಪ್ಪಿರ್ನೆಗಂ ॥ ಎಂದವಳ್ಕಾಲಮೇಲೆ ಬೀಳ್ವುದುಂ— ೯೪೭

ವೃ॥ ಪಿರಿದು ಮಿದಿಂತುಟೆಂದು ಬಗೆದುಂ ನೆಱೆಬಾಳ್ಕೆಯೊಳಾದ ತೃಷ್ಣೆಯುಂ । ಪರಿಪರಿಸಲ್ಕಮಾರ್ಗ್ಗ ಮರಿದಾಗಿಯುಂ ಮುಕ್ಕೈವದಿಂದ ಮಂತೆಪೆಂ । ಡಿರ ಬಗೆಸಾಜದಿಂ ಕುಟಿಲಮಾಗಿಯುಂ ಮಿಂತು ದುರಾಸೆಯಿಂದ ಮೋ । ಸರಿಸವೆ ನನ್ನನಾಸೆ ಬಿಡಲಾರದ ಪಾತಕಿಯೆಂ ಮಹೀಪತೀ ।೯೪೮

ವ॥ ಅನನ್ತರ ಮಾಸರೋವರದ ತೀರದೊಳೆಡೆವಿಡದೆ ಪೊರಳುತವೆ ಪರೆದ ಮುಡಿಯೊಳ್ಪೊರೆದು ಕಣ್ಣನೀರಿಂ ನಾಂದು ಕದಂಪಿನೊಳ್ಪಗಿಲ್ತು ಪತ್ತಿ ಮುತ್ತರೀಯಮುಂ ಆಕ್ರಂದನದಿಂ ಗಂಟಲೊಡೆದು ದನಿಕಿಡೆ ತರಳಿಕೆ ಪೆರಸು ಬಿಪದಳುತ್ತ ಮಿರಲಾಪಾಪಕಾರಿಣಿಯಪ್ಪ ಕಾಳರಾತ್ರಿಪ್ರತಿಮೆ ಬಿಸಿಸಿದ ಮಹಾರಾತ್ರಿಯಾಗಳ್ ಶೋಕೋದ್ರೇಕದಿಂ ಯುಗಸಹಸ್ರಾಯಮಾನಮಾಗೆ । ೯೪೯

ಕಂ॥ ಅಳುವೆನ್ನಂ ತರಳಿಕೆಮೆ । ಯ್ವಳಯಿಂ ಪಿಡಿದೊಯ್ಯನೆತ್ತಿ ಮೆಲ್ಲನೆ ತವಿಗಾ ॥ ಗಿಳತಂದೀ ಕೊಳದೊಳ್ನೀ । ರಿಳಯಿಸೆ ನೀರಿಳಿದೆ ನಿಲ್ಲಿ ಬೆಳಗಪ್ಪಾಗಳ್ ॥ ಅನ್ತು ನೀರಿಳಿದು ತದನಂತರಂ— ೯೫೦

ಕಂ॥ ಆತನ ಪರಮಪ್ರೀತಿಯಿ । ನಾತನ ವಲ್ಕಲದಿ ನಾತನಕ್ಷಾವಳಿಯಿಂ । ದಾತನ ಕಮಂಡಲುವಿನಿಂ । ದಾತನ ವೇಷಮನೆ ತಾಳ್ದಿತಳೆದೆಂ ವ್ರತಮಂ ॥ ೯೫೧

---

೯೪೮. ಪಿರಿದುಂ—ಬಹಳ; ಇದಿಂತುಟು—ಇದು ಹೀಗೆಯೆ ಸರಿ; ಉಕ್ಕೈವದಿಂದಂ—ಉತ್ಸವದಿಂದ ಅಂದರೆ ಆಸಾಬಂಧದಿಂದ; ಸರಿಸವೆ—ಬಿಸುಡಲಾಗದೆ; ನನ್ನ—ಆತ್ಮವನ್ನು.

೯೪೯. ಪೊರಳುತವೆ—ಹೊರಳುತ್ತಲಿ; ಪರೆದ—ಕೆದರಿದ; ಪೊರೆದು—ವ್ಯಾಪ್ತವಾಗಿ; ಪಗಿಲ್ತು—ಬಿರಿದು, ಪತ್ತಿ—ಅಂಟಿಕೊಂಡ.

೯೫೧. ಮೆಯ್ವೂಸಿಯಿಂ—ದೇಹಪ್ರಯಾಸದಿಂದ ಅಂದರೆ ದೇಹಕ್ಕೆ ಬರಗಿಸಿಕೊಂಡು; ನೀರ್ಗಿಳಿದು—ಸ್ನಾನವನ್ನು ಮಾಡಿದನು.

ವ॥ ಅನ್ನೆಗಮಳಿದು ಮದೀಯ ಮಂದಭಾಗ್ಯತೆಯುಮಂ ದೈವದ ದಾರುಣತೆಯುಮಂ ಶೋಕೋದ್ರೇಕಮುಮಂ ದುಃಖದ ದುಸ್ಸಹತೆಯುಮಂ ಪದಾರ್ಥದನಿತ್ಯತೆಯುಮಂ ಭಾವಿಸಿ ನೋಡಿ ॥ ೯೫೨

ವೃ॥ ಮನಮಂ ನಿಗ್ರಹಿಸುತ್ತಸದ್ವಿಷಯದತ್ತಲ್ಪೋ ದ್ದಂತಾಗೆ
ಮಾ । ಡಿ ನಿರುದ್ಧೇಂದ್ರಿಯೆಯಾಗಿ ಬಂಧುಜನಮಂ ತಾಯ್ತಂದೆಯಂ
ಪತ್ತುವಿ ॥ ಟ್ಟೆನಗಿನ್ನೊರ್ವರುಮೀವರೆಂಬ ಬಗೆಯಂ ನಿಶ್ಚೈಸಿ ಲೋ
ಕೈಕನಾ । ಥನ ನಾನಾಗಳನಾಥೆಯೆಂ ಶರಣೆನುತ್ತಾಶ್ರೈಸಿದೆಂ ಸ್ಥಾಣುವಂ ॥

ಕಂ॥ ಜನನೀ ಜನಕ ಬ್ಬಾಂಧವ । ಜನಸಹಿತತ್ತಳುತೆ ಬಂದು
ನಾನಾವಿಧ ಸಾಂ ॥ ತ್ವನ ವಚನ *[ಸಹಿತ ಮುಸಿರ್ದ । ರ್ಮ್ಮನೆ] ಗೊಡ
ಗೊಂಡೊಯ್ಯಲೆಂಬ ಬಗೆಯಿಂ ದೆನ್ನಂ ॥ ೯೫೪

ಅಂತೆರವುಗೊಂಡಿದೇನಿನ । ಳೆಂತುಂಪೋಬಾರಳೀವೆ ನೆನುತಂ ದುಃ
ಖಾ ॥ ಕ್ರಾಂತಂ ಪಲವುಂ ದಿನಮಿ । ರ್ದ್ದಂತಾನುಂ ಮನೆಗೆ ಪೋದನೆನ್ನ
ಯ ಜನಕಂ ॥ ಅನ್ನುಪೋಗೆ— ೯೫೫

ಕಂ॥ ಜಪದಿಂ ತಪದಿಂದೊಡಲಂ । ಕ್ಷಪಿಯಿಸಿದಪೆ ನೆಂಬೊಡದು
ಕೃತಜ್ಞತೆಗಡ ಚೆಃ ॥ ಜಪಮೆಣಿಸುವ ನೆವದಿಂದಂ । ನೃಪ ತದ್ಗುಣಗಣಮ
ನೀಗಳೆಣಿಸುತ್ತಿಪ್ಪೆಂ ॥ ೯೫೬

ವೃ॥ ಅಯುತಕ್ಕೀಪಾದ ನಿರ್ಲಕ್ಷಣೆಯ ನಶುಭೆಯಂ ನಿಷ್ಫಲೋತ್ಪ
ನ್ನೆಯಂ ನಿ । ರ್ದಯೆಯುಂ ನಿಸ್ನೇಹೆಯಂ ನಿಸ್ತ್ರಪೆಯ ನಸುಖೆಯಂ
[ನಿಂದ್ಯೆಯಂ ನಿಷ್ಫಲಪ್ರಾ । ಣೆಯ ನಾದಂ ಕ್ರೂರೆಯಂ ಬ್ರಾಹ್ಮಣಹನ

೯೫೨. ಪದಾರ್ಥದ + ಅನಿತ್ಯತೆಯುಮಂ:

೯೫೩. ನಿಗ್ರಹಿಸುತ್ತ + ಅಸದ್ವಿಷಯದತ್ತಲ್.

೯೫೫. ಎರವುಗೊಂಡು—ಪ್ರಾರ್ಥಿಸಿ; ಪೋಬಾರಳ್—ಹೋಗುವದಕ್ಕೆ ಬರಳು.

೯೫೬. ಕ್ಷಪಿಯಿಸಿದಪೆನೆಂದೊಡೆ—ದಂಡಿಸುತ್ತೇನೆ ಅಂದರೆ; ಅದು ಕೃತಜ್ಞತೆ ಪತಿವಿಯುಕ್ತಳಾದವಳು ಜಪತಪಗಳಿಂದ ದೇಹದಂಡನೆಯನ್ನು ಮಾಡಿದರೆ ಅವಳ ಕೃತಜ್ಞಳೆಂದಭಿಪ್ರಾಯವು.

*[ಸಮಿತಿನುಸುರ್ದರ್ಮನೆ]

ನಮಹಾಪಾಪಮಂ ಗೆಯ್ದನಿಸ್ತ್ರೀಂ । ಕೆಯು ನೆನ್ನಂ ಪಾಪಿಯುಂ ನೀಂ
ಜೆಸಗೊಳೆ ಫಲಮೇಂ ಪೇಳ್ಕ್ರಹೀಪಾಲಚಂದ್ರ ॥ ೯೫೭

ಕಂ॥ ಸೊಗಯಿಪ ಸಸಿಕರದ ಜೆ । ಳ್ಕ್ರಗಿಲೊಳ್ಸ್ವರೆಯಿಂದಮೆಯ್ದೆ
ಮುಸುಕಿದ್ದುದೆನಲ್ ॥ ಸೊಗೆಯಿಪ ದುಗುಲದಸೆಱಗಂ । ಮೊಗಕ್ಕೆ ತೆಗೆ
ದಾಗಳಿರದೆ ಗೋಳಿಟ್ಟಳ್ ॥ ೯೫೮

ವ॥ ಅನ್ತು ಳುತ್ತಿರ್ದಳ ನೀತಾನುಂ ಸಂತೈಸಿ—

ಕಂ॥ ಮೊದಲೊಳ್ಪ್ರಾರವಮಂ ಮಾ । ಡಿಮದಲ್ಲದೆ ತನ್ನ ವಾರ್ತೆ
ಯುಂ ನೆಱೆ ಸಡ್ಗು ॥ ಮದಿ ನಾದ್ಯಂತಂ ಸತಿಪೇ । ಳ್ದುದಕ್ಕೆ ಹೃತಹೃದ
ಯನಾಗಿ ಚಂದ್ರಾಪೀಡಂ ॥ ೯೫೯

ವೃ॥ ಇನಿಸೊಗೆತಪ್ಪ ಕಣ್ಬನಿಗಳಿಂದಮೆ [ನೇಹಮ] ನುಂಟುಮಾ
ಡುವಂ । ಗನೆಯರೊಳೇನಪಾರಭವ [ಭೋಗ] ಮ ನಿಂತಿರೆ ಪತ್ತುವಿಟ್ಟ
ಕಾ । ನನದೊಳೆ ನಟ್ಟು ನಿಂದು ಸುಕುಮಾರಮೆನಿಪ್ಪ ಶರೀರಮಂ ಕಱು ।
ತ್ತಿಸಿಪಿರಿದೊಂದು ಘೋರತಪಕೊತ್ತಿದೆ ನಿನ್ನ ಪೊಲಾಕೃತಜ್ಞೆಯರ್ ॥

ಕಂ॥ ಸತ್ತವರೊಳ್ಪರಿ ಪೇಳೊಡ । ಸತ್ತರೆ ತಮ್ಮಳಲಿಸ ಳವಿಯುಂ
ಮುಳ್ಗಸಲ್ಕೆಂ ॥ ದುತ್ತವಳಿಕೆಯೊಳೆ ಸಾವ । ಸ್ಸತ್ತವ ರವಗಾಣವ ಹಿತ
ಮ ನಾಚರಿಸುವರೋ ॥ ೯೬೧

೯೫೮. ಶರಪದ—ಶರತ್ಕಾಲದ ; ಪ್ರೆದೆಯಿಂದಂ—ಪದರಿನಿಂದ.

೯೬೦. ಕಣ್ಬನಿಗಳಿಂದಮೆ—ಕಣ್ಣೀರುಮಾತ್ರದಿಂದಲೆ ; ನೇಹಮನುಂಟುಮಾ
ಡುವ—ಸ್ನೇಹವನ್ನು ಪ್ರಕಾಶಪಡಿಸುವ ಅಂದರೆ ರೋದನಮಾತ್ರದಿಂದ ಪತಿಸ್ನೇಹವನ್ನು
ಪ್ರಕಟಪಡಿಸುವ ; ಅಂಗನೆಯರೊಳೇಂ—ಸ್ತ್ರೀಯರಲ್ಲಿ ಯಾವ ಕೃತಜ್ಞತೆಯುಂಟು. ಭವ
ಭೋಗಮಂ—ಸಂಸಾರಸುಖವನ್ನು. ಇಂತಿರೆ—ಹೀಗೆ ; ಪತ್ತುವಿಟ್ಟು—ಬಿಟ್ಟು ; ನಟ್ಟು
ನಿಂದು—ಸ್ಥಿರವಾಗಿನಿಂತು ; ಕಱುತ್ತಿ—ಹಿಂಸಿಸಿ.

೯೬೧. ಅಳಲಿಸ—ದುಃಖದ ; ಅಳವಿಯುಂ—ಅಧಿಕ್ಯವನ್ನು ; ಮುಳ್ಗಿಸಲೆಂದು
—ಕಡಮೆಮಾಡಬೇಕೆಂದು ; ಉತ್ತವಳಿಕೆಯೊಳೆ—ಆವೇಶದಿಂದ ; ಸಾವರ್—ಸಾ
ಯುವರು. ಸತ್ತವರು—ಹೀಗೆಸತ್ತವರು ; ಅವರ್ಗೆ—ಮೊದಲು ಸತ್ತವರಿಗೆ.

ವೃ॥ ಅಪರವರ್ಗಾವ ಕರ್ಮಫಲವಿಪ್ಪ್ರೇಡೆ ಜೇಬದಬಿಂದೆ ಮೇಲೆ ಕೂ। ಡುವ ರೊಡಸತ್ತ್ರರೆಂಬೊಡದು ಕೂಡದು ಕೇವಲಮಾತ್ಮಘಾತ ದೋ॥ ಷವೆ ಪೆಜಿತ್ತಿಲ್ಲ ಸತ್ತ್ರರೊಡಸಾಯದೆ ನಿಂದೊಡೆ ಮಾಡಲಕ್ಕು ಮಿ। ತ್ತ್ರವರ್ಗೆ ಜಲಾಂಜಲಿಪ್ರಭೃತಿ ದಾನವಿಶೇಷಮಹೋಪಕಾರಮು॥

ವೃ॥ ಸತ್ತಳೆ ಕಾಮದೇವನ ಪರೋಕ್ಷದೊಳಾರತಿ ಪಾಂಡುಸತ್ತೊಡಂ। ಸತ್ತಳೆ ಕುಂತಿ ಮತ್ತಮಭಿಮನ್ಯುಕುಮಾರಕನಂದು ಸತ್ತೊಡೇ॥ ನುತ್ತರೆ ಸತ್ತಳೇ ನೆಗಳ್ದ ಸಿಂಧುನೃಪಾಲಕನಂದು ಸತ್ತೊಡಂ। ಸತ್ತಳೆ ದುಶ್ಶಳಾವನಿತೆ ಯಿಂತಿವು ನೀವಱಿವಂದವಲ್ಲವೇ॥ ಅನ್ತು ಮಲ್ಲನೆಯುಂ—೯೬೩

ಕಂ॥ ಅನಾಶ್ವಾಸಿಸಿದನಿತಱೊ। ಳೇ ನಾಚಂದ್ರಮನೆ ನಿನ್ನನಾಶ್ವಾಸಿಸಿದಂ॥ ತಾನೆಂದೊಡದೇನೆಂಬುದೊ। ಮಾಸಿನಿ ತದ್ವಿಧರವಜನ ಮವಿತಥಮೆ ವಲಂ॥ ೯೬೪

123ನ್ೆ

ವ॥ ಅದಱಿನನಿಂದ್ಯಮಪ್ಪ ನಿಜಚರಿತಮಂ ನಿಂದಿಸಲಾಗದೆಂದ ನೇಕ ಪುರಾಣಕಥಾ ಪ್ರಕಥನದೊಳಂ ಬಹುಪ್ರಕಾರ ಸಾಂತ್ವವಚನದೊಳ ಮೊಂತಾನು ಮರಸಂ ಸಂತೈಸಿ॥ ೯೬೫

ಕಂ॥ ವಿನಯದೊಳೆ ಮತ್ತಮಂದೊ। ಯ್ಯನೆ ನಿರ್ಝರವಾರಿಯುಂ ನಿಜಾಂಜಲಿಯಿಂ ತಂ॥ ದನುವಿಸಿ ವದನಪ್ರಕ್ಷಾ। ಳನಮಂ ಮಾಡಿಸಿದನೆಂದು ಚಂದ್ರಾಪೀಡಂ॥ ೯೬೬

ಅವಧರಿಸಿ ಮಹಾಶ್ವೇತಾ। *[ಪ್ರವೃತ್ತಿಯಂ] ಶೋಕ †[ಭಾರ]ಮಂ ತಾಳ್ದವರೊಲ್। ರವಿಯುಂ ದಿವಸವ್ಯಾಪಾ॥ ರವೆಲ್ಲಮಂ ಪತ್ತುವಿಟ್ಟಧೋಮುಖನಾದಂ॥ ೯೬೭

---

೯೬೨. ಅಪರ ವರ್ಗಾನ—ಅಪರನವರು ಅನುಭವಿಸತಕ್ಕ; ಕರ್ಮಫಲವಿಪ್ಪ್ರೇಡೆ ಜೇಲೆ—ಕರ್ಮಫಲವನ್ನು ಅನುಭವಿಸತಕ್ಕ ಭೂಮಿಯುದೇರೆ; ಒಡಸತ್ತ್ರರಿ—ಸಹಗಮನವನ್ನು ಮಾಡಿದವರು; ಮೇಲೆ—ತಪ್ಪಮರಣಾನಂತರದಲ್ಲಿ; ಕೂಡುವರೆಂಬೊಡೆ, ಅದು, ಕೂಡದು—ಲಭಿಸುವದಿಲ್ಲ.

೯೬೭. ಪ್ರವೃತ್ತಿಯಂ—ವೃತ್ತಾಂತವನ್ನು; ಪತ್ತುವಿಟ್ಟು—ಬಿಟ್ಟು.

*[ಪ್ರವಿತ್ತನುಂ] †[ಭೋಗ]

ವ॥ ಅನಂತರಂ ರವಿಬಿಂಬ ಮಪರಾಂಭೋಧಿಗೆ ವಿಲಂಬಿಸುವುದುಂ॥

ಕಂ॥ ಜಳಜಭವಾಂಡಂ ಜಂಬೂ। ಫಳರಸದಿಂ ತೀವಿತೆಂಬಿನಂ ಜಗ
ಮುಂ ಕೋ। ಕಿಳನಯನ ರುಚಿರರುಚಿ ಕ। ನ್ಸೊಗ್ಗಳಿಸಿರೆ ಪರ್ವಿದುದು
ಸಾಂದ್ರಸಂಧ್ಯಾರಾಗಂ। ಆಸಂಧ್ಯಾಸಮಯದೊಳ್— ೯೬೮

ಕಂ॥ [ಬಳಿಕೆ ಪದಮುಂ] ಕಮಂಡಲು। ಜಳದಿಂದಂ ಕರ್ಚಿ ತೀ
ರ್ಚಿ ಸಂಧ್ಯಾಸಿಯುಮಂ। ಗಳಸೆಯ್ದಿ ಭಸ್ಮಕಯ್ಯಾ। ತಳದೊಳ್ಬಸುಸುಯ್ದು
ಮೆಯ್ಯನಿಕ್ಕಿದಳಾಗಳ್ ೯೬೯

ವ॥ ಇತ್ತ ಕೃತಸಂಧ್ಯಾವಂದನಂ ನರೇಂದ್ರ ನಾತ್ಮೀಯಪ್ರಕಲ್ಪಿತ
ಲತಾಪಲ್ಲವಶಯನತಲದೊಳ್ಕುಳ್ಳಿರ್ದು ಮನೋಭವವಿಜೃಂಭಿತಂಗಳಂ
ಮನದೊಳ್ಭಾವಿಸುತ್ತುಂ ವಿಸ್ಮಯಾಕ್ಷಿಪ್ತಚಿತ್ತ ನಿಂತೆಂದಂ॥ ೯೭೦

ಕಂ॥ ತರಳಿಕೆ ಯೆಂಬಲ್ಲಮ್ಮಯ। ಪರಿಚಾರಿಕೆ ಯೆತ್ತವೋಪ
ಳೆಲ್ಲಿರ್ಪಳೆಂ॥ ದರಸಂ ಜನಗೊಳ್ವುದುಮಾ। ದರದೆ ಮಹಾಶ್ವೇತೆ ಪೇಳ
ಲುದ್ಯತೆ ಯಾದಳ್॥ ಅದೆಂತೆನೆ— ೯೭೧

ಕಂ॥ ಮೊದಲೊಳ್ನಿನಗಾಂ ಪೇಳ್ದಮೃ। ತದಿ ನುದಯಿಸಿದಪ್ಸರೋಂ
ಗನಾನ್ವಯದೊಳ್ಪು। ಟ್ಟಿದಳಲ್ಲಿ ಮದನಮದವತಿ। ಮದಿರೇಕ್ಷಣೆ ಮ
ದಿರೆ ಯೆಂಬಕನ್ಯಾರತ್ನಂ॥ ೯೭೨

ಆಕನ್ನೆಯು ಕ್ರಮದಿಂ। ಸ್ವೀಕೃತಗಂಧರ್ವರಾಜ್ಯಮಹಿಮೋದಯ
ನ। ಪ್ರಾಕೃತ ನಿಜವಿಭವಕೃತಾ। ಧಿಃಕೃತ ಬುಧಜನಮನೋರಥಂ ಚಿ
ತ್ರರಥಂ॥ ೯೭೩

ಆವಿಭುಗಂ ತತ್ಪುರಕಾಂ। ತಾವಿಭವ ಮದೆಂತು ಮುಳ್ಳೊಡಂ ತ
ನಗೆ ಮದಿರಾ॥ ದೇವಿವೆಸರೆಸೆಯೆ ಮದಿರಾ। ದೇವಿಯೆ ಪಟ್ಟಕ್ಕೆ ತಾನೆ
ಮೊದಲೆನಿಸಿರ್ದಳ್॥ ೯೭೪

ಆ ದಂಪತಿಗಧಿಕ ಪ್ರೀ। ತ್ಯೋದಯಮೊದವಲ್ಕೆ ಪುಟ್ಟಿದ ಳ್ಭುವ
ನಜನಾ॥ ಹ್ಲಾದಂ ಜನಿಯಿಸುವಿನೆಗಂ। ಕಾದಂಬರಿಯೆಂಬ ಪೆಸರಕನ್ಯಾ
ರತ್ನಂ॥ ೯೭೫

ಒಡನುಂಡೊಡನಿರ್ದೊರ್ವಳೆ । ದೊಡನಾಡಿಗಳಾಗಿ ನೃತ್ಯಗೀತಂ ಮೊದಲಾ ॥ ಗೊಡನೊಡನೆ ಕಲ್ತು ಕಲಿಗಳ । ನೆಡೆವಿಡ ದಿರ್ವರ್ಗ್ಗಮಾಯ್ತು ಪರಮಪ್ರೇಮಂ ॥ ೯೩೬

ವ॥ ಅನಂತರಂ ಶೈಶವಮಂ ಪತ್ತುವಿಟ್ಟಿರ್ಪ್ಪುದು ಮಾಕಾದಂಬರೀದೇವಿಯುಂ ಮದೀಯ ಹತವೃತ್ತಾಂತಮಂ ಕೇಳ್ದತ್ಯಂತಶೋಕಾಕ್ರಾಂತೆಯಾಗಿ ॥ ೯೩೭

ವೃ॥ *[ಇರಲಿಂತಪ್ಪೊಂದು] ಶೋಕಾಕುಲತೆಯೊಳೆ ಮಹಾಶ್ವೇತೆ †[ಮತ್ತೊರ್ವನಂ ತಾಂ । ನೆರೆದೇ] ನಾನಿಂತು ಕನ್ಯಾವ್ರತದೊಳೆ ಕಳೆವೆಂ ಕಾಲಮಂ ತಂದೆಯಿಂತಾ । ನಿರದಾವಂಗೆನ್ನ ನೀಯಲ್ಬಗೆದು ಮನದೊಳಂತುಜ್ಜುಗಂಗೆಯ್ದೊಡಂ ಚೆ । ಚ್ಚರಮೆನ್ನೀಪ್ರಾಣಮಂ ತಾಂ ಬಿಡದಿರೆನೆನುತಂ ನಿಶ್ಚಯಂಗೆಯ್ದಳಾಗಳ್ ॥ ೯೩೮

ವ॥ ಅನ್ತು ಪಾರೂಷಯೌವನೆಯಪ್ಪ ಮಗಳನಿಶ್ಚಯಮಂ ಮದಿರಾಮಹಾದೇವಿಯುಂ ಮರಸುಚಿತ್ರರಥನುಂ ಕರ್ಣಪರಂಪರೆಯಿಂ ಪರಿಜನದತ್ತಣಿಂ ಕೇಳ್ದು ಪಿರಿದುಮಳಲ್ದು ಕ್ಷೀರೋದನೆಂಬ ಕಂಚುಕಿಯುಂ ಕರೆದೆನ್ನಲ್ಲಿಗಟ್ಟಿದೊಡಾತಂ ಬಂದು ॥ ೯೩೯

ಕಂ॥ ತನ್ನ ಮಹಾವ್ಯತಿಕರದಿಂ । ದಿನ್ನನ್ನವೆ ಬೆಂದವರ್ಗೆ ಮತ್ತೆ ಕಾದಂಬರಿಯಿಂ ॥ ದಂ ನೋವು ಬಂದುದದಱಿಂ । ದಿ *[ನ್ನನುವಿನೊಳಾನೆ] ಶರಣ ಮಾವ್ಯತಿಕರದೊಳ್ ॥ ೯೪೦

---

೯೩೬. ಒಡನಾಡಿಗಳ್—ಸಂಗಡಗಾತಿಯರು ; ಕಲ್ತು—ಕಲಿತು. ಇಲ್ಲಿಕಲ್ ಎಂಬಧಾತುವಿಗೆ ಭೂತಕಾಲದದು ಪ್ರತ್ಯಯಕ್ಕೆ ತುಕಾರಾದೇಶಬಂದು ಕಲ್ತು ಎಂದಾಯಿತು ಶಮ. ಸೂ. ೨೪೧.

೯೩೮. ಮಹಾಶ್ವೇತೆ ಇಂತಪ್ಪ ಒಂದು ಶೋಕಾಕುಲತೆಯೊಳ್ ಇರಲ್, ತಾಂ—ನಾನು ; ಮತ್ತೋರ್ವನಂ—ಅನ್ಯನನ್ನು ; ನೆರೆದು—ಸೇರಿ ; ಏಂ—ಏನುಪ್ರಯೋಜನವು ; ತಂದೆ—ತಂದೆಯು ; ಇಂ—ಇನ್ನುಮೇಲೆ ; ಆವಂಗೆ—ಯಾರಿಗಾದರೂ ; ಚೆಚ್ಚರಂ—ಬೇಗನೆ.

*[ಇರವಿಂಗಪ್ಪೊಂದು] †[ಮತ್ತಾಸೆಯುಂಸೆರಗೆ]

ವ॥ ಎಂದು ಜನನೀಜನಕರಟ್ಟಿದರೆಂದು ನುಡಿಯೆ—

ವೃ॥ ಗುರುಗಳ್ ಆವೇನನೊಂದಂ ಬೆಸಸಿದರದನೇ ಕೇಳ್ವುದಿ
ನ್ನೆನ್ನ ಜೀವಂ । ಬೆರಸಾನಿಂತಿರ್ಪ್ಪುದಂ ತಾಂ ಬಯಸುವ ಬಗೆಯೆಂತೆಂ
ದೊಡೆಂದಿಂತು ಕಾದಂ ॥ ಬರಿಗಾದಂ ಬುದ್ಧಿವೇಳ್ದಟ್ಟಿದೆ ನಿರವಧಿಕಪ್ರೇಮ
ದಿಂ ಸಾವಿದಲ್ಲಿಂ । ಬೆರಸತ್ತಲ್ಪೋದ ಳಂತಾಗಳೆ ತರಳಿಕೆಯುಂ ನೀವ್ರವೇ
ಳ್ತಂದಿರೀಗಳ್ ॥ ೯೮೧

ವ॥ ಎಂದು ಪೇಳ್ದಳನ್ನೆಗ ಮಿತ್ತ ಲಾಂಛನಜ್ವಲದಿಂ ಶೋಕಾನಲ
ದಗ್ಧಮಪ್ಪ ಮಹಾಶ್ವೇತಾಹೃದಯಮುಮಂ ವಿಡಂಬಿಸುವಂತೆಯುಂ ಮುನಿಕು
ಮಾರವಧಮಹಾಪಾತಕಮುಮಂ ತಾಳ್ದಿದಂತೆಯುಮಾಗಿ ॥ ೯೮೨

ಕಂ॥ ಜನಿಸಂ ಮುಚ್ಚಿರೆ ಕೃಷ್ಣಾ । ಜಿನ ಮವಿರಳಭಸ್ಮಧವಳ
ಮಗಜಾರಾವನ ಸ್ತನಮಂಡಳಮೊಪ್ಪಿದುದೆಂ । ಜಿನ ಮುದಯಿಸಿದುದು
ಮೃಗಾಂಕಮಂಡಲ ಮಾಗಳ್ ॥ ೯೮೩

ವ॥ ಅನ್ತು ನಿಖಿಲಲೋಕನಿದ್ರಾಮಂಗಲಕಲಶದಂತೆ ಕುಮುದಿನೀ
ಬಾಂಧವಂ ಗಗನಾಂಗಣದೊಳೆಸೆಯೆ ಸುಪ್ತೆಯಾದ ಮಹಾಶ್ವೇತೆಯುಂ
ನೋಡಿ ಚಂದ್ರಾಪೀಡಂ ಪಲ್ಲವಶಯನತಲದೊಳ್ ಮೆಯ್ಯನಿಕ್ಕಿ ಬೀಡಂನೆ
ನೆದು ॥ ೯೮೪

ಕಂ॥ ಈಯವಸರದೊಳ್ವೈಶಂ । ಪಾಯನನುಂ ಪತ್ರಲೇಖೆಯುಂ
ಭೂಪರುಮನಾ । ನೀಯವದಿ ನಗಲ್ಕೆನಿ । ತಾಯಸಮುಂ ಪಡುವರೆಂದು
ಚಿಂತಿಸುತಿರ್ದಂ ॥ ೯೮೫

೯೮೧. ಕಾದಂಬರಿಯನ್ನು ಕುರಿತು ಮಹಾಶ್ವೇತೆ ಹೇಳುತ್ತಾಳೆ—ಆಂ ಎನ್ನ ಜೀವದೊಡನೆ ಇಂತಿರ್ಪ್ಪುದಂ ; ತಾಂ—ನೀನು ; ಬಯಸುವಬಗೆ—ಅಪೇಕ್ಷಿಸುವರೀತಿಯು ; ಎಂತೆಂದೊಡೆ—ಹ್ಯಾಗೆಂದರೆ ; ಗುರುಗಳ್—ನಿನ್ನ ತಂದೆತಾಯಿಗಳು ; ಏನನೊಂದಂ ಬೆಸಸಿದರ್—ಯಾವದೊಂದನ್ನು ಆಜ್ಞಾಪಿಸಿದರೊ ; ಅದನೇ ಕೇಳ್ವುದು—ಅದನ್ನೇ ಕೇಳತಕ್ಕದ್ದು. ಅಂದರೆ ನಾನು ಬದುಕಲಿ ಎಂಬ ಅಪೇಕ್ಷೆಯಿದ್ದರೆ ನೀನು ನಿನ್ನ ತಂದೆತಾಯಿಗಳು ಹೇಳಿದಂತೆ ಕೇಳು ಎಂದಭಿಪ್ರಾಯವು.

೯೮೫. ಭೂಪರುಮಂ—ಸಂಗಡಬಂದಿದ್ದ ರಾಜರೂ ; ಏನಿತಾಯಸಮುಂ—ಎಷ್ಟು ಆಯಾಸವನ್ನು ; ಪಡುವರೊ—ಅನುಭವಿಸುವರೊ.

ವ॥ ಅಂತು ಚಿಂತಿಸುತ್ತಿರ್ದ್ದಿರುಳಂ ಕಳೆದು ಬೆಳಗಪ್ಪುದುಂ ಕೃತಪ್ರಾಭಾತಿಕನಿಯಮನಾಗೆ ಮಹಾಶ್ವೇತೆಯುಂ ಮಘಮರ್ಷಣನಿಯಮಜಪಂಗಳಂ ಮಾಡುತ್ತಿರ್ದ್ದಳನ್ನೆಗ ಮಿತ್ತ ಷೋಡಶವರ್ಷ *[ವಯಸ್ಕನುಂ] ಉದಾತ್ತಾಕಾರನುಂ ವಿಭಕ್ತಮಧ್ಯಾಕಾರನುಂ ವಿಪುಲವಕ್ಷಸ್ಸ್ಥಳನುಂ ದೀರ್ಘಾಯತಬಾಹುಯುಗಳನುಂ ಪರ್ಯುಷಿತಚಂದನಾಂಗರಾಗಧೂಸರೋರುದಂಡನುಂ ಕುಂಕುಮಾಂಗರಾಗಪಿಂಜರರೂಪನುಂ ಚಾಮೀಕರಶೃಂಖಲಾಕಲಾಪನುಂ ನಿಬಿಡನಿಯಮಿತ ಕಕ್ಷಬಂಧಾತಿರಿಕ್ತಪ್ರೇಂಖದ್ದುಕೂಲಪಲ್ಲವನುಂ ವಾಮಪ್ರಕೋಷ್ಠದೋಲಾಯಮಾನಮಾಣಿಕ್ಯವಲಯನುಂ ಕರ್ಣಾಭರಣವಿಕೀರ್ಯಮಾಣಕಿರಣೇಂದ್ರಚಾಪಪ್ರಭಾಜಾಲನುಂ ಅನವರತತಾಂಬೂಲಬದ್ಧರಾಗಾನುಕಾರಿ ಬಂಧುರಾಧರನುಂ ದೀರ್ಘಧವಳಲೋಚನನುಂ ಕನಕಪಟ್ಟಗ್ರಥಿತಪೃಥುಲಲಲಾಟಪಟ್ಟನು ಮಳಿಕುಲನೀಲಕುಟಿಲಕುಂತಳನುಂ ಅಗ್ರಾಮ್ಯಾಕೃತಿಯುಂ ರಾಜಕುಲಸೇವನಾತಿಚತುರನು ಮಪ್ಪಕೇಯೂರನೆಂಬ ಗಂಧರ್ವಕುಮಾರಂ ಬೆರಸು ತರಳಿಕೆ ಮಹಾಶ್ವೇತೆಯಲ್ಲಿಗೆಬಂದೀರ್ವ್ವರುಂ ನೂರಾವನತೋತ್ತಮಾಂಗರಾಗಿ ಪೊಡವಟ್ಟು ಕುಳ್ಳಿರ್ದ್ದರ್ ॥ ೯೮೬

ಕಂ॥ ನಾಡಾಡಿಯಲ್ತು ರೂಪಿನ । ಗಾಡಿ ಯಿದೆಲ್ಲಿರ್ದ್ದು ಬಂದುದೆನುತಂ ಚಂದ್ರಾ ॥ ಪೀಡನ ನತಿವಿಸ್ಮಯದಿಂ । ನೀಡುಂ ನೋಡುತ್ತ ಮಿರ್ದ್ದನಾ ಕೇಯೂರಂ ॥ ೯೮೭

ವ॥ ಆಗಳ್ಮಹಾಶ್ವೇತೆಯುಂ ನಿರ್ವರ್ತಿತಾನುಷ್ಠಿತೆಯಾಗಿ ತರಳಿಕೆಯಮೊಗಮಂ ನೋಡಿ—

---

೯೮೬. ವಿಭಕ್ತಮಧ್ಯಾಕಾರನುಂ—ಕೃಶೋದರನಾದಕಾರಣವೆ ವಿಭಾಗಿಸಲ್ಪಟ್ಟನಡುವಿನ ಆಕಾರವುಳ್ಳಂಥಾವನು; ನಿಬಿಡನಿಯಮಿತ—ಬಿಗಿಯಾಗಿ ಕಟ್ಟಲ್ಪಟ್ಟ; ಕಕ್ಷಾಬಂಧ-ನಡುಕಟ್ಟನ್ನು; ಅತಿರಿಕ್ತ—ಮೀರಿರುವ; ಪ್ರೇಂಖತ್—ಚಲಿಸುತ್ತಿರುವ; ದುಕೂಲಪಲ್ಲವನುಂ—ಮುಂಜೆರಗುಳ್ಳ.

೯೮೭. ನಾಡಾಡಿ—ಸಾಮಾನ್ಯವಾದದ್ದು; ಅಲ್ತು—ಅಲ್ಲ; ಗಾಡಿ—ಸೊಬಗು

ಕಂ॥ ನುಡಿದಾನಪ್ಪುದುದ ನೋಡಂ । ಬಡಿಸಿದೊ ಮತ್ಸಖಿಯು ನೆಂದೊಮೀತಂಗೀಗಳ್ ॥ ನುಡಿ ಪೋಗು ನೀನೆನುತ್ತೆ । ನ್ನೊಡನಟ್ಟಿದಳಲ್ತೆ ತನ್ನ ಮೀಣಾಧರನಂ ॥ ೯೮೮

ವ॥ ಎಂಬುದು ಮಾತನಂ ಬೆಸಗೊಳೆ—

ವೃ॥ ಮನಮಂ ನೋಡಲಿದೇಕೆ ತಮ್ಮ ಮನಮಂ ತಾಂನೋಡಲೇನಾಂ ತಪೋ । ವನದೊಳ್ನೋಟಲೆಗೊಂಡು ದುಃಖದೆ ತಪಂಗೆಯ್ಯುತ್ತಿರಲ್ಕತ್ತೆಯುಂ । ಮನನೊಳ್ತಾಂ ಸುಖದಿಂದ ಮಿಪ್ಪೆಳವಳೆಂಬುದ್ಯೋಗದಿಂ ದಕ್ಕನಿಂ । ತಿನಿತೊಂದಂ ನುಡಿದಪ್ಪುದ ಳ್ಪಿರಿದುಮುಂತೇನಪ್ಪುಲೇಂ ತಕ್ಕುದೋ ॥

ವ॥ ಎಂದಿನ್ನವೊದಲಾಗಿಕಾದಂಬರಿ ನುಡಿದನುಡಿಗಳಂ ಕೇಯೂರಕಂ ಬಿನ್ನವಿಸಲುದಂ ಕೇಳ್ದು ತನ್ನೊಳೆ ತಾನೆ ಭಾವಿಸಿ—

ಕಂ॥ ಬಂದಾನೆ ಪೇಳ್ದಪೆಂ ನಯು । ದಿಂದಲ್ಲಿಗೆ ತಕ್ಕುದೆಲ್ಲವುಂ ಮುನ್ನೀಂಪ್ಪೋ ॥ ಗೆಂದು ಕಳುಪಲ್ಕೆ ಪೋದಂ । ಮುಂದಾಕೇಯೂರಕಂ ನುವಿಲುಳಿತಹಾರಂ ॥ ೯೯೦

ವ॥ ಅನ್ನಾತಂ ಪೋಗೆ ಚಂದ್ರಾಪೀಡನನಿಂತೆಂದಳ್—

ವೃ॥ ಇದೆ ನಾರಿಪ್ಪುದು ರಾಜಧಾನಿ ಪಿರಿದುಂ ಚಿತ್ರಾವಸುಂ ಬಂದನೋ । ಳ್ಪುದು ನೀನೆನ್ನೊಡನಂದು ಮತ್ಸಖಿಗಮೊಂತುಂ ಬುದ್ಧಿಮೇಳಲ್ಕೆ

---

೯೮೮. ಬಡಂಬಡಿಸಿದೆ + ಬ = ಬಡಂಬಡಿಸಿದೊ—ಒಪ್ಪಿಸಿದೆಬೊ; ಈತಂಗೆ—ಈತನನ್ನು; ಅಟ್ಟಿದಳ್—ಕಳುಹಿಸಿದಳು. ಇಲ್ಲಿ ಈತಂಗೆ ಎಂಬುದು ಕರ್ಮಾರ್ಥದ ಚತುರ್ಥಿಯು. ಶಮ. ಸೂ. ೧೪೬.

೯೮೯. ತಮ್ಮ ಮನಮಂ ತಾಂನೋಡಲೇಂ—ತಮ್ಮ ಮನಸ್ಸನ್ನು ತಾವು ನೋಡಿ ಪ್ರಯೋಜನವೇನು; ಅಕ್ಕಂ—ಅಕ್ಕನಾದ ಮಹಾಶ್ವೇತೆಯು; ಅಂದು ದುಃಖದೆ ತಪಂಗೆಯ್ಯುತ್ತಿರಲ್—ನಾನು ದುಃಖದಿಂದ ತಪಸ್ಸನ್ನು ಮಾಡುತ್ತಿರುವಲ್ಲಿ; ಇವಳ್—ಕಾದಂಬರಿಯು; ತಾಂ—ತಾನು; ಮನದೊಳ್ ಸುಖದಿಂದಮಿಪ್ಪೆಳ್ ಎಂಬುದ್ಯೋಗದಿಂದೆ—ಮನಸ್ಸಿನಲ್ಲಿ ಸಂತೋಷವಾಗಿರುವಳೆಂಬ ಪ್ರೋತ್ಸಾಹದಿಂದ; ಪಿರಿದುಂ—ಬಹಳ; ಇನಿತೊಂದಂ ನುಡಿದಪ್ಪುದಳ್; ಉಂತೆ—ನಿರರ್ಥಕವಾಗಿ; ಅಪ್ಪುಳ್ ತಕ್ಕುದೋ?

ವೇ ॥ ಳ್ಪುದು ಮತ್ಪ್ರಾಣಸಮಾನೆ ಯಾಕೆ ನಿಜದಿಂ ದಸ್ವಸ್ಥೆ ಗಂಧರ್ವ
ಲೋ । ಕದೊ *[ಳಿಂದಕ್ಕೆ] ಭವದ್ವಿಲೋಕನಸುಖಂ ಭೂಪಾಲವಿದ್ಯಾ
ಧರಾ ॥ ೭೭೧

ವ॥ ಅದಲ್ಲದೆಯುಂ ಮದೀಯಪ್ರಾರ್ಥನೆಯುಂ ನಿರರ್ಥಕಂಮಾಡದಿಂ
ದು ಬಂದಲ್ಲಿ ವಿಶ್ರಮಿಸಿ ನಾಳೆಬೀಡಿಂಗೆ ಬಿಜಯಂಗೆಯ್ವುದೆಂದು ಮತ್ತಮಿ
ತೆಂದಳ್ ॥ ೭೭೨

ಕಂ॥ ನಿನ್ನ ನಕಾರಣಬಾಂಧವ । ನಂ ನೋಡಿಯೆ ಶೋಕಮಾಱಿಸು
ದು ಸುಜನರ ಲೋ ॥ ಕೋನ್ನತರ ಪರಹಿತರನಿ । ಮ್ಮನ್ನರ ಬರವಾಗ್ಗ
ಸುಖಮ ನುತ್ಪಾದಿಸದೋ ॥ ೭೭೩

ವ॥ ಎಂದು ನುಡಿದೊಡೆ—

ಕಂ॥ ಇನಿತಂ ಪ್ರಾರ್ಥಿಸ *[ಲೇಂನೀ । ನಿನಿತೆಸಗುವು] ದೆಂದು ಬೆಸ
ಸುವುದು ಸಾಲ್ಗುಂನೀ ॥ ಮೆನಗೆಂದು ವಿನಯದೊಳ್ತಾ । ನಿನಿ ಪಿಂತನೆ
ನಡೆದನಂದು ಚಂದ್ರಾಪೀಡಂ ॥ ೭೭೪

ವ॥ ಅನ್ನುಬರುತ್ತಂ ಹೇಮಕೂಟಮನೆಯ್ದಿ ವಿಚಿತ್ರಮೆನಿಸಿದ
ಚಿತ್ರರಥರಾಜಧಾನಿಯುಂ ಪೊಕ್ಕು ಸಪ್ತಕಕ್ಷ್ಯಾಂತರಂಗಳ ಕಾಂಚನಮಯ
ತೋರಣಂಗಳಂ ನುಸುಳ್ದು ಕನ್ಯಾಂತಃಪುರದ್ವಾರಮನೆಯ್ದೆ ವಪ್ಪಾ
ಗಳ್ ॥ ೭೭೫

ಕಂ॥ ಪರಿತಂದು ಮಹಾಶ್ವೇತಾ । ನಿರೀಕ್ಷಣೋತ್ಸುಕದೆ ಳೆಮಗೆ
ತಮಗೆನುತಂ ತ ॥ ಚ್ಚರಣಸರಸಿರುಹ ಯುಗದೊ । ಳ್ಸರಭಸ ಮಿದಿರೆಱ
ಗಿದ ಪ್ರತೀಹಾರಕಿಯರ್ ॥ ೭೭೬

ವ॥ ಆಗಳರಸನುಂ ತತ್ಪ್ರತೀಹಾರಿಕಾ ಜನೋಪದಿಶ್ಯಮಾನ ಮಾ
ರ್ಗನಾಗಿಪೊಕ್ಕು ನೋಳ್ಪನ್ನೆಗಮಲ್ಲಿ ॥ ೭೭೭

---

೭೭೧. ಇದೆ—ಇದೊ; ಸಾರೆ—ಸಮೀಪದಲ್ಲಿ; ಬುದ್ಧಿವೇಳಲ್ಕೆ ವೇಳ್ಪುದು—
ನೀನು ಬುದ್ಧಿಯನ್ನು ಹೇಳಬೇಕು; ಅಸ್ವಸ್ಥೆ—ಮನೋವಿಕಾರವುಳ್ಳವಳು; ಇಂದು
ಗಂಧರ್ವಲೋಕದೊಳ್ ಭವದ್ವಿಲೋಕನಸುಖಂ ಅಕ್ಕೆ ಎಂದನ್ವಯವು.

*[ದಂನ್ವಸ್ಟ್ರ್ಯ] †[ಳೆದಾರ್ಕೆ]

ವೃ॥ ಇದು ನಾರೀಮಯಮಪ್ಪ ಲೋಕ ಮಿದು ಬೇಱೊಂದಂಗನಾದ್ವೀಪಮಿಂ । ತಿದು ನಿಷ್ಪೂರುಷಜೀವಲೋಕ ಮಿದು ಸರ್ಗಕ್ಕೆಂದು ಪದ್ಮೋದ್ಭವಂ ॥ ಸುದತೀರತ್ನಸಮೂಹಮಂ ಪದಪಿನಿಂ ವೈಚಿತ್ರ್ಯ ಭಂಡಾರಮ । ಪ್ಪುದೆನ ಲ್ಸಂದಣಿಸಿರ್ದ ಸುಂದರಿಯರಂ ಕಂಡಂ ನರೇಂದ್ರಾತ್ಮಜಂ ॥ ೯೯೮

ಕಂ॥ ಭುವನಾಂತರಮಂ ಸಿಂಪಿಸು । ವಪ್ರೋಲಾಶಾವನಿತೆಯರುಮನೋಲಾಡಿಸುವಂ ॥ ತೆಪ್ಪಿ ಲೆಸೆದ ರಂಗನೆಯರು । ಣ್ಮುವ ನಿಜಲಾವಣ್ಯರಸದ ಪೆರ್ವೊನಲಿಂದಂ ॥ ೯೯೯

ವ॥ ಅನ್ತು ವದನದ್ಯುತಿಯಿ ನಿಂದುಬಿಂಬವೃಷ್ಟಿಸುರಿವಂತೆಯುಂ ಅಪಾಂಗವಿಕ್ಷೇಪಂಗಳಿಂ ಕುವಲಯವನವಿಕಾಸವಾದಂತೆಯುಂ ಕಪೋಲತಲಂಗಳಬೆಳಗುಗಳಿಂ ಮಣಿದರ್ಪಣಂಗಳ್ಪೊಳೆವಂತೆಯುಂ ಭ್ರೂಲತಾವಿಭ್ರಮಂಗಳಿಂ ಕಾಮುಕಾರ್ಮುಕವಿಸರಂ ಪಸರಿಸಿದಂತೆಯುಂ ಕೇಶಕಲಾಪಾಂಧಕಾರದಿಂ ಕಾರಿರುಳ್ಕವಿದಂತೆಯುಂ ಸುರಭಿನಿಶ್ವಾಸಂಗಳಿಂ ಮಲಯಮಾರುತಂ ತೀಡಿದಂತೆಯುಂ ಮುಗುಳ್ನಗೆಯಬೆಳಗುಗಳಿಂ ವಸಂತಸಮಯ ಮಾದಂತೆಯುಂ ಕರತಲರಾಗದಿಂ ಕೆಂದಾವರೆಗಳಲರ್ದಂತೆಯುಂ ಕರರುಹಕಿರಣಂಗಳಿಂ ಕುಸುಮಾಯುಧಶರಶತಂಗಳ್ ಸುರಿವಂತೆಯುಂ ಮಾದುದಂತುಮಲ್ಲದೆಯುಂ ॥ ೧೦೦೦

ಕಂ॥ ಮಣಿಮಾಲಾರಾಜಿತ ಭೂ । ಷಣರುಚಿ ರುಚಿರೇಂದ್ರಚಾಪಲತೆಗಳ್ಗಗನಾಂ । ಗಣದೊಳ್ಪೊಳೆಯಲ್ಸುತ್ತುಂ । ಕುಣಿವುವು ನಲಿದಾಡಿ ಗೃಹಮಯೂರಸಿಕಾಯಂ ॥ ೧೦೦೧

ವೃ॥ ಕಡೆಗಣ್ಕರ್ಣಾವತಂಸಂ ಕರತಲರುಚಿ ಲೀಲಾರವಿಂದಂ ಕುಚಂ ಕ । ನ್ನಡಿ ಪಾದಾಂಭೋಜರಾಗಂ ಮಿಸುಪಲತೆಗೆ ಮಂದಸ್ಮಿತಂ ಚಂದನಂ ಮಂ । ಲ್ನುಡಿ ವೀಣಾನಾದ ಮಂಗಪ್ರಭೆ ಪೊಸದುಗುಲಂ ಪಕ್ವಬಿಂಬೋಷ್ಠ

---

೯೯೮. ಪದ್ಮೋದ್ಭವಂ—ಬ್ರಹ್ಮನು; ಸರ್ಗಕ್ಕೆಂದು—ನಿರ್ಮಾಣಮಾಡುವುಗಾಗಿ; ಸುದತೀ ರತ್ನಸಮೂಹಮಂ ವೈಚಿತ್ರ್ಯಭಂಡಾರಂ ಎಂದನ್ವಯವು.

ರಾಗಂ । ಕಡುಚೆಲ್ವಾದಂಗರಾಗಂ ಚರಣನಖಮಯೂಖಾಳಿ ಪುಷ್ಪೋಪಹಾರಂ ॥ ೧೦೦೨

ವೃ॥ ಲಲನೆಯರ್ಗಂಗರಾಗಮದು ದುರ್ವಹ ಮಂಶುಕಭಾರಮಂಗಸಂ । ಚಲತೆಗೆ ಕಾರಣಂ ಕುಸುಮಮಾಲಿಕೆಯುಂ ಪ್ರೋಜೆ ಪುಷ್ಪದಾಮಮೋ ॥ ಬಲೆ ನಡೆಗಡ್ಡಿ ಕಣ್ಮಲರ್ಗೆ ಕಾಡಿಗೆ ಬಿಣ್ಣಿತು ಪಾದಪಂಕಜ । ಕ್ಕಲತೆಗೆ ಭಾರಮೆಂದೊಡಱಿಯೆಂ ಪೊಗಳಲ್ಸುಕುಮಾರವೃತ್ತಿಯಂ ॥ ೧೦೦೩

ಕಂ॥ ಹಾರದ ಭಾರಮು ನದನೇಂ । ಸೈರಿಸುವುವೆ ತನು ಲತಾಂಗಿಯಕ್ಕರ್ಗಳ ಕಬರೀ ॥ ಭಾರಕ್ಕಂ ಘನಕುಚಯುಗ । ಭಾರಕ್ಕಂ ಬಳ್ಕಿಕರಮೆ ಬಡನಡು ನಡುಗುಲ್ ॥ ೧೦೦೪

ಕಲಲೆಂದತಿ ಕೌತುಕದಿಂ । ದಲರ್ಗಟ್ಟುವೆ ವೆಂಬದೊಂದು ಸಾಹಸ ಮಂತಿ ॥ ಕ್ಕಲರಾಯ್ವ ಪದದೊಳೆರಡನೆ । ಯಲರ್ಗಂ ಕೈನೀಡಿ ಸೇದೆವಡುವ ಸ್ವರ್ತಿಯರ್ ॥ ೧೦೦೫

ವ॥ ಮತ್ತಮತ್ತಿತ್ತ ಪುಗುತಪ್ಪರ್ಲ್ಲಿ ಲವಲಿಕೆಯುಂ ಕೇತಕೀಧೂಳಿಯೊಳಾಲವಾಲಮಂ ಸಮೆಯಲುಂ ಸಾಗರಿಕೆಯುಂ ಗಂಧೋದಕಕನಕದೀರ್ಘಿಕೆಗಳೊಳ್ ರನ್ನದಮಳಲ್ಗಳಂ ಸುರಿಯಲುಂ ಮೃಣಾಳಿಕೆಯುಂ ಕೃತ್ರಿಮಕಮಲಿನಿಯೊಳಾಡುವ ಜಕ್ಕವಕ್ಕಿಗಳ ಮೇಲೆ ಕುಂಕುಮರಜಮಂ ಕೆದಱಲುಂ ಮಕರಿಕೆಯುಂ ಗಂಧಪಾತ್ರಂಗಳೊಳ್ ಕರ್ಪೂರರಸಮಂ ಊಡಿ ವಾಸಿಸಲುಂ ರಜನಿಕೆಯುಂ ತಮಾಲವೀಧಿಯ ನಮುರ್ದಕತ್ತಲೆಯೊಳ್ ಮಾಣಿಕದ ಸೊಡರ್ಗಳಂ ಬೆಳಗಲುಂ ಕುಮುದಿಕೆಯುಂ ಗಿಳಿ ಪಾಯದಂತು ದಾಡಿಮೀಫಲಂಗಳ ಮೇಲೆ ಮುತ್ತಿನ ಝುಂಪಾಳಂಗಳಂ ಕವಿಯಲುಂ ನಿಪು

೧೦೦೩. ಅಂಗಸಂಚಲತೆಗೆ—ಶರೀರಶ್ಲೋಭೆಗೆ ; ಬಿಣ್ಣಿತು.—ಭಾರ.

೧೦೦೫. ಕಲಲೆಂದು—ಅಭ್ಯಾಸಮಾಡಬೇಕೆಂದು; ಅತಿಕೌತುಕದಿಂ—ಅತ್ಯಂತ ಕುತೂಹಲದಿಂದ; ಅಲರ್ಗಟ್ಟುವೆವೆಂಬಸಾಹಸಂ—ಹುವ್ವವನ್ನು ಕಟ್ಟುತ್ತೇವೆಯೆಂಬ ಸಾಹಸವು; ಅಂತಿರ್ಕೆ—ಹಾಗಿರಲಿ ; ಅಂದರೆ ಹುವ್ವನ್ನು ಅತಿಕೋಮಲೆಯರಾದ್ದರಿಂದ ಎಂದಿಗೂ ಕಟ್ಟಲಾರರೆಂದಭಿಪ್ರಾಯವು.

೧೦೦೬. ಊಡಿ—ಸವರಿ ; ವಾಸಿಸಲ್—ವಾಸನೆಯನ್ನುಂಟುಮಾಡುವದಕ್ಕೆ ;

ಣಿಕೆಯುಂ ಮಣಿಸ್ತಂಭಂಗಳೊಳ್ ರಂಜಿಸುವ ಸಾಲಭಂಜಿಕೆಯ ಕುಚಂಗಳೊಳ್ ಕುಂಕುಮರಸದಿಂ ಪತ್ರಭಂಗಂಗಳಂ ಚಿತ್ರಿಸಲುಂ ಉತ್ಪಲಿಕೆಯುಂ ಕದಳೀಗೃಹಮರಕತವೇದಿಯುಂ ಕಮಲದಳಂಗಳಿಂ ತೊಡೆಯಲುಂ ಕೇಸರಿಕೆಯುಂ ವಕುಳಕುಸುಮಮಾಲಾಮಂಟಪಂಗಳಂ ಮದಿರಾರಸದಿಂ ಸಿಂಪಿಸಲುಂ ಮಾಲತಿಕೆಯುಂ ಕಾಮದೇವಗೃಹದ ದೋಲಗಶಾಲೆಯುಂ ಸಿಂದೂರರೇಣುಗಳಿಂ ಬೆಳರ್ಗಂಪಂ ಮಾಡಲುಂ ನಳಿನಿಕೆಯುಂ ಭವನಕಲಹಂಸಂಗಳ್ಗೆ ಕಮಲಮಧುರಸವ ನೆಱೆಯಲುಂ ಕದಳಿಕೆಯುಂ ಧಾರಾಗೃಹಕ್ಕೆ ಗೃಹಮಯೂರಂಗಳ ನೊಯ್ಯಲುಂ ಕಮಲಿನಿಯುಂ ಜಕ್ಕವಕ್ಕಿಗಳಂ ಮೃಣಾಳಕ್ಷೀರರಸಮಂ ಕುಡಿಯಿಸಲುಂ ಚೂತಲತಿಕೆಯುಂ ಪಂಜರದ ಗಂಡುಕೋಗಿಲೆಗಳ್ಗೆ ಚೂತಾಂಕುರದ ಕುಟುಕನಿಕ್ಕಲುಂ ಪಲ್ಲವಿಕೆಯುಂ ಭವನಹರಿಣಂಗಳ್ಗೆ ಮರೀಚಪಲ್ಲವದಳಂಗಳಂ ನೀಡಲುಂ ಲವಂಗಿಕೆಯುಂ ಚಕೋರಪಂಜರಂಗಳೊಳ್ ಪಿಪ್ಪಲೀತಂಡುಲಂಗಳ ಕುಟುಕಂ ಸೂಸಲುಂ ಮಧುಕರಿಕೆಯುಂ ಪೂದೊಡಿಗೆಯುಂ ಮಾಡಲುಂ ಮಯೂರಿಕೆಯುಂ ಕಿನ್ನರಮಿಥುನಂಗಳಂ ಸಂಗೀತಶಾಲೆಗೆ ಕಳುಪ್ಪಲುಂ ಕಂದಳಿಕೆಯುಂ ಜೀವಂಜೀವಕಮಿಥುನಂಗಳಂ ಕ್ರೀಡಾಪರ್ವತಮ ನೇಱಿಸಲುಂ ಹರಿಣಿಕೆಯುಂ ಶುಕಸಾರಿಕೆಗಳ ನೋದಿಸಲುಂ ಪೆಸರ್ವೆಸರೊಳೆ ಕರೆದು ಪೇಳ್ವ ಮನೋಹರಾಲಾಪಂಗಳಂ ಕೇಳುತ್ತಂ ಪೋಗೆವೋಗೆ ॥ ೧೦೦೬

ಕಂ॥ ಒದವಿದ ನಿರ್ಭರಯೌವನ । ಮದದಿಂ ಮೆಯ್ಮಱೆದು ಕಂಭ
ಮೆಂದು ಮಣಿಸ್ತಂ ॥ ಭದ ರುಚಿಯ ನಲಘುಕುಚಭಾ । ರದೆ ಜೋಲ್ದು
ಮುಳುಗಿ ನಗಿಸಿದಕ್ಕೆಳದಿಯರಂ ॥ ೧೦೦೭

ವೃ॥ ಸ್ಫಟಿಕದ ಭಿತ್ತಿಯೊಳ್ಪೊಳೆವುತಿರ್ದ ನಿಜಪ್ರತಿಬಿಂಬದೊಳ್ಮ
ನಂಗೊಳೆ ನುಡಿದೇಕೆ ಪೆರ್ಚ್ಚುಗಿಸುವ ವ್ಯಸನಾಂಚಲವೆಂದು ಮುಟ್ಟಿ ಕಾ।
ಪಳಗಳ ಕಾಂತೆಯುಂ ತೆರೆದಿದೇನೆ ಬಳಲ್ದ ಗವಾಕ್ಷರಂಧ್ರದೊಳ್ಪೊಳಗ
ನಿನಾದಿ ಎಂದು ಬಗೆದಿಂತ ಕರಾಬ್ಜಮನಟ್ಟಿ ಪೊಯ್ವುವಳ್ । ೧೦೦೮

ರೂಪಾಸಂಗಳಂ—ಗೌಸು; ಸಿಂಪಿಸಲುಂ—ಚಿಮುಕಿಸುವದಕ್ಕೆ; ಜೀವಂಜೀವಕ—ಚಕೋರ.

ಕಂ॥ ಪಿರಿದುಂ ಬೆಳಲ್ಕೆಯಿಂ ಚಾ । ಮರಮದುಕರದಿಂದೆ ಸುಗ್ಗ್ವ ಯುಂ ನಖಕಿರಣೌ ॥ ತ್ಕರಮನೆ ಚಾಮರಮೊಂದೆಲೆ । ಸರೋಜಮುಖಿ ಬೀಸಿನಗಿಸದಿರ್ಕ್ಕೆಳದಿಯರಂ ॥ ೧೦೦೯

ವ॥ ಎಂದಿವು ಮೊದಲಾಗಿ ಪರಿಹಾಸಜಲ್ಪಿತಂಗಳಂ ಕೇಳುತ್ತಂ ಪೋಗಲುಪವನಲತೆಗಳಂ ದುದಿರ್ದಲರ ಧೂಳಿಯಿಂ ಪುಳಿಲ್ಗಟ್ಟಿದಂತೆಯುಂ ಕೋಗಿಲೆಗಳೆಡೆವಿಡದುಗುರ ಮೊನೆಯೊಳಳ್ಳಿರಿಯೆ ಸುರಿವ ಸಹಕಾರಫಲರಸದ ಸೋನೆಗಳಿಂ ದುರ್ದಿನಂ ಮಸಗಿದಂತೆಯುಂ ವಕುಳದ ಮರಂಗಳೆಲರಲೆಪದಿಂ ಕೆದಱುವ ಸೀಧುಧಾರಾಪ್ರಸರದಿಂ ತುಂತುರ್ಮ್ಮಸಗಿದಂತೆಯುಂ ಪೂವಲಿಗೆದರ್ದ ಸಂಪಗೆಯೆಸಳ ಪ್ರಸರದಿಂ ಸುವರ್ಣದ್ವೀಪಮಂತೆಯುಂ ಎಡೆಸೂಡುವೆಳೆವೆಂಡಿರ ಮೆಲ್ಲಡಿಗಳಲತಗೆಗಳಿಂ ರಾಗಸಾಗರಂ ಕವಿದಂತೆಯುಂ ಅಂಗರಾಗಾಮೋದಂಗಳಿಂ ಪಾರಿಜಾತಜನ್ಮದಿನದಂತೆಯುಂ ತೊಳಗುವ ಮುತ್ತಿನ ತೊಡವುಗಳ ಬೆಳಗುಗಳಿಂ ಬೆಳ್ದಿಂಗಳಾದಂತೆಯುಂ ಕೃಷ್ಣಾಗರುಪತ್ರಭಂಗಂಗಳಿಂ ನೀಲಾಯಮಾನಮುಂ ಕರ್ಣಪೂರಾಶೋಕಪಲ್ಲವಂಗಳಿಂ ಲೋಹಿತಾಯಮಾನಮುಂ ಚಂದನಲೇಪಂಗಳಿಂ ಧವಳಾಯಮಾನಮುಂ ಶಿರೀಷಕುಸುಮಾಭರಣಂಗಳಿಂ ಹರಿತಾಯಮಾನಮುಮಪ್ಪಮಾರ್ಗಮಂ ನೋಡುತೆ ಬರ್ಪನ್ನೆಗಮಲ್ಲಿ ॥ ೧೦೧೦

ವೃ॥ ಎರಡುಂ ಪಕ್ಕದೊಳೋಲಗಕ್ಕೆ ಸವಹಿಂ ಬಂದಿರ್ದ್ದ ಕಾಂತಾಜನೌ । ತ್ಕರ ರತ್ನಾಭರಣಪ್ರಭಾ ಪ್ರಸರಮಾವಂತಳ್ತು ತದ್ವೀಧಿಕಾಂ ॥ ತರದೊಳ್ಪೆರ್ಚ್ಚಿನಲಂದದಿಂ ಪರಿಯೆ ಕಂಡಂತಾಪ್ರಭಾಪೂರದೊ । ಳ್ಭರದಿಂ ತಾನಿದಿರೀಸುವಂತೆ ನಡೆದಂ ಭೂಪಾಲವಿದ್ಯಾಧರಂ ॥ ೧೦೧೧

ಕಂ॥ ರಾಮಾಭಿರಾಮಮುಮಂ ಜಗ । ತೀಮಂಡನಮುಂ ಮಣಿಪ್ರಭಾ

೧೦೧೦. ಸೀಧುಧಾರಾ—ಪುಷ್ಪರಸಧಾರೆ ; ಜನ್ಮದಿನದಂತೆ—ಹುಟ್ಟಿದಹಬ್ಬದಂತೆ.

೧೦೧೧. ಪೊನಲಂದದಿಂ—ಪ್ರವಾಹದಹಾಗೆ; ಇದಿರೀಸುವಂತೆ—ಎದುರಾಗಿನುಗ್ಗಿ ಈಜಾಡುವಹಾಗೆ.

೧೦೧೨. ಮಣಿಪ್ರಭಾ—ರತ್ನಕಾಂತಿಯ ; ಪ್ರೇಂಖಿತ—ಪ್ರಸರಣವೆ ; ರಥ್ಯಾಮಂಡನಂ—ಮಾರ್ಗಾಲಂಕಾರವಾಗಿಉಳ್ಳ ; ವಿಚಿತ್ರ—ನಾನಾಪ್ರಕಾರಗಳಾದ; ರತ್ನಾತಪಮಂ—ರತ್ನಕಾಂತಿಯುಳ್ಳ.

ಪ್ರೇಂಖಿತ *[ರ ॥ ತ್ಯಾಮಂಡನಮಂ] ಕಂಡಂ । ಶ್ರೀಮಂಟಪಮಂ ವಿಚಿತ್ರ †[ರತ್ನಾ] ತಪಮಂ ॥ ೧೧೧೨

ವ॥ ಆಮಣಿಮಯಮಂಟಪಮಧ್ಯಭಾಗದೊಳನೇಕಕನ್ಯಕಾಪರಿಜನವೃತೆಯಾಗಿ—

ವೃ॥ ಪೊಣೆಯುತ್ತಿರ್ಪ್ಪ ಮಹಾವರಾಹವದನೋದ್ಯ *[ದ್ದಂಷ್ಟ್ರಮಂ] ನೆಮ್ಮಿ ನಿಂ। ದಳೊ ಭೂಕಾಂತೆ ಯೆನಲ್ಕೆ ನೀಲವಸನಪ್ರಚ್ಛನ್ನ ಪರ್ಯಂಕಮಂ ॥ ಪಳದೊಳ್ಪೆಸೆದಿರ್ದ್ದ ಕೌಳುಡೆಯ ನೊಂದಂ ನೆಮ್ಮಿ ಕುಳ್ಳಿರ್ದ್ದ ಕೋ। ಮಳೆಯಂ ದೂರದೆ ನೋಡಿಕಂಡ ನರಸಂ ಕಾದಂಬರೀದೇವಿಯಂ ॥ ೧೧೧೩

ಉರಗನಿಕಾಯ ದಿಕ್ಪತಿನಿಕಾಯ ನಿಲಿಂಪನಿಕಾಯ ಮೆಲ್ಲಮಾ । ದರದೊಳೆ ತಮ್ಮತಮ್ಮ ನಿಳಯಕ್ಕಿರದೊಯ್ದಪ ರೊಲ್ದು ಕನ್ನೆಯಂ ॥ ಪಿರಿದುಮೆಸಲ್ಕೆ ಪರ್ಯ್ಯಮಣಿಕುಟ್ಟಿಮ ಭಿತ್ತಿಸಮೂಹಮಂಟಪ್ರೋ । ಪರಿಮತಲಂಗಳೊಳ್ಪೊಗಯಿಸಿರ್ದ್ದುದು ರೂಪಮನಿತ್ತಾಂಶುವಕ್ತ್ರಯಾ ॥ ೧೧೧೪

ಕಂ॥ ಮಂಟಪ ಮುಪರಿಮತಲದೊ। ಳ್ಕಂಡರಿಸಿದ ಖಚರಮಂಡಲಂ ಪಡೆದಬಲಾ । ಮಂಡಲಮಂ ಗಗನಕ್ಕೊಯ್ದ । ಗೊಂಡೊಯ್ದಪುದೀಗಳೆಂಬಿನಂ ಸೊಗಯಿಸುಗುಂ ॥ ೧೧೧೫

೧೧೧೩. ದಂಷ್ಟ್ರಮಂ—ಕೋರೆದಾಡೆಯನ್ನು; ನೆಮ್ಮಿ—ಅವಲಂಬಿಸಿ; ದಂಷ್ಟ್ರಶಬ್ದವನ್ನು ಈ ಕವಿಯು ೬೦೭ನೇ ಪದ್ಯದಲ್ಲಿ ನಪುಂಸಕಲಿಂಗವಾಗಿ ಪ್ರಯೋಗಿಸಿರುವನು; ಕೌಳುಡೆ—ದಿಂಬು.

*[ರಾ । ದ್ವಾಮಂಡನಮಂ] †[ಕರ್ಕಾ]

ಇತಿ ಶ್ರೀನಾಗವರ್ಮವಿರಚಿತಮಪ್ಪ ಕರ್ನಾಟಕ
ಕಾದಂಬರಿಯೊಳ್ ಪ್ರಾಚೀನಕಾದಂಬರೀವರ್ಣನಂ
ಪೂರ್ವಭಾಗಂ ಸಮಾಪ್ತಂ.

ಮಂಗಳಂ.

KARNATAKA

KÁDAMBARI.

ಕರ್ಣಾಟಕ

ಕಾದಂಬರಿ.

ಉತ್ತರ ಭಾಗ.

ಕಂ॥ ಭುವನತ್ರಯಮುಮಂ ನೋಡ । ಲ್ಕವತರಿಸಿದುದಾಗವೇಳ್ಕು ಮಿಾಕಾಂತೆಯನೆಂ ॥ ಬವ್ರೊಳೆಸೆದು ತೋಱಿದುದು ಮಣಿ । ಭವನಾಂತರದೊಳ್ವಿಚಿತ್ರಚಿತ್ರಪ್ರಕರಂ ॥ ೧

ಹೃದಯದೊಳಗಿಟ್ಟುಕೊಂಡುದೊ । ಪದಪಿಂ ಕಾಮಿನಿಯನೆನೆ ಮಣಿಸ್ತಂಭಸಮೂ ॥ ಹದೊಳೆಲ್ಲಮೆಯ್ದೆ ಮಾತ್ತೊರ್ಗಳ । ಗಿದುದಾಗಳ್ ರೂಪು ಚಿತ್ರರಥನಂದನೆಯಾ ॥ ೨

ಕೂಡಿ ಮಣಿಭೂಷಣಧ್ವನಿ । ಗಾಡುವ ಸೋಗೆಗಳ ಪರೆದಪೀಲಿಯ ಕಣ್ಣಿಂ ॥ ಮಾಡವೆ ಕನ್ಯಕೆಯುಂ ನಡೆ । ನೋಡಲ್ಕಸ್ದೆಱೆದುದೆಂಬಿನಂ ಸೊಗಯಿಸುಗುಂ ॥ ೩

ರಮಣೀರತ್ನಮನಾಗಳ್ । ಎವೆಯಿಕ್ಕದೆ ನೋಳ್ಪ ಬಯಕೆಯಿಂ ಪಡೆದರೊ ತಾ ॥ ಮೆವೆಯಿಕ್ಕದ ಕಣ್ಗಳನೆನ । ಲೆವೆಯಿಕ್ಕದೆ ನೋಡುತಿರ್ದುದಬಲಾನೀಕಂ ॥ ೪

---

೩. ಪೀಲಿಯಕಣ್ಣಿಂ—ನವಿಲುಗರಿಯ ಕಣ್ಣಿಂದ; ಮಾಡವೆ—ಉಪ್ಪರಿಕೆಯು.

೪. ಕೆದಱಿದುವು—ಎರಚಿದವು.

ಕಂ॥ ಪಿರಿದುಂ ನಖವಿವರದೆ ನೆ । ತ್ತರನೆತ್ತಂ ಕಾರಿದಪ್ಪುವೋ ಪೆಲ್ಲಡಿಗಳ್ ॥ ತ್ತರಿಸಿದಪ್ಪುವೊ ವಿದ್ರುಮರಸ । ತರಂಗಿಣಿಯುನೆನಿಸಿ ಕೆದರಿದುವು ಕೆಂಬೆಳಗಂ ॥ ೫

ವೃ॥ ಚರಣಾಲಕ್ತಕರಾಗಪಾಟಲಿತ ಲಾವಣ್ಯಾಂಬುಧಾರಾಳಿಯೋ । ಚರಣಾಂಭೋರುಹಯುಗ್ಮನಿರ್ಗಳಿತ ರಾಗೋದ್ಯನ್ಮಯೂಖಾಳಿಯೋ ॥ ಚರಣಾಲಂಕರಣ ಸ್ಫುರದ್ರುಚಿರಮಾಣಿಕ್ಯಾಂಶುಜಾಲಾಳಿಯೋ । ಪಿರಿದುಂ ತಾನೆನಲೇಂ ಪದಾಂಗುಳಿಗಳೊಪ್ಪಂಬೆತ್ತುವೋ ಕಾಂತೆಯಾ ॥ ೬

ಕಂ॥ ಇಳೆಯುಂ ಪೊಸನುಣ್ಬೆಳಗಿನ । ಬಳಗದೆ ಬಾಸಣಿಸುತಿರ್ದ್ದುವಗ್ಗಲಿಸಿ ಧರಾ ॥ ತಳತರಳತಾರಕಾವಳಿ । ಗಳವೆನಲಾ ಚಂದ್ರಮುಖಿಯ ಚರಣನಖಂಗಳ್ ॥ ೭

ಪವೆದಪ್ಪಿದುದೊ ಪೆಱನೆರ್ನ್ನ । ಇವಂತುವುಸೂಕಿದುದೊ ಪುಳಕಮಂ ಸೋಂಕಿಂ ತಾ ॥ ಳ್ದುದೆನೆ ಸುಣ್ಣದಿರ್ಗಳಿನೆಸೆ । ದುದು ಮಣಿಮಯ ಕಾಂಚಿ ಜಘನದೊಳ್ಘನಕುಚೆಯಾ ॥ ೮

ಬಿಡದಡರಿ ಕೊಬ್ಬಿರ್ದ ಕುಚಯುಗ । ಎಡೆಗಿಱಿದಿರೆ ಮುದ್ದುಮೊಗಮನೆಂದುಂ ನೋಡಲ್ ॥ ಪಡೆಯುವೆ ಬಡವಾದಂತಿರೆ । ಬಡನಡು ಸೊಗಯಿಸುವುದಾ ಸರೋಜಾನನೆಯಾ ॥ ೯

ವಿರಚಿಸಿ ಸುಕುಮಾರತೆಯುಂ । ಪಿರಿದುಂ ಬೆರಳಿಂದ ಮಾಟಿನೋಡಿದನೋ ಪೇ ॥ ಳರವಿಂದೋದ್ಭವನೆನಲಾ । ತರುಣಿಯ ಗಂಭೀರನಾಭಿಮಂಡಲಮೆಸೆಗುಂ ॥ ೧೦

---

೭. ಬಾಸಣಿಸುತಿರ್ದ್ದುವು—ಮುಸುಕುತ್ತಿದ್ದುವು.

೮. ಸೋಂಕಿಂ—ಸ್ಪರ್ಶದಿಂದ, ಪುಳಕವಂ—ರೋಮಾಂಚವನ್ನು, ತಾಳ್ದುದೊ—ಪಡೆಯಿತೊ, ಎನೆ—ಎಂಬಹಾಗೆ, ಸುಣ್ಣದಿರ್ಗಳಿಂ—ಸುಣ್ಣವಾದ ಕಾಂತಿಗಳಿಂದ, ಎಸೆದುದು.

೯. ಅಡರಿ—ಏರಿ, ಎಡೆಗಿಱಿದು—ಇಕ್ಕಟ್ಟಾಗಿ.

ಕಂ|| ಅನುರೂಪವಪ್ಪಿನಂ ತ್ರಿಭು | ವನವಿಜಯಪ್ರಶಸ್ತಿ ವರ್ಣಾವಳಿಯುಂ || ಮನಸಿಜನೆ ಬರೆದನೆನಲಾ | ವನಿತೆಯ ನವರೋಮರಾಜಿ ರಂಜಿಸಿತೋರ್ಕ್ಕಂ || ೧೧

ಪೊಗಸಿದಪುದೆತ್ತಲುಂ | ಬಿಗಿದೊಗೆದ ಕುಚಾಭೋಗವೆಂದು ಚುಚುಕಮನಾವಂ || ನೆಗಪಿದಪ್ಪವೆಂಬಿನಂ ತ | ಳ್ತೊಗೆದುವು ಘನಕುಚೆಯ ರುಚಿರಹಾರಕರಂಗಳ್ || ೧೨

ತೊಳಗುವ ಕರ್ಣಾಭರಣಂ | ಗಳನಿಳಿದ ಮಯೂಖಮಾಲೆ ಲಾವಣ್ಯರಸೋ || ಜ್ವಳ ಮೃದುಮೃಣಾಳಲತೆಯೆನ | ಲೆಳೆಯಳ ನಳಿತೋಳ್ಗಳೇಂ ಮನಂಗೊಳಿಸಿದುವೋ || ೧೩

ಸುರಿದಪ್ಪುವೊ ರತ್ನವಲಯದ | ಭರದಿಂದೆ ಬಳಲ್ದು ಬೆಮರನೆನಲೆಳವೆಳಗಂ || ಸುರಿವ ನಖನಿಕರದಿಂದಂ | ಕರಮೆಸೆದುವು ಕಮಳಮುಖಿಯ ಕರಕಮಲಂಗಳ್ || ೧೪

ನವಯೌವನ ರಾಗರಸಾ | ರ್ಣವದೊಳ್ತೊಳತೊಳಸಿ ಪೊಳೆವುತಿರ್ದ್ದುವು ಮುತ್ತುಂ || ಪವಳಮುಮೆನೆ ಕಣ್ಗೊಳಿಪುವು | ಯುವತಿಯ ಸುಲಿಪಲ್ಲುಮೆಸೆವ ಬಿಂಬಾಧರಮುಂ || ೧೫

ಮನಸಿಜಕಾಂತಾಪರಿಮಾ | ದಿನಿಯ ಕನದ್ರತ್ನಕೋಣವೋ ಪೇಳಿಮೆಂ | ಬಿನೆಗಂ ಕಣ್ಗೊಳಿಸಿದುದಾ | ವನರುಹಲೋಚನೆಯ ರುಚಿರ ನಾಸಾವಂಶಂ ||. ೧೬

---

೧೧. ಅನುರೂಪವಪ್ಪಿನಂ—ಒಪ್ಪುವಹಾಗೆ, ತ್ರಿಭುವನವಿಜಯ—ಮೂರುಲೋಕವನ್ನು ಜೈಸುವದರಿಂದುಂಟಾದ, ನಿಜಪ್ರಶಸ್ತಿ—ತನ್ನ ಶ್ರೇಷ್ಠತ್ವಸೂಚಕಗಳಾದ ವರ್ಣಾವಳಿಯುಂ—ಬಿರುದಾಕ್ಷರಮಾಲಿಕೆಯನ್ನು.

೧೩. ಮಯೂಖಮಾಲೆಯೆನಲ್, ಮೃಣಾಳಲತೆಯೆನಲ್, ನಳಿತೋಳ್ಗಳ್ ಪಿಂಮನಂಗೊಳಿಸಿದುವೋ ಎಂದನ್ವಯವು.

೧೪. ಭರದಿಂದೆ—ಭಾರದಿಂದ; ಬಳಲ್ದು—ಆಯಾಸಪಟ್ಟು; ಎಳವೆಳಗಂ—ಸೂಕ್ಷ್ಮಕಾಂತಿಯನ್ನು.

೧೫. [illegible]

ಕಂ || ಕಿವಿಗವತಂಸಂ ಪೆಱವೇ | ಕಿವೆನೀಳ್ದಪ್ಪುವೆಂಬಿನಂ ಮುಖಶ್ರೀ
ಗೆನಿವಾ || ಸವೆನಿಪ್ಪಿಂಗಡಲೆಂಬುವು | ಕುವಲಯುಲೋಚನೆಯ ರುಚಿರ
ಲೋಚನಯುಗಳಂ || ೧೭

ಪುದಿದಿರ್ದ್ದಱಚೆಲ್ವು ಕಣ್ದೆಱ | ದುದು ಮನ್ಮಥಗಂಧಸಿಂಧುರಂ ತಿಲಕಿ
ತವಾ || ದುದೆನಲ್ಮೃಗಮದತಿಲಕಾಂ | ಕದಿನೆಸೆದುದು ಮಿಱುಪಪೆಱೆನೊ
ಸಲ್ಮೋವಲಿಯಾ || ೧೮

ನಿಮಿರ್ದ್ದವು ಕರ್ಣೋತ್ಪಲದಿಂ | ದಮೆಮಧುಧಾರೆಗಳೆನಿಪ್ಪ ಪಾಲೆ
ಗಳೊಳದೇ || ನವುರ್ದೆಸೆದುದೊಮಿಸುಗುವಪ | ತ್ರಮಕರಮಾಣಿಕ್ಯಕುಂ
ಡಲಂಕಾಮಿನಿಯಾ || ೧೯

ಮದಿರಾರಸದಿಂದಂಬು | ಚ್ಚಿರ್ದವರೊಪೇಳೆನಿಸಿಪ್ಪೊಳೆವತಲೆಮುಡಿಗೆ
ಯರ || ನ್ನದಿನೊಸರ್ವರಾಗರುಚಿಯಂ | ಪುದಿದೆಸೆದುದು ಕೇಶಪಾಶವಾ
ಕಾಮಿನಿಯಾ || ೨೦

ಒಸೆದೊಲವಿಂದೆ ತನ್ನುರಮನೇಱಸಿದೊರ್ವ್ವಳೆ ಲಕ್ಷ್ಮಿಯೆಂಬಸಂ|
ತಸದೊಳೆಬೀಗುವಂಬುರುಹನಾಭನ ಗರ್ವಮನೀಗಳಂತೆ ಮಾ || ಣಿಸುವ

---

೧೯. ಕರ್ಣೋತ್ಪಲದಿಂದಮೆ—ಅವತಂಸವಾದ ಉತ್ಪಲದಿಂದ; ಮಧುಧಾರೆಗಳ್—ಮಕರಂದಧಾರೆಗಳು; ನಿಮಿರ್ದವು—ಪ್ರಸರಿಸಿದವು; ಎನಿಪ್ಪ—ಎನಿಸಿಕೊಳ್ಳುವ; ಅಂದರೆ ಕರ್ಣೋತ್ಪಲ ಮಧುಧಾರೆಯನ್ನು ಹೋಲುವ ಎಂದಭಿಪ್ರಾಯವು; ಪಾಲೆಗಳೊಳ್—ಕಿವಿಯಪಾಲೆಗಳಲ್ಲಿ; ಮಿಸುಗುವ—ಹೊಳೆಯುವ; ಪತ್ರ—ಪತ್ರಗಳುಳ್ಳ; ಮಕರಮಾಣಿಕ್ಯಕುಂಡಲಂ—ಮಕರಾಕಾರವಾದ ರತ್ನಕುಂಡಲವು; ಅದೇನೆಸೆದುದೊ.

೨೦. ತಲೆಮುಡಿಗೆಯ—ಚೂಡಾರತ್ನದ; ರನ್ನದಿಂ—ರತ್ನದಿಂದ; ಬಸರ್ವ—ಹೊರಡುವ; ರಾಗರುಚಿಯಿಂ—ಕೆಂಪುಬಣ್ಣದಿಂದ: ಪುದಿದು—ವ್ಯಾಪ್ತವಾಗಿ; ಮದಿರಾರಸದಿಂದಂಬುಚ್ಚಿರ್ದರೊ—ಮದಿರಾರಸವನ್ನು ಸವರಿ ಬಾಚಿದರೊ, ಎನಿಸಿ, ಎಸೆದುದು ಎಂದನ್ವಯವು ಕಪ್ಪಾದ ಕೂದಲಿನಮೇಲೆ ಬಿದ್ದ ರತ್ನಕಾಂತಿಯು ಮದಿರಾರಸದಂತೆ ವರ್ಣವುಳ್ಳದ್ದಾಗಿ ಕಾಣುತಿತ್ತೆಂದು ಅಭಿಪ್ರಾಯವು.

೨೧. ಒಲವಿಂದೆ—ಮೋಹದಿಂದ; ಒಸೆದು—ಪ್ರಸನ್ನನಾಗಿ, ತನ್ನುರಮಂ, ಏಱಿಸಿದ, ಲಕ್ಷ್ಮಿ, ಒರ್ವಳ್, ಎಂಬ, ಸಂತಸದೊಳ್, ಬೀಗುವ—ಸಂತೋಷದಿಂದ ಉಬ್ಬುವ.

ಸೆನುತ್ತನೇಕ ಶತಲಕ್ಷ್ಮಿಗಳಂ ಕಮಳಾಯತಾಕ್ಷಿ ಪು । ಟ್ಟಿಸುವವೊಲಿರ್ದ್ದ
ಳೊರ್ಮ್ಮೆಯೆ ನಿಜಪ್ರತಿಬಿಂಬಕದಂಬಕಂಗಳಂ ॥ ೨೧

ಕಂ ॥ ಹರನೊರ್ವ್ವಂಮನ್ಮಥನುಮ । ಸಿರದುರುಪಿದನೆಂದದರ್ಕ್ಕೆ
ಮುಳಿದಂತೆವೊಲೆ । ಲ್ಲರಹೃದಯಂಗಳೊಳೋರಂ । ತಿರೆ ಮನ್ಮಥಶತಮನಾಕೆ
ಪುಟ್ಟಿಸುತಿರ್ದ್ದಳ್ ॥ ೨೨

ಎಳವೆಱೆಯೊಂದನೆ ತಲೆಯೊ । ಳ್ತಳೆದನ ನಿಳಿಕೆಯ್ಯಲೆಂದು ಲೀಲಾ
ಸ್ಮಿತದಿಂ । ದೆಳವೆಱೆಯುಬಳಗಮಂ ಕೋ । ಮಳೆ ದೆಸೆದೆಸೆಗೆಂದು ಪಸರಿ
ಪಂತೆವೊಲೆಸೆದಳ್ ॥ ೨೩

ವೃ । ಪರಿಚಿತಚಕ್ರವಾಕಮಿಥುನಂಗಳ ನೋಯ್ಯನೆ ನಿದ್ರೆಗೆಯ್ಸುವಳ್ ।
ನಿರವದೆ *[ನಿದ್ರೆಯಂ ಪಡೆ] ದು ಪಿಲ್ಲಿರುಳಕ್ಷಿಯುಮಿಂತಿವೊಂದು ತಾ ॥ ವರೆ
ಯ ರಜಂಗಳೆಂಬ ಪೊಸನುಣ್ಮಳಲಿಂಗೆ ಪುಳಿಲ್ಗಳಂ ಮನೋ । ಹರಕೃತ
ಕಸ್ರವಾಹಿನಿಯೊಳಂಗನೆ ಮಾಡಿಸುತಿರ್ದ್ದಳರ್ಥಿಯಿಂ ॥ ೨೪

ವ ॥ ಮತ್ತಮೆಡೆಯಾಡುವೆಳವೆಂಡಿರ ನೂಪುರದ ನುಣ್ಚರಕ್ಕೆಳಸಿ ಪರಿ
ವ ವಲ್ಲಭಹಂಸನಂ ಮೃಣಾಳಲತೆಯ ಸಂಕಲೆಯೊಳಿಕ್ಕೆಂದು ಹಂಸಪಾಲಿ
ಕೆಯುಂ ಬೆಸಸುತ್ತಮಾಭರಣದೊಳಗುಚ್ಚಿರ್ದ ಪಚ್ಚೆಯ ಪಸರಿಸಿದ ಪಸುರಂ
ಪಸುರೆಲೆಗೆತ್ತೆಳಸುವವಲ್ಲಭಹರಿಣಶಾಬಕಂಗಳ್ಗೆ ಕೆಳದಿಯರಕಯ್ಯಲ್ಲಿರ್ದ್ದ
ಯವಾಂಕುರಂಗಳಂ ನೀಡುತ್ತಂ ದೇವಿ ನೀಂ ನಡಪಿದೆಳಲತೆ ನನೆದೋಱಿ
ತೆಂದು ಬಿನ್ನವಿಸಿದ ಬಾಲಕಿಯರ ಸಾಭರಣಪ್ರದಾನಾತಿಸನ್ಮಾನಂಗಳಿಂ
ಸಂತೋಷಂಬಡಿಸುತಿರ್ದ್ದಳಂತುಮಲ್ಲದೆಯುಂ ॥ ೨೫

---

೨೨. ಒರ್ವ್ವಂ—ಒಬ್ಬನಾದ, ಮನ್ಮಥನುಮಂ—ಮನ್ಮಥನನ್ನು ಕೂಡಾ ; ಹರಂ — ಈಶ್ವರನು ; ಉರುಪಿದಂ—ಸುಟ್ಟನು. ಒರ್ವ್ವಂ ಎಂಬ ಪ್ರಥಮಾಂತವು. ಮನ್ಮಥನುಮಂ ಎಂಬ ದ್ವಿತೀಯಾಂತಕ್ಕೆ ವಿಶೇಷಣವಾಗಿದೆ ಶ ಮ ಸೂ ೧೪೦.

೨೫. [illegible]—ಕೆತ್ತಿದ ; ಪಸುರಂ—ಹಸುರುಬಣ್ಣವನ್ನು.

*[ಕಣ್ಗೆಯುಲ್ಪಡೆ]

ಕಂ॥ ನಱುಸುಯ್ಗೆ ತುಂಬಿಗಳ್ಬಂ । ದೆಱಗೆ ಕರಾಂಬುಜದೆ ಕಮಳೆ ಮುಳಿಸೋವುತ್ತುಂ ॥ ಮಿಱುಗುವ ನೀಲದಬಟ್ಟಿಂ ತಿಱುಕಲ್ಗಳನಾಡುವಂತೆ ಕಣ್ಗೆಸೆದಿರ್ದ್ದಳ್ ॥ ೨೬

ಅರಗಿಳಿಗಳ ರವಮಂ ಪಂ । ಜರದೊಳಗಿರ್ದ್ದೊಸಗೆವೇಳ್ದು ಮಾಣಿಸೆನುತ್ತುಂ ॥ ಚರಣಗ್ರಾಹಿಣಿಯುಂ ಸುಂ । ದರಿ ಲೀಲಾಂಬುಜದೆ ನಸುನಗುತ್ತುಂ ಪೊಯ್ದಳ್ ॥ ೨೭

ವ॥ ಮತ್ತಂ ಮಹಾಶ್ವೇತೆಯತ್ತಣಿಂ ಬಂದ ನೃಪರೂಪಚಂದ್ರಮನ ರೂಪಾತಿಶಯಗುಣಂಗಳಂ ಬಿನ್ನವಿಸುತಿರ್ದ್ದ ಕೇಯೂರಕನ ಮೊಗಮಂ ನೋಡಿ ॥ ೨೮

ವೃ॥ ಬರವಿದು ಚಕೋದ್ಯವಾರತನಯಂ ಪೆಸರಾವುದು ರೂಪದೆಂತುಟೋ । ಹರೆಯಮದಿನ್ನೆಗಂ ತಡದೆ ನೀಂ ನುಡಿಯಾದುದೆ ನಿನ್ನೊಳಾತನೊಳ್ ॥ ಪರಿಚಯವೆಂತುಸಂಗಳಿಸಿತಿಲ್ಲಿಗೆ ಬಂದಪನೇ ಎನುತ್ತಮಾ । ತರುಣಿ ನಿರಂತರಂ ಬೆಸಗೊಳುತ್ತಿರಲಾ ಮನುಜೇಂದ್ರಚಂದ್ರನಂ ॥ ೨೯

ವ॥ ಎಂದು ಮಗುಳೆಮಗುಳೆ ಬೆಸಗೊಳುತಿರ್ದ್ದ ಗಂಧರ್ವರಾಜನಂದನೆಯ ನತಿದೂರದೊಳ್ವಿಸ್ಮಿತಾಂತರಂಗನಾಗಿ ನೋಡಿ ॥ ೩೦

ಕಂ॥ ಇವಳಂ ನೋಡಲ್ಪಡದೆ । ನ್ನ ವಿಲೋಚನಮಾವ ನೋಂಪಿಯಂ ನೋಂತುವೊಮಾ ॥ ಯ್ದ ವಿಧಾತ್ರನೇಕೆ ವಿರಚಿಸ । ನೊ ವಿಲೋಚನಮಯಮೆನಲ್ಮದಿಂದ್ರಿಯಚಯಮಂ ॥ ೩೧

ಇವಳಂ ಸಮೆದಂದಬ್ಜೋ । ದ್ಭವ [ಕರಸಂಸ್ಪರ್ಶಖೇದದಿಂದಾದಂ ಸಂ ॥ ಭವಿಸಿದಬಾಷ್ಪಾಂಬುಗಳಿಂ । ಕುವಲಯಕು] ಮುದಂಗಳಾದುವಾಗಲೆವೇಳ್ಕುಂ ॥ ೩೨

---

೨೬. ಬಟ್ಟಿಂ—ಗುಂಡಾದಸಣ್ಣದಕಲ್ಲುಗಳಿಂದ ; ತಿಱುಕಲ್ಲುಗಳ—ಪಣ್ಣೆಕಲ್ಲನ್ನು.

೩೧. ಮದಿಂದ್ರಿಯಚಯಮಂ—ನನ್ನ ಎಲ್ಲಾ ಇಂದ್ರಿಯಗಳನ್ನೂ ಅಂದರೆ ಶ್ರೋತ್ರ—ತ್ವಕ್—ಜಿಹ್ವಾ, ಘ್ರಾಣಗಳನ್ನು ; ವಿಲೋಚನಮಯಮೆನಲ್—ನೇತ್ರಮಯಗಳನ್ನಾಗಿ ; ಏಕೆವಿರಚಿಸನೊ—ಯಾತಕ್ಕೆ ಮಾಡಲಿಲ್ಲವೊ.

೩೨. ಕುವಲಯಕುಮುದಂಗಳ್—ಬಾಷ್ಪಾಂಬುಗಳಿಂ—ನೇತ್ರೋದಕಗಳಿಂದ; ಅನುಪು—ಅನಂಥಾವು; ಅಗಲವೇಳ್ಕುಂ—ಅಗಿಯೇಇರಬೇಕು.

ಕಂ॥ ಬಗೆಯೊಳ್ಪಿರಿದುಂ ಕೌತುಕ । ಮೊಗೆ [ಯಲ್ಕನ್ಯೋನ್ಯಮೊಲ್ದು]
ನೋಡುತ್ತಿರ್ಪ್ಪರ್ ॥ ಸ್ಮಿಗವೊಮ್ಮೆಗ್ದಲಿರ್ವ್ವರ ದಿ । ಟ್ಟಿಗಳುಂ ಸಮದಿಷ್ಟಿ
ಯಾದುವಂತಾಕ್ಷಣದೊಳ್ ॥ ಅಂತುನೋಡಿ— ೩೨

ಈತಂ ಕೇಯೂರಂ ಪೇ । ಳ್ದಾತಂ ಪುಗುತರ್ಪ್ಪನೆಂದೆನುತ್ತಂತದ್ರೂ॥
ಪಾತಿಶಯಕ್ಕಚ್ಚರಿವ । ಟ್ಟಾತರುಣಿಯುಮಂತೆ ಬಿಡದೆ ನೋಡುತ್ತಿರ್ದ್ದಳ್ ॥

ಒದವೆ ಪುಲಕಾಂಕುರಂಗ । ಳ್ಮೊದಲೊಳ್ಭೂಷಣದ ರಮಮೊರಡನೆ
ಯುಸೂಳ್ಕು ॥ ನ್ನಿದಿರೇಳ್ತಾಂ ಬಳಿಕ್ಕಿರ । ದಿದಿರೆಳ್ದಳ್ತರಳನಯನೆ ಸಂಭ್ರ
ಮದಿಂದಂ ॥ ೩೫

ವ॥ ಅನಂತರ ಮನಂಗಶರವಶತೆಯಿಂ ಬಿಂದುಬಿಡುವ ಬೆಮರ ನಿದಿ
ರೆಳ್ದ ಬಳಲ್ಕೆಗೇಱುಸಿಯುಂ ತೊಡೆ ದಡದಡಿಸೆ ನಡೆಗೆಟ್ಟು *[ಕಳಲುಲಿಗೆ
ಬಳಸಲ್ವ] ಕಳಹಂಸಮಂಡಲಕ್ಕಯಶಮುಂ ಮಾಡಿಸಿಯುಂ ನಿಡುಸುಯ್ಯೆಲ
ರಿಂ ಮೇಲುದುತೊಲಗೆ ಚಾಮರದೆಲಗ್ಗ್ರ್ ನಿಮಿತ್ತತೆಯ ನೊಡಚ್ಚಿರ್ಯಯುಂ
ಅಂತಃ ಪ್ರವಿಷ್ಟಚಂದ್ರಾಪೀಡಸ್ಪರ್ಶಲೋಭದಿಂದಮೆನೆ †[ಕಡುಪಾರ್ವ]
ಮೆಲ್ಲೆರ್ೆಯೊಳ್ಕಯ್ಯನಿಕ್ಕಿ ಕುಚಯುಗಾಛ್ಛಾದನದಮೇಲಸೆನೆವಮಿಕ್ಕಿಯುಂ
ನುಡಿಯುಲುಜ್ಜುಗಮುಂ ಲಜ್ಜೆಮಾಣಿಸೆ ಮುಖಸಾರಭಕ್ಕೆಐಗುವ ಮರಿದುಂ
ಬಿಯಂ ಮೋೞಿ ದೂರನುತ್ಸಾದಿಸಿಯುಂ ಕುಸುಮಾಯುಧನಿಸಿ ನೊಂದು ಸೀ

೩೨. ಒಮ್ಮೆಗ್ದಲ್—ಏಕಕಾಲದಲ್ಲಿ ; ಸಮದಿಷ್ಟಿಯಾದುವು—ಸಮಾನವೀಕ್ಷ
ಣವುಳ್ಳವುಗಳಾದವು. ಅಂದರೆ ಸಮಾನವಾಗಿ ಪರಸ್ಪರಾಲೋಕನವುಂಟಾಯಿತೆಂದಭಿ
ಪ್ರಾಯವು.

೩೬. ಬಿಂದುಬಿಡುವ—ತೊಟ್ಟಿಡುವ ; ಬೆಮರಂ ಇದಿರೆಳ್ದಬಳಲ್ಕೆಗೆ—ಪ್ರತ್ಯು
ತ್ಥಾನದಿಂದಾದ ಆಯಾಸಕ್ಕೆ : ಏಱುಸಿ—ಆರೋಪಿಸಿ ; ದಡದಡಿಸೆ—ನಡುಗಲು ; ಕಳ
ಲುಲಿಗೆ—ನೂಪುರಧ್ವನಿಗೆ ; ಬಳಸಲ್ವ—ಅನುಸರಿಸುವ ; ಅಯಶಮುಂ ಮಾಡಿಸಿಯುಂ
ಅಪಮಾನವನ್ನು ಹೊರಿಸಿ ; ಮೇಲುದು— ಸೆರಗು ; ತೊಲಗೆ—ಜಾರಲು ; ಅಸೆ—ಬಾ
ಣಪ್ರಯೋಗಮಾಡಲು ; ಸೈಗಳಂಮಾಡಿಯುಂ—ಅಪಮಾನವನ್ನುಂಟುಮಾಡಿ ; ನೆಲನು
ಗ್ಗುರಿದ—ಮಾನಮರ್ಯಾದೆಯನ್ನು ಕಳೆಯುವ ; ಪಡಿಯುಙಿಯುಮಂ—ದ್ವಾರಪಾಲಕಿಯರನ್ನು.

*[ಕಳಲುಲಿಗೆಬಳಲುವ] †[ಗುಡುವಾಯು]

ತ್ಕಾರವೊಗೆಯೆ ಪೂವಲಿಗೆದಱಿದ ಪೊಂಗೇದಗೆಯ ಗಱಿಯಕಿರುವುಳ್ಗೆ ಬಱಿದೆ ಬೈಗುಳಂ ಮಾಡಿಯುಂ ಎಡೆವಿಡದೆ ಕೈನಡುಗೆ ನೆಲನುಗ್ಗಡಿಪ ಪಡಿಯಱತಿಯರಂ ನಿವಾರಿಸಿದಪ್ಪಳೆಸಿಸಿಯುಂ ಇಂತು ಮದನವಿಕೃತಂಗಳಂ ಪಲತೆರದೆ ಮಱೆಯಿಸುತ್ತಿರೆ ಯೆಂತಾನುಂ ತತ್ಕಾಂತೆ ಯೊಂದೆರಡಡಿಯ ನಿಡುವಲ್ಲಿ ॥ ೩೬

ವೃ॥ ವನಿತಾಮಂಡನ ರತ್ನಕಾಂತಿ ಮಱೆಯಾದತ್ತೆಂದು ತದ್ಭೂಷಣ । ಧ್ವನಿ ಸಂಭಾಷಣವೆಂದು ಕಾಂತೆ ಹೃದಯಾಂತರ್ಲಗ್ನೆ [ತಾನಾಗಿರ]॥ ಲ್ಕೆನಗಿನ್ನೇನೊಳಗಾದಳೆಂದೆಸೆವ ದೇಹಚ್ಛಾಯೆ ಮೆಯ್ವೊರ್ದೆ ಕಾ । ಮಿನಿತಳ್ತಪ್ಪಿದಳೀಗಳೆಂದು ಬಗೆದಂ ಭೂಪಾಲವಿದ್ಯಾಧರಂ ॥ ೩೭

ವ॥ ಅಂತಾಕಾಂತೆಯೊಂ ತಾನುಂ ಕತಿಪಯಪದಂಗಳಂ ನಡೆದು.—

ಕಂ॥ ಪಲವುದಿವಸಕ್ಕೆ ಕಂಡೊಗೆ । ದೊಲವಿಂ ಬಿಗಿಯಪ್ಪಿದಳ್ ಮಹಾಶ್ವೇತೆಯ ನಾ ॥ ಲಲನೆ ಮಹಾಶ್ವೇತೆಯುಂ ಮಾ ! ಲಲನೆಯ ನನುರಾಗದಿಂದ ಮಪ್ಪಿದಳಾಗಳ್ ॥ ೩೮

*ವ॥ [ಅನಂತರಂ ಮಹಾಶ್ವೇತೆ ಕಾದಂಬರಿಯ ನಿಂತೆಂದಳ್ ಚಂದ್ರಾಪೀಡನೆಂಬೀಮಹಾನುಭಾವಂ ಭಾರತವರ್ಷದ ರಾಜನುಂ ತುರಗಖುರಮುಖೋಲ್ಲೇಖದತ್ತ ಚತುಸ್ಸಮುದ್ರಮುದ್ರನುಂ ಕ್ಷಪಿತಪ್ರಜಾಪೀಡನು ಮೆನಿಸಿದ ತಾರಾಪೀಡನರೇಂದ್ರಂಗೆ ನಂದನನುಂ ನಿಜಭುಜಶಿಲಾಸ್ತಂಭವಿಕ್ರಾಂತ

---

೩೭. ಮಱೆಯಾದತ್ತು—ಆಲಿಂಗನವೆಂಬ ಅನುರಾಗವ್ಯಾಪಾರಕ್ಕೆ ಅನುಕೂಲವಾದ ತೆರೆಯಾಯಿತು.

* [ಅಂತು ಕಾದಂಬರಿ ಕೃತಪ್ರಣಮೆಯಾಗಿ ಪರೆಸಿ ಮಿಂತೆಂದಳೀ ಮಹಾನುಭಾವಂ ಚಂದ್ರಾಪೀಡನೆಂಬಂ ಭಾರತವರ್ಷಣ ತುರಗಖುರಮುಖೋಲ್ಲೇಖವತ್ತ ಚತುತುಸ್ಸಮುದ್ರ ಮುದ್ರಿತನುಂ ರಕ್ಷಿತ ಪ್ರಜಾಪಾಲನನುಂ ದೊನಿಸಿದ ತಾರಾಪೀಡನರೇಂದ್ರನಂದನನೆನಿಸಿ ನಿಜಭೊಜಶಿಲಾಸ್ತಂಭವಿಕ್ರಾಂತನೆನಿಸಿ ದಿಗ್ವಿಜಯಪ್ರಸಂಗದಿಂ ಲಳಿಸಂದೀದೇಶಕ್ಕೆ ಬರವಾದುದಲ್ಲದೆಯುಂ ಪರಿತ್ಯಕ್ತ ಸಕಲಸಂಗೆಯಾಗಿ ಕಲ್ಲೆರ್ದೆಯೆನಿಸಿದೆನ್ನಗಂ ಕಾಣಲೊಡನೆ ಸ್ವಭಾವತರತ್ವತೆಯನಪ್ಪುಕೆಯ್ದುಂ ನಿಜಗುಣದಿಂ ನಿಷ್ಕಾರಣಬಂಧುವುಂ ನಿರ್ನಿಮಿತ್ತಮಿತ್ರನುಮೆನಿಸಿದ ನಂಟುಮಲ್ಲದೆಯುಂ.]

ವಿಶ್ವಂಭರಾಪೀಡನು ಮೆನಿಸಿ ದಿಗ್ವಿಜಯಪ್ರಸಂಗದಿಂ ಬಳಸಂದೀಪ್ರದೇಶಕ್ಕೆ ಬಂದನಲ್ಲದೆಯುಂ ಪರಿತ್ಯಕ್ತಸಕಲ ಸಂಗೆಯಾಗಿ ಕಲ್ಲೆರ್ದೆಯಳೆನಿಸಿದೆನ್ನಂ ಕಾಣಲೊಡನೆ ಸ್ವಭಾವಸರಳತೆ ಯನಪ್ಪುಕೆಯ್ದು ನಿಜಗುಣದಿಂ ನಿಷ್ಕಾರಣ ಬಂಧುವುಂ ನಿರ್ನಿಮಿತ್ತಮಿತ್ರನು ಮೆನಿಸಿದ ನಂತುಮಲ್ಲದೆಯುಂ] ॥ ೩೯

ಕಂ ॥ [ಬದವಿದ ದಾಕ್ಷಿಣ್ಯಕ್ಕಂ] । ವಿದಗ್ಧವೃತ್ತಿಗ ಮುಪಾರಗಾಂಭೀರ್ಯಕ್ಕಂ ॥ ಮೊದಲೆನಿಸಿದ ಸಕಲಗುಣಾ । ಸ್ಪದರಂ [ಜಗದೊಳಗೆ ಪಡೆವುದಸದಳವಲ್ತೇ] ॥ ೪೦

ವ॥ ಅದುಕಾರಣದಿಂ ಪ್ರಜಾಪತಿಯ ರೂಪನಿರ್ಮಾಣ ಕೌಶಲಮುಮಂ ಎಡೆವಱಿಯದೆ ನಿಂದಲಕ್ಷ್ಮಿಯವಿವೇಕಮುಮಂ ವಸುಂಧರೆಯ ಸದ್ಭರ್ತೃತಾಸುಖಮುಮಂ ಮರ್ತ್ಯಲೋಕದ ಸಫಲತೆಯುಮಂ ಕಲಾಕಲಾಪದ ಮೇಳಾಪಕಮುಮಂ ಸೌಭಾಗ್ಯದಭಾಗ್ಯಮುಮಂ ಮನುಷ್ಯರ ಗ್ರಾಮ್ಯತೆಯುಮಂ ನೀನುಂ ಕಾಣ್ಬೆಯೆಂದೆಂತಾನುಮಿಲ್ಲಿಗೊಡಗೊಂಡು ಬಂದೆಂ ॥ ೪೧

ಕಂ॥ ಅರಸನನಾಂಕಂಡಱಿಯೆಂ । ಪರಿಚಯಮಿಲ್ಲೆನ್ನೊಳೆಂದು ಮಿಗೆತಾಂ ನಾಣ್ಚು ॥ ತ್ತಿರದಿಂದೆನ್ನೊಳದೆಂತಂ । ತಿರೆ ನೀಂನೆಗಳ್ವುದು ನಿರಂತರಂ ಕಮಲಮುಖೀ ॥ ೪೨

ವ॥ ಎಂದುಮಹಾಶ್ವೇತೆ ಕಾದಂಬರಿಗಱಿಪುವುದುಂ ಚಂದ್ರಾಪೀಡನುಂ ಕಯ್ಗಳಂ ಮುಗಿಯೆ ಸರ್ವಾಂಗ ಪುಳಕಮುಂತಳೆದು ॥

ವೃ॥ ಪಿರಿದೊಂದಳ್ಕಱೊಳೊಲ್ದು ನೋಳ್ಪವಳ ದೀರ್ಘಾಪಾಂಗದೇಶಕ್ಕೆ ಚ । ಚ್ಚರವಾಗಳ್ಪರಿತಂದ ಸೇದೆ [ಯೊದವಲ್ಕೆ] ಘರ್ಮೋದಬಿಂದೂ

೪೦. ಬದವಿದ—ಹುಟ್ಟಿದ; ಮೊದಲೆನಿಸಿದ—ಮೂಲಕಾರಣರಾದ; ಅಸದಳವಲ್ತೆ—ಅಸಾಧ್ಯವಲ್ಲವೆ.

೪೩. ಕಣ್ಣಿವಾಪೆಗೆ—ಕರೀಗುಡ್ಡೆಗೆ; ಚೆಚ್ಚರಂ—ಬೇಗನೆ; ಪರಿತಂದಸೇದೆ—ಓಡಿಬಂದಶ್ರಮವು, ಬದವಲ್—ಉಂಟಾಗಲು; ಘರ್ಮೋದಬಿಂದೂತ್ಕರಂ ಸುರಿವುತ್ತಿರ್ಪುದು ನೋಡು ಎಂಬಿ—ಆಶ್ಚರ್ಯ; ಎಂಬಂದದಿಂ—ಎಂಬಹಾಗೆ; ಅಂದರೆ ಕಾದಂಬರಿಯು ತನ್ನ ಅಪಾಂಗಕ್ಕೆ ಕರೀಗುಡ್ಡೆಯನ್ನು ಬೇಗತರಾಗಿಸಿ ಚಂದ್ರಾಪೀಡನನ್ನು ನೋಡುವಾಗ ಶ್ರಮದಿಂದುಂಟಾದ ಅಶ್ರುಸ್ರೋತ ಎಂಬಂತೆ.

ತ್ಕರಂ ॥ ಸುರಿವುತ್ತಿರ್ಪ್ಪುದು ಕಣ್ಣಪಾಪೆಗೆ *[ಲೆ ನೋಡೆಂಬಂದದಿಂ] ಸ್ನೇಹನಿ । ರ್ಝರವಾಕಾಂತೆಗೆ ಭೋಂಕೆನಲ್ಸುರಿದುವಾನಂದಾಶ್ರುಬಿಂದೂತ್ಕರಂ ॥

ಕಂ॥ ಚರಣಾಂಗುಷ್ಠದೆ ನೆಲನಂ । ಬರೆವೀನೆವದಿಂದೆ ತನಗೆ ಬರೆತೆಗೆದಳೊ ಪೇ ॥ ಳರಸನ ನೆನಲವಳ ನಖಾಂ । ತರದೊಳ್ಪೊಳೆದತ್ತು ರೂಪು ಭೂಪೋತ್ತಮನಾ ॥ ೪೪

ನಡೆನೋಡುವ ಕನ್ನಿಕೆ [ಯರ । ಕಡೆಗಣ್ಣಂ] ಸಾರ್ದ್ದು ಪರಿವ ಕರಿಯಾಲಿಗಳೊ ॥ ಗ್ಗಡಿಸಿದವತಂಸಮಧುಕರ । ದೊಡನಾಡುವ ಮಧುಕರಂಗಳೆನಿಸಿದುವಾಗಳ್ ॥ ೪೫

ವ॥ ಅನಂತರಂ ಪರಿಜನಂ ಸಂಭ್ರಮಂಬೆರಸು ತಂದು ಶಯನತಳಶಿರೋಭಾಗದೊಳಿಕ್ಕಿದ ಧವಳಾಂಶುಕ ಪ್ರಚ್ಛದಚ್ಛನ್ನ ಹೇಮಪದಾಂಕಿತಾಸನದೊಳರಸಂ ಕುಳ್ಳಿರೆ ಕಾದಂಬರಿ ಮಹಾಶ್ವೇತೆಯೊಡನೆ ನಿಜಪರ್ಯಂಕದೊಳ್ಕುಳ್ಳಿರ್ಪ್ಪುದುಂ ಮಹಾಶ್ವೇತೆಯ ಕಣ್ಣಱಿವು ವೇಣುರವಂಗಳುಮಂ ವೀಣಾನಾದಂಗಳುಮಂ ಗೀತಸ್ವನಂಗಳುಮಂ ಮಾಗಧಿಯರ ಜಯಶಬ್ದಂಗಳುಮಂ ಪ್ರತೀಹಾರಿಯರ್ನ್ನಿವಾರಿಸುತ್ತ ಮಿರ್ದ್ದರನ್ನೆಗಂ ॥ ೪೬

ಕಂ॥ ಪ್ರಿಯದಿಂ ಕಾಂತೆ ಮಹಾಶ್ವೇ । ತೆಯ ಕಾಲಂ ತಾನೆ ಕಚ್ಚಿರ್ಪವಪಿಂದೆ ನಿಜ ॥ ಪ್ರಿಯಸಖಿಯೆನಿಸಿದ ಮದಲೇ । ಖೆಯೆಂಬಳಂ ನೃಪನ ಕಾಲ್ಗಳಂ ಕಚ್ಚಿರ್ಸಿದಳ್ ॥ ೪೭

ವ॥ ಆಗಳಾಕಾದಂಬರಿಯೊಡನೆ ಕುಳ್ಳಿರ್ದ್ದ ಮಹಾಶ್ವೇತೆ ॥ ೪೮

ವೃ॥ ಕರದಿಂದಂ ಕರ್ಣಭೂಷಾರುಚಿರುಚಿರ ಮೆನಿಪ್ಪಂಸವಂ ಮುಟ್ಟುತಂ ಷ । ಟ್ಚರಣವ್ಯಾಲೋಲ ಕರ್ಣೋತ್ಪಲಮ ನಮರೆ ಸ್ಯೈತಿಕ್ಕುತಂ

---

೪೫. ತನಗೆ—ತಾನಾಗಿ; ಅರಸನಂ ಬರೆತೆಗೆವಳೊ—ಸೆಳೆದುಕೊಂಡಳೋ.

೪೭. ಕಣ್ಣಱಿವು—ಕಣ್ಣಿನಸನ್ನೆಯನ್ನು ತಿಳಿದು.

೪೮. ಅಂಸವಂ—ಹೆಗಲನ್ನು; ಸ್ಯೈತಿಕ್ಕುತಂ—ಸರಿಮಾಡುತ; ಓಸರಿಸುತ್ತುಂ ತಿದ್ದುತ್ತಾ; ಭವ್ಯವೆ—ಕ್ಷೇಮವೆ,

* [ವಿನೋದಂಬಂದರಿಂ]

ಸಂಚಲಚ್ಛಾ | ಮರ ಸಂಜಾತಾನಿಲಾಂದೋಳನ ಚಲದಳಕಾ ನೀಕಮಂ ಮೆಲ್ಲನಂ ದೋ | ಸರಿಸುತ್ತಂ ತಂಗಿ ಪೇಳ್ಭಿನ್ನವೆನಿಸಗೆನಲಾ ಕಾಂತೆ ನಾಣ್ಚು ತ್ತಮಾಗಳ್ ॥ ೪೯

ಕಂ॥ *[ವನವಾಸಾಯಾಸದಿನ | ಕ್ಕನಿಂತಿರಲ್ಮನೆಯೊಳಿರ್ದ್ದೆನಾನೆಂ ದುಕರಂ ॥ ಮನದೊಳ್ತೊಳಲುತ್ತಂತಾಂ | ಮನಃಪ್ರೊಲ್ಲದೆತನಗೆಸೇವವೆಂದೆ ನುತೊರೆದಳ್ ॥] ೫೦

ವ॥ ಆಗಳುಪಜಾತಶೋಕೆ ಮಹಾಶ್ವೇತಾ ಮುಖನಿರೀಕ್ಷಣೆಯಾ ಗಿಯುಂ ಮಾರೋಪಿತ ಚಾಪನಪ್ಪ ಕುಸುಮಚಾಪಂಗೆ ಪಕ್ಕುಮಾಡಿದ ಚಂ ದ್ರಾಪೀಡನ ನಪಾಂಗವಿಕ್ಷೇಪತರಳತರ ತಾರಶಾರೋದರ ನಯನಂಗಳಿಂ ಪಡಿಗಡಿಗೆ ನೋಡುತ್ತಮಿರ್ದ್ದಳ್ ॥ ೫೧

ವೃ॥ ಸುರುಚಿರ ಸಾಲಭಂಜಿಕೆ ಬೆಮರ್ತ್ತುರದೊಳ್ಪೊಳೆಯುತ್ತಿರ ಲ್ಕೆಮ | ತ್ಸರಿಸಿದ ಳಂಗನಾಜನಘನಸ್ತನದೊಳ್ಪ್ರತಿಬಿಂಬಿಸುತ್ತಿರ ॥ ಲ್ಪುರುಡಿಸಿದಳ್ ಮನೋಹರನ ನೀಕ್ಷಿಸಲಿತ್ತುಪುದಿಲ್ಲ ಹರ್ಷದಿಂ | ದಿರದುಗು ತರ್ಪ ಬಾಷ್ಪಮೆನಗೆಂದು ಲತಾಂಗಿ †[ಯಳಲ್ದು ಬಾಡಿದಳ್] ॥ ೫೨

ವ॥ ಅನಂತರಂ ತಾಂಬೂಲಪ್ರದಾನೋದ್ಯತೆಯಾದ ಕಾದಂಬರೀದೇ ವಿಯುಂ ಮಹಾಶ್ವೇತೆ ಯಿಂತೆಂದಳ್ ॥ ೫೩

---

೫೦. *[ವನವಾಸಾಯಾಸದಿನ | ಕ್ಕನಿಂತಿರಲ್ಮನೆಯೊಳಿರ್ದೆನಾನೇಂದ್ರೈವಂ ॥ ಮನದೊಳ್ತಳುವಮಾಡುತ್ತಿರೆ | ಮನವಲ್ಲದೆ ಮನದಸೆವವೊಂದಿಂತೆಂದಳ್ ॥] ಸೇವಂ—ಕ್ಷೇಮ.

೫೧. ಅಪಾಂಗವಿಕ್ಷೇಪ—ಕಡೆಗಣ್ಣನೋಟದಿಂದ ; ತರಳತರ—ಅತಿಚಂಚಲ ಗಳಾದ ; ತಾರ—ಕಣ್ಣಗುಡ್ಡೆಗಳುಳ್ಳ ; ಶಾರೋದರ—ಶಬಲವರ್ಣದಿಂದಕೂಡಿದ ಮಧ್ಯ ಪ್ರದೇಶವುಳ್ಳ ; ನಯನಂಗಳಿಂ—ನೇತ್ರಗಳಿಂದ.

೫೨. ಬೆಮರ್ತ್ತ—ಬೆವರಿದ ; ಉರದೊಳ್—ಚಂದ್ರಾಪೀಡನ ವಕ್ಷಸ್ಥಳದಲ್ಲಿ ; ಪೊಳೆಯುತ್ತಿರಲ್ಕೆ—ಪ್ರತಿಬಿಂಬಿಸಿರಲು ; ಅಳಲ್ದು—ದುಃಖಪಟ್ಟು.

†[ಕಸಲ್ದುಬರ್ದ್ದಿದಳ್]

ಕಂ॥ ಭುವನಾಧೀಶ್ವರಸುತ ನಭಿ । ನವಾಗತಂ ಮಾನ್ಯನಪ್ಪ ನಾರಾ ಧ್ಯನೆದಲ್ । ನವಗೆಲ್ಲತೆಱದಿ ನದಱಿಂ । ದ ವೀಪುವರಂಸಗೆ ಮುನ್ನವಿಶಾತಂ ಬುಲಮಂ ॥ ಎಂದು ನುಡಿಯೆ— ೫೪

ಕಂ॥ ಅನಕ್ಕ ನಾಣ್ಚುವೆಂ ಪಿಡಿ । ನೀನೆ ನೃಪಂಗಿಕ್ಕು ತಂಬುಲಮ ನೞಿವೆನೆ ಪೇ ॥ ಳೇನುಮ ನಾನೆಂದತಿಲ । ಜ್ಜಾನತಮುಖಿ ಯಾಗಿ ಕಾಂತೆ ಮೆಲ್ಲನೆ ನುಡಿದಳ್ ॥ ೫೫

ವ॥ ಅನ್ತು ನುಡಿಯೆ ಮಹಾಶ್ವೇತೆ ಮತ್ತಮಾಗ್ರಹಿಸೆ ತಂಬುಲಂ ಗೊಡ ಲುಜ್ಜುಗಂಗೆಯ್ದು ॥ ೫೬

ಕಂ ॥ ಬೆಮರಿಂ ಮುಳುಂಗಿದಪೊ ಸಂ । ಭ್ರಮದಿಂ ಬಿಳ್ದಪ್ಪೆ ನರಸ ಕೈಗುಡು ನೀಂಬೇ ॥ ಗಮೆನಿಸಿಪ್ಪ ತೆಱವೆ ತಾಂಬೂ । ಲಮಿಳಿತಮಂ ಕಾಂತೆ ನೀಡಿದಳ್ನಿಜಕರಮಂ ॥ ೫೭

ವ॥ ಆಗಳ್ ವಿಜಯಗಜ ಕುಂಭಾಸ್ಫಲನದೊಳೊಂದಿದ ಸಿಂದೂರ ದಿಂ ರಂಜಿಪಂತೆ ಬೆಳರ್ಗೆಂಪನಾಳ್ದತಿರಭಸದಿಂ ಮುಂದುಱಿಳವರಿವಂತೆ ನಖ ಮಯೂಖಂಗಳ್ನಿಮಿರೆ ಸೋಂಕುವಾಸೆಯೊ ಳನುರಕ್ತಂಗಳಾಗೆ ಪಂಚೇಂ ದ್ರಿಯವೃತ್ತಿಗಳ್ ಬೇಱೆಬೇಱೆ ರೂಪಂದಳೆದುವೆನಿಪಂಗುಳಿಗಳಂ ಮನಂಗೊ ಳಿಸುವ ಕರಕಮಲಂಗಳಂ ಚಂದ್ರಾಪೀಡಂನೀಡೆ ॥ ೫೮

ವೃ॥ ಎನಸುಂ ಮುಂದೆ ನಱಾಂತು ನಿಳ್ಕೆ ನೃಪಹಸ್ತಾನ್ವೇಷಣಂ ಗೆ ಯ್ವಿನ್ರೊಲ್ । ನಿನಗೆನ್ನಂ ಬಿಡದುಣ್ಮಿದೀಬೆಮರೆ ಕೈನೀರಾಗಿರಲ್ತೋಕ್ಕೆರ್ ಗೊ । ಟ್ಟನನಂಗಂ ಪಿಡಿ ನಿನ್ನ ಕೈಯ್ಯೊಡೆಯ ನೊಂದಿರ್ದಪ್ಪುದಿನ್ನೆನ್ನ ಜೀ । ವನವೆಂಬಂದದಿ ನಿಕ್ಕಿದಳ್ನಡುಗುತಂ ತನ್ವಂಗಿ ತಾಂಬೂಲಮಂ ॥ ೫೯

---

೫೮. ಬೆಳರ್ಗೆಂಪನಾಳ್ದು, ಮನಂಗೊಳಿಸುವ ಕರಕಮಲಂಗಳಂ ಎಂದನ್ವ ಯವು.

೫೯. ಕೈನೀರಾಗಿರಲ್—ದಾನಜಲವಾಗಿರಲು; ತೋಕ್ಕೆರ್ಗೊಟ್ಟಂ—ಕಾಣಿಕೆ ಯನ್ನು ಕೊಟ್ಟನು.

ವ॥ ಅನಂತರಂ ಮಹಾಶ್ವೇತೆಗಂ ತಾಂಬೂಲಂಗೊಟ್ಟಳನ್ನೆಗಂ ॥

ವೃ॥ ಸುರುಳನೆ ಸುತ್ತಿದಂತೆ ಕೊರಲೊಳ್ಮಿಱುಗುತ್ತಿರೆ ಮೂಱುರೇಖೆಗಳ್ । ಮರಕತಕಾಂತಿಯಂ *[ತಳೆದು ನುಣ್ಗರಿಗಳ್ಮಿನುಗಲ್ಕೆ] ವಿದ್ರುಮಾಂ ॥ ಕುರದ ವೊಲೊಪ್ಪೆ ಚಂಚುಪುಟಮೊಯ್ಯನೆ ಬಂದುದು ಕನ್ಯಕಾಸಭಾಂ । ತರದೊಳಗೊಂದು ಶಾದ್ವಲಿತಹರ್ಮ್ಯಮಣಿಪ್ರವರಾಂ ಶುಕಂ ಶುಕಂ॥ ೬೦

ವ॥ ಅನ್ತು ಮಂದಗತಿಯಿಂ ಬರ್ಪ್ಪರಗಿಳಿಯ ಮುಂದೆ ॥

ವೃ॥ ವಿಕಸಿತನೀಲನೀರಜದಳಂಬೊಲಿರಲ್ಗಱಿ ಚಂಚುಚಾರುಚಂ । ಪಕಮುಕುಳಂಬೊಲೊಪ್ಪೆ ಚರಣಂ ನವಕೇಸರದೊಂದುದೇಸಿಯಂ ॥ ಪ್ರಕಟಿಸೆ ಪೂವಿನಿಂ ಸಮೆದ ಪಕ್ಕಿಯಿದೆಂಬಿನಮಾಗಳೊಂದು ಸಾ । ರಿಕೆ ಪರಿತಂದುದಗ್ಗಲಿಪ ತಾಪದೆ ಗದ್ಗದಕಂಠೆಯಾಗುತಂ ॥ ೬೧

ವ॥ ಅನ್ತು ಪರಿತಂದು ಕಾದಂಬರೀಪಾದಾಸನ್ನೆಯಾಗಿ ॥

ವೃ॥ ಬೆಸನಕ್ಕಾಗರಮಾದಳೀಕಸೊಬಗಿಂ ಕೂರ್ತ್ತಂದದಿಂ ಮತ್ತೆ ಪ । ತ್ತಿಸಲೆಂದಾಟಿಸಿ ಬಂದಪಂ ಬಱಿದೆಯುಂ ಬೂತಾಟಮಿನ್ನೇಕೆ ಮಾ ॥ ಣಿಸು ಬನ್ನಕ್ಕೆಡೆಯಾದೆ ನೀವಿಹಗನಿಂ ನಿನ್ನಾಣೆ ನೀನಿನ್ನುಪೇ । ಕ್ಷಿಸಿದಂದೆನ್ನಯ ಜೀವಮುಂ ಬಿಡದಿರೆಂ ಗಂಧರ್ವರಾಜಾತ್ಮಜೆ ॥ ೬೨

ವ॥ ಎಂದು ನುಡಿಯೆ ಕಾದಂಬರಿ ಮಂದಸ್ಮಿತವದನೆಯಪ್ಪುದು ಮವಿದಿತವೃತ್ತಾಂತೆಯಪ್ಪ ಮಹಾಶ್ವೇತೆಯಿದೇತಱಿಂ ನುಡಿದಪ್ಪುದೆಂದು ಮದಲೇಖೆಯುಂ ಬೆಸಗೊಳ್ವುದು ಮಾಕೆಯಿಂತೆಂದಳ್ ॥ ೬೩

---

೬೦. ಸುರುಳನೆ—ಗುಂಡಾಗಿ.

೬೨. ಅಳೀಕಸೊಬಗಿಂ—ಮಿಥ್ಯಾಸುಭಗತ್ವದಿಂದ; ಕೂರ್ತ್ತಂದದಿಂ—ಪ್ರೀತಿಪಟ್ಟಂತೆ; ಪತ್ತಿಸಲೆಂದು—ನನ್ನನ್ನು ಸೇರಿಸಿಕೊಳ್ಳಬೇಕೆಂದು; ಆಟಿಸಿ—ಅಪೇಕ್ಷಿಸಿ; ಬೂತಾಟಂ—ಬೂಟಾಟಿಕೆ; ಬನ್ನಕ್ಕೆ—ಕಷ್ಟಕ್ಕೆ.

* [ತಳೆದುನುಣ್ಮೊಱಿಗಳ್ನುಸುಸೊಂಕೆ]

ಕಂ॥ ಪರಿಹಾಸನೆಂಬುದಾಯಿ । ಪ್ಪರಗಿಳಿ ಕಾಳಿಂದಿಯೆಂಬುದೀ ಸಾರಿಕೆ ಯಿಂ ॥ ತೆರಡಕ್ಕಂ ಕಡುಕೂರ್ಮ್ಮೆಯಿ । ನರಸಿಯೆ ತಾಂಮಾಡಿದಳ್ವಿವಾಹೋತ್ಸವಮಂ ॥ ೬೪

ವ॥ ಅನ್ತು ಪರಸ್ಪರರಾಗಮನಪ್ಪುಕೆಯ್ದು ಸುಖದಿಂದಮಿರಿಲಿಂದು ಬೆಳಗಪ್ಪಾಗಳ್ ಕಾದಂಬರೀದೇವಿಯ ತಾಂಬೂಲಕರಂಕವಾಹಿನಿಯಪ್ಪ ತಮಾಲಿಕೆಯೊಡನೀಶುಕ ನೇಕಾಂತದೊಳೇನಾನುಮಂಗಳಪ್ರುತ್ತಿದ್ದರ್ದಂ ಕೇಳ್ದು

ಕಂ॥ ಬಪಪಿದ ಪುರುಡಿಂದಂ ನೋಡದು ನುಡಿಯದು ಪ್ರೋದ್ದರ್ದೆನಿತುಕಾಲ್ವಿಡಿದೊಡಮೊ ॥ ಲ್ಲದು ಕಿನಿಸಿ ಕಡುಪಿನಿಂದಂ । ನದುಗಿದಪುದು ತಿಳಿಯದೆಂತುಮಾತ್ತಿರ್ಗಳುಪಿದೊಡಂ ॥ ೬೫

ವ॥ ಎಂಬುದು ಮುಮಂ ಕೇಳ್ದು ನರೇಂದ್ರನಂದನಂ ಮಂದಸ್ಮಿತವದನನಾಗಿ ॥

ಕಂ॥ ಪರಿಹಾಸಕನೆಂದೆಂಬೊಂ । ದರಗಿಳಿ ಸೋಲ್ತರಸಿಯಡಪದಾಕೆಗೆ ಪಿರಿದುಂ । ವಿರಹದೆ ಬೆಂಪಪುದೆಂಬುದು । ಪರೆವತ್ತೆಲ್ಲೆಡೆಯೊಳಂ ಪರಂಪರೆಯಿಂದಂ ॥ ೬೬

ಪರಿಹರಿಸಿ ಕಳತ್ರಮು ನೀ । ಪರಿಹಾಸಂ ಲಜ್ಜೆಗೆಟ್ಟು ಮಾಣದೆ ಮತ್ತಂ ॥ ಪರಿತರೆಯುಂ ಬಾರಿಸರೆನೆ । ಪಿರಿದುಂ ದೇವಿಯರುಪೇಕ್ಷೆಯಾಗಲೆವೇಳ್ಕುಂ ॥ ೬೭

---

೬೪. ಆಯಿಪ್ಪರಗಿಳಿ—ಅದೊ ಅಲ್ಲಿರುವ ಅರಗಿಣಿಯು; ಪರಿಹಾಸನೆಂಬುದು—ಪರಿಹಾಸನೆಂದು ಕರೆಯಲ್ಪಡುವದು.

೬೫. ಪುರುಡಿಂದಂ—ಅಸೂಯೆಯಿಂದ ; ಕಿನಿಸಿ—ಕೋಪಿಸಿ ; ಕಡುಪಿನಿಂದಂ—ಕ್ರೌರ್ಯದಿಂದ; ನದುಗಿದಪುದು—ಪರಾಙ್ಮುಖವಾಗುವದು; ತಿಳಿಯದು—ಪ್ರಸನ್ನವಾಗದು ; ತಿಳುಪಿದೊಡಂ—ಸಮಾಧಾನಪಡಿಸಿದರೂ.

೬೬. ಸೋಲ್ತು—ಮೋಹಿಸಿ ; ಪರೆವತ್ತು ;—ಹರಡಿಕೊಂಡಿತು.

೬೭. ದೇವಿಯರ್—ಕಾದಂಬರೀದೇವಿಯುವರು ; ಬಾರಿಸರೆನೆ—ಆ ಶುಕನನ್ನು ತಡೆಯರೆನಲು ; ಉಪೇಕ್ಷೆಯಾಗಲೆವೇಳ್ಕುಂ—ಕಾದಂಬರೀದೇವಿಗೆ ಉದಾಸೀನತೆಯುಂಟಾಗಿಯೇ ಇರಬಹುದು.

ಕಂ॥ ಲೋಲಂಗೀವಿಹಗಂಗೀ । ಬಾಲೆಯು ನೀಮುಗ್ಧೆಯುಂ ವಿಚಾರಿಸದೆಱುಮಿಂ ॥ ತಾಲೋಕಿಸದೆಯುಂ ಈವುದೆ । ಕಾಳಿಂದಿಗೆ ದೇವಿಕೂಡಳಾಗಲೆವೇೞ್ಕುಂ ॥ ೧೯

ವೃ॥ ಸವತಿಯುರೆಂಬರಲ್ತೆ ಮುಳಿಸಿಂಗುರು ಕಾರಣ ಮಿನ್ನವಪ್ಪಬಂ । ನವ ನವರಾರೊ ಸೈರಿಸುವರಿನ್ನೆವರಂ ॥ ಪೆಱತಾದೊಡಾಗಳೇ ತವೆಜವದಿಂದೆ ಕಿಚ್ಚುಪ್ರೋಗಲಣ್ಮದೆ ನಂಜುದಿನಲ್ಕೊಡಚ್ಚಱದಿ । ಕ್ಕಱವೆ ಪೆಱತೇನೊ ಭಾವಿಸುವೊಡೆಂತಿದಱಿಂ ಪಿರಿದಪ್ಪ ಲಾಘವಂ ॥ ೨೦

ವ॥ ಅನ್ತುಮಲ್ಲದೆಯುಂ.

ಕಂ॥ ಇಂತಪ್ಪ ಪರಾಧಂಗೆ । ಯ್ದುಂ ತಾನಲ್ಲದಪ್ರೊಲೆಸೆವುದೀಶುಕನೊಳ್ಮ ॥ ತ್ತಂ ತೊಡರ್ದು ನಿಂದುದಪ್ಪೊಡಿ । ದಂತೊಱೆಯದೆ ನಿಲಿಸಲಕ್ಕುಮೇ ಸಾರಿಕೆಯುಂ ॥ ೨೧

ವ॥ ಎಂದು ನುಡಿಯೆ ಪರಿಹಾಸನರಸನ ಮೊಗಮಂ ನೋಡಿ.

---

೧೯. ಲೋಲಂಗೆ—ಕಾಮುಕನಾದ ಈ ವಿಹಗಂಗೆ—ಈ ಗಿಳಿಗೆ; ಈವುದೆ—ಕೊಡಬಹುದೆ; ದೇವಿ—ಕಾದಂಬರಿಯು; ಕಾಳಿಂದಿಗೆ—ಕಾಳಿಂದಿಯೆಂಬ ಸಾರಿಕೆಗೆ; ಕೂಡಳಾಗಲೆವೇೞ್ಕುಂ—ವಿಶ್ವಾಸವಿಲ್ಲದವಳೇ ಆಗಿರಬಹುದು.

೨೦. ಇನ್ನಂ+ಅಪ್ಪ=ಇನ್ನವಪ್ಪ—ಇಂಥಾದ್ದಾದ: ಬನ್ನವಂ—ಮನೋವ್ಯಥೆಯನ್ನು; ಪೆಱತಾದೊಡೆ—ಮತ್ತೊಂದುಪಕ್ಷಿಯಾಗಿದ್ದ ಪಕ್ಷದಲ್ಲಿ; ಕಿಚ್ಚುಪ್ರೋಗಲ್—ಅಗ್ನಿಪ್ರವೇಶಮಾಡುವಪಕ್ಕೆ; ಅಣ್ಮದೆ—ಸಮರ್ಥವಾಗದೆ; ನಂಜುದಿನಲ್ಕೆ—ವಿಷಪಾನಮಾಡುವಪಕ್ಕೆ; ಬಡಚ್ಚಱದಿಕ್ಕಱವೆ—ಪ್ರಯತ್ನಪಡದೇ ಇದ್ದೀತೆ.

೨೧. ಇಂತಪ್ಪ ಅಪರಾಧಂಗೆಯ್ದುಂ—ಇಂಥಾ ಅಪರಾಧವನ್ನು ಮಾಡಿಯು; ಈ ಶುಕಂ ತಾನಲ್ಲದಪ್ರೊಲ್—ತಾನು ಅಪರಾಧಿಯಲ್ಲದಂತೆ; ಎಸೆವುದು; ಈ ಶುಕನೊಳ್, ತೊಡರ್ದು—ಸಿಕ್ಕಿಕೊಂಡು; ನಿಂದುದಪ್ಪೊಡೆ—ಈ ಸಾರಿಕೆ ನಿಂತರೆ; ಇದಂ ಸಾರಿಕೆಯುಂ—ಈ ಹೆಣ್ಣುಗಿಳಿಯನ್ನು; ತೊಱೆಯದೆ—ಬಿಟ್ಟುಬಿಡದೆ; ನಿಲಿಸಲಕ್ಕುಮೆ—ಕಾದಂಬರಿ ಸಮೀಪದಲ್ಲಿ ಇಟ್ಟುಕೊಳ್ಳಬಹುದೆ?

ಕಂ॥ *[ಬಳದೊರ್ಡೆ ಪರಿಹಾಸದನುಡಿ] । ಗಳವೆಂಬುದ ನೆಱಿವಳೆಲ್ತೆ ಸಾರಿಕೆ ಬಲ್ಲಳ್ ॥ ಮುಳಿವತಿಳಿವಡೆಯುಮಂ †[ವೇ । ಣ್ಣೋ] ಳಗಾಗಳ್ವಕ್ರಭಣಿತಿಗಳ್ಗವನಿಪತೀ ॥ ೨೦

ವ॥ ಎಂದುನುಡಿವುತ್ತಿರ್ಪನ್ನೆಗ ಮೋರ್ವ್ವಂ ಕಂಚುಕಿ ಬಂದು ಗಂಧರ್ವ್ವರಾಜನುಂ ಮದಿರಾಮಹಾದೇವಿಯುಂ ನಿಮ್ಮಂನೋಡಲುತ್ಕಂಠರಾಗಿ ಕರೆಯಲಟ್ಟಿದರೆಂಬುದುಂ ಮಹಾಶ್ವೇತೆ ಪೋಗಲುದ್ಯೋಗಂಗೆಯ್ದರಸಂಗಿಕ್ಕೆದಾಣಮಾವುದೆಂದು ಕಾದಂಬರಿಯುಂ ಬೆಸಗೊಳ್ವುದು ಮಾಕೆಯಿಂತೆಂದಳ್ ॥ ೨೩

‡ಕಂ॥ ಮೊದಲೀಯರಸ ನನಾಂಕಾ । ಣ್ಬುದು ಮೆನ್ನಯ ತನುವು ಮೆನ್ನದಲ್ತೆನೆ ಮನೆಯಾ ॥ ರದು ನೃಪತಿಗೆಲ್ಲಿ ಬಗೆಬ । ಪ್ಪುದಾವೆಡೆ ಭವನ್ಮನೋಜ್ಞಮಲ್ಲಿಯೆನಿಲಿಸಿಂ ॥ ೨೪

ವ॥ ಎಂಬುದುಂ ಮಹಾಶ್ವೇತೆ ನಿಜಪ್ರಾಸಾದಸಮೀಪವರ್ತಿಯಪ್ಪ ಪ್ರಮದವನಕೇಳೀಶೈಲದ ರತ್ನಭವನದ ಲರಸನಿರ್ಕ್ಕೆಂದು ಪೇಳ್ದು ಚೈತ್ರರಥನಂ ಕಾಣಲ್ಕೆ ಪೋದಳತ್ತಲಾಕಾಂತೆಯ ಪಿಂತನೆ ಚಂದ್ರಾಪೀಡಂ ವಿನೋದಾರ್ಥಂ ಕಾದಂಬರಿಯ ಬೆಸದಿಂ ಪ್ರತಿಹಾರಪ್ರೇಷಿತೆಯರಪ್ಪ ವೀಣಾವೇಣುವಾದ್ಯನಿಪುಣೆಯರುಂ ಗೀತಕಲಾಕುಶಲೆಯರುಂ ದುರೋದರಕ್ರೀಡಾರಾಗಿಣಿಯರುಂ ಚಿತ್ರಕರ್ಮಚತುರೆಯರುಂ ಸುಭಾಷಿತಪಠನಪರಿಣತೆಯರುಂ ಎನಿಸಿದ ಕನ್ನಿಕೆಯರೊಡನೆ ಕೇಯೂರಕೋಪದಿಶ್ಯಮಾನ ಮಾರ್ಗನಾಗಿ ಕೇಳೀಶೈಲಮಣಿಮಯಭವನಕ್ಕೆ ಬಿಜಯಂಗೆಯ್ದನನ್ನೆಗಮಿತ್ತಲ್ ಗಂಧರ್ವರಾ

---

೨೦. ಬಳದೊರ್ಡೆ—ಹರಟಿಕೊಂಡರೆ ; ಮುಳಿವ—ಕೋಪಿಸಿಕೊಳ್ಳುವ; ತಿಳಿವ—ಪ್ರಸನ್ನಳಾಗುವ ; ಎಡೆಯುಮಂ—ಸಮಯವನ್ನೂ ಕೂಡ ; ಬಲ್ಲಳ್—ಅರಿಯುವಳು.

೨೩. ಇಕ್ಕೆದಾಣ—ಬಿಡಾರವು.

೨೫. ದುರೋದರ—ಜೂಜು; ಆಭಿಜಾತ್ಯರ— ಸತ್ಕುಲಪ್ರಸೂತರ.

*[ಬಳದಡೆ ಕಿಱಿದೇಂನುಡಿ] †[ಬೇಡೊ]

‡ ಕಂ॥ ಇದಲೆನ ಲೆನ್ನಿಂದಂ ಕಾ । ಣ್ಬುದುಮೆನ್ನಯಕನವುನಿಮ್ಮದಲ್ಲೆನೆಮನೆಯಾ ॥ ರದು ನೃಪತಿಗೆಲ್ಲಿಬಗೆಬ । ಪ್ಪುದೆಲ್ಲಿಗೆ ಭವನ್ಮನೋಜ್ಞಮಲ್ಲಿಯೆನಿಲಿಸಿಂ ॥

ಜಪುತ್ರಿ ವಿಸರ್ಜಿತಸಕಲಸಖೀಜನೆಯುಂ ಪರಿಮಿತಪರಿಚಾರಿಕಾನುಗಮ್ಯಮಾನೆಯುಮಾಗಿ ತನ್ನ ಕನ್ನೆಮಾಡಮನೇಱಿ ಶಯ್ಯಾತಳದೊಳ್ ಮೆಯ್ಯನಿಕ್ಕಿ ತನ್ನಂ ತಾನಱಿಯದಲೆ ಚಪಲೆ ನೀನಿದಾವ ಕಜ್ಜಕ್ಕುಜ್ಜುಗಂಗೆಯ್ದೆ ಯೆಂದು ಲಜ್ಜೆಯಿಂ ತರ್ಜಿತೆಯಾದಂತೆಯುಂ ಗಂಧರ್ವರಾಜನಂದನೆ ನಿನಗಿದಾವಯುಕ್ತಮೆಂದು ವಿನಯಮೆ ತನ್ನನುಪಾಲಂಭನಂಗೆಯ್ವಂತೆಯುಂ ಬಾಲೆ ನಿನ್ನ ಬಾಲಭಾವಮೆತ್ತವೋದುದೆಂದು ಮುಗ್ಧತೆಯೆ ತನ್ನಂ ಹಾಸ್ಯಂಮಾಡಿದಂತೆಯುಂ ಕುಲಕನ್ನೆಯುಗ್ಗಿರ್ದನ್ನಯುಮೆಂದು ಮಹತ್ವಮೆ ಗರ್ಹಿಪಂತೆಯುಂ ದುರ್ವಿನೀತೆ ವಿನಯಂಗೆಟ್ಟೆಯೆಂದಾಚಾರಮೆ ತನ್ನಂ ಜಡಿವಂತೆಯುಂ ಮೂಢೆ ಮದನನಿಂ ಲಘುವಾದೆಯೆಂದಾಭಿಜಾತ್ಯಮೆ *[ತನ್ನನನುಶಾಸಿಪಂತೆಯುಂ] ನಿನಗೆ ತರಳತೆಯಿದೆತ್ತಣಿಂ ಬಂದುದೆಂದು ಧೈರ್ಯಮೆ ಧಿಕ್ಕರಿಸುವಂತೆಯುಂ ಅತಿಲಜ್ಜಿತೆಯಾಗಿ ತನ್ನೊಳಿಂತೆಂದಳ್ ॥ ೨೫

ವೃ॥ ಮನಮಱಿಗುಂ ನರೇಂದ್ರಸುತನೆಂದಿನಿಸಳ್ಕನೆ ಸುತ್ತಲುಂ ಸ
ಖೀ । ಜನಮಿರೆಯುಂ ವಿಚಾರಿಸೆನೆ ದುಃಖದೊಳಕ್ಕ ನಿರಲ್ಕೆ ಲಜ್ಜೆಗಾಯೆನೆ
ಗುರುಗಳ್ಗೆ ಬೆಳ್ಕಱೆನೆ ಚೇಟಿಕೆಯನ್ನೆರೆದಿರ್ದ್ದರೆಂಬಿದಂ । ನೆನೆಯೆನೆ ಕಟ್ಟೆ
ನೇನಸಿರದಿಂತುಟು ವಿಭ್ರಮದಿಂದೊಡಚ್ಚಿರ್ದೆಂ ॥ ೨೬

ಕಂ॥ ಕಿಱುಗೂಸುಗಳಂ ಮೊದಲಾ । ಗಱಿದಪರೆನೆ ಮದನಹತಕ
ನಿಂದಂ ನೆಱೆಮು । †[ನ್ನುಱಿವ್ರೋದಕ್ಕಂ] ತೆಱಂ ಪೇ ॥ ಳಱಿಯಳೆ ಮುನ್ನಮೆ
ಮದೀಯಧೈರ್ಯಚ್ಯುತಿಯಂ ॥ ೨೭

---

೨೬. ನರೇಂದ್ರಸುತಂ ಮನಮಱಿಗುಂ—ಮನಸ್ಸನ್ನು ತಿಳಿಯುತ್ತಾನೆ; ಎಂದು, ಇನಿಸು—ಸ್ವಲ್ಪಮಾದರೂ; ಅಳ್ಕನೆ—ನಾನು ಭಯಪಡಲಿಲ್ಲವಲ್ಲಾ!; ಅಕ್ಕಂ—ಮಹಾಶ್ವೇತೆಯು; ಇನಿತೊಂದು—ದುಃಖದೊಳಿರಲ್ಕೆ; ಲಜ್ಜೆಗಾಯೆನೆ—ಲಜ್ಜೆಯನ್ನು ಕಾಪಾಡಿಕೊಳ್ಳಲಿಲ್ಲವಲ್ಲಾ!; ಬೆಳ್ಕಱೆನೆ—ಭಯಪಡಲಿಲ್ಲವಲ್ಲಾ. ಅಳ್ಕಂ+ಎ=ಅಳ್ಕನೆ. ಅಳ್ಕಂ ಎಂಬುವದು ಭೂತಾರ್ಥದ ಪ್ರತಿಷೇಧ ಕ್ರಿಯೆಯು ಶಮ. ಸೂ. ೧೧೦.

೨೭. ಮದೀಯ ಧೈರ್ಯಚ್ಯುತಿಯಂ, ಕಿಱುಗೂಸುಗಳಂ ಮೊದಲಾಗಿ, ಅಱಿದಪರೆನೆ—ಬಲ್ಲರು ಎಂಬಲ್ಲಿ, ಮದನಹತಕನಿಂ; ನೆಱೆನುಱಿವ್ರೋದ—ಬಹಳವಾಗಿ ಅರ್ದಿತಳಾದ ಅಂದರೆ ಪೀಡಿತಳಾದ; ಅಕ್ಕಂ—ಮಹಾಶ್ವೇತೆಯು, ಅಱಿಯಳೆ?

*[ತನಗಳಲ್ಲಂಕೆಯುಂ] †[ಮುನ್ನಱಿಹೋದತ್ತಕ್ಕಂ]

ಕಂ॥ ಏನೆಂಬರೊ ತಾಯ್ತಂದೆಯು । ರೇನಂ ಗಂಧರ್ವಲೋಕವೆಂ ಗುವೊ ಕೇಳ್ದಂ ॥ ತೇನೆಂಬೆನದೇಗೆಯ್ದಪೆ । ನೇನೆವದಿಂ ಮರಸಿದಪ್ಪೆ ನೆನ್ನಯತಪ್ಪಂ ॥ ೭೮

ವೃ॥ ತನುವಂ ತೆಯ್ದಪ್ಪಳಕ್ಕಂ ಬ್ರತದೊಳೆನುತೆ ಕನ್ಯಾಬ್ರತಕ್ಕಂತೆ ಪೂಣ್ದಿ । ರ್ದ್ದನದಂ ಕೇಳ್ದರ್ದರಂತೆನ್ನಯ ಕೆಳದಿಯ ರಾಮಾರ್ಗದಿಂದಂತೆ ಕೇಯೂ ॥ ರನ ಕೈಯೊಳ್ಮಂ ಮಹಾಶ್ವೇತೆಗೆ ವಿಗೆ ಸುಡಿದಾನಟ್ಟಿಯುಂ ಮತ್ತಿದೇ [ನೆಂ । ಬೆನೊ] ಬಂದತ್ತೆತ್ತಣಿಂದೆಂದಱಿಯೆ ನೆನಗೆ ಮತ್ಪಾಪದಿಂ ವಿಪ್ರಲಂಭಂ ॥ ೭೯

ಕಂ॥ ಪಿಱತಂತಿಕ್ಕೆಂದುಮಂ ಕೇ । ಳ್ದಱಿಯೆಂ ಕಂಡಱಿಯೆ ನರಸನೆಂದಾರೆಂದಾ ॥ ನಱಿಯೆಂ ನಾಣ್ಗಿಡುವಿನ ವಿಾ । ತೆಱದಿಂದನ್ನಂ ವಿಡಂಬಿಸಲ್ಪುಂಡರಿಕುವೋ ॥ ೮೦

ವೃ॥ ಮುನಿಸಿಂ ಮನ್ಮಥನಸ್ತ್ರಪಂಜರದೊಳಿಟ್ಟೆನ್ನಂ ನೃಪಂಗೊಪ್ಪಗೊ । ಟ್ಟನೊ ತದ್ದರ್ಶನಮಾತ್ರದಿಂ ಗುಣಪಣಕ್ಕಾನಾವಗಂ ಮಾಱುವ್ರೋ॥ ದೆನೊ ರಾಗೋದಯ ಮೆನ್ನನೋವದೆ ಳದೊಯ್ದೀಂ ತೊಳ್ತುಗೊಟ್ಟತ್ತೊಭೋಂ । ಕೆನಲೆನ್ನಿಂದ್ರಿಯ ಸಂಕುಳಂ ಪಿಡಿದು ತಂದೀಂ ಕಟ್ಟಿಮುಂದಿಟ್ಟುದೋ ॥ ೮೧

ಕಂ॥ ನೋಡಿದವಸಿತಱೊಳೆ ಚಂದ್ರಾ । ಪೀಡಂ ಸಂತಾಪದೊವವ ನೆನಗಿಂತೀಗಳ್ ॥ ವಾಡಿದನಾತನ ದೆಸೆಯುಂ । ನೋಡಲ್ಕಂಜುವೆ ನೆನುತ್ತೆ ಚಿಂತಿಸುವಿನೆಗಂ ॥ ೮೨

---

೭೮. ಏನಂ + ಎಂಬರೊ = ಏನೆಂಬರೊ, ಏನಂ + ಗೆಯ್ದಪೆಂ = ಏಗೆಯ್ದಪೆಂ, ಇವು ಕ್ರಿಯಾಸಮಾಸವು ಇಲ್ಲಿ ಪೂರ್ವಪದಾಂತ್ಯಕ್ಕೆ ಲೋಪವಿಕಲ್ಪವು. ಶಮ. ಸೂ. ೧೭೩

೮೧. ಒಪ್ಪಗೊಟ್ಟನೊ—ಕೈಗಾಣಿಕೆಯಾಗಿ ಒಪ್ಪಿಸಿದನೊ ; ಗುಣಪಣಕ್ಕೆ—ಅರಸನಗುಣವೆಂಬ ದ್ರವ್ಯಕ್ಕೆ ; ಮಾಱುವ್ರೋದೆನೊ—ವಿಕ್ರಯಿಸಲ್ಪಟ್ಟೆನೊ ; ರಾಗೋದಯಂ—ಅನುರಾಗವು ; ಓವದೆ—ಬಿಡದೆ, ಎನ್ನಂ, ತೊಳ್ತುಗೊಟ್ಟತ್ತೊ ಏಂ—ನನ್ನನ್ನು ದಾಸಿಯನ್ನಾಗಿ ಕೊಟ್ಟಿತೋ ಏನು ?

೮೨. ಸಂತಾಪದ, ಒದವಂ—ಪ್ರಾಪ್ತಿಯನ್ನು ;

ವ॥ ನೀನಿಂತು ಪುಸಿಸ್ವೈರಣೆಯು ನೊಡಚ್ಯ್ವರ್ವೊಡಿಂ ಪೋದಪೆ ನೆಂ ದಂತರ್ಗತನಪ್ಪ ಚಂದ್ರಾಪೀಡನಿಂ ಪರಿಹಸಿತೆ ಯಾದಂತೆಯುಂ ಆತನಂ ಪ್ರ ಕ್ಷಾಳಿತಲೋಚನೆಯಾಗಿ ಮಗುಳೆ ನೋಡಿ ಕೃತಾರ್ಥೆಯಾಗೆಂದು ಬಾಷ್ಪದಿಂ ದಳಿಂತೆಯಾದಂತೆಯುಂ ನಿನ್ನ ಧೈರ್ಯ್ಯವಲೇಪಮಂ ಪ್ರಾಣಂಬೆರಸು ತೆಗೆ ಯದೆ ಪೋನೆಂದು ಮನೋಭವನಿಂ ನಿರ್ಭರ್ತ್ಸಿತೆಯಾದಂತೆಯುಂ ಯುವ ರಾಜಾಭಿಮುಖಹೃದಯೆ ಯಾಗಿ ಮನಂ ಗೊಟ್ಟತಿ ಪ್ರೇಮವಶದಿ ನಸ್ವತಂ ತ್ರೀಕೃತೆಯುಂ ಪರವಶೀಭೂತೆಯು ಮೆನಿಸಿ ಭೋಂಕನೆಳ್ದು ಮಣಿಮಯ ಗವಾಕ್ಷನಿಕ್ಷಿಪ್ತ ಮುಖಿಯಾಗಿ ನೃಪರೂಪಚಂದ್ರನಿದ್ದ ಕೇಳಿಪರ್ವತಮನೇ ನೋಡುತಿರ್ದ್ದಳ್ ॥ ೮೩

ಕಂ॥ ಆನಂದಾಶ್ರು ಜಲವ್ಯವ । ಧಾನಕ್ಕುಮ್ಮಳಿಸಿದಂತೆವೊ ಲ್ಕಣ್ಮ ಲರಿಂ ॥ ದಾನೃಪನಂ ನೋಡದೆ ಕಮ । ಲಾನನೆ ನೆನಪಿನೊಳೆ ಪಡೆದು ನೋಡುತ್ತಿರ್ದ್ದಳ್ ॥ ೮೪

ಕಂ॥ ಬೆರಲ ಬೆಮರಿಂದೆ ನಾಂದಪು । ದಿರದನಿಸೆಂಬಂತೆ ಚಿತ್ರತೂಲಿಕೆ ಯಿಂದಂ ॥ ಬರೆಯದೆ ಕಾಮಿನಿ ವಿದ್ದಂ । ಬರೆದ ಳ್ಭಿಂತೆಯೊಳೆ ಮನುಜ ಮಕರಧ್ವಜನಾ ॥ ೮೫

ಕಂ॥ ಪುದಿದ ಪುಳಕಂಗ ಳಡ್ಡೈ । ಸದಿರವೆನುತ್ತಂಜಿದಂತೆ ನಳಿತೋ ಳ್ಗಳಿ ನ ॥ ಪ್ಪದೆ ಕಾಂತೆ ಹೃದಯದಿಂದ । ಪ್ಪಿದ ಳುತ್ಸುಕೆಯಾಗಿ ಮನುಜ ಮಕರಧ್ವಜನಾ ॥ ೮೬

ಕಂ॥ ತಪನಾದಪ್ರ *[ದುಳಿದರ ನೀ] । ಯೆಡೆಗೆ ನಿಯೋಜಿಸಲಿಕೆಂಬ ಪ್ರೀತಿ ನೃಪವರ ನಿ ॥ ರ್ದ್ದೆಡೆಗೆ ನಿಯೋಜಿಸಿದ ಳ್ಬೆಡ । ಪೆಡೆ ಯಾಡುವ ಬೆಸಕೆ ಕಣ್ಣೆ ತನ್ನಯ ಮನಮಂ ॥ ೮೭

೮೪. ವ್ಯವಧಾನಕ್ಕೆ—ಅಡ್ಡಿಗೆ ಉಮ್ಮಳಿಸಿ—ಚಿಂತಿಸಿ ; ಪಡೆದು—ಪ್ರೀತಿಸಿ.
೮೫. ಚಿತ್ರತೂಲಿಕೆ—ಬಣ್ಣದಕಡ್ಡಿ ; ವಿದ್ದಂಬರೆದಳ್—ಆಕೃತಿಯನ್ನು ಬರೆದಳು.
೮೭. ಈ ಯೆಡೆಗೆ—ಈ ಕಾರ್ಯಕ್ಕೆ ; ಪಡೆಪಾಡುವ—ಓಡಾಡುವ ; ಬೆಸಕೆ —ಕೆಲಸಕ್ಕೆ.

*[ದಿರದಿರನೀ]

ವ|| ಇತ್ತಚ್ಚಂದ್ರಾಪೀಡಂ ಕ್ರೀಡಾಪರ್ವತದ ಮಣಿಮಯ ಭವನ ದೊಳ್ ||

ಕಂ|| ಅಡಿಯೊತ್ತಲ್ಕೇಯೂರಕ | ನೆಡೆಯಱಿದೋಲೈಸೆ ಕನ್ಯಕಾ ಸಂಕುಳವಂ || ದಡಕಿಲ್ಗೊಂಡೊಪ್ಪುವ ಕೌ | ಳುಡೆಯಿಂ ಸೊಗಯಿಸುವ ಪಾಸಿನೊಳ್ಪಟ್ಟಿರ್ದಂ || ೮೮

ವ|| ಇಂತು ಗಂಧರ್ವರಾಜನಂದನೆಯ ನೆಗಳ್ತೆಗೆ ಡೋಲಾಯಮಾನ ಚಿತ್ತನಾಗಿ ತನ್ನೊಳಿಂತೆಂದಂ.

ವೃ|| ಕುಸುಮಶರಾಸ್ತ್ರ ಪುಷ್ಪರಜದಿಂ ಪೊರೆದಂತಿರೆ ಬಾಷ್ಪವಾರಿಗ | ಳ್ಪಸರಿಸೆ ರಾಗವಗ್ಗಲಿಸೆ ಚಾರುಚಲನ್ನಯನ ತ್ರಿಭಾಗದಿಂ || ಕುಸಿಕುಸಿದೆನ್ನ ನೀಕ್ಷಿಸುವ ಳಾನಿನೀಕ್ಷಿಸ ಲಾ ಲತಾಂಗಿ ಲ | ಜ್ಜಿಸಿ ತನುವಂ ನಿಜಸ್ಮಿತಸಿತಾಂಶುಕ ಪಲ್ಲವದಿಂ ಮುಸುಂಕುವಳ್ || ೮೯

ವ|| ಮತ್ತಮಾಕಾಂತೆ ಲಜ್ಜಾನತವದನೆಯಾಗಿ ಪ್ರತಿಬಿಂಬಮಾದೊಡಂ ನೆಲಸುಗೆಂಬಂತೆ ಕಪೋಲಮಣಿದರ್ಪಣಮಂ ಸಮರ್ಪಿಸೆಯು ಮೆನಗೆ ತಂಬುಲಂಗೊಡಲುಜ್ಜುಗಂಗೆಯ್ವಲ್ಲಿ ನಡುಗುವ ಕೆಂದಳಮಂ ಚೆನ್ನೈದಿಲ್ಗೆ

---

೮೮. ಎಡೆಯಱಿದು—ಕಾಲವನ್ನು ತಿಳಿದು ; ಅಂದರೆ ತಾನು ಮಾಡತಕ್ಕ ಉಪಚಾರದ ಕಾಲವನ್ನು ತಿಳಿದು; ಓಲೈಸೆ—ಸೇವಿಸಲು; ಅಡಕಿಲ್ಗೊಂಡು—ಒಂದರಮೇಲೊಂದು ಒರಸೆಯಾಗಿದ್ದು; ಕೌಳುಡೆ—ದಿಂಬು.

೮೯. ಕುಸುಮಶರಾಸ್ತ್ರ—ಮನ್ಮಥ ಬಾಣಗಳಾದ, ಪುಷ್ಪ—ತಾವರೆ ಮೊದಲಾದ ಹುವ್ವುಗಳ ; ರಜದಿಂ—ಅನೇಕ ಬಣ್ಣವುಳ್ಳ ಪುಷ್ಪಧೂಳಿಯಿಂದ ; ಪೊರೆದಂತಿರೆ—ವ್ಯಾಪ್ತವಾಗಿದೆಯೊ ಎಂಬಂತೆ ; ಬಾಷ್ಪವಾರಿಗಳ್—ಆನಂದ ಬಾಷ್ಪಜಲಗಳು ; ಪಸರಿಸೆ—ವ್ಯಾಪಿಸಲು ; ರಾಗಂ—ಪ್ರೀತಿಯು ; ಅಗ್ಗಲಿಸೆ—ಹೆಚ್ಚಲು ; ನಯನತ್ರಿಭಾಗದಿಂ—ಕಡೆಗಣ್ಣಿನಿಂದ ; ಕುಸಿಕುಸಿದು—ತಿರುಗಿತಿರುಗಿ ; ನೋಡುವಳ್—ನೋಡುವಳು; ಪಲ್ಲವದಿಂ—ಸೆರಗಿನಿಂದ.

೯೦. ಪ್ರತಿಬಿಂಬ ಮಾದೊಡಂ—ಚಂದ್ರಾಪೀಡನ ಪ್ರತಿಬಿಂಬವಾದರೂ ; ನೆಲಸುಗೆ—ಕಪೋಲಸ್ಥಲದಲ್ಲಿ ನಿಲ್ಲಲಿ ; ಎಂಬಂತೆ—ಎಂಬುವಹಾಗೆ.

ತ್ತಿರಗುವ ಮಱಿದುಂಬಿಯ ಬಂಬಲಿಂ ತಮಾಲಪಲ್ಲವಮಂ ಪಿಡಿದು ತನ್ನ ಬಿಂದುವಿಡುವ ಮೊಗದ ಬೆಮರಂ ಬೀಸುವಂತೆಯುಮಿರ್ದ್ದಳಲ್ಲವೇನೆಂದು ತನ್ನೊಳಗೆ ಬಗೆಯುತ್ತ ಮಿಂತೆಂದಂ ‖ ೯೦

ವೃ‖ ಉದಕಾಂತಃಪಾತಿವೊಲ್ ಸ್ನೇಹದಲವಮೆನಸುಂ ಪರ್ವಿ ಮದ್ಯಾವನೋದ್ಯ । ನ್ಮದದೊಳ್ ತೋಱುತ್ತಮಿರ್ದ್ದಪ್ಪುದು ಕನಸಿನವೋಲೆನ್ನ ತತ್ಕಾಂಕ್ಷೆ ಕೈಸಾ ‖ ರದುದಂ ತೋರುತ್ತ ಮಿರ್ದ್ದತ್ತೆನಗೆ ಪಿರಿದು ಮಾಚಿತ್ತದೊಂದಾಸೆ ದಲ್ಮಾ । ಯದ ಕುಂಚಂಬೋಲಸಂಭಾವ್ಯಮನೆ ದಿಟಮೆನಲ್ತೋಱುತಿರ್ದ್ದಪ್ಪುದೀಗಳ್ ‖ ೯೧

ಕಂ॥ ಪಸರಿಸಿ ಮಿಥ್ಯಾಸುಕ । ಲ್ಪಸಹಸ್ರದಿ ನಾಸೆವಡಿಸುತಿಪ್ಪುರ್ದು ಕಿಱುವಾ ‖ ನಿಸಿಕರ್ಕ್ಕಳಲ್ಲಿ ಸಾಜದೊ । ಳೆ ಸುಲಭಮೆನಿಸಿರ್ದ್ದ ಮದನ ಲಾಘವಮಾಗಳ್ ‖ ೯೨

ವ॥ ಎಂದು ಭಾವಿಸುತ್ತಮಿರ್ದ್ದ.

ಕಂ॥ ಎನಗಿನಿತು ಚಿಂತೆಯೇಕೆ ಗ । ಡೆನಗದೆ ದಿಟಮಪ್ಪ ದಾದೊಡಪ್ರಾರ್ಥಿತಮಾ ‖ ವನಿತೆಯ ಮನಮಂ ಪ್ರಕಟಿಸಿ । ಮನೋಭವಂ ತಾನೆ ಕಳೆದಪಂ ಸಂದೆಯಮಂ ‖ ೯೩

ವ॥ ಎಂದವಧಾರಿಸಿ ಶಯನತಳದೊಳ್ಕುಳ್ಳಿರ್ದ್ದ ಕನ್ಯಕೆಯರೊಡನೆ ನೆತ್ತದೊಳಂ ವೀಣಾವಾದ್ಯದೊಳಂ ಸ್ವರಸಂದೇಹವಿವಾದದೊಳಂ ಸುಭಾಷಿತಗೋಷ್ಠಿಯೊಳಂ ಪಲವುಂ ಸುಕುಮಾರಂಗಳಪ್ಪ ವಿಲಾಸಂಗಳಿಂ

ದುಂಬಿಯ ಬಂಬಲಿಂ ತಮಾಲ ಪಲ್ಲವದಿಂ ಬೀಸುವಂತೆಯುಮಿರ್ದ್ದಳ್—ಅಂದರೆ ಭ್ರಮರಗಳು ಸುತ್ತುತ್ತಿರಲು ತಮಾಲ ಪಲ್ಲವದಿಂದ ಮುಖದಬೆವರನ್ನು ಬೀಸುತ್ತಾಯಿದ್ದಳೋ ಎಂಬಂತಿರ್ದ್ದಳೆಂದಭಿಪ್ರಾಯವು.

೯೧. ಸ್ನೇಹದಲವಂ—ಕಾದಂಬರಿಯೊಡನೆನಗೆ ಉಂಟಾದಸ್ನೇಹಲೇಶವು ; ಮದ್ಯಾವನೋದ್ಯನ್ಮದದೊಳ್ ; ಉದಕಾಂತಃ ಪಾತಿವೋಲ್—ನೀರಿನಲ್ಲಿಬಿದ್ದ ತೈಲಬಿಂದುವಿನಂತೆ ಎನಸುಂ—ಹೆಚ್ಚಾಗಿ; ಪರ್ವಿ—ವಿಸ್ತರಿಸಿಕೊಂಡು ; ತೋಱುತ್ತಮಿರ್ದ್ದಪ್ಪುದು ಎಂದನ್ವಯವು.

೯೨. ಕಿಱುವಾನಿಸಿಕರ್ಕ್ಕಳಲ್ಲಿ—ಅಲ್ಪಮನುಷ್ಯರಲ್ಲಿ ; ಸಾಜದೊಳೆ—ಸ್ವಭಾವದಿಂದ.

ಕ್ರೀಡಿಸುತ್ತಮಿರ್ದ್ದ ಪೌರವಧೂಪವನಾಲೋಕನಕುತೂಹಲಿತಮಾನಸೆ
ನಾಗಿ ಕ್ರೀಡಾಪರ್ವತಮನೇಱುವ ಯುವರಾಜನಂ ನೋಡಿ ॥ ೯೪

ವೃ॥ ನೋಡಲೊಡಂ ಮನಂಬೆದಱೆ ಕಲ್ಲೆರ್ದೆಯಂ ಕಡುಪಿಂದೆ
ಕಾಮನೇ। ಸಾಡೆ ಲತಾಂಗಿ ನೊಂದಿನಿಸುಮಲ್ಲಿರದಕ್ಕನ ಬರ್ಪ್ಪಬಟ್ಟೆಯಂ॥
ನೋಡುವ ಮೋಳಿವೊಂದು ಪರಿಚಾರಕಿಯುಬ್ಬರ ಸೋಗಳೇಱುವ। ಳ್ಮಾಡಮ
ನದ್ರಿರಾಜಸುತೆ ತಾರನಗೇಂದ್ರಮ ನೇಱುವಂದದಿಂ ॥ ೯೫

ವ॥ ಅಂತು ಸೌಧತಳಮ ನೇಱಿ ಪರಿಮಿತ ಪರಿಜನೆಯಾಗಿರ್ದ್ದಲ್ಲಿ॥

ಕಂ॥ ತೊಳತೊಳತೊಳಗುವ ಬೆಳ್ದಿಂ। ಗಳ ಪಕ್ಕದೆ ಪೊಳೆವ
ರಶ್ಮಿಜಾಲಮಿದೆನೆ ಕೋ॥ ಮಳೆಯು ಸಿತಚ್ಛತ್ರದ ಕೆಲ! ದೊಳದೇ ನೊ
ಪ್ಪಿದುವೊ ಧವಳಚಮರರುಹಂಗಳ್ ॥ ೯೬

ವೃ॥ ನೆರೆದು ಸಹಜಾಮೋದಕ್ಕೆೞ್ತಂದು ತುಂಬಿಯ ಬಂಬಲಾ।
ವರಿಸ ಲೆನಸುಂ ತನ್ನಂ ನೀಲಾಂಬರಚ್ಛದೆಯಾಗಿ ಸುಂ। ದರಿ ಪಗಲೊಳಂ
ಚಂದ್ರಾಪೀಡಾಭಿಸಾರಣವೇಷಮಂ। ಪಿರಿದು ಮೊಲವಿಂದ ಭ್ಯಾಸಂಗೆಯ್ವು
ತ್ತಿರ್ಪ್ಪವೊಲೊಪ್ಪಿದಳ್ ॥ ಅವಲ್ಲದೆಯುಂ — ೯೭

ವೃ॥ ಚಮರರುಹಾಗ್ರಮಂ ಪಿಡಿದು ಬಿಚ್ಚುರ್ತಮಿರ್ಪ್ಪಸಿತಾತಪತ್ರ
ದಂ। ಡಮ ನವಲಂಬಿಸಿರ್ಪ್ಪಡಪದಾಕೆಯು ಮುಯ್ಪಿನಮೇಲೆ ಹಸ್ತ ಯು॥
ಗ್ಮಮ ನೊಸೆದಿಕ್ಕುತಿರ್ಪ್ಪ ಮವಲೇಖೆಯು ನಳ್ಕುಱಿ ನಪ್ಪುತಿರ್ಪ್ಪಗೆಯ್ತ
ಮವೆಸಿತಾನು ಮುಣ್ಮಿದುವವಳ್ಗ ದಿರೊಳ್ನೃಪರೂಪಚಂದ್ರನಾ ॥ ೯೮

---

೯೫. ಕಲ್ಲೆರ್ದೆಯಂ—ಕಠಿಣಹೃದಯನಾದ : ಕಾಮಂ—ಮನ್ಮಥನು ; ಕಡು
ಪಿಂದೆ—ಕ್ರೌರ್ಯದಿಂದ ; ಪಿಸಾಡೆ—ಬಾಣಪ್ರಯೋಗವನ್ನು ಮಾಡಲು.

೯೬. ತೊಳತೊಳತೊಳಗುವ—ಅತ್ಯಂತವಾಗಿ ಹೊಳೆಯುವ ; ತೊಳಗು
ಶಬ್ದವು ಅಧಿಕ್ಯಾರ್ಥದಲ್ಲಿ ತ್ರಿರುಚ್ಚಾರಣೆಯನ್ನು ಪಡೆದಿರುವದು ಶಮ. ಸೂ. ೧೯೫.
ಬೆಳ್ದಿಂಗಳ—ಬಿಳುಪಾದ ಪೂರ್ಣಚಂದ್ರನ.

೯೮. ಬಿಚ್ಚುರ್ತಮಿರ್ಪ್ಪ, ಅವಲಂಬಿಸಿರ್ಪ್ಪ, ಇವೇ ಮೊದಲಾದ ಕೃದಂತಗಳು
ಗೆಯ್ತಂ ಎಂಬುದಕ್ಕೆ ವಿಶೇಷಣಗಳು. ಮುಯ್ಪು—ಭುಜಶಿರಸ್ಸು ; ಗೆಯ್ತಂ+ಅವು+
ಎನಿತಾನುಂ+ಉಣ್ಮಿದುವು.

ವ॥ ಅದಲ್ಲದೆಯುಂ—

ಕಂ॥ ಕೆಳದಿಯ ನಾಗಳ್ಕಣ್ಗೊರ್ೞ । ತ್ಪಳದಿಂದಂ ವೋದೆ ತಪ್ಪಿಸ ಲ್ಪರಿವಳಬೆ ॥ ನ್ನೊಳೆ ಪರಿವಳಿರದೆ ನಗುತಂ । ನಳಿನಾನನೆ ಲೀಲೆಯಿಂದ ವೊಂದೆರಡಡಿಯಂ ॥ ೯೯

ವ॥ ಅನ್ತು ಪಲತೆಱದೆ ನೆಗಳುತ್ತ ಮಿರ್ದ್ದರ್ಗಳಲ್ಲಿ—

ಕಂ॥ ವನಿತೆ ಮನೋಹರನಂ ತಾ । ನನುರಾಗದೆ ನೋಡುತಿರ್ಪ್ಪ ತನ್ನುಮ ನಾತಂ ॥ ಮನವೊಸೆದು ನೋಡುತಿರ್ಪ್ಪದ । ಱನಾಗಳಣ ಮಱಿದಳಿಲ್ಲ ಪ್ರೊಳ್ತಿನ ಪವಣಂ ॥ ೧೦೦

ವ॥ ಆಗಳೊರ್ವ್ವ ಪಡಿಯರತಿ ಮಹಾಶ್ವೇತೆ ಬಂದಳೆಂದು ಬಿನ್ನವಿಸೆ ಮಾಡದಿಂದಿಳಿದು ಮಹಾಶ್ವೇತಾನುರೋಧದಿಂದ ಮೆಂತಾನುಂ ಮಜ್ಜನ ಭೋಜನಾದಿ ದಿವಸವ್ಯಾಪಾರಮಂ ಮಾಡಿದಳಿತ್ತ ಚಂದ್ರಾಪೀಡನುಂ ಕ್ರೀಡಾಪರ್ವತದಿಂದಿಳಿದು ಸ್ನಾನದೇವತಾರ್ಚನಭೋಜನಾದಿ ದಿವಸವ್ಯಾಪಾರಮಂ ತೀರ್ಚ್ಚಿ ತದನಂತರಂ ಕೃತಕಾಚಲದ ತಪ್ಪಲಲ್ಲಿ ॥ ೧೦೧

ವೃ॥ ಹರಿಣೀರೋಮಂಥಫೇನಪ್ರಸೃತ ಕಣಲವಾಸಾರದಿಂ ನಾಂದು ಜೋಂಪಿ । ಚ್ಚರಣಾಲಕ್ತಾಂಶುವಿಂ ಕೆಂಪಡರ್ದ ಲತೆಯ ಬಾಳ್ಗೊಂಪದಿಂ ದೊಪ್ಪಿ ಪ್ಪುಷ್ಪೋ ॥ ತ್ಕರರೇಣು ಸ್ತೋಮದೊಳ್ತಳ್ತ ಚಲಿತ ಯಮುನಾ ವಾರಿವಿಸ್ತಾರಮಂ ಮಾಂ । ಕರಿಸಲ್ಸಾಲ್ದಿರ್ದ್ದ ಹಾರೀತಕ ಹರಿತಶಿಲಾ ಪಟ್ಟದೊಳ್ಭೂಪನಿರ್ದ್ದಂ ॥ ೧೦೨

ವ॥ ಅನ್ನಾಸಮಯದೊಳ್—

---

೯೯. ವೋದೆ—ಹೊಡೆಯಲು; ಪರಿವಳ—ಓಡುವವಳ; ಬೆನ್ನೊಳೆ—ಹಿಂದೆ; ವನಿತೆ, ಪೊಳ್ತಿನ, ಪವಣಂ—ಪ್ರಮಾಣವನ್ನು; ಅಱದಿಲ್ಲ—ತಿಳಿಯಲಿಲ್ಲ.

೧೦೨. ನಾಂದು—ದ್ರವಿಸಿಷ್ಟನಾಗಿ; ಮಾಂಕರಿಸಲ್—ತಿರಸ್ಕರಿಸುವದಕ್ಕೆ; ಸಾಲ್ದಿರ್ದ—ಸಮರ್ಥನಾಗಿದ್ದ; ಹಾರೀತಕಹರಿತಶಿಲಾಪಟ್ಟದೊಳ್—ಹಾರೀತಕಪಕ್ಷಿಯಂತೆ ಹಸುರಾಗಿರುವ ಶಿಲಾತಲದಲ್ಲಿ.

ವೃ॥ ಬಿಸಿಲೆಲ್ಲಂ ಬಿಸನಾಳಜಾಲಕದಿ ನಾಗಳ್ಕೂಡೆ ಪೀರ್ತ್ತಂದುದಾ । ಗಸವೆಲ್ಲಂ ಸುಧೆಯಿಂದೆ ಲೇಪಿಸಿದುದುರ್ವೀಚಕ್ರವೆಲ್ಲಂ ಪಯಃ॥ ಪ್ರಸರಾಪೂರದೆ ತೇಂಕಿದತ್ತು ದೆಸೆಯೆಲ್ಲಂ ಚಂದನಾಸಾರದಿಂ । ಮುಸುಕಿತ್ತೆಂಬಿನವೊಂದು ಬೆಳ್ವೆಳಗು ಪರ್ವಿತ್ತೆಯ್ದೆ ರೋದೋನ್ತಮಂ॥ ೧೦೩

ವ॥ ಅನ್ತು ಪಸರಿಸುವ ಬೆಳಗಿನ ಬಳಗಮಂ ನೋಡಿ.

ಕಂ॥ ಪರಿಭಾವಿಸಲಾರ್ಗ್ಗಂ [ತಾಂ । ನರಿದಾ] ಯ್ತೊರ್ಮ್ಮೆದಲೆ ಚಂದ್ರನುದಯಿಸಿದನೊ ಪೇ॥ ಳ್ಸುರಸಿಂಧುಗಗನಮಂ ಶೀ । ಕರನಿಕರದೆ ಸಿಂಪಿಸುತ್ತೆ ಧರೆಗಿಳಿದಪುದೋ॥ ೧೦೪

ವ। ಎಂದತಿಕುತೂಹಲಂಬೆರಸು ಬೆಳಗಿನ ಬರ್ಪ್ಪದೆಸೆಯಂ ನೋಳ್ಪನಮಾಗಳಿರ್ಪ್ಪಿಂ ಪೊರೆದ ದುಗುಲದಿಂ ಬಾಸಣಿಸಿ ಚಂದನಾನುಲೇಪಂ ತೀವಿದ ಸಿಪ್ಪಂಪಿಡಿದು ಕಯ್ಗೊಟ್ಟು ನಡೆವ ಪಡಿಯಱತಿಯುಂ ಮಾಲತೀಕುಸುಮಮಾಲಿಕೆಯಂ ಪಿಡಿದ ತಮಾಳಿಕೆಯುಂ ಸುಯ್ಯೆಲರಿಂ ಪಾಱುವಪ್ರವೆನಿಪ ದುಕೂಲಂಗಳಂ ಪಿಡಿದು ನೆಲನನುಷ್ಛಡಿಪ ಕೆಯೂರಕನುಮೊಡವರೆ ಕನ್ಯಕಾಪರಿವೃತೆಯುಂ ಛತ್ರಚಾಮರವಿರಾಜಿತೆಯು ಮಾಗಿಮುದಲೇಪೆ ಬರುತಿರ್ದ್ದಳಾಕೆಯ ಕೆಲದೊಳ್ ಬರ್ಪ್ಪತರಳಿಕೆಯ ಕಯ್ಯಸಿತಾಂಶುಕಾಚ್ಛಾದಿತರತ್ನಮಯಪಟಲಕದೊಳ್॥ ೧೦೫

---

೧೦೩. ಬಿಸನಾಳ—ತಾವರೆಯದಂಟಿನ ; ಜಾಲಕದಿಂ—ಬಲೆಯಿಂದ ; ಬಿಸಿಲೆಲ್ಲಂ, ಕೂಡೆ—ಸಂಗಡಲೇ ; ಪೀರ್ತ್ತಂದುದು—ಪಾನಮಾಡಲ್ಪಟ್ಟಿತು ; ಎಂಬಿನಂ—ಎಂಬಂತೆ ; ಅಂದರೆ ಬಿಸಿಲನ್ನು ಬೆಳ್ವೆಳಗು ತನ್ನ ಧಾವಳ್ಯದಿಂದ ಮರೆಮಾಡಿತೆಂದಭಿಪ್ರಾಯವು ; ತೇಂಕಿದತ್ತು—ತೇಲಿಸಲ್ಪಟ್ಟಿತು ; ರೋದೊಂತಮಂ—ಭೂಮ್ಯಂತರಿಕ್ಷಗಳನ್ನು.

೧೦೪. ತಾಂ—ಈ ಬೆಳಕು ; ಪರಿಭಾವಿಸಲ್, ಆರ್ಗ್ಗಂ, ಅರಿದಾಯ್ತು—ಅಸಾಧ್ಯವಾಯಿತು ; ಒರ್ಮ್ಮೆದಲೆ—ಏಕಕಾಲದಲ್ಲಿ.

೧೦೫. ಇರ್ಪ್ಪಿಂಪೊರೆದ—ದ್ರವದಿಂದಕೂಡಿದ ; ಬಾಸಣಿಸಿ—ಮುಚ್ಚಲ್ಪಟ್ಟು ; ಸಿಪ್ಪಂ—ಸಂಪುಟವನ್ನು ; ನೆಲನನುಷ್ಛಡಿಪ—ಪಾದಾವಧಾನವನ್ನು ಹೇಳುವ ; ಪಟಲಕ—ಗಾಸು.

ವೃ॥ ಪೊಳೆವೆಳದಿಂಗಳೊಳ್ಕುೞಿಗಳಿಂ ಸುರಸಿಂಧುವ ಶೀಕರಂಗಳಿಂ । ಜಳನಿಧಿಯಲ್ಲಿ ಮಾರ್ಪೊಳೆವ ತಾರೆಗಳಿಂ ಸಮೆದಂತೆ *[ಶಾರದಂ] ॥ ಗಳ ಜಸದೇಳ್ಗೆ ಲಕ್ಷ್ಮಿಯ ಮುಗುಳ್ನಗೆ ಜೊನ್ನದ ಬಾಳ್ಕೆ ರತ್ನಸಂ । ಕುಳದ ಧಿದ್ವೈವ ಮೊಂದೆಸೆದುದು ಜ್ಜ್ವಳಮೌಕ್ತಿಕಹಾರಮಂಡಳಂ ॥ ೧೦೬

ಅದಂ ಕಂಡು—

ಕಂ॥ ಎಲೆ ಚಂದ್ರಾತಪರುಚಿಯಂ । ಗೆಲೆವಂದೀಧವಳಿಮಕ್ಕೆ ಕಾರಣಮೀನಿ ॥ ರ್ಮಳತಾರಹಾರ ಮಿಂತೀ । ಗಳೆಂದು ಬಗೆದಂ ನರೇಂದ್ರನಂದನನಾಗಳ್ ॥ ಅಂತುಬಗೆಯುತ್ತಮಿರ್ದ್ದ— ೧೦೭

ಕಂ॥ ಮದಲೇಖೆಯು ಬರವಂ ಕಂ । ಡಿದಿರೇಳ್ವುದು ಮಾಕೆ ವಿನಯದಿಂ ತನ್ನ ಪದಾ ॥ ಬ್ಜದಮೇಲೆ ಮುಳ್ಗಲೊದವಿದ । ಪದಪಿಂ ತೆಗೆದೆತ್ತಿ ನೃಪಸುತಂ ಮನ್ನಿಸಿದಂ ॥ ೧೦೮

ವ॥ ಅಂತು ಮದಲೇಖೆಯುಮಂ ಪರ್ಯಂಕದೊಳ್ಕುಳ್ಳಿರಲೇಳ್ದು ನೃಪರೂಪಚಂದ್ರಂ ಸಿಂಹಾಸನದೊಳ್ಕುಳ್ಳಿರ್ದು ಮಾಕಾಂತೆ ತಾನೆೞ್ದು ಮಲಯಜಾನುಲಿಪ್ತದೇಹನುಮಂ ಮಾಲತೀಕುಸುಮದಾಮಶೇಖರನುಮಂ ಮಾಡಿದುಕೂಲಂಗಳ ನುಡೆಕೊಟ್ಟು ಹಾರಮಂ ಪಿಡಿದುಕೊಂಡಿಂತೆಂದಳ್ ॥

ವೃ॥ ಮನಮೊಲ್ದೀ ಮಧುರೋಕ್ತಿಗಾರೆಳಸರೀ ಮೆಲ್ಪಿಂಗದಾರ್ಮೆಚ್ಚರೀ । ವಿನಯಕ್ಕಾರೊಳಗಾಗರೀರುಜುಗುಣಕ್ಕಾರ್ಕರ್ಗ್ಗರರೀ ನಿನ್ನ ಪೆಂ ॥ ಪಿನ ಬಿಣ್ಪಿಂಗಿರದಾರ್ಮರುಳ್ಗೆಳಸರೀ ಸನ್ಮೂರ್ತಿಗಾರ್ನ್ನಟ್ಟನಾ । ಳ್ತನದೊಳ್ಸಲ್ಲದರೀಮನೋಹರತೆಗಾರ್ಸೋಲರ್ಮ್ಮಹೀವಲ್ಲಭಾ ॥ ೧೧೦

---

೧೦೬. ಒಳ್ಕುೞಿಗಳಿಂ — ನಿರ್ಮಲವಾದ ಕಲೆಗಳಿಂದ ; ಶಾರದಂಗಳ — ಶರತ್ಕಾಲಮೇಘಗಳ ; ಎಂದು — ಎನ್ನಲ್ಪಟ್ಟು.

೧೦೮. ಮುಳ್ಗಲ್ — ಬೀಳಲು.

೧೧೦. ಪೆಂಪಿನಬಿಣ್ಪಿಂಗೆ — ಗೌರವಾತಿಶಯಕ್ಕೆ ; ಮರುಳ್ಗೆಸರ್ — ವಿಮೋಹಿತರಾಗರು ; ಆಳ್ತನ — ಸೇವಕತ್ವ. ಇದು + ಋಜುಗುಣ = ಈರುಜುಗುಣ. ಶಬ್ದಾ. ಸೂ. ೪೦.

*[ಸಾರಸ]

ಕಂ॥ ಭುವನತ್ರಯಾಂತರಾಳ । ಪ್ರವಿದಿತ ನಿಜಮಹಿಮನೆನಿಪ ನಿನಗೇನಂ ಮಾ ॥ ಡುವೆನಂತವೆಲ್ಲ ಮಾವಗ । ಮವಿನಯ ಮೆಂಬಂತೆ ತೋಱುತಿರ್ದ್ದಪುವೀಗಳ್ ॥ ೧೧೧

ವೃ॥ ಮೊದಲೊಳ್ಸಂಭಾಷಣಂ ಗೆಯ್ವುದೆ ವಲಮಿಳಿಕೆಯ್ವಂದಮೆಂದಾದರಂಗೆ । ಯ್ವುದಹಂಕಾರಂ ಸ್ತವಂಗೆಯ್ವುದದೆಮಗೆ ದಲ್ಗೌರವಂ ಬಿನ್ನಪಂಗೆ ॥ ಯ್ವುದೆ ಧಾಷ್ಟ್ರ್ಯಂ ಸೇವೆಯುಂ ಚಾಪಲಮುಪಕರಣಂ ಕೃತ್ರಿಮಂ ಪ್ರೀತಿಯುಂಮಾ । ಳ್ಪುದನಾತ್ಮಜ್ಞತ್ವ ಮಾವೀವುದೆ ವಿಭವದಗರ್ವಂ ಬೊಲಾದ ಪ್ಪುದೀಗಳ್ ॥ ೧೧೨

ಹೃದಯಮನೊಪ್ಪುಗೊಂಡ ನಿಮಗಿಂ ಮಗುಳ್ದಿಂ ಕುಡುವೊಂದು ವಸ್ತು ವಾ । ವುದೊಗಡ ಜೀವಿತೇಶ್ವರರೆನಿಪ್ಪವರ್ಗಂ ಪ್ರತಿಪಾದ್ಯಮ [ಪ್ಪದಾ ॥ ವುದೊ] ಬರವಿಂದೆ ಮಾಡಿಮುಪಕಾರಮ ನಿನ್ನದನೇತಱಿಂದೆ ನೀ । ಗಿಪೆನೊ ಎಂದು ಚಿತ್ರರಥನಂದನೆ ತೋಱಿಸಿದಪ್ಪಳಳ್ಕಱಿಂ ॥ ೧೧೩

ಕಂ॥ ಕನ್ನೆ ನಿಜಜೀವಿತಮುಮಂ । ತನ್ನುಮ ನಿರದಿತ್ತು ತೊಳ್ತುತನಮಂ ತಾಂಕೊಂ ॥ ಡುಂ ನೆಱೆಯುಳ್ಸುಜನರ್ಗ್ಗೆ । ನ್ನಿನ್ನನ್ನರ್ಗ್ಗೇನ ಮಾಡಿಯುಂತಣಿವುಂಟೇ ॥ ೧೧೪

---

೧೧೧. ಏನಂಮಾಡುವೆಂ—ಏನನ್ನು ಮಾಡುತ್ತೇನೊ ; ಅಂತವೆಲ್ಲಂ—ಹಾಗೆ ಅವೆಲ್ಲವೂ ; ಅವಿನಯಮೆಂಬಂತೆ ತೋಱುತಿರ್ದ್ದಪುವೀಗಳ್ ಎಂದನ್ವಯವು. ಅಂದರೆ ಅನುಚಿತವೆಂದಭಿಪ್ರಾಯವು.

೧೧೨. ಇಳಿಕೆಯ್ವಂದಂ-ತಿರಸ್ಕಾರದರೀತಿಯು : ಅಹಂಕಾರಂ-ಪ್ರಭುತ್ವಾಹಂಕಾರವು ; ಸ್ತವಂಗೆಯ್ವುದು, ಸ್ತುತಿಸುವದು; ಎಮಗೆಗೌರವಂ— ನಮಗೆದೊಡ್ಡದು, ಅಂದರೆ ನಮ್ಮ ಯೋಗ್ಯತೆಗೆ ಮಿಾರಿದ್ದು. ಧಾಷ್ಟ್ರ್ಯಂ—ಸಲಿಗೆಯು ; ಚಾಪಲಂ—ಮನಶ್ಚಾಂಚಲ್ಯವು ; ಉಪಕರಣಂ—ಉಪಕಾರವು ; ಅನಾತ್ಮಜ್ಞತ್ವಂ—ಅವಿಚಾರಕಾರ್ಯವು.

೧೧೩. ಒಪ್ಪುಗೊಂಡ—ಮೆಚ್ಚಿಸ್ವೀಕರಿಸಿದ ; ಬರವಿಂದೆ—ಆಗಮನದಿಂದ ; ಏತಱಿಂದೆ—ಯಾವಪ್ರತ್ಯುಪಕಾರದಿಂದ ; ನೀಗಿಪೆನೊ—ತೀರಿಸಿಕೊಳ್ಳುವೆನೋ,

೧೧೪. ಜೀವಿತಮುಮಂ—ಪ್ರಾಣವನ್ನೂ; ತನ್ನುಮಂ—ಆತ್ಮವನ್ನೂ ; ಕೊಂಡುಂ—ಅಂಗೀಕರಿಸಿಯೂ ; ನೆಱೆಯುಳ್—ತೃಪ್ತಿಳ್ಳಾಗಳು ; ಸುಜನರ್ಗ್ಗೆ+ಇನ್+ನಿನ್ನನ್ನರ್ಗ್ಗೆ—ನಿನ್ನಂಥಾವರಿಗೆ.

ವ॥ ಅದಱಿನಿಂಗಡಲ ಕಡೆಪದೊಳೊಗೆದ ನೂತ್ನರತ್ನಂಗಳೊಳೀ ಹಾರಮೇಂ ಶೇಷ ಮಪ್ಪುದಱಿಂ ಶೇಷವೆಂಬ ಪೆಸರೆಸೆಯೆ ॥

ಕಂ॥ ವರುಣಂ ಗಿತ್ತಂ ರತ್ನಾ । ಕರನಂತಾವರುಣ ನಳ್ಕಱಿಂ ದಿತ್ತಂ ಚಿ॥ ತ್ರರಥಂಗೆ ಕೂರ್ಮೆಯಿಂ ಚಿ। ತ್ರರಥಂ ನಿಜತನುಜೆಗಿತ್ತ ನಿದ ನವಸಿಪತೀ ॥ ಇಂತಿದನಾ ಕಾದಂಬರೀದೇವಿ— ೧೧೫

ಕಂ॥ ಹಾರಂ *[ಗಳೊಳೆಸೆವೀ] ಮಣಿ । ಹಾರಂ ಮದನಾವತಾರಮೆ ನಿಸಿದ ನಿನ್ನಾ ॥ ಕಾರಕೆ ಸೊಯಕ್ಕುವೆಂದವ । ಧಾರಿಸಿ ತಾಂ ನಿಮಗೆ ಕುಡು ವೆನೆಂಬೀ ಬಗೆಯಿಂ ॥ ೧೧೬

ಪೊಳೆವ ಸುಧಾಸೂತಿ ಸಭ । ಸ್ಥಳದೊ ಳ್ಕಸೊಗ್ಗಿಳಪತೆಱದೆ ಯುವ ರಾಜನುರ ॥ ಸ್ಥಳದೊಳ್ಮ ಕ್ತಾವಳಿಕ । ಸೊಗ್ಗಿಳಸುಗುಮೆಂದಳ್ಕಱಿಂದ ಮಟ್ಟಿದಳೀಗಳ್ ॥ ೧೧೭

ಆಭರಣದ ಪೊಜೆಯುಂ ತಳೆ । ವಾಭರಣಪ್ರಿಯರ ತೆಱದೆ ಸದ್ಗುಣ ಗಣರ ॥ ತ್ಯಾಭರಣ ನ್ನಿರ್ಮ್ಮೊಂದಿಗ । ರಾಭರಣದ ಪೊರೆಯನೇಕದಂ ಪೊತ್ತಿರ್ಪ್ಪರ್ ॥ ೧೧೮

ವ॥ ಆದೊಡಂ ನಿಮಗಿದು ಪ್ರೀತಿಯಿನೆ ಭಾವಿಸಲ್ವೇಳ್ಪುದಪ್ಪುದಲ್ಲ ದೆಯುಂ ॥ ೧೧೯

ಕಂ॥ ಸಿರಿಯೊಡನೆ ಪುಟ್ಟಿತೆಂಬಾ । ಹರಿ ಕೌಸ್ತುಭ ಮೆಂಬಕಲ್ಲಮು ಱಿಯೆಮುನತ್ತ್ವಾ ॥ ದರವಿಂದೆಂದುಂ ತಾನಾ । ಗುರದೊಳ್ತೊಳೆದಿರ್ಪ್ಪನೇಕೆ ನೀವಱಿಯದುದೇ ॥ ೧೨೦

ಅದಱಿಂ ನಾರಾಯಣಂಗಂ ನಿಮಗಂ ಲಕ್ಷ್ಮಿಗಂ ಕಾದಂಬರಿಗಂ ಕೌಸ್ತುಭಕ್ಕಂ ಶೇಷಾಭಿಧಾನಹಾರಕ್ಕಂ ವಿಶೇಷಮೇನು ಮಿಲ್ಲಮಾಗಿ ಕಯ್ಕೊಂಡು ಕಾದಂಬರೀ ಪ್ರಣಯಕ್ಕೆ ನಿವಿಕ್ಕೆಯುಂ ಮಾಳ್ಪುದೆಂತಾ

೧೨೦. ಮುಱಿಯದಂ—ಮರೆಸುವದು; ತಾನಾಗಿ + ಉರದೊಳ್.
೧೨೧. ವಿಶೇಷವೇನುಂ--ಯಾವಭೇದವೂ; ನಿವಿಕ್ಕೆಯುಂ--ದೀರ್ಘತ್ವವನ್ನು

ನುಂ ಕಯ್ಕೊಳ್ಳದಿರಲಾಕೆ ಭಗ್ನಪ್ರಣಯೆಯಾದ ಪ್ಪಳಪ್ಪೊಡೆ ತನ್ನಂಬಿ ಡುವಳೆಂದು ॥ ೧೨೧

ಕಂ॥ ತರಳಿಕೆಯ ಕಯ್ಯೊಳಟ್ಟಿದ । ಳರಸ ಮಹಾಶ್ವೇತೆತಾನೆ ಬೇ ಱೊಂದನೆನು ॥ ತ್ತಿರಸಲ್ಲದೆಂದು ಮುತ್ತಿನ । ಸರಮುನದಂ ಕೊರಲೊಳಾಕೆ ಕಟ್ಟಿದಳಾಗಳ್ ॥ ೧೨೨

ವ ಅಂತು ಕಟ್ಟಿಬೆಱಗಾಗಿ ವಿನಯರತ್ನಾಕರನಿಂತೆಂದಂ—

ವೃ॥ ಮದಲೇಖೇ ಬಲ್ಲೆನೀಂ ಕಯ್ಕೊಳಿಸಲೆಮಗೆ ಮಾತಾಡಸಲ್ಲೆಂಬ ಪ್ರೊಲ್ತೋ । ಱಿಪೆ ನೀಂ ನಿನ್ನೊಂದು ವಾಕ್ಕೌಶಲಗುಣಮನಿದಂ ನಿಮ್ಮ ಸೌಜನ್ಯಜಾಲಂ ॥ ಪುದಿದಿರ್ದತ್ತೆನ್ನನಾಸಿನ್ನೆನಗೊಡೆಯನೆ ಚಿತ್ತಕ್ಕೆ ವಂದಂ ತುಟೇ ಮಾ । ಳ್ಪುದು ದಲ್ಕಾದಂಬರೀದೇವಿಯ ಗುಣಪಣದಿಂ ಮಾಱುವೋ ದೆನ್ನನೀಗಳ್ ॥ ೧೨೩

ವ। ಎಂದಿಂತು ಮೊದಲಾಗಿ ಕಾದಂಬರೀ ಸಂಬಂಧಂಗಳಪ್ಪ ನುಡಿ ಯಂ ನುಡಿದು ಪಿರಿದುಬೇಗಮಿರ್ದು ಮದಲೇಖೆಯುಂ ಕಳುಪಿ ॥ ೧೨೪

ಕಂ॥ ಮದಲೇಖೆಯು ಮಿತ್ತಲ್ಪೋ । ಪ್ರಮ ಮೊಯ್ಯನೆ ಕೇಳಿ ಶೈಲಪುಂ ಚಂದನಹಾ ॥ ರಮುಕೂಲಧವಳನೇಱಿದ । ನುದಯೋನ್ನತಚಂ ದ್ರನಂತೆ ನೃಪಕುಲಚಂದ್ರಂ ॥ ೧೨೫

ಅಪ್ಪೊಡೆ—ಭಗ್ನವಾದವಿಶ್ವಾಸವುಳ್ಳವಳಾದರೆ ; ತನ್ನಂ—ಆತ್ಮವನ್ನು.

೧೨೩. ಮದಲೇಖೇ—ಎಲೌ ಮದಲೇಖೆಯೆ; ಎಮಗೆಕಯ್ಕೊಳಿಸಲ್‌ನೀಂಬಲ್ಲೆ —ನನಗೆ ಸಮ್ಮತಿಪಡಿಸುವದರಲ್ಲಿ ನೀನು ನಿಪುಣೆಯು ; ಮಾತಾಡಸಲ್ಲಂಎಂಬಪ್ರೊಲ್— ಉತ್ತರವನ್ನು ಕೊಡುವದುಯುಕ್ತವಲ್ಲವೆಂಬುವಹಾಗೆ; ನಿನ್ನಇದಂ ಒಂದು ವಾಕ್ಕೌಶಲ ಗುಣಮಂ—ವಚನಚಾತುರ್ಯವೆಂಬಗುಣವನ್ನು ; ತೋಱಿದೆ—ತೋರಿಸಿದೆ; ನಿಮ್ಮಸೌ ಜನ್ಯಜಾಲಂ—ನಿಮ್ಮ ಒಳ್ಳೇತನವೆಂಬಬಲೆಯು ; ಎನ್ನಂಪುದಿದಿರ್ದತ್ತು—ನನ್ನನ್ನುಆ ವರಿಸಿಕೊಂಡಿತ್ತು, ಅಂದರೆ ಸ್ವಾಧೀನಪಡಿಸಿಕೊಂಡಿತು ; ಅಂ ಇನ್ನು ಎನಗೆ ಒಡೆಯನೆ —ಇನ್ನುಮೇಲೆ ನನಗೆ ಸ್ವಾತಂತ್ರ್ಯವುಂಟೆ?; ಮಾಱುವೋದ-ವಿಕ್ರೀತನಾದ ; ಎನ್ನಂ —ನನ್ನನ್ನು : ಇನ್—ಇನ್ನುಮೇಲೆ ; ಚಿತ್ತಕ್ಕೆವಂದಂತುಟೇಮಾಳ್ಪುದು—ಮನಸ್ಸಿಗೆ ಬಂದಂತೆಯೇಮಾಡತಕ್ಕದ್ದು.

ವ॥ ಅಗಳಾನೃಪರೂಪಚಂದ್ರನಂ ಗಂಧರ್ವರಾಜನಂದನೆ ನೋಡಲೆಂದುತ್ಸಾರಿತ ಚ್ಛತ್ರಚಾಮರಚಿಹ್ನೆಯುಂ ಸಿಷಿದ್ಧಾಶೇಷಪರಿಜನೆಯುಂ ತಮಾಲಿಕಾದ್ವಿತೀಯೆಯುಮಾಗಿ ಸೌಧಶಿಖರಮನೇಱಿ । ೧೨೬

ಕಂ॥ ಕಾಂತೆ ನಿಜಕರ ಸರೋರುಹ । ಮಂ ತಂದು ಕಪೋಲತಟಕ್ಕೆ ಮುಯ್ಯಿಂಗೆಸೆಱಿಂ ॥ ಗಂ ತೆಗೆದು ಚಿತ್ರಿಸಿದ ಪೆ । ಣ್ಣಂತಿರೆ *[ಕಣ್ಣಾಲಿಬೀಳೆ] ನೋಡುತ್ತಿರ್ದಳ್ ॥ ೧೨೭

ನಳಿನದಳನಯನೆ ತನಗಾ । ಗುಳಿವರೆ ಕರತಳದೆ ವದನಮಂ ಮುಚ್ಚುತವ । ಗ್ಗಳಿಸಿ ಪ್ರೊಱಮಡುವ ಗೋತ್ರ । ಸ್ಖಲನೆಯ ಭಯದಿಂದೆ ಮುಚ್ಚಿದಂತೆ ಪ್ರೊಲಿರ್ದಳ್ ॥ ೧೨೮

ನಱುಸುಯ್ಯೆಲರಿಂಗೆಱಗುವ । ಮಱಿದುಂಬಿಗಳಂ ಸೆಱಂಗಿನಿಂ ಸೋವುತ್ತಮಾ । ತೆಱದೊಳೆ ಯುವರಾಜನ ನ । ಳ್ಕಱೊಂದಡಿಗಡಿಗೆ ಕಾಂತೆಕರೆವಂತಿರ್ದಳ್ ॥ ೧೨೯

ಎಲರಲೆಪದಿಂದೆ ಮೇಲುದು । ತೊಲಗಲ್ಸಂಭ್ರಮಿಸಿ ಭುಜಲತಾಯುಗದಿಂ ಪೆ । ರ್ಮೊಲೆಯಂ ಮುಚ್ಚುತ ಮಾಕೋ । ಮಲೆ ಸನ್ನೆಯಿನಪ್ಪಿದಪ್ಪಳೆನೆ ಸೊಗಯಿಸುಗುಂ ॥ ೧೩೦

ಸೊಗಯಿಪ ಸೋರ್ಮುಡಿಯಿಂದ । ಲ್ಲುಗುವಲರಂ ತೀವಿ ಕಯ್ಯೊಳಾಘ್ರಾಣಿಸುತಂ ॥ ಮೃಗನಯನೆ ಕಾಣ್ಕೆ ಯೊಳಕ । ಯ್ಮುಗಿದಪ್ಪಳ್ ಭೂಭುಜಂಗೆನಲ್ಕರಮೆಸೆದಳ್ ॥ ೧೩೧

ಕೊರಲೊಳ್ಸೊಗಯಿಪ ಹಾರಮ । ನೆರಡುಂ ಸುಟ್ಟುಂಬೆಯಿಂದ ಪಡಿಗಡಿಗಾಗಳ್ । ತಿರುಪುತ್ತಂ ನಿಜಹೃದಯಾಂ । ತರದುತ್ಕಲಿಕೆಯನೆ ತೋಱುವಂತೆವೊಲೆಸೆದಳ್ ॥ ೧೩೨

---

೧೨೬. ಮುಯ್ಯಿಂಗೆ—ಭುಜಶಿರಸ್ಸಿಗೆ ; ತೆಗೆದು—ಎಳೆದು.

೧೨೭. ಗೋತ್ರಸ್ಖಲನೆ—ನಾಮವ್ಯತ್ಯಾಸ ; ಆಗುಳಿ—ಆಕಳಿಕೆ.

೧೩೨. ಸುಟ್ಟುಂಬೆಯಿಂದ—ಬೆರಳುಗಳಿಂದ ; ಉತ್ಕಲಿಕೆ—ಅಪೇಕ್ಷೆ.

* [ನಲ್ಲಾಲಿವಿದಳ್]

ಕಂ॥ ಕೆದಱಿದ ಪೂವಲಿಯುಲ ರಂ । ಮದಿರೇಕ್ಷಣೆ ನಡೆಯೊಳಡಪಿ
ಬಿಡೆನಡುಗುತ್ತಂ ॥ ಮದನನಲರ್ಗಣೆಯ ಕೋಲಿಂ । ದೊದವಿದ ವೇದನೆಯ
ಸಿದಿರ್ಗೆತೋಱುವ್ವೊಲಿರ್ದ್ದಳ್ ॥ ೧೩೩

ಉಡೆನೂಲ್ಪಡಿಲ್ದ ವೇಗಾ । ಲ್ದುಡಿಗೆಯ ಕುಸುರಿಯೊಳೆ ತೊಡರೆ
ಕಾಮಿನಿ ಮಿಡುಕ ॥ ಲ್ಪಡೆಯದೆ ಯುವರಾಜಂ ಗಾ । ಗಡೆ ಕಾಮನೆ ಕಟ್ಟಿ
ಯೊಪ್ಪ ಗೊಟ್ಟವೊಲಿರ್ದ್ದಳ್ ॥ ಅಲ್ಲದೆಯುಂ— ೧೩೪

ವೃ॥ ತವನರಿಸುತ್ತಿರಲ್ಕೆ ತೊಡೆಜೋಲೆ । ಸಡಿಲ್ದುಡೆ ಬೀಳ್ದವೊಲು
ದಂ । ಬಿಡದೆ ಕುಚಕ್ಕೆ ತಪ್ಪೆನೆಗ ಮಿತ್ತೊಳ ಮುಯ್ಪಿನಮೇಲೆ ಬಿಚ್ಚೆ
ಸೋ ॥ ರ್ಮುಡಿಬೆದಱುತ್ತೆ ಕಯ್ಯೊಳವನಂಗನೆ ಸಾವಗಿಸಲ್ವಳಿತ್ರಯಂ । ಕಿಡು
ವಿನೆಗಂ ತೆಱುದಿರಿದು ಸಂಭ್ರಮದಿಂ ಮಱೆಗೊಂಡು ನೋಡಿದಳ್ ॥ ೧೩೫

ಅನ್ತಾ ಸಂಭ್ರಮದೊಳ್—

ವೃ॥ ಪೊಳೆಯುತ್ತಂ ತಾರಹಾರಂ ಬರಿಗೆ ವರೆ ಕಟಾಕ್ಷಾಂಶು ವಿಂ
ದೊಂದಿಕರ್ಣೋ । ತ್ಪಳಮಾಗಳ್ ಪುಂಡರೀಕಕ್ಕೆಣೆಯೆನಿಸಿ ವಿಲಕ್ಷಸ್ಮಿತಾ
ಲೋಕದಿಂ ಪ್ರ ॥ ಜ್ವಲಿಸಲ್ತನ್ನೊಂದು ಗಂಡಸ್ಥಲಮೊಸೆದು ಮೊಗಂಸಾ
ಚ್ಚಿನಾನಾರಸಂ ಕ । ಣ್ಗೊಳಪನ್ನಂ ಮೂರ್ತಿನಾರಾಯಣನೃಪನ ನವಳ್ಮೆ
ಚ್ಚಿನೋಡುತ್ತಮಿರ್ದ್ದಳ್ ॥ ೧೩೬

ಕಂ॥ ಬೆಳಗೆಲ್ಲಂ ಪೋಗೆ ಏಯು । ತ್ತಳದೊಳ್ಬೆಳರ್ಗೆಂಪು ಪಸರಿಸು
ತ್ತಿರಲಪರಾ ॥ ಚಲ ಶಿಖರವತ್ತಲೊಯ್ಯನೆ । ತಳರ್ದಂ ರಾಜೀವಜೀವಿತೇ
ಶ್ವರನಾಗಳ್ ॥ ೧೩೭

---

೧೩೪. ಉಡೆನೂಲ್— ಬಡ್ಯಾಣವು ; ಮೇಗಾಲ್ಪುಡುಗೆಯ–ಕಾಲುಸರದ ; ಕು
ಸುರಿಯೊಳೆ—ಗೆಜ್ಜೆಯಲ್ಲಿ.

೧೩೫. ತೆಱುದಿರಿದು—ಅವಕಾಶವನ್ನು ಮಾಡಿಕೊಂಡು ; ವಳಿತ್ರಯಂಕಿಡುವಿನೆ
ಗಂ—ತ್ರಿವಳಿಗಳುನಿಲುಕಿನೋಡುವವರಿಂದ ಕಾಣದಂತಾಗಲು.

೧೩೬. ನಾನಾರಸಂಕಣ್ಗೊಳಪನ್ನಂ, ಮೊಗಂಸಾಚಿ—ಮುಖವನ್ನು ತಿರುಗಿಸಿ ;
ಬಸೆದು—ಪ್ರೀತಿಸಿ ; ಮೆಚ್ಚಿನೋಡುತ್ತಮಿರ್ದ್ದಳ್.

ಕಂ॥ ಮುಳುಗದು ಗಡಿನ್ನುಮೆನುತಂ । ಮುಳಿಸಿಂ ಕಾಮಿನಿಯರೀಕ್ಷಿಸುತ್ತಿರೆ ನುಣ್ಗೆಂ ॥ ಪೆಳಸಿದುವೆನೆ ಬಿಂಬಂ ಕೆಂ । ಪೆಳಸಿದ್ದುರ್ದು ಚಕ್ರವಾಕಚಕ್ರೇಶ್ವರನಾ ॥ ೧೩೯

ಪಸುರೆಸೆದುದು ಪದ್ಮಿನಿ ಬೆ । ಳ್ಪೆಸೆದುದು ಕುಮುದಿನಿ ನಿಶಾಮುಖಂ ನಸುಗಪ್ಪಿಂ ॥ ದೆಸೆದುದು ಪಡುವಣದೆಸೆ ಕೆಂ । ಪೆಸೆದುದು ದಿವಸಾವಸಾನಮಪ್ಪುದುಮಾಗಳ್ ॥ ೧೪೦

ವ॥ ಆಗಳನುರಾಗದಿಂದೀಧಿತಿಗಳ್ಬೆರಸು ದಿವಸಕರನದೃಶ್ಯನಪ್ಪುದುಂ.

ಕಂ॥ ಇದು ಚಿತ್ರರಥತನೂಜೆಯ । ಹೃದಯದಿ ನಗ್ಗಲಿಪ ರಾಗಸಾಗರಮೋ ತೀ ॥ ವಿದುಮ ಭುವನಮು ನೆನಲ್ತೀ । ವಿದುದಾಗಳ್ಬಹುಳ ಸಾಂದ್ರಸಂಧ್ಯಾರಾಗಂ ॥ ೧೪೧

ವ॥ ಮತ್ತಮಿನಿಸಾನು ಬೇಗದಿಂ.

ಕಂ॥ ಮದನನ ಪೆರ್ಗಿರ್ಚ್ಚಿಂ ಮು । ಗ್ಗಿದ ಪ್ರೋಣರ್ವಕ್ಕಿಗಳ ಹೃದಯಸಂಕುಳದಿಂದು ॥ ಣ್ಮಿದ ಕಬ್ಬೊಗೆಯೆಂಬಿನೆಗಂ । ಪುದಿದೆತ್ತಂ ಮುಬ್ಬಿರ್ನುಬ್ಬಿರ್ಪಬ್ಬಿರ್ತ್ತಾಗಳ್ ॥ ೧೪೨

ತರತರದಿಂದೆಂಟುಂದಿ । ಕ್ಕರಿಗಳ್ನೆರೆದೊಟ್ಟಿಕೊಳ್ವ ಕರಪುಷ್ಕರಶೀ ॥ ಕರಮೋ [ಪ್ರೊಣ್ಮಿದುವೆನ] ಲಂ । ಬರದೊಳ್ತುಱುಗಿದುವು ಧವಳತಾರಾನಿಕರಂ ॥ ೧೪೩

ವ॥ ಆಗಳಾಕಾದಂಬರಿ ಮಾಡದಿಂದಿಳದಳತ್ತಲರಸಂ ಕೇಳೀಶೈಲದಿಂದವನಿತಳಕ್ಕವತರಿಸಿ.

---

೧೩೯. ಎಳಸಿದುದು—ಸಂಕ್ರಾಂತವಾಯಿತು; ಎನೆ—ಎಂಬುವಹಾಗೆ; ಕೆಂಪೆಳಸಿದ್ದುರ್ದು—ಕೆಂಪುಬಣ್ಣದಿಂದ ವ್ಯಾಪ್ತವಾಗಿತ್ತು.

೧೪೦. ಪಸುರ್ಪಿಂ+ಎಸೆದುದು=ಪಸುರೆಸೆದು; ಅಂದರೆ ಹಸರುಕಾಂತಿಯಿಂದ ಪ್ರಕಾಶಿಸಿತು, ಇದು ಪ್ರಯೋಗವಾಸವು ಇದರಂತೆಯೇ ಬೆಳ್ಪೆಸೆದುದು, ಕೆಂಪೆಸೆದುದು, ಎಂಬವುಗಳನ್ನೂ ತಿಳಿಯತಕ್ಕದ್ದು. ಶಮ. ಸೂ. ೧೬೩, ೧೩೩.

೧೪೧. ಅಗ್ಗಲಿಪ—ಉಕ್ಕುವ.

೧೪೨. ಮುಗ್ಗಿದ—ಸೀದುಹೋದ.

ಕಂ॥ ಅದೊ ರಜನಿಯ ನನುರಾಗದಿ । ಹೃದಯಮ ನೇಱಿಸಿದ ನೆಂಬಿನಂ ಮಂಡಲಮ ॥ ಧ್ಯದೊಳೆಸೆಯಲಾತ್ಮಲಾಂಛನ । ಮುದಯಿಸಿದಂ ರಜನಿನಾಥನುದಯಾಚಲದಿಂ ॥ ೧೪೪

ವ ॥ ಅನ್ತು ವಿಭಾವರೀವನಿತಾವಿಲಾಸ ದಂತಪತ್ರನುಂ ಮದನರಾಜ್ಯೈಕಾತಪತ್ರನುಮೆನಿಸಿದ ಕುಮುದಿನೀಬಾಂಧವನುದಯಿಸೆ. ೧೪೫

ಕಂ॥ ಜಗಮಿದು ಮೌಕ್ತಿಕದಿಂದಂ । ತೆಗೆದುದೊ ದಂತದೊಳೆ ಸಮೆದುದೊ ಪಾಲ್ಗಡಲಿಂ ॥ ದೊಗೆದುದೊ ಪೇಳೆಂಬಿನೆಗಂ । ಸೊಗಯಿಸಿದುದು ಸಾಂದ್ರಚಂದ್ರಿಕಾವಿಸ್ತಾರಂ ॥ ೧೪೬

ವ ॥ ಅಂತಾಚಂದ್ರಿಕೆಯೊಳ್ ನೃಪರೂಪಚಂದ್ರಂ ಕೇಳೀಶೈಲದ ತಪ್ಪಲೊಳ್ನಡಪಾಡುತ್ತಿರ್ಪುದುಂ ಪರಿಜನಂಗಳ್ ॥ ೧೪೭

ವೃ॥ ತೆರೆಗಳ್ಮೆಲ್ಪಿಂದೆ ನೀರ್ವಿಜ್ಜಣಿಗೆಯ ತೆಱದಿಂ ಬೀಸೆ ಹಂಸದ್ವಯಂಗಳ್ । ತರದಿಂ ಕಣ್ಗೆಯ್ಯೆ ನೀರ್ವಕ್ಕಿಗಳುಲಿಯೆ ದಳನ್ನೀಲನೀರೇಜಿನೀಬಂ ॥ ಧುರಗಂಧೋದ್ಗಾರಿ ಲೀಲಾಸರದ ಪುಳಿನದೊಳ್ಸಂದು ವಾರೋಪಧಾನಂ। ಬೆರಸೊಪ್ಪಂ ಬೆತ್ತದೀ ಮುತ್ತಿನ ಪಡುಶಿಲೆಯೊಳ್ದೇವ ಕುಳ್ಳಿರ್ಪುದೀಗಳ್ ॥ ೧೪೮

ವ ॥ ಎಂಬುದುಂ ಕುಳ್ಳಿರೆ ಕೇಯೂರಕಂ ಭೋಂಕನೆ ಬಂದು ದೇವಾ ಕಾದಂಬರೀದೇವಿ ನಿಮ್ಮಂ ನೋಡಲೆಂದು ಬಂದಳೆಂದು ಬಿನ್ನವಿಸಲರಸನತಿ ಸಂಭ್ರಮದಿ ನಿದಿರೇಳ್ವನ್ನೆಗ ಮಿತರೆಯಂತಲ್ಪಸಖೀಜನ ಪರಿವೃತೆಯುಮಪನೀತಾಶೇಷರಾಜಚಿಹ್ನೆಯುಮಾಗಿ ॥ ೧೪೯

---

೧೪೫. ದಂತಪತ್ರ—ದಂತದ ಓಲೆ.

೧೪೭. ನಡಪಾಡುತ್ತಿರ್ಪುದುಂ—ಸಂಚರಿಸುತ್ತಿರಲು.

೧೪೮. ನೀರ್ವಿಜ್ಜಣಿಗೆ—ನೀರಿನಲ್ಲಿ ಅದ್ದಿದ ಬೀಸಣಿಗೆ; ಕಣ್ಗೆಯ್ಯೆ—ನಿದ್ರೆಮಾಡುತ್ತಿರಲು; ಪಡುಶಿಲೆ—ಮಲಗುವ ಶಿಲಾಮಂಚ.

೧೪೯. ಇದಿರೇಳ್ವನ್ನೆಗಂ—ಪ್ರತ್ಯುತ್ಥಾನಮಾಡುವಷ್ಟರಲ್ಲಿ; ಇತರೆಯಂತೆ—ಪ್ರಾಕೃತೆಯಂತೆ.

ವೃ॥ ಎಳವೆರೆ ಸುತ್ತಿದಂತೆ ಮಿಱುಗುತ್ತಿರೆ ಕೇದಗೆಯೋಲೆ ಚಂದ್ರನೊ । ಳ್ವೊಳಗಪ್ಪೊಲೊಪ್ಪಿತೋಱೆ ದುಗುಲಂ *[ತನುವ್ಪೊಳ್ಪೊಳೆಯಲ್ಕೆ] ಚಂದನಂ ॥ †[ತೊಳಗುವ] ದೊಂದುಹಾರಮುಮರಲ್ಕೊರಲೊಳ್ನಿಜಕಾಂತಿಸುತ್ತಲುಂ । ಬಳಸೆ ಲತಾಂಗಿ ಚಂದ್ರನಧಿದೇವತೆಯಂತೆ ಪೊಲಾದ ವೊಪ್ಪಿದಳ್ ॥ ೧೫೦

ವ॥ ಅಂತುಮದಲೇಖಾದತ್ತಹಸ್ತಾವಲಂಬೆಯಾಗಿ ಕಾದಂಬರೀದೇವಿ ಬಂದು ನಿಜಪ್ರೀತಿಯಂ ತೋಱಲೆಂದು ಪರಿಜನದಂತೆ ನೆಲದೊಳ್ಕುಳಿರೆ ಚಂದ್ರಾಪೀಡದೇವನುಂ ಮೌಕ್ತಿಕ ಶಿಲಾತಲದೊಳ್ ಕುಳ್ಳಿರಿಮೆಂದು ಮದಲೇಖೆ ಪಿರಿದು ಮಾಣ್ಬಾಸಿಸೆಯುಂ ಮಾಗಳ್ನೆಲದೊಳ್ಕುಳ್ಳಿರ್ದು ಗಂಧರ್ವರಾಜನಂದನೆಯ ನಿಂತೆಂದಂ ॥ ೧೫೧

ವೃ॥ ನೋಡಲೊಡಂ ಕೃತಾರ್ಥರೆನಿಪಾಳ್ಗಳೊಳೇ ನವಕಾಶಮುಂಟೆ ಮಾ । ತಾದುಪ್ಪೊಡಿಂತನುಗ್ರಹಿಸುವಲ್ಲಿಗೆ ತಕ್ಕುದ ದಾವಭಂಗಿಯಿಂ ॥ ನೋಡುಪ್ಪೊಡೆನ್ನೊಳಿಲ್ಲ ಗುಣಲೇಶಮು ಮೀತೆಱದಿಂ ದನುಗ್ರಹಂ । ಮಾಡುವುದಕ್ಕೆ ದೇವಿಯರ ದೊಂದುಋಜುತ್ವಮೆ ಮುಖ್ಯಕಾರಣಂ ॥ ೧೫೨

ಕಂ॥ ವಿಭವದೆ ನೆಗಳ್ದನ್ಯಾಯದೊಂ । ದಭಿಮಾನ ಮದೇಪ್ಪು ದೆಂದು ಪ್ರೋಸಸೇವಕರೊಳ್ । ರಭಸದೆ ನಿಜಸೌಜನ್ಯ । ಪ್ರಭಾವಮಂ ಮೆಱೆವಿರಲ್ಲ ದೇಂ ಪೆಱತುಂಟೇ ॥ ೧೫೩

---

೧೫೦. ಕೇದಗೆಯೋಲೆ—ತಾಳೇಹೂವಿನಗರಿಯಿಂದಮಾಡಲ್ಪಟ್ಟಪ್ರೋಲೆಯು ; ಎಳವೆಱೆಸುತ್ತಿದಂತೆ—ಬಾಲಚಂದ್ರನನ್ನು ಸುರುಳೀಮಾಡಿದಂತೆ.

೧೫೨. ಆವಭಂಗಿಯಿಂ—ಯಾವರೀತಿಯಿಂದಲೂ ; ನೋಡುಪ್ಪೊಡೆ—ನೋಡಿದಾಗ್ಯೂ ; ಎನ್ನೊಳ್ ಗುಣಲೇಶಮುಂ ಇಲ್ಲ.

೧೫೩. ನೆಗಳ್ದ—ಪ್ರಸಿದ್ಧವಾದ ; ಪಿಪ್ಪುದು—ಗರ್ವಮಾಡೀತು ; ರಭಸದೆ—ಸಾವಕಾಶವಿಲ್ಲದೆ ; ಅಂದರೆ ನೋಡಿದಕ್ಷಣವೆ ; ಸೌಜನ್ಯಪ್ರಭಾವಮಂ—ಸುಜನತ್ವದ ಹಿರಿಮೆಯನ್ನು ; ಮೆಱೆಪಿರ್—ಪ್ರಕಟಮಾಡುತ್ತೀರಿ. ಅಂದರೆ ನೀವು ಐಶ್ವರ್ಯವಂತರ

*[ನನುವೆಳ್ಪೆಸೆಯಲ್ಕೆ ಚಂದ್ರನಂ] †[ತೊಳಲದೆ]

ಕಂ॥ ಇನಿಸುಂ ದಾಕ್ಷಿಣ್ಯಮುಮಂ। ಮನದೊಳ್ಭಾವಿಸದೆ ಭೃತ್ಯನೆನೆ ಧನ್ಯನೆನಿಂ ॥ ತಿನಿತಾದರಮೇಕೆಯೊ ಪರಿ। ಜನದೊಳ್ಬೆಸಕೆಯ್ದು ಬರ್ದುಕಿ ಕೆಂಬೊಂದೆಡೆಯೊಳ್ ॥ ೧೫೪

ಪರಗುರ್ಪಕರಿಪೆಡೆಗಳ್ಗುಪ। ಕರಣಂ ತನು ತೃಣದ ತೆಱದೆ ಲಘುಜೀವಿತಮುಂ ॥ ಬೆರಡುಂ ಪಾವುಡಮಿಂತೀ। ಬರವಿಂಗೆನಲೆನಗೆ ಲಜ್ಜೆಯಾದಪುದೀಗಳ್ ॥ ೧೫೫

ಅವಿರ್ಪೆವು ತನುವಿದೆ ಮೇ। ಣ್ಜೀವಿತಮಿರ್ದಪ್ಪು ದವಯವಂಗಳುಮಿವೆ ಮೆ ॥ ಚ್ಚಾವುದನಾತ್ಮೀಕರಿಪರೊ। ದೇವಿಯರಿಂದೀಗಳಿವಱೊಳದುವೆ ಕೃತಾರ್ಥಂ ॥ ೧೫೬

ವ॥ ಎಂದು ನುಡಿಯೆ ಮದಲೇಖೆ ಮಾರ್ಕೊಂಡು ನೀವಿನ್ನು ಕೇಳ್ವಟ್ಟು ನುಡಿಯೆ ಕಾದಂಬರೀದೇವಿ ಖೇದಿಸುವಳೆಂದು ಮತ್ತಮಂತೆಂದಳ್ ॥

ವಂಶದಲ್ಲಿ ಹುಟ್ಟಿದವರೆಂದು ಗರ್ವಪಡದೆ ಇರುವದು ನಿಮ್ಮ ಸುಜನತ್ವಪ್ರಕಾಶಕವಾದದ್ದೆಂದಭಿಪ್ರಾಯವು.

೧೫೪. ಮನದೊಳ್. ಇನಿಸುಂದಾಕ್ಷಿಣ್ಯಮುಮಂ, ಭಾವಿಸದೆ—ಮನಸ್ಸಿನಲ್ಲಿ ಸ್ವಲ್ಪವೂದಾಕ್ಷಿಣ್ಯವಿಡದೆ; ಭೃತ್ಯನೆನೆ, ಧನ್ಯನೆಂ—ಸೇವಕನೆಂದು ಹೇಳಿದಮಾತ್ರಕ್ಕೆ ಧನ್ಯನಾಗುತ್ತೇನೆ; ಬೆಸಕೆಯ್ದು ಬರ್ದುಕಿಮೆಂಬೊಂದೆಡೆಯೊಳ್—ಆಜ್ಞೆಯನ್ನು ಮಾಡಿ ಬದುಕಿಕೊಳ್ಳಿ ಎಂದು ಹೇಳಬೇಕಾದಸ್ಥಳದಲ್ಲಿ; ಪರಿಜನದೊಳ್, ಇನಿತಾದರಮೇಕೆಯೊ—ಸೇವಕಜನರಲ್ಲಿ ಇಷ್ಟು ಉಪಚಾರವೇತಕ್ಕೆ?;

೧೫೫. ಪರಗುರ್ಪಕರಿಪೆಡೆಗಳ್ಗೆ—ಪರೋಪಕಾರ ಮಾಡುವಕಾಲಗಳಲ್ಲಿ; ಉಪಕರಣಂ—ಸಾಧನವಾದ; ತನುಜೀವಿತಮೆಂಬೆರಡುಂ—ಶರೀರಪ್ರಾಣಗಳೆರಡೂ; ಈಬರವಿಂಗೆ—ಈನಿನ್ನ ಆಗಮನಕ್ಕೆ; ಪಾವುಡಂ—ಉಡುಗೊರೆಯು; ಎನಲ್—ಎಂದು ಹೇಳುವದಕ್ಕೆ; ಲಜ್ಜೆಯಾದಪುದು—ನಾಚಿಕೆಯುಂಟಾಗುವದು, ಅಂದರೆ ನೀನು ಬಂದದ್ದಕ್ಕೆ ನನ್ನ ಶರೀರಪ್ರಾಣಗಳೆರಡನ್ನೂ ಕೈಗಾಣಿಕೆಯನ್ನಾಗಿ ಕೊಟ್ಟರೂ ಸಾಲದೆಂದಭಿಪ್ರಾಯವು.

೧೫೬. ಅವಿರ್ಪೆವು—ನಾವಿದ್ದೇವೆ; ತನುವಿದೆ—ಈನನ್ನ ಶರೀರವಿದೆ; ಜೀವಿಮಿರ್ದಪ್ಪುದು—ನನ್ನ ಪ್ರಾಣವಿದೆ; ಅವಯವಂಗಳುಮಿವೆ—ನನ್ನ ಅವಯವಗಳೂ ಇವೆ; ದೇವಿಯರ್—ಕಾದಂಬರೀದೇವಿಯರು, ಇವಱೊಳ್—ಇವುಗಳಲ್ಲಿ; ಆವುದಂಮೆಚ್ಚಿ ಆತ್ಮೀಕರಿಪರೋ—ಯಾವದನ್ನು ಮೆಚ್ಚಿ ತಮ್ಮದನ್ನಾಗಿಮಾಡಿಕೊಳ್ಳುತ್ತಾರೋ; ಅದುವೆ ಕೃತಾರ್ಥಂ—ಅದೇಕೃತಾರ್ಥವಾದದ್ದು.

ಕಂ॥ ಇವನಿಂತಿನಿತಂನೀವೆ । ನ್ನದೊಡೇಂ ಗಂಧರ್ವರಾಜನಂದನೆ ಕೈಕೊ ॥ ಳ್ಳದ ಕೆಮ್ಮನೆ ಮತ್ತುಪಚಾ । ರದನುಡಿಸಂದೇಹಬುದ್ಧಿಯಂ ಪುಟ್ಟಿಸದೆ ॥ ೧೫೯

ವ॥ ಎಂದುನುಡಿಯೆ ಕಾದಂಬರೀದೇವಿ ಕೃತಪ್ರಸ್ತಾವೆಯಾಗಿ ॥

ವೃ॥ ಅವನೀಪಾಲಕಚಕ್ರವರ್ತಿ ವಿಭು ತಾರಾಪೀಡನೆನ್ನಂ ವಿಳಾ । ಸವತೀದೇವಿಯದೆನ್ನಳಾರ್ಯಶುಕನಾಸಂ ತಾನದೆನ್ನಂ ಮಹೀ ॥ ಭುವನಂ ನೋಡುವಡೆಂತುಟಲ್ಲಿಗೆನಿತಾ ಪುಜ್ಜೈನಿ ಯೆಂತಿರ್ಪ್ಪುದೊ । ಪ್ಪುವುದೇ ಭಾರತವರ್ಷಮೆಂದು ಬೆಸಗೊಂಡಳ್ಕಾಂತೆ ಭೂಕಾಂತನಂ ॥ ೧೬೦

ವ॥ ಎಂದಿಪ್ಪವೊದಲಾಗಿ ಪಲವುಮಂ ಬೆಸಗೊಳುತ್ತಂ ಪಿರಿದುಬೇಗ ಮಿರ್ದ್ದು ಕಾದಂಬರಿ ಕೇಯೂರಕನುಮಂ ಪರಿಜನಮುಮನರಸನ ಸಾರೆ ಯಿರವೇಳ್ದು ತನ್ನ ಕನ್ನೆಮಾಡಕ್ಕೆಪೋಗಿ ಶಯನತಳಮ ನಲಂಕರಿಸಿ ವಳಿತ್ತು ಕೇಯೂರಕನಡಿಯೊತ್ತೆ ಮುನ್ನಿರ್ದ್ದೆಡೆಯೊಳೆ ಯುವರಾ ಜನಿರ್ದ್ದು ಕಾದಂ ಬರೀದೇವಿಯ ನಿರಹಂಕಾರಮುಮಂ ಮಹಾಶ್ವೇತೆಯ ನಿಷ್ಕಾರಣವತ್ಸಲತೆ ಯುಮಂ ಮದಲೇಖೆಯ ಸುಜನತೆಯುಮಂ ಪರಿಜನದ ಮಹಾನುಭಾವತೆ ಯುಮಂ ಗಂಧರ್ವರಾಜಲೋಕದ ಸಮೃದ್ಧತೆಯುಮಂ ಕಿಂಪುರುಷವಿಷ ಯದ ರಮ್ಯತೆಯುಮಂ ಮನದೊಳ್ಭಾವಿಸು ತಿರ್ಪ್ಪನ್ನೆಗಂ ॥ ೧೬೧

ಕಂ॥ ಇರುಳೆರಂತಿರೆ ಕಾದಂ । ಬರಿಯನೆ ನೋಡುತ್ತ ಮಿರ್ದ್ದು ಘೂರ್ಣಿಸೆ ನಿದ್ರಾ ॥ ತುರನಾಗಿ ಪಕ್ಕೆ ಸಾರ್ವ್ವಂ । ತಿರೆ ಸಾರ್ದ್ದಂಬಂ ದ್ರಸಪರವೇಲಾವನಮಂ ॥ ೧೬೨

ಇನಿಸುಂ ನಿಲಲಾಜದೆ ಕಾ । ಮಿನಿಯರ ಕರ್ಣೋತ್ಪಲಪ್ರಹಾರದ

೧೬೦. ತಾರಾಪೀಡಂ, ಎನ್ನಂ—ಹ್ಯಾಗಿದ್ದಾನೆ ಅಂದರೆ ಚನ್ನಾಗಿದ್ದಾನೆಯೆ ಎಂದ ಭಿಪ್ರಾಯವು; ಮಹೀಭುವನಂ—ಭೂಲೋಕವು; ನೋಡುವಡೆ, ಎಂತುಟು—ಎಂಥಾ ದ್ದು; ಆ ಪುಜ್ಜೈನಿ, ಇಲ್ಲಿಗೆ, ಎನಿತು—ಎಷ್ಟುದೂರ; ಎಂತಿರ್ಪ್ಪುದು—ಹ್ಯಾಗಿದೆ.

೧೬೨. ನಿದ್ರಾತುರನಾಗಿ, ಘೂರ್ಣಿಸೆ—ತೂಕಡಿಕೆಯುಂಟಾಗಿರಲು; ಪಕ್ಕೆ ಸಾರ್ವ್ವಂತೆ—ಹಾಸಿಕೆಯನ್ನು ಸೇರುವನೋ ಎಂಬಂತೆ.

ನಿಸ್ತೇ ॥ ಜನದಿಂ ತನುವಾದಂತಿ ರೆ । ತನುವಾದುವು ಕೂಡೆ ಸೆಜ್ಜೆವನೆಗಳ
ಸೊಡರ್ಗಳ್ ॥ ೧೬೩

ಕಂ॥ ಬೆಳಗಾಯ್ತೆಂಬೊಂದಳಲ । ಗ್ಗಳಿಸಲ್ಕೆ ಸವೇಟಕಾರ್ತ್ತಿಯು
ರ ಬಿಸುಸುಯ್ಯೊ ॥ ಳ್ಬೆಳಗಿದುದೆಂದೆಂಬಿನಮಾ । ಗಳದೇಂ ಕೊರಗಿದುದೊ
ಕುಮುದಿನೀವಿಸ್ತಾರಂ ॥ ೧೬೪

ಬಗೆಯದೆ ವಿರಹಿಗಳಂ ಮಿಗೆ । ತೆಗೆದೆಚ್ಚುಬಳಲ್ದ ಮಧುಸಖನ
ಸುಯ್ಯೆಲರ್ವೊಲ್ ॥ ಸೊಗಯಿಸಿ ಪೊತ್ತಲರ್ಗಂಪಂ । ನೆಗೆದುಱಿತ್ತಣ್ಣೆಲರ
ದಿನಿಸು ತೀಡಿತ್ತಾಗಳ್ ॥ ೧೬೫

ಅರಸನ ನೀಕ್ಷಿಸಿ ಮದನಾ । ತುರೆ ಯಾಮಂತಿರು ಳೊಳಾವಗಂ ಕು
ಮುದದೊಳಾ ॥ ದರಮೊಳಿರ ಲ್ಕವು ಕೊರಗಲ್ । ಲ್ಸಿರಿ ಪಂಕಜವಲ್ಲಿ ಮೊ
ಯ್ಯನಿಕ್ಕಿದಳಾಗಳ್ ॥ ತದನಂತರಂ— ೧೬೬

ಕಂ॥ ಆದೆಜಕ್ಕವಕ್ಕಿಗಳ ಹೃದ । ಯದ ರಾಗಂ ಪ್ರವಿದುವೆನಿಸಿ ಕೆಂ
ಪಂ ಕಯ್ಕೊಂ ॥ ಡುದಯಾದ್ರಿಯಿಂದ ಮೂಡಿಯಿಸಿ । ದುದು ಬಿಂಬಂ ಚಕ್ರ
ವಾಕಚಕ್ರೇಶ್ವರನಾ ॥ ೧೬೭

ವ॥ ಆಗಳ್ಚಂದ್ರಾಪೀಡಂ ಪ್ರಕ್ಷಾಳಿತಮುಖಕಮಲನುಂ ಕೃತಸಂಧ್ಯಾವಂದನನುಂ ಗೃಹೀತತಾಂಬೂಲನು ಮಾಗಿ ಕೇಯೂರಕ ಕಾದಂಬರಿಯೆಲ್ಲಿರ್ದ್ದ ಳುಪ್ಪವಡಿಸಿದಳೆಲ್ಲೆಂಬುದಂ ನೋಡಿ ಬಂದಱಿಪುವುದೆಂಬುದು ಮದಂ

---

೧೬೩. ಪ್ರಸಾರದ—ಏಟನ; ನಿಸ್ತೇಜನದಿಂ—ಕೊರತೆಯಿಂದ : ಇನಿಸುಂ—ಸ್ವಲ್ಪವೂ; ನಿಲಲಾರದೆ—ತಾಳಲಾರದೆ.

೧೬೪. ಬಿಸುಸುಯ್ಯೊಳ್—ಉಷ್ಣವಾದ ನಿಶ್ವಾಸದಿಂದ ; ಬೆಳಗಿದುದು—ಸುಡಲ್ಪಟ್ಟಿತು; ಎಂದೆಂಬಿನಂ—ಎಂಬಂತೆ; ಕುಮುದಿನೀವಿಸ್ತಾರಂ, ಕೊರಗಿದುದು—ಬತ್ತಿ ಹೋಯಿತು.

೧೬೫. ತಣ್ಣೆಲರ್—ತಂಪಾದಗಾಳಿಯು ; ಮಧುಸಖನ—ಮನ್ಮಥನ; ಸುಯ್ಯೆಲರ್ವೊಲ್—ನಿಟ್ಟುಸುರಿನಂತೆ; ಸೊಗಯಿಸಿ—ಒಪ್ಪಿ; ಅಲರ್ಗಂಪಂ, ಪೊತ್ತು, ನೆಗೆದು—ಮೇಲಕ್ಕೆ ಎದ್ದು; ತೀಡಿತ್ತು—ಬೀಸಿತು.

ಪೋಗಿ ಬಂದು ದೇವ ಮಂದರಪ್ರಾಸಾದದ ಕೆಳಗಣಸೌಧತಳವೇದಿಕೆಯೊಳ್ಮಹಾಶ್ವೇತೆವೆರಸಿರ್ದ್ದಪಳೆಂದು ಬಿನ್ನಪಂಗೆಯ್ಯಲೊಡಂ ಗಂಧರ್ವರಾಜನಂದನೆಯಲ್ಲಿಗೆ ಬರ್ಪ್ಪನ್ನೆಗ ಮನೇಕಪರಿವ್ರಾಜಿಕಾಸಮಾಜಂ ಸುತ್ತುವೋಲಗಿಸುತ್ತಿರೆ ಅಂತಃಪುರಾಧ್ಯಕ್ಷರ್ಹಿತರೊಳಾದರಂಬೆರಸು ಸಂಭಾಷಿಸುತ್ತುಂ ಸೌಧತಳವೇದಿಕೆಯೊಳ್ ಗಂಧರ್ವರಾಜಬಾಂಧವವೃದ್ಧರಂ ವೇತ್ರಾಸನಾದಿದಾನದಿಂ ಸನ್ಮಾನಿಸುತ್ತ ಮಿರ್ದ್ದಮಹಾಶ್ವೇತೆಯು ಪೆಱಗೆ ॥ ೧೬೮

ವೃ॥ ಎರಡುಂ ಬಂಚಂಗಳಿಂ ದಿಂಚರವೊಸರ್ವಿನೆಗಂ ಕಿನ್ನರದ್ವಂದ್ವಮೊತ್ತು । ತ್ತಿರೆ ನಾನಾಭಂಗಿಯಿಂ ನಾರದತನಯೆ ನಯಂಬೆತ್ತುದೆಂಬಂತೆ ಪಾಡು । ತ್ತಿರೆ ಪುಣ್ಯೋಪೇತಮಂ ಭಾರತಮನೆಸೆವ ಪೌರಾಣಿಕ ರ್ಪ್ಪಕ್ಕದೊಳೋದು । ತ್ತಿರೆ ಕೇಳುತ್ತಿರ್ದ್ದ ಕಾದಂಬರಿಯು ನವನಿಪಂ ದೂರದೊಳ್ಕಂಡನಾಗಳ್ ॥ ಅನ್ತು ಬಂದು— ೧೬೯

ವೃ॥ ಲಲನೆಯ ವಕ್ತ್ರಕಾಂತಿ ದೊರೆಕೊಳ್ಗೆನಗೆಂ ದಮೃತಾಂಶು ಭಕ್ತಿಯಿಂ । ಬಲವರುತಿರ್ದ್ದನೋ ಪಿರಿದು ವೆಂಬಿನೆಗಂ ನವಕರ್ಣಪೂರದೊಂ । ದಳೆದ ಶಿರೀಷಮಂಜರಿಯ ನೀಕ್ಷಿಸಿ ಪಾವಸೆಗೆತ್ತು ತೃಷ್ಣೆಯಿಂ । ಬಲಸರುತಿರ್ದ್ದ ದಂಗನೆಯ ಸುಸ್ಮಿತಬಾಲಮರಾಳಮಂಡಲಂ ॥ ೧೭೦

ಕಂ॥ ಪೊಳೆವ ಸುಲಿಪಲ್ಲ ನುಣ್ಬೆಳ । ಗೆಳಸಿದತಾಂಬೂಲಬದ್ಧಕೃಷ್ಣಿಕೆಯಿಂ ಕ ॥ ಣ್ಗೊಳಿಪ ನಿಜಾಧರಮಂ ಕೋ । ಮಳೆ ನೋಡುತಿರ್ದ್ದಳಮಳಮಣಿದರ್ಪಣದೊಳ್ ॥ ೧೭೧

ವ॥ ಅಂತಿರ್ದ್ದಳ ನೆಯ್ದೆವಂದು ಸುಧಾವೇದಿಕೆಯೊಳಕ್ಕೆದಾಸನಮ ನಲಂಕರಿಸಿ ಕಿಱಿದುಬೇಗವಿರ್ದ್ದ ಮಹಾಶ್ವೇತೆಯುಂ ಮಂದಸ್ಮಿತ

೧೬೮. ಉಪ್ಪವಡಿಸಿದ ಶ್ರೀಂಬುದಂ—ಮಲಗಿದ್ದು ಎದ್ದಳೊ ಇಲ್ಲವೊ ಎಂಬುವದನ್ನು; ಅಧ್ಯಕ್ಷರ್ಹಿತರ್—ಸಮೀಪವರ್ತಿಗಳು.

೧೬೯. ಬಂಚಂಗಳಿಂದೆ—ವೀಣಾವಾದ್ಯಗಳಿಂದೆ; ಒತ್ತುತ್ತಿರೆ – ಊದುತ್ತಿರಲು; ನಾರದತನಯೆ—ನಾರದನ ಮಗಳು ಪಾಡುತ್ತಿರೆ; ಪಕ್ಕದೆ+ಓದುತ್ತಿರೆ.

೧೭೧. ಸುಲಿಪಲ್—ಶುಭ್ರವಾದ ದಂತಗಳ; ನುಣ್ಬೆಳಗೆಳಸಿದ—ನಿರ್ಮಲವಾದ ಕಾಂತಿಯಿಂದ ಕೂಡಿದ.

ವದನನಾಗಿ ನೋಳ್ಪುದುಂ ವಿದಿತಾಭಿಪ್ರಾಯೆಯಾಗಿ ಕಾದಂಬರಿಯುನಿಂತೆಂದಳ್ ॥ ೧೭೨

ಕಂ॥ ಚಂದ್ರಿಕೆಯಿಂದಂ ದ್ರವಿಯಿಪ । ಚಂದ್ರೋಪಲದಂತೆ ನಿನ್ನ ಗುಣಗಣದಿಂದಂ ॥ ಚಂದ್ರಮುಖಿ ನಾಂದನಾಗಿ ನ । ರೇಂದ್ರಂ ನುಡಿಯಲ್ಕ ಮಱಿಯದಿರ್ದಪನೀಗಳ್ ॥ ೧೭೩

ಅಱಿಯದೆ ಪೋದೆಡೆಯುಂ ಬಿಡ । ದಱಸುತ್ತಿಂತಿರ್ಪನೆನುತ ಮುನ್ನಳದಿಂದಂ ॥ ಪೆಱಗಿರ್ದ ರಾಜಲೋಕಂ । ಮಱುಗದೆ ಮಾಣದು ಕುಮಾರನಂ ಕಾಣ್ಬೆನೆಗಂ ॥ ೧೭೪

ಕಂ॥ ಕಮಲಿನಿಗೆ ಕಮಲಬಂಧುಗೆ । ಕುಮುದಿನಿ ಗಾಕುಮುದಿನೀಶ್ವರಂ ಗೆಂತೀಗಳ್ ॥ ತಮಗಂತಿರ್ಪೆಡೆಗಳ್ದೊ । ರಮಾದೊಡಂ ಪ್ರೀತಿಮಾಣದಾಕಲ್ಪಾಂತಂ ॥ ೧೭೫

ಅದಱಿಂದರಸಂಗೆ ಪೋಗಲ್ವೇಳ್ಕುಮೆಂದು ನುಡಿಯೆ ಕಾದಂಬರಿಯಿಂತೆಂದಳ್ ॥ ೧೭೬

ಕಂ॥ ತಮಗಿಂ ಪೆರತೇಂ ಸ್ವಾಧೀ । ನಮೆನಿಪ ಪರಿಜನದೊಳೆನ್ನ ಮನದೊಳ್ಬೇಱೆಂ ॥ ಬಮ ಳಾನಲ್ಲಣ ಮದಱಿಂ । ದಮಕ್ಕ ಮತ್ತಾಗ್ರ ತಾವಿದಂ ಪೇಳ್ದಪಿರಾ ॥ ೧೭೭

---

೧೭೩. ದ್ರವಿಯಿಪ—ಸ್ರವಿಸುವ; ದ್ರವಿಯಿಪ ಎಂಬಲ್ಲಿ ದ್ರವ ಎಂಬ ಅಕಾರಾಂತ ಶಬ್ದಕ್ಕೆ ಇಸು ಪರವಾಗಿ ನಡುವೆ ಯಕಾರಾಗಮ ಬಂದಿರುವದು. ಶ.ಮ. ಸೂ. ೫೪. ನಾಂದಂ—ನನೆದವನು.

೧೭೭. ಸ್ವಾಧೀನಮೆನಿಪ—ಚಂದ್ರಾಪೀಡನಿಗೆ ಅಧೀನಮೆನಿಸಿಕೊಂಡಿರುವ; ಪರಿಜನದೊಳ್—ಸೇವಕಜನವಾದ ನನ್ನ ವಿಷಯದಲ್ಲಿ; ತಮಗೆ—ನಿಮಗೆ; ಇಂ—ಇನ್ನು; ಪೆರತೇಂ—ಬೇರೆಯೇನುಂಟು, ಅಂದರೆ ನಾನು ಚಂದ್ರಾಪೀಡನ ಸೇವಕಳಾಗಿ ಆತನ ಆಜ್ಞೆಯಂತೆ ನಡೆಯತಕ್ಕವಳಾಗಿರುವಲ್ಲಿ ನೀವು ನನಗೆ ಹೇಳತಕ್ಕದ್ದೇನುಂಟು; ಎನ್ನ ಮನದೊಳ್ ಆಂ, ಬೞೆಂಬಳಲ್ಲ—ಭೇದವನ್ನು ಎಣಿಸತಕ್ಕವಳಲ್ಲ ಅಂದರೆ ಚಂದ್ರಾಪೀಡನು ಬೇರೆ ನಾನುಬೇರೆಯೆಂದು ಎಣಿಸತಕ್ಕವಳಲ್ಲ; ಅಕ್ಕ—ಎಲೌ ಮಹಾಶ್ವೇತೆಯೆ; ಅದಱಿಂದಂ—ಆದಕಾರಣ; ಇದಂ—ಈಮಾತನ್ನು; ತಾಂ—ನೀವು; ಆರ್ಗೆಪೇಳ್ದಪಿರಾ.

ವ॥ ಎಂದು ನುಡಿದು ಗಂಧರ್ವಕುಮಾರಕರಂ ಕರೆದರಸನಂ ಬೀಡಿಂಗೆಯ್ದಿಸಿಮೆಂದು ಪೇಳ್ದು ವಿದಗ್ಧವಿದ್ಯಾಧರಂನೇಳ್ದು ಮಹಾಶ್ವೇತೆಗೆ ನಮಸ್ಕರಂಗೆಯ್ದು ಕಾದಂಬರಿಗೆ ಕಯ್ಗಳಂಮುಗಿದು ॥ ೧೭೭

ಕಂ॥ ಪಿರಿದುನುಡಿ ಯೇಂವ್ರುದೆನಗಿಂ । ಪರಿಜನದೊಳಗೊರ್ವ್ವನೆಂದು ದೇವಿಯುರೆನ್ನಂ ॥ ಪರಿಭಾವಿಪ್ರು ದೆಂಬಿದನುಸಿ । ರ್ದರಸಂ ಪೊಱಮಟ್ಟನಾಗಳಂತಃಪ್ರರಮಂ ॥ ಅನ್ತು ಪ್ರೊಱಮಡೆ.— ೧೭೮

ಕಂ॥ ಬರತೆಗೆದುದೊ ನೃಪನ ಗುಣೌಘ । ತ್ಕರಮೆನೆ ಕಳುಪಲ್ಕೆ ಕಡೆಯ ಬಾಗಿಲ್ವಾಡಂ ॥ ಬರೆಗಂ ಬಂದುದು ಕಾದಂ । ಬರಿಪ್ರೊಱತಾ ಗಟಿಳಕನ್ಯಕಾನಿಕುರುಂಬಂ ॥ ೧೭೯

ವ॥ ಆಗಳಾಕನ್ನಿಕೆಯರಂ ಮಗುಳ್ಚಿ ಕೇಯೂರಕಂ ಸಾರ್ಚ್ಚಿದಿಂದ್ರಾಯುಧಮ ನೇಱಿ ಗಂಧರ್ವರಾಜ ಕುಮಾರರೊಡನೆ ಹೇಮಕೂಟದಿಂ ಪೊಱಮಟ್ಟು ಪೋಗುತ್ತಮಿರ್ದ್ದ ॥ ೧೮೦

ವೃ॥ ಆಗಲಲಸಹ್ಯಮೆಂದು ಪೆಱಗೀಬಳಸಲ್ವಳೆ ಮುಂದೆಬಂದಳೀ । ತಗೆಪ್ರೊಡೆ ಚಿತ್ತದುತ್ಕಲಿಕೆಯಿಂ ಸಭಕೀನೆಗೆತಂದಳಾಗಳುಂ ॥ ಮೊಗಮನೆ ನೋಡಲೆಂದು ರದೊಳೀನೆಲಸಿರ್ದ್ದಪ ಳೆಂದೆನುತ್ತ ಮಾ । ಮೃಗಶಿಶುನೇತ್ರೆಯುಂ ಬಿಡದೆ ಭಾವಿಸಿದಂ ನೃಪರೂಪಚಂದ್ರಮಂ ॥ ೧೮೧

---

೧೭೮. ಇಂ—ಇನ್ನು ಮೇಲೆ; ಎನಗೆ ಪಿರಿದುನುಡಿ—ಹೆಚ್ಚುಮಾತು; ಏಪ್ರುದು—ಏನುಮಾಡಬಲ್ಲದು ಅಂದರೆ ನಾನು ಹೆಚ್ಚುಮಾತಾಡಿ ಪ್ರಯೋಜನವೇನು.

೧೮೦. ಮಗುಳ್ಚಿ—ಹಿಂದಕ್ಕೆ ಕಳುಹಿಸಿ; ಸಾರ್ಚ್ಚಿದ—ಸಮೀಪಕ್ಕೆ ತಂದ.

೧೮೧. ಆಗಲಲಸಹ್ಯಮೆಂದು, ಪೆಱಗೆ—ಹಿಂದೆ; ಈ ಬಳಿಸಲ್ವಳೆ—ಇದೋ ಸಂಗಡಬರುವವಳಾಗಿಯೇ ಇದ್ದಾಳೆ; ಈತಗೆಪ್ರೊಡೆ—ಇದೋ ನನ್ನನ್ನು ತಡೆಯುವದಕ್ಕೆ; ಮುಂದೆಬಂದಳ್; ಚಿತ್ತದುತ್ಕಲಿಕೆಯಿಂ—ಮನಸ್ಸಿನಕುತೂಹಲದಿಂದ; ಸಭಕೆ, ಈನೆಗೆತಂದಳ್—ಇದೋ ಹಾರಿಬಂದಳು; ಆಗಳುಂ—ಸರ್ವಕಾಲದಲ್ಲಿಯೂ; ಮೊಗಮನೆ ನೋಡಲೆಂದು, ಉರದೊಳ್, ಈ ನೆಲಸಿರ್ದ್ದಪಳ್—ಇದೋನೆಲೆಗೊಂಡಿರುವಳು; ಎನುತ್ತಂ—ಹೀಗೆಂದು.

ವ॥ ಅನ್ತು ಪೋಗೆಪೋಗೆ ಮಹಾಶ್ವೇತಾಶ್ರಮದಚ್ಛೋದಸರೋವರದ ತೀರದೊಳಿಂದ್ರಾಯುಧದ ಪಜ್ಜೆವಿಡಿದು ಬಂದು ಬಿಟ್ಟಿರ್ದ ನಿಜಸ್ಕಂಧಾವಾರಮಂ ಕಂಡಾಗಂಧರ್ವಕುಮಾರರಂ ಮಗುಳ್ಚಿ ಕಟಕಜನ ಮಾನಂಪಮುಮತಿಕೌತುಕಮುಂ ಕಯ್ಗಣ್ಮೆ ತನತನಗೆ ಪೊಡಮಡುತ್ತಿರಲರಮನೆಯಂ ಪೊಕ್ಕು ವೈಶಂಪಾಯನನುಂ ಪತ್ರಲೇಖೆಯುಮಂ ಬೆರಸು ಸಕಲರಾಜಲೋಕಮಂ ಮನ್ನಿಸಿ ತನ್ನ ಪೋದಬಂದ ವೃತ್ತಾಂತಮೆಲ್ಲಮಂ ಪೇಳುತ್ತುಮಾಪಗಲಂ ಕಳೆದು ॥ ೧೮೨

ಕಂ॥ ತರಳಾಕ್ಷಿಯ ನಾಕಾದಂ । ಬರಿಯಂ ರಣರಣಕ ವಿಕಲಹೃದ
ಯದಿ ನೋರ್ಪ ॥ ತಿರೆ ಚಿಂತಿಸುತ್ತ ಮಿರ್ದ್ದ । ಯಿರುಳ ನದೆಂತಾನು
ಮವನಿಪಾಲಂ ಕಳೆದಂ ॥ ೧೮೩

ವ॥ ಅನ್ತು ಕಳೆದಾ ಮಱುದಿವಸ ಮಾಕನ್ನೆಯನೆ ನೆನೆವುತ್ತುಮಾಸ್ಥಾನಮಂಟಪದೊಳಿರ್ಪ್ಪನ್ನೆಗಂ ಪಡಿಯಱಂಬೆರಸು ಕೇಯೂರಕಂ ಭೋಂಕನೆ ಬಂದು ॥ ೧೮೪

ವೃ॥ ವಿನಯಂ ಕಯ್ಗಣ್ಮೆ ದೂರಾಂತರದೊಳೆಱಗೆ ಕಂಡಿತ್ತ ಬಾ
ಯಿತ್ತ ಬಾ ಯೆಂ । ಬಿನ ಮೈತಂವಂಪ್ರಪಮ್ಮಕ್ಕೆಱಗೆ ತೆಗೆದು ತಳ್ಕೈಸಿದಂ
ಪ್ರೀತಿಯಿಂ ಮು ॥ ನ್ನ ನಿಜಾಪಾಂಗಾವಲೋಕಂ ಬೞಿಕೆ ಹೃದಯ ವಲ್ಲಿಂ
ಬಳಿಕ್ಕಂತೆ ರೋಮಾಂ । ಚನಿಕಾಯೋದ್ಭೇದ ವಲ್ಲಿಂಬಳಿಕ ಭುಜಯುಗಂ
ಸುತ್ತೆ ರಾಜೇಂದ್ರಚಂದ್ರಂ ॥ ಅನಂತರಂ.— ೧೮೫

ಕಂ॥ ಬಸರ್ದಪ್ಪುದು ನುಡಿಯೊಳೊಲವಿನ । ರಸವೆನೆ ನಸುವೆಳ್ಪ
ಮಂದಮಂದಸ್ಮಿತದಿಂ ॥ ಪಸರಿಸುತಿರೆ ಯುವರಾಜಂ । ಬೆಸಗೊಂಡಂ ಪ್ರೀ
ತಿಯಿಂದೆ ಕೇಯೂರಕನಂ ॥ ೧೮೬

---

೧೮೨ ಸ್ಕಂಧಾವಾರಮಂ—ಪಾಳಯವನ್ನು; ಸ್ಕಂಧಾವಾರಸ್ತ್ಯಾತ್ಕಟಕಃ ಎಂದು ಅಮರಶೇಷವು.

೧೮೩. ರಣರಣಕ—ಮನ್ಮಥನಿಂದ; ವಿಕಲ—ಖಿನ್ನವಾದ; ಹೃದಯದಿಂ—ಮನಸ್ಸಿನಿಂದ; ರಣರಣಕೋರತಿರಮಣಃ ಎಂದು ಅಮರಶೇಷವು.

೧೮೫. ಮುನ್ನ—ಮೊದಲು; ನಿಜಾಪಾಂಗಾವಲೋಕಂ,ಸುತ್ತೆ—ಆವರಿಸಿಕೊಳ್ಳಲು;

ಕಂ॥ ಅರಸಿಯರ್ಗೆ ಮಹಾಶ್ವೇತೆಗೆ । ಪರಿಜನನಿವಹಕ್ಕೆ ಕುಶಲಮೋ
ಪೇಳೆನಲಾ ॥ ವರಪಿಂದೆ ದೇವ ನೀಮಿಂ । ತಿರೆ ಬೆಸಗೊಂಡಂತೆ ಕುಶಲಮಂತವ
ರ್ಗೆಲ್ಲಂ ॥ ೧೮೩

ವ॥ ಎಂದಾಗಳಿಪ್ಪುರ್ವೊರೆದ ದುಗುಲದ ಬಾಸಣಿಗೆಯಂ ಕಳೆದು ತಾವರೆಯ ನೂಲಿಂ ಸುತ್ತಿದ ಸಿರಿಕಂಡದುರುಳಿಯಂ ಪತ್ತಿಸಿದ ಮೃಣಾಳನಾಳವಲಯದಿಂ ಮುದ್ರಿಸಿದ ನಳಿನೀಪತ್ರಪುಟಮಂ ತೆಗೆದು ಕಾದಂಬರೀದೇವಿಯಟ್ಟಿದ ಮದನವೇದನೆಯಭಿಜ್ಞಾನಂಗಳಪ್ಪ ಪಸುರೆಸೆವ ಪೊಲಡಕೆಯ ಗೊಂಚಲುಮಂ ಖಚರಕಾಮಿನಿಯರ ಕದಂಪಿನ ಬೆಳ್ಪನಪ್ಪುಕೆಯ್ದ ಕಪ್ಪುರವಳ್ಳಿಯ ಬಿಳಿಯೆಲೆಯ ವೀಳೆಯುಮಂ ಎಳವೆಱೆಯ ಮುಱಿಗಳ ನೇಳಪ ಕಪ್ಪುರದ ಪಳುಕುಗಳುಮಂ ಕತ್ತುರಿಯ ಕಂಪಿನಿಂ ಸೊಂಪಂತಳೆದ ಮಲಯಜವಿಲೇಪನಮುಮಂ ನರಸಂಗೆ ತೋಱಿ ಕಾದಂಬರಿಯ ಚೂಡಾಮಣಿಮರೀಚಿ ರಂಜಿತಾಂಜಲಿ ಸಮಭ್ಯರ್ಚನಮುಮಂಮಹಾಶ್ವೇತೆಯಕಂಠಗ್ರಹಕುಶಲವಚನ ಸಂಬೋಧನಮುಮಂ ಮದಲೇಖೆಯನಮಸ್ಕಾರಮುಮಂ ತಮಾಲಿಕೆಯ ಪಾದಪ್ರಣಾಮಮುಮಂ ಬಿನ್ನವಿಸಿ ಮಹಾಶ್ವೇತೆಯಿಂತೆಂದಟ್ಟಿದಳೆಂತೆನೆ ॥ ೧೮೪

ಕಂ॥ ಹಿಮಕರಮಯ ಮೆನಿಸಿದ ನಿಜ । ವಿಮಲಗುಣವ್ರಜಮೆ ತಂ
ನಗಲ್ಕೆಯೊಳುಷ್ಣಾಂ ॥ ಶುಮಯ ಮೆನಿಸಿದಪುವೆನೆ ಮುಂ । ನಮೆ ತನ್ನಂ
ಕಾಣದಿರ್ಪುದದು ಸುಖಮಲ್ತೇ ॥ ೧೮೫

---

೧೮೩. ನೀಂ—ನೀವು; ಇಂತಿರೆ—ಹೀಗೆ; ಬೆಸೆಗೊಂಡಂತೆ—ಕೇಳಿದಹಾಗೆ.

೧೮೪. ಇಪ್ಪುರ್ವೊರೆದ—ದ್ರವದಿಂದಕೂಡಿದ; ದುಗುಲದಬಾಸಣಿಗೆಯಂ—ದುಕೂಲದಗವಸನ್ನು; ಸಿರಿಕಂಡದುರುಳಿಯಂ—ಶ್ರೀಗಂಧದಕೆಸರನ್ನು; ಮದನವೇದನೆಯ ಅಭಿಜ್ಞಾನಂಗಳಪ್ಪ—ಅಭಿಜ್ಞಾನಗಳಾದ ಅಂದರೆ ಸೂಚಕಗಳಾದ; ಪೊಲಡಕೆಯ—ಹಸೀಅಡಕೆಯ; ಪಳುಕುಗಳಂ—ತಿರುಳುಗಳನ್ನು.

೧೮೫. ಹಿಮಕರಮಯಮೆನಿಸಿದ—ತಂಪಾದ; ನಿಜಗುಣವ್ರಜಮೆ—ನಿನ್ನಗುಣಸಮೂಹವೆ; ತನ್ನಗಲ್ಕೆಯೊಳ್—ನಿನ್ನವಿಯೋಗದಿಂದ; ಉಷ್ಣಾಂಶುಮಯಮೆನಿಸಿದಪ್ಪುವು—ತೀಕ್ಷ್ಣಗಳಾಗುವವು; ಮುನ್ನಮೆ—ಮೊದಲೆ; ಕಾಣದಿರ್ಪುದು—ನೋಡದೆ ಇರುವದು; ಸುಖಮಲ್ತೇ—ಸುಖಕರವಲ್ಲವೆ; ಅಂದರೆ ನಿನ್ನನ್ನು ಮೊದಲು ನೋಡದೇ ಇದ್ದರೆ ಇಂಥಾ ವ್ಯಥೆ ಸಂಭವಾಗುತ್ತಿರಲಿಲ್ಲವೆಂದಭಿಪ್ರಾಯವು.

ಅಮೃತೋತ್ಪತ್ತಿಯ ದಿವಸಂ । ಸಮನಿಸಿತೆಂಬಂತೆ ದೈವದಿಂದೆಂತಾ
ನುಂ ॥ ಸಮನಿಸಿದಾ ನಿನ್ನಿನ ದಿವ । ಸಮ ನೀನಾಂಬಿಡದೆ ಬಯಸುತಿರ್ದ
ಪುದುಜನಂ ॥ ೧೯೦

ವ॥ ಮತ್ತಂ ತನ್ನಗಲ್ಕೆಯಿಂ ಗಂಧರ್ವರಾಜನಂದನೆಗೆ ಶೀತೋಷ್ಣ
ಭವನಮದು ಮದುವೆಗಳಿಪಿದ ಮನೆಯಂತೆ ನಿರ್ವೃತ್ತಮಹೋತ್ಸವಮಾಗಿ
ರ್ಪುದನ್ತುಮಲ್ಲದೆಯುಂ ॥ ೧೯೧

ಕಂ॥ ವಿದಿತೆಯೆನಾಂ ತನಗೆಲ್ಲಂ । ದದೊಳಂ ಪರಿಹೃತಸಮಸ್ತಸಂಗೆ
ಯೆನೆನ್ನೀ ॥ ಹೃದಯಂ ನೋಡಲ್ಬಯಸಿದ । ಪುದಕಾರಣಪಕ್ಷಪಾತಿ ಯೆನಿ
ಸಿದತನ್ನಂ ॥ ೧೯೨

ವೃ॥ ತನು ಬಸಮಲ್ತು ಮತ್ಸಖಿಗೆ ಮನ್ಮಥನನ್ನನೆನಿಪ್ಪ ತನ್ನ
ಮಂ । ನೆನೆದಪಳೊರ್ಮೆ ಬಂದೆನಗೆ ಮಾಳ್ಪುದು ಪೆರ್ಮೆಯನಿಮ್ಮ ನ
ಣ್ಪಿನಿಂ ॥ ಜನಿಯಿಸಿದೀಕದರ್ಥನೆಗೆ ಸೈರಿಪುದಿಲ್ಲಿಗೆ ಬರ್ಪ್ಪುದೆಂದು ಪೇ । ಳ್ದ
ನಿವಿರಿದೊಂದು ದರ್ಪಮೆನಗಾದುದು ತನ್ನಯನಿರ್ಮಳತ್ವದಿಂ ॥ ೧೯೩

---

೧೯೦. ಈನಾಂಬಿಡದೆ—ಈನಾನುಸಹಿತವಾಗಿ; ಜನಂ—ಗಂಧರ್ವಲೋಕವು; ನಿನ್ನಿನದಿವಸಮಂಬಯಸುತಿರ್ದಪುದು—ನಿನ್ನದರ್ಶನಸುಖವನ್ನುಂಟುಮಾಡಿದನಿನ್ನೆಯದಿವಸದಂಥಾದಿವಸವನ್ನು ಅಪೇಕ್ಷಿಸುವದೆಂದಭಿಪ್ರಾಯವು.

೧೯೧. ಮದುವೆಗಳಿಪಿದ—ವಿವಾಹೋತ್ಸವಕಳೆದ.

೧೯೨. ಆಂ—ನಾನು; ಎಲ್ಲಂದದೊಳಂ; ಪರಿಹೃತಸಮಸ್ತಸಂಗೆಯೆಂ—ಬಿಡಲ್ಪಟ್ಟ ಸರ್ವಸಂಗವುಳ್ಳವಳಾಗಿ; ನಿನಗೆ, ವಿದಿತೆಯೆಂ—ತಿಳಿಯಲ್ಪಟ್ಟವಳಾಗಿಯೆ ಇದ್ದೇನೆ ಸಮಸ್ತಸಂಗೆಯೆಂ, ವಿದಿತೆಯೆಂ ಎಂಬ ವಿಶೇಷಣಗಳಮೇಲೆ ಆಖ್ಯಾತವಿಭಕ್ತಿ ಬಂದಿರುವದು ಶ·ಮ. ಸೂ. ೨೧೯.

೧೯೩. ಮತ್ಸಖಿಗೆ—ಕಾದಂಬರಿಗೆ; ತನು—ಶರೀರವು; ಬಸಮಲ್ತು—ಆಧೀನವಲ್ಲ ಅಂದರೆ ವಿರಹದಿಂದ ಶರೀರಸ್ವಾಧೀನತೆ ಯಿಲ್ಲವೆಂದಭಿಪ್ರಾಯವು; ಬರ್ಮೆಬಂದೆನಗೆ ಮಾಳ್ಪುದುಪೆರ್ಮೆಯ—ಒಂದುಸಾರಿಬಂದು ನನಗೆ ಗೌರವವನ್ನುಂಟುಮಾಡತಕ್ಕದ್ದು; ನಿಮ್ಮನಣ್ಪಿನಿಂ—ನಿಮ್ಮಸ್ನೇಹದಿಂದ: ಕದರ್ಥನೆಗೆ—ಕಾಟಕ್ಕೆ; ಇಲ್ಲಿಗೆಬರ್ಪ್ಪುದೆಂದು ಪೇಳ್ದ—ಇಲ್ಲಿಬರಪೇಕೆಂದು ಹೇಳಿದ; ಇನಿವಿರಿದೊಂದುದರ್ಪಂ—ಇಷ್ಟುದೊಡ್ಡಗರ್ವವು; ತಮ್ಮಯ ನಿರ್ಮಳತ್ವದಿಂ—ಪ್ರಸನ್ನತೆಯಿಂದ ಎನಗೆ ಆದುದು.

ವ॥ ಎಂದು ನುಡಿಯಲ್ವೇಳ್ದುದಲ್ಲದೆಯುಂ.—

ವೃ॥ ಇದನಂದಾ ಶಯನೀಯದೊಳ್ಮಱೆತು ದೇವಬ್ಬೆಂದಿರೆಂದೀಗಳ್ | ಟ್ಟಿದಳೆಂದೊಯ್ಯನೆ ಚಾಮರಾಂಗನೆಯ ಕಯ್ಯೊಳ್ಕೊಟ್ಟ ನಾತ್ಮೋತ್ತರೀ ॥ ಯದುಕೂಲಾಂಚಲ ಸೂಕ್ಷ್ಮಸೂತ್ರವಿವರವ್ರಾತಂಗಳಿಂ ಕೂಡೆ ನು | ಣ್ಗದಿರ್ಗಳ್ಸೂಸುವ ಶೇಷವೆಂಬಮಳ ತಾರೋದಾರಮಂ ಹಾರಮಂ॥

ವ॥ ಕುಡುವುದುಂ ವಿದಗ್ಧವಿದ್ಯಾಧರನಿಂತೆಂದಂ.—

ಕಂ॥ ಪಡಪಿಂ ತವಮ್ಮಾಳ್ಗಳ ನಿಂ | ತುದೇವಿಯ ನ್ನೆನೆವುದೆಂಬುದಿದು ಸಕಲಗುಣಾ ॥ ಸ್ಪದೆಯೆನಿಪ ಮಹಾಶ್ವೇತೆಯ | ಪದಕಮಲಾರಾಧನೆಯ ತಪಃಫಲಮಲ್ತೇ ॥ ೧೯೫

ವ॥ ಎನುತ್ತಮೆಲ್ಲಮಂ ಪ್ರೀತಿವೆರಸು ತಾನೇಕಯ್ಕೊಂಡು ಕಿರಿದುಬೇಗಮಿರ್ದ್ದಲ್ಲಿಂದಮೇೞ್ದು ಸನ್ಮಾನಪುರಸ್ಸರ ಮಖಿಳರಾಜಲೋಕಮುಮಂ ಪ್ರಧಾನನಿವಹಮುಮಂ ವಿಸರ್ಜಿಸಿ ಗಜಗಮನರಾಜಪುತ್ರಂ ಗಂಧಮಾದನನಾಗೇಂದ್ರದಲ್ಲಿಗೆ ಬಂದು ನಿಜನಖಾಂಶುಜಾಲಜಟಿಲಮಾಗಿ ಮೃಣಾಳನಾಳದಂತೆ ಸೊಗಯಿಸುವೆಳವುಲ್ಲಕವಳಮಂ ನೀಡುತ್ತುಂ ಮದಲೇಖೆಗೆರಗುವ ಚಂಚರೀಕದಿಂಚರದಿ ನುತ್ಕಂಠಿತನಾಗಿ ವಲ್ಲಭವಾಜಿಯ ಮಂದುರದಲ್ಲಿಗೆ ಕೇಯೂರಕದ್ವಿತೀಯನಾಗಿ ಬಂದಿಂದ್ರಾಯುಧದ ಕುಂಕುಮಕಪಿಲಕೇಸರಸಟೆಯನೊಯ್ಯನೋಸರಿಸುತ್ತುಂ ಖುರಮಣಿಕೆಯೊಳ್ ಕಾಲನಿಕ್ಕಿ ಮಂದುರದ ಮುಂಡಿಗೆಯುಂ ಮಲಂಗಿ ಕೌತುಕಂಬೆರಸು ಕೇಯೂರಕನನಿಂತೆಂದಂ ॥ ೧೯೬

ವೃ॥ ಅನಿತಳ್ತುಂದಬಳಿಕ್ಕೆ ಚಿತ್ರರಥರಾಜಾವಾಸದೊಳ್ಪಾರ್ತಿಯೇ | ನಾನೀರೇಜದಳಾಕ್ಷಿಗೆಂಜಿನದ ಮೋಗೆಯ್ದು ಮಹಾಶ್ವೇತೆ ತಾ ॥ ನೇನೆಂಬಳ್ಮದಲೇಖೆ ತತ್ಪರಿಜನಾಲಾಪಂಗಳೇನಲ್ಲಿ ಸೇ | ನೇನಂ ಮಾಡುತ ಮಿರ್ದ್ದಳೆಂದು ಬೆಸಗೊಂಡಂ ಚಂದ್ರಚೂಡಾನ್ವಯಂ ॥ ೧೯೭

---

೧೯೬. ಗಂಧಮಾದನನಾಗೇಂದ್ರ—ಗಂಧಮಾದನನೆಂಬ ಆನೆ: ವಲ್ಲಭವಾಜಿಯ—ಜಾತ್ಯಶ್ವಗಳ ; ಖುರಮಣಿಕೆ—ಕುದುರೆಯು ಕಾಲಿಡುವುದಕ್ಕೆ ಹಾಸಿರುವ ಹಲಗೆ: ಮಲಂಗಿ—ಬರಗಿಕೊಂಡು.

ವ॥ ಎಂದು ಬೆಸಗೊಳ್ವುದುಂ ಕೇಯೂರಕಂ ದೇವಬ್ಬಿಜಯಂ ಗೆಯ್ಯಲೊಡನೆ ॥

ವೃ॥ ಹೃದಯಭವ ಪ್ರಯಾಣಪಟಹಧ್ವನಿ ಯೆಂಬಿನಮೆತ್ತಲುಂ ಪೊ ದ । ಳೆದ್ದುದವಿದ ರತ್ನನೂಪುರ ಕಲಾಪಕಲಧ್ವನಿಗಂಚೆವಿಂಡು ತಂ ॥ ಡದಿ ನುಲಿವುತ್ತಿರ ಲ್ಕೆಳದಿಯುರ್ವ್ವಿರಸಾಗಳೆ ನಿಮ್ಮ ನೀಕ್ಷಿಸ । ಲ್ಪದೆದಿರದೇಱಿದ ಳ್ತರುಣಿ ತನ್ನಯ ರನ್ನದಕನ್ನೆವಾಡಮಂ ॥ ೧೯೮

ಕಂ॥ ಪರಪುರುಷನೆನಿಪ್ಪ ದಿವಾ । ಕರನ ಕರಸ್ಪರ್ಶನಕ್ಕೆ ಸೈರಿಸದೆಸು ಧಾ ॥ ಕರಬಿಂಬಮನದ ಮುಚ್ಚಿಯಾ । ಗಿರಿಸಿದ ಳೆನಲೆತ್ತಿದತ್ತು ಧವಳಚ್ಛತ್ರಂ॥

ವ॥ ಆಗಳ್ ಚಿತ್ರರಥನಂದನೆ ತುರಗಖುರಲುಳಿತ ಧೂಳೀಧೂಸರಮ ಪ್ಪಭವದ್ಗಮನಮಾರ್ಗಮುಂ ನೋಡುತ್ತುಮಿರ್ದ್ದು ಕಿಱಿದುಬೇಗದಿಂ ನೀಂ ತಿರೋಹಿತದರ್ಶನನಪ್ಪುದು ಮಾದಿಗಂತಮೆಲ್ಲಮಂ ದುಗ್ಧೋದಧಿ ಧವಳ ದೀರ್ಘಾಂಗಳಪ್ಪಪಾಂಗಾವಲೋಕನದಿಂ ತೇಂಕಾಡಿಸುತ್ತಂ ಪಿರಿದುಬೇಗ ಮಲ್ಲಿಯೆ ನಿಂದು ಬಿಸುಸುಯ್ದಲ್ಲಿಂದಮೋಳ್ದು ಬಿಜಯಂಗೆಯ್ಯೆ ॥ ೨೦೦

ಕಂ॥ ಅಲರೆಡಪಿದಪ್ಪೆ ನೀಂಕೋ । ಮಳೆ ಯೆಂದಡಿಗಡಿಗೆ ವಂದು ಪೇಳ್ವಂದದೆ ಪೂ ॥ ವಲಿಯಲ್ಲಿ ಜಿನುಗುತಿರ್ದ್ದುದು । ಬಲವಂದಳಿಮಾಲೆ ಮಧುರಮಂದ್ರಧ್ವನಿಯಿಂ ॥ ೨೦೧

ವ॥ ಮತ್ತ ಮಾಲಾವಣ್ಯಾವತಿಯು ಪದನಖಮಯೂಖಂಗಳಂ ಜಲ ಧಾರೆಗೆತ್ತುತ್ತಂತಂಗಳಾದ ಸೋಗೆಗಳ ಕೇಗುಗಳ್ಗಗಿದವರ ಕೊರಲಂ ಬಿಗಿ ವಂತೆ ಕಯ್ಯಿಂದಮುಚ್ಚ್ಚಿವ ಮಣಿಕಂಕಣಂಗಳಂ ತುಡಿಸುತ್ತಂ ಕರದಿಂ ಕುಸುಮಧವಳಂಗಳಪ್ಪ ಭವನಲತಾಪಲ್ಲವಂಗಳಂ ಮನದಿಂ ಭವದ್ಗುಣಂ ಗಳುಮ ನವಲಂಬಿಸುತ್ತಂ ಕ್ರೀಡಾಪರ್ವತಕ್ಕೆವಂದು ॥ ೨೦೨

---

೨೦೧. ಕೋಮಳೆ, ನೀಂ, ಅಲರಡಪಿದಪ್ಪೆ—ಪುಷ್ಪವನ್ನು ಎಡಪುತ್ತೀಯೆ ; ಬಲವಂದು—ಸುತ್ತಿಕೊಂಡು.

೨೦೨. ಕೇಗುಗಳ್ಗೆ—ಕೇಕಾರವಕ್ಕೆ ; ಅಗಿದು—ಭಯಪಟ್ಟು; ಉಚ್ಚ್ಚಿವ —ವಿರಹದಿಂದುಂಟಾದಕಾರ್ಶ್ಯದಿಂದ ಜಾರಿಬೀಳುವ.

ಕಂ॥ ಇದು ನಿಂದ ನವೇಂದೂಪಲ। ವಿದಭವನಂ ಪೂಜೆಗೆಯ್ದ ಶೀಕರತಲ ವಿಂ ॥ ತಿದು ನೃಪನಾರೋಗಿಪ ಪವ। ೞದ ನೆಲೆ ಯಿದು ಪವಡಿಸಿರ್ದ್ದ ಚಂದನತಲ್ಪಂ ॥ ೨೦೩

ವ॥ ಎಂದು ಪರಿಜನಂಗಳ್ಪೇೞೆ ಮಗುೞೆಮಗುೞೆ ಕೇಳುತ್ತಂ ನೀವಿದ್ದೆಡೆಗಳಂ ನೋಡುತ್ತಂ ಪಗಲಂ ಕಳಿಪಿ ಮಹಾಶ್ವೇತಾ ನಿರೋಧದಿಂದಂ ತಾನು ಮಲ್ಲಿಯೆ ಕೃತಾಹಾರೆಯಾಗಿ ಕಿಱಿದುಬೇಗವಿದ್ದು ಚಂದ್ರೋದಯವಾಗಲೊಡನೇನಾನುಮಂ ಚಿಂತಿಸುತ್ತ ಮಲ್ಲಿಂದವೇೞ್ದು ॥ ೨೦೪

ಕಂ॥ ಚರಣನಖಾಂತರ್ಗತ ಹಿಮ। ಕಿರಣಪ್ರತಿಬಿಂಬ ಭೂರಿಭಾರದಿ ನತಿಮಂ ॥ ಧರತೆ ದೊರೆಕೊಂಡುದೆಂಬಂ। ತಿರೆ ಮೆಲ್ಲನೆ ತರುಣಿ ಸೆಜ್ಜೆವನೆಗೇೞ್ತಂದಳ್ ॥ ೨೦೫

ವ॥ ಅಂತುಬಂದು ಸೆಜ್ಜೆವನೆಯೊಳ್ಮೆಯ್ಯನೀಡಾಡಿ ದಾರುಣಮೆನಿಪ ದಾಹಜ್ವರದಿ ನಿಕ್ಕುವಟ್ಟಂತೇನಾನುಂ ವ್ಯಾಧಿಕಯ್ಕೊಂಡಂತಾರೊಳುಂನುಡಿಯದೆ ಪೊರಳುತ್ತಮಿರ್ದ್ದ ॥ ೨೦೬

ಕಂ॥ ಪೊಳೆವ ಭವನಪ್ರದೀಪಂ। ಗಳೊಡನೆ ಕುಮುದಿನಿಗಳೊಡನೆ ಚಕ್ರಾಹ್ವಯಸಂ॥ ಕುಳದೊಡನೆ ನಿದ್ರೆಯಿಂ ದು। ತ್ಪಳಾಕ್ಷಿ ಕೋಟಲೆಗೊಳುತ್ತ ಮಿರುಳಂ ಕಳೆದಳ್ ॥ ೨೦೭

ವ॥ ಅಂತುಕಳೆದು ಬೆಳಗಾಗಲೊಡನೆನ್ನಂ ನಿಮ್ಮಲ್ಲಿಗಟ್ಟಿದಳೆಂಬುದುಮದೆಲ್ಲಮಂ ಕೇಳ್ದಲ್ಲಿಗೆಪೋಗಲುದ್ಯುಕ್ತನಾಗಿ ಮನುಜೇಂದ್ರಚಂದ್ರ ನಿಂದ್ರಾಯುಧದ ಬೆಂಗೆವಂದು ಪತ್ರಲೇಖೆಯುಂ ಪೆಱಗನೇಱಿಸಿ ವೈಶಂಪಾಯನಾದಿ ಪರಿಜನಮ ನಿರಲ್ವೇೞ್ದು ತುರಗಾರೂಢನಪ್ಪ ಕೇಯೂರಕ ನೊಡವರೆ ಹೇಮಕೂಟಕ್ಕೆ ವಂದು ಕನ್ಯಾಂತಃಪುರದ್ವಾರಮನೆಯ್ದೆವಂದು ಪಡಿಯಱನ

---

೨೦೩. ಶೀಕರತಲಂ—ಜಲಲವದಿಂದಕೂಡಿದ ಪ್ರದೇಶ.

೨೦೪. ಕಳಿಪಿ—ಕಳೆದು.

೨೦೬. ದಾಹಜ್ವರದಿಂ—ತಾಪಜ್ವರದಿಂದ: ಇಕ್ಕುವಟ್ಟಂತೆ—ಹಿಂಸೆಪಟ್ಟಂತೆ.

೨೦೮. ಬೆಂಗೆವಂದು—ಕುದುರೆಯನ್ನ ಏರಿ; ಪೆಱಗಂ—ಹಿಂಭಾಗದಲ್ಲಿ; ಏಱಿಸಿ—ಹತ್ತಿಸಿ: ಎಯ್ದೆವಂದು—ಸಮೀಪಕ್ಕೆ ಬಂದು:

ಕಯ್ಯೊಳ್ಕುದುರೆಯುಂ ಕೊಟ್ಟು ಕಾದಂಬರೀಪ್ರಥಮದರ್ಶನ ಕೌತುಕೆ ಯಪ್ಪ ಪತ್ರಲೇಖೆವೆರಸು ಪುಗುತಂದಿದಿರ್ವರ್ಪ್ಪ ಪುರುಷವರನಂ ಕಾದಂಬ ರೀದೇವಿಯೆಲ್ಲಿರ್ದ್ದಳೆಂಬುದು ಮಾತಂ ಪೊಡವಟ್ಟು ದೇವಮತ್ತಮಯೂರ ಮೆಂಬ ಕೇಳೀಶೈಲದ ತಾವರೆಗೊಳದ ಹಿಮಗೃಹದೊಳಿರ್ದ್ದಪಳೆಂದು ಬಿನ್ನವಿಸೆ ಕೇಯೂರಕೋಪದಿಶ್ಯಮಾನ ಮಾರ್ಗನಾಗಿ ಪ್ರಮದವನದೊಳ ಗೆಬರುತಂ ॥ ೨೦೮

ಕಂ॥ ಬಿಸಿಲೆಲ್ಲ ಪಸಲೆಗವಿದದು । ಪಸುರ್ವೆಳಗಿಂದೆಸಿಪ ಬಾಲಕ
ದಳೀವನದೊಳ್ ॥ ಬಿಸರುಹದಳಂಗಳಿಂ ಪೊದೆ । ಯಿಸಿರ್ದ್ದ ಹಿಮಗೃಹವ
ನವನಿಪಾಲಂ ಕಂಡಂ ॥ ೨೦೯

ವೃ॥ ನಳಿನೀ ಪತ್ರಾಂಶುಕಾಚ್ಛಾದಿತ ಕುಚಯುಗಳಂ ಚಂದನಾಪಾಂ
ಡುಗಂಡ । ಸ್ಥಳಯುಗ್ಮಂ ಕೇತಕೀಕೋಮಲದಳವಿಲಸತ್ಕರ್ಣಪತ್ರಂ ಮೃ
ಣಾಳೀ ॥ ವಳಯಾಲಂಕಾರಕಾಂತಂ ವಕುಳಮುಕುಳಹಾರಾಂಚಿತಂ ಪದ್ಮ
ಸೂತ್ರೀ । ಜ್ಜ್ವಳಚಂಚಚ್ಚಾಮರಂ ಭೋಂಕನೆ ಪೊಱಮಡುತಿರ್ದ್ದ
ತ್ತು ಕಾಂತಾ ಕದಂಬಂ ॥ ೨೧೦

ವೃ॥ ದಳಿತಪ್ರೋನ್ನಾಳನೀರೇರುಹ ಕುವಲಯ ರಂಭಾದಳಾಂಭೋಜ
ಪತ್ರಾ । ವಳಿಯಂ ಲೀಲಾತಪತ್ರಾವಳಿ ಸೊಗಯಿಸೆ ತಮ್ಮೊಳ್ಜಲ ಶ್ರೀಸ
ಮಾಜಂ ॥ ಜಳಜಾತ ಶ್ರೀಸಮೂಹಂ ಸಕಲಜಲಧಿಪಶ್ರೀಚಯಂ ಶಾರದಶ್ರೀ ।
ಕುಳ ಮಂದೊಂದಾಗಿ ಬಂದತ್ತೆನಿಸಿ ಬರುತಮಿರ್ದ್ದತ್ತು ಕನ್ಯಾಕದಂಬಂ ॥

ವ॥ ಅಂತಾಶಿಶಿರೋಪಚಾರ ನಿಪುಣೆಯರಪ್ಪ ಕಾದಂಬರೀಪರಿಜನಂಗ ಳ್ತಮತಮಗೆ ಪೊಡವಟ್ಟೋಸರಿಸಿ ಪೋಗೆಪೋಗೆ ॥ ೨೧೨

---

೨೦೯. ಪಸಲೆಗವಿದದು—ಹಸುರಾಯಿತು; ಪೊದೆಯಿಸಿರ್ದ್ದ—ಹೊದ್ದಿಸಿಯಿದ್ದ.

೨೧೧. ಜಲಶ್ರೀಸಮಾಜಂ—ಜಲಲಕ್ಷ್ಮೀಸಮೂಹವು; ಜಲಜಾತಶ್ರೀಸಮೂಹಂ—ಕಮಲಲಕ್ಷ್ಮೀಸಮೂಹವು; ಸಕಲಜಲಧಿಪಶ್ರೀಚಯಂ—ವರುಣಲಕ್ಷ್ಮೀಸಮೂಹವು; ಶಾರದಶ್ರೀಚಯಂ—ಶರತ್ಕಾಲಲಕ್ಷ್ಮೀಸಮೂಹವು ಬಂದಾಗಿ ಬಂದತ್ತು—ಬಂತು.

ವೃ॥ ಒದವಿದ ತೋರಮಲ್ಲಿಗೆಯ ಹಾರದ ಸೊಸಕದಿಂದೆ ಸಿಂದುವಾ। ರವ ಚಮರೀಜದಿಂದೆ ಕುಮುದಧ್ವಜಮಾಲಿಕೆಯಿಂದೆ ಪುಂಡರೀ॥ಕದ ಕಿರುಗಂಟೆಯಿಂದೆ ಸಹಕಾರದ ಕೆಂದಳಿರಿಂದೆ ಚೆಲ್ವುವೆ। ತ್ತುದು ಕದಳೀದ್ರುಮಗ್ರಥಿತಸುಂದರ ವಂದನಮಾಲಿಕಾವೃತಂ॥ ೨೧೩

ವ॥ ಅಂತದಂ ನುಸುಳುತ್ತಂ ಪೋಗಿ ನಾಲ್ದೆಸೆಯುಮಂ ನೋಳ್ಪಾಗಳೊಂದುದೆಸೆಯೊಳ್ ಇತ್ತರ್ಗಡಿವಿಡಿದು ನಟ್ಟತಮಾಲದ ತಳಿಗೋರ್ಂಬುಗಳಿಂ ಸಮೆದ ವನಲೇಖೆಗಳುಮಂ ಕುಸುಮರಜಮೆಂಬ ನುಣ್ಮಳಲಪುಳಿಲ್ಗಳಿಂದೆ ಮೆಸೆವ ಚಂದನರಸದ ಪಳ್ಳಂಗಳುಮಂ ಬಿರೊಂದೆಡೆಯೊಳೆಳಲ್ವಲಗೋರ್ಂಚಲ ಚಾಮರಂಗಳೊಳಂ ನಾಂದನಾರಂಗವಟ್ಟೆಯ ಮೇಲ್ಕಟ್ಟನೊಳ ಮಿಟ್ಟಳಮೆಸೆವ ಸಿಂದೂರದ ನೆಲಗಟ್ಟನೊಳ್ ಪಾಸಿದ ಕೆಂದಾವರೆಯೆಸಳ ಪಸೆಗಳುಮಂ ಮತ್ತೊಂದೆಡೆಯೊಳೇಲಾರಸದಿಂ ಸಿಂಪಿಣಿಗೆಗೊಟ್ಟುಮುಟ್ಟದೊಡಲ್ಲದಱಿಯಲ್ಬಾರದೆಂದೆಸಿಪ ಭೃಂಗದ ಚಪ್ಪರಂಗಳುಮಂ ಪೆಱತೊಂದೆಡೆಯೊಳ್ ಸಹಕಾರ ರಸದಿಂ ತೊಯ್ದುರನೇಱಿಲ ತಳಿರ್ಗಳಿಂ ಪೊದಯಿಸಿದ ಕುಳಿರ್ವಕಾವಣಂಗಳುಮಂ ಮತ್ತಮೊಂದೆಡೆಯೊಳ್ ಸಿರಿಸದೆಸಳಪಸಲೆಯ ಮೃಣಾಳನಾಳಧಾರಾಗೃಹಂಗಳ ಮೇಲೆಮುಗಿಲ್ಗಡವಿನಲರಧೂಳಿಯೊಳ್ಪೊರೆದುನಿಲಿಸಿದ ಯಂತ್ರಮಯೂರಂಗಳುಮಂ ಬಂದೆಡೆಯೊಳ್ ಜಂತ್ರದಮಱಿಯಾನೆಯ ಕರಪುಟಂಗಳಿಂ ಕಡಿದ ತಾವರೆಗೊಳಂಗಳುಮ ನಂತುಮಲ್ಲದೊಂದೆಡೆಯೊಳ್॥ ೨೧೪

---

೨೧೩. ಸೊಸಕದಿಂದೆ—ಕುಚ್ಚುಗಳಿಂದ; ಸಿಂದುವಾರವ—ಲಕ್ಕಿಯ ಹೂವಿನ; ಕದಳೀದ್ರುಮ—ಬಾಳೇಗಿಡಗಳಲ್ಲಿ; ಗ್ರಥಿತ—ಜೋಡಿಸಿಕಟ್ಟಲ್ಪಟ್ಟ, ಸುಂದರವಂದನಮಾಲಿಕಾ—ಸುಂದರತೋರಣದ; ವೃತಂ—ಆವರಣವು: ಚೆಲ್ವುವೆತ್ತುದು.

೨೧೪. ಇತ್ತರ್ಗಡಿವಿಡಿದು—ಎರಡುಪಾರ್ಶ್ವದಲ್ಲಿಯೂ; ಇಟ್ಟಳಂ—ಸೊಗಸಾಗಿ: ಪಸೆ—ಹಾಸಿಗೆ; ಸಿಂಪಿಣಿಗೆಗೊಟ್ಟು—ಸೇಚನಮಾಡಿ ಅಂದರೆಚಿಮುಕಿಸಿ; ಭೃಂಗದ—ಅಭ್ರಕದ; ಕಾವಣಂಗಳುಮಂ—ಪರ್ಣಶಾಲೆಗಳನ್ನೂ; ಮುಗಿಲ್ಗಡವಿನ—ಮೇಘೋದಯದಿಂದಪ್ರಫುಲ್ಲಿತವಾಗುವಕಡಪದಮರದ; ಅಲರಧೂಳಿಯೊಳ್, ಪೊರೆದು—ವ್ಯಾಪ್ತವಾಗಿ

ವೃ॥ ಮಲಯಜವಾರಿಯಿಂ ಕುಳಿರ್ವ ಬಾವಿಗಳಲ್ಲಿ ಮೃಣಾಳದಂಡಮಂ। ಡಲಿಗಳ ದಂಡತೋರಣಕದಿಂ ನವಕಾಂಚನಕೇತಕೀದಳಂ ॥ ಗಳಪರಿಡೋಣಿಯಿಂ ವಕುಳಮಾಲೆಯೊಳಾಲಿಸಿದ ಬ್ಜಿನೀದಳಾ। ವಳಿಗಳ ಮಾಲೆಗುಂಡಿಗೆಗಳಿಂ ಸಮೆದಾಡುವ ಊಟಳಂಗಳಂ ॥ ೨೦೫

ವ॥ ಅನ್ತವಂನೋಡುತ್ತಂ ಪೋಗೆ ಮತ್ತಮಲ್ಲಲ್ಲಿಗೆ ಪಳುಕಿನಬಲಾಕೆಗಳೊಳಂ ಬರೆದಸುರಶರಾಸನಂಗಳೊಳಂ ಸೊಗಯಿಸುವ ವಾರಿಧಾರೆಗಳಂ ಸುರಿಯುತಂ ನಡೆವ ಜಂತ್ರದ ಮುಗಿಲ್ಗಳುಮನಲ್ಲಲ್ಲಿಗೆ ಮುತ್ತಿನಪ್ರಡಿಯ ನುಣ್ಮಳಲ್ಗಳಾಲವಾಲಂಗಳಂಕೂಡಿದ್ರ್ದೆಡೆವಿಡದೆ ಸುರಿವತೋರವನಿಗಳಂ ದುರ್ದಿನಂಮುಸಗಿಸುವ ಪತ್ರವೃಕ್ಷಂಗಳುಮ ನಲ್ಲಲ್ಲಿಗೆ ನಾಂದೆಲಕೆಗಳಂಬಿದಿರೆ ಕೆದಱುವತುಂತುಱಿಂ ಮಂಜುಮಸಗೆ ಪಾರ್ವ ಜಂತ್ರದ ಪತ್ರಶಕುನಿಗಳುಮನಲ್ಲಲ್ಲಿಗೆ ಮಧುಕರನಿಕರಮೆಂಬ ಕಿಂಕಿಣಿಗಳ ನುಣ್ಬುರಂಗಳಂದೆಸೆವಲರುಯ್ಯಲೆಗಳುಮ ನಲ್ಲಲ್ಲಿಗೆ ತಾವರೆಯ ಕೊಡೆಯೆಲೆಗಳಂ ಮುಚ್ಚಿದ ಪಚ್ಚೆಯ ಪವಳದ ಪದ್ಮರಾಗದ ಪಳುಕಿನ ತಣ್ಗಳಸಂಗಳುಮ ನಲ್ಲಲ್ಲಿಗೆ ಕರ್ಪೂರಪಲ್ಲವರಸದಿ ನಧಿವಾಸಿಸಿದ ತಾವರೆಯ ನೂಲದುಗುಲಂಗಳುಮ ನಲ್ಲಲ್ಲಿಗೆಳವಾಳೆಯ ತಿರುಳೆಲೆಗಳೊಳಂ ತಾವರೆಯ ತಳಿರೆಲೆಗಳೊಳಂ ಪೊಸವೂಗಳೆಸಳ್ಗಳೊಳಂ ಸಮೆದಬಿಜ್ಜಣಿಗೆಗಳುಮಂ ಪೆಱವಂಪಲತೆಱದ ಶಿಶಿರೋಪಚಾರಂಗಳಂ ಮಾಳ್ಪಪರಿಜನಂಗಳುಮಂ ನೋಡುತ್ತಂ ಪೋಗೆಪೋಗೆ ॥ ೨೦೬

---

೨೦೫. ದಂಡತೋರಣಕದಿಂ—ರಾಟುವಾಳಹಾಕುವವಕ್ಕೆ ಮಾಡಿದಚೌಕಟ್ಟು; ಪರಿಡೋಣಿ—ನೀರು ಹರಿಯುವದೋಣಿ ; ಆಲಿಸಿದ—ಜೋಡಿಸಿದ ; ಮಾಲೆಗುಂಡಿಗೆ—ಮಾಲಾಕಾರವಾಗಿ ಪೋಣಿಸಿದ ಗಡಿಗೆಗಳು ; ಸಮೆದು—ಮಾಡಲ್ಪಟ್ಟು ; ಆಡುವ—ತಿರುಗುವ ; ಊಟಳಂಗಳಂ—ರಾಟವಾಳಗಳನ್ನು.

೨೦೬. ಬಲಾಕೆಗಳೊಳಂ—ಬೆಳ್ಳಕ್ಕಿಗಳಿಂದಲೂ ; ದುರ್ದಿನಂ ಮಸಗಿಸುವ—ದುರ್ದಿನವನ್ನಾಗಿ ಮಾಡುವ ; ಪತ್ರವೃಕ್ಷಂಗಳುಮಂ—ಎಲೆಯಿಂದ ಮಾಡಲ್ಪಟ್ಟ ವೃಕ್ಷಗಳನ್ನು ; ಬಿದಿರೆ—ಕೊಡಹಲು ; ಕೆದಱುವ—ಎರಚುವ ; ಪತ್ರಶಕುನಿ—ಎಲೆಯಿಂದ ಮಾಡಿದಹಕ್ಕಿ ; ತಿರುಳೆಲೆ—ಸುಳಿಯಲೆ; ಸಮೆದ—ಮಾಡಿದ ; ಬಿಜ್ಜಣಿಗೆ—ಬೀಸಣಿಗೆ ; ಪೆಱವಂ—ಮತ್ತೆ ಕೆಲವಾದ.

ವೃ॥ ಘನಸಮಯಂಗಳಿಕ್ಕೆವನೆ ಮಾಗೆಯಿರುಳ್ಗಳ ಬಿಟ್ಟಬೀಡು ಚಂ। ದನಕುಲಮಂದಿರಂ ಜಲಸಿಧೀಶನ ವಾರಿವಿಹಾರಭೂಮಿ ನಂ॥ ದನವನದೇವಿಯರ್ಕಳೆಱೆವಟ್ಟ ಹಿಮಾಲಯದಂತರಂಗ ಮೆಂ। ಬಿನೆಗ ಮಳುಂಬವೊಪ್ಪುವ ಹಿಮಾಲಯಮಂ ನಡೆನೋಡಿದಂ ನೃಪಂ॥ ೨೧೭

ಅಕ್ಕರ॥ ಉಡುಪವಿರಹ ದುಸ್ಸಹವಾಸರಂಗಳಂ ಕಳಿಪಲ್ಕೆ ಕುಮುದಿನಿಯಿರ್ಪ ತಾಣಂ। ಸಿಡಿಲಕಿಚ್ಚಿನ ಬೇಗೆಯನಾಱಿಸ ಲ್ಜಲಧರಸಂಕುಲಮಿರ್ಪ ತಾಣಂ॥ ಕಡಲಬಳಗಂ ಬಾಡಬವಹ್ನಿತಾಪಮಂ ಪರಿಹರಿಸಲ್ಕೆ ಬಂದಿರ್ಪ ತಾಣಂ। ಮೃಡನಭಾಳೇಕ್ಷಣಾನಲ ನಳುರಲ್ಕೆ ಮಗ್ಗಿಸಲ್ಮನುಮತನಿರ್ಪ ತಾಣಂ॥ ೨೧೮

ವ॥ ಎಂದುಭಾವಿಸುತ್ತಂ ಪೋಗೆವೋಗೆ ಕಡವಿನಲರ ಕೇಸರಂಗಳಂ ಪೊರೆದೆಲರ್ಗಳುಂ ಹಿಮಸ್ಪರ್ಶನದಿಂ ಕಂಟಕಿತಮಾದಂತೆಯುಂ ಎಲರಲೆಪದಿಂ ನಡುಗುವೆಲೆದುಱುಗಲಿಂ ಕದಳೀವನಂಗಳು ಮೈಕಿಲಡರ್ದು ನಡುಗಿದಪುವೆಂಬಂತೆಯುಂ ಅಲರ್ದಂಡನುಂಡು ಸೊಕ್ಕಿ ಮೊರೆವ ಮೊರೆಪದಿಂ ತುಂಬಿಗಳುಂ ಪಲ್ಪಱೆಗುಟ್ಟಿದಪುವೆಂಬಂತೆಯುಂ ಕೂಡೆಮುಸುಱುವ ಮಱಿದುಂಬಿಯು ಬಂಬಲಿಂ ಲತೆಗಳುಂ ಕರಿಯದಡ್ಡಿಯುಂ ಕವಿದಂತೆಯು ಮಾಗೆಪಿಡಿಕೈಸಲಪ್ಪ ತಂಪಿಂ ತೀವಿದಂತಾಗಿ॥ ೨೧೯

ಕಂ॥ ಮನಮಮೃತಾಂಶುಮಯಂ ಚೇ। ತನೆಬಿಸಮಯ ಮಿಂದ್ರಿಯೋತ್ಕರಂ ಕುಮುದಮಯಂ॥ ತನು ಸಾಂದ್ರಚಂದ್ರಿಕಾಮಯ। ಮೆನಿಸಿದುದು ನರೇಂದ್ರಚಂದ್ರಮಂಗಾ ಕ್ಷಣದೊಳ್॥ ೨೨೦

---

೨೧೭. ಬಿಟ್ಟಬೀಡು—ಇಳಿದುಕೊಳ್ಳುವಮನೆ; ಎಱೆವಟ್ಟ—ಧಾರಾಗೃಹ.

೨೧೮. ಕಳಿಪಲ್ಕೆ—ಕಳೆಯುವದಕ್ಕೆ; ಅಳುರಲ್ಕೆ—ಆವರಿಸಿಕೊಳ್ಳಲು; ಮಗ್ಗಿಸಲ್—ಕಡಮೆಮಾಡಿಕೊಳ್ಳುವದಕ್ಕೆ.

೨೧೯. ಕಡವಿನಲರ—ಕದಂಬಪುಷ್ಪದ; ಎಲರ್ಗಳುಂ—ಗಾಳಿಗಳೂ; ಪಲ್ಪಱೆಗುಟ್ಟಿದಪ್ಪುವು—ದಂತವಾದ್ಯವನ್ನು ಮಾಡುವವು ಅಂದರೆ ಚಳಿಯಿಂದ ಹಲ್ಲು ಒಂದಕ್ಕೊಂದುತಗಲಲು ವಾದ್ಯದಂತಾಯಿತೆಂದಭಿಪ್ರಾಯವು; ಕರಿಯದಡ್ಡಿಯುಂ—ಕರಿಯಹಚ್ಚಡವನ್ನು; ಪಿಡಿಕೈಸಲಪ್ಪ—ಹಿಡಿಯಿಂದ ಉಂಡೆಕಟ್ಟುವದಕ್ಕೆ ಆಗುವ.

೨೨೦. ಚೇತನೆ—ಬುದ್ಧಿಯು.

ಕಂ॥ ವಾರಿಮಯಂ ದಿವಸಂ ಮಣಿ । ಹಾರಮಯಂ ತಿಗ್ಮರೋಚಿಕಿ ರಣಾವಳಿ ಕ ॥ ರ್ಪೂರಮಯಂ ಪವನಂ ನೀ । ಹಾರಮಯಂ ಭುವನಮೆನಿಸಿ ತೋಱುತ್ತಾಗಳ್ ॥ ಅನ್ತುಪೊರ್ದ್ದಿ— ೨೨೧

ಕಂ॥ ಕುಳಿರ್ವ ಹಿಮಾಲಯದೊಳ್ ಕ್ಕೇ । ಮಳೆ ನಿಜಪರಿವಾರಸ ಹಿತ ಮಿರ್ದ್ದಳ್ ಹಿಮವ ॥ ತ್ತಳದೊಳ್ ತ್ತರಂಗಿಣೀಸಂ । ಕುಳದಿಂ ಬಳಸಿರ್ದ್ದ ದಿವಿಜನದಿ ಯೆಂಬಿನೆಗಂ ॥ ೨೨೨

ಪರಿವೇಷದ ತೆಱದಿಂದನ । ವರತಂ ಕರ್ಪೂರರಸದ ಪರಿಕಣಿ ಸುತ್ತಂ ॥ ಪರಿಯಲ್ ಮೃಣಾಳಪೊಸವಂ । ದರ ನಡುವಣ ಪೂವಿನೆಸಳ ಪಾಸಿನೊಳಿರ್ದ್ದಳ್ ॥ ಆಗಳ್ ॥ ೨೨೩

ಅಪರಿಮಿತಂ ಪೊಣ್ಮುವ ಬಾ । ಷ್ಪಪಯೋಧಾರಾಳಿ ಪರಿವ ಪರಿನಾಳಿಕೆಯೊಂ ॥ ದುಪಮೆಗೆ ಬಂದಿರ್ದ್ದುದು ಕ । ರ್ಣಪೂರನವಕೇತಕೀದಳಂ ಕಾಮಿನಿಯಾ ॥ ೨೨೪

ಸಂತಾಪಭೀತಿಯಿಂ ತನು । ಕಾಂತಿ ತೆರಳ್ದೋಡಿಪುದೆನೆ ಲ್ನಿಡುಸುಯ್ಯಿಂ ॥ ದಂ ತೊಲಗೆ ಮೇಲುದೆಸೆದುದು । ಕಾಂತೆಯ ಚಂದನವಿಲಿಪ್ತ ಘನ ಕುಚಯುಗಳಂ ॥ ೨೨೫

ಅರಸಂ ಬರಲೌತ್ಸುಕ್ಯದೆ । ಪರಿಯ ಲ್ಗಱಿಯಿಟ್ಟುವೆನೆಸಿ ಮಾತ್ತೊರ್ಳಗುವ ಚಾ ॥ ಮರದಿಂದ ಮೆಸೆವಕುಚವಂ । ಕರಕಮಲದಿ ನೊತ್ತಿ ಕಾಂತೆ ಕಣ್ಗೆಸೆದಿರ್ದ್ದಳ್ ॥ ೨೨೬

ವೃ॥ ಯುವತಿ ಹಿಮೋಪಲಪ್ರತಿಮೆಯಂ ನಳಿತೋಳ್ಗಳಿ ನಾಗಳಾಗಳ । ಪ್ಪುವ ಶಶಿಸಾಲಭಂಜಿಕೆಯು ನೊಯ್ದು ಕವಂಪಿನೊಳಾಗಳಾಗಳೂ ॥

---

೨೨೩. ಪರಿಕಣಿ—ಕಾಲುವೆ; ಪೊಸವಂದರ—ಹೊಸಚಪ್ಪರದ.

೨೨೪. ಪರಿನಾಳಿಕೆ—ಜಲಮಾರ್ಗ; ಪರಿನಾಳಿಕೆಯ + ಒಂದುಪಮೆಗೆ.

೨೨೬. ತಮ್ಮಲ್ಲಿ ಮಾತ್ತೊರ್ಳಗುವ ಚಾಮರದಿಂ, ಪರಿಯಲ್—ಓಡುವವಕ್ಕೆ. ಗರಿಯಿಟ್ಟವೆನಿಸಿ.

೨೨೭. ಆಗಳಾಗಳಪ್ಪುವ—ಬಾರಿಬಾರಿಗೂ ಆಲಿಂಗಿಸುವ. ಶಶಿ—ಶಶಿಕಾಂತದ;

ತ್ತುವ ಶಶಿಕಾಂತಪುತ್ರಿಕೆಯ ಮೇಲೆ ನಿಜಾಂಘ್ರಿಯ ನಾಗಳಾಗಳಿ । ಕ್ಕುವ ಪಿರಿದಪ್ಪ ಬೇವಸದೊಳಂ ತಡೆದಿರ್ದ್ದಳದೊಂದುಬೇಗಮಂ ॥ ೨೨೭

ಕಂ॥ ಸ್ಮರಪರವಶಂಗಳಾದಂ । ತಿರೆ ಮುಕ್ತಾತ್ಮಂಗಳೆನಿಸಿಯುಂ ಹಾರಂಗ ॥ ಳ್ಕರನಿಕರದಿಂದೆ ಮುಂ ತಾಂ । ಸರಸಿಜಲೋಚನೆಯ ನಾದವಪ್ಪಿದುವಾಗಳ್ ॥ ೨೨೮

ಸುಂದರಿ ನವೇಂದುಮಣಿಮುಕು । ರಂದಳೆದೊತ್ತಿರ್ದ್ದಳುರದೊಳಿನ್ನುದಯಂ ಗೆ ॥ ಯ್ವಂದೆನ್ನ ಕೊಂದೆ ನೀನೆಂ । ದಿಂದುವಿ ನೆರ್ದೆಯಂಟಿಸೂರುಳಡಿಸುವತೆಱದಿಂ ॥ ೨೨೯

ವ॥ ಅನ್ತು ಕಾದಂಬರೀದೇವಿಯುಂ ನೋಡಿದೂರದೊಳ್ ಕಂಡನನ್ನಿಗಂ ಮೂರ್ತಿನಾರಾಯಣಂ ಬಂದನೆಂದು ಪೇಳಲುತ್ತರಳತಾರಕೆಯಾಗಿ ॥ ೨೩೧

ಕಂ॥ ಬರವ ನದಾಪ್ತೆರ್ಗೇಳ್ದಟ್ಟಿದ । ರರಸಂ ಬಂದಪನೆ ಕಂಡಿರೇ ನೀವೆನಿತಂ ॥ ತರ ಮಾವೆಡೆ ಯೆನುತೆನುತಂ । ಪರಿಜನಮಂ ಕಣ್ಣಸನ್ನೆಯಿಂ ಬೆಸಗೊಂಡಳ್ ॥ ೨೩೧

ವ॥ ಅನ್ತು ಬೆಸಗೊಳುತ್ತಂ ಗೆಂಟಿನೊಳ್ ಬರುತ್ತಿರ್ದ್ದ ಯುವರಾಜನಂ ಭೋಂಕನೆ ಕಂಡು ನವಗ್ರಹಕರಿಣಿಯಂದದಿ ನೂರುಸ್ತಂಭವಿಧೃತೆಯಾಗಿ ॥ ೨೩೨

ಬೇವಸದೊಳಂ—ಬಳಲಿಕೆಯಲ್ಲಿಯೂ ; ಆದೊಂದುಬೇಗಮಂ—ಸ್ವಲ್ಪಹೊತ್ತನ್ನು.

೨೨೮. ಹಾರಂಗಳ್, ಮುಕ್ತಾತ್ಮಂಗಳೆನಿಸಿಯುಂ—ಮುಕ್ತರಸ್ವಭಾವವುಳ್ಳವುಗಳೆಂದೆನಿಸಿದಾಗ್ಯೂ ; ಮುಕ್ತಾಮಯುಗಳಾದ : ಕರ—ಕಯ್ಯಿ, ಕಿರಣ ;

೨೨೯. ಇನ್ನು, ಉದಯಂಗೆಯ್ವಂದು—ಉದಿಸುವಕಾಲದಲ್ಲಿ ; ಎನ್ನ ಕೊಂದೆ—ನನ್ನನ್ನು ಸಿಕ್ಷಿಸುವಾಗಿ ನೀನುಕೊಲ್ಲುವೆ ಆದಕಾರಣ ನೀನಿನ್ನು ಉದಯಿಸಬೇಡವೆಂದು ; ಎರ್ದೆಯಂಟಿ—ಹೃದಯವನ್ನು ಮುಟ್ಟಿಸಿ ; ಇಂದುವಿಂ, ಸೂರುಳಿಡಿಸುವತೆರದಿಂ—ಆಣೆ ಇಡಿಸುತ್ತಾಳೊ ಎಂಬಂತೆ ; ಉರದೊಳ್ ಮುಕುರಂದಳೆದೊತ್ತಿರ್ದಳ್, ಎಂದನ್ವಯವು.

೨೩೧. ಎನಿತಂತರಂ—ಎಷ್ಟುದೂರದಲ್ಲಿ ; ಆವೆಡೆ—ಯಾವಸ್ಥಳದಲ್ಲಿ ; ಎನತೆನುತಂ.

೨೩೨. ಗೆಂಟಿನೊಳ್—ದೂರದಲ್ಲಿ ; ನವಗ್ರಹಕರಿಣಿ—ಹೊಸದಾಗಿಹಿಡಿದ ಹೆಣ್ಣಾನೆ ; ಊರುಸ್ತಂಭವಿಧೃತೆ—ನಡೆಯುವದಕ್ಕಾಗದಂತೆ ಕಟ್ಟಿಕೊಂಡತೊಡೆಯುಳ್ಳವಳು.

ಕಂ॥ ನವರೋಮರಾಜಿ ತಾಮ್ರ । ತ್ರಿವಳಿಯೊಳೊಳ್ದರೆಗೊಳಲ್ಕೆ ಮುರಿದೇಳ್ವೆಡೆಯೊಳ್ ॥ ಯುವತಿ ನಿಜಾಂಗಮ ನಂಗೋ । ದ್ಭವನಾಗಳ್ಪಿಂಡಿಪಿಳಿದ ನೆಂಬವ್ವೊಲಿರ್ದ್ದಳ್ ॥ ತದನಂತರಂ ॥ ೨೩೩

ವೃ॥ ನಡುಗುತ್ತಂ ಮೇಲುದೆಂದೊಮ್ಮೊದಲೆ ತೆಗೆದು ಹಾರಾಂಶುಕಂ ಸಾಚ್ಛಾದಿತಂ ಸೋ । ಮ್ಮುರ್ಡಿಯುಂ ಸಸ್ವೇದಹಸ್ತಾಬ್ಜದಿ ನೆಳವುತ ಮಾತ್ಮಪ್ರತಿಚ್ಛಾಯೆಯುಂ ಕ ॥ ಯ್ಯುಡುಸೀನೆಂಬಂದದಿಂ ನಿರ್ಮಲತರ ಮಣಿಬದ್ಧಾವನೀ ಭಾಗಮಂ ತ । ನ್ನಡಗಯ್ಯಿಂ ಮೆಲ್ಲನೊತ್ತುತ್ತೆ ಸೆವಲರ್ವಸೆಯಿಂ ಕಾಂತೆಯೆಂತಾನುಮೆಳ್ದಳ್ ॥ ೨೩೪

ವ॥ ಆಗಳ್ಮನುಜಮಕರಧ್ವಜ ನೆಯ್ದಿವಂದು ಮುನ್ನಿನಂದದೊಳೆ ಕಾದಂಬರಿಗೆ ಮಹಾಶ್ವೇತಾಪ್ರಣಾಮ ಪುರಸ್ಸರ ಮುಪದರ್ಶಿತ ವಿನಯನುಮಾಗಿಕಯ್ಗಳಂ ಮುಗಿವುದು ಮಾಕೆಯುಂ ಕಯ್ಗಳಂ ಮುಗಿದು ಲಲಾಟಿಕಾಚಂದನಭರದಿ ನೆಲಗಿದಂತೆ ಕಿಂಚಿದವನತಮುಖಿಯಾಗಿ ॥ ೨೩೫

ವೃ॥ ನಳಿನದಳಾಯತಾಕ್ಷಿ ಯುವರಾಜನಿಜಪ್ರತಿಬಿಂಬ ಮಿಲ್ಲಿಬಂ । ದೆಳಸಿದುದಪ್ಪೊಡಂ ಸಫಲಮೆನ್ನಯ ಜೀವನವೆಂಬ ಮಾಳ್ಕೆಯಿಂ ॥ ಪೊಳೆವವತಂಸ ಪುಷ್ಪರಜದಿಂ ಪೊರೆದಿರ್ದ್ದ ಕಪೋಲಪಟ್ಟಮಂ । ತೊಳೆದ ಳನಾರತಂ ಸುರಿವ ಚಂದನಶೀತಲ ಹರ್ಷವಾರಿಯಿಂ ॥ ೨೩೬

ವ॥ ಆಗಳಾಗಂಧರ್ವ ರಾಜನಂದನೆ ಮುನ್ನಿರ್ದ್ದ ಕುಸುಮಶಯನದೊಳ್ಕುಳ್ಳಿರೆ ವಿದಗ್ಧವಿದ್ಯಾಧರಂ ದೌವಾರಿಕೆಯಕ್ಕೆಲದೊಳಿಕ್ಕಿದ ಮಣಿಮಯಾಸನಮಂ ಕಾಲೊಳ್ನೂಂಕಿ ನೆಲದೊಳ್ಕುಳ್ಳಿರ್ಪ್ಪುದುಂ ಕಾದಂಬರೀದೇವಿಗೆ ಕೇಯೂರಕಂ ಪೊಡವಟ್ಟು ॥ ೨೩೭

---

೨೩೩. ಮುರಿದೇಳ್ವೆಡೆಯೊಳ್—ತಿರುಗಿ ಏಳುವಾಗ; ನವರೋಮರಾಜಿ; ತಾಮ್ರತ್ರಿವಳಿಯೊಳ್—ಬಳ್ದರೆಗೊಳಲ್ಕೆ—ವಕ್ರವಾಗಿ ಕೆದರಿಕೊಳ್ಳಲು; ಪಿಂಡಿಪಿಳಿದಂ—ಹಿಂಡಿ ನಿಸ್ಸಾರವಮಾಡಿದನು.

೨೩೪. ಒಮ್ಮೊದಲೆ—ಥಟ್ಟನೆ; ಎಳವುತಂ—ಸವರಿ ಸರಿಮಾಡುತ್ತ; ಅಲರ್ವಸೆ—ಪುಷ್ಪಶಯ್ಯೆ.

೨೩೬. ಯುವರಾಜ ನಿಜಪ್ರತಿಬಿಂಬಂ, ಇಲ್ಲಿ—ಕಪೋಲದಲ್ಲಿ; ಬಂದೆಳಸಿದುದಪ್ಪೊಡಂ—ಬಂದು ನಿಂತಾಗ್ಯೂ, ಎನ್ನಯಜೀವನು ಸಫಲಂ.

ಕಂ॥ ವಸುಧಾಧೀಶನ ಪರಮ । ಪ್ರಸಾದಭಾಗಿನಿಯ ಪಡಪವಳತಿ ಯ ಪವಧಾ ॥ ರಿಸು ಪತ್ರಲೇಖೆಯೆಂಬುದು । ಪೆಸರಿಂದಾಸತಿಯ ನರಸಿಯುಂ ಕಾಣಿಸಿದಂ ॥ ಅನ್ತಾಪತ್ರಲೇಖೆ ಯಂನೋಡಿ— ೨೩೮

ಕಂ॥ ಎನಿತೊಂದು ಪಕ್ಷಪಾತಮೊ । ವನಿತೆಯುರಂ ಮಾಡುವೆಡೆಯೊಳಬ್ಜಭವಂಗೆಂ ॥ ದೆನಸುಂ ಕಾಂತೆಯ ರೂಪನೆ । ಮನದೊಳ್ಗಂಧರ್ವಕನ್ನೆ ಭಾವಿಸುತಿರ್ದ್ದಳ್ ॥ ೨೩೯

ವೃ॥ ತನಗಾಗಳ್ಪೊಡವಟ್ಟಳಂ ಪದಪಿನಿಂ ಪೊಣ್ಮುತ್ತಬಾ ಯಿತ್ತಬಾ । ಯೆನುತಂ ತನ್ನಕೆಲಕ್ಕೆ ಕಾಂತೆ ಕರೆದಾದಂ ಭ್ರಾಂತಿಯಿಂದಂ ಸಖೀ ॥ ಜನಮೆಲ್ಲಂ ನಡೆನೋಡೆ ಪಿಂತಿರಿಸಿ ಕೊಂಡಾ ಗಳ್ಮುದಲ್ಗೊಂಡಲಂ । ಪಿನೊಳಾಕಾಂತೆಯ ಮೆಯ್ಯನೊಯ್ಯನೆ ಳವುತ್ತಿರ್ದ್ದಳ್ಕರಾಂಭೋಜದಿಂ ॥ ೨೪೦

ವ॥ ಆಗಳ್ಯುವರಾಜಂ ಕೃತಸಕಲಾಗಮನೋಚಿತೋಪಚಾರನಾಗಿ ತದವಸ್ಥೆಯುಪ್ಪ ಚಿತ್ರರಥನಂದನೆಯುಂ ನೋಡಿ ॥ ೨೪೧

ಕಂ॥ ಇಂತಪ್ಪ ವಸ್ಥೆಯಿಂದಿ ವ । ಳಿಂತಿರೆಯುಂ ದುರ್ವಿದಗ್ಧ ವೆನ್ನ ಮನಂ ಮ ॥ ತ್ತೆಂತುಂ ನಂಬಿದುದಿಲ್ಲಾ । ನಿಂ ತಿಳಿವೆಂ ನಿಪುಣವಚನದಿಂ ಕಾಮಿನಿಯುಂ ॥ ೨೪೨

ವ॥ ಎಂದು ತನ್ನ ಮನದೊಳೆ ಬಗೆದು ವಾಗ್ವಿಲಾಸಿನೀವಲ್ಲಭಂ ವಿದಗ್ಧವಿದ್ಯಾಧರಂ ಗಂಧರ್ವರಾಜನಂದನೆಯ ನಿಂತೆಂದಂ ॥ ೨೪೩

ಕಂ॥ ಪರಿತಾಪ ಮಾವತೆಱದಿಂ । ದೊರೆಕೊಂಡುದೊ ದೇವಿ ನಿನಗೆ ನೋವಿದು ನಿನ್ನಿಂ ॥ ಪಿರಿದೆನ್ನದದಱ ನೆಂತುಂ । ಸರೋಜಮುಖಿ ನಿನ್ನ ಸುಖಮನಾಂ ಬಯಸಿದಪೆಂ ॥ ೨೪೪

---

೨೪೨. ದುರ್ವಿದಗ್ಧಂ—ಮೂಢವಾದ; ಎನ್ನಮನಂ, ಎಂತುಂ ನಂಬಿದುದಿಲ್ಲ—ಸರ್ವಥಾನಂಬಿಲ್ಲ; ಆಂ—ನಾನು; ಇನ್—ಇನ್ನುಮೇಲೆ; ನಿಪುಣವಚನದಿಂ—ನಿಪುಣಾಲಾಪಗಳಿಂದ; ಕಾಮಿನಿಯುಂ—ಕಾಮಿನಿಯ ಅಭಿಪ್ರಾಯವನ್ನು.

೨೪೪. ಎನ್ನದು—ನನ್ನ ಸಂಬಂಧಿಯಾದ; ಇದುನೋವು—ಈ ವ್ಯಥೆಯು; ಅಥವಾ ನಿನಗೆ ಉಂಟಾದರೀತಿಯಲ್ಲಿ ಉಂಟಾದ ಈ ಮನ್ಮಥವ್ಯಥೆಯು; ನಿನ್ನಿಂಪಿರಿದು;—ನಿನ್ನ ವ್ಯಥೆಗಿಂತಲೂ ಹೆಚ್ಚಾದದ್ದು; ನಿನ್ನಸುಖಮಂ—ನೀನು ಸುಖವಾಗಿರುವದನ್ನು; ನಿನ್ನ ಸಂಪರ್ಕ ಸೌಖ್ಯವನ್ನು.

ಎನಿತಂಗಜಾತ ತಾಪವೊ । ತನುಕಂಪಿಸು ತಲರಮೇಲೆ ಬೀಳ್ದ್ದಿದಂ ಕಂ॥ ಡನುಕಂಪಮಾನ ಮೆನ್ನುಯು । ತನುವುಂ ಬೀಳಲ್ಕೆ ಬಗೆದಪುದು ಮೃಗನಯನೇ ॥ ೧೪೫

ವ। ಅದಲ್ಲದೆಯುಂ ದೇವಿ ಭವದವಸ್ಥೆಯುಂ ಕಂಡೀ ಪರಿಜನಂ ಮಱುಗುತ್ತಿರ್ದಪ್ಪುದದುಕಾರಣದಿಂ ॥ ೧೪೬

ಕಂ॥ ಲಲಿತಾಂಗಿ ನೀಂಪಿವಾಪೋ । ಜ್ಜ್ವಲವೆನಿಸಿದ ಮಂಗಳ ಪ್ರಸಾಧನ ಚಯಮಂ ॥ ತಳೆ ಕುಸುಮಶಿಲೀಮುಖಮಂ । ತಳೆದೊಡೆನವಲತಿಕೆ ಪಿರಿದುಮೊಪ್ಪುವುದಲ್ತೇ ॥ ೧೪೭

ವ॥ ಎಂದು ನುಡಿಯೆ ಕಾದಂಬರೀದೇವಿ ಬಾಲ್ಯದಿಂ ಸ್ವಭಾವಮುಗ್ಧೆಯಾಗಿಯುಂ ಮನ್ಮಥೋಪದಿಷ್ಟ ಪ್ರಜ್ಞೆಯಿಂ ರಾಜಸರ್ವಜ್ಞನವ್ಯಕ್ತವ್ಯಾಹಾರಸೂಚಿತಮಪ್ಪರ್ಥಮಂ ಮನದೊಳಱಿದಿನಿವಿರಿದು ಮನೋರಥ ಮಸಂಭಾವ್ಯಮೆಂದು ಭಾವಿಸುತ್ತಂ ಶಾಲೀನತೆಯು ನವಲಂಬಿಸಿ ನುಡಿಯಲಱಿಯದೆ ॥ ೧೪೮

ಕಂ॥ ಸುದತಿ ಪೆಱತೊಂದು ನೆವದಿಂ । ಕೆದಱಿದ ಳೊಂದಿನಿಸು ಮಂದಹಾಸವ್ಯುತಿಯಂ ॥ ವದನಾಬ್ಜ ಪರಿಮಳಾಗತ । ಮದಾಳಿ ಪಟಲಾಂಧಕಾರಮಂ ಬೆದಱಿಸಪ್ಪೋಲ್ ॥ ೧೪೯

ವ॥ ಆಗಳಾಕಾದಂಬರೀ ದೇವಿಯು ಕೆಳದಿ ಮದಲೇಖೆಯೆಂಬಳ್ ಮೂರ್ತಿನಾರಾಯಣನ ಮೊಗಮಂ ನೋಡಿ ॥ ೧೫೦

ವೃ॥ ಇದನೇನೆಂದಪು ದಿಂತುಟೆಂದುಸಿರಲಾಗ್ಗ್ರಂ ಬಾರದೀತಾಪದೊಂ । ದೊದವಿಂತೀಸುಕುಮಾರಭಾವಯುತೆಗಾದಂ ತಾಪಮಂ ಮಾಡದಾ॥

---

೧೪೫. ಅನುಕಂಪಮಾನಂ—ಅನುಸರಿಸಿನಡುಗುವ, ದಯಾವಿಷ್ಟವಾದ; ಬೀಳಲ್ಕೆ—ಸಂತಾಪಾತಿಶಯದಿಂದ ಕುಸುಮಶಯನದಲ್ಲಿ ಮಲಗುವದಕ್ಕೆ.

೧೪೮. ಅವ್ಯಕ್ತವ್ಯಾಹಾರ—ಅಸ್ಪಷ್ಟೋಕ್ತಿ; ಶಾಲೀನತೆಯಂ—ಅಧೈರ್ಯವನ್ನು;

೧೫೦. ಈ ತಾಪದ, ಒಂದೊದವು—ಒಂದು ಅತಿಶಯವು; ಇಂತುಟೆಂದು—ಇಷ್ಟೇಸರಿಯೆಂದು; ಅಗ್ಗ್ರಂ; ಉಸಿರಲ್‌ಬಾರದು—ಹೇಳುವದಕ್ಕೆ ಅಸಾಧ್ಯವು; ಇಂತೀಸುಕುಮಾರಭಾವಯುತೆಗೆ—ಹೀಗೆ ಸುಕುಮಾರಿಯಾದ ಇವಳಿಗೆ; ಆವುದು ತಾಪವಂ ಮಾಡದು

ವುದು ಪೇಳಿಂತುಟಿದಲ್ ಮೃಣಾಳನಿಗೆ ತೀವ್ರಾಗ್ನಿಸ್ವರೂಪಂಗಳಾ । ಗದೆ ಮಹೋಣ್ಣಿರ್ದವೆ ಚಂದ್ರಿಕಾ ಪ್ರಸರಮುಂ ನೀಹಾರ ವಿಸ್ತಾರಮುಂ ॥ ೨೫೧

ಕಂ॥ ನೀರೇಜ ತಾಳವೃಂತ ಸ । ಮೀರಾದಿಗಳಿಂದೆ ತಾಪ ಮೊದವಿ ದಪುದು ನೋ ॥ ಡೀರಮಣಿಗೆ ಧೀರತ್ವದ । ನಾರತಸಂಗತಿ ಯದೊಂದೆ ಜೀವಾಧಾರಂ ॥ ೨೫೨

ವ॥ ಎಂದು ಕಾದಂಬರೀಹೃದಯಗತ ಮುಪ್ಪ್ವದನೇ ಮದಲೇಖೆ ನುಡಿಯೆ ತನ್ನನುಡಿಗಳ್ಗೆ ಪ್ರತ್ಯುತ್ತರದಂತೇತೆಱದೊಳ್ ಮೀನುಡಿ ಘಟಿಯಿಸುವುದೆಂದು ಸಂದೇಹ ಡೋಲಾಧಿರೂಢ ಚಿತ್ತನಾಗಿ ಮಹಾಶ್ವೇತೆವೆರಸು ಪ್ರೀತ್ಯುಪಚಯಚತುರಂಗಳಪ್ಪ ವಚನಂಗಳಂ ನುಡಿಯುತ್ತಂ ಪಿರಿದುಬೇಗಮಿರ್ದು ಗಂಧರ್ವರಾಜನಂದನೆಯಿಂ ತನ್ನನೆಂತಾನುಂ ಬಿಡಿಸಿ ಬೀಳ್ಕೊಂಡು ನಿಜಸ್ಕಂಧಾವಾರಕ್ಕೆ ಪೋಗಲೆಂದು ತದೀಯಭವನಮುಂ ಪೊಱಮಟ್ಟಂದಾಯುಧದ ಬೆಂಗೆವಂದಾಗಳ್ ಕೇಯೂರಕಂ ದೇವ ಪತ್ರಲೇಖೆಯುಂ ಕೆಲವುದಿನಕ್ಕೆ ಕಳುಪಿದಪೆ ವಿರಿಸುವುದೆಂದು ಪ್ರಥಮದರ್ಶನಜನಿತ ಪ್ರೀತಿಯಪ್ಪ ಕಾದಂಬರೀದೇವಿಯ ಬೆಸದಿಂ ಮದಲೇಖೆ ಬಿನ್ನಪಂಗೆಯ್ದಟ್ಟಿದಳೆಂಬುದುಂ ಮನುಜ ಮಕರಧ್ವಜನಿಂತೆಂದಂ ॥ ೨೫೩

ಕಂ॥ ಆರೊಪಡೆದಪ ರಿದಂ ಕೇ । ಯೂರಕದೇವೀಪ್ರಸಾದಮಂಥ ನ್ಯೈಯಿವ ॥ ಳ್ಸಾರಿರ್ದಪಳ್ಗಡಿಂತೀ । ಕಾರುಣ್ಯಪದಕ್ಕೆ ಪತ್ರಲೇಖೆಯೆ ನೋಂತಳ್ ॥ ೨೫೪

ದು—ಯಾವದುತಾನೇ ತಾಪವನುಂಟುಮಾಡಲಾರದು; ಪೇಳ್—ಹೇಳು; ಇಂತುಟಿದಲ್—ಹೀಗೆಯೇಸರಿ.

೨೫೨. ಧೀರತ್ವದ—ಧೈರ್ಯದ; ಅನಾರತಸಂಗತಿ—ಎಡೆಬಿಡದಸಂಬಂಧವು; ಧೀರ—ಎಲೈಧೀರನೆ; ತ್ವತ್—ನಿನ್ನ; ಅನಾರತಸಂಗತಿ—ಎಡೆಬಿಡದಸಂಬಂಧವು; ಒಂದೆ—ಮುಖ್ಯವಾಗಿ; ಜೀವಾಧಾರಂ—ಈಕೆಯ ಪ್ರಾಣಾಧಾರವು.

೨೫೩ ತನ್ನನುಡಿಗಳ್ಗೆ, ಏತೆಱದೊಳಂ—ಯಾವರೀತಿಯಿಂದಲೂ, ಪ್ರತ್ಯುತ್ತರದಂತೆ ಘಟಿಯಿಸುವುದು ಅಂದರೆ ಈಕೆಯಮಾತು ನನ್ನ ಉಪಚಾರೋಕ್ತಿಗಳಿಗೂ, ಈಕೆಯನ್ನು ನಾನು ಮದುವೆಯಾಗಬೇಕೆಂಬ ಮನೋಭಿಲಾಷೆಗೂ ಪ್ರತ್ಯುತ್ತರವಾಗಿದೆ ಎಂದಭಿಪ್ರಾಯವು.

ವ ॥ ಎಂದು ಪತ್ರಲೇಖೆಯನಿರಲ್ವೇಳ್ದು ನಡೆಗೊಂಡು ನಿಜಸ್ಕಂಧಾವಾರಮಂ ಪುಗುವಾಗಳ್ ॥

ವೃ ॥ ಚರನುಜ್ಜೈನಿಯಿ ನೆಯ್ತಂದನಾಗಳ್ ಬರಲ್ಕಾಣುತ್ತ ಮೌತ್ಸುಕ್ಯದಿಂ । ಪರಿವಾರಂ ಬೆರಸೆಮ್ಮ ತಂದೆಯುಂ ಮಶೇಷಾಂತಃಪುರಸ್ತ್ರೀಜನಂ ॥ ಬೆರಸೆಮ್ಮಬ್ಬೆಯುಂ ಮಿರ್ದ್ದರೇಸುಖದಿ ನೆಂದಾವಿರ್ಭವತ್ಪ್ರೀತಿನಿ । ರ್ಭರ ವಿಸ್ತಾರಿತ ನೇತ್ರನಂದು ಬೆಸಗೊಂಡಂ ಚಂದ್ರಚೂಡಾಹ್ವಯಂ ॥

ವ ॥ ಅಂತು ಬೆಸಗೊಳ್ವುದು ಮಾಲೇಖವಾಹಕಂ ಪೊಡವಡುತ್ತ ಮಿಯ್ದೆವೆಂದು ದೇವಬ್ಬೆರಸಿದಂದದೊಳೆಲ್ಲರುಂ ಸುಖದಿನಿರ್ದ್ದರೆಂದು ಬಿನ್ನವಿಸಿ ನಿಮ್ಮತಂದೆಯರಟ್ಟಿದ ರಾಜಾದೇಶಮಿದೆಂದು ಲೇಖನದ್ವಿತಯಮಂ ನೀಡೆ ॥

ಕಂ॥ ಯುವರಾಜನೃಪಂ ನಯವಿನ । ಯ ವಿನೂತಂ ತಲೆಯೊಳಾಂತು ಕಯ್ಕೊಂಡು ಮಹೋ ॥ ತ್ಸವದಿಂದಂ ರಾಜಾ ದೇ । ಶವ ನಾಗಳ್ಬಿಚ್ಚಿ ನೋಡಿ ತಾಂಬಾಚಿಸಿದಂ ॥ ಅದೆಂತೆನೆ.— ೨೫೩

ಸ್ವಸ್ತಿ॥ ಸಕಲರಾಜ ಶಿಖಂಡಶೇಖರಾರ್ಚಿತ ಚರಣಾರವಿಂದನುಂ ಪರಮ ಮಾಹೇಶ್ವರನುಂ ಮಹಾರಾಜಾಧಿರಾಜನು ಮೆನಿಸಿದ ಶ್ರೀಮತ್ತಾರಾಪೀಡದೇವಂ ಸಕಲಗುಣಸಂಪದಾಯತನನಪ್ಪ ಯುವರಾಜನಂ ಪರಮಾಶೀರ್ವಚನ ಪುರಸ್ಸರಂ ಕಾರ್ಯಮಂ ಬೆಸಸಿಪ್ಪಂ ॥ ೨೫೪

ವೃ॥ ಪ್ರಜೆಯೆಲ್ಲಂ ಕ್ಷೇಮದಿಂದಿರ್ದ್ದದು ಕುಶಲದಿನಿರ್ದ್ದಪ್ಪೆ ಮಾಮಾದೊಡಂದಿ । ಗ್ವಿಜಯಂಗೆಯ್ಯಲ್ಕೆ ಪೋದಂ ಪಲವುದಿವಸ ಮಾಪತ್ತು ಕಾಣಲ್ಕೆವೇಳ್ಕುಂ ॥ ವಿಜಯಾಲಂಕಾರನಂ ಪುತ್ರನನೆನುತೆ ಮಹೋತ್ಕಂಠೆಯಿಂ ತನ್ನಮಾತೃ । ವ್ರಜಮಿರ್ದ್ದತ್ತೋಲೆಯಂ ಬಾಚಿಸುವುದುತಡ ಮೇಳ್ತಂದು ತಾಂಕಾಣ್ಬುದೆಮ್ಮಂ ॥ ೨೫೫

ವ ॥ ಎಂದು ಬಾಚಿಸಿ ಕುದುರೆಯ ನೇರಿರ್ದ್ದಂದದೊಳ್ ಪ್ರಯಾಣಭೇರಿಯಂ ಪೊಯ಼್ಿಸಿ ॥

---

೨೫೪. ಶಿಖಂಡಶೇಖರ—ಚಂಡಿಕೆಯತುದಿ.

೨೫೫. ಬಾಚಿಸುವುದುತಡಂ—ಓದುವದುತಡ ಅಂದರೆ ಓದಿದಕೂಡಲೆ.

ಕಂ॥ ಮುಂದಿರ್ಪ್ಪ ಮೇಘನಾದನ । ನೆಂದಂ ನೀಸಿರ್ದ್ದ ಪತ್ರಲೇ
ಖಾಂಗನೆಯುಂ ॥ ಮುಂದಿಟ್ಟು ಬಳಿಕೆಬರ್ಪ್ಪುದು । ತಂದಪನಿಲ್ಲಿವರ ಮಾಕೆ
ಯುಂಕೇಯೂರಂ ॥ ೨೬೦

ವ॥ ಕೇಯೂರಂಗೆ ನೀನಿಂತು ಪೇಳ್ವುದು.—

ವೃ॥ ನೆನೆಯದೆ ತವ್ಮವತ್ಸಲತೆಯುಂ ಪರಿಭಾವಿಸದೊಳ್ಪ ನಳ್ಕರಂ।
ಮನದೊಳಣಂ ವಿಚಾರಿಸದೆ ನಿಸ್ಸ್ಪೃಹತಾತ್ಮಕನೆಂಬಳೀಕ ಭ॥ಕ್ತನುಮು
ಪಚಾರಶೀಲನು ಮೆನಿಪ್ಪೆನೆಗಂ ನುಡಿಯೊಂದು ಮಾಟಪ್ರೊಂ। ದೆನಿಸಿದ ಮಾನ
ವಂಗೆನಗೆದೇವಿ ಹಸಾದಮನೇಕೆ ಮಾಡಿದಳ್ ॥ ೨೬೧

ಅದಲ್ಲದೆಯುಂ.—

ವೃ॥ ಎಸಸುಂ ಕೈವಾರದಿಂದಿಲ್ಲದಗುಣಗಣಮುಂ ರಾಗದಿಂ ಕೆಂಮನೀ
ಪಾಂ। ಥನೊಳಧ್ಯಾರೋಪಣಂಗೆಯ್ದು ನಗನವರತಂ ಬಣ್ಣಿಸುತ್ತಿರ್ದ್ದಳೀ
ಮ॥ ರ್ತ್ಯನೊಳಾಪ್ರೌಳ್ಪೆನ್ತ್ಪಡೆಂತೀತೆರನುಮರಿದೆನುತ್ತಂ ಮಹಾಶ್ವೇತೆಯುಂ

---

೨೬೦. ಮುಂದಿಟ್ಟು—ಮುಂದುಗಡೆಯಲ್ಲಿ ಬಿಟ್ಟುಕೊಂಡು ಅಂದರೆ ಜೆಂಗಾವ
ಲಾಗಿದ್ದು, ಎಂದಭಿಪ್ರಾಯವು; ಇಲ್ಲಿವರಂ—ಈ ಸ್ಥಳದವರಿಗೆ.

೨೬೧. ತವ್ಮವತ್ಸಲತೆಯುಂ—ದೇವಿಯಾದ ಕಾದಂಬರಿಯ ವಾತ್ಸಲ್ಯವನ್ನು;
ನೆನೆಯದೆ, ಒಳ್ಪಂ—ಸೌಜನ್ಯವನ್ನು; ಪರಿಭಾವಿಸದೆ—ಯೋಚಿಸದೆ; ಅಳ್ಕರಿಂ—
ಪ್ರೀತಿಯನ್ನು; ಮನದೊಳ್, ಅಣಂವಿಚಾರಿಸದೆ—ಮನಸ್ಸಿನಲ್ಲಿ ಸ್ವಲ್ಪವೂ ವಿಚಾರಮಾ
ಡದೆ; ನಿಸ್ಸ್ಪೃಹತಾತ್ಮಕಂ—ದಾಕ್ಷಿಣ್ಯಶೂನ್ಯನು: ಎಂಬ—ಎನ್ನಿಸಿಕೊಳ್ಳುವ; ಮತ್ತು
ಅಳೀಕಭಕ್ತನುಂ—ಕಪಟಭಕ್ತನೂ; ಉಪಚಾರಶೀಲನೂ—ಕಪಟೋಪಚಾರ ಸ್ವಭಾವ
ವುಳ್ಳವನೂ; ಎನಿಪ್ಪೆನೆಗಂ—ಎನ್ನಿಸಿಕೊಳ್ಳುವವನಾಗುತ್ತಿರಲು; ನುಡಿಯೊಂದು ಮಾ
ಟಪ್ರೊಂದೆನಿಸಿದ—ನುಡಿದಂತೆ ನಡೆಯದವನೆನಿಸಿದ; ಮಾನವಂಗೆ—ಮನುಷ್ಯನಾದ;
ಎನಗೆ—ನನಗೆ; ದೇವಿ—ಕಾದಂಬರಿಯು; ಏಕೆ—ಯಾಕೆ; ಹಸಾದಮುಂ—ಅನುಗ್ರ
ಹವನ್ನು; ಮಾಡಿದಳ್—ಪ್ರಕಟಿಸಿದಳು.

೨೬೨. ಎಸಸುಂ—ಬಹಳವಾಗಿ; ಕೈವಾರದಿಂದೆ—ಸ್ತೋತ್ರದಿಂದ; ಎನಗೆ—
ಕಾದಂಬರಿಯಾದ ನನಗೆ; ಬಣ್ಣಿಸುತ್ತಿರ್ದ್ದಳ್—ಮಹಾಶ್ವೇತೆಯು ವರ್ಣಿಸಿ ಹೇಳುತ್ತಿ
ದ್ದಳು; ಆ ಪ್ರೌಳ್ಪೆನ್ತ್ಪಡೆ—ಆ ಪ್ರೌಢತನವಾದರೊ; ಈ ಮರ್ತ್ಯನೊಳೆಂತು—ಈ ಮ
ನುಷ್ಯನಲ್ಲಿ ಎಲ್ಲಿಬಂತು? ಈತೆಱನುಂ ಅರಿದು—ಈರೀತಿಯೂ ಆಶ್ಚರ್ಯಕರವಾದದ್ದು;

ತಾಂ । ಮನದೊಳ್ಮೇಣ್ಮಾತಿನೊಳ್ಮೇಣರಿಗು ಮಱಸಿಯೆಂದಾಂ ಕರಂನಾಣ್ಚಿ
ದಪ್ಪೆಂ ॥ ೨೬೨

ಕಂ ॥ ಜನಕಾಜ್ಞೆ ವಿಾರಲಂಗವೆ । ತನುವಿಂತವರೊಡವೆಯಾಗಿ
ಸಲ್ಗೆಮ ಗಂಧ ॥ ರ್ವನಿವಾಸ ಕ್ಕನುವಿಸುವೀ । ಮನವಪ್ಪೊಡೆ ತನಗೆ
ಮಾರುವೋ *[ದತ್ತೀಗಳ್] ॥ ೨೬೩

ವ ॥ ಎಂದಿವುವೊದಲಾಗಿ ಪಲವುಮಂ ಗಂಧರ್ವರಾಜನಂದನೆಗೆ ಕೇ
ಯೂರಕನಿಂ ಬಿನ್ನವಿಸಲ್ವೇಳ್ಕುಮೆಂದು ಮೇಘನಾದಂಗೆ ಪೇಳ್ದು ಕೆಲದೊಳ
ರ್ದ್ದ ವೈಶಂಪಾಯನಂಗಂ ಕಟಕಮುಂ ಸಂವರಿಸಿಕೊಂಡು ಬಪ್ಪುದೆಂದು
ಮೊಪ್ಪಿಸಿ ॥ ೨೬೪

* ವೃ॥ [ಖುರನಿರ್ಭಿನ್ನಮಹೀತಲಂ ಗಮನಹೇಲಾ ಹರ್ಷಹೇಷಾರವಂ।
ಸ್ಫುರಿತಾಂತಧ್ವಜ ವಾತ್ತಕುಂತಲತಿಕಂ ಸಂವಾಹವಾಜಿವ್ರಜಂ ॥ ಬರೆತಾನೇ
ರಿದ ದಿವ್ಯವಾಜಿಗಿನಿಸುಂ ಪಕ್ಕಾಗಿ ಕಾದಂಬರೀ] ವಿರಹೋತ್ಕಂಠಿತಚಿತ್ತನಂದು
ತಳರ್ದಂ ವೈರೀಭಕಂಠೀರವಂ ॥ ೨೬೫

ಎಂದು, ಅರಸಿತಾಂ—ಕಾದಂಬರಿಯು; ಮನದೊಳ್, ಮೇಣ್, ಮಾತಿನೊಳ್ಮೇಣ್, ಅರಿಗುಂ—ಮನಸ್ಸಿನಿಂದಲೂ ಮಾತಿನಿಂದಲೂ ಕತ್ತರಿಸುವಳು, ಅಂದರೆ ಮಹಾಶ್ವೇತೆಯನ್ನು ಹಂಗಿಸುವಳೆಂದಭಿಪ್ರಾಯವು.

೨೬೩. ವಿಾರಲಂಗವೆ—ವಿಾರತಕ್ಕದ್ದೀರೀತಿಯೆ? ತನುವು, ಇಂತು, ಅವರೊಡವೆಯಾಗಿ—ಆ ತಾಯಿತಂದೆಗಳವಸ್ತುವಾಗಿ; ಸಲ್ಗೆಮ—ಇದ್ದುಕೊಳಲಿ; ಗಂಧರ್ವನಿವಾಸಕ್ಕೆ, ಅನುವಿಸುವ—ಅಪೇಕ್ಷಿಸುವ; ಈ ಮನವಪ್ಪೊಡೆ, ತನಗೆ—ಕಾದಂಬರಿಗೆ; ಈಗಳ್, ಮಾಱುವೋದತ್ತು—ವಿಕ್ರೀತವಾಯಿತು, ಅಂದರೆ ಮನಸ್ಸು ಕಾದಂಬರಿಯಲ್ಲೇ ಇರುವದೆಂದಭಿಪ್ರಾಯವು.

೨೬೫. ನಿರ್ಭಿನ್ನ—ಭೇದಿಸಲ್ಪಟ್ಟ; ಸ್ಫುರಿತ—ಚಲಿಸುವ; ಅಂತಧ್ವಜಂ—ಮುಂಭಾಗದ ಧ್ವಜವುಳ್ಳ; ಸಂವಾಹವಾಜಿ—ಏರುವಕುದರೆ; ಪಕ್ಕಾಗಿ—ಆಶ್ರಯವಾಗಿ ಅಂದರೆ ಜೊತೆಯಾಗಿ; ಬರೆ—ಬರಲು.

*[ಖುರಮಭಿನ್ನಮಹೀತಳಂ ಗಮನಹೇಷಾಹರ್ಷ ಹೇಷಾರವ್ರೇ। ಸ್ಫುರಿತಾಂತಧ್ವಜವಾನ್ತಕುಂತಲತಿಕಾ ಸಂವಾಹ ವಾಜಿಬ್ರಜಂ ॥ ಬರೆತಂದೇಱಿದ ದಿವ್ಯವಾಜಿಗಿನಿಸುಂ ಪಕ್ಕಾಗೆ ಕಾದಂಬರೀ ।]

*[ವೋಯ್ತೆಂದೀಗಳ್]

ವ॥ ಅನ್ತುತಳರ್ದುನಡೆಗೊಂಡು ಮೊದಲೊಳ್ ಮಿಳಿಸುತ್ತಿಂಗಗ್ಗಳಮಾಗಿ ಕಡುಗೊರ್ಬ್ಬಿಂಬಳೆದ ಪೆರ್ಮ್ಮರಂಗಳ ತಿಂತ್ರಿಣಿಯೊಳಂ ಕಾಡಾನೆಗಳೊತ್ತಿ ಕೀಳ್ತ್ತಡೆಗೆಡೆದ ಮರಂಗಳಿಂ ಕೊಂಕುವೆತ್ತ ಬಟ್ಟೆಗಳೊಳಂ ಪೆರ್ಮ್ಮರಂಗಳ ಮೊದಲೊಳ್ ಕಂಡರಿಸಿದ ಚಂಡಿಕಾಪ್ರತಿಮೆಗಳೊಳ ಮತಿವಿಸ್ಮಯಕರವಾಗಿ ತಡಿವಿಡಿದು ಮುಂದೈಸಿನಿಂದ ಕರಂಜದ ಪೂಗೊಂಚಲುಗಳುಮಂ ಬಟ್ಟೆವೋಪರ್ಬ್ಬಳಲ್ಕೆಗಳೆದುದನರಿಪುವ ಬಾಡುಂದಳಿರ ಪಾಸಿಕೆಗಳುಮಂ ಪಲವುಂಬಣ್ಣದೆಲೆಗೊಳೆಯುಸೀರ್ಗ್ಗಳುಮ ನಪ್ಪುಕೆಯ್ದು ನಿಡುಮರದ ತುದಿಗೋಡುಗಳೊಳ್ಕಟ್ಟಿದ ತೃಣಪುಲೀಚಿಹ್ನಂಗಳಿ ನರಿಯಲಾದ ಕಾಡಪಳವಾವಿಗೆಗಳೊಳಂ ಬಿಡದೆ ಬಂಡನುಗುಳ್ವಲರ್ದುರುಗಲಿಂ ಮುಂದೈಸಿದ ಸಿಂದುವಾರ ವನರಾಜಿಯಿಂ ನಸುಬೆಳರ್ತ್ತತಡಿಗಳುಮಂ ಮರದತುದಿಗೋಡುಗಳೊಳುಲಿವ ಪಕ್ಕಿಗಳುಮಂ ಲತೆಯ ಪೊದಱಪುದುವಿಂ ಪೆಣೆದ ಮಣಲ್ದಾಣಂಗಳುಮಂ ಪಥಿಕರರಲ್ಗೊಂಡು ತೋಡಿದ ಉಂಬುನೀರ ಬಗರಗೆಗಳುಮ ಸೊಳಕೆಯ್ದು ಬತ್ತಿದಪಳ್ಳಂಗಳೊಳ ಮತಿರೌದ್ರವಾದ ಪೇರಡವಿಯೊಳಗೆ ಬರ್ಪ್ಪಾಗಳ್ ॥ ೨೬೬

ಕಂ॥ ದೆಸೆದೆಸೆಯೊಳ್ ಪಸರಿಸುತಿರೆ । ಪೊಸತೊಂಡೆಯ ಪಣ್ಣಬಂ
ಣಮುಂ ಮಸುಳಿಪ ಕೆಂ ॥ ಬಿಸಿಲ ಮಿಸುಪಿನಿಸು ಪಡುವಣ । ದೆಸೆಗವಲಂಬಿ
ಸಲೊಡರ್ಬ್ಬಿದ ತ್ತಿನಬಿಂಬಂ ॥ ೨೬೭

---

೨೬೬. ಮೊದಲೊಳ್—ಬುಡದಲ್ಲಿ; ಮಿಳಿಸುತ್ತಿಂಗಗ್ಗಳವಾಗಿ—ಚರ್ಮದಿಂದ ಮಾಡಿದ ಹಗ್ಗದ ಅಳತೆಗೆ ಹೆಚ್ಚಾಗಿ; ಅಡೆಗೆಡೆದ—ಅಡ್ಡಲಾಗಿಬಿದ್ದ; ಕೊಂಕುವೆತ್ತ—ಡೊಂಕಾದ; ಕಂಡರಿಸಿದ—ಕೆತ್ತಿದ; ಕರಂಜದ—ಹೊಂಗೆಯ; ಬಟ್ಟೆಯೊಳ್ + ಪೋಪರ್ = ಬಟ್ಟೆವೋಪರ್—ಮಾರ್ಗಸ್ಥರು; ಬಾಡುಂದಳಿರ—ಬಾಡಿದ ಚಿಗುರಿನ; ಪಾಸಿಕೆ—ಹಾಸಿಗೆ; ಎಲೆಗೊಳೆಯುಸೀರ್ಗ್ಗಳುಮಂ—ಎಲೆಗಳಿಂದ ಕೊಳೆತನೀರುಗಳನ್ನು; ತೃಣಪುಲೀ—ಹುಲ್ಲಿನಕಂತೆ; ಪಳವಾವಿಗೆಗಳೊಳಂ—ಹಳೇಬಾವಿಗಳಿಂದಲೂ; ಪೊದಱಪುದುವಿಂ—ಪೊದೆಗಳಗುಂಪಿನಿಂದ; ಪೆಣೆದ—ಹೆಣೆದುಕೊಂಡಿರುವ ಅಂದರೆ ಆವರಿಸಲ್ಪಟ್ಟ; ಮಣಲ್ದಾಣಂಗಳುಮಂ—ಮರಳಿನ ಸ್ಥಳಗಳನ್ನೂ; ಅಱಲ್ಗೊಂಡು—ಬಾಯಾರಿ; ತೋಡಿದ; ಉಂಬುನೀರ—ಚಿಲುಮೆಯನೀರಿನ, ಬಗರಗೆಗಳುಮಂ—ಬಾವಿಗಳನ್ನೂ.

ವೃ ॥ ದಿನಕೃದ್ಬಿಂಬ ಸ್ಫುರದ್ದರ್ಪಣ ಕಲಿತ ಕರಾಳತ್ರಿಶೂಲಂ ಕನತ್ಕಾಂ। ಚನ ಚಂದ್ರಾರ್ಧಾವಳೀ ಪ್ರಾಂಚಿತ ಶಿಖರಮುಖ ಶೃಂಖಲಾ ಬದ್ಧಘಂಟಾ ॥ ಘನಘೋಷಂ ರಕ್ತಸಿಕ್ತಾಸಿತ ಚಮರರುಹೋಚ್ಚಾವಚಶೂಲಂ ಬೃಹಚ್ಛ್ವಂ। ವನ ಶಾಖಾಬದ್ಧ ರಕ್ತಧ್ವಜ ವಿನಿಸಿನಿಸುಂ ಕಾಣಲಾದತ್ತದಾಗಳ್

ವ ॥ ಅನ್ತಾಧ್ವಜಮಂ ಕಂಡದನೆಯ್ದೆವಂದು ಲೋಹದ ತೋರಗಂಭಂಗಳೊಳಗೆ ಮುರಿಗೇಶದಿನೆಸೆವ ಶಬರರ ತಲೆಗಳೋಳಿಯಂತೆ ರಕ್ತಚಾಮರಂಗಳ ನೊಳಕೆಯ್ದ ಕಬ್ಬೊನ್ನ ಕನ್ನಡಿಯ ತೋರಣಂಗಳೊಳ್ ಮಗುರ್ವಿಸುವ ಚಂಡಿಕಾಗೋಪುರ ದ್ವಾರಪುರೋಭಾಗದೊಳ್ ಚಂದ್ರಚೂಡಾಹ್ವಯ ನಿಂದ್ರಾಯುಧದಿಂದ ವನಿತಳಕ್ಕವತರಿಸಿ ಪುಗುವಲ್ಲಿಂಜನಶಿಲಾವೇದಿಕೆಯೊಳ್ ನೆತ್ತರಿಂ ಪೊರೆದ ಕಯ್ಗಳಿಂ ಜವನಪ್ಪಳಿಸಿದಂತಿರ್ದ್ದ ರಕ್ತಚಂದನಚರ್ಚೆಗಳಂ ನೆತ್ತರೆಗೆತ್ತು ನಕ್ಕುವಬಳ್ಳುಗಳುಮನತಿರೌದ್ರದೇಹನಪ್ಪ ಲೋಹದ ಮಹಾಮಹಿಷನು ಮನೊಂದೊಂದೆಡೆಯೊಳ್ಬೀಡರರ್ಚಿಸಿದ ಕಾಡೆಮ್ಮೆಪೋರಿಗಳ ಕಣ್ಗಳಂತಿರ್ದ್ದ ರಕ್ತೋತ್ಪಲಂಗಳುಮ ನೊಂದೊಂದೆಡೆಯೊಳ್ ಸಿಂಗದುಗುರ್ಗಳಿ ನರ್ಚಿಸಿದಂತಿರ್ದ್ದ ಕೆನ್ನಗಸೆಯ ಮುಗುಳ್ಗಳುಮನೊಂದೊಂದೆಡೆಯೋಳ್ ಕಾಡೆಮ್ಮೆಪೋರಿಗಳ ತಿಂತಿಣಿಯುಮನೊಂದೊಂದೆಡೆಯೊ ಳ್ಕುಯ್ದಿರ್ದ್ದ ನಾಲಗೆಯ ರಾಶಿಗಳುಮನೊಂದೊಂದೆಡೆಯೊಳ್ ಕಳೆದಿರ್ದ್ದ ಕಣ್ಣಾಲಿಗಳ ಪುಂಜಂಗಳುಮನೊಂದೊಂದೆಡೆಯೊ ಳರಿದಿಕ್ಕಿದ ಪಂದಲೆಗಳ ಸಂದಣಿಗಳುಮಂ ಕೊಂಬುಕೊಂಬುವಪ್ಪದೆರಗಿದ ರಕ್ತಕುಕ್ಕುಟಂಗಳಿಂ ಭಯದೊಳಕಾಲಕುಸುಮಸ್ತಬಕಮಂ ತೋರುವಂತಿರ್ದ್ದ ರಕ್ತಾಶೋಕಾನೋಕಹಂಗಳುಮಂ ಶಂಕಾಜ್ವರಕಂಪಿತಮೆನಿಸಿದ ಕವಳಿಕಾವನಮುಮಂ ಚಂಡಿಕಾಪರಿಗ್ರಹಪ್ರಚಂಡಂಗಳಪ್ಪ ಕಿಶೋರಕೇಸರಿಗಳುಮನವಲೋಕಿಸುತ್ತಂ ಪೋಗೆವೋಗೆ ॥ ೨೬೯

---

೨೬೯. ಮುರಿಗೇಶದಿಂ—ವಕ್ರವಾದ ಕೂದಲಿನಿಂದ; ಕಬ್ಬೊನ್ನ—ಕಬ್ಬಿಣದ; ಅಗುರ್ವಿಸುವ—ಭಯಂಕರವಾದ; ನೆತ್ತರಿಂಪೊರೆದ—ರಕ್ತದಲ್ಲಿ ಅದ್ದಿದ; ಚರ್ಚೆ—ಲೇಪನ; ಬಳ್ಳುಗಳುಮಂ—ಗುಳ್ಳೆನರಿಗಳನ್ನೂ; ಅರಿದಿಕ್ಕಿದ—ಕತ್ತರಿಸಿಹಾಕಿದ; ಪಂದಲೆಗಳ—ಹಸೀತಲೆಗಳ.

ವೃ॥ ನೆಗೆದೆತ್ತಂ ಧೂಪಧೂಮಂ ಪಸರಿಸೆ ನಸುಗಂದಿರ್ದ ಕೆಂಬಟ್ಟೆಯಿಂ ಗಂ। ಟೆಗಳಿಂ ಮಾಯೂರಕಂಠಾವಳಿಯಿ ನೆಸೆದಿರ ಲ್ತೋರಣಂ ಕೂಡೆ ಕಣ್ಗ॥ ಬ್ಬೆಗವಂ ತಾಳ್ದಿರ್ದ ದಂತಾರ್ಗಳಕಲಿತ ಕವಾಟಂಗಳಿಂ ಚಂಡಿಕಾ ಗ। ರ್ಭಗೃಹಾದ್ವಾರ ಪ್ರದೇಶಂ ಜನಪನ ಬಗೆಗಾಶ್ಚರ್ಯಮಂ ಮಾಡಿತಾಗಳ್॥ ೨೭೦

ಅವಂನೋಡುತ್ತೆ ಪೋಗೆಪೋಗೆ॥

ಲಲಿತರಗಳೆ॥ ಕರಿಗೊರಡ ನುಡುವಡದರ್ವನೆನಿಪ ಸೆರೆಗಾಲ್ಗಳಿಂ। ಬಿಡದೆ ಪೊಡವಡೆ ಪಡ್ಡುಗಟ್ಟಿದ ನೊಸಲ್ಗಳಿಂ। ಕುಮತಿ ಸಿದ್ಧಾಂಜನದಿನೊಡೆದೊಂದು ಕಣ್ಗಳಿಂ। ತಱಿದುಕೊಳೆ ಡೋಣಿವೋಗಿರ್ದ ಪೇಟ್ಟುಗಣ್ಗಳಿಂ। ಕೆಮ್ಮನಿಟ್ಟಗೆಗಳಿಂ ದಿಡಲುಡಿದ ಕಯ್ಗಳಿಂ। ಸೆರೆದೆಗೆಯೆ ಸೂಜಿಯಿಂ ಪೊಲ್ತಿರ್ದ ಕಯ್ಗಳಿಂ। ಅಱಿಯದೆಸಗಿದ ರಸಾಯನದ ಸೇವನೆಯಿಂದೆ। ಭೋಂಕೆನ ಲಕಾಲದೊಳ್ ಸಂಧಿಸಿದ ಜರೆಯಿಂದೆ। ಧೂಮರಕ್ತಾಲಕ್ತಕಂಗಳ ರಸಂಗಳಿಂ। ಬರೆದ ಬಹುಕುಹಕ ಮಂತ್ರದ ಪುಸ್ತಕಂಗಳಿಂ। ಯಕ್ಷಿಣಿಯರಂ ಬಯಸಿ ಮಾಡುವ ಜಪಂಗಳಿಂ। ಬಿಲದುರ್ಗಮಂ ಪೊಕ್ಕು ಪಡೆವ ಶಾಪಂಗಳಿಂ। ಶ್ರೀಪರ್ವತಾದ್ಭುತ ಕಥಾಪ್ರಕಥನಂಗಳಿಂ। ಪಥ್ವಗೋದ್ವೇಗಕರ ವೀಣಾಸ್ವನಂಗಳಿಂ। ಲಿಖಿತದುರ್ಗಾಸ್ತೋತ್ರ ಪಟ್ಟಿಕಾವ್ರಾತದಿಂ। ತಲೆದೂಗಿ ಬಿಕ್ಕಿರಿನಪೋಲ್ಮೊರೆವಗೀತದಿಂ। ವಿಧೃತತುರಗಬ್ರಹ್ಮಚರ್ಯತೆಯುಮಸಕದಿಂ। ಮುದುಪರೆಳೆವೆಂಡಿರಂ ಬಯಸಿಪೊಂದೆಸಕದಿಂ। ಬಿಡದೆ ಪಥಿಕರ್ಕಳೊಳ್ ಪೋದ್ದುಡಿದ ಬೆಂಗಳಿಂ! ಪೂಮರನ ನೇಱಿಕೆಡೆದುಡಿದ ವಯ

---

೨೭೦. ನಸುಗಂದಿರ್ದ—ಸ್ವಲ್ಪಮಾಸಿದ್ದ; ಉಬ್ಬೆಗವಂ—ಭಯವನ್ನು; ದಂತಾರ್ಗಳ—ದಂತದ ಅಗುಳಿ.

೨೭೧. ಕರಿಗೊರಡು—ಸುಟ್ಟುಕರಿಕಾದ ಮರದಪೊಟ್ಟನ್ನು; ಉಡು—ಉಡುಗಳು; ಅಡರ್ವು—ಪತ್ತಿದವು; ಎನಿಪ, ಸೆರೆಗಾಲ್ಗಳಿಂ—ನರಗಳಿಂದ ಕೂಡಿದ ಕಾಲ್ಗಳಿಂದ; ಪಡ್ಡುಗಟ್ಟಿದ—ಜಡ್ಡುಗಟ್ಟಿದ; ಕುಮತಿಸಿದ್ಧಾಂಜನ—ಅವಿವೇಕಿಕೊಟ್ಟಸಿದ್ಧಾಂಜನ; ಡೋಣಿವೋಗಿರ್ದ—ಸೀಳಿಹೋಗಿದ್ದ; ಸೆರೆದೆಗೆಯೆ—ನರ ಸೆಳೆದುಕೊಂಡಿರಲು; ಪೊಲ್ತಿರ್ದ—ಹೊಲಿದಿದ್ದ; ಕಯ್ಗಳಿಂ, ಚಂಡಿಕಾನುಗ್ರಹಾರ್ಥವಾಗಿ ಕಯ್ಗಳಿಗೆ

ವಂಗಳಂ । ಕೆಣಕಿ ಗೋವುಗಳೊದಗೆ ಬೆನ್ನೊಳತಿಕೋಪದಿಂ । ಪರಿದೆಡಪಿ ಕೆಡೆದುಱಿದ ಪುಸ್ತಕಕಳಾಪದಿಂ । ಬಿಡೆಬಾದುಗೆಯ್ದೊಡರಿಸುವ ತಮ್ಮ ಕಡುಪಿಂದೆ । ಓರೋರ್ವರಂ ತಿವಿಯೆ ನೆಗ್ಗಿರ್ದರ್ಕದಪಿಂದೆ । ಹಾಸ್ಯಬೀಭತ್ಸಾದಿ ನಾನಾರಸಂಗಳಂ । ದೊಂದಿದ ಜರದ್ದ್ರವಿಳಧಾರ್ಮಿಕ ಜನಂಗಳಂ । ಬಳಸಿ ನೆರೆಬಳೆದ ನಿಡುಧೂಪಧೂಮಂಗಳಂ । ಪರಶುಪಟ್ಟಿಸ ಮಂಡಳಾಗ್ರ ಧಾಮಂಗಳಂ । ಪಾತಾಳಗುಹೆಯೊಳಗೆ ತೋಱುವಂತಿರ್ದರ್ಗಳಂ । ಕೃಷ್ಣಚಾಮರಚಯಂ ಪೊಳೆಯಲೊಪ್ಪಿರ್ದರ್ಗಳಂ । ರಕ್ತಚಂದನ ಕುಸುಮಕಲಿಕಾಸಮೂಹದಿಂ । ಪ್ರಾಲಂಬರಕ್ತಾಮ್ರಗುಚ್ಛಸಂದೋಹದಿಂ ! ಕನಕಪಟ್ಟಗ್ರಥಿತ ಪೃಥುಫಾಲಫಲಕದಿಂ । ಶಬರಕಾಂತಾರಚಿತ ಸಿಂದೂರತಿಲಕದಿಂ । ದಾಡಿಮೀಕುಸುಮ ಕೃತನವಕರ್ಣಪೂರದಿಂ । ರಕ್ತೋತ್ಪಲಪ್ರತಿಮ ನೇತ್ರವಿಸ್ತಾರದಿಂ । ಭ್ರುಕುಟಿಕುಟಿಲ ಭ್ರೂಲತಾ ಬಭ್ರುರೋಚಿಯಿಂ । ರುಚಿರತಾಂಬೂಲಾರುಣಾಧರ ಮರೀಚಿಯಿಂ । ಕೌಸುಂಭಶುಂಭದ್ದುಕೂಲಕಲಿತಾಂಗದಿಂ । ಕಣ್ಗೆಸೆದು ತೋಱುವ ಕರಾಳತ್ರಿಭಂಗಿಯಿಂ । ರೌದ್ರಭಾವಂ ನೆಲಸಿನಿಲೆ ತನ್ನೊಳೆಸೆದಳಂ । ಮಹಾಕಾಳದೇವ ನಭಿಸಾರಿಕೆವೊಲೆಸೆದಳಂ । ಲಂಬಕೂರ್ಚಕಳಾಪ ಚ್ಛಾಗನಿಕರದಿಂ । ಸ್ಫುರದಧರಪುಟಧವಳಮೂಷಕಪ್ರಕರದಿಂ । ಕೃಷ್ಣಾಜಿನಪ್ರಾವೃತೈಣ ನಿಕರಂಗಳಂ । ಸೊಡರ್ವಾವೆನಿಪ್ಪ ಪೆಡೆವಣಿಯ ಸರ್ಪಂಗಳಂ । ದಾರಾಢ್ಯಮಾನೆಯವೊಲಂತೆಸೆವ ತೋಱ್ಪರ್ಗಳಂ । ಸಾಧಕಜನಾಭೀಷ್ಟಸಿದ್ಧಿಯಂಮಾಳ್ಪಳಂ । ಚಂಡಿಕಾದೇವಿಯಂ ಕಂಡನುರ್ವೀಶ್ವರಂ । ಸದ್ಭಕ್ತಿಪೂರ್ವಂಪ್ರತಾಪಲಂಕೇಶ್ವರಂ ॥ ೨೩೧

ಸೂಜಿಗಳನ್ನು ಚುಚ್ಚಿಕೊಂಡಿದ್ದರೆಂದಭಿಪ್ರಾಯವು. ಧೂಮ—ಕಾಡಿಗೆಯಿಂದ ; ರಕ್ತ—ರಂಜಿಸಲ್ಪಟ್ಟ ಅಂದರೆ ಕಲಸಲ್ಪಟ್ಟ ; ಬಿಕ್ಕರಿನವೊಲ್—ಸೊಳ್ಳೆಯಂತೆ ; ತುರಗಬ್ರಹ್ಮಚರ್ಯತೆಯ—ತುರಗಗಳಂತೆ ನಿರ್ಬಂಧವಲ್ಲಿರುವದರಿಂದ ಉಂಟಾದಬ್ರಹ್ಮಚರದ; ಪೋರ್ದರ್—ಹೊಡೆದಾಡಿ ; ಬಿಡೆ—ಬಹಳವಾಗಿ ; ಬಾದುಗೆಯ್ದು—ಜಗಳವಾಡಿ ; ಒಡರಿಸುವ—ಉಂಟಾದ ; ಕಡುಪಿಂದೆ—ಕ್ರೌರ್ಯದಿಂದ ; ಬಳೆದ—ಹೆಚ್ಚಿದ ; ಧಾಮಂಗಳಂ—ಕಾಂತಿಯಿಂದ; ಬಭ್ರುರೋಚಿಯಿಂ ಹೊಂಬಣ್ಣದ ಕಾಂತಿಯಿಂದ ಸೊಡರ್ವಾವು—ದೀಪದ ಹಾವು ;

ವ॥ ಅನ್ತು ಕಂಡು ಪೂಜಾಪುರಸ್ಸರಂ ಪೊಡವಟ್ಟು ಕೃತಪ್ರದಕ್ಷಿಣನಾಗಿ ನಮಸ್ಕಾರಂಗೆಯ್ದು ತದನಂತರಂ ಬೀಡಂ ಬಿಡಲ್ವೇೞ್ದಲ್ಲಿಯ ಮೂರ್ಖದ್ರವಿಡಧಾರ್ಮಿಕಜನಂಗಳಂ ಜನ್ಮಭೂಮಿಜಾತಿವಿದ್ಯಾಕಳತ್ರಮುಮಂ ತತ್ಪ್ರೋನಿಮಿತ್ತಮುಮಂ ಹಾಸವಿಳಾಸಂ ಬೆಸಗೊಳ್ವುದುಮವಂದಿರ್ಪ್ಪಸರಂಬಡೆದು ತಂತಮ್ಮ ಕಲಿತರೂಪಶೌರ್ಯವಿಭವಂಗಳಂ ವಾಚಾಲರಾಗಿ ಬಣ್ಣಿಸುತ್ತಮಿರೆ ವಿರಹವಿಧುರಹೃದಯನಾಗಿಯುಮವಂ ಕೇಳುತ್ತುಂ ಕಿಱಿದುಂಪೊೞ್ತುಗಳೆದು ಮವಂದಿರ್ಗ್ಗಳ್ಗುಪಜಾತಪರಿಚಯದಿಂ ತಂಬುಲಂಗುಡಲ್ವೇೞ್ದಲ್ಲಿಂದಮೆೞ್ದು ಬೀಡಿಂಗೆವಂದು ನೇಸರ್ಪ್ಪಡಲೊಡಂ ಕೃತಸಂಧ್ಯಾವಂದನನಾಗಿ ಕಿಱಿದುಬೇಗ ಮೋಲಗಂಗೊಟ್ಟಿರ್ದ್ದು ಸಕಲರಾಜಲೋಕಮಂ ವಿಸರ್ಜಿಸಿ ಸೆಜ್ಜೆಗೆ ಬಿಜಯಂಗೆಯ್ದು ಪಸಾಯತರೊಳಂ ನುಡಿಯದುನ್ಮೀಲಿತಲೋಚನನಾಗಿ ಗಂಧರ್ವರಾಜನಂದನೆಯಿರ್ದ್ದ ಹೇಮಕೂಟಮಂ ನೆನೆಯುತ್ತಮಿರ್ದ್ದಾಯಿರುಳಂ ಕಳೆದು ಪ್ರಭಾತಸಮಯದೊಳಖಿಲದ್ರವಿಡಧಾರ್ಮಿಕಜನಂಗಳ್ಗುಡಲುಂ ತೊಡಲುಂ ಕೊಟ್ಟು ಚಂಡಿಕಾದೇವಿಯುಂ ಬೀೞ್ಕೊಂಡು ರಮಣೀಯಪ್ರದೇಶಂಗಳೊಳ್ಬೀಡಂ ಬಿಡುತುಂ ಕೆಲವಾನುಂದಿವಸದಿಂ ನಿಜರಾಜಧಾನಿಯಪ್ಪುಜ್ಜೈನಿಯಂ ಪೊಕ್ಕಾಕಸ್ಮಿಕಾಗಮನಸಂಜಾತಹರ್ಷರಾಗಿ ಪೌರಜನಂಗಳ್ಪೊಡವಡುತಿರೆ ಭೋಂಕನೆ ರಾಜಭವನಮನೆಯ್ದೆವರ್ಪ್ಪಗಳ್ ॥ ೨೩೦

ಕಂ॥ ಯುವರಾಜಂ ಬಂದೀಗಳ್ । ತವಂಗದಲ್ಲಿರ್ದ್ದನೆಂದು ಪರಮೋತ್ಸವದಿಂ । ತವತವಗೆ ಪರಿದು ಪರಿಜನ । ನಿವಹಂ ಬಿನ್ನವಿಸೆ ಕೇಳ್ದ ತಾರಾಪೀಡಂ ॥ ೨೩೧

ವೃ॥ ಸುರಿಯುತ್ತಿರ್ದ್ದತ್ತು ಮುಕ್ತಾಫಲದ ಸರಿಗಳಂ ಕಲ್ಪಭೂಜಾತಮೊಂಬಂ । ತಿರಳೆತ್ತುಂ ಹರ್ಷವಾರ್ಬಿಂದುಗಳುಗುತರೆ ಭೋರೆಂಬಿನಂ ಪಾಲಮುನ್ನೀ। ರ್ತ್ತೆರೆಯಂತಿರ್ದ್ದತ್ತರೀಯಂ ನೆಲದೊಳಲೆಯೆ ಸುತ್ತಿರ್ದ್ದ

---

೨೩೦. ಪಸರಂಬಡೆದು—ಗುಂಪಾಗಿ; ಪಸಾಯಿತರ್—ಅನುಗ್ರಹಪಾತ್ರರು.

೨೩೨. ಪಾಲಮುನ್ನೀರ್—ಕ್ಷೀರಸಮುದ್ರ.

ಮೂರ್ಧಾಭಿಷಿಕ್ತ । ಬ್ಬೆರಸಾನಂದಾತಿ ಭಾರಾಲಸಪ ದನಿದಿರೊಳ್ ಬಂದ ನಾಸಾರ್ವಭೌಮಂ ॥ ೨೩೪

ವ॥ ಅನ್ನುಬರ್ಪ್ಪ ತನ್ನತಂದೆಯಂ ಕಂಡು ಕುದುರೆಯಿಂದಿಳಿದು ಪಲವೆಡೆಪೊಡವಡುತ್ತ ಮೆಯ್ದೆವಂದು ಕಾಲಮೇಲೆ ಮುಳ್ಗಿದ ವಿನಯಾಭಿರಾಮನಂ ತೆಗೆದು ತಳ್ಕೈಸಿ ಪರಸಿ ಕೆಲದೊಳ್ಕಳ್ಗರಸುಮಕ್ಕಳೆಲ್ಲರುಮಂ ಪೊಡಮಡಿಸಿ ನಿಜಾಂತಃಪುರಕ್ಕೊಡಗೊಂಡು ಪೋಪುದುಂ ವಿಳಾಸವತಿ ಮಹಾದೇವಿ ಸಮಸ್ತಾಂತಃಪುರಪರಿವಾರಂ ಬೆರಸಿದಿರ್ವಂದು ಕೃತಪ್ರಣಾಮನಾದ ಮಗನಂ ಪರಸಿ ಸಕಲಮಂಗಳಾಚಾರಮಂ ಮಾಡಿ ತಂದು ಕುಳ್ಳಿರಿಸಿ ದಿಗ್ವಿಜಯಸಂಬಂಧಿಯಪ್ಪ ವಾರ್ತೆಯಂ ಕೇಳಿ ಪೇಳುತ್ತಂ ಕಿಱಿದುಬೇಗಮಿರ್ದ್ದ ವೈಶಂಪಾಯನಂ ಬೀಡನೊಡಗೊಂಡು ಬಂದಪನೆಂದಾರ್ಯ ಶುಕನಾಸಂಗೆ ಪೇಳ್ದು ನಿಜಜನನೀಗೃಹದೊಳ್ಮಜ್ಜನಭೋಜನಾದಿಗಳಂ ಮನವಲ್ಲದಮನದೊಳಗೆ ಮಾಡಿ ಬೈಗುಂಬೊಳ್ತಪ್ಪುದುಂ ನಿಜಭವನಕ್ಕೆ ಬಂದು ॥ ೨೩೫

ಕಂ॥ ಅರಮನೆಯುಂ ಮಮಂತ್ರಿಯುಂ ಮು । ರ್ವರೆಯುಂ ರಾಜ್ಯಮುಮಿವೆಲ್ಲಮೇವುದೊ ಕಾದಂ ॥ ಬರಿ ಯಿಲ್ಲದೆಂದು ವಿರಹಾ । ತುರಹೃದಯಂ ನೃಪತನೂಭವಂ ಚಿಂತಿಸಿದಂ ॥ ೨೩೬

ಕಂ॥ ಅರಸ ನಿರುಳಾಗೆ ಪಗಲಿನ । ಬರವಂ ಪಗಲಾಗಲಿರುಳ ಬರವಂ ಪಾರು ॥ ತ್ತಿರುಳುಂ ಪಗಲುಂ ಗಂಧ । ರ್ವರಾಜನಂದನೆಯ ವಿರಹದಿಂ ಚಿಂತಿಸಿದಂ ॥ ೨೩೭

ವ॥ ಮತ್ತಂ ಚಿತ್ರರಥನಂದನೆಯ ವಾರ್ತೆಯಂ ಕೇಳಲುತ್ಕಂಠಿತನಾಗಿ ಪತ್ರಲೇಖೆ ಬರ್ಪ್ಪನ್ನೆವನೇ ಬಯಸುತ್ತ ಮಿರಲಾಕೆಯಂ ಕೆಲವಾನುಂ

---

೨೩೫. ಪಲವೆಡೆ ಪೊಡವಡುತ್ತಂ—ಅನೇಕವೇಳೆಗಳಲ್ಲಿ ನಮಸ್ಕರಿಸುತ್ತ; ಮುಳ್ಗಿದ ನಮಸ್ಕಾರಮಾಡಿದ; ಬೈಗುಂಬೊಳ್ತು—ಸಾಯಂಕಾಲ.

೨೩೬. ಕಾದಂಬರಿಯಿಲ್ಲದೆ, ಇವೆಲ್ಲಂ, ಏವುದೊ—ಏನುಮಾಡಬಲ್ಲನೊ?

೨೩೭. ಪಾರುತ್ತೆ—ಸಮಯಾನ್ವೇಷಣವನ್ನು ಮಾಡುತ್ತ.

ದಿವಸಕ್ಕೊಡಗೊಂಡು ಬಂದು ಮೇಘನಾದಂ ಪ್ರಣಾಮಪುರಸ್ಸರಂ ಕಾಣಿಸೆ ನೃಪರೂಪಚಂದ್ರನಿದಿರೇಳ್ವುದುಂ ಪತ್ರಲೇಖೆ ತದಂಘ್ರಿಕಮಲಕ್ಕೆಱಗಿದಾಗಳ್ ॥ ೨೭೮

ವೃ॥ ಜನಪತಿ ಸಾಜದಿಂದಮೆ ಪಸಾದಮನಾದಮೆ ಮಾಡುತಿರ್ದ್ದನಾ । ವನಿತೆಯ ಮೇಲೆ ಚಿತ್ರರಥನಂದನೆಯುತ್ತಣಿ ನಾಗಳೀಳ್ತರ ॥ ಲ್ಮನದ ಪಸಾದಮುಂ ಪದಪುಮೊಮ್ಮೆಯೆ ನೂರ್ಮಡಿಯಾಗೆ ಸಸ್ಮಿತಾ । ನನನಮುರ್ದಪ್ಪಿದಂ ತೆಗೆದು ನಿರ್ಭರಹರ್ಷದೆ ಪತ್ರಲೇಖೆಯಂ ॥ ೨೭೯

ವ॥ ಅನಂತರ ಮಾಕೆಯುಂ ಕುಳ್ಳಿರವೇಳ್ದು ॥

ಕಂ॥ ನಿರುಪಮ ಚಾರಿತ್ರಾಲಂ । ಕರಣೆ ಮಹಾಶ್ವೇತೆಗಂ ಸಪರಿಜನಕಾದಂ ॥ ಬರಿಗಂ ಕುಶಲಮೆ ಪೇಳೆಂ । ದರಸಂ ತಾಂ ಪತ್ರಲೇಖೆಯಂ ಬೆಸಗೊಂಡಂ ॥ ೨೮೦

ವ॥ ಅನ್ತು ಬೆಸಗೊಳ್ವುದು ಮಾಕೆ ದೇವರ್ಬೆಸಸಿದಂದದೊಳೆಲ್ಲರುಂ ಕುಶಲದಿನಿರ್ದ್ದಪರದಲ್ಲದೆಯುಂ ಕಾದಂಬರೀದೇವಿ ಪರಿಜನಂಬೆರಸು ನಿಮಗೆ ತನ್ನ ಪೊಡವಡಿಕೆಯುಂ ಬಿನ್ನವಿಸಲ್ವೇಳ್ದಟ್ಟಿದಳೆಂಬುದುಂ ತತ್ಸಂಬಂಧಿಯುಪ್ಪ ವಾರ್ತೆಯುಂ ಕೇಳಲತಿಕುತೂಹಲನಾಗಿ ಮೇಘನಾದಂಗೆ ಮಚ್ಚುಗೊಟ್ಟಾತಂ ಬೆರಸು ರಾಜಲೋಕಮಂ ವಿಸರ್ಜಿಸಿ ದೂರೋತ್ಸಾರಿತಪರಿಜನಂ ಪತ್ರಲೇಖಾದ್ವಿತೀಯನಾಗಿ ವಲ್ಲಭಬಾಲೋದ್ಯಾನಮಂ ಪೊಕ್ಕು ॥

ಕಂ॥ ಅರೆದುಱಿಗಿದ್ದ ಬಯಲ್ತಾ । ವರೆಯೆಲೆಗೊಡೆಯಿಡುವಿನಲ್ಲಿ ಸುಖದಿಂ ಕಣ್ಗೆ ॥ ಯ್ದಿರೆ ಹಂಸಮಿಥುನಮಂ ನಿಜ । ಚರಣಾಬ್ಜದೆ ನೂಂಕಿ ನೃಪಸುತಂ ಕುಳ್ಳಿರ್ದ್ದಂ ॥ ೨೮೧

ವ॥ ಅನ್ತು ಕುಳ್ಳಿರ್ದ್ದು ಪತ್ರಲೇಖೆಯ ಮೊಗಮಂ ನೋಡಿ ।

---

೨೮೦. ನಿರುಪಮಚಾರಿತ್ರಾಲಂಕರಣೆ ಎಂಬ ಪ್ರಥಮಾಂತವು; ಮಹಾಶ್ವೇತೆಗೆ—ಎಂಬ ಚತುರ್ಥ್ಯಂತಕ್ಕೆ; ವಿಶೇಷಣವಾಗಿರುವವು. ಶಮ ಸೂ. ೧೨೦.

೨೮೧. ಅರೆದುಱಿಗಿದ್ದ—ಅರ್ಧ ತುಂಬಿಕೊಂಡಿದ್ದ, ಬಯಲ್ತಾವರೆಯೆಲೆಗೊಡೆಯು—ಸ್ಥಲಕಮಲಿನೀ ಎಲೆಯ ಕೊಡೆಯು; ಇಡುವಿನಲ್ಲಿ—ಇಕ್ಕಟ್ಟಿನಲ್ಲಿ; ಕಣ್ಗೆಯ್ದಿರೆ—ಮಲಗಿರಲು;

ಕಂ॥ ಎನಿತುದಿನಮಿರ್ದ್ದ ಗಂಧ । ರ್ವನ ನಂದನೆಯೊಂದುಪದಪ
ದೆಂತುಟು ನುಡಿಗ ॥ ಳ್ಮನಮೊಸೆದು ನಮ್ಮದೆಸೆಯಂ । ನೆನೆಪವರಾರಲ್ಲಿ
ಗೋಷ್ಠಿ ಯೇನಿಂದುಮುಖೀ ॥ ೨೯೩

ವ। ಎಂದು ನೃಪರೂಪಚಂದ್ರಂ ಬೆಸಗೊಳ್ವುದುಂ ದೇವ ತಾತ್ಪರ್ಯ
ದಿ ನವಧಾರಿಸುವುದೆಂದು ನೀವಿತ್ತ ಬಿಜಯಂಗೆಯ್ಯಲೊಡನೆಯಾಕೇಯೂ
ರಕನೊಡನೆ ಪೋಗಿ ಮುನ್ನಿನಂದದೊಳೆ ಪಟ್ಟಿರ್ದ್ದ ಕಾದಂಬರೀದೇವಿಯ
ಕೆಲದೊಳ್ಕುಳ್ಳಿರ್ದ್ದ ಪೊಸತೆನಿಸಿದ ಪಸಾದಮ ನನುಭವಿಸುತ್ತ ಮಿರ್ದ್ದೆ
ನಲ್ಲದೆಯುಂ ॥ ೨೯೪

ವೃ॥ ಪದಪಿನ ಮಾತುಗಳ್ಪಲವುಮಂ ಬಿಡದಾಡಿದೊಡಲ್ಲಿ ಬಪ್ಪುದಾ।
ವುದು ಗಡ ದೇವ ಮನ್ನಯನದೊ ಳ್ನಯನಂ ಕರದೊಳ್ಕರಾಬ್ಜ ಮಂ ॥
ಗದೊಳೆಸೆವಂಗಯಷ್ಟಿ ಪೆಸರಕ್ಕರದೊ ಳ್ನಿಜವಾಣಿ ಕೂರ್ಮೆಯೊಳ್ ।
ಹೃದಯ ಮದೊರ್ಮೆಯುಂ ನೆಲಸಲಂಗನೆ ಗಿಂತಿರೆ ಪೋದುದಾದಿನಂ॥ ೨೯೫

---

೨೯೩. ಪದವು—ಪ್ರೀತಿಯು; ಎಂತುಟು—ಹ್ಯಾಗೆ?; ನುಡಿಗಳ್ ಎಂತುಟು—ಮಾತುಗಳು ಹ್ಯಾಗೆ?; ನಮ್ಮದೆಸೆಯಂ—ನಮ್ಮಸಂಬಂಧವನ್ನು; ಅಲ್ಲಿ ನೆನೆವವರಾರ್; ಗೋಷ್ಠಿ—ಜನವಾರ್ತೆಯು;

೨೯೪. ತಾತ್ಪರ್ಯದಿಂ—ಚಿತ್ತೈಕಾಗ್ರತೆಯಿಂದ; ಪಟ್ಟಿರ್ದ್ದ—ಮಲಗಿದ್ದ; ಪಸಾದಮಂ—ಕಾದಂಬರಿಯ ಅನುಗ್ರಹವನ್ನು;

೨೯೫. ಪದಪಿನ—ಪ್ರೀತಿಯ; ಮಾತುಗಳ್ಪಲವುಮಂ—ಹಲವುಮಾತುಗಳನ್ನು; ಬಿಡದೆ—ಒಂದನ್ನೂ ಬಿಡದೆ; ಆಡಿದೊಡೆ, ಬಪ್ಪುದಾವುದುಗಡ—ಬರತಕ್ಕದ್ದೇನು? ಮನ್ನಯನದೊಳ್—ನನ್ನ ನೇತ್ರದಲ್ಲಿ; ನಯನಂ—ಕಾದಂಬರೀನೇತ್ರವು; ನೆಲಸಲ್—ಸ್ಥಿರವಾಗಿ ನಿಂತಿರಲು; ಅಂದರೆ ನನ್ನ ದೃಷ್ಟಿಯು ಯಾವ ವಸ್ತುವಿನಲ್ಲಿ ಬೀಳುವದೋ ಅದನ್ನು ತಳಿಯಬೇಕೆಂದು ನನ್ನ ದೃಷ್ಟಿಯನ್ನೇ ನೋಡುತ್ತಿದ್ದಳೆಂದಭಿಪ್ರಾಯವು; ಕರದೊಳ್—ನನ್ನ ಕಯ್ಯಲ್ಲಿ; ಕರಾಬ್ಜಂ; ನೆಲಸಿರೆ; ಅಂದರೆ ಎಡೆಬಿಡದ ನನ್ನ ಹಸ್ತಾವಲಂಬನವನ್ನು ಪಡೆದಿದ್ದಳೆಂದಭಿಪ್ರಾಯವು; ಅಂಗದೊಳ್, ಅಂಗಯಷ್ಟಿ—ನನ್ನನ್ನು ಒರಗಿಕೊಂಡಿದ್ದಳು ಎಂದಭಿಪ್ರಾಯವು; ಪೆಸರಕ್ಕರದೊಳ್—ನನ್ನ ಹೆಸರಿನ ಅಕ್ಷರದಲ್ಲಿ; ನಿಜವಾಣಿ—ಆಕೆಯಮಾತು, ನೆಲಸಿರೆ, ಅಂದರೆ ಯಾವಾಗಲು ನನ್ನ ಹೆಸರನ್ನು ಹಿಡಿದು ಕರೆಯುತ್ತಿದ್ದಳು. ಕೂರ್ಮೆಯೊಳ್—ಹೃದಯಂ, ಅಂದರೆ ನನ್ನಪ್ರೀತಿಯನ್ನೇ ಅಪೇಕ್ಷಿಸುತ್ತಿದ್ದಳೆಂದಭಿಪ್ರಾಯವು.

ವ॥ ಅಂತುಬೈಗುಂ ಬೊೞ್ತಪ್ಪುದು ಮೆನ್ನಕಯ್ಯಂ ಪಿಡಿದು ಹಿಮಗೃಹದಿಂ ಪೊಱಮಟ್ಟು ಸುಯ್ಯುತ್ತಂ ಬಂದು ನಿಷಿದ್ಧಾಶೇಷಪರಿಜನೆಯಾಗಿ ವಲ್ಲಭಬಾಲೋದ್ಯಾನಮಂ ಪೊಕ್ಕು ಮರಕತಸೋಪಾನಶೋಭಿತಮುಂ ಸುಧಾಧವಳಿತಮುಮಪ್ಪ ರಮಣೀಯ ಪ್ರಮದವನಮಧ್ಯವೇದಿಕೆಯ ಮಣಿಸ್ತಂಭಮಂ ನೆಮ್ಮಿ ॥ ೨೮೬

ಕಂ॥ ಅವಧರಿಸಿ ಮನದೊಳೇನಾ । ನುಮನಾಗಳ್ಕನ್ನೆ ನುಡಿಯ
ಲೊಡರಿಸಿ ನಿಷ್ಕಂ ॥ ಪಮೆನಿಪ್ಪ ತಾರೆಗಳ್ವೆರ । ಸೆಮೆಯಿಕ್ಕದೆ ನೋಡುತಿರ್ದ್ದ
ಳೆನ್ನಯಮೊಗಮಂ ॥ ೨೮೭

ವ॥ ಅನ್ತು ನೋಡಿ ಬೆಮರೊಳ್ಮುಳುಂಗಿ ನಡುಗುತ್ತಂ ವಿಷಾದಮನವಲಂಬಿಸಿಪ್ಪರ್ದ್ದುಮನಾಂ ವಿದಿತಾಭಿಪ್ರಾಯೆಯಾಗಿ ತನ್ಮುಖವಿನಿವೇಶನಿಷ್ಪಂದಿತ ನಯನೆಯುಂ ಬೆಸನಾವುದೆನಗೇಗೆಯ್ವುದೆಂದು ಬಿನ್ನವಿಸೆ । ೨೮೮

ಕಂ॥ ತೊಲಗಿಪಳೊ ರಹಸ್ಯಶ್ರವ । ಣಲಜ್ಜೆಯಿಂ ತನ್ನ ಪೊಳೆವ
ನೆಳಲುಮನೆನೆ ನಿ ॥ ರ್ಮಲ ಮಣಿಕುಟ್ಟಿಮಮಂ ಕೋ । ಮಲೆ ಚರ
ಣಾಂಗುಷ್ಠದಿಂದೆ ಬರೆಯುತ್ತಿರ್ದ್ದಳ್ ॥ ೨೮೯

ವೃ॥ ಭವನಮರಾಳಮಂಡಲಮುಮಂ ನಿಜಪಾದಪಯೋಜದಿಂದೆ
ನೂಂ । ಕುವ ಕುಮುದಾವತಂಸಮಧುಪಂಗಳುಮಂ ಕರದಿಂದೆ ಪಿಂಗೆ
ಜಿ । ಸುವ ವನದೇವತಾಶ್ರವಣಶಂಕಿತೆ ಯಾದವ್ರೊಲತ್ತಮಿತ್ತ ನೋ ।
ಡುವ ಪಿರಿದಪ್ಪ ಜೇವಸಮ ನಾವರಿಸಿರ್ದ್ದಳದೊಂದುಬೇಗಮಂ ॥ ೨೯೦

---

೨೮೬. ಬೈಗುಂಬೊೞ್ತು — ಇಳಿಹೊತ್ತಿನಲ್ಲಿ, ಅಂದರೆ ಅಪರಾಹ್ಣದಲ್ಲಿ; ವಲ್ಲಭಬಾಲೋದ್ಯಾನಮಂ — ವಲ್ಲಭಬಾಲೋದ್ಯಾನವೆಂಬ ಕಿರಿದೋಟವನ್ನು.

೨೮೭. ಏನಾನುಮಂ — ಯಾವದೋ ಒಂದನ್ನು; ನುಡಿಯಲೊಡರಿಸಿ — ಮಾತಾಡುವದಕ್ಕೆ ಉಪಕ್ರಮಿಸಿ.

೨೮೯. ತನ್ನ ಪ್ರತಿಬಿಂಬವು ತನ್ನ ರಹಸ್ಯವನ್ನು ಕೇಳೀತೆಂಬ ನಾಚಿಗೆಯಿಂದ ಅದನು ಅೞಿಸುತ್ತಿದ್ದಳೊ ಎಂಬಂತೆ ಅಂಗುಷ್ಠದಿಂದ ನೆಲವನ್ನು ಬರೆಯುತ್ತಿದ್ದಳೆಂದಭಿಪ್ರಾಯವು.

೨೯೦. ಅದೊಂದುಬೇಗಮಂ — ಸ್ವಲ್ಪಹೊತ್ತು; ಜೇವಸಮಂ — ಕಳವಳವನ್ನು.

ವೃ॥ ಮದನಾಗ್ನಿಜ್ವಾಲೆಯಿಂ ಮಗ್ಗಿದುದೊ ಬಹುಳ ಬಾಷ್ಪಾಂಬುಪೂರಂಗಳಿಂ ದ। ಳ್ದುದೊ ನಿಶ್ವಾಸಂಗಳಿಂ ಪಾಱಿದುದೊ ಕುಸುಮಬಾಣಂಗಳಿಂ ನುಚ್ಚುನೂಱಾ॥ದುದೊ ಸುಯ್ಗೞ್ತಂದ ಭೃಂಗಾವಳಿಯಿ ನಿರದೆ ಪೀರ್ತ್ತಂದುದೋ ಪೇಳವೆಂಬಂ। ದದೆ ಲಜ್ಜಾಮಗ್ನೆಗೇನುಂ ನುಡಿ ಪೊಱಮಡದಾಯ್ತೆಂತು ಮಾಕಾಂತೆಗಾಗಳ್॥ ೨೯೧

ಕಂ॥ ಅನುಭವಿಸಿದ ಕೊೞಲೆಗಳ। ನಿನಿಸೆಂದೆಣಿಸಲ್ಕೆ ಮೌಕ್ತಿಕಾಕ್ಷಾವಳಿಯಂ॥ ವನಜದಳನಯನೆ ಸಮೆಪಪ। ಳೆನೆ ಸುರಿದುವು ತರದೆ ತೋರಕಣ್ಬನಿದುಱುಗಲ್॥ ೨೯೨

ವೃ॥ ಸಮಸಂದೊಂದಿದ ಲಜ್ಜೆಯುಜ್ಜುಗಮೆ ಲಜ್ಜಾಭಾವಮಂ ಬಾಲಭಾ। ವಮೆ ಬಾಲ್ಯೋದಯಮಂ ವಿಷಾದಮೆ ವಿಷಾದೋದ್ರೇಕಮಂ ಭೀತಿಭಾ॥ ವಮೆ ಭೀತಿಕ್ರಮಮಂ ವಿಳಾಸಮೆ ವಿಳಾಸೋಲ್ಲಾಸಮಂ ಮುಗ್ಧಭಾ। ವಮೆ ಮುಗ್ಧತ್ವಮಪತ್ತ್ರಮಂ ನೆಱೆಯೆ ಕಲ್ತಂತಾದು ದಾ ಕನ್ನೆಯೊಳ್॥ ೨೯೩

ವ॥ ಆಗಳದೇನೆಂದಾಂ ಮಗುಳೆ ಮಗುಳೆ ಬಿನ್ನಪಂಗೆಯ್ವಮುಸಿರಲ್ಕಾಣ್ಜೆ ರಹಸ್ಯಾಲಾಪಮ ನೆನಗೆಬರೆದು ತೋರ್ಪ್ಪಂತೆ ನಖಮುಖದಿಂ ಕೇತಕೀದಳಮಂ ಬರೆಯುತ್ತಂ ಕ್ಷಿತಿತಳನಿಹಿತ ನಿಶ್ಚಲನಯನೆಯಾಗಿ ಪಿರಿದುಬೇಗ ಮಿರ್ದ್ದನಂತರ ಮೊಯ್ಯನೆನ್ನ ಮೊಗಮಂ ನೋಡಿ॥

೨೯೧. ನುಡಿ—ಆಕೆಯಮಾತು; ಮಗ್ಗಿದುದೊ—ತಪ್ತವಾಯಿತೊ; ಅಳ್ದುದೊ—ಮುಳುಗಿತೊ; ಪಾಱಿದುದೊ—ಹಾರಿಹೋಯಿತೊ; ಪೀರ್ತ್ತಂದುದೊ—ಹೀರಲ್ಪಟ್ಟಿತೊ.

೨೯೩. ಸಮಸಂದು—ಪ್ರಕಟವಾಗಿ; ಒಂದಿರೆ—ಕಾದಂಬರಿಯಲ್ಲಿ ಲಜ್ಜೆ ಕೂಡಿರಲು; ಲಜ್ಜೆಯುಜ್ಜುಗಮೆ—ಲಜ್ಜಾವ್ಯಾಪಾರವೆ; ಲಜ್ಜಾಭಾವಮಂ—ಲಜ್ಜಾವಿಲಾಸವನ್ನು; ಆ ಕನ್ನೆಯೊಳ್—ಆ ಕಾದಂಬರಿಯಲ್ಲಿ; ನೆಱೆಯೆ—ಚನ್ನಾಗಿಯೆ; ಕಲ್ತಂತೆ—ಅಭ್ಯಾಸಮಾಡಿದಂತೆ; ಆದುದು—ಆಯಿತು, ಅಂದರೆ ಲಜ್ಜೆಯೇ ಲಜ್ಜೆಪಡುವದನ್ನು ಕಾದಂಬರಿಯಲ್ಲಿ ಅಭ್ಯಾಸಮಾಡಿತೆಂದು ಹೇಳುವದರಿಂದ ವಿಶೇಷಲಜ್ಜಾವತಿಯಾಗಿದ್ದಳೆಂದು ತಾತ್ಪರ್ಯವು. ಇದರಂತೆಯೇ ಬಾಲಭಾವ ವಿಷಾದವೊದಲಾದ ಪ್ರಥಮಾಂತಗಳಿಗೂ. ಸಮಸಂದೊಂದಿದ ಎಂಬಕೃತ್ತನ್ನು ಸೇರಿಸಿ ಅನ್ವಯಿಸಿಕೊಳ್ಳುವದು.

ಕಂ॥ ಮದನಾನಲ ಧೂಮಸ್ತೋ । ಮದೆ ಧೂಸರಮಾದ ವಚನ
ಮಂ ತೊಳೆಯಲ್ಕೆ ॥ ಣ್ಮಿದುವೆನೆ ಮತ್ತಂ ಪೊಱಪ್ಪೊ । ಣ್ಮಿದುವೆಳೆಯುಳ
ಬಾಷ್ಪವಾರಿಧಾರಾಪೂರಂ ॥ ೨೯೫

ಕಂ॥ ಉಸಿರ್ವುದುಜ್ಜುಗದಿಂ ದಧರಂ । ನಸುಗೆತ್ತಲ್ ಶ್ವಾಸಮಧುಪ
ಮಾಲೆಗೆ ಸಂದೇ ॥ ಶಿಸಿದಪಳೊ ರಹಸ್ಯಮನೆನೆ । ಲೆಸೆದೆಂತೆಂತಾನು ಮುಸಿ
ರಲುದ್ಯತೆಯಾದಳ್ ॥ ॥ ಅದೆಂತೆನೆ ॥ ೨೯೬

ವೃ॥ ಎನಗೀಗಳ್ನಿಕ್ಕ್ಯವಂ ವಲ್ಲಭತೆಯೆಡೆಯೊಳೆಮ್ಮಬ್ಬೆಯಿಂ ದಯ್ಯ
ನಿಂದ । ಕ್ಕನಿ ನೀಪ್ರಾಣಂಗಳಿಂ ದತ್ಯಧಿಕಮೆನಿಸಿ ಮಚ್ಚಿತ್ತದೊ ಳ್ನಿಂದೆ
ನೀಂ ನಿ ॥ ನ್ನಸದೆಂದಾಂ ಕಂಡೆ ನಂದಿಂಬಳಿಕೆ ಸಖಿಯರಂ ಪತ್ತುವಿಟ್ಟೇ
ಮನಂ ನಿ । ನ್ನನೆ ನೀಡುಂನಾಡೆ ನಂಬಿರ್ದಪ್ಪುದಱಿಯೆ ನಿದಿನ್ನೆಂತುಮಾಂ
ಪತ್ರಲೇಖೇ ॥ ೨೯೭

ಕಂ॥ ಎನಗಾದದೊಂದು ಪರಿಭವ । ಮ ನಾರ್ಗ್ಗೆ ದೂಱಿದಪೆ
ನಾರ್ಗ್ಗೆ ಪೇಳ್ದಪೆ ನಿದನಾಂ ॥ ನಿನಗುಸಿರ್ದನಂತರಂ ಸುಖ । ದಿ ನೆನ್ನತನು
ವಿಂಪೆ ಪತ್ತುವಿಡಿಸುವೆ ನಸುಮಂ ॥ ವ॥ ಎಂದುಚಿತ್ರರಥನಂದನೆ ॥ ೨೯೮

---

೨೯೬. ಅಧರಂ—ತುಟಿಯು; ನಸುಗೆತ್ತಲ್—ಸ್ವಲ್ಪವಾಗಿಚಲಿಸಲು; ಶ್ವಾಸಮಧುಕರಮಾಲೆಗೆ, ರಹಸ್ಯಮಂ, ಸಂದೇಶಿಸಿದಪಳೊ—ಹೇಳುತ್ತಾಳೋ; ಎನಲ್--ಎಂಬುವಹಾಗೆ; ಎಸೆದು—ಪ್ರಕಾಶಿಸಿ; ಎಂತೆಂತಾನುಂ—ಅತಿಪ್ರಯಾಸದಿಂದ; ಉಸಿರಲ್—ಮಾತಾಡುವದಕ್ಕೆ; ಉದ್ಯತೆಯಾದಳ್.

೨೯೭. ಪತ್ರಲೇಖೇ—ಎಲೌ ಪತ್ರಲೇಖೆಯೆ; ನೀಂ, ಎನಗೆ, ಈಗಳ್, ವಲ್ಲಭತೆಯಿಡೆಯೊಳ್—ಪ್ರೀತಿಯಸ್ಥಾನದಲ್ಲಿ; ಎಮ್ಮಬ್ಬೆಯಿಂದೆ—ನಮ್ಮ ತಾಯಿಗಿಂತಲೂ; ಅಯ್ಯನಿಂ, ಅಕ್ಕನಿಂ—ಮಹಾಶ್ವೇತೆಗಿಂತಲೂ; ಈ ಪ್ರಾಣಂಗಳಿಂದತ್ಯಧಿಕಮೆನಿಸಿ—ನನ್ನಪ್ರಾಣಗಳಿಗಿಂತಲೂ ಬಹಳ ಅತಿಶಯವೆನಿಸಿಕೊಂಡು; ಮಚ್ಚಿತ್ತದೊಳ್, ನಿಂದೆ, ಸಖಿಯರಂ, ಪತ್ತುವಿಟ್ಟು—ಬಿಟ್ಟು; ನಿನ್ನನೆ, ನಂಬಿರ್ದಪ್ಪುದು; ಇದ—ಹೀಗೆ ನಿನ್ನಲ್ಲಿ ಪ್ರೀತಿಯುಂಟಾಗಿರುವದನ್ನು; ಎಂತುಂ—ಯಾವರೀತಿಯಿಂದಲೂ; ಆಂ, ಅಱಿಯೆಂ.

೨೯೮. ಎನಗಾದ ನನಗುಂಟಾದ; ಇದೊಂದುಪರಿಭವಮಂ—ತಿರಸ್ಕಾರವನ್ನು ಕುರಿತು; ಆರ್ಗ್ಗೆ ದೂಱಿದಪೆಂ—ಯಾರನ್ನು ನಿಂದಿಸಲಿ; ಆರ್ಗ್ಗೆ ದೂರಿದಪೆಂ ಎಂಬಲ್ಲಿ ದ್ವಿತೀಯಾರ್ಥದ ಚತುರ್ಥಿಯು ಶ. ಮ. ಸೂ ೧೪೬. ಪತ್ತುವಿಡಿಸುವೆ—ಅಗಲಿಸುವೆನು;

ಕಂ॥ ನಿನಗೆನ್ನಂದಮ ನೇಸಂ । ದುನುಡಿವೆ ನೆನ್ನೊಂದುತಪ್ಪ ನಱಿದತ್ತೆಂದೀ ॥ ಮನಕಂ ಪಿರಿದುಂ ಲಜ್ಜಿಸು । ವೆನೆನಲ್ ಪೇಳ್ಪೆಱರ್ಗದಾಗಳುಂ ಲಜ್ಜಿಸೆನೇ ॥ ೨೯೯

ಪಿರಿದೆನಿಸಿದ ಪೞಗೆಡೆಯಾ । ಗಿರಲೆನ್ನನದಾರುಮಿಲ್ಲ*[ಮಿತರೆಯರೆನ್ನಂತಿರೆ] ಗರ್ವದಿಂದೆ ಪಿರಿದುಂ । ಪರಿಭವಿಸಿದನಿಂದಕಾರಣಂ ನೃಪತನಯಂ ॥

ಕಂ॥ ಪಿರಿಯರ್ಗಿದು ಗುಣವೋ ಪೇ । ೞ್ಪರಿಚಯಕಿದು ಫಲವೊ ತರುಣಿ ಬಿಸತಂತುವಿನೊ ॥ ೞ್ದೊರೆಯೆನಿಪೆಳಮನದೆನ್ನಂ । ಪರಿಭವಿಪ್ಪುದೆ ಕಂಡುಕನ್ನೆಯುಂ ಯುವರಾಜಂ ॥ ೩೦೧

ಕಂ॥ ಇನ್ನೆನ್ನನಿಂತು ನೃಪನೆಸ । ಕಂ ನಿತ್ತರಿಸಲ್ಕೆ ಕುಡದು ಮಱುವೃಟ್ಟನೊಳಂ ॥ ನಿನ್ನೊಡನೆ ಕೂಟವೆನಗ । ಕ್ಕೆನ್ನಯ ತಪ್ಪಿಂಗೆ ಸತ್ತು ಶುದ್ಧೆಯೆ ನಪ್ಪೆಂ ॥ ೩೦೨

---

೨೯೯. ಎನ್ನೊಂದುತಪ್ಪಂ, ಅಱಿದತ್ತೆಂದು—ತಿಳಿಯಿತೆಂದು ; ಈ ಮನಕಂ—ಈ ನನ್ನ ಮನಸ್ಸಿಗೂ ; ಲಜ್ಜಿಸುವೆನೆನಲ್—ನಾಚಿಕೊಳ್ಳುತ್ತಿರುವಲ್ಲಿ ; ಪೆಱರ್ಗೆ—ಅನ್ಯರಿಗೆ ; ಆಗಳುಂ—ಯಾವಾಗಲೂ : ಲಜ್ಜಿಸೆನೆ—ನಾಚಿಕೊಳ್ಳೆನೆ? ;

೩೦೦. ಪಿರಿದೆನಿಸಿದ ಪೞಗೆ—ಅಧಿಕವಾದನಿಂದೆಗೆ ; ಎಡೆಯಾಗಿರಲ್—ಆಸ್ಪದವಾಗಿರಲು ; ಎನ್ನಂತಿರೆ—ನನ್ನಹಾಗೆ ; ಇತರೆಯರ್—ಮತ್ತೊಬ್ಬರು ; ಅದಾರುಮಿಲ್ಲಂ—ಯಾರೂಯಿಲ್ಲ ; ಇಂದು—ಈಗ ; ನೃಪತನಯಂ, ಗರ್ವದಿಂದೆ, ಎನ್ನಂ, ಅಕಾರಣಂ—ನಿಷ್ಕಾರಣವಾಗಿ ; ಪಿರಿದುಂ ಪರಿಭವಿಸಿದಂ – ತಿರಸ್ಕರಿಸಿದನು.

೩೦೧. ತರುಣಿ—ಎಲೌ ಪತ್ರಲೇಖೆಯೆ ; ಬಿಸತಂತುವಿನೊಳ್, ದೊರೆಯೆನಿಪ—ಸಮಾನವಾದ ; ಎಳಮನದ—ಕೋಮಲಹೃದಯವುಳ್ಳ, ಎನ್ನಂ—ನನ್ನನ್ನು ; ಯುವರಾಜಂ, ಕಂಡು—ನೋಡಿಯೂ ; ಪರಿಭವಿಪ್ಪುದೆ—ತಿರಸ್ಕಾರಮಾಡಬಹುದೆ ? .

೩೦೨. ನೃಪನೆಸಕಂ—ಚಂದ್ರಾಪೀಡನಕೃತ್ಯವು ; ಇನ್ನು—ಇನ್ನುಮೇಲೆ ; ಎನ್ನಂ – ನನ್ನನ್ನು ; ನಿತ್ತರಿಸಲ್ಕೆ—ಕಡೆಹಾಯಿಸುವದಕ್ಕೆ ; ಕುಡದು–ಮಾರ್ಗವನ್ನು ಕೊಡದು ಅಂದರೆ ನೃಪವಿಯೋಗದಿಂದ ಮರಣ ತಪ್ಪದೆಂದಭಿಪ್ರಾಯವು ; ಮಱುವೃಟ್ಟನೊಳಂ—ಜನ್ಮಾಂತರದಲ್ಲಿಯೂ ; ಕೂಟಂ—ಸ್ನೇಹವು ; ಎನಗೆ, ಅಕ್ಕೆ—ಉಂಟಾಗಲಿ ಎನ್ನತಪ್ಪಿಂಗೆ—ಚಂದ್ರಾಪೀಡನಲ್ಲಿ ಅನುರಕ್ತಳಾದ ನನ್ನ ತಪ್ಪಿಗೆ ; ಸತ್ತು, ಶುದ್ಧೆಯೆಂ—ನಿರ್ದೋಷೆಯಾದವಳು ; ಅಪ್ಪೆಂ—ಆಗುವೆನು.

*[ಮಿತಿರೆಯನೆಂದಂ । ದಿರೆ]

ವ॥ ಎಂದು ಚಿತ್ರರಥನಂದನೆ ನುಡಿದು ಮಾಣ್ಬುದು ಮಾನತಿಭೀತೆ ಯೆ ನಾಗಿ ದೇವಿ ನಿನ್ನ ಯುವರಾಜಂ ನಿನ್ನ ಕುಸುಮಸುಕುಮಾರಮಪ್ಪ ಮನವನೇತರಿಂ ನೋಯಿಸಿದ ನದಾವುದಪರಾಧಂಮಾಡಿದ ನಾನೆ ಮುನ್ನೆನ್ನ ಜೀವಮಂ *[ಬಿಡುವೆಂ ಬೆಸಸೆಂದು ಬಿನ್ನವಿಸುವುದು] ಮಾಕಾಂತೆ ಯಿಂತೆಂದಳ್ ॥ ೨೦೨

ವೃ॥ ಕನಸಿನೊಳಾವನಾಂ ಮರೆದು ನಿದ್ರೆಗೆ ಯುತ್ತಿರೆ ಬಂದು ಮಂ
ದುಕೆ । ವ್ಮನೆ ಕಿವಿಯೋಲೆಯಲ್ಲಿ ಕುರುಪಂ ಬರೆವಂ ಛಲದಿಂದೆ ಬೇಡವೇ॥
ಡೆನೆ ನಡೆನೋಡುವಂ ಭವನನಂದನದೊಳ್ಸುಳಿಯುತ್ತಿರಲ್ಕೆ ಪಿಂ । ತನೆ ಮ
ರೆಯಿಕ್ಕಿ ಬಂದು ಕಡುಗೂರ್ತ್ತವ್ರೊಲೆನ್ನಯ ಜೆನ್ನನಪ್ಪುವಂ ॥ ೨೦೩

ಶ್ವಸಿತಾನೀಕಂಗಳಂ ದಂ ಕದಪಿನ ಚೆಮರಂ ನಾಡೆ ಕೂರ್ತ್ತಂದದಿಂ
ದಾ । ರಿಸುವಂ ಕಸ್ತೂರಿಯಿಂದೆನ್ನಯ ಮೊಲೆಗೆಲದೊ ಳ್ಪತ್ರಭಂಗಂಗಳಂ
ಚಿ ॥ ತ್ರಿಸುವಂ ಕಂಕೆಲ್ಲಿಯಂ ಲೀಲೆಯಿನೊದೆವೆಡೆಯೊ ಳ್ಮಾಣದಾತ್ಮಾಂಗ
ಮಂ ಸಂ । ದಿಸುವಂ †[ಪೇಳೇವೆನೆಂತಾಂ] ನಿಯಮಿಸಿದಪೆ ನಾಧೂರ್ತನಂ
ಪತ್ರಲೇಖೇ ॥ ೨೦೪

ವ ॥ ಎಂದು ಗಂಧರ್ವರಾಜನಂದನೆ ನುಡಿಯೆ ಕೆಳ್ದೀಕೆ ಮನುಜ ಮಕರಧ್ವಜಂಗಿಕ್ಕುವಟ್ಟಳೆಂಬುದ ನಱಿದು ಸಕಲಭುವನಮಂ ಧವಳಿಸುವ ನಿನ್ನ ಸೌಭಾಗ್ಯಯಶಕ್ಕೆ ಸಂತಸಂಬಟ್ಟು ಮಲಯಾನಿಲನ ಸೋಂಕುಂ

---

೨೦೨. ಮಾಣ್ಬುದುಂ—ಸುಮ್ಮನಾಗಲು ; ಭೀತೆಯುಂ—ಭಯಪಟ್ಟಂಥಾವಳು.
೨೦೩. ಕಿವಿಯೋಲೆಯಲ್ಲಿ—ಕಿವಿಯಬಿಚ್ಚೋಲೆಯಲ್ಲಿ; ಕುರುಪಂ—ಸಮಾಗಮ ಸಂಕೇತಸ್ಥಾನವನ್ನು: ಪಿಂತನೆ—ಹಿಂದೆ ; ಕಡುಗೂರ್ತ್ತವ್ರೊಲ್—ಅತ್ಯಂತಪ್ರೀತನಹಾಗೆ.
೨೦೪. ಆವಂ, ಕಂಕೆಲ್ಲಿಯುಂ, ಲೀಲೆಯಿಂ, ಒದೆವೆಡೆಯೊಳ್—ಒದೆಯುವ ಕಾಲದಲ್ಲಿ ಆತ್ಮಾಂಗಮಂ ಸಂದಿಸುವಂ—ತನ್ನ ಶರೀರವನ್ನು ಒಡ್ಡುವನೊ ; ಆ ಧೂರ್ತನಂ, ಏಸೆಂ—ಏನುಮಾಡಲಿ ; ಎಂತುನಿಯಮಿಸಿದಪೆಂ—ಹ್ಯಾಗೆನಿಗ್ರಹಿಸಲಿ.
೨೦೫. ಇಕ್ಕುವಟ್ಟಳ್—ವ್ಯಥೆಪಟ್ಟಳು.

*[ಬಿಡುವೆನೆಂದೆಂಬುದು ಬೆಸಸೆಂದು ಬಿನ್ನವಿಸುವುದು] †[ಪೇಳೇನನೆನ್ನಂ]

ಮಧುಮಾಸಕುಸುಮಸಮೃದ್ಧಿಯುಂ ಚಂದ್ರೋದಯಸೌಂದರ್ಯಮುಂ ಸಫಲಮಾದುದೆಂದು ಮನದೊಳ್ಬಗೆದು ನಸುನಗುತ್ತ ಮಾಕಾಂತೆಯ ನಿಂತೆಂದಂ ॥ ೩೦೬

ಕಂ॥ ಮುನಿಯಲ್ಕಾಗದು ಯುವರಾ । ಜನ ದೋಷಮಿದಲ್ತು ಕಮ ಲಮುಖಿ [ಕೇಳಿದು] ಕಾ ॥ ಮನದೋಷ *[ಮೆಂಬುದುಂ] ಕಾ । ಮನೆಂಬ ನಾರೆಂದು ಮಱಿಯೆ ನಿಂತಿರೆ ನೆಗಳ್ದಂ ॥ ೩೦೭

ವ। [ಎಂದು ಮತ್ತಮಾ] ಕಾಂತೆ ನೀನೆಂಬ ಕಾಮನ ರೂಪೆಂತು ಟೆಂದು ಬೆಸಗೊಳ್ವುದು ಮನಂಗಂಗೆ ರೂಪೆಂಬುದೆಲ್ಲಿ ಬಂದುದು [ಕಾತಂ ತನುವಿಲ್ಲದನಲನೆಂದು ಪೇಳ್ದು ಮತ್ತಮಿಂತೆಂದಂ] ॥ ೩೦೮

ವೃ॥ ಮದನೋಗ್ರಾಗ್ನಿ †[ಮನಕ್ಕೆ] ಮಾಳ್ಪುದು ಮಹಾಸಂತಾಪ ಮಂ ಜ್ವಾಲೆಯಿ । ಲ್ಲದೆಯುಂ ಕಣ್ಮಲರ್ಗಳ್ಗೆ ಪೊಣ್ಪಿಸುವು ‡[ದಂಭೋಧಾರೆ ಯಂ] ಧೂಮ ಮಿ ॥ ಲ್ಲದೆಯುಂ ಮೆಯ್ಗೆಯಿಪ್ಪುದಗ್ಗಳಿಪ ಪಾಂಡುಚ್ಛಾ ಯೆಯಂ ಭಸ್ಮಮಿ । ಲ್ಲದೆಯುಂ ತಾನೆನಿಸಲ್ವಿಚಿತ್ರಮಿದನಂತಿಂತುಂತೆನಲ್ಬ ಕ್ಕುರ್ಮೇ ॥ ೩೦೯

ವ॥ ಅನ್ತೆನಿಸಿದ ಮನಸಿಜನ ನನೆಯಂಬಿನ ಕೋಳ್ಗೆ ಪಕ್ಕಾಗಲೊಡನೆ

ವೃ॥ ಇನಿಯರ ಕೂಟಮಂ ನೆನೆಯುತಿರ್ಪೊಡೆ ಕಾಮಿನಿಯರ್ಗೆ ಪದ್ಮಗ । ರ್ಭನ ದಿನಮಂತದುಂಕಿಱಿದು ರೂಪನೆ ಚಿತ್ರಿಸಿ ನೋಡುತಿರ್ಪ್ಪ ವಾ ॥ ವನುದಿನ ಮೆಂದೊಡೀನೆಲನು ಮೆಯ್ದದ ವಲ್ಲದೆ ತಮ್ಮಣಪ್ರಸಂ । ಸನ ಮನೆಕೇಳ್ವೆನೆಂಬೊಡೆ ಸರಸ್ವತಿಯುಂ ಜಡೆಯಾಗಿತೋಱುವಳ್ ॥ ೩೧೧ ॥

---

೩೦೭. ಇದುಕಾಮನದೋಷಂ—ಮನ್ಮಥನದೋಷವು; ಎಂಬುದುಂ—ಎಂದು ಹೇಳುತ್ತಲೂ; ಇಂತಿರೆನೆಗಳ್ದಂ—ಹೀಗೆ ಸಂತಾಪವನ್ನುಂಟುಮಾಡಿದ; ಕಾಮನೆಂಬಂ—ಮನ್ಮಥನೆಂಬವನು; ಆರ್—ಯಾರು? ಎಂದು ಮಱುಯೆಂ—ಯಾವಾಗಲೂ ಅರಿಯೆನು

೩೧೦. ಕೋಳ್ಗೆ—ಹಾವಳಿಗೆ; ಪಕ್ಕಾಗಲ್—ಗುರಿಯಾಗಲು.

೩೧೧. ಎಯ್ದದು—ಸಲ್ಲದು ಅಂದರೆಸಾಲದು.

*[ಮಿದೆಂಬುದು] †[ಹನಕ್ಕೆ] ‡[ದಂಬಾಮೋಳಿಯಂ]

ವ॥ ಎಂದು ಬಿನ್ನವಿಸೆ ನೀನೆಂದುದೆಲ್ಲ ಮಾತನೊಳ್ನೆಱೆಯುಂಟು ಮನುಜೇಂದ್ರನೊಳ್ ಮನೋಭವಂಪಕ್ಷಪಾತಮಂ ನೆಗಳ್ದೆನ್ನೊಳೆ ಕಾಯ್ಪಂ ತೋರಿ ನಿತ್ತರಿಸಲಿತ್ತನಿಲ್ಲ ನಿಮ್ಮಡಿಯ ಹೃದಯದಿ ನತ್ಯನುರಕ್ತೆಯಾದೆ ನಗೆರಡಿಲ್ಲದೆ ಕೂಡಿಪ್ಪೆ ಯೆಂಬುದ ನಿಂಬಾಗಱಿದೆ ನಿಲ್ಲಿಗುಪಾಯಮಾವುದೆಂಬುದುಂ ॥ ೩೧೨

ಕಂ॥ ಇಲ್ಲಿಗೆ ಮನುಜಮನೋಜನೆ । ಬಲ್ಲನುಪಾಯಮನದಕ್ಕೆ ನೀನೀಗಳ್ತ । ಳ್ವಿಲ್ಲದೆ ಬೆಸಸೆನ್ನಂ ಭೂ । ವಲ್ಲಭನುಮ ನಿಂದೆ ತಂದಪೆಂ ಚಂದ್ರಮುಖೀ ॥ ೩೧೩

ವ॥ ಎಂದು ಬಿನ್ನವಿಸೆ.—

ವೃ॥ ಮನುಜಮನೋಜ ನಿನ್ನ ಪೆಸರ್ಗೇಳಲೊಡಂ ಬೆಮರಿಂದೆ ಕಣ್ಣಲಾ । ಗೆನೆ ನೆಱೆನಾಂದು ಪತ್ತಿದ ನಿಜಾಂಶುಕಮಂ ಪುಳಕಂಗಳೆತ್ತಿ ಕಾ । ಮನ ಸರದಿಂದೆ ಲಜ್ಜೆ ಪರಿಯಲ್ಪಡವೆತ್ತನುರಾಗವಿಭ್ರಮಂ । ಜನಿಯಿಸಲಾಗಳಾಕುಲತೆಯಂ ತಳೆದೆನ್ನ ನೊಱಲ್ದು ನೋಡಿದಳ್ ॥ ೩೧೪

ವ॥ ಅನಂತರಮೆನ್ನನಿಂತೆಂದಳ್ ನೀನೆನಗೆರಡಿಲ್ಲದೆ ಕೂಡಿಪ್ಪೆಯೆಂಬುದ ನಿಂಬಾಗಱಿದೆ ನಾದೊಡ ಮಕಠೋರಶಿರೀಷಪುಷ್ಪಸುಕುಮಾರಪ್ರಕೃತಿಯಪ್ಪ ನಾರೀಜನಕೆ ನಿಜದಿಂ ಪ್ರಾಗಲ್ಭ್ಯಂ ದೊರಕೊಳ್ವುದಲ್ಲೆನೆ ವಿಶೇಷದಿಂ ಬಾಲಭಾವಮನಪ್ಪು ಕೆಯ್ದ ಕುಮಾರೀಜನಕ್ಕೆ ಮುನ್ನಮೆ ದೊರೆಕೊಳದು ತಾನೆ ಪೇಳ್ದಟ್ಟುವುದುಂ ಸಾಹಸಮದೆಂತೆನೆ ॥ ೩೧೫

---

೩೧೨. ಅತನೊಳ್ — ಆ ಮನ್ಮಥನಲ್ಲಿ ; ನೆಱೆ—ಸಂಪೂರ್ಣವಾಗಿ : ಉಂಟು —ಇರುವದು ; ನಿತ್ತರಿಸಲ್—ಕಡೆಹಾಯುವದಕ್ಕೆ; ಇತ್ತನಿಲ್ಲಂ—ಅವಕಾಶವನ್ನು ಕೊಡಲಿಲ್ಲ; ಇಮ್ಮಡಿಯ ಹೃದಯದಿಂ—ದ್ವಿಗುಣಿತವಾದ ಮನಸ್ಸಿನಿಂದ; ಅತ್ಯನುರಕ್ತೆಯಾದ—ಚಂದ್ರಾಪೀಡನಲ್ಲಿ ಅತ್ಯಂತಾನುರಾಗವಿಶಿಷ್ಟಳಾದ; ಎನಗೆ—ನನ್ನ ವಿಷಯದಲ್ಲಿ; ಎರಡಿಲ್ಲದೆ — ಭೇದವಿಲ್ಲದೆ ನೀನು ಕೂಡಿಪ್ಪೆ.

೩೧೩. ಇಲ್ಲಿಗೆ—ಈವಿಷಯದಲ್ಲಿ; ಅದಕ್ಕೆ—ಆದಕಾರಣ.

೩೧೪. ಕಣ್ಣಲಾಗೆನೆ—ಕ್ಷಣಮಾತ್ರದಲ್ಲಿ; ಪಡವೆತ್ತ—ಅವಕಾಶವನ್ನು ಪಡೆದ; ಅನುರಾಗ—ಪ್ರೀತಿಯು ; ವಿಭ್ರಮಂ—ವಿಲಾಸವು ; ಬರಲ್ಕು—ಪ್ರೀತಿಸಿ.

ವೃ॥ ಪಡೆದೆನ್ನಂ ಕಾಮನಿತ್ತಂ ತನಗೆನಲದು ಪೊರ್ದ್ದಲ್ಕೆವಂ ಕೂ
ರ್ಪ್ಪೆನಾನೆಂ। ಬುದು ವೇಶ್ಯಾಲಾಪಮಾಂತನ್ನಯ ವಿರಹದೆ ಸತ್ತಪ್ಪೆನೆಂಬಂದು
ದೃಷ್ಟ॥ ಕ್ಕದಸತ್ಯಂ ಬರ್ಪ್ಪೆನಾನೆಂಬುದು ಚಪಲತೆ ತಾಂಬರ್ಪ್ಪದೆಂದಂ
ದು ಸಾಭಾ। ಗ್ಯದಗರ್ವಂ ಮೇಲೆಬಿಳ್ದಾನೆಳಸಿದಪೆನೆನ ಲ್ಬಂಧಕೀಧಾರ್ಷ್ಟ್ಯ
ಮಲ್ತೇ॥ ೩೧೬

ವ॥ ಅದಱಿನೊಂದುಮಂ ಪೇಳ್ದಟ್ಟಲಱಿಯೆನಿತ್ತ ಚಿತ್ತಜನುಂ ನಿತ್ತರಿಸಲಿತ್ತಪನಿಲ್ಲೆಂತಾನು ಮಖಿಲಜನಾವಿಭಾವ್ಯನಾಗಿ ಸಿದ್ಧನಂತೆನಗೆಡೆವಿಡದೆ ರೂಪುದೋಱುಸುವ ಸಂಕಲ್ಪಮಯನಪ್ಪ ಯುವರಾಜನ ಮದೀಯವಿರಹಮರಣಭಯಹರಣನಪ್ಪುದಕ್ಕೆ [ಕಾರಣನೆ]ಂದು ಕಾದಂಬರಿ ನುಡಿದುಸಿರದಿರ್ಪ್ಪುದುಂ॥ ೩೧೭

ಕಂ॥ ಬರಪಾರದೆ ದೂಪವಿಯರ। ಹರಿಸದೆ ಮಳೆಮೂಜುಕಾಳಗ
ತ್ತಲೆಯೆಂದೋ॥ ಸರಿಸಿದೆ ಮನವೊಲ್ದಾಗ। ಳ್ಕೆರೆಯ ಲೊದ್ದೆರೆಕೊಳ್ವರ
ತಮೆ ಸಂಕಲ್ಪರತಂ॥ ಎಂದು.— ೩೧೮

* ವೃ॥ ಬಸೆದಪ್ಪಲ್ [ತಾನದಿಲ್ಲಂ ಕುಚಯುಗಳತಿರೋಧಾನಜಾತಶ್ರ
ಮಂ] ಚುಂ। ಬಿಸುವಾಗಳ್ಕಬ್ಬಮಿಲ್ಲವ್ರಣನಖಮುಖದಂತಕ್ಷತಂನಾಣ್ಗೆಪ

---

೩೧೬. ಪೊರ್ದ್ದಲ್—ಸೇರಿಕೊಳ್ಳುವದಕೆ; ತನ್ನಯ—ಚಂದ್ರಾಪೀಡನ; ದೃಷ್ಟಕ್ಕೆ—ಕಂಡದ್ದಕ್ಕೆ; ಅಸತ್ಯಂ—ಅಯಥಾರ್ಥವು; ಅಂದರೆ ಅನುಭವವಿರೋಧವು.

೩೧೭. ಸಿದ್ಧನಂತೆ—ಸಿದ್ಧಪುರುಷನಹಾಗೆ; ಅಖಿಲಜನಾವಿಭಾವ್ಯನಾಗಿ—ಎಲ್ಲರಿಗೂ ಕಾಣಿಸಿಕೊಳ್ಳದವನಾಗಿ.

೩೧೮. ಬರವಂ+ಪಾರದೆ=ಬರಪಾರದೆ—ಆತನ ಆಗಮನವನ್ನು ಕಾದಿರದೆ; ದೂದವಿಯರ—ದೂತಿಯರನ್ನು; ಹರಿಸದೆ—ಆತನಬಳಿಗೆ ಓಡಿಸದೆ; ಓಸರಿಸದೆ—ಹಿಂಜರಿಯದೆ; ಬರಪಾರದೆ ಎಂಬುವದು ಕ್ರಿಯಾಸನ್ನು ಪ್ರಾಪ್ತಪದಾಂತವ್ಯಂಜನಲೋಪ ಬಂದಿರುವದು. ಶ.ಮ. ಸೂ. ೧೩೩.

೩೧೯. ಅವ್ರಣ—ಗಾಯವಿಲ್ಲದ; ನಖಮುಖದಂತಕ್ಷತಂ, ನಾಣ್ಗೆ ಪಕ್ಕಾಗಿಸದು—ಲಜ್ಜೆಗೆಗುರಿಮಾಡವು; ಅಳಕೆಗಳಂ—ಕುಂತಲಗಳನ್ನು; ಸೂಸದು—ಕೆದರದು; ಎಂಬ—ಹೀಗೆನ್ನಿಸಿಕೊಳ್ಳುವ; ಸಂಕಲ್ಪಸಮಾಯೋಗಂ—ಸಂಕಲ್ಪರತಿಯು; ವಿಯೋಗಾಕುಲಕುಲಲಲನಾಜೀವನಾಧಾರಮಲ್ತೇ ಎಂದನ್ವಯವು.

ಕ್ಕಾ ॥ ಗಿಸದೆಂತುಂಕುಂತಳೋತ್ಕರ್ಷಣವುಳಕೆಗಳಂ ಸೂಸದೆಂಬೊಂದುಸಂಕ । ಲ್ಪಸವಾಯೆೋಗಂವಿಯೋಗಾಕುಲಕುಲಲಲನಾಜೀವ [ನಾಧಾರ] ಮಲ್ತೇ ॥ ೩೧೯

ವ ॥ ಇಂತೆನ್ನೊಳ್ಬಗೆಯುತ್ತಿರ್ಪನ್ನೆಗಂ ದಿವಸಾವಸಾನಸಮಯದೊಳನುರಕ್ತೆಯಾದ ಕಾದಂಬರೀದೇವಿಯ ಹೃದಯಮೆ ಪೋದಪುದೆಂಬಂತೆ ರವಿಬಿಂಬಮುಪರಾಂಬುಧಿವಿಲಂಬಿಯಾಗೆ ॥ ೩೨೦

ಕಂ ॥ ತರುಣಿಯುವಿಯೋಗತಾಪ । ಕ್ಕೆ ರಜನಿಯುಂ ಕಳದಿಯಂತೆ ತಳರ್ವಾಸಂ ಬಿ ॥ ತ್ತರಿಸುತ್ತಮಿರ್ದ್ದಳೆಂಬಂ । ತಿರೆ ಬಿತ್ತರಿಸಿತ್ತು ಸಾಂದ್ರಸಂಧ್ಯಾರಾಗಂ ॥ ೩೨೧

ವ ॥ ಅನ್ನಾಸಮಯದೊಳ್ ಗಂಧರ್ವರಾಜನಂದನೆ ಸುರಭಿಗಂಧೋದ್ಗಾರಿಗಳಪ್ಪ ದೀವಿಗೆಗಳಂ ಪಿಡಿದು ದೀಪಧಾರಣಿಯರ್ವ್ವಂದು ನಿಜನಿಯೋಗಾಶೂನ್ಯಾರ್ಥಮಾಗಿ ಗೆಂಟಿಂಜೊಳ್ ಬಳಸಲಮಂ ಸೈರಿಸದೆ ಸಿವಾರಿಸುತ್ತಮಿರ್ದ್ದರ್ ॥ ೩೨೨

ಕಂ ॥ ಬದವಿದ ತನುರುಚಿಯೊಳೊಪ್ಪಿ । ಯೆ ದೀಪಿಕಾಪ್ರಕರಮತನುಶರಸಂತತಿಯಿಂ ॥ ಪ್ರದಿದಪ್ರೊಲಿರ್ದ್ದಳ್ಕ್ಮಗುಳೇ । ಉದಿದ ಚಂಪಕಲತೆವ್ರೊಲಿರ್ದ್ದಳಂತಾಕ್ಷಣದೊಳ್ ॥ ೩೨೩

ವ ॥ ಅನ್ನು ಕಿಱದುಬೇಗಮಿದ್ದರ್ ಪೊಱಗಿರ್ದ್ದಿರ್ವ್ವಂ ಕಾದಂಬರಿ ಬೆಸಗೊಳ್ವುದು ಮಾವಿರ್ದ್ದಪೆವೆಂಬಂತೆ ಕಲಹಂಸಕಲಾಲಾಪಮೃದುರವಂಗ

---

೩೨೨. ನಿಜನಿಯೋಗಾಶೂನ್ಯಾರ್ಥಮಾಗಿ—ತಮ್ಮ ಊಳಿಗವನ್ನು ನಿಲ್ಲಿಸಬಾರದೆಂದು: ಗೆಂಟಿಂಜೊಳ್—ದೂರದಲ್ಲಿ; ಬಳಸಲ್—ಸುತ್ತಲೂನಿಲ್ಲಲು.

೩೨೩. ಅತನು ಶರಸಂತತಿಯಿಂ ಪ್ರದಿದಪ್ರೊಲಿರ್ದ್ದಳ್, ಅಂತೆ—ಹಾಗೆಯೆ; ಚಂಪಕಲತೆವೊಲ್ ಇರ್ದ್ದಳ್ ಎಂದನ್ವಯವು.

*ನ್ರೊಸದಪ್ಪುಲ್............... ಚಂ । ಬಿಸುಪಾಳ್ಲಬ್ಧಮಿಲ್ಲಬ್ರಣನಬಮಬದಂತಕ್ಷತಂ ನಾಣ್ಮೆಪಕಾ । ಗಿಸದೆಂತುಂಕುಂತಳೋತ್ಕರ್ಷಣವುಳಕೆಗಳಂ ಸೂಸದೆಂಬೊಂದುಸಂಕ । ಲ್ಪಸವಾಯೋಗ್ಯಂ ಸಯೋಗಾಕುಳಲಲನಾ ಜೀವಮಾರಾವಮಲ್ತೇ॥

ೞಪ್ಪ ನೂಪುರರವಂಗಳುಸ್ಮೆ ಬೆಸನಂ ಪಾಱುತ್ತಿರ್ದ ಪರಿಜನಂಗಳಂ ನೋಡಿ ತರಳಿಕೆಯಕಯ್ಯತಂಬುಲಮಂ ತಳೆದು ಕೊಂಡೆನಗೆ ಪಿರಿದನುಗ್ರಹದಿನಿತ್ತು ಕೇಯೂರಕ ನೀಂ ಪತ್ರಲೇಖೆಯನೊಡಗೊಂಡು ಪೋಗಿ ಕಟಕಮಂ ಪುಗಿಸೆಂದು ತನ್ನ ತೊಟ್ಟ ತೊಡಿಗೆಗಳೆಲ್ಲಮನೆನಗಂಗಚಿತ್ತಮನಿತ್ತೆಂತಾನುಂ ಬೀಳ್ಕೊಳಿಸಿ ಕಳಿಪಿ ತ್ವದೀಯಪ್ರೇಮಪ್ರಸಾರಿತದೃಷ್ಟಿಗಳನೆನ್ನಂ ಕಿಱುವಂತರಮಂ ಕಳಿಪುತ್ತಂ ಬರೆ ಕೇಯೂರಕಂ ಬೆರಸು ಮೇಘನಾದನಲ್ಲಿಗೆ ವಂದಾಗಳಾತಂ ದೇವರ್ಬ್ಬೆಸಸಿದಂದದೊಳ್ ಕೇಯೂರಕಂಗೆ ಪೇಳ್ವುದುಮದೆಲ್ಲಮಂ ಕೇಳ್ದಾತಂ ಹೇಮಕೂಟಕ್ಕೆ ಪೋದನಾನುಂ ಮೇಘನಾದನೊಡನಿತ್ತಂ ಬಂದೆನದಲ್ಲದೆಯುಂ ॥ ೩೭೪

ಕಂ॥ ನಿನ್ನಯ ವಿರಹೋದ್ರೇಕದಿ । ನಿನ್ನಂ ತಳಿರ್ವಸೆಯಮೇ
ಲೆ ಪೊರಳುತ್ತಿರ್ದ್ದ ॥ ಕನ್ನೆಯ ರೂಪೆನ್ನಿದಿರೊಳ್ । ಸನ್ನಿದಮಾದಂತೆ
ತೋಱುತಿರ್ದ್ದಪುದೀಗಳ್ ॥ ೩೭೫

ವ॥ ಮತ್ತಮಾಚಿತ್ರರಥನಂದನೆಯ ಮದನಾನಲಂ ದಿನಕರೋದಯಂ ಮೊದಲ್ಗೊಂಡು ಸೂರ್ಯಕಾಂತೋಪಲಾನಲನಂತೆ ಗಾಳಿಯಿಲ್ಲದುರಿಯುತಂ ಪರಿಜನಂಗಳ ಕಯ್ಯಕೆಂದಳಿರಸಂದಣಿಯೊಳಂ ನಾಂದಬೀಸುವ ಬಿಜ್ಜಣಿಗೆಗಳ ತೋರಸೀರ್ಪನಿಯ ಸರಿಯೊಳಂ ನಂದನಹರಿಚಂದನಚ್ಛಟಾಚ್ಛುರಣದೊಳಮೆಡವಱಿಯದೆ ಪುಡಿಗುಟ್ಟಿದಮುತ್ತಿನಮಳಲ್ಗೆವಱಿದ ಮಣಿಕುಟ್ಟಿಮದೊಳಂ ಮಾಣದುತ್ಕೀಲಿತದಂತಮಯಕಲಹಂಸಪಙ್ಕ್ತಿಮುಕ್ತಾಂಬುಧಾರೆ

---

೩೭೩. ಬೆಸನಂಪಾರುತ್ತಂ—ಆಜ್ಞೆಯನ್ನು ನಿರೀಕ್ಷಿಸುತ್ತ; ತಳೆದು—ತನ್ನ ಹಸ್ತಕ್ಕೆ ತೆಗೆದುಕೊಂಡು: ಅಂಗಚಿತ್ತಮನಿತ್ತು—ಉಡುಗೊರೆಯನ್ನಾಗಿ ಕೊಟ್ಟು.

೩೭೫. ತಳಿರ್ವಸೆ—ಚಿಗುರಿನಹಾಸಿಗೆ: ಸನ್ನಿದಮಾದಂತೆ—ಸಮೀಪವರ್ತಿಯಾದಂತೆ.

೩೭೬. ನಂದನ—ನಂದನವನದ; ಹರಿಚಂದನ—ಶ್ರೀಗಂಧದ; ಛಟಾ—ಧಾರೆಗಳ; ಛುರಣದೊಳಂ—ಸೇಚನೆಯಿಂದಲೂ; ಎಡೆವಱಿಯದೆ—ವಿಚ್ಛಿತ್ತಿಯನ್ನು ಪಡೆಯದೆ ಅಂದರೆ ಶಾಂತವಾಗದೆ; ಪುಡಿಗುಟ್ಟಿದ—ಚೂರ್ಣವಂಮಾಡಿದ; ಮುತ್ತಿನ ಮಳಲ್ಗೆವಱಿದ—ಮುತ್ತಿನಪುಡಿಯನ್ನು ಹರಡಿದ; ಕುಟ್ಟಿಮದೊಳಂ—ನಿಬದ್ಧಭೂಮಿಯಿಂದಲೂ; ಅಂದರೆ ನಿಬದ್ಧಭೂಮಿಯಲ್ಲಿ ಹೊರಳುವದರಿಂದಲೂ; ಮಾಣದೆ—ನಿವಾರಿತವಾ

ಗಳಪ್ಪ ಧಾರಾಗೃಹಂಗಳನುಪಶಮಿಸದಂತೆಂತುವಿಚಲಿತ ಜಲಯಂತ್ರವಿನಿರ್ಗಳಿತಂಗಳಪ್ಪ ಶಿಶಿರಶೀಕರನಿಕರತಾರಕಿತ ವಾರಿಧಾರೆಗಳಿಂ ತಳ್ಪೊಯ್ಯುವದಂತಂತೆ ಸಿಡಿಲಕಿಚ್ಚಿನ ವೊಲಗ್ಗಳಮುರಿವುದಂತು ಮಲ್ಲದೆಯುಂ ॥ ೩೧೬

ಕಂ ॥ ಆಳುರುತ್ತಮಿರ್ಪ್ಪ ಮದನಾ । ನಳನಿಂದೆಂತೆಂತು ಬೇವುದನಿತಂತತಿನಿ ॥ ಮರ್ಗಳಮಪ್ಪುದು ಲಾವಣ್ಯಂ । ನಳನಾನನೆಗಗ್ನಿಶೌಚವಸ್ತ್ರದತೆಱದಿಂ ॥ ೩೧೭

ವ ॥ ಅನ್ತು ಮಲ್ಲದೆಯುಂ.—

ವೃ ॥ ಮೆಲ್ಲಿದುವಪ್ಪ ವಾರಿಕಣಜಾಲದೆ ಮೌಕ್ತಿಕಜಾಲಮಪ್ಪವೊಲ್। ಮೆಲ್ಲೆರ್ದೆಯುಂ ವಿಯೋಗಿಜನಕಂತದು ಕಲ್ಲೆರ್ದೆಯಪ್ಪುದಲ್ತೆ ಅಂ ॥ ತಲ್ಲದೊಡಾವಗಂ ಕರಗದಿರ್ಪ್ಪರೆ ಪೆರ್ಚ್ಚಿದತಾಪದಿಂದೆ ಮೋ। ಣ್ಣಲ್ಲರ ಕೂಡುವಾಸೆಯೆ ಬರ್ದುಂಕುವುದಕ್ಕೆನಿಮಿತ್ತಮಾಗದೇ ॥ ೩೧೮

ವ ॥ *[ಅನ್ತಾ ಕಾಂತೆಗಾದ ಸಂತಾಪಮಂ ಕನಸಿನೊಳಾದೊಡಂ ಬರ್ದುಂಕುವುದಕ್ಕರಿದೆಂಬುದಂ ನೀಂಕಂಡುದಿಲ್ಲ] ನಿನಗದೇನೆಂದು ಪೇಳ್ವೆನಾವುದುಪಾಯದಿಂ ಪ್ರತ್ಯಕ್ಷಂಮಾಡಿತೋಱುವೆಂ ಪ್ರಚಂಡಕಿರಣಾತಪಸಹಸ್ರಂಗಳುಮಂ ಸೈರಿಸುವ ಸರಸಿಜಂಗಳು ಮಾಕೆಯ ಮೆಯ್ಸೋಂಕಿದನಿತ

ಗದೆ; ವಾರಿಧಾರೆಗಳಿಂ ಎಂತೆಂತು, ತಳ್ಪೊಯ್ಯುವದು—ಹೊಡೆಯಲ್ಪಡುವದೊ; ಅಂತಂತು—ಹಾಗೆಹಾಗೆ; ಅಗ್ಗಳಂ—ಅಧಿಕವಾಗಿ; ಉರಿವುದು—ಜ್ವಲಿಸುವದು;

೩೧೭. ಆಳುರುತ್ತಮಿರ್ಪ್ಪ—ವ್ಯಾಪಿಸುತ್ತಿರುವ; ಅಗ್ನಿಶೌಚವಸ್ತ್ರ—ಉಪ್ಪೆಗೆಹಾಕಿದಬಟ್ಟೆ.

೩೧೮. ಅಪ್ಪುದಲ್ತೆ+ಅಂತಲ್ಲದೊಡೆ; ಇಲ್ಲಿ ಅಲ್ತೆ ಎಂಬನಿಪಾತಕ್ಕೆ ಸ್ವರಪರವಾಗಿರುವದರಿಂದ ಸಂಧಿಯಿಲ್ಲ. ಶ.ಶ. ಸೂ. ೪೪.

೩೧೯. ಅಂತು—ಪೂರ್ವೋಕ್ತಪ್ರಕಾರವಾಗಿ; ಬರ್ದುಂಕುವದಕ್ಕರಿದೆಂಬುದಂ—ಜೀವಿಸುವದಕ್ಕೆ ಅಸಾಧ್ಯವಾದ; ಕಾಂತೆಗಾದ ಸಂತಾಪಮಂ,—ನೀಂಕನಸಿನೊಳಾದೊಡಂ, ಕಂಡುದಿಲ್ಲ—ನೋಡಲಿಲ್ಲ; ಕಱಂಗಿ—ಕಪ್ಪಾಗಿ; ಕರಿಯುಸ್ಸವು—ಸೀದು

*[ಅಂತಾಕಾಂತೆಗಾದ ಸಂತಾಪಮು ಕನಸಿನೊಳಾದೊಡಂ ಬರ್ದುಂ
ಕುವುದಕ್ಕ ರಿದುಮುದಂನೀಂಕಂಡೆಮಿಲ]

ಬೞಿಕಮಿಂಗಿ ಕರಿಯುಪ್ಪ ವದುಕಾರಣದಿ ನಕಾರಣದಾರುಣನಪ್ಪ ಮನ್ಮ ಥನಿನೆಡೆವಿಡದೆ ಬೇವಸಂಬಡುತಿರ್ದ್ದಳದಲ್ಲದೆಯುಂ ॥ ೩೨೯

ಕಂ॥ ತರುಣಿಗೆ ದೇವ ನಿಜಾನು । ಸ್ಮರಣದೆ ಮುಂದ್ಯೆಸಿ ಮೆಯ್ಯೊ ಳುಣ್ಮಿದ ಪುಳಕಾಂ ॥ ಕುರನಿಕರಂ ಕುಸುಮಾಯುಧ । ಶರಪಾತಕ್ಕಗಿದು ತೊಟ್ಟ ಕವಚಮಿದೆನಿಕುಂ ॥ ೩೩೦

ವೃ॥ ಚಕಿತಮೃಗೀವಿಲೋಚನೆಯ ಸುಯ್ಯೆಲರಿಂದೆ ತೆರಳ್ದು ಪಾಱು ವಂ । ಶುಕಮನದೊರ್ಮ್ಮೆ ಯಾಪ್ರುಳುಕಿತೋದ್ಧಕುಚದ್ವಯದೊಳ್ತಗು ಳ್ಚುತಂ ॥ ಪ್ರಕಟಿಸಿದಂತೆ ತೋಱುವುದು ನಿನ್ನಯ ಕಯ್ಪಿಡಿಯಲ್ಕೆ ವೇಡಿ ಕಂ । ಟಕ ಶಯನ ವ್ರತಾಚರಣಮಂ ತಳೆದೊಂದಿರವಂ ಕ ರಾಂಬುಜಂ ॥

ಕಂ ॥ ಅರುಣಮಣಿವಲಯರುಚಿ ಪ । ರ್ವಿರಲಂತರ್ಜ್ವಲಿತ ಮದನಶಿ ಖಿ ಪರ್ವಿದುದೆಂ ॥ ದಿರದೆ ಬಿದಿರ್ವಳ್ಕದಪಿನ । ಭರದಿಂ ಜೋವೇಱಿದೊಂ ದು ಕರಕಿಸಲಯಮಂ ॥ ಅದಲ್ಲದೆಯುಂ.— ೩೩೨

ವ ॥ ಚರಣದೆ ಕಾಂಚಿಯುಂ ಗುರುನಿತಂಬದ ಪರ್ವುಗೆಯಿಂದೆ ಮ ಧ್ಯಮಂ । ನೆರೆವತಿತೃಷ್ಣೆಯಿಂ ಹೃದಯಮಂ ಕುಚದೊಳ್ನಳನೀದಳಂಗಳಂ॥ ಕೊರಲೊಳಿ ಜೀವಮುಂ ಕರಸರೋರುಹದೊಳ್ಕದಪಂ ಲಲಾಟದೊ । ಳ್ಪರೆ ದ ಕುರುಳ್ಗಳಂ ವಿರಹವಿಹ್ವಲೆಯಾಗಿ ಲತಾಂಗಿ ತಾಳ್ದುವಳ್ ॥ ೩೩೩

ವ ॥ ಅದಲ್ಲದೆಯು ವೋರೊರ್ಮ್ಮೆ ರಣರಣಕವ್ಯ ಥಾವ್ಯಜನ ಪಲ್ಲವ ಭಂಗ ವಾದಪ್ಪುದೆಂದಂಜಿ ನಡುಗುವಂತೆ ನಿಡುಸುಯ್ಯಗಾಳಿಯಿಂ ನಡುಗುವ

ಹೋಗುವವು; ಬೇವಸಂಬಡುತಿರ್ದ್ದಳ್—ವ್ಯಥೆಪಡುತ್ತಿರ್ದಳು.

೩೩೧. ತೆರಳ್ದು—ಚಲಿಸಿ ; ತಗುಳ್ಚುತಂ—ಸೇರಿಸುತ್ತ ; ಬೇಡಿ—ಅಪೇಕ್ಷಿಸಿ.

೩೩೨. ಜೋವೇಱಿದ—ಜೇಡಾದ ; ಬಿದಿರ್ಪಳ್—ಕೊಡಹುವಳು.

೩೩೩. ಚರಣದ—ಕಾಲುಗಳಲ್ಲಿ; ಕಾಚಿಯಂ —ಉಡೆನೂಲನ್ನು ; ತಾಳ್ದ ವಳ್—ಧರಿಸುವಳು ವಿರಹದಿಂದ ಕೃಶಳಾಗಿದ್ದಳೆಂದಭಿಪ್ರಾಯವು.

೩೩೪. ಒರೊರ್ಮೆ—ಬಂದೊಂದುವೇಳೆಯಲ್ಲಿ; ಒರ್ಮ್ಮೆ+ಒರ್ಮೆ= ಒರೊರ್ಮೆ; ಶ.ಮ. ಸೂ. ೧೪೦. ೧೯೩.

ಲತಾಮಂಟಪದೊಳಿರ್ಪ್ಪಳೊರ್ಮ್ಮೊರ್ಮ್ಮೆ ವಿರಹದತೊಡಿಗೆಗಳಪ್ಪ ಮೃಣಾಳಂಗಳೆಲ್ಲಮಂ ಮುಱಿಯಿಸದಿರೆಂದು ಕಯ್ಮುಗಿವಂತೆ ಮುಗಿವ ಬಯಲ್ದಾವರೆಗಳೊಳಿರ್ಪ್ಪಳೊರ್ಮ್ಮೊರ್ಮ್ಮೆ ಪ್ರವಾಸಿಗೆ ತಿಱಿವರೆಂಬ ಭಯದಿಂ ಮುಳುಂಗಿದಚೆನ್ನೆಯ್ದಿಲ್ಗಳಂತಿರೆ ನಿರಂತರಾಶ್ರುಪಾತದಿಂ ಕೆಂಪುದಳೆದ ಕಣ್ಮಲರನೊಳಕೆಯ್ದು ಪವನದ ತಿಳಿಗೊಳಂಗಳೊಳಂ ಪುಗುವಳೊರ್ಮ್ಮೊರ್ಮ್ಮೆ ತಳಿರ್ಪ್ಪೇಱಿದ ತಮಾಲವೀಧಿಗೆ ವಂದು ಸೆಳೆಗೊಂಬಂ ಪಿಡಿದು ನೇಲ್ದು ನಿಮೀಲಿತನಯನೆಯಾಗಿ ಕಿಱಿದುಬೇಗಮಿರ್ಪ್ಪಳೊರ್ಮ್ಮೊರ್ಮ್ಮೆ ಸಂಗೀತಗೃಹಕ್ಕೆ ಬಂದು ಮಧುರಮುರಜಲಯಗತಿಲಾಸ್ಯಜನಿತ ಖೇದದಿಂ ಪರವಶೆಯಾಗಿರ್ಪ್ಪಳೊರ್ಮ್ಮೊರ್ಮ್ಮೆ ವಿಮುಕ್ತಜಲಧಾರೆಯಪ್ಪ ಧಾರಾಗೃಹಕ್ಕೆ ಬಂದು ಕದಂಬಕಲಿಕೆಯಂತೆ ಘನಜಲಧಾರಾಶೀಕರಾಸಾರದಿಂ ಪುಲಕಿತಾಂಗಿಯಾಗಿ ನಡುಗುತ್ತಿರ್ಪ್ಪಳೊರ್ಮ್ಮೊರ್ಮ್ಮೆ ಶುದ್ಧಾಂತಕಮಲಿನೀತೀರಕ್ಕೆ ವಂದು ನಿನ್ನಮೆಯ್ವೆಂಕೆಯಿಂದೆಮಗಾಹಾರಮಪ್ಪಿಲ್ಲಿಯ ಮೃಣಾಳಂಗಳೆಲ್ಲಮಂ ಕೊರಗಿಸದಿರೆಂದು ಚಪ್ಪರಿಸುವಂತಿರ್ದ್ದ ಹಂಸಚಕ್ರವಾಕಂಗಳುಲಿಪಕ್ಕೆ ಬೆಗಡುಗೊಂಬಳೊರ್ಮ್ಮೊರ್ಮ್ಮೆ ರಮಣೀಯಪ್ರಮದವನಕ್ಕೆ ವಂದು ಶಿಶಿರೋಪಚಾರನಿಮಿತ್ತದಿನುಳ್ಕಲರ್ಗಳೆಲ್ಲಮಂ ತಿರಿದು ಕಿಡಿಸಿದಳೇಕೆಯೆಂದು ಜಿನಗುವಂತಿರ್ದ್ದ ಮಧುಕರನಿವಹಕ್ಕೆ ಪಿರಿದುಮುಬ್ಬೆಗಂಬಡುವಳೊರ್ಮ್ಮೊರ್ಮ್ಮೆ ಭವನಾಂಗಣಸಹಕಾರಭೂರುಹಕ್ಕೆ ವಂದು ತನ್ನ ಪಾಡುವಿಂಚರದಿಂದೆಮ್ಮ ಪಾಟಮಂ ಕೀಳ್ಮಾಡಿಪಳಿವಳೆಂಬ ಮುಳಿಸಿಂ ಗಜಱಿಗರ್ಜಿಸುವಂತಿರ್ದ್ದ ಕೋಗಿಲೆಗಳ ಜಡಿಪಕ್ಕೆ ಬೆದಱುವಳಂತು ಪಲತೆಱದೆ ಮದನದುಶ್ಚೇಷ್ಟಿತಾಯಾಸಂಗಳಿಂದಮೆ ಪಗಲ್ಗಳಂ ಕಳಿಪುವಳಂತುಮಲ್ಲದೆಯುಂ ॥ ೩೩೪

ರಣರಣಕವ್ಯಥಾ—ಮನ್ಮಥವ್ಯಥೆಯ ನಿವಾರಣೆಗೋಸ್ಕರ; ಪಲ್ಲವಭಂಗಂ—ಚಿಗುರನ್ನು ಕೊಯ್ಯುವದು; ಪ್ರವಾಸಿಗೆ—ಪುಷ್ಪಶಯ್ಯೆಗಾಗಿ; ತಿರಿವರ್—ಕೊಯ್ಯುವರು; ಕಣ್ಮಲರನೊಳಕೆಯ್ದು—ನೇತ್ರಪ್ರತಿಬಿಂಬವನ್ನು ಪಡೆದಿರುವ; ತಳಿರ್ಪ್ಪೇಱಿದ—ಚಿಗುರಿನಿಂದ ಕೂಡಿರುವ; ನೇಲ್ದು—ಜೋಲಾಡಿ; ಮೆಯ್ವೆಂಕೆಯಿಂ—ಶರೀರತಾಪದಿಂದ; ಚಪ್ಪರಿಸುವಂತೆ—ಗದರಿಸುವಹಾಗೆ; ಉಲಿಪಕ್ಕೆ—ಧ್ವನಿಗೆ; ಬೆಗಡುಗೊಂಬಳ್—ಹೆದರುವಳು; ಉಬ್ಬೆಗಂಬಡುವಳ್—ಭಯಪಡುವಳು; ಪಾಟಮಂ—ಗಾನವನ್ನು; ಗಜಱಿ—ಗದರಿಸಿ; ಜಡಿಪಕ್ಕೆ—ಗದರಿಕೆಗೆ.

ವೃ॥ ಅಮೃತಮಯೂಖನಿರ್ಮಲ*[ನಿಶೀಥಿನಿಯೊಳ್]ಲಲಿತಾಂಗ ಮಿಂ ಮುಕಾಂ । ತಮಯಮೆನಲ್ಕೆ ಬಿಂದುವಿಡುತಿರ್ಪ್ಪುದುಸುಯ್ಯಲರಂಬುರಾಶಿವಾ॥ ರಿಮಯಮೆನಲ್ಕೆ ಪೆರ್ಚ್ಚುವುದಪಾರಮನೋರಥಮುಂ ರಥಾಂಗಯು । ಗ್ಮ ಮಯಮೆನಲ್ಕೆ ಕೂಡದಣಮಾವಿಕ ಚೋತ್ಪಲಪತ್ರನೇತ್ರೆಯಾ ॥ ೩೩೫

ಅದಲ್ಲದೆಯುಂ.—

ಕಂ॥ ಪೊಳೆವ ಶಶಿಕಾಂತದರ್ಪಣ । ನಿಳಯದೊಳಲ್ಲಲ್ಲಿ ಪೊಳೆವ ತನ್ನಯ ನೆಳಲಂ ॥ ನಳಿನಾಕ್ಷಿ ಕಾಣುತಂ ಮನ । ದೊಳ್ ಪಲುವಲಿಯಾದೆ ನೆಂದು ಚಿಂತಿಸುತಿರ್ದ್ದಳ್ ॥ ೩೩೬

ಅಲರ್ದಲರ್ಗಳನುಗಳೊಳ್ಸರಿ । ಮಳಕ್ಕೆ ಪರಿತಂದು ಮುಸುಕುವಳಿ ಕುಲದಿಂದಾ ॥ ಕುಲತೆ ಪಿರಿದಾಗೆ ಮದನಾ । ನಲನಳುರಲ್ಕಾಂತೆ ಪೊತ್ತಿ ಪೊಗೆವಂತಿರ್ದ್ದಳ್ ॥ ೩೩೭

ವ॥ ಮತ್ತಮೇನೆಂದಱಿಯೆ ನದೊಂದುಮುಗ್ಧತೆಯ ನಪ್ಪುಕೆಯ್ದಂ ತೆ ವಿಲಾಸಮುಂ ತಾಳ್ದಿದಂತೆ ಮರುಳ್ವನಂತೊಡರ್ದಂತೆ ನೆಗಳುತ್ತಮಿರ್ಪ್ಪಳ ದೆಂತೆನೆ ॥ ೩೩೮

ವೃ॥ ಲಲನಾಮಂಜೀರನಾದಕ್ಕಲಿಗು ಮೆನುತೆ ಧಾರಾಗೃಹೋತ್ಕೀಲಿ ತೇಂದಯೂ । ಪಲಹಂಸಾಸ್ಯಂಗಳಂ ಮುದ್ರಿಸುವಳಿರುಳಗಲ್ದಪ್ಪುದೆಂ ವಜ್ರಸೂ ತ್ರಾ ॥ ವಳಿಯಿಂ ದಾಲೇಖ್ಯಚಕ್ರದ್ವಯದ ಚರಣಮಂ ಕಟ್ಟುವಳ್ಕರ್ಣ ಪೂರೋ । ತ್ಪಲದಿಂ ಚಿಂತಾರತಕ್ಕಾಟಿಸಿ ಮಣಿಮಯದೀಪಂಗಳಂ ನಂದೆ ಪೊಯ್ವಳ್ ॥ ೩೩೯

೩೩೫. ವಿಕಚೋತ್ಪಲಪತ್ರನೇತ್ರೆಯಾ, ಸುಯ್ಯಲರ್—ನಿಟ್ಟುಸುರು ; ಅಂಬು ರಾಶಿವಾರಿಮಯಮೆನಲ್ಕೆ—ಸಮುದ್ರಜಲಸ್ವರೂಪವಾದದ್ದು ಎಂಬಂತೆ ; ಪೆರ್ಚ್ಚುವುದು —ಹೆಚ್ಚುವುದು ; ಅಣಂ—ಸ್ವಲ್ಪವೂ : ಕೂಡದು—ಸೇರದು.

೩೩೬. ಪಲುವಲಿಯಾದೆಂ—ನಾನಾವಿಧಳಾದೆ.

೩೩೯. ಚಿಂತಾರತಕ್ಕೆ—ಸಂಕಲ್ಪ ಸಮಾಗಮಕ್ಕೆ ; ಆಟಿಸಿ—ಆತುರಪಟ್ಟು.

*[ನಿಶಾಳಿಕೆಯೊಳ್]

ವ॥ ಮುತ್ತಿನಾಕೆ ಜಲಕಣಿಕೆಯಂತೆ ನಳಿನೀದಳಂಗಳ ಮೇಲಿರ್ದ್ದು ನಡುಗುವಳ್ ನಳಿನಿಯಂತೆ ಶೀತಕರಸ್ಪರ್ಶನದಿಂ ಕೊರಗುವಳ್ ಚಂದ್ರಮೂರ್ತಿಯಂತೆ ಕಮಲನಿಕರಸ್ಖಲಿತಪಾದೆಯಾಗಿ ತೊಳಲುತ್ತಮಿರುಳಂ ಕಳಿಪುವಳ್ ಕುಮುದಿನಿಯಂತೆ ತಿಳಿಗೊಳಂಗಳೊಳ್ಮ್ಮೆಚ್ಛರ್ವೋಗಿ ಪಗಲಂ ಕಳಿಪುವಳ್ ಮಲಯನದಿಯಂತೆ ಚಂದನಪಲ್ಲವಕಲಿತಶಿಲಾತಲಂಗಳೊಳ್ಮ್ಮೆಯ್ಯನೀಡಾಡುವಳ್ ಕಂದಳಿಕೆಯಂತೆ ಶಿಶಿರಸಂಪರ್ಕಕ್ಕೆ ಕಂದಿಕುಂದುವಳಂತುಮಲ್ಲದೆಯುಂ ॥ ೩೪೦

ವೃ॥ ಯುವತೀರತ್ನಕ್ಕೆ ನಿನ್ನಾಕೃತಿಯೊಳೆ ಸತತಂ ಚಿತ್ರವಿದ್ಯಾವಿಲಾಸ್ತೈ । ಕವಿನೋದಂ ನಿನ್ನ ನಾಮಾಕ್ಷರಮೆ ವಿರಹದಾಹಪ್ರತೀಕಾರ ಮಂಮಾ॥ ಜುವ್ರಪಾಯಂ ನಿನ್ನ ಸಂಬಂಧಮೆ ಸಕಲರಹಸ್ಯಂಗಳಂ ನಿನ್ನ ವೃತ್ತಾಂತಂ । ತಮೆಸರ್ವಪ್ರಶ್ನಮುಂ ನಿನ್ನಯುಪೆಸಜಿ ಸಖೀಸಂಕುಲಕ್ಕೆಲ್ಲಮೀಗಳ್ ॥ ೩೪೧

ವ॥ ಎಂದಿವ್ರಮೊದಲಾಗಿ ಸೋನ್ಮಾದ ಸಪ್ರಸಾದ ಸನಿರ್ವೇದ ಸೋಪಾಲಂಭ ಸಾವಷ್ಟಂಭ ಸಾಭ್ಯುಪಗಮ ಸಸಂಭ್ರಮ ಸಪರಿಹಾಸ ಸರೋಷ ಸನಿರ್ವಿಶೇಷ ಸಾಭ್ಯರ್ಥನ ಸಾನುರಾಗ ಸಾತ್ಮಾರ್ಪಣಂಗಳೆನಿಸಿ ಸರಸಂಗಳಾಗಿಯುಂ ಮತಿಶೋಷಣಹೇತುಗಳುಂ ಕೋಮಲಂಗಳಾಗಿಯುಂ ಕಠೋರಂಗಳುಂ ಲಲಿತಂಗಳಾಗಿಯುಂ ಪ್ರೌಢಂಗಳುಂ ಮಧುರಂಗಳಾಗಿಯುಂ ದುಸ್ತ್ರವಂಗಳುಮಪ್ಪ ಕಾದಂಬರೀಸಂಬಂಧವಚನಂಗಳಂ ಪತ್ರಲೇಖೆ ಬಿನ್ನವಿಸುತ್ತಿರೆ ಸೊಲ್ಗುಪಿಂ ಕೇಳಲಾಱೆನೆಂದು ನಿಸರ್ಗಧೀರಪ್ರಕೃತಿಯಾಗಿಯುಂ ಅತಿಪರ್ಯಾಕುಲನಾದ ರಾಜಪುತ್ರನಂ ಪತ್ರಲೇಖೆಯಿಂತೆಂದಳ್ ॥ ೩೪೨

ಕಂ॥ ಇನಿವಿರಿದಪಸ್ಥ[ಗಳ ನೀ । ನನಿಮಿತ್ತಂಸ್ಯಜಿಸಿಯುಂ ನಿಜಂ
*ನಿಷ್ಠುರಣಾ] । ತ್ಮನೆ ಯಾಗಿ ಚಿತ್ರರಥನಂ । ಪನೆಯುಂ ಪೇಳಂತು ದೇವ
ಕಡೆಗಣಿಸುವುದೇ ॥ ೩೪೩

---

೩೪೦. ಕಮಲನಿಕರ—ತಾವರೆಹೂವುಗಳಲ್ಲಿ; ಸ್ಖಲಿತ—ತಪ್ಪಿದ, ಎಡವಿದ; ಪಾದ—ಕಿರಣ, ಚರಣ; ಕಂದಳಿಕೆಯಂತೆ—ಬಾಳೆಯಂತೆ.

*[ಗಳಸೀ । ನನಿಮಿತ್ತಂ ತ್ಯಜಿಸಿಯುಂ ನಿಜಾನಿಷ್ಠುರಣಾ ॥]

ವ॥ ಎಂದು ಪತ್ರಲೇಖೆ ಬಿನ್ನಪಂಗೆಯ್ಯೆ ಮದನಶರಶಲಾಕಾಕೀಲಿತಾಂತರಂಗನಾಗಿ ॥ ೩೪೪

ಕಂ॥ ಮನದಳಲಿಂ ಪೊಣ್ಮುವ ಕ। ಣ್ಬನಿದುಱುಗಲ ನೆವಮೆಯೊಳಾಂತು ನಿಡುಸುಯ್ಗ್ಗಧರಂ ॥ ತನಿಗೆತ್ತಲ್ ಮನಮಿಕ್ಕೆ। ಯ್ಯನೆ ನುಡಿದಂ ಪತ್ರಲೇಖೆಗವನಿಪತನಯಂ ॥ ಅದೆಂತೆನೆ.— ೩೪೫

ವೃ॥ ಎನಗನುರೂಪಲೀಲೆ ದೊರೆಕೊಂಡಿರದೆಂದಿನಿತುಂ ಮನೋರಥಂ। ಜನಿಯಿಸದೆಂದು ದೇವಿಯುರಗೆಯ್ತಮ*[ದೆಲ್ಲಮೆ]ಸಾಜಮೊಂದು ಕೆ॥ ಮ್ಮನೆ ಪಲವುಂ ವಿಕಲ್ಪಶತದಿಂದಮೆ ಸಂದಯುಮಾಯ್ತು ದಿವ್ಯಕಾ। ಮಿನಿಯರ ದೃಷ್ಟಪೂರ್ವತೆಯಿನಿನ್ನೆನಗೇವೆನೊಪೇಳ್ತಲೋದರೀ ॥ ೩೪೬

ವ॥ ಅದಲ್ಲದೆಯುಂ.—

ವೃ॥ ಪ್ರಮದದೊಳೆನ್ನ ಕಂಧರದೊಳಂದಿರುಳಿಕ್ಕಿದ ತೋರಹಾರಮುಂ। ಹಿಮಗೃಹಕಪ್ರವೃತ್ತಕಮು ಮಂತಿರೆ ನಿನ್ನಯಪೇಳ್ದಮಾತುಮಾ॥ ರಮಣಿಯ ದೊಂದು ಭಾವಗತಮಂ ನೆಱಸೂಚಿಸೆಮತ್ತೆ ಸಂದೆಗಂ। ಸಮನಿಸಿ ತೆಂದೊಡಿನ್ನೆನಗದೊಂದು ವಿಮೋಹಿಪ ಶಾಪಮಾಗದೇ ॥ ೩೪೭

ವ॥ ಎಂದು ಪತ್ರಲೇಖೆಯೊಡನೆ ನುಡಿಯುತ್ತಮಿರ್ದ್ದಾಪಗಲಂ ಕಳೆದು ಸಂಜೆಯಪ್ಪುದುಂ ತನ್ನ ಚಿಂತಾಸಂತಾಪದೊಳ್ ದಿಗಂತಮೆಲ್ಲಂ ಕಳ್ತಲಿ

---

೩೪೫. ತನಿಗೆತ್ತಲ್—ಬಹಳವಾಗಿ ನಡುಗಲು: ಮನಮಿಕ್ಕು—ಮನಸ್ಸನ್ನು ಮಾಡಿ.

೩೪೬. ಅನುರೂಪಲೀಲೆ—ದೇವತಾಸ್ತ್ರೀಯರಿಗೆ ಅನುರೂಪವಾದ ವಿಲಾಸ; ಎನಗೆ— ನನಗೆ; ದೊರೆಕೊಂಡಿರದೆಂದು—ಉಂಟಾಗಲಿಲ್ಲವೆಂದು; ದಿವ್ಯಕಾಮಿನಿಯರ ಅದೃಷ್ಟಪೂರ್ವತೆಯಿಂ; ದೇವಿಯುರಗೆಯ್ತಂ—ಕಾದಂಬರಿಯ ಶೃಂಗಾರಚೇಷ್ಟೆಯು; ಸಾಜಂ--ಆಕೆಗೆ ಸ್ವಭಾವಸಿದ್ಧವಾದದ್ದು. ಪಲವುಂವಿಕಲ್ಪಶತದಿಂ—ಅನೇಕವಿಧವಾದ ಆಲೋಚನೆಯಿಂದ; ಸಂದಯುಮಾಯ್ತು—ಸಂಶಯವುಂಟಾಯಿತು; ಏವೆನೊ—ಏನು ಮಾಡಲೊ.

*[ದೆನ್ನಯ]

ಸಿದುದೆಂಬಂತೆ ಕಳ್ತಲೆಕವಿಯೆ ತಂತಮ್ಮೊಳೋರೊಂದರ್ಕೆ ಪುಯ್ಯಲ್ಚುವಂತೆ ಕರುಣಾರುತಮ ನೊದವಿಸುತ್ತಂ ದುರ್ನಿವಾರ ವಿರಹವೇದನೋನ್ಮಥ್ಯಮಾನಮಾನಸಾಕುಲಮಪ್ಪ ಚಕೋರಯುಗಂಗಳ್ಗೆ ಮದನನ ಮಸೆದ ಕೂರ್ಗಣೆಗಳಂತಿರೆ ಧೂಳಿಧೂಸರಮಪ್ಪ ಚಂದ್ರಮಂಡಲಾಗ್ರ ಮಯೂಖಂಗಳ್ನಿಮಿರೆ ತತ್ಸಮಯದೊಳ್ ಶಯನತಲಕ್ಕೆ ವಂದುನ್ಮೀಲಿತನಯನನಾಗಿಯು ಮಪ್ರಾಪ್ತನಿದ್ರಾವಿನೋದನಾಗಿ ಚಿತ್ರರಥನಂದನೆಯಂ ನೆನೆಯುತ್ತಮಿರೆಯಿರೆ ‖ ೩೪೮

ವೃ॥ ತ್ವರಿತದೆ ಹೇಮಕೂಟನಗರಕ್ಕಿರದೆಯ್ದಿ ಬಳಲ್ದವೋಲ್ಮನೋ
ಹರಿಯ ಪದಾಬ್ಜದೊಳ್ಬೆರಸಿ ತೋಳ್ತೊಡೆಯೊಳ್ತೊಡರ್ದತ್ತು ಪೀನಪೀ ‖
ವರಕುಚದೊಳ್ಪೊರಳ್ದುದು ಮುಖೇಂದುವಿನೊಳ್ಪೊಳೆದತ್ತು ಕುಂತಲೋ
ತ್ಕರದೊಳಡಂಗಿತ್ತಂಗರುಚಿಯೊಳ್ ಮುಳುಗಿತ್ತು ಮನಂ ಮಹೀಶನಾ ‖

ವ॥ ಅನ್ತು ನಿರ್ಭರಸ್ನೇಹಾರ್ದ್ರೀಕೃತಾಂತರಂಗನಾಗಿ ನೆನೆಯುತ್ತಮಾಯಿರುಳಂ ಕಳಿಪೆ ನೇಸರ್ಮೂಡಲೊಡನೆ ‖ ೩೫೦

ವೃ॥ ಸುದತೀವೃತ್ತಾಂತಮಂ ಕೇಳ್ವೆನೆಗೆ ಮೆನಗೆ ಮೌನಂ ದಲೆಂ
ಬಂತು ಮಾತಾ । ಪದೆ ತದ್ವಕ್ತ್ರೇಂದು ಬಿಂಬಂ ಮಱೆಯೆನಿಸಿದುದೆಂಬಂ
ದಂದಿಂ ದೇನುಮಂ ಕಾ ‖ ಣದೆ ತತ್ಪ್ರೇಮಾಮೃತಾರ್ದ್ರೋಕ್ತಿಗಳೆ ಕಿವಿಗ
ಳೊಳ್ತೀವಿದಂತೇನುಮಂ ಕೇ । ಳದೆ ಕಾಮೋನ್ಮುಕ್ತಸಂಮೋಹನ ಶರಹ
ತಿಯಿಂ ಮೂಢನಾದಂತಿರಿರ್ದಂ ‖ ೩೫೧

ವ॥ ಅಂತಿರ್ದ್ದ ಮದನಾನಲದಹ್ಯಮಾನಾಂತಃಕರಣನಾಗಿರ್ದ್ದಂ ಗುರುಜನಂಗಳ್ಗೆ ಲಜ್ಜಿಸಿ ಮಾನಕನಕಾಚಲಂ ಶಿಶಿರೋಪಚಾರಂಗಳ್ಗೆ ಮೆಯ್ದೆರಲಾಱದೆ ‖ ೩೫೨

ವೃ॥ ಬಗಮೊಳ್ ಧೈರ್ಯಮಂ ಬಗೆದನಲ್ಲದೆ ಮನ್ಮಥಬಾಣಪೀಡೆ
ಯಂ । ಬಗೆಯನೆ ಲಜ್ಜೆಯಂ ಬಗೆದನಲ್ಲದೆ ತನ್ನ ಶರೀರಕಾರ್ಶ್ಯಮಂ ‖ ಬಗೆ

೩೫೩. ಬಗೆಯಂ+ಎ=ಬಗೆಯನೆ, ಬಗೆಯಲೇಯಿಲ್ಲ; ಬಗೆಯಾಂಎಂಬ

ಯನೆ ಪೆರ್ಮೆಯುಂ ಬಗೆದನಲ್ಲದೆ ಕಾಮವಿಕಾರವೇಗಮಂ । ಬಗೆಯನೆ ಭೂಭುಜಂ ಪಿರಿಯರಪ್ಪವರ್ಗಿಂತಿರೆದಲ್ನೆಗಳ್ತಿಗಳ್ ॥ ೩೫೩

ವ ॥ ಅದಲ್ಲದೆಯುಂ.—

ವೃ॥ ಮೊದಲಿಂಗಂಭೀರಭಾವಂ ತನಗೆ ನಿಜಮೆನಲ್ಸಂದ ರತ್ನಾಕರಂ ಕೌ । ಮುದಿಯಿಂದಂ ಕ್ಷೋಭಿಸಿದ್ದರ್ಂ ಸಹಜಮೆನಿಪ ತನ್ನೊಂದುಮ ರ್ಯಾದೆಯುಂ ದಾಂ ॥ ಟದಮ್ರೋ ಲಿಂತಪ್ಪ ವಸ್ಥಾಂತರ ಮಡಸಿದೊಡಂ ತನ್ನ ಮರ್ಯಾದೆಯುಂ ದಾಂ । ಟದನಂ ಗಾಂಭೀರ್ಯರತ್ನಾಕರನೃಪನ ನದೇಂಬ ಣ್ಣಿಪಂಬಣ್ಣಿಪಾತಂ ॥ ೩೫೪

ವ ॥ ಅನ್ತು ಧೀರೋದಾತ್ತವೃತ್ತಿಯ ನವಲಂಬಿಸುತಂ ಕತಿಪಯದಿನಂ ಗಳ್ ದಿನಸಹಸ್ರಾಯಮಾಣಮಾಗಿ ಪೋಗುತ್ತಮಿರಲೊಮ್ಮೆ ರಣರಣಕಾ ವಸ್ಥಾಂತರವಶದಿಂ ಲಬ್ಧಾವಸರನಾಗಿ ನಗರಿಯಂ ಪೊಱಮಟ್ಟು ಪೋಗಿ ॥

ವೃ॥ ತೆರೆದೊಂಗಲ್ಪೊರೆದಿರ್ದ್ದ ತಣ್ಣೆಲರ್ಗಳಿಂ ಮೆಲ್ನುಣ್ಬರಂಗೆಯ್ವ ಹಂ । ಸರಥಾಂಗಂಗಳ ನಿಪ್ಪರ್ವೆತ್ತೆಳವುಳಲ್ದಾಣಂಗಳಿಂ ಕಣ್ಗೆವಂ । ದಿರೆಶಿ ಪ್ರಾತಟಿನೀತಟ ಸ್ಥಲಿಗಳೊಳ್ ಲೀಲಾವಿನೋದೈಕ ತ । ತ್ಪರನಾಗಳ್ನ ಡಪಾಡುತಿರ್ದ್ದ ನವನೀಶಂ ಪತ್ರಲೇಖಾನ್ವಿತಂ । ೩೫೬

ವ । ಅಂತಿರ್ದ್ದ ತರಂಗಿಣೀತೀರಾಂತರದೊಳ್ ಕಾರ್ತಿಕೇಯನ ದೇಗು ಲಕಾಗಿ ದೂರಾಗಮನಖೇದ ನಿವೇದಕಂಗಳಪ್ಪ ಕೆಲವುಕುದುರೆಗಳ್ಬರಸಿ

ಭೂತಕಾಲನಿಷೇಧಕ್ರಿಯೆಯು ಅವಧಾರಣಾರ್ಥಕನಿಪಾತದೊಡನೆ ಕೂಡಿರುವದು; ಶ.ಮ. ಸೂ. ೨೨೨ ಇಂತಿರೆ—ಈವಿಧವಾದ; ನೆಗಳ್ತಿಗಳ್—ನಡತೆಗಳು; ಪಿರಿಯ ರಪ್ಪವರ್ಗೆ—ದೊಡ್ಡವರಿಗೆ: ದಲ್—ನಿಶ್ಚಯವು.

೩೫೬. ತೆರೆದೊಂಗಲ್ಪೊರೆದಿರ್ದ್ದ—ತೆರೆಗಳ ಸಮೂಹದಿಂದ ಪುಷ್ಟವಾಗಿದ್ದ; ಇಪ್ಪರ್ವೆತ್ತ—ದ್ರವವಿಶಿಷ್ಟವಾದ; ಎಳವುಳಿಲ್ದಾಣಂಗಳಿಂ—ಕೋಮಲವಾದ ಮರಳ ಗುಡ್ಡೆಗಳಸ್ಥಳಗಳಿಂದ; ನಡಪಾಡುತೆ—ತಿರಿಗಾಡುತ್ತ.

ಬಪ್ಪುದಂ ಕಂಡೀವಾರುವಂಗಳಾರವೆಂದಾರಯಲೊರ್ವನಂಕಳಿಪಿಮಱುವಾ
ರ್ತೆಗೇಳಲೆಂದು ತಾನು ಮೂರುವಪ್ಪನ್ನುಪ್ಪ ನೀರಿಂ ಪೋಱುಮಟ್ಟುರುದ್ರ
ಸುತಾಯುತನಕ್ಕೆ ಪೋಗಿತತ್ತುರಂಗಮುಂಗಳನತಿಕುತೂಹಲನಾಗಿನಿಂದುನೋ
ಡುತ್ತಂ ಪಕ್ಕದೆನಿಂದಪತ್ರಲೇಖೆಯುಂ ಬರೆತೆಗೆದು ॥ ೩೫೭

ಕಂ॥ ಜವವಳಿಯು ದಿದಿರೊಳೀ ಬ। ಪ್ಪವಾಜಿಗಳ ನಡುವೆ ಪೀಲಿ
ವಳೆಗಳ ನೆಳಲಿಂ ॥ ದವಿಭಾವ್ಯನೆನಿಸಿ ಬರುತಿ । ಪ್ಪವನೇಂ ಕೇಯೂರ
ನಾಗದಿಕ್ಕುವು ಪಿರಿದುಂ ॥ ೩೫೮

ವ॥ ಎಂದು ಪತ್ರಲೇಖೆಗೆ ತೋಱು ನುಡಿಯುತಿರ್ದ್ದ ಯುವರಾಜ
ದೇವನಂ ಕಂಡು ದೂರದಿಂ ಕುದುರೆಯಿಂದಮಿಳಿದೆಯ್ದೆವಂದು ॥ ೩೫೯

ಕಂ॥ ಒದವಿದ ವಿನಯುದಿ ನಡಿಗೆಱ । ಗಿದ ಕೇಯೂರಕನನಿತ್ತ
ಬಾಯೆನುತೆ ಪದಂ ॥ ಪೊದವೆ ತೆಗೆತೆಗೆದು ತಳ್ಕೈ । ಸಿದನಾಗಳ್ ನೃಪತಿ
ನಿಬಿಡನಿಜಭುಜಯುಗದಿಂ ॥ ೩೬೦

ವ॥ ಅನ್ನುತಳ್ಕೈಸಿ ಮತ್ತಂ ಕೃತನಮಸ್ಕಾರನಾದ ಕೇಯೂರಕನ
ನತಿಪ್ರೀತಿಯಿಂ ನೋಡಿ ನಿನ್ನಕಾಣ್ಕೆಯೊಳೆ ಸಪರಿವಾರೆಯಪ್ಪ ಕಾದಂಬರೀ
ದೇವಿಯ ಕುಶಲಮಱಿಯಲಾದುದು ನಿನ್ನಬರವಿಂಗೆ ನಿಮಿತ್ತಮುಂ ಬಳಕ್ಕೆಗ
ಳೆದು ಪೇಳೆಂದು ತನ್ನ ಮುಂದೆ ಸಾರ್ದ್ದಿರ್ದ್ದ ವಾರುವಂಗಳ್ಗಳ್ಕಿ ಬೆಗಡು
ಗೊಂಡ ಪಿಡಿಯನೇ ಕೇಯೂರಕನುಮುಂ ಪತ್ರಲೇಖೆಯುಮಂ ಪೆಱಗನೇಱು
ಸಿ ನಿಜಭವನಕ್ಕೆ ಬಂದು ಸಕಲರಾಜಲೋಕಮುಂ ವಿಸರ್ಜಿಸಿ ವಲ್ಲಭೋ

---

೩೫೭. ಜಸಿಬಪ್ಪುದಂ—ಗುಂಪಾಗಿಬರುವದನ್ನು: ಆರಯಲ್—ವಿಚಾರಿಸು
ಪದಕ್ಕೆ; ಮಱುವಾರ್ತೆ—ಪ್ರತ್ಯುತ್ತರ; ಬರೆತೆಗೆದು—ಕಯ್ಯನ್ನು ಹಿಡಿದು ಎಳೆದು.

೩೫೮. ಜವವಳಿಯುದೆ—ವೇಗತಪ್ಪದೆ; ಈಬಪ್ಪ—ಇದೋ ಬರುವ; ಪೀ
ಲಿವಳೆಗಳ—ನವಿಲುಗರಿಯ ಛತ್ರಿಗಳ; ನೆಳಲಿಂದೆ, ಅವಿಭಾವ್ಯಂ—ಗುರುತುಹಿಡಿಯುವ
ದಕ್ಕಾಗದವನು; ಎನಿಸಿ—ಆಗಿ.

೩೬೦. ಪದಂಪು—ಪ್ರೀತಿಯು; ಒದವೆ—ಉಂಟಾಗಲು; ತೆಗೆತೆಗೆದುತಳ್ಕೈಸಿ
—ಬಾರಿಬಾರಿಗೂ ಆಲಿಂಗಿಸಿ.

ದ್ಯಾನಮಂಪೊಕ್ಕು ಸಪರಿವಾರನಪ್ಪ ಕೇಯೂರಕಂಬೆರಸು ಮನವಲ್ಲದ ಮ
ವನದೊಳ್ ದಿವಸವ್ಯಾಪಾರಮಂ ತೀರ್ಚ್ಚಿ ದೂರೋತ್ಸಾರಿತಪರಿಜನಂ ಪತ್ರ
ಖಾದ್ವಿತೀಯನಾಗಿ ಕೇಯೂರಕನಂ ಕರೆದು ॥ ೨೬೧

ಕಂ॥ ಪರಿಜನಸಮೇತ ಕಾದಂ । ಬರಿಯು ಮಹಾಶ್ವೇತೆಯೊಂದು
ಸಂದೇಶಂ ಪೇ ॥ ಳ್ನಿರವಿಸಿದುದುಂಟೆ ಬರ್ಪ್ಪವ । ಸರದೊ ಳ್ನಿನಗೆಂದು ನೃ
ಪಸುತಂ ಬೆಸಗೊಂಡಂ ॥ ೨೬೨

ವ॥ ಅನ್ತು ಬೆಸಗೊಳ್ವುದುಂ ಸಂದೇಶಮಪ್ಪೊಡೆ ಕಾದಂಬಱಿಯ
ದೆಸೆಯೊಳ್ ಮೇಣ್ ಮಹಾಶ್ವೇತೆಯ ದೆಸೆಯೊಳೊಂದುಮಿಲ್ಲಂ ಪತ್ರಲೇಖೆ
ಯುಂ ಕಳಿಪಿ ಮಗುಳ್ದಂ ದೇವರುಜ್ಜೈನಿಗೆ ಬಿಜಯಂಗೆಯ್ವವಾರ್ತೆಯುಂ
ಬಿನ್ನವಿಸೆ ಮೊಗಮಂ ನೋಡಿ ಬಿಸುಸುಯ್ದುಳಲಿಂದಮಿಂತುಟೆ ವಲಮೆಂದು
ಮಹಾಶ್ವೇತೆ ತನ್ನಾಶ್ರಮಕ್ಕೆ ಪೋಗೆ ಕಾದಂಬರಿ ತೊಟ್ಟನದೃಷ್ಟವಜ್ರಾ
ಭಿಘಾತೆಯಾದಂತೆ ನಿಮೀಲಿತನಯನೆಯಾಗಿ ॥ ೨೬೩

ಕಂ॥ ಅಂತಾಪದದೊಳ್ಮೂರ್ಛ್ಛಿತೆ । ಯಂತೆ ಪೊಲುನ್ಮತ್ತೆಯಂತೆ
ಪೋ ಲರ್ದಿತಳಾ ॥ ದಂತೆಪೊಲಂತಃ ಪೀಡಾ । ಕ್ರಾಂತಿಯಿ ನೊಂದಿನಿತುಪೊ
ಳ್ತು ಮಱವಟ್ಟಿರ್ದ್ದಳ್ ॥ ೨೬೪

ವ॥ ಅಂತಿರ್ದ್ದ ಮಹಾಶ್ವೇತೆ ಪೋದುವ ನಱಿಯದೆ ಕಿಱಿದುಬೇಗ
ಕ್ಕಾಕೆ ಕಣ್ಗಳಂತೆಱೆದು ಲಜ್ಜಿತೆಯಾದಂತೆಯುಂ ವಿಸ್ಮೃತೆಯಾದಂತೆಯುಂ
ವಿಸ್ಮಯಸ್ತಬ್ಧದೃಷ್ಟಿಯಾಗಿ ಮಹಾಶ್ವೇತೆಗೀವೃತ್ತಾಂತಮಂ ಪೇಳೆವೆಂದ
ಲ್ಲಿಂದೆಳ್ದು ನಿವಾರಿತಾಶೇಷ ಪರಿಜನಪ್ರವೇಶೆ ಯಾಗಿ ॥ ೨೬೫

ವೃ॥ ನಾಡೆ ಬಳಲ್ದಳಲ್ದು ನಿಲಲಾಱದೆ ಸೆಜ್ಜೆಗೆವಂದು ಮೆಯ್ಯನೀ ।
ಡಾಡಿ ನಿಜೋತ್ತರೀಯವಸನಾಂಚಲದಿಂ ಮುಸುಕಿಟ್ಟು ಚಿಂತೆಯೊಳ್ ॥ ಮೂ
ಡಿಮುಳುಂಗಿ ತನ್ನ ಮನದನ್ನರೊಳಂ ಮೊದಲಾಗಿ ಕನ್ನೆಮಾ । ತಾಡದೆ
ಜಾನಿಸುತ್ತಿರಲು ಪಿಂಗಿದುದಂದಿನದೊಂದಹರ್ನಿಶಂ ॥ ೨೬೬

---

೨೬೨. ಬರ್ಪ್ಪವಸರದೊಳ್, ನಿನಗೆ, ನಿರವಿಸಿದುದು—ಆಜ್ಞಾಪಿಸಲ್ಪಟ್ಟ; ಬಂ
ದುಸಂದೇಶಂ—ಸಮಾಚಾರವು; ಉಂಟೆ.

ವ॥ ಅನ್ತು ಮಱುದಿವಸಂ ನೇಸರ್ಮ್ಮೂಡಲೊಡನೆ ತನ್ನಿದಿರೊಳ್ನಿಂದಿರ್ದ್ದೆನ್ನಂ ನೋಡಿ ॥ ೩೬೭

ವೃ॥ ಇಂತು ಭವದ್ವಿಧರ್ಪ್ಪರಿಜನಂಗಳಿರಲ್ಕೆನಗೀಯವಸ್ಥೆ ಯೆಂ।
ಬಂತೆಯುಮೀನಿರರ್ಥಕರಿನಾವುದು ತೀರ್ದ್ದಪುದೆನ್ನ ಕಜ್ಜಮೆಂ॥ ಬಂತೆಯು
ಮಿನ್ನುಮೆನ್ನಿದಿರೊಳಿರ್ದ್ದಪೆ ನಿರ್ದ್ದಯ ಪೋಗು ಬೇಗಮೆಂ। ಬಂತೆಯು
ಮೆನ್ನನಶ್ರುಪಿಹಿತಾಕುಲದೃಷ್ಟಿಗಳಿಂದೆ ನೋಡಿದಳ್ ॥ ೩೬೮

ವ॥ ಅನ್ತು ನೋಡಲೊಡನೆನ್ನಂ ಪೋಗೆಂದಳೆಂದಱಿವು ದೇವಿಗೆ ಪೇಳದೆ ದೇವರ ಶ್ರೀಪಾದಂಗಳಂ ಕಾಣಲ್ಕೆ ಬಂದೆಂ ದೇವ ನೀನೊರ್ವ್ವನೆ ಶರಣಮೆಮಗೆ ಪರಿಜನಪ್ರಾಣತ್ರಾಣಾಕುಲಮತಿಯಪ್ಪೆನ್ನ ಬಿನ್ನಪಮಂ ದೇವರವಧಾರಿಸಿ ಪ್ರಸಾದಂಗೆಯ್ವುದು ದೇವರ್ಬ್ಬಿಜಯಂಗೆಯ್ದಂದುಮೊದಲ್ಗೊಂಡು ಮದನದುಶ್ಚೇಷ್ಟಿತಾಯಾಸಂಗಳಿಂದಮೆ ದಿವಸಂಗಳಂ ಕಳಿಪುತ್ತಮಿರ್ದ್ದಳ್ ಪತ್ರಲೇಖೆ ಪೇಳ್ದವಸ್ಥಾಂತರಂಗಳನಾಂ ಬಿನ್ನವಿಪೊಡೆ ಪುನರುಕ್ತಮೆಂದು ಬಿನ್ನವಿಸಿದ ಕೇಯೂರಕನ ಮಾತಂ ಕೇಳ್ದು ಸಾಲ್ಗುಮಿಂ ಕೇಳಲಾಱೆನೆಂದು ಮದನಶರಶಿಖಾಕೀಲಿತಾಂತರಂಗನು ಮನ್ತರ್ಬ್ಬಾಷ್ಪರುಧ್ಯಮಾನಕಂಠನುಮನಂಗತಾಪಸಂಭ್ರಮೋತ್ಕಂಠಾವೇಗವಿಹ್ವಲಹೃದಯನುಮಾಗಿ ಮನುಜೇಂದ್ರಚಂದ್ರನೆಂತಾನುಂ ಕೇಯೂರಕನನಿಂತೆಂದಂ॥ ೩೬೯

ಕಂ॥ ಅನುರಾಗ[ಮಿಲ್ಲದಂಮೋ। ಣ್ವನರಾಗವಮರಹಿತನೆಂದು ಬಗೆ
ದೆನ್ನಂ ಮಾ॥ ಸಿನಿ ಸಂದೇಶಮನೇನುಮ। ನೆನಗೀಗಳ್ ನಿನ್ನ ಕಯ್ಯೊಳ
ಟ್ಟಿದಳಿಲ್ಲಂ] ॥ ೩೭೦

ವ॥ ಮಹಾಶ್ವೇತೆಯುಂ ಸಮುಪಾಹೃತಾನುಬಂಧೆಯಾಗಿಯುಂ ನಿನ್ನ ಕಯ್ಯೊಳೇನುಮಂ ಪೇಳ್ದಟ್ಟಿದಳಿಲ್ಲೆಮ್ಮ ಪತ್ರಲೇಖೆಯ ಪೇಳ್ಕೆಯೊಳಂ ನಿನ್ನ ನುಡಿಯೊಳಮದೆಲ್ಲಮಂ ನೆಱೆಯಱಿದೆಂ ದೇವಿಯರಾಭಿಜಾತ್ಯಮು

---

೩೬೮. ಈ ನಿರರ್ಥಕರಿಂ—ಈ ಅಪ್ರಯೋಜಕರಿಂದ; ಎನ್ನ ಕಜ್ಜಂ, ಆವುದು, ತೀರ್ದ್ದಪುದು—ನೆರವೇರುವದು; ಎಂಬಂತೆ, ನೋಡಿದಳ್.

೩೬೯. ಸಾಲ್ಗುಂ—ಸಾಕು.

೩೭೦. ದೇವಿಯರ—ಕಾದಂಬರೀದೇವಿಯ; ಆಭಿಜಾತ್ಯಮುಮಂ—ಸತ್ಕುಲೋ

ಮಂ ಮಹಾನುಭಾವತೆಯುಮಂ ದಾಕ್ಷಿಣ್ಯಮುಮಂ ಭಾವಿಸುತ್ತಿ*[ರ್ದೆಂ] ಚಂದ್ರಮೂರ್ತಿಯಾಲೋಕನದದೆಸೆಯಿಂ ನಿಶ್ಚೇತನಮಪ್ಪ ಚಂದ್ರಕಾಂತದ ಪಾಷಾಣಕ್ಕಾರ್ದ್ರಭಾವೋಪಗಮನ ಮಾಯತ್ತಮಲ್ಲದೆ[ತತ್ಕರಾಕರ್ಷಣಂ ದೊರಕೆಳದು] ದಿವಸಕರ†[ಸಂತಾಪಕ್ಲಾಂತಮಪ್ಪ] ಕುಮುದಾಕರಕುನ್ಮುಖತೆಯಂದೊರೆಕೊಳ್ಗುಮದಕ್ಕಲಕ್ಕೆಯೆಂಬುದು ಚಂದ್ರಿಕಾಭಿರಾಮಮಪ್ಪ ರಜನಿಯಕಯ್ಯೊಡೆವಲಮದರಿ ನಖರಸ್ಪಂದಿತಮಾತ್ರಮನೆ ಪಾರ್ದಿರ್ಪ್ಪಪರಿಜನಂಗಳೊಳನಿತುಗೌರವಮನೇರಿಸಿ ಸುಖಪರಿಪಂಥಿನಿಯುಂ ದುಃಖೈಕದಾನನಿಪುಣೆಯುಂ ಪರಹೃದಯಪೀಡಾಪೇಕ್ಷಿಣಿಯುಮಪ್ಪ ಲಜ್ಜೆಯುಂಕಾಯಲುಜ್ಜುಗಂಗೆಯ್ದು ಬೆಸಸವಿರ್ಪ್ಪುದೆಲ್ಲಂ ದೇವಿಯರುಪರೋಧಮೆ ತಂಬೆಲರಲೆಸಪಿಂ ಮೊಲ್ಲನುಗುವಲರ್ಗಳಂ ಸೈರಿಸದ ದೇವಿಯರಶರೀರಂ ವಜ್ರಸಾರಹೃದಯರ್ಗ್ಗಂ ದುಸ್ಸಹಮೆನಿಪ ಸಮಶರಶತ ಪ್ರಹಾರಮನೆಂತು ಸೈರಿಸಿದಪ್ರು

ತ್ವನ್ನತ್ವವನ್ನೂ; ಮಹಾನುಭಾವತೆಯುಮಂ, ದಾಕ್ಷಿಣ್ಯಮುಮಂ—ಪರಚ್ಛಂದಾನುವರ್ತಿತ್ವವನ್ನೂ ಭಾವಿಸುತ್ತಿರ್ದೆಂ, ಅಂದರೆ ಕಾಮಪೀಡಿತಳಾದಾಗ್ಯೂ ಸತ್ಕುಲೋತ್ಪನ್ನತ್ವಾದಿ ಗುಣಗಳಿಂದ ಕೂಡಿದವಳಾದಕಾರಣವೆ ನನಗೆ ಯಾವಸಮಾಚಾರವನ್ನೂ ಹೇಳಿಕಳುಹಿಸಲಿಲ್ಲವೆಂದು ಭಾವಿಸುತ್ತಿರ್ದೆನೆಂದಭಿಪ್ರಾಯವು. ನಿಶ್ಚೇತನಮಪ್ಪ—ಅಚೇತನವಾದ ; ಚಂದ್ರಕಾಂತಪಾಷಾಣಕ್ಕೆ, ಆರ್ದ್ರಭಾವೋಪಗಮನಂ—ಆರ್ದ್ರಭಾವವನ್ನು ಪಡೆಯುವದು ; ಆಯತ್ತಮಲ್ಲದೆ—ಅಧೀನವಾಗಿರುವದೇಹೊರತು ; ತತ್ಕರಾಕರ್ಷಣಂ—ಚಂದ್ರಕರಾಕರ್ಷಣವು; ದೊರಕೊಳದು—ಉಂಟಾಗಲಾರದು ಅಂದರೆ ಜಡವಾದ ಪಾಷಾಣವೂ ಕೂಡ ತನಗೆ ಪ್ರಿಯನಾದ ಚಂದ್ರನನ್ನು ಕರದಿಂದ ಆಕರ್ಷಿಸಲಿಲ್ಲವೆಂಬಲ್ಲಿ ವಿವೇಕಿಯಾದ ಕಾದಂಬರಿಯು ನಾಚಿಕೆಯನ್ನು ತೋರದು ಸತ್ಕೃತ್ಯೋಚಿತನಾದ ನನ್ನನ್ನು ಹ್ಯಾಗೆ ಬರಮಾಡಿಕೊಂಡಾಳೆಂದಭಿಪ್ರಾಯವು. ಕುಮುದಾಕರಕೆ—ಕುಮುದಸರೋವರಕ್ಕೆ ಅಂದರೆ ಕುಮುದಗಳಿಗೆ; ಉನ್ಮುಖತೆ—ಚಂದ್ರಾಭಿಮುಖತ್ವವು; ದೊರಕೊಳ್ಗುಂ, ಅಲಕ್ಕೆಯೆಂಬುದು ಚಂದ್ರಿಕಾಭಿರಾಮಮಪ್ಪ ರಜನಿಯಕಯ್ಯದೆ—ರಾತ್ರಿಯ ಅಧೀನವಾಗಿರುತಿದು ; ವಲಂ—ನಿಶ್ಚಯವು. ಅಂದರೆ ಕಾದಂಬರಿಯು ಕೋರಿಕೆಯು ಆಪ್ತರ ಸಹಾಯವಿಲ್ಲದೆ ನೆರವೇರದೆಂದಭಿಪ್ರಾಯವು. ಏರಿಸಿ—ಆರೋಪಿಸಿ ; ಪಾರ್ದಿರ್ಪ್ಪ—ಕಾದಿರುವ ; ಪೇಗಮೆಯ್ದೆ—ಹೇಗಹೋಗುವದಕ್ಕೆ ಬಾರದು—ಕೂಡದು.

*[ರ್ದಂತು] †[ಸಂತಾಕ್ರಾಂತಮಪ್ಪ]

ದು ದಿವಸಕ್ರಮಗವ್ಯಮಾರ್ಗ ಮೆಮಗಂ ಜೇಗಮೆಯ್ದೆ ಬಾಪಮದುಃಖೈ
ಕ ದಾನವ್ಯಸನಿಯುಂ ದುರ್ಘಟಘಟನಾ ಪಂಡಿತನುಂ ಯತ್ಕಿಂಚನ ಕಾರಿ
ಯುಮಪ್ಪ ಪತವಿಧಿಯೋಗಮಾರ್ಗ್ಗಂ ಬಗೆಯಲಗೋಚರಮದೆಂತೆನೆ ೩೨೧

ವೃ॥ ಮೊದಲೋಳ್ತ್ರಿನ್ನರದ್ವಂದ್ವವ ಬಳಸಲಲಿತ್ತಾನು ಮ
ಚ್ಛೋದಮಂ ಸಾ । ರ್ವ್ವದವೆತ್ತಂತಲ್ಲಿಗೊಂದಿಂಚರಮೆಸಗುವ್ರವೆತ್ತಾ
ಮಹಾಶ್ವೇತೆಯುಂಕಾ ॥ ಣ್ಬುದದೆತ್ತಾ ಕಾಂತೆ ಕಾದಂಬರಿಯು ನೆನಗೆತ್ತಾಂ
ತೋರ್ಪ್ಪದೆತ್ತಾನು ಮೆನ್ನೀ । ಕ್ಯದನವ್ಯಾಪಾರವೆತ್ತಾಂ ಜನಕನ ಬೆಸದಿಂ
ದಿಂತಗಲ್ದಿರ್ಪ್ಪದೆತ್ತಂ ॥ ೩೨೨

ವ॥ ಎಂದು ನೃಪರೂಪ ಚಂದ್ರಂ ಕೇಯೂರಕನೊಡನೆ ನುಡಿಯುತ್ತಿ
ರ್ಪ್ಪನ್ನೆಗಂ ॥ ೩೨೩

ವೃ॥ ಎನಸುಂಗಂಧರ್ವರಾಜಾತ್ಮಜೆಯ ವಿರಹವೃತ್ತಾಂತ ಸಂತಪ್ತನಾ
ಗಿ । ರ್ದ್ದನೊಳಾನುಂ ಕಾಯೆನೆಂದಾದವೆ ಕರುಣಿಸಿದಂತೆಯ್ದೆ ಸಂಕೋಚಿ
ಸಿತ್ತೋ ॥ ಯ್ಯನೆ [ನುತ್ತಂ] ನೂಸಿದೀಶಾನನ ಜಡೆಗಳವ್ರೋಲ್ಕಾಯ್ದ ಪ್ರಾಸ್ನೀ
ಗ್ಗಪಿಲ್ಗಂ । ಪಿನ *[ಪೆಂಪಂ] ಸಿಂಪಿಸುತ್ತಿರ್ದ್ದ ಹಿಮರುಚಿಗಳಂ ತಿಗ್ಮರು
ಜ್ಮಾಲಿಬಿಂಬಂ ॥ ೩೨೪

ವ॥ ಆಗಳ್—ಪೆಮ್ರರವ ತುಪಿಗೋಡುಗಳೊಳ್ ತೊಡರ್ದ ಕೆಂಬಿಸಿಲ
ಮುಱುಗಳ ನುಡಿಗೆಡೆಗೆಯ್ಯುತ್ತ ಮಾದಿತ್ಯನೊಡನೆ ವಾಸರಮೊಯ್ಯನೋ
ಸರಿಸೆ ನೃಪರೂಪಚಂದ್ರಂಗೆ ಕಳಪಿಯುಂತೆ ಕರುಣಿಸ ನಾಂವ ನಾರಂಗವಟ್ಟೆ

---

೩೨೨. ಬಳಸಲಲ್—ಅನುಸರಣವು; ಇಲ್ಲಿ ಅಲ್ ಭಾವಾರ್ಥದಲ್ಲಿ ಬಂದಿರುವದು;

೩೨೪. ಎನಸುಂ—ಅಧಿಕವಾಗಿ; ಕಾಯೆಂ—ಸಂತಾಪಪಡಿಸೆನು; ಆದವೆ—
ಅತ್ಯಂತವಾಗಿ; ಕಾಯ್ದ ಪ್ರಾಸ್ನೀರ್—ಕರಗಿಸಲ್ಪಟ್ಟ ಚಿನ್ನದರಸದ, ಕಪಿಲ್—ಕಪಿಲವ
ರ್ಣದ, ಕೆಂಪಿನ—ಕೆಂಪುಬಣ್ಣದ, ಪೆಂಪಂ—ಅಧಿಕ್ಯವನ್ನು, ಸಿಂಪಿಸುತ್ತಿರ್ದ್ದ—ಕೆದ
ರುತ್ತಿದ್ದ, ಹಿಮರುಚಿಗಳಂ—ಉಷ್ಣ ಕಿರಣಗಳನ್ನು; ತಿಗ್ಮರುಜ್ಮಾಲಿಬಿಂಬಂ, ಸಂಕೋ
ಚಿಸಿತ್ತು ಎಂದನ್ವಯವು.

೩೨೫. ಮುಱುಗಳಂ—ಶಕಲಗಳನ್ನು; ಉಡಿಗೆಡೆಗೆಯ್ಯುತ್ತಂ—ಕಡಮೆಮಾ
ಡುತ್ತ; ನಾರಂಗವಟ್ಟೆಯು—ಕೆಂಪುಬಟ್ಟೆಯು; ಗಂಧರ್ವನಂದನಾಭೀಕ್ಷಣಕ್ಕೆ—ಕಾದಂ

*[ಸೊಂಪಂ]

ಯ ಮೇಲ್ಕಟ್ಟ ನಂಬರದೊ ಳ್ಕಟ್ಟಿದಳೆಂಬಂತೆ ಸಂಜೆ ಸಂಜಾತ ಸ್ವರಾಗಪ ಟಲಮಂ ಪಸರಿಸೆ ಗಂಧರ್ವರಾಜನಂದನಾ [ಭೀಕ್ಷಣಕ್ಕೆ] ಸಮೆದ ನೀಲಪಟ ಮೆಂಬಂತೆ ನಿಶಾಗಮನನವೆಸ್ಗೆಸೆಯೊಳಮೆಸೆವ ಕತ್ತಲೆಯುಂ ಚಿತ್ತರಿಸೆ ಅರಲ್ದಿರೆ ಕೊರಗಿದುಸ್ಸಹವಿರಹಶಯನರಚನೆಗೆ ಬಾರ್ತೆಯಾಗಲಾಱೆವೆಂದ ಗಿದು ಮುಯ್ದೆಗೆದುವೆಂಬಂತೆ ತಾವರೆಗಳ್ಮುಗಿಯೆ ಶುಚಿಸ್ವಾಭಾವಂಗಳಪ್ಪ ದಱಿ ನಾರ್ದ್ರತೆಯ ನಪ್ಪುಕೆಯ್ಯುದ್ಕಂಠಶಯನಪರಿಕಲ್ಪನಕ್ಕಾವಾವೆ ಮುಂ ಚುವೆವೆಂಬಂತೆ ಕುಮುದಿನಿಗಳೊಂದೊಂದುಗಱಿಗ ಳುಳ್ಳಲರೆ ಕಾದಂಬ ರಿಯ ಸಮಿೀಪಕ್ಕೆ ಪೋಗೆಂದು ಯುವರಾಜಂ ಗುಪದೇಶಂಗೆಯ್ವಂತೊಡ ನೊಡನಗಲ್ವ ಜಕ್ಕವಕ್ಕಿಗ ಳ್ಕಳರುತಮನೊದವಿಸೆ ತತ್ಸಮಯದೊಳ್ ॥

ವೃ॥ ನಯದಿಂ ರಾಜೇಂದ್ರಚಂದ್ರಂಗಭಿಷವವಿಧಿಯುಂ ಮಾಡುವೆಂ ಚಂದ್ರಿಕಾವಾ । ರಿಯಿ ನೆಂಬಂತೆತ್ತಲುಂ ತಣ್ಬೆಳಗಿನ ಬಳಗಂ ಸಿಂಪಿಸಲ್ಪೂ ರ್ವದಿಕ್ಕಾಂ ॥ ತೆಯ ಲೀಲಾದಂತಪತ್ರಂ ತ್ರಿಭುವನವಿಭವೈಕಾತಪತ್ರಂ ನಭೋಲ । ಕ್ಷ್ಮಿಯ ಲಾವಣ್ಯಹ್ರದಂ ಬಂದುದಯಿಸಿತುದಯಾದ್ರೀಂದ್ರ ದೊ ಳ್ಚಂದ್ರಬಿಂಬಂ ॥ ೩೩೬

ವ॥ ಅನ್ತು ಚಂದ್ರೋದಯದೊಳ್ ನೃಪರೂಪಚಂದ್ರಂ ಚಂದ್ರಾ ತಪಸ್ಪರ್ಶದರ್ಶಿತವಿಶದ ಬಿಂದುಸಂದೋಹ ಶೀತಳವಪ್ಪ ಚಂದ್ರಮಣಿಶಿಲಾ ತಲದೊ ಳ್ಪಟ್ಟಿರ್ದ್ದಡಿಯೊತ್ತುತಿರ್ದ್ದ ಕೇಯೂರಕನಂ ಮೆಲ್ಲನಿಂತೆಂದಂ ॥

ವೃ॥ ಮುಗುಳ್ದಾನಿಲ್ಲಿಗೆ ಬಪ್ಪುದುಂ ತನುವಿನೊ ಳ್ಪ್ರಾಣಂಗಳಂ ದೇವಿ ತಾ । ಳ್ದುಗುಮೋ ಮೇಣ್ಮದಲೇಖೆ ವಾರ್ತೆಯರಿದೊಂದುದ್ಯೋ

ಬರಿಯು ವರ್ಣನಕ್ಕೆ ಅಂದರೆ ಕಾದಂಬರಿ ನೋಡವಹಾಗೆ ಎಂದಭಿಪ್ರಾಯವು; ಕೊರಗಿ—ಬಾಡಿಹೋಗಿ; ಬಾರ್ತೆಯಾಗಲಾರೆವು—ಲಕ್ಷ್ಯವಾಗರೆವು ಅಂದರೆ ಗುರಿಯಾಗಲಾರೆವು; ಮುಯ್ದೆಗೆದುವು—ಸಂಕುಚಿತವಾದವು; ಉತ್ಕಂಠಶಯನ—ವಿರಹಾರ್ಹವಾದ ಪುಷ್ಪಶಯನ; ಉಳ್ಳಲರೆ—ಅರ್ಧವಿಕಾಸವಾಗಲು.

೩೩೬. ಅಭಿಷವವಿಧಿಯುಂ—ಮಜ್ಜನಕಾರ್ಯವೆನ್ನು; ತಣ್ಬೆಳಗಿನ-ಚಂದ್ರಿಕೆಯ; ದಂತಪತ್ರಂ—ದಂತದಓಲೆ.

*[ಅಭಿಷಣಕ್ಕೆ]

ಗದೆತ್ತಾನುವಿ ‖ ಲ್ಲಿಗೆತಾಂ ಬರ್ಕ್ಕುವೆಮೊ *[ವುಜ್ಜಿಮತ್ಪರಿಚಯಕ್ಕಾ] ದಂ ಮಹಾಶ್ವೇತೆ ತೊ । ಟ್ಟಗೆ ತನ್ನಂ ತನುವಿಂದೆ ಪತ್ತುವಿಡಳಲ್ತೇ ಪಿಂದೆ ಕೇಯೂರಕಾ ‖ ೩೭೮

ಕಂ॥ ಮನದನ್ನರೆನಿಪ ನಿಜಪರಿ । ಜನದ ಸಖೀಜನದ ದೆಸೆಯೊಳಾದ ಸಮಭ್ಯ ‖ ರ್ಥನೆಯಿಂದೆ ದೇವಿ ತನ್ನಯ । ತನುವಂ ನಿಲೆಪಿಡಿವಬಾಸೆಯುಂ ಮಾಡುಗುವೋ ‖ ೩೭೯

ವ॥ ಎಂಬುದುಂ ಕೇಯೂರಕನಿಂತೆಂದಂ.

ಕಂ॥ ಪರಿಜನಮು ಮಾಪ್ತರುಂ ಸಂ । ವರಿಸ ಲ್ನಿತ್ತರಿಪರೆಂಬುದಂ ತಿಕ್ರ್ಕೆಜೆ ‖ ತ್ರರಥತನೂಜೆಯೆ ನಿನ್ನಯ । ಬರವಿನೊಳಾದಾಸೆಯಿಂದೆ ನಿತ್ತರಿಸಿದವಳ್ ‖ ೩೮೦

ವ॥ ಅದಱಿಂದೇವರ್ ಬರವಿನೊಳಾದಂ ಬವಸೆಯುನೆ ಮಾಳ್ಪುದೆನೆ ಕಿಱಿದುಬೇಗವೋ ನಾನುಮುಂ ತನ್ನೊಳೆ ಭಾವಿಸುತಿರ್ದ್ದ ಕೇಯೂರಕನಂ ವಿಶ್ರಮಿಸೆ ವಿಸರ್ಜಿಸಿ ತಾನುಂ ಸೆಜ್ಜೆಗೆ ಬಿಜಯಂಗೆಯ್ದು ಗಮನಚಿಂತಾನಿಮಗ್ನಸ್ವಾಂತನಾಗಿ ‖ ೩೮೧

ವೃ॥ ತಂದೆಗೆ ತಾಯ್ಗೆ ಪೇಳ್ದು ಗಮನೋದ್ಯಮನಾಗಲೆ ವೇಳ್ಕುಮಲ್ಲದಿ । ರ್ದ್ದಂದವರ್ಗಕ್ಕು ಮಾವಗನುತಾಪಪರಂಪರೆ ಪೇಳ್ದು

---

೩೭೮. ಬಂದುದ್ಯೋಗದಿಂ—ನಿನಾದರೂ ಕಾರ್ಯಕ್ಕಾಗಿ; ಪಿಂದೆ—ಸಂಗಡಲೆ; ಕಾದಂಬರಿ, ತನ್ನಂ—ಪ್ರಾಣವನ್ನು; ತನುವಿಂದೆ—ಶರೀರದ್ದೆಸೆಯಿಂದ; ಪತ್ತುವಿಡಳಲ್ತೆ—ಸಂಬಂಧವನ್ನು ಬಿಡಳಲ್ಲವೆ ಅಂದರೆ ಪ್ರಾಣವನ್ನು ಬಿಡಳಲ್ಲವೆ?

೩೭೯. ಮನದನ್ನರ್—ಪ್ರಾಣಸಮಾನರು; ತನುವಂನಿಲೆಪಿಡಿವ—ಶರೀರವನ್ನು ನಿಲ್ಲಿಸಿಕೊಳ್ಳುವ ಅಂದರೆ ಬದುಕುವ; ಬಾಸೆಯುಂ—ಪ್ರತಿಜ್ಞೆಯನ್ನು.

೩೮೦. ಸಂವರಿಸಲ್—ಸಮಾಧಾನಮಾಡುವದಕ್ಕೆ; ನಿತ್ತರಿಪರ್—ನಿರ್ವಹಿಸುವರು; ಎಂಬುದು—ಎಂಬುವದು; ಅಂತಿಕ್ಕೆ—ಹಾಗಿರಲಿ.

೩೮೧. ಬರವಿನೊಳ್—ಗಂಧರ್ವರಾಜನಗರಾಗಮನವಿಷಯಲ್ಲಿ; ಆದಂ—ಅತ್ಯಂತವಾಗಿ: ಬವಸೆಯನೆ—ವ್ಯವಸಾಯವನ್ನೆ.

*[ನಾಣ್ಚಿಮತ್ಪರಿಜನಕ್ಕಾದಂ]

ಪೋಪೆನೆಂ ॥ ಬಂದಪು ನಾಡೆಲಜ್ಜೆಪೆಱತಿ ನ್ನದಱಿಂ ಶುಕನಾಸನಂದನಂ ।
ಬಂದಪನಾತನಿಂದ ಮಱಿವೆಂತಿರೆ ಪೇಳಿಸಿ ಮತ್ಪ್ರಪಂಚಮಂ ॥ ೩೮೦

ವ ಮಹಾರಾಜಾಧಿರಾಜನುಮಪ್ಪೆನ್ನ ತಂದೆಯುಂ ಗಂಧರ್ವಲೋಕಾಧಿಪತಿಯಪ್ಪ ಚಿತ್ರರಥಮಹಾರಾಜನು ಮೊಂದಾಗಿ ಮದುವೆಯಂ ಸಂದಿಸುವಂತುಮಾಳ್ಪನಿಲ್ಲಿಗೆನ್ನೊಳಲ್ಲದೆಯುಂ *[ಜನಕಂಗಮಱಿಪ್ರೊಡೆ] ಮದೀಯಹೃದಯದ್ವಿತೀಯನಪ್ಪ ವೈಶಂಪಾಯನಂ ಪೆಱಗಾಗಿ ಪೇೞನಾವನಱಿದಪ್ಪನೆಂದು ಆತನ ಬರವನೆ ಬಯಸುತ್ತ ಮಾಯಿರುಳಂ ಕಳೆದು ನೇಸರ್ಮೂಡಲೊಡನೆ ॥ ೩೮೩

ಕಂ॥ ಬಂದುದು ಕಟಕಂ ದಶಪುರ । ಕೆಂದೆಲ್ಲರ್ನುಡಿಯೆ ಕೇಳ್ದು ಭೋಂಕನೆ ಜೀವಂ ॥ ಬಂದಂತುತ್ಸಾಹದಿ ನಾ । ನಂದಪರಂಪರೆಯ ನೆಯ್ದಿದಂ ಯುವರಾಜಂ ॥ ೩೮೪

ವ॥ ಅನ್ನೆಗಂ ಬಂದು ದೂರದೊಳೆ ಕೃತನಮಸ್ಕಾರನಾದ ಕೇಯೂರಕನಂ ಕರೆದು ವೈಶಂಪಾಯನಂ ಬಂದ ನಿನ್ನೆಮ್ಮ ಕಾರ್ಯಸಿದ್ಧಿ ಕರತಳವರ್ತಿ *[ಯಾದುದೆನೆ] ಗಮನಕ್ಕೆ ಕಿಱಿದುತಡವು ನೊಡರಿಸುಗು ಮೆಂದು ಮನದೊಳ್ಬಗೆಯುತ್ತಂ ದೇವಕರಮೊಳಿತಾಯ್ತೆಂದೆಯ್ದೆ ವಂದು ಕೆಲದೊಳ್ ಕುಳ್ಳಿರ್ದ್ದ ವೈಶಂಪಾಯನಾಲಾಪಂಗಳಿಂದಮೆ ಕಿಱಿದುಬೇಗಮಿರ್ದ್ದ

೩೮೦. ಪೇಳ್ದುಪೋಪೆನೆಂಬಂತು—ನಾನೇ ತಂದೆತಾಯಿಗಳಿಗೆ ಹೇಳಿ ಹೋಗುವೆನೆಂದರೆ; ಲಜ್ಜೆಪೆಱತು—ನಾಚಿಕೆಪೇರಿ; ಅದಱಿಂ—ಅದಕಾರಣ; ಇನ್—ಇನ್ನುಮೇಲೆ ಆವಗ—ಯಾವಾಗಲೂ.

೩೮೩. ಇಲ್ಲಿಗೆ—ಈವಿಷಯದಲ್ಲಿ; ಎನ್ನೊಳಲ್ಲದೆಯುಂ—ನನ್ನಲ್ಲಿಯೂ ಅಲ್ಲದೆ ಜನಕಂಗಮಱಿಪ್ರೊಡೆ—ತಂದೆಗೂ ತಿಳಿಸಬೇಕಾದರೆ; ಪೆಱಗಾಗಿ—ಹೊರತಾಗಿ.

೩೮೫. ಕರತಲವರ್ತಿಯಾದುದೆನೆ–ಕಯ್ಗೂಡಿತೆಂದು ಚಂದ್ರಾಪೀಡನು ಹೇಳಲು ಕಿಱಿದುತಡವುನೊಡರಿಸುಗುಂ—ಚಂದ್ರಾಪೀಡನು ಹೊರಡುವದಕ್ಕೆ ಸ್ವಲ್ಪ ತಡಮಾಡುತ್ತಾನೆ: ಎಂದು, ಮನದೊಳ್, ಬಗೆಯುತ್ತಂ—ಕೇಯೂರಕನು ಯೋಚಿಸುತ್ತ;

*[ಜನಂಗಳಱಿಪುವೊಡೆ] †[ಯೊದುದು]

ಸನ್ನೆಯಿಂ ಪರಿಜನಂಗಳಂ ತೊಲಗವೇೞ್ದು *[ಕೇಯೂರಕವರ್ಷ್ಮನಂ] ಕೇಯೂರಕ ನಿಂತೆಂದಂ ॥ ೩೮೫

ವೃ॥ ಸುರುಚಿರಪಾಂಡುರಪ್ರಭೆ ಸುಧಾಕಿರಣೋದಯಮಂ ಸುಗಂಧಬಂ । ಧುರಮಲಯಾನಿಲಾಗತಿ ಮಧೂದ್ಗಮಮಂ ವಿಕಸಲ್ಲತಾಂತಮಂ । ಜರಿಘಳಿದೇೞ್ಗೆಯುಂ ನೆರೆಯೆ ಪೇೞ್ವವೊಲೀಸಮವಸ್ಥೆ ತಾನೆ ದೇ । ವರಬರವಂ ನಿರಾಕುಲಮೆ ಪೇೞ್ದಪುದೆನ್ನ ಮನಕ್ಕೆ ನಿಕ್ಕುವಂ ॥ ೩೮೬

ವ॥ ಅದಲ್ಲದೆಯುಂ ॥

ಕಂ॥ ತೊದಳೇಂ ದೇವಿಯರ ನಗ । ಲ್ದ ದೇವರಿರಲಱಿಯಿರೆಂತೆನಲ್ಬಿಸಲತೆಯೆ ॥ ಲ್ಲದೆ ಕಮಲಾಕರಮುಂ ಕೌ । ಮುದಿಯಿಲ್ಲದೆ ಕುಮುದಸಖನು ಮಿರಲರಿದಪನೇ ॥ ೩೮೭

ವ॥ ಆದೊಡೆ ವೈಶಂಪಾಯನನೊೞ್ಕರೆದು ದೇವರ್ಬ್ಬಿಜಯಂಗೆಯ್ವುನ್ನೆಬರಮನಿತುಕಾಲಾತಿಪಾತಮಂ ದೇವಿಯರ ಶರೀರಾವಸ್ಥೆ ಸೈರಿಸುವುದಲ್ತು ತದೀಯಜೀವಸಂಧಾರಣಮುಮಂ ಭವದೀಯಗಮನವಿಶ್ವಾಸಮುಮಂ ಮಾಡಲ್ವೇೞ್ಕು ಮದರಿಂದೆನ್ನ ಬಿನ್ನಪಮಂ ದೇವರವಧಾರಿಸುವುದದೆಂತೆನೆ॥

ವೃ॥ ಲಲನೆಯ ನೆಯ್ದಿದತ್ತು ಮನವಪ್ಪೊಡೆ ದೇವರುಮೆ †[ಯ್ದುವಿನ್ನಿರ್ಗರಾ । ಕುಲಮಿದುಮಸ್ಮಂನಗಮನದೀನ] ನಿಜಪ್ರಣಯ ಪ್ರಸಾದದು ॥ ಲ್ಲರ್ಲಿತತಮುಂ ತ್ವದಾಗಮನಸಮುತ್ಸವಮುಂ ನೃಪಮುಂದೆ ಪೋಗಿ ಪೇ । ೞಲೆ ಪದೆದಾಸೆಗೆಯ್ದಪುದು ‡[ಬೀೞ್ಕೊಳಿ] ಪೊಂದು ಭವತ್ಪ್ರಸಾದಮುಂ ॥ ೩೮೮

ಕೇಯೂರಕವರ್ಷ್ಮನಂ—ಅಂಗದಭೂಷಿತಾಂಗನಾದ ಚಂದ್ರಾಪೀಡನನ್ನು.

೩೮೬. ಈ ಸಮವಸ್ಥೆ—ಈ ನಿನ್ನ ಸ್ಥಿತಿಯು; ನಿರಾಕುಲಮೆ—ನಿಸ್ಸಂಶಯವಾಗಿಯೆ.

೩೮೮. ತ್ವದಾಗಮನದ, ಉತ್ಸವಮಂ, ಮುಂದೆ, ಪೋಗಿ, ಪದೆದು—ಅಪೇಕ್ಷಿಸಿ; ಬೀೞ್ಕೊಳಿಪ—ಕಳುಹಿಸಿಕೊಳ್ಳುವ; ಭವತ್ಪ್ರಸಾದಮಂ—ನಿನ್ನ ಅನುಗ್ರಹವನ್ನು; ಆಸೆಗೆಯ್ದಪುದು—ಅಪೇಕ್ಷಿಸುತ್ತಿದೆ.

*[ಕೇಯೂರಕವರ್ಷಂ] †[ನೆಯ್ದಿದನ್ನಿರ್ಗರಾಕುಳಮಿದುಮಂತನಂಗಮನನಾನ]

‡[ಬಿಕ್ಕುೞಿ]

ವ॥ ಎಱುದುಂ ಪರಿತೋಷವಿಕಚನೀಲೋತ್ಪಲದೀರ್ಘದೃಷ್ಟಿಗಳಿಂ ದರ್ಶಿತಪ್ರಸಾದನಾಗಿ*[ಕೇಯೂರಕವರ್ಷ್ಮಂ ಕೇಯೂರಕನನಿಂತೆಂದಂ] ॥

ವೃ॥ ಇನಿಸಂ ಬಂದಬಳಲ್ಕೆಯುಂ ಬಗೆಯದಾಂ ಪೋದಪ್ಪೆ ನೆಂಬನ್ನ ನಾ । ವನೊ ಪೇಳಂತಿರೆ ದೇಶಕಾಲಗತಿಯುಂ ನಿನ್ನಂತಿರಲ್ಬಲ್ಲನಾ ॥ ವನೊ ನಿರ್ವ್ಯಾಜದೆ ಭಕ್ತಿಭಾವನೆಯ ನೆನ್ನೊಳ್ನಿನ್ನವೊಲ್ತೋರ್ಪ್ಪ ನಾ । ವನೊ ನೀನೇೞುದೆ ಕಜ್ಜಮಿಂತಿದನೆ ಬೇಗಂ ಮಾಡುಕೇಯೂರಕಾ ॥ ೩೯೧

ವೃ॥ ಈಗಲೆ ಪತ್ರಲೇಖೆವೆರಸಂಗನೆಯುಲ್ಲಿಗೆ ಮುಂದೆ ಪೋಗುನೀಂ । ಬೇಗಮಿವಳ್ಪಸಾಯಿತೆ ಮನೋಹರಿಗೀಕೆಯದೊಂದು ಕಾರ್ಣ್ಯಯಿಂ ॥ ದಾಗಿ ಯುಮಾತನೂದರಿಗೆ ಧೀರತೆಯುಂ ನಿಜಜೀವರಕ್ಷಣೋ । ದ್ಯೋಗಮು ಮಸ್ಮದಾಗಮನನಿಶ್ಚಯಮುಂ ದೊರೆಕೊಳ್ಗು ಮಾವಗಂ ॥ ೩೯೨

ವ॥ ಎಂದು ರಾಜಪುತ್ರಂ ಪೆಱಗಿರ್ದ್ದ ಪತ್ರಲೇಖೆಯುಂ ನೋಡಿ ॥ ೧೯೩

ಕಂ॥ ಪಿರಿದುಂ ಕೂರ್ಪ್ಪೆಯೊ ಕಾದಂ । ಬರಿಗೇಂ ಪೋದಪ್ಪೆ ಮುಂ ದೆ ಪೇಳೆನಲಾಜ್ಞಾ ॥ ಕ್ಷರಮನೆ ಬೆಸಗೊ †[ಳ್ವೆಂ] ದೇ । ವರೆನ್ನನಿಂತೇಕೆ ಮಗುಳೆ ಬೆಸಗೊಂಡಿಪಿರಿಂ ॥ ೩೯೪

ವ॥ ಎಂದು ಪತ್ರಲೇಖೆ ತನ್ನಗಮನಮಂ ನಿಶ್ಚೈಸುವುದು ಮರಸಂ ಮೇಘನಾದನಂ ಕರೆದು ಕೇಯೂರಕ ನೊಡನೆ ಪತ್ರಲೇಖೆಯ ನೊಡ ಗೊಂಡು ಮುಂದೆ ಪೋಗು ವೈಶಂಪಾಯನನೊಳ್ನೆರೆದಾನುಂ ಪಿಂತೆನಡೆದು ಬರ್ಪ್ಪೆನೆಂದು ಪೇಳೆ ದೇವರ್ಬೆಸಸಿದಂತೆ ಗೆಯ್ವೆನೆಂದು ಪೊಡವಟ್ಟು

೩೯೨. ಮನೋಹರಿಗೆ—ಕಾದಂಬರಿಗೆ; ಈಕೆ—ಈ ಪ್ರಲೇಖೆಯು; ಪಸಾ ಯಿತೆ—ಅನುಗ್ರಪಾತ್ರಳು; ಕಾರ್ಣ್ಯಯಿಂದಾಗಿಯುಂ—ದರ್ಶನದಿಂದಲಾದರೂ; ಆವಗಂ —ಸರ್ವಥಾ.

೩೯೩. ಪೆಱಗಿರ್ದ್ದ—ಹಿಂದೆಇದ್ದ; ಕಾದಂಬರಿಗೆ, ಪಿರಿದುಂಕೂರ್ಪ್ಪೆಯೊ—ಕಾ ದಂಬರಿಗೆ ನೀನು ಬಹಳವಿಶ್ವಾಸಪಾತ್ರಳಾಗಿದ್ದೀಯೋ?; ಮುಂದೆಪೋದಪ್ಪೆಯೇಂ— ಮುಂದೆಹೋಗುತ್ತೀಯೇನು; ಪೇಳ್, ಎನಲ್, ಆಜ್ಞಾಕ್ಷರವನ್ನುಬೆಸಗೊಳ್ವೆಂ.

*[ಕೇಯೂರವರ್ಷಂ ಕೇಯೂರನಿಂತೆಂದಂ] †[ಳ್ವುದೆ]

ಬೇಗಂ ಪೋಗೆಸಮುಕಟ್ಟಂ ಮಾಡಲೆಂದು ಮೇಘನಾದಂ ಪೊಱಮಡಲೊಡಂ ಕೇಯೂರಕನೆಳ್ದು ದೇವ ತಡವೆನಗೇವುದೆಂದು ಗಮನಪ್ರಣಾಮಮಂ ಮಾಡೆ ॥ ೩೯೫

ವೃ॥ ಪದಪಿಂದಂ ನೋಡಿಬಾಷ್ಪಾಕುಲನಯನದೆ ತಳ್ಕೈಸಿ ರೋಮಾಂಚದಿಂದಂ। ಪುದಿದಿರ್ದ್ದುದ್ದಾಮಬಾಹು ದ್ವಿತಯದಿ ಸದುಬೇಱೊಂದು ಸಂದೇಶಮೆಂಬಂ॥ ದದಿ ನಾಗಳ್ತಾನೆ ಕೇಯೂರಕನ ಕಿವಿಯೊಳುಲ್ಲಾಸಿತಾನೇಕವರ್ಣಾ। ಸ್ಪದಮಪ್ಪತ್ರೀಯ ಕರ್ಣಾಭರಣಮ ನೊಲವಿಂದಿಕ್ಕಿದಂರಾಜಪುತ್ರಂ ॥ ೩೯೬

ವ॥ ಅನಂತರಂ ಕಂಠಗತ *[ಬಾಷ್ಪಗದ್ಗದಿಕಾವಗೃಹ್ಯ] ಮಾಣಾಕ್ಷರನಾಗಿ ಕೇಯೂರಕನ ನಿಂತೆಂದಂ ॥ ೩೯೭

ಕಂ॥ ಸಂದೇಶಂ ದೇವಿಯ ದೆಸೆ। ಯಿಂದಂ ನೀಂ ತಂದುದಿಲ್ಲದರ್ಕ್ಕೇಗಳ್ತು ॥ ಕ್ಕಂಪದೆ ದೇವಿಯರ್ಗ್ಗಂ ಪ್ರತಿ। ಸಂದೇಶಮ ನೇನನಱಿಪವೇಳ್ವೆಂ ನಿನ್ನಂ ॥ ೩೯೮

ವ॥ ಅದಱಿ ನಾನಪೂರ್ವಮೆನೆ ಬಿನ್ನವಿಸಲ್ವೇಡಿದಪ್ಪ †[ದಿಲ್ಲಮಳೀಕಲಜ್ಜೆಯಿನೇಂ ನಿನಗೆ ಗಮನಾಯಾಸಮನೆ ತೊಡರ್ಚ್ಚಿದಪ್ಪೆಂ] ಪತ್ರಲೇಖೆಯೆ ಪೋಗಿ ಗಂಧರ್ವರಾಜನಂದನೆಗೆ ಬಿನ್ನವಿಸದಪ್ಪಳೆಂಬುದುಂ ತನಗಾದಗಲ್ಕೆಯ ನೋವಿಂದೊಗೆತಪ್ಪರ್ ಬಾಷ್ಪವೇಗಮ ನೆಂತಾನುಂ ತೋಱು

೩೯೫. ಪೋಗೆ ಸಮುಕಟ್ಟಂಮಾಡಲೆಂದು—ಹೋಗವದಕ್ಕೆ ಸನ್ನಾಹವನ್ನು ಮಾಡುವದಕ್ಕೆ; ಎನಗೆತಡಂ, ಏವುದು—ಸಾವಕಾರದಿಂದ ಪ್ರಯೋಜನವೇನು.

೩೯೯. ಅಪೂರ್ವಮೆನೆ—ಹೊಸದಾಗಿ; ಬಿನ್ನವಿಸಲ್ವೇಡಿದಪ್ಪುದಿಲ್ಲಂ—ತಿಳಿಸಬೇಕಾದದ್ದಿಲ್ಲ; ಅಳೀಕಲಜ್ಜೆಯಿನೇಂ—ಕಪಟಲಜ್ಜೆಯಿಂದ ಪ್ರಯೋಜನವೇನು? ತನಗೆ—ಪತ್ರಲೇಖೆಗೆ; ಆದ—ಉಂಟಾದ; ಅಗಲ್ಕೆಯ—ಚಂದ್ರಾಪೀಡನ ಅಗಲಿಕೆಯ; ಎಂತಾನುಂತೋಱುತ್ತಂ—ಅತಿಪ್ರಯಾಸದಿಂದ ಹೊರಪಡಿಸುತ್ತ ಅಂದರೆ ಹೊರಪಡಿಸುವದಕ್ಕೆ ಇಷ್ಟವಿಲ್ಲವೆಂದಭಿಪ್ರಾಯವು.

*[ಬಾಲಹೃಗದ್ಗದದೀಪಿಕಾವಗುಹ್ಯ]

†[ದಲ್ಲಿಯಮಾನಳಕಲಗ್ನೆಯಿಂಮಾಚ್ಚಿ ಪೇಳ್ದು ನಿನಗಚ್ಚಿಗಮನೆ]

ತ್ತಂ *[ಉಪದರ್ಶಿತ]ಲಕ್ಷ್ಯೈಶೂನ್ಯದೃಷ್ಟಿಸಂಚಾರೆಯುಂ ಚರಣಪಾ†[ತಾಭಿಮುಖಿಯು ಮಪಾ] ದಪತ್ರಲೇಖೆಯು ನಿಂತೆಂದಂ ನೀಂಪೋಗಿ ಕಾದಂಬರೀದೇವಿಗೆ ಬದ್ಧಾಂಜಲಿಯಾಗಿ ಪ್ರಣಾಮಪುರಸ್ಸರಮಪ್ಪೆನ್ನ ಬಿನ್ನಪಮಂ ಪೇಳ್ವುದೆಂತೆನೆ ॥ ೩೯೯

ವೃ॥ ಮೊದಲೊಳ್ ಬಂದು ಕಾಣಲೊಡನಂತಿರೆ ತನ್ನ ನಿಸರ್ಗವತ್ಸಲ । ತ್ವದಿ ನೆನೆಗಾಪ್ರಸಾದಪದಮಂ ದಯೆಗೆಯ್ದ ಮಹಾನುಭಾವೆಗಾ ॥ ಸುದತಿಗೆ ಪೇಳ್ದು ಬಪ್ಪಿನಿತುಗೌರವಮಂ ಮೊದಲಾಗಿ ಮಾಡಲಾ । ಱದೆ ಖಳರೋಳಿಯೊಳ್ದೊರೆಗೆವಂದನ ನೆನ್ನನದೇನನೆಂದಪೆಂ ॥ ೪೦೦

ಮತಿಯುಂ ಮೂಢತೆ ಧೈರ್ಯಮುಂ ತರಳಭಾವಂ ಲಜ್ಜೆಯುಂ ಧಾಷ್ಟ್ಯರ್ಯ ಮು । ನ್ನತಿಯುಂ ಕ್ಷುದ್ರತೆ ಸತ್ಯಮುಂ ಪುಸಿ ದೃಢಪ್ರೀತಿತ್ವಮುಂ ಪ್ರೀತಿಶೂ ॥ ನ್ಯತೆ ಮೆಲ್ಪಂ ಕಠಿನತ್ವ ಮಾದರಮು ನೌದಾಸೀನ್ಯ ಮೊಳ್ಪಂ ಕೃತ । ಘ್ನತೆ ಯೆಂಬಂತಿರೆ ತದ್ಗುಣೋತ್ಕರಮ ನೆರ್ಪ್ಪಾಟ್ಟಿತ್ತು ದೋಷೋತ್ಕರಂ ॥ ಅದಱಿಂ— 12370 ೪೦೧

ಕಂ॥ ಏನಂ ಗುಣಗಲವಮುಂ ಪಿಡಿ । ದಾನೆಳಸಿ ಪರಿಗ್ರಹಾರ್ಥದಿಂ ಬಿನ್ನವಿಪೆಂ ॥ ಮಾನಿನಿಗಾ ಮಾನಿನಿಯು ಮ । ದೇನೆಂದು ಗಡೆನ್ನ ನೀಗಳಂಗೀಕರಿಪಳ್ ॥ ೪೦೨

---

೪೦೦. ಪೇಳ್ದು ಬಪ್ಪಿನಿತುಗೌರವಮುಂಮೊದಲಾಗಿ—ಹೋಗಿಬರುತ್ತೇನೆಂದುಹೇಳಿ ಬರುವಷ್ಟು ಗೌರವವನ್ನು ಕೂಡಾ; ಮಾಡಲಾರದೆ, ಖಳರ, ಓಳಿಯೊಳ್—ಪಙ್ತ್ತಿಯಲ್ಲಿ; ದೊರೆಗೆವಂದ—ಸಮಾನನಾದ.

೪೦೧. ಮತಿಯುಂ—ಮೂಢತೆ; ಎರ್ಪ್ಪಾಟ್ಟಿತ್ತು ಎಂಬಂತಿರೆ-ಹೋಗಲಾಡಿಸಿತು ಎಂಬಹಾಗೆ; ತದ್ಗುಣೋತ್ಕರಮುಂ—ಆ ಕಾದಂಬರಿಯ ಗುಣಾತಿಶಯವನ್ನು; ದೋಷೋತ್ಕರಂ—ನನ್ನದೋಷಾತಿಶಯವು ಎರ್ಪ್ಪಾಟ್ಟಿತ್ತು ಎಂದನ್ವಯವು.

೪೦೨. ಏನಂಗುಣಲವಮುಂಪಿಡಿದು-ನನ್ನಲ್ಲಿ ಯಾವಗುಣಲೇಶವಿದೆಯೆಂದುತಿಳಿದು; ಪರಿಗ್ರಹಾರ್ಥದಿಂ—ಪರಿಗ್ರಹನಿಮಿತ್ತವಾಗಿ ಅಂದರೆ ಪರಿಗ್ರಹಿಸೆಂದು; ಮಾನಿನಿಗೆ ಬಿನ್ನವಿಪೆಂ—ವಿಜ್ಞಾಪಿಸಲಿ.

*[ಉಪದರ್ಶಿತಲಬ್ಧ] †[ಪಾದಾಭಿಮುಖಿಯಾದ]

ವೃ॥ ಪುಸಿಯೊಲವಿಂದ ಮೆನ್ನನಿರದೊಪ್ಪಿಸಿ ತೋರ್ಪುದಱಿಂದ ಮಾಂ ಪ್ರತಾ। ರಿಸಿದವ ನಾಗದಿರ್ದಪೆನೆ ದೇವಿಯ ಚಿತ್ತಮ ನಲ್ಲದಂದು ಪೇ। ಕ್ಷಿಸಿದವ ನಾಗದಿರ್ದಪೆನೆ ನಿಷ್ಕರುಣಾತ್ಮನೆನಿನ್ನದೆಂತು ಜೀ। ವಿಸಿದಪಳೆಂಬ ಸಂದೆಗಮ ನಾಗಿಪ ಕಾಮಿನಿಗಾದವಸ್ಥೆಯಂ॥ ೪೦೩

ವ। ಇಂತಖಿಲಗುಣವಿಹೀನನಾದೊಡ ಮೆನ್ನನಾನಿಖಿಲಗುಣಾಭಿರಾಮೆಯ ಗುಣಸ್ತೋಮಮೆ ಸೇವೆಗೊಡಬಡಿಸದಪ್ಪುದಿನಿತು ಗೆಂಟಾಗಿಯುಂ ಮದನದಹನಸಂತಪ್ತನಾದೆನ್ನ ನಾಸ್ವಭಾವಸರಸೆಯ [ಸರಸತೆಯೆರಕ್ಷಿ]ಸಿದಪ್ಪುದಾಸ್ಥಿರಪ್ರಕೃತಿಯ ಸತ್ಯಪ್ರಕೃತಿಯೆ ತೆಗೆಯಿಸಿದಪ್ಪುದಾ ದಕ್ಷಿಣ[ಹೃದಯೆಯ ದಕ್ಷಿಣತ್ವಮೆ ಗಮಿಯಿಸಿದಪ್ಪುದಾ ನಿಸ]ರ್ಗವತ್ಸಲೆಯ ವಾತ್ಸಲ್ಯಮೆ ಕಯ್ಕೊಳಿಸಿದಪ್ಪು ದಾಮೃದುಹೃದಯೆಯ ಮೃದುಹೃದಯಮೆ ಚರಣಪತಿತನಂ ಚಪ್ಪರಿ *[ಸದಿರ್ಪುದಾ] ಮಹಾನುಭಾವೆಯ ಮಹಾನುಭಾವತೆಯೆ ಮಾಣದತಿಸಂಭಾವನೆ ಗೆಯ್ಸಿದಪ್ಪು ದಾಮನೋಹರಾಲಾಪೆಯ ಪ್ರಿಯಾಲಾಪಮೆ ನುಡಿಯಿಸಿದಪ್ಪು ದಾಮಹೋ ದಾರೆಯುದಾರತೆಯೆ ಮನಂಗೊಳಿಸಿದಪ್ಪುದೆಂ †[ತಾದೊಡಂ] ಪೋಗಿ ನಾಣ್ಬದೆ ಮಗುಳೆ ಮೊಗಮಂ ನೋಳ್ಪ ಸಾಹಸಮ ನಪ್ಪುಕೆಯ್ದಪ್ಪೆನೆಂಬುದ ಕ್ಕೆಂತ್ಯುದಾರಂಗಳುಂ ಸತ್ಪ್ರಕೃತಿ ‡[ಗಳುಮಪ್ಪ] ದೇವೀಪ್ರಸಾದಂಗಳೆ ಕಾರಣ ಮದಱಿನವುತಡೆಯದೆ ತಾವೇಲಕಾಲೋಪಸರ್ಪಣಕೋಪ [ಮಂನೋಡಿ] ದೊಡನನುನ್ಯೆ

೪೦೩. ಪುಸಿಯೊಲವಿಂದಂ—ಮಿಥ್ಯಾನುರಾಗದಿಂದ; ಎನ್ನನಿರದೊಪ್ಪಿಸಿತೋರ್ಪುದಱಿಂ—ಆತ್ಮಾರ್ಪಣವನ್ನು ಮಾಡಿ ಕಾಣಿಸಿಕೊಳ್ಳುವದರಿಂದ; ದೇವಿಯಚಿತ್ತಮಂ, ಪ್ರತಾರಿಸಿದವಂ—ವಂಚಿಸಿದವನು; ಆಗದಿರ್ಪೆನೆ—ಆಗದೆ ಇರುವೆನೆ; ಅಲ್ಲದಂದು—ಅಥವಾ; ನಿಷ್ಕರುಣಾತ್ಮನೆಂ—ದಯಾಶೂನ್ಯನಾದ ನಾನು; ಇನ್ನದೆಂತು ಜೀವಿಸಿದಪಳ್ ಎಂಬ ಅವಸ್ಥೆಯಂ ಉಪೇಕ್ಷಿಸಿದವನಾಗದಿರ್ಪೆನೆ.

೪೦೪.—ಬಡಬಡಿಸದಪ್ಪುದು—ಉದ್ಯುಕ್ತನನ್ನು ಮಾಡುವದು; ತೆಗೆಯಿಸಿದಪ್ಪುದು—ಎಳೆಯಿಸುವದು; ಕಯ್ಕೊಳಿಸಿದಪ್ಪುದು—ಅಂಗೀಕರಿಸುವಹಾಗೆ ಮಾಡುವದು; ಚಪ್ಪರಿಸದಿರ್ಪುದು—ಗದರಿಸದೆಯಿರುವದು; ಮನಂಗೊಳಿಸಿದಪ್ಪುದು—ಮನಸ್ಸು ಒಪ್ಪುವಹಾಗೆಮಾಡುವದು; ನೋಡಿದೊಡನೆ—ನನ್ನನ್ನು ನೋಡಿದಕೂಡಲೆ; ಅನುನ್ಯೆಸಲುಂ—

*[ಸುತ್ತಿದ್ದರ್ಪುದಾ] †[ತೆಂದಡೆ] ‡[ಗುಣಂಗಳಪ್ಪ]

ಸಲುಂಗುಣಾ *[ನುವಾದದಿಂ ಲಜ್ಜಿತನಂ] ಬರೆತೆಗೆಯಲುಂ ಕಡುಗೆಂಟಾದನಂ ಬಳಿಯಟ್ಟಿದೆಯುಂ ಬಲ್ಪಿನಿಂದೇವಿಯ ಪಾದಮೂಲಮನೆಯ್ದಿಸಲುಂ ಸಾಲ್ವುವೆಂದು ನಿಶ್ಚೈಸಿ ನಿರಪೇಕ್ಷಿತಗಮನಾಜ್ಞನಾಗಿ ತಂದೆಯ ನಿಯಾಮದಿಂ ಪೋದನದಲ್ಲದೆಯುಂ ॥ ೪೦೪

ಪೃಥ್ವೀವೃತ್ತ॥ ಅದೆಂತು ದೊರೆಕೊಳ್ಗು ಮೆನ್ನ †[ಬರವಿಂಗೆ ಸಾಫಲ್ಯಮಿ । ನ್ನದೆಂತುಚಿತಮಕ್ಕು ಮಾತ್ಮಗುಣಬೃಂದಮಿಂ] ತೀಜಗ ॥ ಕ್ಕದೆಂತು ನಯನೋತ್ಸವಂ ಸತತಮಕ್ಕು ಮಂತಾಗೆಯು । ತ್ತದಿಂ ನಿಜಶರೀರಮಂ ನಿಲಿಸವೇಳ್ಪುದಿಂ ದೇವಿಯರ್ ॥ ೪೦೫

ವ॥ ಎಂದುಬಿನ್ನವಿಸೆಂದುಬೆಸಸಿ ರಾಜಪುತ್ರಂ ಪತ್ರಲೇಖೆಯನಿಂತೆಂದಂ ॥ ೪೦೬

ವೃ॥ ತಡಮೆನಗಿಲ್ಲ ಮದ್ವಿರಹವೇದನೆಯುಂ ನೆನೆಯಲ್ಕಳುಂಬಮಿ। ಯೆಡೆಯೊ ಳನಾದರಂಗೆಯುದಿರನ್ಯರ ಪೇಳ್ಕೆಯುದೆಂಬ ಬಟ್ಟೆಯೊ ॥ ಳ್ನಡೆ

ಕೋಪವನ್ನು ಶಮನಮಾಡುವದಕ್ಕೂ: ಗುಣಾನುವಾದದಿಂ—ಮದ್ವಿಷಯಕವಾದ ಕಾದಂಬರಿಯಪ್ರಸಾದಗಳು ಮಾಡುವಗುಣಾನುವಾದದಿಂದ ಅಂದರೆ ಆಕೆಯ ಪ್ರಸನ್ನತೆಯೆ ಆಕೆ ಗುಣವನ್ನು ವ್ಯಕ್ತಪಡಿಸುವವೆಂದಭಿಪ್ರಾಯವು. ಲಜ್ಜಿತನಂ—ಲಜ್ಜಾವಿಶಿಷ್ಟನಾದ; ಬರೆತೆಗೆಯಲುಂ—ಆಕರ್ಷಿಸುವದಕ್ಕೂ; ಸಾಲ್ವುವೆಂಮ—ಸಮರ್ಥಗಳಾಗುತ್ತವೆಯೆಂದು ನಿರಪೇಕ್ಷಿತಗಮನಾಜ್ಞನಾಗಿ—ಗಂಧರ್ವಲೋಕದಿಂದಬರುವಕಾಲದಲ್ಲಿ ಕಾದಂಬರಿಯ ಆಜ್ಞೆಯನ್ನು ಪಡೆಯದವನಾಗಿ.

೪೦೫. ಎನ್ನಬರವಿಂಗೆ—ನನ್ನಆಗಮನಕ್ಕೆ; ಸಾಫಲ್ಯಂ, ಅದೆಂತುದೊರೆಕೊಳ್ಗುಂ—ಹ್ಯಾಗೆ ಉಂಟಾಗುವದೊ; ಆತ್ಮಗುಣಬೃಂದಂ—ಕಾದಂಬರಿಯ ಗುಣಸಮೂಹವು; ಅದೆಂತುಚಿತಮಕ್ಕುಂ—ಹ್ಯಾಗೆಯೋಗ್ಯಗಳಾಗಿರಬೇಕೋ; ಅಂತಾಗೆ—ಹಾಗೆ ಆಗುತ್ತಿರಲು; ಇರ್—ಇನ್ನು; ದೇವಿಯರ್, ನಿಜಶರೀರಮಂ, ನಿಲಿಸವೇಳ್ಪುದು—ನಿಲ್ಲಿಸಿಕೊಳ್ಳಬೇಕು.

೪೦೭. ಈ ಎಡೆಯೊಳ್—ಈವಿಷಯದಲ್ಲಿ; ಅನ್ಯರಪೇಳ್ಕೆಯದು—ಅನ್ಯರು ಹೇಳಿದ್ದು ಎಂಬ ಬಟ್ಟೆಯೊಳ್ ಅಂದರೆ ಯಾರೋ ಒಬ್ಬರು ಹೇಳಿದ ಮಾರ್ಗದಲ್ಲಿ;

*[ಪರಾಥಲಜ್ಜಿತನಂ] †[ಪರದಿಂದೆಸಾಫಲಮಿಲ್ಲದೆಂತುಚಿತಮಕ್ಕುಗುಣದ್ವೀದನಿಂ]

ಯದಿ ರೇತಱೆಂದಱಿಯದಲ್ಲಿ ರದಿರ್ಪ್ಪೆಱೆದಾಗ್ರ್ಗ ವುಂತರಂ । ಗುಡದಿ
ರನಾರತಂ ಮಱೆಯದಾಗಿಸು ನೀಂತನುಗಪ್ಪಯತ್ನಮಂ ॥ ೪೦೭

ವೃ॥ ಇದನಿನ್ನೆಂತೆಂದಪೆಂ ವಲ್ಲಭತರವೆನಗಾದತ್ತು ನಿನ್ನಿಂದ ಮಂತಾ ।
ಸುದತೀಪ್ರಾಣಂ *[ದಲಿನ್ನೀನದನೆ] ನಿಲಿಸಲೆಂದೊರ್ಬ್ಬಳಂ ನಿನ್ನನಿಂತ ॥
ಟ್ಟಿದಪೆಂಮಜ್ಜೀವಿತಂ ನಿನ್ನಯ ಕರತಲದೊ ಳ್ನಿಂದುದೆಂತಾದೊಡಂ ಯ ।
ತ್ನದಿನೆನ್ನಂ ರಕ್ಷಿಸೆಂದಳ್ಕಱೊಳೆ ತೆಗೆದು ತಳ್ಕೈಸಿದಂ ರಾಜಪುತ್ರಂ ॥ ೪೦೮

ವ॥ ಅನಂತರ ಮಿಾಬಿನ್ನಪಮಂ ಪತ್ರಲೇಖೆ ಮಱೆಯದಂತು ಮಾ
ಳ್ಪದೆನ್ನ ನೊಡಗೊಂಡು ಪೋಗಲ್ಕೀಕೆವೆರಸು ಮಹಾಶ್ವೇತಾಶ್ರಮಕ್ಕೆ
ನೀನೆ ಮಗುಳೆಬರ್ಪ್ಪುದೆಂದು ಕೇಯೂರಕಂಗೆ ಬೆಸಸಿ ಬೀಳ್ಕೊಳಿಸಲೊಡ
ಮವ ನನೇಕಾಶ್ವೀಯಬಲಸಮನ್ವಿತನಪ್ಪ ಮೇಘನಾದಂಬೆರಸು ಪೋದನಿತ್ತ
ನೃಪರೂಪಚಂದ್ರ ನವರಗಲ್ಕೆಯಿಂ ಸಚಿಂತನಾಗಿ ಕಿಱಿದುಬೇಗವಿರ್ದ್ದು
ಕಟಕವಾರ್ತೆಗೆ ವಾರ್ತಾಹರರನಟ್ಟಿ ತಾನುಂ ವೈಶಂಪಾಯನಂಗಿದಿರ್ವ್ವೋ
ಪುದಕ್ಕೆ ಬೀಳ್ಕೊಳಲೆಂದು ತಂದೆಯಲ್ಲಿಗೆ ವಂದು ಕೃತಪ್ರಣಾಮನಾಗಿ
ಓಲೈಸುತ್ತಮಿರೆ ತಾರಾಪೀಡಂ ಸರ್ವಾಂಗಸುಂದರನಪ್ಪ ಕುಮಾರನಂಗಪ್ರ
ತ್ಯಂಗಂಗಳನತಿಪ್ರೀತಿಯಿಂ ಕರತಲದಿನೆಳವುತ್ತಮಿರ್ದ್ದು ॥ ೪೦೯

ವೃ॥ ಘನಶೌರ್ಯಾನಲಧೂಮವಲ್ಲಿ ವದನಾಂಭೋಜಾಳಿನೀಮಾಲೆ
ಯೆಾ । ವನಗಂಧದ್ವಿಪ ದಾನಲೇಖೆ ವಪ್ರುರಾಲೇಖ್ಯ †[ಪ್ರಭೋನ್ಮೀಲನಾಂ]
ಜನರುಗ್ಲೇಖೆ ವಿವಾಹಮಂಗಳ [ಕಿದೇ] ಭ್ರೂಸಂಜ್ಞೆ ಯೆಂಬಂತೆ ಚೆ ।
ಲ್ವನದೇಂ ಶ್ಮಶ್ರುವಿಕಾಸರೇಖೆ ತಳೆದತ್ತೀಗಳ್ಕುಮಾರಾಸ್ಯದೊಳ್ ॥ ೪೧೦

ಪಿತಱೆಂದು—ಇದುಯಾವದೆಂದು; ಅಱಿಯದಲ್ಲಿ—ತಿಳಿಯಸ್ಥಳದಲ್ಲಿ, ಇರದಿರ್.

೪೦೮. ನಿನ್ನಿಂದಂ—ನಿನಗಿಂತಲೂ; ವಲ್ಲಭತರಂ—ಅತಿಪ್ರಿಯವಾದದ್ದು; ದ
ಲ್ನಿಶ್ಚಯವು; ದಲ್+ಇನ್+ನೀಂ+ಅದನೆ—ಆಪ್ರಾಣವನ್ನೇ; ನಿಲಿಸಲೆಂದು—ನಿಲ್ಲಿ
ಸಬೇಕೆಂದು.

೪೧೦. ವಪ್ರುರಾಲೇಖ್ಯ—ಶರೀರವೆಂಬಭಾವಚಿತ್ರದ; ಪ್ರಭಾ—ಕಾಂತಿಯನ್ನು;
ಉನ್ಮೀಲನ—ಪ್ರಕಾಶಮಾಡುವ; ಅಂಜನರುಗ್ಲೇಖೆ—ನೀಲವರ್ಣದ ಜೇವರೇಖೆಯು.

*[ದಬಿಂನಿನ್ನೆದನೆ] †[ಪ್ರದೋನ್ಮೀಳನಾಂ।]

ವ॥ ಎಂದು ತನ್ನೊಳೆ ಭಾವಿಸುತ್ತಿರ್ದ್ದ ತಾರಾಪೀಡನ ಮನೋಗತಾಭಿಪ್ರಾಯಮಂ ನಱಿದು ಶುಕನಾಸನಿಂತೆಂದಂ ॥ ೪೧೧

ವೃ॥ ವಿವಿಧಾಶೇಷಕಲಾಧಿಪತ್ಯಪದಮಂ ಕಯ್ಕೊಂಡ ನೇಕಾತಪ। ತ್ರವನೆನಲ್ಭಾವಿಸಿದಂ ಜಗತ್ಪ್ರಭುತೆಯಂ ಪೂರ್ವ್ವಾಂತುಟನ್ನೀನೆ ದೇ ॥ ವ ವಧೂಸಂಗತನಾಗೆ ಮಾಡಿ ಬಳಿಯಂ ನಿನ್ನೀಕುಮಾರಾನನೇಂ। ದುವ ನಾನಂದದೆ ನೋಡಿ ಮಾಡುವುದು ನೀಂನೋಟಕ್ಕೆ ಸಾಫಲ್ಯಮಂ ॥ ೪೧೨

ವ॥ ಎಂಬುದುಂ ತಾರಾಪೀಡನಿದೇ ಚಿತ್ತದೊಳಿರ್ದ್ದುದಾದೊಡಂ ವೈಶಂಪಾಯನನುಂ ಬಂದೊಡಲ್ಲದೊಂದುಮಂ ಮಾಡಲಱಿಯದಿರ್ದ್ದೆನೆನಲೊಡಂ ಲಜ್ಜಾವನತವದನನಾಗಿ ಯುವರಾಜನು ಮದನೆ ಮನದೆಗೊಂಡೆನ್ನ ಮನೋರಥಂ ನೀಡಿರದೆ ಕೂಡಿದಪ್ಪುದೆಮ್ಮಯ್ಯಂ ವೈಶಂಪಾಯನನ ಬರವನೆ ಪಾರ್ದ್ದಿರ್ದ್ದಪನದುವೆ ಕಾದಂಬರೀದರ್ಶನಕ್ಕಂತರಮಾಗಿರ್ಪ್ಪುದೆಂದು ತನ್ನೊಳೆ ಬಗೆದು ಚಿಂತಿಸುತ್ತಂ ಸಂತಸದಂತನೆಯ್ದೆ ಕಿಱಿದುಬೇಗಕ್ಕೆ ತದಾಸ್ಥಾನದಿಂದುತ್ಥಿತನಾಗಿ ॥ ೪೧೩

ವೃ॥ ವಿನಯಭರಾವನಮ್ರತನುವಪ್ಪ ತನೂಭವನಂಸದೇಶದೊಳ್। ವನಧಿವೃತಾವನೀಭರ ಧುರಂಧರ ದಕ್ಷಿಣಬಾಹುದಂಡಮಂ ॥ ಮನವೊಸೆದಿಕ್ಕಿ ಮಂತ್ರಿಶುಕನಾಸಸಮೇತ ನಿಳಾಧಿನಾಥ ನೊ। ಯ್ಯನೆ ನಡೆತಂದ ನಾವಿಭು ವಿಲಾಸವತೀಭವನಕ್ಕೆ ಲೀಲೆಯಿಂ ॥ ೪೧೪

ವ॥ ಆಗಳಿಂದೂದಯಾವಲೋಕನದಿಂ [ವಿಲೋಲಮಾದ] ಸಮುದ್ರದವೇಲೆಯಂತೆ ಸಂಭ್ರಮದಿನಿದಿರೆಳ್ದ ವಿಲಾಸವತೀಮಹಾದೇವಿಯ ಮೊಗಮಂ ರಾಜಾಧಿರಾಜಂ ನೋಡಿ ॥ ೪೧೫

---

೪೧೩. ಎನಲೊಡಂ—ಎಂದು ತಾರಾಪೀಡನು ಹೇಳಿದೊಡನೆ; ಅದನೆ—ವೈಶಂಪಾಯನಾಗಮನವನ್ನೆ; ಮನದೆಗೊಂಡು—ನೆನೆದು; ನೀಡಿರದೆ—ವಿಳಂಬವಿಲ್ಲದೆ; ಅದುವೆ—ವೈಶಂಪಾಯನಾಗಮನವೆ; ಕಾದಂಬರೀದರ್ಶನಕ್ಕೆ, ಅಂತರಮಾಗಿರ್ಪ್ಪುದು—ಅಡ್ಡಿಯಾಗಿರುವದು; ಸಂತಸದಂತನೆಯ್ದೆ—ಚಂದ್ರಾಪೀಡನು ಅತ್ಯಂತಸಂತೋಷಪಡಲು; ಉತ್ಥಿತನಾಗಿ—ತಾರಾಪೀಡನು ಮೇಲಕ್ಕೆ ಎದ್ದು.

ವೃ॥ ಪದೆ *[ಯುತ್ತಿರ್ದ್ದೆ) ವಧೂವಿಲೋಕನ ಸುಖಕ್ಕೆಂದುಂ ವಿವಾಹೋತ್ಸವ । ಕ್ಕಿದೆ ನೋಡಾಗ್ರಹಮಂ ಕುಮಾರವದನಶ್ಮಶ್ರೂದ್ಗಮಂಮಾಡಿದ ॥ ಪ್ಪುದು ನಿನ್ನಿಂಜ್ಞಗಮೇನೊ ಪೇಳೆನೆ ಕರಂ ನಾಣ್ಚಿಪ್ಪುರ್ದುಂದೇವಿಪೇ । ಳದಿರಲ್ಕಾರಣಮೇಂ ಮಗಂಗೆ ಪಿರಿದುಂ ನೀಂಕೂರ್ಪ್ಪುದಿಲ್ಲಾಗದೇ ॥

ವ॥ ಎಂದಿವುಮೊದಲಾಗಿ ಪಲವುಂನರ್ಮಾಲಾಪಂಗಳಿಂದಮ ಸುಖಾಯಮಾನಸ್ವಾಂತನಾಗಿ ರಾಜಾಧಿರಾಜಂ ಕಿಱಿದುಬೇಗಮಿರ್ದ್ದು ಪೋಪುದುಂ ಚಂದ್ರಾಪೀಡನುಂ ವೈಶಂಪಾಯನ ಪ್ರತ್ಯುದ್ಗಮನಾರ್ಥಂ ಶುಕನಾಸಮುಖದಿಂ ತಂದೆಯುಂ ಬೀಳ್ಕೊಂಡುನಿಜರಾಜಭವನಕ್ಕೆ ಬಂದು ಗಮನಸಂವಿಧಾನವಿನೋದದಿಂದ ಮಾಪಗಲಂ ಕಳೆದು ಸುಹೃದ್ದರ್ಶನೋತ್ಸುಕಚಿತ್ತನಾಗಿ ಶಯನತಲಕ್ಕೆ ಮಂದೆಚ್ಚತ್ತಂದದೊಳೆ ಯಾಮಿನೀಯಾಮದ್ವಯಮುಂ ಕಳಿಪಿ ॥ ೪೧೭

ಕಂ॥ ಮನಮೊಲ್ದು ಯಾಮಿನೀಕಾ । ಮಿನಿಯುಂ ತನ್ನಯಕರಂಗಳಿಂ ಚಂದ್ರಂ ಚಂ ॥ ದನರಸಮುಂ ಪೂಸಿದನೆಂ । ಬಿನಮೆಸೆದುದು ಸಾಂದ್ರಚಂದ್ರಿಕಾವಿಸ್ತಾರಂ ॥ ೪೧೮

ವೃ॥ ಮೇಗೆನಿಸಿರ್ದ್ದದೊಂದು ಸಕಲಗ್ರಹತೇಜಮ ನೊಯ್ಯ *[ನಿಂಗಿಸು ।] ತ್ತಾಗಸಮುಂ ನೆಲಕ್ಕೆಳಪುತಿರ್ದ್ದಪನೀನೆಲನಂ ಹಿಮಾಂಶುಮೇ ॥ ಣಾಗಸಕೆತ್ತುತಿರ್ದ್ದಪ ನೆನಲ್ಕನಿತುಂ †[ಬಿಳಿದಾಗೆ] ರೋದಸೀ । ಭಾಗಮು ನಾಮಗಂ ತಗುಳೆ ಪೆರ್ಚ್ಚಿಸಿದಂ ನಿಜರಶ್ಮಿಜಾಲಮುಂ ॥ ೪೧೯

---

೪೧೬. ವಧೂವಿಲೋಕನಸುಖಕ್ಕೆ—ಸೊಸೆಯ ಮುಖಾವಲೋಕನಸುಖಕ್ಕೆ ; ಎಂದುಂ—ಯಾವಾಗಲೂ ; ಪದೆಯುತ್ತಿರ್ದ್ದೆ—ಅಪೇಕ್ಷಿಸುತ್ತಿದ್ದೆ ; ಶ್ಮಶ್ರೂದ್ಗಮಂ, ವಿವಾಹೋತ್ಸಕ್ಕೆ—ಮದುವೆಯನ್ನು ಮಾಡಲಿಲ್ಲವೆಂಬವಿಷಯದಲ್ಲಿ ; ಆಗ್ರಹಮಂಮಾಡಿದಪ್ಪುದು ; ನಿನ್ನಿಂಜ್ಞಗಮೇನೊ—ನಿನ್ನಭಿಪ್ರಾಯವೇನು ; ಕೂರ್ಪುದಿಲ್ಲಾಗದೆ—ಪ್ರೀತಿಸುವದಿಲ್ಲವೆಂದಾಗುವದಿಲ್ಲವೆ.

೪೧೯. ಮೇಗೆನಿಸಿರ್ದ್ದ—ಉತ್ತಮವಾದದ್ದು ಎನಿಸಿಕೊಂಡಿದ್ದ ; ಇಂಗಿಸುತ್ತೆ—ಉಡುಗಿಸುತ್ತ ; ಅನಿತುಂ—ಸಮಸ್ತವೂ ; ಬಿಳಿದಾಗೆ—ಬಿಳಿದಾಗಲು ; ರೋದಸೀಭಾಗಮಂ—ಭೂವ್ಯೋಂತರಿಕ್ಷಪ್ರದೇಶಗಳನ್ನು ; ತಗುಳೆ—ಆಕ್ರಮಿಸುತ್ತಿರಲು.

*[ಪದೆವುತ್ತಿರ್ದ್ದ] †[ಬಿಳಿಯಾಗಿ]

ಕಂ॥ ವನಜದಳಂಗಳೊಳೊಂದೊಂ । ದನೆ ಮುಗಿಯಿಸಿ ಕುಮು ದವನದಳಂಗಳೊ ಳೊಂದೊಂ ॥ ದನೆ ಪಿಡಿದಲರ್ಚುತಿರ್ದ್ದುವು । ವೆನೆ ಪೂ ಗೊಳದೊಳಗೆ ಪೊಳೆದು ವಿಂದುಕರಂಗಳ್ ॥ ೪೭೦

ವೃ॥ ಗಿರಿಶಿಖರಂಗಳೊ ಳ್ಪರೆದು ಸೌಧಗೃಹಂಗಳೊ ಳೊಂದಿ ರಥ್ಯೆ ಯೋ । ಳ್ಪರಿದು ಸರಸ್ತರಂಗಿಕೆಗಳೊ ಳ್ಪೊರೆದಂಚೆಗಳೊಳವೆಳ್ಪಿನೊ ॥ ಳ್ಬೆರಸಿ ಲತಾಂಗಿಯರ್ಕ್ಕಳ ಕದಂಪುಗಳೊ ಳ್ಪುದಿದಿಂದುಕಾಂತದಿಂ । ಸುರಿ ವ ಜಲಂಗಳಿಂ ತೊಳೆದು ಪರ್ವಿದುವಿಂದುಮರೀಚಿಮಾಲೆಗಳ್ ॥ ೪೭೧

ಸುರತಾಂತಶ್ರಾಂತಿಯಿಂ ನೀರಡಿಸಿದಬಲೆಯುಗ್ಗಿಂಟಲೌತ್ಸುಕ್ಯದಿಂ ನ । ಲ್ಲರೊಳೊಂದಲ್ಪೋಪ ನಾರೀಜನಕೆ ಪಱಿಗಲೆಂದೇಱಲುದ್ಯಾನಮಾ ಲಾಂ ॥ ತರದೊ ಳ್ಬಚ್ಚಲ್ಗಳಂತಿರ್ದ್ದಿಸ ಲವಿರಳಘರ್ಮಾದ್ರಕಾಂತಾಜನ ಕ್ಕಾ । ದರದಿಂನೀರಾಟಮಾಡಲ್ನೆಱೆಗುವೆನೆ ಪೊದಳ್ದತ್ತು ಚಂದ್ರಾಂಶು ಜಾಲಂ ॥ ೪೭೨

ವ॥ ಅನ್ನುಜ್ವಲಮಾದ ಚಂದ್ರಿಕಾವಿಲಾಸದಿಂ ಮನುಜೇಂದ್ರ ಚಂದ್ರಂ ದ್ವಿಗುಣೀಕೃತಗಮನೋತ್ಸಾಹನಾಗಿ ಗಮನಸಂಜ್ಞಾಶಂಖಮಂ ಪೂರಿಸಲ್ವೇಳ್ದಾಗಳ್ ॥ ೪೭೩

ವೃ॥ ನಗರಪ್ರಾಕಾರ ಕೂಟೋತ್ಕರದೊಳೆಱಗಿತೆಂಬಂತೆ ಹರ್ಮ್ಯಾ ವಳೀಕು । ಕ್ಷಿಗಳೊ ಳ್ಕಯ್ಗೆಯ್ದುದೆಂಬಂತು [ಪವನತಳದೊ ಳ್ತಳ್ತುದೆಂ

೪೭೧. ಪರೆದು--ಹರಡಿಕೊಂಡು ; ಒಂದಿ—ಸೇರಿ ; ರಥ್ಯೆಯೊಳ್—ರಾಜ ಮಾರ್ಗದಲ್ಲಿ ; ಪರಿದು—ಹರಿದಾಡಿ ; ಪೊರೆದು—ಪುಷ್ಟವಾಗಿ ; ಒಳವೆಳ್ಪಿನೊಳ್— ಪುಂಜೀಭೂತವಾದಧವಳವರ್ಣದಲ್ಲಿ ; ಪುದಿದು—ಸೇರಿ ; ತೊಳೆದು—ತೊಳೆಯಲ್ಪಟ್ಟು, ಇಲ್ಲಿ ತೊಳೆ ಧಾತುವಿನಮೇಲೆ ದುಪ್ರತ್ಯಯವು ಕರ್ಮಾರ್ಥದಲ್ಲಿ ಬಂದಿರುವದು. ಶಶಾ. ೫೪೩.

೪೭೨. ನೀರಡಸಿದ—ಬಾಯಾರಿದ ; ಪಱಿಗಲೆಂದು—ಹರಿಗೋಲೆಂದು ; ಏಱ ಲ್—ಹತ್ತುವದಕ್ಕೆ ; ನೆಱೆಗುಂ—ಸಾಕಾಗಿರುವದು ; ಎನೆ—ಎಂಬಂತೆ ; ಪೊದಳ್ದತ್ತು —ವಿಸ್ತಾರವಾಯಿತು.

೪೭೩. ಪೂರಿಸಲ್—ಊದಿಸುವದಕ್ಕೆ ; ಇಲ್ಲಿಪ್ರೇರಕಾರ್ಥದ ಇಸುಪ್ರತ್ಯಯ ಪರ ವಾದ್ದರಿಂದ ಸ್ವಾರ್ಥದಲ್ಲಿ ಬಂದಿದ್ದ ಇಸುಪ್ರತ್ಯಯಕ್ಕೆ ಲೋಪವು, ಶಶಾ, ಸೂ. ೫೪೧.

೪೭೪. ಕಯ್ಗೆಯ್ದುದು—ಅಲಂಕೃತವಾಯಿತು; ತಳ್ತುದು—ಪಲ್ಲವಿತವಾಯಿತು ;

ಬಂತೆ] ದಿಗ್ರಾ || ಜಿಗಳೆಳ್ಳಿಂಕಿಟ್ಟುದೆಂಬಂತನಿಲಪಥದೊಳಾವರ್ತಿಸು ತ್ತಿರ್ದ್ದುದೆಂಬಂ | ತೊಗೆವತ್ತುತ್ತಾ *[ರರಾಗಂ] ತ್ರಿಭುವನಭವನೋದ್ಭೇದಿಶಂಖಪ್ರಣಾದಂ || ೪೨೪

ವ|| ತದನಂತರಂ.

ವೃ|| ಘನವರ್ಮಾಗ್ರಂ ಕುಂತಶಾಖಾಕಬಳತ ಮಖಿಲೋರ್ವೀವಿಭಾಗಂ ಖುರಾನೀ | ಕನಿರುದ್ಧಂ ಶ್ರೋತ್ರಪಾತ್ರೀವರಮವಿರಳಹೇಷಾರವಾಪೂ ರಿತಂ ರಾ || †[ಜನಿವಾಸ] ದ್ವಾರದೇಶಂ ವಿಗಳದಮಲಫೇನಪ್ರತಾನಾಂಚಿತಂ ತಾ | ನೆನೆ ‡[ರತ್ನಾಭೋಗ] ರೋಚಿರ್ಜಟಿಲಿತತನುಬಂದತ್ತನಂತಾಶ್ವಜಾಲಂ||

ವ| ಅನಂತರಂ ಪಲ್ಲಣಿಸಿದಿಂದ್ರಾಯುಧಮುಂ ಗೃಹೀತಸಮಾಯೋಗ ನಾಗಿ ನೃಪರೂಪಚಂದ್ರನೇಱಲೊಡನೆ.

ಕಂ|| ತಿಲಕಿತಭುವನಂಗೆನ್ನಯ | ¶[ಬೆಳಗಂ] ಸಲೆ ಮಾಳ್ಪನೆಂದು ಚಂದ್ರಮನೊಡನೀ || ತಳರ್ದಪನೆಂಬಿನೆಗಂ ಮಂ | ಗಳಧವಳಚ್ಛತ್ರ ಮೆಸೆದು ತೋಱುತ್ತಾಗಳ್ || ೪೨೬

ವ|| ಅಂತಾಸಮಯದೊಳಖಿಲರಾಜಲೋಕದಿಂ ಪ್ರಣಮ್ಯಮಾನ ನಾಗಿ ಪರಸ್ಪರಾರ್ದಿತಜಾನುಭಾಗರಪ್ಪನೇಕಾಶ್ವಿಕಬಲಸಮನ್ವಿತನಾಗಿ ನಗೆ

ತು; ಧೀಂಕಿಟ್ಟುದು—ಸೆಗೆದುದು; ಆವರ್ತಿಸುತ್ತೆ—ಸುತ್ತುತ್ತ; ಉತ್ತಾರರಾಗಂ—ಗಟ್ಟಿಯಾದರಾಗವಿಶೇಷವುಳ್ಳ, ಶಂಖಪ್ರಣಾದಂ, ಒಗೆದತ್ತು—ಉಂಟಾಯಿತು.

೪೨೫. ಅಭೋಗ—ಹೆಚ್ಚಾದ: ರೋಚಿಃ—ಕಾಂತಿಯಿಂದ, ಜಟಿಲಿತ—ವ್ಯಾಪ್ತವಾದ, ತನು—ಶರೀರವುಳ್ಳ.

೪೨೬. ಪಲ್ಲಣಿಸಿದ—ಜೀನುಹಾಕಿದ: ಗೃಹೀತಸಮಾಯೋಗನಾಗಿ—ಪರಿಗ್ರಹಿಸಲ್ಪಟ್ಟಗಂಧಮಾಲ್ಯಾದಿಗಳುಳ್ಳವನಾಗಿ; ತಿಲಕಿತಭುವನಂಗೆ—ಭುವನತಿಲಕನಾದ ಚಂದ್ರಾಪೀಡನಿಗೆ, ಚಂದ್ರಮಂ, ಬೆಳಗಂ—ಪ್ರಕಾಶವನ್ನು; ಸಲೆ—ಚೆನ್ನಾಗಿ; ಮಾಳ್ಪೆನೆಂದು, ಈತಳರ್ದಪಂ—ಇದೋಮುಂದೆಹೊರಡುತ್ತಾನೆ; ಎಂಬಂತೆ, ಧವಳಚ್ಛತ್ರಂ ಎಸೆದುತೋಱಿತ್ತು.

*[ನರಾಗಂ] †[ಜನಿವಾರ] ‡[ರತ್ನಾಯೋಗ] ¶[ಬಲಮಂ]

ರಿಯಂ ಪೊಱಮಟ್ಟನತಿದೂರದೊಳ್ [ತ್ರಸ್ತಹಂಸಸಾರ್ಥೋತ್ಪಲ] ವ್ಯತಿಕರೆಯಪ್ಪ ಶಿಪ್ರಾನದಿಯಂ ದಾಂಟಿ ಬೆಳ್ದಿಂಗಳಿಂ ಬಿತ್ತರಿಸಿದಂತಿರ್ದ ದಶಪುರದ ಬಟ್ಟೆವಿಡಿದು ನಡೆಯುತ್ತಪರರಾತ್ರಿವೇಳೆಯನಿತರ್ಕೆ ಯೋಜನತ್ರಿತಯುಮಂ ಪೋಗೆ ॥ ೪೨೭

ವೃ॥ ಎನಸುಂ ನಿರ್ಭರಚಂದ್ರಿಕಾ ಜಲದೊಳೋಲ್ದೋಲಾಡಿ ಮೆಯ್ಯಿಟ್ಟವಂ । ಜಿನ ತುಂತುಪ್ಪನಿರೆ ಳ್ದ್ರಾದಳ್ದಲರ್ದ ಚೆನ್ನೆಯ್ದಿಲ್ಗಳೊಳ್ಗಂಪಿನಿಂ ॥ ಪನಲಂಪಿಂ ತೆಗೆದೊಟ್ಟಿಕೊಂಡವನಿಪಂ ಗಧ್ವಶ್ರಮಂ ಪಿಂಗುವಂ । ತು ನಿಶಾನಿರ್ಗಮಸೂಚಕಂ ತಳರ್ದುತೀಡಿತ್ತೊಂದು ಮಂದಾನಿಲಂ ॥

ವ॥ ಅನಂತರಂ ಮೆಲ್ಲಮೆಲ್ಲನೆ ಯಾಮಿನಿಯುಗಲ್ಕೆಗೆ ಚಿಂತಿಸಿದಂತೆ ಚಂದ್ರಬಿಂಬಂ ಬೆಳರ್ಪನಪ್ಪುಕೆಯ್ಯೆ ಕುಮುದವತೀವಿರಹಸಂತಾಪದಿಂ ದಿಳಯವಿಟ್ಟ ಕುಮುದಿನೀಪ್ರಿಯನ ಧವಳೋತ್ತರೀಯಮೆಂಬಂತೆ ಬೆಳ್ದಿಂಗಳ ಬೆಳಗಿನ ಬಳಗಮೋಸರಿಸೆ ಪಡುವಣಕಡಲ್ವಾಗೆ ಪರಿವಬೆಳ್ದಿಂಗಳ ಬೆಳ್ವಾನಲೊಳುರ್ವಿದ ಬೊಬ್ಬುಳಿಕೆಗಳಂತೆ ತಾರಗೆಗಳ್ ತಲೆಗರೆಯೆ ಪೊಯ್ವಾರಿಂ ಪೊಱಮಡುವಂತೆ ಲತಾವಿಟಪಂಗಳ್ ನಿಜಮಾದಪಸುರ್ವೆಳ್ಪನೊಳಕೆಯ್ಯೆ ದಿವಾಕರನುದಯದೊಸಗೆಗಿಂದ್ರಂ ದಿಗ್ಭಿತ್ತಿಯಂ ಕುಂಕುಮದಪಂಕದಿಂ *[ಕಾರಳಿಗೊಳಸಿವನೆಂಬಂತೆ] ಸಂಜೆಗೆಂಪು ರಂಜಿಸೆ ಕಿಱಿದಾನುಂ ಬೇಗದೊಳ್ ॥ ೪೨೮

ವೃ॥ ಒದವಿರೆ ರಾಗದೇಳ್ಗೆ ನಿಜಮಂಡಲದೊಳ್ಕರದಿಂದೆ ಮುಂದೆವ । ರ್ವಿದ ರಜನೀತಿರಸ್ಕರಿಣಿಯಂ ಪೆಱಪಿಂಗಿಸಿ ಪದ್ಮಿನೀವಧೂ ॥ ವದನ ಸರೋಜಮಂ ಪದಪಿನಿಂ ದಮೆ ನೋಡುವೆನೆಂಬ ಮಾಳ್ಕೆಯಿಂ । ದುದಯ ಗಿರೀಂದ್ರವೇದಿಕೆಯು ನೇಱಿದನೊಯ್ಯನೆ ಪದ್ಮಿನೀಪ್ರಿಯಂ ॥ ೪೩೦

ವ॥ ಆಗಳಖಿಲಜಗದ್ದೀಪಿಕೆಯಂತೆದಿವಸಕರದೀಧಿತಿಗಳಗ್ಗಳಸೆ ನಿರಂತರದೃಷ್ಟಿಪ್ರಸರನಾಗಿ ಭೋಂಕನೆ ಮುಂದರ್ಧಗವ್ಯೂತಿಮಾತ್ರದಲ್ಲಿ ॥

---

*[ಕಾಲ್ವಳಿಗೊಂಡಂತೆ]

ವೃ ॥ ಇರದಂತಃಕ್ಷೋಭವೇಗಕ್ಕಗಿದುಗುಳ್ದುದೊ ಪಾತಾಳಮಾ
ಕ್ರಾಂತಸ್ಯೈನ್ಯೋ । ತ್ಕರಭಾರೋದ್ಭ್ರತಿಯಿಂ ನೂಂಕಿದುದೊ ವಸುಮತೀ
ಭಾಗ ಮೊತ್ತೊತ್ತಿನಿಂನಿ ॥ ತ್ತರಿಸಲ್ತಾನಾಱದೇನೊಂದೆಡೆಗೆ ತೆಗೆದುದೋ
ವಿಶ್ವದಿಕ್ಚಕ್ರಮೆಂಬಂ । ತಿರುಳೆಲ್ಲಂ ಬಂದುಬೀಡಂ ಬಿಡುವಕಟಕಮಂ ಕಂ
ಡನಾಗಳ್ನರೇಂದ್ರಂ ॥ ಅಂತುಕಂಡು.— ೪೩೨

ಕಂ॥ ಎನಗಿದು ಲೇಸಾದುದದೆಂ । ತೆ ನಲಿದಿರ್ದಱುತಿರ್ದ್ದ ಬೀಡಿನೊ
ಳ್ಮೆಯ್ಗರೆದೊ ॥ ರ್ವನೆಪ್ರೋಗಿ ಕಾಣ್ಕೆಯಿಂ ಭೋಂ । ಕನೆ *[ಮಾಳ್ಪಂ]
ಪ್ರಿಯಸಖಂಗೆ ಸಂತಸದೊದವಂ ॥ ೪೩೩

ವ॥ ಎಂದುಮನದೊಳೆ ಬಗೆದರಸಂ ಛತ್ರಚಾಮರಾದಿಚಿಹ್ನಂಗಳು
ಮ ನಖಿಲರಾಜಪುತ್ರಲೋಕಮುಮ †[ನಗಲ್ದು] ತನ್ನೇಱಿದ ವಾರುವ
‡[ದೊಡವರ್ಪ] ನಾಲ್ಕಯ್ದುಕುದುರೆಗಳ್ವೆರಸು ತನ್ನನಱಿಯಲಾಗದಂತು
ತ್ತರೀಯದಿಂ ಮೊಗಮಂ ಸುತ್ತಿ ಕಟಕದೊಳಗವಿದಿತವೃತ್ತಾಂತನಾಗಿ ವೈಶಂ
ಪಾಯನನ ಬೀಡಾವುದೆಂದಲ್ಲಿಗಲ್ಲಿಗೆ ಬೆಸಗೊಳ್ವುದುಂ ॥ ೪೩೪

ಕಂ॥ ಮನೆಮನೆದಪ್ಪದಿಪೇಂ ಮರು । ಳನವ್ರೊ ಲ್ಬೆಸಗೊಳ್ವೆಯಣ್ಣ

೪೩೨. ಅಂತಃಕ್ಷೋಭ—ಒಳಗೆ ಉಂಟಾದಬಾಧೆಯು, ವೇಗಕ್ಕೆ, ಅಗಿದು—ಭಯಪಟ್ಟು, ಪಾತಾಳಂ, ಉಗುಳ್ದುದೊ—ಓಕರಿಸಿತೊ : ಆಕ್ರಾಂತಸ್ಯೈನ್ಯೋತ್ಕರಭಾರೋದ್ಭ್ರತಿಯಿಂ— ವಸುಮತೀಭಾಗಂ, ನೂಂಕಿದುದೊ—ಮುಂದಕ್ಕೆತಳ್ಳಿತೊ ; ಒತ್ತೊತ್ತಿನಿಂ—ಇಕ್ಕಟ್ಟಿನಿಂದ, ತಾಂ, ನಿತ್ತರಿಸಲ್, ನಿರ್ವಾಹಮಾಡಿಕೊಳ್ಳುವದಕ್ಕೆ, ಆಱದೆ—ಸಮರ್ಥವಾಗದೆ : ವಿಶ್ವದಿಕ್ಚಕ್ರಂ, ಬಂದೆಡೆಗೆ—ಬಂದುಸ್ಥಳಕ್ಕೆ, ತೆಗೆದುದೋ ಏಂ—ಎಳೆದುಹಾಕಿತೋಏನು ಎಂಬಂತೆ ಇರುಳೆಲ್ಲಂ, ಬಂದು—ನಡೆದು, ಬೀಡಂಬಿಡುವ—ಇಳಿದುಕೊಳ್ಳುವ, ಕಟಕಮಂ ನರೇಂದ್ರಂಕಂಡಂ.

೪೩೩. ಮೆಯ್ಗರೆದು—ಪ್ರಚ್ಛನ್ನನಾಗಿ: ಕಾಣ್ಕೆಯಿಂದ—ನನ್ನ ದರ್ಶನದಿಂದ : ಭೋಂಕನೆ—ಥಟ್ಟನೆ ; ಪ್ರಿಯಸಖಂಗೆ, ಸಂತಸದೊದವಂ—ಸಂತೋಷಾವಿರ್ಭಾವವನ್ನು ಮಾಳ್ಪೆಂ.

*[ಪ್ರೋಪೆಂ] †[ನಗಲಿರಿಸಿದಂತೆ] ‡[ದಾರನಮುವ್ವ]

ನೀಂವೈಶಂಪಾ ॥ ಯನನೆಲ್ಲಿರ್ಪ್ಪನಸಂಬ । ದ್ಧನೆಪೋಗೆಂದೆನಸುವಲ್ಲಿಗಲ್ಲಿಗೆ ಜಡಿದರ್ ॥ ೪೩೫

ವ॥ ಅನ್ತುಜಡಿಯಲಿದೇನೆಂದು ಸುಹೃತ್ಸ್ನೇಹಕಾತರಹೃದಯನಪ್ಪು ದಱಿಂ ಮತ್ತಮಲ್ಲಲ್ಲಿಗೆ ಬೆಸಗೊಳ್ವುದುಮವರುಮಂತೆಜಡಿಯೆ ವಿಹತ ಯೂಥಪತಿಯಪ್ಪ ಕರಿಕಲಭದಂತತಿತ್ರಸ್ತನಾಗಿ ಮುಂದುಗಾಣದೆ ವಿಹ್ವಲ ನಾಗಿ ತೊಳಲುತ್ತುಂ ಕಟಕದ ನಡುವನೆಯ್ದಿಬರ್ಪ್ಪನ್ನೆಗ ಮಿಂದ್ರಾಯುಧ ಪ್ರತ್ಯಭಿಜ್ಞೆಯೊಳ ಮ*[ನುಪ್ರಧಾವಿ]ತ ರಾಜಪುತ್ರಲೋಕದೊಳಂ ಚಂ ದ್ರಾಪೀಡದೇವ ನೆಂದಱಿ[ದು ದೆಸೆ]ದೆಸೆಯೊಳಂ ತಳವೆಳಗಾಗಿ ಪರಿತಂದು ನಾಣ್ಚಿ ಮೊಗಂಬುಗದೋರೊರ್ವ್ವರಪೆಱಗಡಂಗಿ †(ಗೆಂಟಿನೊಳ್] ಮೆಲ್ಲಮೆ ಲ್ಲನೆಱಗುವ ರಾಜಪುತ್ರಸಹಸ್ರಂಗಳ ಮೊಗಮುಂ ನೋಡಿ ಚಂದ್ರಾಪೀಡಂ ವೈಶಂಪಾಯನನೆಲ್ಲಿರ್ದ್ದಪನೆಂದು ಬೆಸಗೊಳ್ವುದುಂ ॥ ೪೩೬

ವೃ॥ ಮರದಡಿಯಲ್ಲಿ ದೇವರಿಳಯಿಂ ಶುಕನಾಸತನೂಜವಾರ್ತೆಯಂ। ನಿರವಿಸಿದಪ್ಪೆವೆಂಬುದು 'ಮಿದೇನೆನುತಂತೆ ಸುಹೃದ್ವಿಯೋಗಕಾ ॥ ತರಹೃದ ಯಂನರೇಂದ್ರಸುತನಚ್ಚರಿಯಾಗಿರೆ ಮೂರ್ಚ್ಛೆವೋಗಿ ‡[ಬೀ । ಳ್ತ್ರ]ಲಿರ ದೆತ್ತಿಕೊಂಡಿಳಿಪಿದ ರ್ದ್ಧರಣೀಪತಿಯಂ ತುರಂಗದಿಂ ॥ ೪೩೭

ಕಂ ॥ ¶[ದೇವತನುವೆರಸಿರೆಂತಂ । ತಾ]ವೈಶಂಪಾಯನಂ ಸುಖಂ ನಿಶ್ಚಯದಿಂ ॥ ಜೀವಿಸುತಿರ್ದ್ದಪ ನೆನಲಂ । ತಾವಚನಾಮೃತದೆ ಮೂರ್ಚ್ಛೆ ಯಿಂದೆಚ್ಚೆತ್ತಂ ॥ ೪೩೮

---

೪೩೫. ಎನಸುಂ—ಬಹಳವಾಗಿ ; ಅಲ್ಲಿಗಲ್ಲಿಗೆ—ಅಲ್ಲಲ್ಲಿ ; ಜಡಿದರ್—ಗದರಿಸಿ ದರು.

೪೩೬. ತಳವೆಳಗಾಗಿ—ತಲ್ಲಣಿಸಿ ; ಮೊಗಂಬುಗದೆ—ಎದುರಿಗೆಬರದೆ : ಒರೊ ರ್ವ್ವರಪೆಱಗಡಂಗಿ—ಒಬ್ಬರಹಿಂದೆ ಒಬ್ಬರು ಮರೆಯಾಗಿ.

೪೩೭. ನಿರವಿಸಿದಪ್ಪೆವು—ವಿಜ್ಞಾಪಿಸುವೆವು ; ಬೀಳ್ತರಲ್—ಬೀಳಲು.

೪೩೮. ದೇವತನುವೆರಸಿರೆ—ದೇವಶರೀರದಿಂದಕೂಡಿದ್ದರೆ ; ಎಂತು-ಹ್ಯಾಗೊ ; ಅಂತು—ಹಾಗೆ.

*[ತಿಪ್ರಚ್ಛಾಂ] †[ಗೆಂಟಱೊಳ್] ‡[ಬಿ । ತ್ತರಲ್] ¶[ದೇವತತಿವೆರಸಿರೆಂದಾ]

ವೃ ॥ ಎನಗಿನು ವಿಸ್ಮಯಂ ಕ್ಷಣಮಗಲ್ದು ಬರ್ದುಂಕದ ನೆನ್ನನಿಂತಗ । ಲ್ದಿನಿತುದಿನಂ ಬರ್ದುಂಕಿದಪ ನಾದೊಡಮಕ್ಕೆಮ ದೇಕೆ*[ಬಾರವಾ ॥ ಅನೆ]ಸಖನೆಲ್ಲಿನಿಂದ ನಿರದೊರ್ವನನಿಂತಿರೆ ಬಿಟ್ಟುಬಂದಿರೇ । ಕನೆ ನೃಪನಂದನಂಗೆ ಮೊದಲಿಂ ನೆಱೆಬಿನ್ನವಿಕುಂ ಬಲಾಹಕಂ ॥ ೪೩೯

ವ । ದೇವಬ್ಬಿಜಯಂಗೆಯ್ಯಲೊಡನೆ ಮಱುದಿವಸಂ ವೈಶಂಪಾಯನಂಪ್ರಯಾಣಭೇರಿಯಂಪೊಯ್ಸಿ ಕಟಕಮೆಲ್ಲಮಂ ಮುಂದೆ ನಡೆಯಲ್ವೇಳ್ದು ಪುರಾಣಂಗಳೊಳ್ ಪುಣ್ಯತೀರ್ಥಮೆಂದು ಕೇ†[ಳ್ದಪ್ಪುದಱಿ]ನಾಸೀಯಚ್ಛೋದಮುಂ ಮಿಂದು ಸಿದ್ಧಾಯತನದ ಭಗವದ್ಭವಾನೀವಲ್ಲಭಂಗೆ ಪೊಡವಟ್ಟು ಪೆಱಗೆಪೋಪೆನೆಂದು ಪಾದಮಾರ್ಗದೊಳೆ ನಡೆಯುತ ಮಚ್ಛೋದಕ್ಕೆವಂದು ಆಪ್ರದೇಶದ ರಮಣೀಯತೆಗೆ ಸೋಲ್ತೆಲ್ಲಾ ದೆಸೆಯುಮಂ ನೋಡುತ್ತಂ ಪೋಗೆ ॥ ೪೪೦

ವೃ ॥ ಸುರಕಾಂತಾ ಕರ್ಣಪೂರೋಚಿತ ಕಿಸಲಯದಿಂದೊಂದಿ ಸಂದಿರ್ದ ಪುಷ್ಪೋ । ತ್ಕರದೊಳ್ತಳ್ವಯ್ವ ಭೃಂಗೀನಿವಹನಿನದದೊ ಳ್ಕೂಡಿ ಬರ್ಹಂಗಳಿಂದಂ ॥ ಪೊರೆದಾಶಾಭಿತ್ತಿಯಂ ತನ್ನಯ ಪಸುರ್ವೆಳಗಿಂ ಪೂಸುತಿರ್ಪಂತೆ ಚೆಲ್ವಾ । ಗಿರೆ ಮುಂದೊಂದಂ ಲತಾಮಂಟಪಮನವನಿಪ್ಪಂದಾರಕಂ ಕಂಡನಾಗಳ್ ॥ ೪೪೧

ವ ॥ ಅಂತಪನಚ್ಚರಿವಟ್ಟು ನೋಡುತ್ತಿರ್ಪುದುಂ ॥

---

೪೩೯. ಬರ್ದುಂಕಿದಪನಾದೊಡಂ—ಜೀವಿಸುತ್ತಿರುವವನಾದರೂ ; ಅಕ್ಕೆಮ—ಆಗಲಿ ; ಅದೇಕೆಬಾರಂ—ಯಾಕೆಬರಲಿಲ್ಲ ; ಅರನೆ—ಬಲ್ಲನೆ ? ಅಕ್ಕೆಮ+ಅದೇಕೆ—ಅಕ್ಕೆಮದೇಕೆ. ಇಲ್ಲಿ ಎಮಶಬ್ದಕ್ಕೆ ಅವ್ಯಯಸಂಜ್ಞೆಯೂ ಇರುವದರಿಂದ ಸಂಧಿದೋಷವಿಲ್ಲ.

೪೪೦. ಪೆಱಗೆಪೋಪೆನೆಂದು—ಹಿಂದೆಹೋಗುವೆನೆಂದು ತಾನು ಯೋಚಿಸಿ.

೪೪೧. ಸಂದಿರ್ದ—ಪ್ರಸಿದ್ಧಗಳಾದ ; ತಳ್ವಯ್ವ—ಎರಗುವ ; ಪೊರೆದು—ವ್ಯಾಪ್ತವಾಗಿ ತನ್ನಯ—ಲತಾಮಂಟಪದ.

*[ಬಾರಬಾ । ರನೆ] †[ಳಲಪ್ಪುದಱಿ]

ಕಂ ॥ ಕುಳಿರ್ವಚೆಲ್ವೀದದ ತೆರೆಯೆಲ । ರೊಳೆ ಪುಳಕಂ ಪೊಣ್ಮಿದಂತೆ ತಣ್ಗದಿರ್ಗಳ್ಕಂ ॥ ಸೊಗ್ಗಳಿಸಿರೆ ಶಶಿಕಾಂತಶಿಲಾ । ತಳವೊಂದುಜ್ಜ್ವಲಿಸಿ ತಾಲತಾವುಂಟಪದೊಳ್ ॥ ೪೪೦

ವೃ ॥ ಕಂಡಱಿವಂತೆ ಮುನ್ನ ಶುಕನಾಸತನೂಭವ ನಾಗಳಾಲತಾ । ಮಂಡಪಮಂ ಕರಂ ಮನದೆ *[ಮತ್ತಮೊಱಲ್ದು] ನೋಡುತಂ ॥ ಕಂಡರಿಸಿಟ್ಟರೋ ಕಡೆದರೋ ಕರುವಿಟ್ಟರೊ ನಿಡ್ದೆಬಂದು ಕ । ಯ್ಕೊಂಡುದೊ ಪೇಳವೆಂಬಿನೆಗ ಮಲ್ಲಿಯೆ ನಿಂದನದೊಂದು ಜಾವಮಂ ॥ ೪೪೩

ವ ॥ ಅನ್ತು ನಿಂದು.—

ವೃ ॥ ತನುವಂ ತಾಳ್ದರಲಾಱದೊಮ್ಮೆ ದಲೆಮೂರ್ಚ್ಛಾವೇಗಂದಿಂ ದಿಕ್ಕುವ । ಟ್ಟನ ಪೊಲ್ಝೊಂಪಿಸಿ ಜೋಲ್ದುನೇಲ್ದು ನೆಲದೊಳ್ಕುಳ್ಳಿರ್ದನೇನಾನುಮೊಂ ॥ ದನೆತನ್ನೊಳ್ಪರಿಭಾವಿಸಿತ್ತ ಮೆಸಿತಾನುಂ ಪೊಳ್ತನಿಷ್ಪಂದಗಾ । ತ್ರನು ಮುದ್ಬಾಷ್ಪನಿಮಗ್ನನೇತ್ರನು ಮೆನಲ್ತನ್ಮಂತ್ರಿಮುಖ್ಯಾತ್ಮಜಂ ॥ ೪೪೪

ವ ॥ ಅನ್ತಿರ್ದ್ದನಂ ನೋಡಿ ರಸಿಕರಪ್ಪರೆನ್ನರ್ಕಂಡೊಡಂ ಸೋಲ್ವರೆಂದೆಮ್ಮ ಮನದೊಳ್ಬಗೆದು ವೈಶಂಪಾಯನನ ನಿಂತೆಂದೆವು ॥

---

೪೪೦. ತೆರೆಯೆಲರೊಳೆ—ತೆರೆಯಗಾಳಿಯಿಂದ ; ಪುಳಕಂಪೊಣ್ಮಿದಂತೆ—ರೋಮಾಂಚ ಉಂಟಾದಹಾಗೆ, ತಣ್ಗದಿರ್ಗಳ್—ಚಂದ್ರಕಾಂತಶಿಲೆಯತಂಪಾದಕಿರಣಗಳು ; ಕಣ್ಗೊಳಿಸಿರೆ.

೪೪೩. ಒಱಲ್ದು—ಪ್ರೀತಿಸಿ ; ಕಂಡರಿಸಿಟ್ಟರೋ—ಕೆತ್ತಿಇರಿಸಿದರೊ ; ಕರುವಿಟ್ಟರೊ—ಎರಕವನ್ನು ಹೊಯ್ದರೊ ; ಅದೊಂದುಜಾವಮಂ—ಒಂದುಜಾವಹೊತ್ತು ; ನಿಂದಂ—ನಿಂತನು ಅದೊಂದುಜಾವಮಂ ಎಂಬಲ್ಲಿ ಕಾಲಾರ್ಥಕವಾದ ಜಾವಶಬ್ದದಮೇಲೆ ದ್ವಿತೀಯೆಬಂದಿರುವದು, ಶ.ಮ. ಸೂ.

೪೪೪. ಇಕ್ಕುವಟ್ಟನಪೊಲ್—ಪ್ರತಿಹತನಂತೆ ; ಝೋಂಪಿಸಿ—ಮೈಮರೆತು ; ಅನಿಷ್ಪಂದ—ನಿಶ್ಚಲವಾದ.

೪೪೫. ಎನ್ನರ—ಎಂಥಾವರು.

*[ಮುತ್ತಮರಲ್ದು]

ವೃ ॥ ಇದು ದಲ್ಚೈತ್ರರಥಾಹ್ವಯಂ ಬನಮಿದಚ್ಛೋದಂ ಸರಂ ನೋಳ್ಪೊಡೀ । ತ್ರಿದಶಾವಾಸ ಮಿದಿಂತುಟಲ್ತೆ ರಮಣೀಯಂ ಬೀಡುಮಂತೆತ್ತಿ ಪೋ ॥ ದುದು ರಾಜಾತ್ಮಜರಿಂತು ನಿನ್ನ ಬರವಂ ಪಾರುತ್ತ ಮಿರ್ದಪ್ಪರಂ। ತವಱಿಂ ಬೇಗವೆಮಿಂದು ಕಾಣಭವನಂ *[ಸದ್ವಿಪ್ರ]ವಿದ್ಯಾಧರಾ ॥ ೪೪೫

ವ ॥ ಎಂಬುದುಂ ಮೂಗನಂತೇನುಮಂ ನುಡಿಯದೆ ಲತಾಮಂಟಪ ಮನೆ ನೀಡುಂ ನೋಡುತ್ತ ಮಿರ್ಪ್ಪುದುಂ ಮತ್ತಾ ವಾಗಳಡಿಗಡಿಗನಿವಿಸ ಲೆಮ್ಮ ನಿಮಕ್ಕೆ ಸೈರಿಸದೆ ಚಂದ್ರಾಪೀಡಭುಜಪರಿರಕ್ಷಿತಮಪ್ಪ ತುರಂಗಬಲಂಬೆರಸು ನೀವಿಲ್ಲಿರವೇಡಿಂ ಕಟಕಮಂ ಮುಂದಿಟ್ಟೊಡಗೊಂಡು ಪೋಗಿ ಮಾಂಬಪ್ಪು ದಿಲ್ಲೆಂದು ಜಡಿದೆಮ್ಮಂ ಚೆಟ್ಟವೆಟ್ಟರಾಗಿ ಪಱಿಪಡೆ ನುಡಿದು ಮುನ್ನಿನಂದ ದೊಳೆಮನಂಗೊಂಡು ಜಾನಿಸುತ್ತಿರ್ದ್ದನ ನಿಂತೆಂದೆವು ॥ ೪೪೬

ವೃ ॥ ನಿನಗೀವೈರಾಗ್ಯ ಮೇಕೊವೆರ್ಮ್ದಲೊಗೆದು ದಿದೆಮ್ಮಿಂದವಾಯ್ತೋ ಭವನ್ಮಿ । ತ್ರನಿದಾಯ್ತೋ ನಿನ್ನ ನಾವೀತೆಱದೆ ನಿಲಿಸಿಪೋದಂದು ರಾಜೇಂದ್ರ ಚಂದ್ರಾಂ ॥ ಕನತಾರಾಪೀಡಭೂಪಾಲಕನ ಮುಳಿಸನಾರಾಂಪ ರೇಳ್ವೋಪಮೆಂದಿಂ । ತನಿವಂ ಗೆಯ್ವುತ್ತಿರಲ್ಕಂ ನುಡಿಯನೆ ಶುಕನಾಸಾತ್ಮಜಂ ಮತ್ತಮೆಮ್ಮೊಳ್ ॥ ೪೪೭

ವ ॥ ಮತ್ತಂ ಬರವಿಂಗಾಗ್ರಹಿಸ ಲಿಂನುಡಿಯದಿರಿಂಚಂದ್ರಾಪೀಡನೊಳ್ಮೆರೆವಪುಣ್ಯಮೆನಗಿಲ್ಲೆನ್ನನಗಲ್ಚಿದ ಬಿದಿಬಲ್ಲಿದನೆಂದಲ್ಲಿಂದೆಳ್ದು ಪೋಪನಬೆ

---

೪೪೬. ಅಸಿವಿಸಲ್—ಸಮಾಧಾನಪಡಿಸಲು, ಚೆಟ್ಟವೆಟ್ಟರಾಗಿಪಱಿಪಡೆ—ಚೆಲ್ಲಾಪಿಲ್ಲಿಯಾಗಿ ಓಡುವಹಾಗೆ ; ಜಡಿದು—ಗದರಿಸಿ.

• ೪೪೭. ಒಮ್ಮೆರ್ದಲ್—ಅಕಸ್ಮಾತ್ತಾಗಿ ; ಮುಳಿಸನಾರಾಂಪರ್—ಕೋಪವನ್ನು ಯಾರು ಸಹಿಸಬಲ್ಲರು : ಅಸಿವಂ—ಸಮಾಧಾನವನ್ನು ; ನುಡಿಯನೆ—ಮಾತನ್ನೇ ಆಡಲಿಲ್ಲ.

೪೪೮. ಆಗ್ರಹಿಸಲ್—ನಾನುಆಗ್ರಹಮಾಡಲು : ಇಸ್—ಇನ್ನುಮೇಲೆ ; ನುಡಿಯದಿರಿಂ—ಮಾತಾಡಬೇಡಿ ; ಬಿಡೆಜಡದು—ಬಹಳವಾಗಿ ಗದರಿಸಿ.

*[ಸಂವಿಪ್ರ]

ನ್ನೊಳಾವೆಲ್ಲಂ ಪೋಗೆವೋಗೆ ನೀವೇಕೆ ಬಂದಪ್ಪಿರೆಂದೆಮ್ಮಂ ಬಿಡೆಜಡಿದು ಕಿಱಿದಂತರಂ ಪೋಗಿ ‖ ೪೪೮

ವೃ‖ ತರುವೀಥೀವ್ರಾತದೊಳ್ಕಳ್ತಲೆವಿಡುವ ತಮಾಲಂಗಳೊಳ್ಮಲ್ಲಿಕಾವಂ । ದಿರದೊಳ್ಸಾಲತಾಮಂಟಪದೊಳೆಸೆವ ಬೀಳ್ಜೊಂಪದೊಳ್ಪ್ರೆವ್ಯಪದ್ಮಾ ‖ ಕರತೀರೋಪಾಂತ ಸಿದ್ಧಾಯತನದೊಳೆನಸುಂ ಭ್ರಾಂತಿಯಿಂ ಭಾವಿಸುತ್ತೆ । ಚ್ಚರಿವಟ್ಟೇನಾನುಮಂ ಕಟ್ಟಿದನಱಸುವಪ್ರೋಲ್ಲ್ಕಡೆ ನೋಡುತ್ತಮಿರ್ದ್ದಂ ‖ ೪೪೯

ವ ‖ ಅನ್ತದನನನ್ಯದೃಷ್ಟಿಯಾಗಿ ತೊಳಲುತ್ತಂ ಪಲವುದಿವಸಮುಣ್ಣದೆ ಕುಡಿಯದಿರ್ದ್ದನ ನೆಂತಾನುಮಾಹಾರಾಭಿಮುಖನಂ ಮಾಡೆ ಕಂದಮೂಲಫಲಂಗಳನಲ್ಲದೆ ಮೆಲ್ಲೆನೆಂದು ನಿಯಮಂಮಾಡಿರ್ದ್ದನಂ ನೋಡಿ ‖

ವೃ ‖ ಬರವಿನಮಾತು ಮಂತ್ರಿಸುತನೊಳ್ಪಱವಟ್ಟುದ ನೆಯ್ದೆಕಂಡು ದೇ । ವರ ಬಳಿಗಲ್ಲದಿಂ ಬರವು ಕೂಡದು ನಿಶ್ಚವಮೆಂದು ವಾಜಿಗ ‖ ಳ್ಪರಸು ಕೆಲಂಬರಂ ಪೆಱಗೆ ಕಾಪಿರಿಸಿಟ್ಟು ಸಮಸ್ತಸೇನೆ ಗ । ಲ್ಲಿರವಿದಯುಕ್ತಮೆಂದು ನಡೆತಂದೆ ವಿದಿಂತುಟು ವೃತ್ತಕಂನ್ನೃಪಾ ‖ ೪೫೧

ವ ‖ ಎಂದು ಬಿನ್ನವಿಸೆ ಚಂದ್ರಾಪೀಡ ನದೆಲ್ಲಮಂ ಕೇಳ್ದು.—

ವೃ ‖ ಜನಿಯಿಸಿದಂದುತೊಟ್ಟಗಲದಾತನ ನಿಂತಿರಗಲ್ದ ಪಾಪಕ । ರ್ಮನನ ವಿವೇಕಿಯಂ ಗುಣವಿಹೀನನ ನೆನ್ನನಳೀಕಮಿತ್ರನಂ ‖ ನೆನೆಯದೆ ನಿಂದೊಡಂ ಗುರುಜನಂಗಳಮೇಗಣದೊಂದು ಭಕ್ತಿಯುಂ । ನೆನೆವು ಮನೋರಮಾಪ್ರಿಯಸುತಂ ಬರವೇಳ್ಕು ಮದೇಕೆ ನಿಂದನೋ ‖ ೪೫೨

---

೪೫೧ ಬರವಿನಮಾತು ಮಂತ್ರಿಸುತನೊಳ್, ಪಱವಟ್ಟುದಂ—ಬಿಟ್ಟುಹೋದ್ದನ್ನು ಅಂದರೆ ಇಲ್ಲದನ್ನು ; ಕಂಡು—ನಾವುತಿಳಿದು ; ದೇವರಬಳಿಗಲ್ಲದೆ, ಬರವು—ನಮ್ಮ ಆಗಮನವು, ಇರ್—ಇನ್ನೆಲ್ಲಿಗಾದರೂ, ಕೂಡದು, ನಿಶ್ಚವಂ—ನಿಶ್ಚಯವು ಅಂದರೆ ನಾವು ತಮ್ಮಬಳಿಗೆ ಬರಬೇಕಲ್ಲದೆ ಇನ್ನೆಲ್ಲಿಗೂಹೋಗಕೂಡದೆಂದು ತಾತ್ಪರ್ಯವು.

೪೫೨. ಜನಿಸಿದಂದುತೊಟ್ಟು—ಹುಟ್ಟಿದ್ದುಮೊದಲ್ಗೊಂಡು.

ಕಂ ॥ ಪುರುಷಾರ್ಥತ್ರಿತಯುವು ಸವ । ಧರಿಸದೆ ವೈರಾಗ್ಯವೇಕೆ ಪ್ರಟ್ಟಿದುದೋಟೆ । ಜ್ಟರಮೆಂಬುದ ಸಾಂಪ್ರೋಗಿಯೆ । ನೆರೆದಲ್ಲಿಯ ಮಾತ್ಯ ಮುಖ್ಯಸುತಸೊಳ್ತಿೞವೆಂ ॥ ೪೫೩

ವ । ಆದಲ್ಲದೆಯುಂ ಪತ್ರಲೇಖೆಯುಂ ಪೋದಳಲ್ಲಿಯೆ ವೈಶಂಪಾಯನನನುಮಿರ್ದಪನವಱಿ ನಾತನನೊಡಗೊಂಡು ಬಂದಪ್ಪೆನೆಂದುತಂದೆಯಂ ಬೀಳ್ಕೊಂಡು ಪೋಗಿ ಮಹಾಶ್ವೇತಾಶ್ರಮದೊಳಿರ್ದ ವೈಶಂಪಾಯನನಂ ಹೇಮಕೂಟಕ್ಕಟ್ಟಿ ನಡೆಯಿಸಿ ಕಾದಂಬರಿಯೊಳ್ ಮದುವೆನೆರೆದು ಶುಕನಾಸನಂದನಂಗೆ ಮದಲೇಖೆಯಂ ಮದುವೆಯಂ ಮಾಡಿ ಸಂತೋಷದಿಂ ಬಂದು ಜ್ಜೈನಿಯಂ ಪುಗುವೆನೆಂದು ತನ್ನ ಮನದೊಳ್ಬಗೆದು ಮನಮಂ ಬಲಿಕೆಯ್ದಲ್ಲಿಂದ ಮೇಳ್ದು ದ್ವಾರಪ್ರ*[ಭೃತಿಸಂಮೃ]ಷ್ಟಭೂಮಿಭಾಗಮುಮಂತರ್ಬಹಿಃ ಪ್ರಕೀರ್ಣ ಸುರಭಿಕುಸುಮಪ್ರಕರಮುಂ ಗೃಹೀತಚಾಮರತಾಳವೃಂತ †[ಭೃಂಗಾರುಮಾ]ರಾಂಗನಾಸಹಸ್ರಸಂಗತಮುಂ ಗಂಧಮಾದನವಿಜಯಗಜಸನಾಥೀಕೃತಮುಂ ಪರಿಕಲ್ಪಿತೇಂದ್ರಾಯುಧಾವಸ್ಥಾನಮುಂ ಉತ್ತುಂಗತೋರಣಾಬದ್ಧವಂದನ ಮಾಲಮುಮಪ್ಪ ರಾಜಮಂದಿರಮಂ ಪೊಕ್ಕು ಸಕಲರಾಜಲೋಕಮಂ ಬೀಡುದಾಣಂಗಳಿಗೆ ಪೋಗಲ್ವೇಳ್ದುಪನೀತಸಮಾಯೋಗನಾಗಿ ಶಯ್ಯಾತಳದೊಳ್ ಮೆಯ್ಯಸೇಡಿ ॥ ೪೫೪

ಕಂ ॥ ಅನುನಯದಿಂ ವಾರವಿಲಾ । ಸಿನಿಯ ವೆರ್ಮಲ್ಲೆಲರ ಪೀಲಿಬಿಜ್ಜಣಿಗೆಯ ನೊ । ದ್ಯನೆ ಬೀಸುತ್ತಿರೆ ನೃಪನಂ । ದನ ನಿಸಿನಿನಿಸಂ ಬಳಲ್ಕೆಗಳೆಯುತ್ತಿರ್ದಂ ॥ ೪೫೫

ವ । ಅಂತಿರ್ದು ನಿಜಾಂತರಂಗದೊಳ್—

ವೃ ॥ ಜನನಿಗೆ ಪೇಳದಾರ್ಯಶುಕನಾಸನ ನೀಕ್ಷಿಸದಾದಮಾತ್ಮನಂ। ದನನ ಪಿಡೋಗದಿಂ ಮುಱುಗುತಿರ್ದ ಮನೋರಮೆಯಲ್ಲಿಗೆಯ್ದದಾ ॥

---

೪೫೩. ಅವಧರಿಸದೆ—ಧರ್ಮಾರ್ಥಕಾಮಗಳನ್ನು ಅನುಭವಿಸಿ ಹೀಗೆಯೆ ಸರಿ ಯೆಂದು ನಿಶ್ಚಯಿಸದೆ; ಜೆಟ್ಟರಂ—ನಿಮಿತ್ತವಾಗಿ.

*[ವೃತ್ತಿರಮತ್ಸ್ಯ] †[ಕಸ್ತೂರಾರಾವ]

ನನುನಯದಿಂದ ಮಾದರಿಸದಿತ್ತಣಿನಿತ್ತಲೆ ಪೋದೊಡಾನು ಮಾ । ತನ ತೆಱ
ನಪ್ಪೆ ನಿರ್ಮ್ಮಿಡಿಸುಗುಂ ಗುರುಗಳ್ಗತಿದುಃಖಮೇವೆನೋ ॥ ೪೫೬

ವ ॥ ಅದಱಿ ನಿವರ ನಾಶ್ವಾಸಿಸಿ ವೈಶಂಪಾಯನ ಪ್ರತ್ಯಾನಯನಕ್ಕೆ ತಂದೆಯುಂ ಬೀಳ್ಕೊಂಡು ಪೋಗಲ್ವೇಳ್ಕು ಮಲ್ಲಿಕಾದಂಬರಿ ಯಿರ್ಪ್ಪಳಲ್ಲಿಯೆ ವೈಶಂಪಾಯನನು ಮಿರ್ದ್ದಪನೆಂದು ಧೈರ್ಯಮನವಲಂಬಿಸಿ ದಿವಸವ್ಯಾಪಾರಮ ನೆಂತಾನುಂ ತೀರ್ಚ್ಚಿ ತದನಂತರಂ ಸಕಲದಿಗಂತರಂಗಳೊಳ್ ದಳ್ಳುರಿಯ ನುಗುಳ್ವ ತೀವ್ರರಶ್ಮಿಜಾಲಮಂ ಪಸರಿಸುತ್ತಂ ನಿದಾಘಸಮಯಸಹಸ್ರಭಾನುಮಂಡಲಂ ಮಧ್ಯಾಹ್ನವರ್ತಿಯಾಗೆ ತತ್ತಪನತಾಪದೊಳಂ ಸುಹೃದ್ವಿಯೋಗತಾಪದೊಳಂ ಕಾದಂಬರೀವಿರಹತಾಪದೊಳಂ ಸಂತಪ್ತನಾಗಿ ತಾರಾಪೀಡತನಯಂ ತಣ್ಪಾಸೆಗೆಯ್ದಲ್ಲಿಂತೆಮೊಳ್ದು ॥ ೪೫೭

ವೃ ॥ ಬಳಸಿದ ಬಚ್ಚಲಿಂ ಮಲಯಜದ್ರವದಿಂ ಪೊರೆದಪ್ಪಿನೀರ್ದಳಂ।
ಗಳನೆಲಗಟ್ಟನಿಂ ಕುಳಿರ್ವ ಬಾಳದಬೇರ್ಗ್ಗಳ ಕೇರ್ಗ್ಗಳಿಂ ಲತಾ ॥ ವಳಿಯು
ನೆ ಸುತ್ತುಗೊಂಡ ಪಸುರ್ಗಂಬದಿ ನೆಯ್ದೆಮುಸುಂಕಿನಿಂದ ತ । ಣ್ದಳಿರ್ಗಳ
ನೊಪ್ಪಿತೋರ್ಪ್ಪ ಜಲಮಂಟಪವಲ್ಲಿಗೆ ಬಂದನಾನ್ನೃಪಂ ॥ ೪೫೮

ಎಳದೆನಿಸಿರ್ದ್ದ ಪಾವಸೆಯ ತಣ್ಣೆಳೆಯಿಂದಮೆ ನೆಯ್ದಸೀರೆ ಕೀ । ತಳ
ಕೆಯ ಚಾಮರಂ ಪೊಸಮೃಣಾಳದ ತೋಳ್ವಳೆ ಮುತ್ತಿನಾರಮು ॥ ತ್ಪಳ
ದವತಂಸ ಮಿರ್ಪ್ಪನೊಳಕೆಯ್ದ ಕುರುಳ್ಸರಿಕಂಠದಣ್ಪುಕ । ಣ್ಗೊಳೆ ನೆಲಸಿ
ರ್ದ್ದ ರಲ್ಲಿ ಜಲದೇವಿಯರಂತೆ ವಿಳಾಸಿನೀಜನಂ ॥ ೪೫೯

ವ ॥ ಮತ್ತಮಲ್ಲಿ ಮೃಣಾಳನಾಳತಾಳವೃಂತ ಕರ್ಪೂರ ಪಟವಾಸ ಹರಿಚಂದನ ಚಂದ್ರಕಾಂತದರ್ಪಣಾದ್ಯುಪಕರಣಪಾಣಿಗಳಪ್ಪ ಕತಿಪಯ ವಾರಾಂಗನಾಜನಂಗಳಿರ್ದ್ದರದು ನಿದಾಘಕ್ಕೆ ಪರಿಭವಸ್ಥಾನಮುಂ ಶೀತಕಾಲಕ್ಕೈಕ್ಕೆದಾಣಮುಂ ಹಿಮಶೈಲಕ್ಕೆ ಸಹೋದರಮುಮೆನಿಸಿದ ನೀರ್ಜ್ಜೊಂಪಮಂಪೊಕ್ಕು ಶಿಶಿರಶಿಲಾತಲ ದೊಳ್ಮೆಯ್ಯನಿಕ್ಕಿ ॥ ೪೬೦

೪೫೮. ಬಾಳದ—ಲಾಮಂಚದ; ಕೇರ್ಗ್ಗಳಿಂ—ತಡಿಕೆಗಳಿಂದ.
೪೫೯. ಪಾವಸೆ—ಪಾಸೆ ; ಇರ್ಪ್ಪನೊಳಕೆಯ್ದ—ದ್ರವವನ್ನು ಪಡೆದಿರುವ.
೪೬೦. ನೀರ್ಜ್ಜೊಂಪಮಂ—ಜಲಮಂಟಪವನ್ನು.

ಕಂ ॥ ಅಮಿತಮಕರಧ್ವಜೋತ್ಕಲಿ । ಕನುನಾತ್ಮಸುಹೃದ್ವಿಯೋಗ ವಡಬಾನಲದು ॥ ಪ್ರ್ದಮುಮಂ ದಿನಾಬ್ಧಿಯಂ ಧೈ । ರ್ಯವೆಂಬವೈತ್ರದಿ ನಿಲಾಧಿಪಂ ತರಿಯಿಸಿದಂ ॥ ೪೬೧

ವ ॥ ಅಂತು ನೇಸರ್ಪಡಲೊಡಂ ಬಯ್ಗುಂ ಬೊಳ್ತರಸಂ ನೀಜರ್ಜ್ಜಂಪದಿಂ ಪ್ರೊಱಮಟ್ಟು ಸಿಂಪಿಣಿಯ ತಣ್ಪಿನಿಂ ಪ್ರೊವಲಿಯತಿಣ್ಪಿನಿಂ ಮನಂಗೊಳಿಸುವ ಭವನಾಂಗಣದೊಳವತರಿಸಿ ಸಮಾಸನ್ನ ರಾಜಲೋಕದೊಡನೆ ವೈಶಂಪಾಯನವೃತ್ತಾಂತಮನೆ ನುಡಿಯುತ್ತುಂ ಕಿಱಿದುಬೇಗಮನಿರ್ದ್ದಱಿಡನೆಯ ಜಾವಮುಳ್ಳಂತೆ ಬೀಡಂನಡೆಯಿಸೆಂದು ಪಡೆವಳ್ಳಂಗೆ ಬೆಸಸಿ ರಾಜಲೋಕಮುಂ ವಿಸರ್ಜಿಸಿ ಸೆಜ್ಜೆಗೆವಂದನಂತರಂ ಕಿಱಿದುಬೇಗಕ್ಕೆ ಚಿರಾಂತರಿತೋಜ್ಜಯಿನೀ ದರ್ಶನೋತ್ಸುಕತೆಯಿಂ ಕಟಕಜನಂ ಪ್ರಯಾಣಸಾಂದ್ರನಿಸಾಣಮಂ ಕೇಳದೆ ಉಜ್ಜಯಿನಿಯ ಬಟ್ಟೆವಿಡಿದುನಡೆಯೆ ತಾನುಂ ಲಬ್ಧನಿದ್ರಾವಿನೋದನಾಗಿ ತೃತೀಯಯಾಮದೊಳ್ ಬಹುತುರಗಕರಿಣೀವಾ[ಹನಾರೂಢ]ಕತಿಪಯ ರಾಜಪುತ್ರರುಂ ಬೆರಸು ಕಟಕಜನದ ಸಂದಣಿಸಿದ ಬಟ್ಟೆವಿಡಿದು ನಡೆಯಲಿರುಳುಮಾಬಟ್ಟೆಯೊಡನೆ ಪಱಿಪಟ್ಟುಪೋಗೆ ॥ ೪೬೨

ಕಂ ॥ ಜಲನಿಧಿಯುಂ ಪೀರ್ದ್ದಗ್ಗಿಯ । ಜಲಚರಮಂ ಕೂಡೆ ತೆಗೆಪಿದಂ ತೆಗೆಪ್ಪವೆನಿಂ ॥ ಸ್ಥಲಚರಮನೆಂದು ವಡಬಾ । ನಳ †[ನೀಳ್ವಪ್ರೊಲೊ]ಗೆದುದರ್ಕ್ಕಮಂಡಲ ವ್ಯಾಜದಿಂ ॥ ೪೬೩

---

೪೬೧. ಅಮಿತಮಕರಧ್ವಜೋತ್ಕಲಿಕನುಂ—ಹೆಚ್ಚಾದ ಮನ್ಮಥೋದ್ರೇಕವುಳ್ಳ; ದಿನಾಬ್ಧಿಯುಂ—ಹಗಲೆಂಬ ಸಮುದ್ರವನ್ನು ; ವೈತ್ರದಿಂ—ಹಡಗಿನಿಂದ ; ತರಿಯಿಸಿದಂ—ದಾಟಿದನು. ತರಿಯಿಸಿದಂ, ಇಲ್ಲಿ ಅವನ್ನು ಇವನು ಮಾಡುತ್ತಾನೆ ಎಂಬರ್ಥದಲ್ಲಿ ಇಯಾದೇಶ ಇಸುಪ್ರತ್ಯಯಗಳು ಬಂದಿರುವವು. ಶ. ಶಾ. ಸೂ. ೫೩೭.

೪೬೨. ಸಿಂಪಿಣಿ—ಜಲಸೇಚನೆ ; ತಿಣ್ಪಿನಿಂ—ಅತಿಶಯದಿಂದ : ಪಱಿಪಟ್ಟುಪೋಗೆ—ಕಳೆದುಹೋಗಲು.

೪೬೩. ತೆಗೆಪಿದೆಂ—ಹೊರಡಿಸಿದೆನು.

*[ಲಾನಂಗ] †[ನೊಳಪೊಗೆದೊ]

ವ ॥ ಅನ್ನೆಗಂ ನೇಸಮರ್ಮ್ಮಡಲೊಡಂ ಕಟಕಂಬೆರಸುಜ್ಜಯಿನಿಗೆ ವಂದಲ್ಲಿಗಲ್ಲಿಗೆ ಗಳದ್ಬಾಷ್ಪನಯನರಾಗಿ ಪರಿತಂದು ವೈಶಂಪಾಯನವೃತ್ತಾಂತಮನೆ ಬೆಸಗೊಳ್ವ ಪುರಜನಂಗಳಂ ಚಂದ್ರಾಪೀಡಂ ನೋಡಿ ॥ ೪೬೪

ಕಂ ॥ ಇನಿವಿರಿದಳಲನ್ಯರೊಳಂ । ಜನಿಯಿಸಿತೆನೆ ಬಯಸಿಪಡೆದು ತೊಡೆಯೇಱಿಸಿ ಮು ॥ ದ್ದನೊಱಲ್ದು ನೋಡಿನಡಪಿದ । ಜನನೀಜನಕರ್ಗ್ಗೆ ದೆನಿತಳಲ್ಜನಿಯಿಕುಮೋ ॥ ೪೬೫

ವೃ ॥ ತನಯವಿಯೋಗ ವಿಹ್ವಲತೆಯಿಂ ಮಗನೆಲ್ಲಿದ ನೆಂದೊಡೇನ ನೆಂ । ಬೆನೊ ಗುರುಗಳ್ಗೆ ಪಿಂಬೆ ಪರಭೂಮಿಯ ನಾಕ್ರಮಿಸಲ್ಕೆ ನಿಂದನೆಂ॥ ಬೆನೊ ಪರಭೂಪರಂ ಕವರ್ದು ಕಪ್ಪಮನೀಳ್ಕೊಳಲೆಂದು ನಿಂದನೆಂ । ಬೆನೊ ಪೊಸತೊಂದು ವಿದ್ಯೆಯ ನುಪಾರ್ಜಿಸವೇಡಿಯೆ ನಿಂದನೆಂಬೆನೋ ॥

ವ ॥ ಎಂದು ನಿಜಾಂತರಂಗದೊಳ್ ಚಿಂತಿಸುತ್ತ ಮುಜ್ಜಯಿನಿಯಂ ಪೊಕ್ಕರಮನೆಯ ಬಾಗಿಲನೆಯ್ದೆವಪ್ಪುದುಂ ವಿಳಾಸವತಿ ಮಹಾದೇವಿವೆರಸ ರಸನಾರ್ಯ್ಯಶುಕನಾಸನರಮನೆಗೆ ಬಿಜಯಂಗೆಯ್ದನೆಂಬುದಂ ಕೇಳ್ದುತಾನುಮಲ್ಲಿಗೆ ಪೋಪಾಗಳ ಭ್ಯಂತರ ಮಂಟಪದಲ್ಲಿ ॥ ೪೬೬

ವೃ ॥ ಇದಿರೊ*[ಳ್ ತಾನುಮಿರಲ್ಕೆ] ಹಾತನಯ ವೈಶಂಪಾಯನಾನೀಡುಮಂ । ಕದೊಳಗನ್ನುಂ ನೆಲಸಿಪ್ಪ ಬಾಲಕನೆ ನಾನಾವ್ಯಾಳಕೋಲಾಹಲಾ ॥ ಸ್ಪದಮುಂ ನಿರ್ಮನುಜಪ್ರವೇಶಮು ಮೆನಿಪ್ಪಾಘೋರಕಾಂತಾರರಮ । ಧ್ಯದೊಳೋರೊರ್ವರು ಮಿಲ್ಲದಾವತೆಱದಿಂ ದೇಕಾಕಿಯಾಗಿರ್ದಪಯ್ ॥ ೪೬೮

---

೪೬೬. ಎಲ್ಲಿದಂ—ಎಲ್ಲಿರುವವನು; ಕವರ್ದು—ಆಕ್ರಮಿಸಿ; ಈಳ್ಕೊಳಲೆಂದು—ಸೆಳೆದುಕೊಳ್ಳಬೇಕೆಂದು; ಉಪಾರ್ಜಿಸವೇಡಿ—ಸಂಪಾದಿಸುವದಕ್ಕೆ ಅಪೇಕ್ಷಿಸಿ. ಎಲ್ಲಿದಂ ಎಂಬಲ್ಲಿ ಇಕಾರಾಂತವಾದ ದಿಕ್ಶಬ್ದದ ಮೇಲೆ ಅಲ್ಲಿರುವವನು ಎಂಬರ್ಥದಲ್ಲಿ ದಪ್ರತ್ಯಯ ಬಂದಿರುವದು. ಶಬ. ಸೂ. ೪೨೦.

೪೬೮. ತಾನುಮಿರಲ್ಕೆ—ನಾನು ಇರುತ್ತಿರಲು ಅಂದರೆ ನನ್ನ ಎದುರಿಗೆ.

*[ಳ್ಮನ್ನುಮಿಾಗಳ್ಕೆ]

ಮಗುಳ್ದೀಗಳ್ ಜಯಯಾತ್ರೆಯಿಂ ಮಗನೆನೀನೇಳ್ತರ್ಪುದುಂ ನಿನ್ನತಂ। ದೆಗೆ ಪೇಳ್ದಾಂಸಿನಗಲ್ತೆ ಬೇಗಮೆ ವಿವಾಹೋತ್ಸಾಹಮಂ ಮಾಡಿಕ ॥ ಯ್ಮಿಗುವತ್ಯುತ್ಸವದಿಂ ವಧೂವದನಮಂ ನೋೞ್ಪೆಂದಲೆಂ* [ಳ್ಪೆಂದಲೆಂ] ದಿರ್ದ್ದೆನ। ನ್ನಿಗ ಮಂತಿರ್ಕ್ಕದು ಕೂಡಿತಿಲ್ಲೆನಗೆ ಮುನ್ನಂಸಿನ್ನುಮಂ ಕಾಣ್ಬುದುಂ ॥ ೪೬೯

ಕಂ ॥ ಮಗನೆ ಕಿಱಿದೆಮ್ಮನಗಲ। ಲ್ಬಗೆದಂದೊಡದೇನೊ ಪ್ರಟ್ಟದಂಮ ಮೊದಲ್ಗೆಂ ॥ ಜಗಲದ ಚಂದ್ರಾಪೀಡನ। ನಗಲ್ದಿರ †[ಲ್ನೀನದೆಂತು] ಪೇಳ್ಬಗೆದಂದಯ್ ॥ ೪೭೦

ವ ॥ ಎಂದಿವು ಮೊದಲಾಗಿ ಪಲವುಮಂ ಪಲುಂಬಿ ಪಂಬಲಿಸುವ ವೈಶಂಪಾಯನನ ತಾಯಸರಮಂ ಕೇಳ್ದು ॥ ೪೭೧

ಕಂ॥ ಮನೆಯುಂ ಮನೋರಮಾಸಂ। ದನನಿಲ್ಲದದೆಂತು ಪುಗುವೆ ನಾನೀಗಳ್ನಂ ॥ ದನನ ವಿಯೋಗದೆ ಮಱುಗುವ। ಮನೋರಮೆಯ ಮೊಗಮ ನಾನವೊಗದೊ ಳ್ನೋಳ್ಪೆಂ ॥ ೪೭೨

ವ ॥ ಎಂದು ತನ್ನಮನದೊಳಗೆ ಬಗೆಯುತ್ತಂ ಶುಕನಾಸಭವನ ಮಂಪುಗುವಲ್ಲಿ—

ಕಂ ॥ ಜಲನಿಧಿಪತಿಮಥನಾನಂ। ತರದೊಳ್ಮರವಟ್ಟ ಮಂದರಂ ಬೆರಸಿಪ್ಪರ್ಗಂ ॥ ತಿರುತಿರ್ದ್ದರ್ಗಂ ಶುಕನಾಸಂ। ಬೆರಸು ಜಡೀಭೂತನಾಗಿ ತಾರಾಪೀಡಂ ॥ ೪೭೩

ವ ॥ ಅಂತಿರ್ದ್ದ ತನ್ನ ತಂದೆಯುಂ ಕಂಡು ಲಜ್ಜಿಸಿ ತಲೆಯಂ ಬಾಗಿ

---

೪೬೯. ವಧೂವದನಮಂ—ಸೊಸೆಯಮುಖವನ್ನು.

೪೭೦. ಅಗಲಲ್ ಬಗೆದಂದೊಡೆ—ಮನಸ್ಸುಮಾಡಿದರೆ ; ಅದೇನೊ—ಅದುನನಗೆತಿಳಿಯದು.

೪೭೩. ಮರವಟ್ಟ—ಸ್ತಬ್ಧನಾಗಿ.

*[ಳ್ವಂದಱಿಂ] †[ಲುಂನಿನಗಿದೆಂತು]

ದೂರದೊಳ್ ಪೊಡವಟ್ಟು ಕೆಲಕ್ಕೆಪೋಗಲಮ್ಮದಗಲೆ ಕುಳ್ಳಿರ್ದ್ದ ಚಂದ್ರಾ
ಪೀಡನಂ ನೋಡಿ ॥ ೪೨೪

ಕಂ ॥ ಮಳೆಸುರಿಯಲ್ಕಿರ್ದ್ದ ಮುಗಿ । ಲ್ಮೊಳಗುವ ಪೊಲ್ಮೊಳಗಿ
ತಳೆದು ಕಣ್ಣೀರಂ ಕ ॥ ಯ್ಗಳದಳಲುಗೆ ಮಗನಂ ಮೆ । ಯ್ವಳಿಯಿಂದಮೆ
ನುಡಿದನಂದು ತಾರಾಪೀಡಂ ॥ ೪೨೫

ಅನ್ನೆಱೆಯಱಿವೆಂ ನಂದನ । ನಿನ್ನನು ಜನ ಮೇಲೆ ನಿನಗೆ ನಿರತಿ
ಶಯಸ್ನೇ ॥ ಹ ನ್ನಿರುತಮುಳ್ಳುದು ಮನಾ । ತನ್ನಿನ್ನನಗಲ್ದ ನೋವು ಪಿರಿ
ದೆಂಬುದುಮಂ ॥ ಅದೋಡಂ— ೪೨೬

ವೃ ॥ ವಿನಯಕ್ಕಂ ವಯಸಕ್ಕಮಾಕೃತಿಗೆ *[ಮೊಂದಿಂಗಂ] ಗುರು
ಮಾತ್ರಶಾ । ಸನಕಂ ಕೂರ್ಮ್ಮೆಗ ವಲ್ಲದಂತುಟನಿದೊಂದಂಮಾಡೆಸೇಂ ನಿನ್ನ
ತ ॥ ಪ್ಮನ ವೃತ್ತಾಂತಮನಿಂದು ಕೇಳ್ದನಿತುಮಂ ನಿನ್ನಿಂದಮಾಯ್ತೆಂದುಮ ।
ನ್ಮನಮಾಶಂಕೆಯ ನಪ್ಪುಕೆಯ್ದುಪ್ರದು ನೋಡೇನೆಂಬೆ ನಾನಿಂತಿದಂ ॥ ೪೨೭

ವ ॥ ಎಂದು ನುಡಿದ ತಾರಾಪೀಡನರೇಂದ್ರನನಾಕ್ಷೇಪಂಗೆಯ್ದು.

ಕಂ ॥ ಪೊಳೆದಪುವು ಕಾರಕಮ್ಮುಗಿ । ಲೊಳಗೆಳಮಿಂಚುಗಳವೆ
ನಿಸಿ ಮುಳಿಸಿಂ ಕಡುಗ ॥ ಪ್ಪೆಳಸಿದ ನಿಜವದನದೊಳ । ಗ್ಗಳಮಧರಂ
ಕೆತ್ತೆ ಮಂತ್ರಿಮುಖ್ಯಂ ನುಡಿದಂ ॥ ೪೨೮

ವೃ ॥ ನೆಟ್ಟನೆಚಂದ್ರನೊಳ್ ಬಿಸುಪು ಪುಟ್ಟಿದಪೋಲ್ ನೃಪರೂಪಚಂದ್ರ
ನೊಳ್ । *[ಪುಟ್ಟಿದು ಮಂತಿದಂ] ತಿಳಿವುಗೆಟ್ಟ ಕೃತಜ್ಞತೆಗೆಟ್ಟಪೌರುಷಂ ॥
ಗೆಟ್ಟ ದುರಾತ್ಮನಂ ಕುಱಿತು ಭಾವಿಸದೇನುಮ ನೀಮಹಾತ್ಮನಂ । ತೊಟ್ಟ
ನಲಿಂತು ದೇವ ಯುವರಾಜನ ನೀತೆಱದಿಂ ಪೆಸಪ್ಪುದೇ ॥ ೪೨೯

---

೪೨೪. ಅಗಲೆ—ದೂರವಾಗಿರಲು.

೪೨೫. ಕಯ್ಗಳದ—ಹೆಚ್ಚಿದ; ಅಳಲ್—ದುಃಖವು; ಉಗೆ—ಉಕ್ಕಲು.

೪೨೭. ಬಂದಿಂಗಂ—ಸ್ನೇಹಕ್ಕೂ; ಅಲ್ಲದಂತುಟು—ವಿರುದ್ಧವಾದ; ಇದೊಂ
ದೆಂ—ಇದೊಂದುತಪ್ಪನ್ನು.

೪೨೯. ಮಂತು—ಅಪರಾಧವು; ದುರಾತ್ಮನಂಕುಱಿತು—ದುಷ್ಟನಾದವನನ್ನ
ಮಗನನ್ನು ಕುರಿತು; ತೊಟ್ಟನೆನಲ್—ನಿಷ್ಕಾರಣವಾಗಿ; ಯುವರಾಜನಂ, ಪೆಸಪ್ಪುದೇ
—ದೂಷಿಸಬಹುದೆ.

*[ಪುಟ್ಟುಗುಮಿಂತಿದಂ]

ಕಂ ॥ ಆರಾನುಂ ದೋಷಮನ । ಧ್ಯಾರೋಪಿಸೆ ಗುಣಿಗಳರಮೆ ನೋವರೆನಲ್ತು ॥ ತಮ್ಮಾರಾಧ್ಯರೆ ದೋಷಮ ನ । ಧ್ಯಾರೋಪಿಸೆ ನೋವುದ ಕ್ಕೆರ್ಪೇಳ್ಕಡೆಯುಂಟೆ ॥ ೪೮೦

ಬಡಲೆರಡು ಜೀವಮೊಂದೆನೆ । ಕಡುಗೂರ್ಪ್ಪುದ ನಱಿ*[ಯದಿಂ ತುದುಷ್ಕೃತದಿಂದಂ] ॥ ತೊಡರ್ದವನೆ ತಾನೆತನ್ನಿಂ । ಕಿಡೆ ಚಂದ್ರಾಪೀಡ ನಂತದಕ್ಕೇಗೆಯ್ವಂ ॥ ೪೮೧

ಪುಟ್ಟಿದತಾಣಕ್ಕಳಿವಂ । ಪುಟ್ಟಿಸಲೊಡರಿಸುವ ಕಿಚ್ಚುತೆಳ್ಕ್ರಿಮಿಕುತ್ತಂ ॥ ಪುಟ್ಟುವವೊಲ್ದುಷ್ಕೃತದಿಂ । ಪುಟ್ಟಿದ ನೀಪಾಪಕರ್ಮನ್ನಿನ್ನಯ ಬಸುಱಿಂ ॥ ೪೮೨

†[ಗಿಳಿಯುಂತೋದಿಯೆ ಪೋದಂ । ಗಿಳಿಯುಂ ಮೊದಲಾಗಿನಡಪಿದರ ನಱಿದುಮರು ॥ ಳ್ಗೊಳಿಸುವುದವರಿಚ್ಛೈಸುವ । ಫಳಮಿಂತಂತನಿತು ಮಾದುದಿಲ್ಲಾಖಳನೊಳ್] ॥ ೪೮೩

ವ ॥ ಆದೊಡಂ—

---

೪೮೦. ಅರಮೆ—ಅತ್ಯಂತವಾಗಿ; ತಮ್ಮಾರಾಧ್ಯರ್—ತಮ್ಮ ಗುರುಗಳು.

೪೮೧. ಕಡುಗೂರ್ಪ್ಪದಂ—ಅತ್ಯಂತವಾಗಿ ಪ್ರೀತಿಸುವದನ್ನು; ದುಷ್ಕೃತದಿಂದಂ—ಪಾಪಕೃತ್ಯದಿಂದ; ತೊಡರ್ದ—ಕೂಡಿ.

೪೮೨. ಅಳಿವಂ—ನಾಶವನ್ನು; ಒಡರಿಸುವ—ಉಂಟುಮಾಡುವ; ತೆಳ್—ಚೇಳು; ಕುತ್ತಂ—ರೋಗ.

೪೮೩. ಗಿಳಿಯುಂಮೊದಲಾಗಿ—ಗಿಳಿಯೂಕೂಡಾ; ನಡಪಿದರಂ—ಪೋಷಿಸಿದವರನ್ನು; ಅಱಿದು—ತಿಳಿದುಕೊಂಡು; ಮರುಳ್ಗೊಳಿಸುವುದು—ಮೋಹಪಡಿಸುವದು; ಅವರಿಚ್ಛೈಸುವ—ಸಾಕಿದವರು ಅಪೇಕ್ಷಿಸುವ; ಫಲಂ—ಪ್ರಯೋಜನವು; ಇಂತು—ಈಪ್ರಕಾರವಾದದ್ದು; ಅಂತನಿತುಂ—ಅಷ್ಟುಕೂಡ; ಆಖಳನೊಳ್; ಆ ವೈಶಂಪಾಯನನಲ್ಲಿ; ಆದುದಿಲ್ಲ—ಉಂಟಾಗಲಿಲ್ಲ.

*[ಮರಿತನಮ್ಮತ್ಕೃತದಿಂ]

†[ಗಿಳಿಯುಂತೋದಿಯೆಪೋದಂ । ಗಿಳಿಮೊದಲಾಗಿನಡಪಿದರನಱಿಕಮರು ॥ ಳ್ಗೊಳಸುವವರಿಚ್ಛೆಗೆಳಸುವ । ಫಳಮಿಂತಂ ತನಿತು ಮಾದುದಿಲ್ಲಾಖಳನೊಳ್ ॥]

ಕಂ ॥ ಪರಹಿತ ಮಿದಾತ್ಮಹಿತ ಮೆಂ । ಬೆರಡುಮ ನುೞಿದೞಲ ನೆಮ
ಗೆ ಮಾಡಿದವಂ ನಿ ॥ ತ್ತರಿಸಂ ತಿರ್ಯಗ್ಜಾತಿಯೊ । ಳೆರಡಿಲ್ಲದೆ ಯಿಂವಿ
ಜಾತಿ ಪುಟ್ಟದೆ ಮಾಣಂ ॥ ೪೮೪

ವ ॥ ಅಂತಗ್ಗಳಿಸಿದೞಲಮುೞಿಸಿಂ ಹೇಮಂತ ಸಮಯೋತ್ಪಲದಂ
ತೆವೃಷ್ಟಿಗಳುದ್ಬಾಷ್ಪಂಗಳಾಗೆ ವೈಶಂಪಾಯನಂಗೆ ಶಾಪಂಗೊಟ್ಟ ಶುಕನಾ
ಸನಂ ಪಿರಿದು ಮನ್ಯುಯಂಗೆಯ್ದೆ ಯೆಂದು ಮನಂನೊಂದು ತಾರಾಪೀಡ
ನಿಂತೆಂದಂ ॥ ೪೮೫

ವೃ ॥ ಜಲನಿಧಿಯಂ ಮುಗಿಲ್ವನಿಗಳಿಂದ ಮಗುರ್ವಿಸುವಂತೆ ನಿಮ್ಮ
ನಾಂ । ತಿಳಿಪಿದಪೆಂ ಗಡಾದೊಡ ಮಸಹ್ಯಮೆನಿಪ್ಪತಿದುಃಖದಿಂದ ಮಾ ॥ ವಿ
ಳಮೆನಿಸಿಪ್ಪುರ್ದಗ್ಗದವಿವೇಕಿಗಳಪ್ಪರ ಮಾನಸಂ ಗಳುಂ । ತಿಳಿಗೊಳನಾ
ದೊಡಂ ಮಳೆಯನೀರ್ಗ್ಗಳಿ ನಾವಿಲಮಾಗದಿರ್ಕುಮೇ ॥ ೪೮೬

ಕಂ ॥ ಪರಮಾರ್ಥಂ ನಿಜಜನಕ । ಪ್ಪೆರಸಿದ ಪರಕೆಗಳು ಬ
ಯ್ದುಬಯ್ಗುಳ್ಗಳ್ಕ ॥ ಳ್ಗರದೆಯ್ದುಗು ಮವಱಿಂವಂ । ತಿರೆ ಶಪಿಯಿಸಲಾಗ
ದೇಕೆ ನೀಮಱಿಯದುದೇ ॥ ೪೮೭

ನಿಡುಮರನೊಂದಂ ತಾಸಿ । ಟ್ಟೊಡೆ ಕೂರ್ಮೆಯನಂ ತದರ್ಕ್ಕೆ ಗಡ
ಮಾಡುವರೆಂ ॥ ದೊಡೆ ಮುಳಿಯಲಕ್ಕುಮೇತ । ದ್ಮೊಡಲಿಂದಂ ಬಂದಶಿಶು
ಗೆ ತಿಳಿವುಳ್ಳವರ್ಗಳ್ ॥ ೪೮೮

೪೮೪. ನಿತ್ತರಿಸಂ—ಕೊನೆಮುಟ್ಟನು; ವಿಜಾತಿ—ವಿಲಕ್ಷಣನಾದ ಇವನು; ಎರಡಿಲ್ಲದೆ—ಸಂಶಯವಿಲ್ಲದೆ; ಯಿಂ—ಇನ್ನುಮೇಲೆ; ತಿರ್ಯಜ್ಜಾತಿಯೊಳ್, ಪುಟ್ಟದೆ, ಮಾಣಂ—ತಪ್ಪುವದಿಲ್ಲ.

೪೮೫; ಅೞಲಮುೞಿಸಿಂ—ದುಃಖದಕೋಪದಿಂದ.

೪೮೬: ಅಗುರ್ವಿಸುವಂತೆ—ಹೆಚ್ಚಿಸುವಹಾಗೆ.

೪೮೭. ಎಯ್ದುಗುಂ—ತಟ್ಟುವವು.

೪೮೮. ಅದರ್ಕ್ಕೆ—ಆ ಮರಕ್ಕೆ; ಅಂತುಕೂರ್ಮೆಯಂಮಾಡುವರ್ಗ್ಗಡೆ—ಹಾಗೆ ಪ್ರೀತಿಯನ್ನು ಇಡುತ್ತಾರಲ್ಲವೆ; ಎಂದೊಡೆ ಹೀಗಿರುವಲ್ಲಿ.

ವ ॥ ಅದಱಿಂ ಶಾಪಂಗುಡುವುದುಚಿತಮಲ್ತು ಯೌವನೋದಯದೊಳಾರ್ಗ್ಗದೊಡಂ ಕ್ಲೇಶಬಹುಳಮಪ್ಪ ವಿಷಯಾಸಕ್ತಿ ದೊರಕೊಳ್ಗುಮೇನಾನುಮೊಂದು ಕಾರಣದಿಂದ ಮೇನಿನ್ನಾಗ್ರಹದಿ ನೊಡಗೊಂಡುಬಪ್ಪೆಂತು ವೈಶಂಪಾಯನಂಗೆ ಬಳಿಯನಟ್ಟುವ ಮೆಂದ ತಾರಾಪೀಡನರೇಂದ್ರನಮಾತಂ ಚಂದ್ರಾಪೀಡಂ ಕೇಳ್ದು ॥ ೪೮೯

ಕಂ ॥ ಆಂಪೋಗದೆ ಬಾರಂ ವೈ । ಶಂಪಾಯನನೆಂದು ಮದಱಿನೀ
ಗಳೆ ನೀಮೆ । ನ್ನಂ ಪೋಗಲೆವೇಳ್ಪುದೆನು । ತ್ತುಂ ಪರ್ಚ್ಚಿ ಸಖೇದನಾಗಿ
ಮೆಲ್ಲನೆ ನುಡಿದಂ ॥ ೪೯೦

ವ ॥ ಇಂತು ನುಡಿವುದು ಮಿಾತ ನೇನೆಂದಪ್ಪನೆಂದು ತಾರಾಪೀಡನರೇಂದ್ರಂ ಬೆಸಗೊಳ್ವುದುಂ ಸುಹೃತ್ಸ್ನೇಹಕಾತರಹೃದಯನಾಗಿ ವೈಶಂಪಾಯನನನೊಡಗೊಂಡು ಬಂದಪ್ಪೆನೆಂದು ಶುಕನಾಸಂಗೆ ಬಿನ್ನವಿಸೆ ತಾರಾಪೀಡನುಂ ಪೀಡಿತಾಂತರಂಗನಾಗಿ । ೪೯೧

ವೃ ॥ ವಿನುತಸಮಗ್ರಮಂಡಲನ ಚಂದ್ರನ ಚಂದ್ರಿಕೆವೊಲ್ನರೇಂದ್ರ
ಚಂ । ದ್ರನ ರುಚಿರೋತ್ಕರಗ್ರಹಣ ಶೋಭಿತೆಯಂ ಸೊಸೆಯಂ ನಿರೀಕ್ಷಿಸಲ್॥
ಮನಮೊಸೆದಿರ್ದ್ದೊಡಿತ್ತ ಸಚಿವಾತ್ಮಜ ವೃತ್ತಕಮಿಂತು ಬಂದು ತೊ । ಟ್ಟ
ನೆ ಘನಕಾಲದಂತೆನಗೆ ದೈವದಿ ನಂತರಶೋಕಮಕ್ಕುಮೇ ॥ ೪೯೨

ವ ॥ ಎಂದು ತನ್ನೊಳಗೆ ಬಗೆದು ಮನಮಂ ಬಲಿಕೆಯ್ದು ಶುಕನಾಸನನಿಂತೆಂದಂ ॥

---

೪೮೯. ಇನ್ — ಇನ್ನು ; ಆಗ್ರಹದಿಂ, ವಿಂ — ವಿನಾಪ್ರಯೋಜನವು ; ಬಳಿಯನಟ್ಟುವಂ — ಹೇಳಿಕಳುಹಿಸೋಣ.

೪೯೦. ಎಂದುಂ — ಬಂದುಕಾಲಕ್ಕೂ : ಪರ್ಚ್ಚಿ — ಗೋಣಾಗುಟ್ಟಿ.

೪೯೨. ಮನಮೊಸೆದಿರ್ದ್ದೊಡೆ — ಮನಸ್ಸು ಸಂತೋಷಪಡುತ್ತಿರಲು ; ಇತ್ತ — ಈಕಡೆಯಲ್ಲಿ ; ತೊಟ್ಟನೆ — ಭಗ್ಗನೆ ; ಘನಕಾಲದಂತೆ — ಚಂದ್ರನಿಗೆ ವರ್ಷಾಕಾಲದ ಹಾಗೆ, ಸಚಿವಾತ್ಮಜವೃತ್ತಕಂ ; ಬಂದು — ಸಂಭವಿಸಿ ; ಎನಗೆ, ದೈವದಿಂ — ವಿಧಿವಶದಿಂದ ; ಅಂತರಶೋಕಂ — ಮಧ್ಯಕಾಲದಲ್ಲಿ ಸಂಭವಿಸಿದ ದುಃಖವು ; ಅಕ್ಕುಮೇ — ಉಂಟಾಗಬಹುದೆ.

ಕಂ ॥ ನಂದನನೆಂದುದೆ ಮತ್ತಮೆಂ । ತೆಂದೊಡೆ ಬರಲಱಿಯನಾತ ನೊಳಿದಪರಾಧ್ಯೇ ದಂದುಂ ಶ್ರಮಣಸನ ನಗ । ಲ್ದೆಂದು ಮುಹೂರ್ತ ಮುಮ ನಾತನುಂ ನಿಲಲಱಿಯಂ ೪೯೩

ವ ॥ ಅದಱಿಂ ಪೋಗಿ ಬೇಗಂ ವೈಶಂಪಾಯನನೊಡಗೊಂಡು ಬಕ್ಕೆಂಬುದುಂ ಲಬ್ಧಗಮನಾನುಜ್ಞನಾಗಿ ವಿನಯವಿನಮಿತಮಸ್ತಕನಾದ ಚಂದ್ರಾಪೀಡನಂ ಮಗನೆ ವೈಶಂಪಾಯನನೊಡಗೊಂಡು ಬಂದಪೆನೆಂದಿದಂ ನುಡಿದು ಮನೋರಮೆಯ ನಾಶ್ವಾಸಿಸಿದು ಬೇಗನೆ ತಾರಾಪೀಡಂ ಶುಕನಾಸನ ಕಯ್ಯಂಪಿಡಿದೊಡಗೊಂಡು ಸಿಂಹಾಸನಭವನಕ್ಕೆ ಬಿಜಯಂಗೆಯ್ದು ನಿತ್ತ ಚಂದ್ರಾಪೀಡನು ಮೊಳಗ ಮನೋರಮೆಯುಂ ಸಂತೈಸುತ್ತಿರ್ದ್ದ ವಿಲಾಸವತೀಮಹಾದೇವಿಯರ್ಗ್ಗೆ ಪೊಡಮಟ್ಟು ಕೆಲದೊಳ್ಕುಳ್ಳಿರ್ದ್ದ ಸುತವಿಯೋಗವಿಹ್ವಲೆಯಪ್ಪ ಮನೋರಮೆಯು ನಿಂತೆಂದಂ ॥ ೪೯೪

ಕಂ ॥ ಜನಕಂ ಬೀಳ್ಕೊಳಿಸಿದನೆ । ನ್ನನುಜನ ನೊಡಗೊಂಡು ಬಂದಪೆಂ ಚೆಕ್ಕರದಿಂ ॥ ತನಯುಂ ತಡೆದಪನೆಂದಿಂ । ತೆನಸುಂ ನೀವಬ್ಬೆ ಮನದೊಳುಮ್ಮಳಿಸದಿರಿಂ ೪೯೫

ವ ॥ ಎಂದು ನಿಜಗಮನವೃತ್ತಾಂತಮಂ ನುಡಿದ ಚಂದ್ರಾಪೀಡನಂ ವೈಶಂಪಾಯನ ಜನನಿಯಿಂತೆಂದಳ್ ॥

ಸ್ರ ॥ ಮನಮಂ ಪೋದಪ್ಪೆ ನಂದಾಱಿಸಿದಪೆ ಮಿಗಿಲಾಗಿರ್ದ್ದನೇ ಕಂದ ನಿನ್ನಿಂ । ದೆನಗಾತಂ ನಿನ್ನ ತಪ್ಪಿಂ ಬರವಿನ ದೆಸೆಯುಂ ಮಾಣ್ದಿಪಂ ಜೀವಿಪೆಂ ನಿ ॥ ನ್ನನಲಿಂತುಂ ನೋಡಿಯಾಂ ಪುತ್ರವತಿಯೆನಿಸುತ್ತಿರ್ಪ್ಪೆ ಪಾಪೀಯರುಂ ನಂ । ದನ ಕೇಳ್ನಿನ್ನೊರ್ವ್ವನಿಂ ದುಮ್ಮಳದೊದವೆನಗೇಕೆಂದುಗುಂ ವತ್ಸನಿನ್ನಿಂ ॥ ೪೯೬

---

೪೯೫. ಚೆಕ್ಕರದಿಂ—ಬೇಗನೆ ; ತಡೆದಪನೆಂದು—ಕಾಲವಿಳಂಬಮಾಡುತ್ತಾನೆಂದು ; ಅಬ್ಬೆ—ಎಲಾ ಮಾತೆಯು.

೪೯೬. ಆಱಿಸದಪೆ—ತೃಪ್ತಿಪಡಿಸುತ್ತೇನೆ ; ಬರವಿನದೆಸೆಯುಂ—ಬರುವಸಮಾಚಾರವನ್ನು ; ಉಮ್ಮಳ—ದುಃಖದ ; ಬಿದಪ್ಪು—ಅತಿಶಯವು ; ಬಂದುಗುಮೇಕೆ—ಯಾಕುಂಟಾಗಬೇಕು.

ವ ॥ ಅದಱಿಂ ಗಮನೋದ್ಯೋಗಮಂ ಮಾಣ್ಬುದೆಂದು ಚಂದ್ರಾಪೀಡನಂ ನುಡಿದು ಮನೋರಮೆಯುಂ ವಿಲಾಸವತೀಮಹಾದೇವಿ ಮನಮಂ ಬಲಿಕೆಯ್ದಿಂತೆಂದಳ್ ॥ ೪೯೭

ಕಂ ॥ ಯುವರಾಜಂಗಲ್ಲದೆ ಮಗ । ನವನಿವರ್ಗಂ ಬಾರನೊಂದೆನಲ್
ಬೆಸನಿಪನಂ । ತಿವರಯ್ಯನಿರ್ಗಳದಱಿಂ । ದವಕ್ಕೆ ಮಾಕೆಯ್ಗಳಲೆಪೇಡ
ಗಮನೋದ್ಯಮಮಂ ॥ ೪೯೮

ವ ॥ ಎಂದು ಕುಮಾರಂಗೆ ಗಮನಮಂಗಳಸಂವಿಧಾನಮಂ ಮಾಣ್ಬ ವೇಳಮೊಂದು ಕಯ್ಗೊಂಡಿದಿರ್ಪತ್ತಿ ಮನೋರಮೆಯು ಸೊಡಗೊಂಡು ವಿಲಾಸವತಿ ಮಹಾದೇವಿ ನಿಜರಾಜಭವನಕ್ಕೆ ಬಿಜಯಂಗೆಯ್ಯೆ ಚಂದ್ರಾಪೀಡನುಮೊಡನೆಯ್ದೆ ಪೋಗಿ ತಾಯುಮನೆಯೊಳ್ಮಜ್ಜನಭೋಜನಾದಿ ದಿವಸವ್ಯಾಪಾರಮಂ ಮಾಡಿ ಮಱುದಿವಸಂ ಪಯಣಮೊಂಬುದ ಸಲ್ಲಿಯಿನಿಶ್ಚಯಿಸಿ ನಿಜರಾಜಭವನಕ್ಕೆ ಬಿಜಯಂಗೆಯ್ದು ॥ ೪೯೯

ಕಂ ॥ ಇನ್ನಾ ಕಾದಂಬರಿಯುಮ । ನೆನ್ನಯ ಕೆಳೆಯನುಮ ನೆಂ
[ತಾನುಂ ಕಂಡೆನೆನು] । ತ್ತುತ್ಕೃಪತನೂಜ ನಾಗ । ಳ್ತನ್ನೊಳ್ ಬಗೆ
ಯುತ್ತ ।[ಮಿನಿಸುಮ]ತ್ತಾಳಿಸಂ ॥ ೫೦೦

ವ ॥ [illegible] ॥ ೫೦೧

೪೯೮. [illegible]

೪೯೯. [illegible]

೫೦೦. [illegible]

೫೦೧. [illegible]

*[ಮಿನಿಸಮು]

ಕಂ ॥ ಎನಿತು ಭವನಂಗಳೊಳವಂ । ತನಿತರ್ಕ್ಕಂ ತನ್ನಬೆಳಗೆ ಬೆಳಗಾಗಿರೆ ಚಂ ॥ ದ್ರನದೇನುದಯಿಸಿದನೊ ಪಡೆ । ದನುಭವಿಸಲ್ತಾರಕಾ ಸಮಾಗಮ ಸುಖಮಂ ॥ ೫೦೨

ವ ॥ ಅನ್ತು ಚಂದ್ರೋದಯದೊಳ್ ಚಂದ್ರಾಪೀಡಂ ತಾಯುಮನೆಗೆ ಬೀಳ್ಕೊಳಲೆಂದು ಬಂದು ಬಿನ್ನವಿಸೆ ವಿಳಾಸವತಿಮಹಾದೇವಿ ಭೋಂಕನೆ ಮನಂಕಲುಂಕೆ ಮಗನನಿಂತೆಂದಳ್ ॥ ೫೦೩

ವೃ ॥ ಇನಿಸುಂ ಮಾಣ್ದಪುದಿಲ್ಲ ನಂದನ ಭವದ್ದಿಗ್ಜೈತ್ರಯಾತ್ರಾವಿಲಂ । ಬನದಿಂ ಪುಟ್ಟಿದನೋವು ಮನ್ಮನದೊಳನ್ನಂ ಮತ್ತೆ ಪೋಗಾಯ್ತು ಭೋಂ ॥ ಕೆನಲೇ ನಾನು ಪದೊಂಪಜೊಳ್ ತೊಡರ್ದು ನೀನೀ ಪೋಗಿನೊಳ್ನಿಲ್ಲದಿ । ರ್ನಿನಗಾಂ ಕಯ್ಮುಗಿದಪ್ಪೆ ನೀಯೆಡೆಗೆ ನಿನ್ನಂಬೇಡಿಕಯ್ಯೊಡ್ಡಿದೆಂ ।

ವ ॥ ಎಂದು ಗದ್ಗದಕಂಠೆಯಾಗಿ ನುಡಿಯೆ ಚಂದ್ರಾಪೀಡದೇವಂ ವಿನಯವಿನಮಿತನಾಗಿ ಕಯ್ಗಳಂ ಮುಗಿದು ದೇವಿಯುಬ್ಬೆಸಸಿದಂತೆ ಗೆಯ್ವೆನೆಂಬುದುಂ ಗಮನಮಂಗಳಸಂವಿಧಾನಮ ನೆಂತಾನುಂ ಮಾಡಿದಾಗಳ್ ॥

ವೃ ॥ ಬಲವಿನೊಳಾಗಳೊಲ್ದುಬಗೆ ಪೆಮ್ಮೊಲೆಗಳ್ತೊರೆ *[ದುಜ್ಜೆ] ಪಾಯ್ವ ಪಾ । ಲೊಳೆಮಿಸಿಸುತ್ತೆ ಮೆತ್ತೆಮಗನಂ ಬಿಗಿಯಪ್ಪಿ ಪೊಮಳ್ಗ ಕಣ್ಣನೀ ॥ ಗ್ಗಳ ನೊಳ್†[ಸೇದಿ] ತಾಂ ಪರಸಿಮತ್ತಮಲಂಪಳಿಯಾಗೆ ನೋಡಿಬೀ । ಳ್ಕೊಳಿಸಿದಳಾವಿಲಾಸವತಿ ಧೀರತೆಯಿಂ ಬಲಿಕೆಯ್ದುಚಿತ್ತಮಂ ॥

೫೦೩. ಮನ, ಕಲಂಕೆ—ಕಲುಷಿತವಾಗಲು.

೫೦೪. ಇನಿಸುಂ—ಸ್ವಲ್ಪವಾದರೂ; ಮಾಣ್ದಪುದಿಲ್ಲ—ಬಿಡುವದಿಲ್ಲ; ಮತ್ತೆ, ಪೋಗು—ಗಮನವು: ಭೋಂಕೆನಲ್—ಅಕಸ್ಮಾತ್ತಾಗಿ; ಆಯ್ತು, ಈ ಪೋಗಿನೊಳ್ ನಿಲ್ಲದಿರ್—ಈಸಾರಿ ಪ್ರಯಾಣವಲ್ಲಿ ತಡಮಾಡಬೇಡ. ಇಲ್ಲಿ ಪೋಗುಧಾತುವು ಭಾವಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿರುವದು ಶ. ಮ. ಸೂ. ೨೦೩ ಈ ಎಡೆಗೆ--ಈ ವಿಷಯದಲ್ಲಿ.

೫೦೫. ತೊರೆದು—ಹಾಲುತುಂಬಿ; ಉಚ್ಚೆ—ಸೆಳೆದುಕೊಳ್ಳಲು ಅಂದರೆ ಬಿಗಿತುಕೊಳ್ಳಲು; ಮಿಸಿಸುತ್ತಂ—ಅಭಿಷೇಕ ಮಾಡುತ್ತ; ಬಳಸೇದಿ—ತಡೆದು; ಅಲಂಪು—ಪ್ರೀತಿಯು; ಅಳಿಯಾಗೆ—ಮಚ್ಚಾಗಲು.

*[ದಜ್ಜೆ] †[ಸೋಗೆ]

ವ॥ ಆಗಳ್ ಮತ್ತಂ ಕೃತಪ್ರಣಾಮನಾಗಿ ತಾಯುಂಬೀೞ್ಕೊಂಡು ತಂದೆಯುಂ ಬೀೞ್ಕೊಳಲೆಂದು ತದೀಯವಾಸಭವನಕ್ಕೆ ಬರ್ಪುದುಂ ದ್ವಾರರಕ್ಷಕರ್ ದೇವ ಯುವರಾಜಂ ಬೀೞ್ಕೊಳಲೆಂದು ಬಂದನೆಂದು ಬಿನ್ನವಿಸೆ ಮೆಲ್ಲನೊಳಗಂಪೊಕ್ಕು ಕೃತನಮಸ್ಕಾರನಾದ ಮಗನಂನೋಡಿ ತಾರಾಪೀಡದೇವಂ ಕಿಂಚಿದುನ್ನಮಿತ ಪೂರ್ವಕಾಯನಾಗಿ ಶಯನತಳದಿರ್ದಂದದೊಳೆ ಕರೆದು ತಳ್ಕೈಸಿ ಭೋಂಕನೆ ಮನಂಕಲಂಕೆ ಮನಂಮಿಕ್ಕುಸಿರನುಸಿರಲೊಲ್ಲದೆಂತಾನು ಮಿಂತೆಂದಂ ॥ ೫೦೭

ವೃ॥ ಜೆಸೆದೀಯಂದದೆ ದೋಷಮೇಱಿಸಿದ ನೆನ್ನೊಳ್ತಂದೆ ಯೆಂ
ದೆಮ್ಮಭಾ। ವಿಸದಿರ್ಮೆರ್ಗೆೞ್ಚಿಸಲೆಂದು ಮೆಯ್ದೆಜಗಮಂ ಚಿಕ್ಕಂದುತೊಟ್ಟಾಂ
ಪರೀ। ಕ್ಷಿಸಿ ನಿನ್ನಂ ಗುಣಜಾತಲಭ್ಯಮೆನಿಸಿರ್ದೀರಾಜ್ಯಭಾರಕ್ಕೆ ಯೋ।
ಜಿಸಿದೆಂ ಕೆಮ್ಮನದುಂತೆ ಯೋಜಿಸಿದೆನೇಪೇಳಾತ್ಮಜಸ್ನೇಹದಿಂ ॥ ೫೦೮

ವ॥ ಆರಾಜ್ಯಮುಂ ಪ್ರಥಿತಪೃಥ್ವೀ ಭಾರಮಪ್ಪುದಱಿಂ ದುರ್ವಹಮುಂ ಮಹೀಭೃತ್ಸಂಬಾಧಮಪ್ಪುದಱಿನತಿಸಂಕಟಮುಂ ಅನೇಕ ಸಾಧನಸಾಧ್ಯಮಪ್ಪುದಱಿಂ*[ದುಸ್ಸಾಧನಮುಮಪರ್ಯವಸಾನ] ಕಾರ್ಯ್ಯಜಾಲಮಪ್ಪುದಱಿಂ ದುಷ್ಪ್ರಾಪಮುಮೆನಿಸಿದುದದುಮೆ ನಿನಗೇಕಭೋಗ್ಯಮಾಗಿರ್ದುದದಱಿಂ ಸಕಲಲೋಕರಂಜನಕ್ಕೆ ಯತ್ನಂಮಾಡಲವೇೞ್ಪುದಿಂ ಪರಿಣತವಯಸರುಮನ[ಭೂತ]ಪುರುಷಾರ್ಥತ್ರಯರುಮೆನಿಸಿದವಗೆ ನಿನ್ನನಧಿರಾಜಪದವಿಯೊಳ್ ನಿಲಿಸಿ ಪೂರ್ವರಾಜಸೇವಿತ ಮಾರ್ಗಮನೆಯ್ದವೇೞ್ಕು ಮೆಂ

೫೦೮. ಎಮ್ಮತಂದೆ, ಜೆಸದು—ಗರ್ವಿಸಿ ಅಂದರೆ ಯುಕ್ತಾಯುಕ್ತ ವಿಚಾರವನ್ನು ಮಾಡದೆ; ಈ ಯಂದಮ, ದೋಷಮೇಱಿಸಿದಂ—ದೋಷಾರೋಪಣೆ ಮಾಡಿದನು ಎಂದು, ಎಮ್ಮ, ಭಾವಿಸದಿರ್. ಎಂದುಂ—ಸರ್ವದಾ; ಜಗಮಂ, ಮೆಚ್ಚಿಸಲ್, ಚಿಕ್ಕಂದುತೊಟ್ಟು—ಚಿಕ್ಕಂದಿನಿಂದಲೂ; ನಿನ್ನಂ, ಪರೀ—ಪರೀಕ್ಷಿಸಿ ಎಂದನ್ವಯವು; ಕೆಮ್ಮನೆ—ನಿಷ್ಕಾರಣವಾಗಿ; ಅಂತೆ—ಸುಮ್ಮನೆ.

೫೦೯. ಪೃಥ್ವೀಭಾರಮಪ್ಪುದರಿಂ—ಭೂಮಿಸ್ತಾರವುಳ್ಳದ್ದಾದ್ದರಿಂದ.

*[ದುಸ್ಸಾಧನಮುಮಪರ್ಯಾವಸಾನ].

ಬನ್ನಿಗಂ ತೊಟ್ಟನೆ ವೈಶಂಪಾಯನವೃತ್ತಾಂತ ಮಂತ್ರಾಯಪೇತುವಾದುದ
ದಱಿಂ ಮಗನೆ ನಿಂತಪೆಯುದೆ ಬಂದೆಮ್ಮ ಮನೋರಥಕ್ಕೆ ಸಾಫಲ್ಯಮಂ ಸಂ
ದಿಪ್ಪುದೆಂದು ॥ ೫೦೯

ಕಂ ॥ ಹೃದಯಮುಸಿತ್ತಪೆ ನಾಸಮು । ಯದೊಳಿನೆ ಬಾಯ್ವಾಯೊ
ಳಿತ್ತು ತಂಬುಲಮನಲಂ । ಪ್ರೊಪವಲ್ಕೆ ಪರಸಿ ಬೀಳ್ಕೊಳ । ಸಿದನಂತಾನುಂ
ನಿಜಾತ್ಮಜನ ನಧಿರಾಜಂ ॥ ೫೧೦

ವ ॥ ಅನಂತರಂ ಪ್ರಸ್ಥಾನಪ್ರಣಾಮಮುಮಂ ಮಾಡಿ ಪೊರಮಟ್ಟು ಬಂದು
ಸುತವಿಯೋಗ ಚಿಂತಾಕ್ರಾಂತರಪ್ಪ ಶುಕನಾಸನುಮಂ ಮನೋರಮೆಯು
ಮು ನುಡಿದು ಬೀಳ್ಕೊಂಡು ಬಂದು ವೈಶಂಪಾಯನ ದರ್ಶನತಾತ್ಪರ್ಯ
ದೊಳಂ ಕಾದಂಬರೀ ಸಮಾಗಮೌತ್ಸುಕ್ಯದೊಳ್ ಮಕೃತಪರಿಲಂಬನಾಗಿ
ಭವನಾಂಗಣದೊಳ್ ಸಾಷ್ಟಾಂಗದಿಂ ಪ್ರಯುಗ್ಮಮಂ ಚಂದ್ರಾಪೀಡನೇಱಿ ದಿಗಂ
ತರಂಗಳೆಲ್ಲ ಮನಂತಪಯ ಪೇಷಾರವಂಗಳಿಂ ತೆಕ್ಕನಾಱಿವೆ ಭುವನತಳ
ಮೆಲ್ಲಂ ತುರಂಗಮಯಮಾಗೆ ಪೊಱಮಟ್ಟು ಶಿಪ್ರಾನದಿಯುಂದಾಂಟಿ ಯೋಜ
ನತ್ರಯವನಿತಂ*[ಪೋಗಿ ತೃಣಜಲ ಸಮೃದ್ಧ ಮಾಡೆಡೆಯೊಳ್ ಬೀಡು]ಗೆಯ್ದು
ತನ್ನೊಳಿಂತೆಂದಂ ॥ ೫೧೧

ಕಂ ॥ ಎನಗೆನಸುಂ ಲಜ್ಜಿಸಿಪ್ಪೋ । ಪನಟಿನ್ನೊಳ್ಪೋಗಿ ತೆರೆದುತ
ಳ್ಕೈಸುತ ಪಾ । ತನಮೊಂದುಲಜ್ಜೆಯುಂ ಕಳ್ । ದನುಭವಿಪೆಂ ಮತ್ತಮಪ್ರ
ತ್ನವಾಗಮ ಸುಖಮಂ ॥ ೫೧೨

ವೃ ॥ ಅತನು ಮಹಾನು ಪಾಗಳ್ಮದಾಗಮ ನೋಕ್ಯತಪರ್ಷೆಯುಂ
ಮಹಾ । ಶ್ವೇತೆಯನೆಯ್ದೆ ಕಂಡು ಬಳಿಕಂತೆ ತಪಾಶ್ರಮದೊಳ್ತು ರಂಗಸಂ॥

---

೫೧೦. ಬಾಯ್ವಾಯೊಳಿತ್ತು—ಬಾಯಿಂದ ಬಾಯಿಗೆ ಕೊಟ್ಟು.

೫೧೧. ಉರ್ಚನುಡಿದು—ಬಹಳವಾಗಿ ಮಾತಾಡಿ, ಅಕೃತಪರಿಲಂಬನಾಗಿ—ಕಾ
ಲವಿಳಂಬವನ್ನು ಮಾಡದವನಾಗಿ.

*[ಪೋಗುತಮುಚಿಕ್ಕೊಂದಮನೆಯ್ದಿದಂತೆ].

ಘಾತಮುಮಂ ನೃಪಪುತ್ರಜರುಮಂ ನಿಲಿಸಿಟ್ಟ್ಯಲದಿಂದ ಮಾಮಹಾ । ಶ್ವೇತೆ
ಯಿ ಬೇಗಮೊಯ್ಯೆ ಪ್ರಗವಿಪ್ಪೆವೆನಿಪ್ಪೆ ನಪೇಮಕೂಟಮಂ ॥ ೫೧೩

ಅನ್ತು.—

ಕಂ ॥ ಅಂಬಂಮವ ನಪಮುಪಮಿಕೆ । ಯಿಂಬೇಗಂ ಪರಿದುಪ್ಪೋಗಿ ಪಠವೊತ್ತವಿಂ ॥ ದಂ ಬಿನ್ನ ವಿಪಜನಂ ಕಾ । ದಂಬರಿಬಿಂ ವೇಚ್ಚುಗೊಳ್ಳದಿಕ್ಕರ್ಮೆ ಪಿರಿದುಂ ॥ ೫೧೪

ಎಂತೆಂತು ಬಿಟಮೆ ನೀಮೆನಿ । ತಂತರದೊಳ್ಕಂಡಿರೆಲ್ಲಿದಂ ಬಂದನೆ ಭೂ॥ ಕಾಂತನೆನುತ್ತಂ ಬೆಸಗೊಳು । ತಂ ತಳವೆಳಗಾಗಿ *[ತಣಿಪಿ] ನಿಜಪರಿಜನ ನುಂ ॥ ೫೧೫

ವೃ ॥ ಬಿಸಿನೀಪತ್ರಂಗಳಂ ಘೋಂಕನೆ ತೊಲಗಿಸಿ ಮದ್ದರ್ಗನೊತ್ತ ನ್ನಿಬಿಜ್ಜ । ದನದಿಂದಂ ಮೇಲುದಂ ಪೆಮೆತ್ತರ್ಗಳೆಗೆ ತೆಗೆವ ಭೂಷಾವ್ಯಾಳಾ ಕಂಗಂಳಂ ಪಿಂ ಗಿಸಿ ತತ್ಕ್ಷಬೋಪಜಾತ†[ಪ್ರಚುರ]ಪ್ರಲಕಮಂ ಭೂಷಣ ಶ್ರೀಗೆ ಪಕ್ಕಾ । ಗಿಸುಮಿನ್ನ್ಯಾಪಾರಸಾರಂ ನಮನಿಸುಗುಮೆ ಕಾದಂಬರೀ ದೇವಿಗಾಗಳ್ ॥ ೫೧೬

ಕಮಲಪತ್ರದರ್ಪ ಕವಸ್ತಕಮುಲ ಕುಮುದ ಕಿಂಜಲ್ಕಮಂ ತಳ್ತ ರೋಮವಾಂ । ಚಮಿ ಬಿಡಾಡುತ್ತ ಪಚ್ಛ್ವಿಕ್ಕಿದ ಮಲಯಜಮು ಕೂಡೆ ಲಾವ ಣ್ಯಕೋಭಾ ॥ ಸ್ನ ದ ಪುಸ್ತಂಗಂಗಳಿಂ ಛ್ಯಾನ್ಬೊಪರೆ ತೊಡೆಯುತಂ ಬಿ ಟ್ಟುಮೆತ್ತ್ಯಲ್ಲನಂ ಮು । ಚ್ಚಿದಕೇಶವ್ರಾತಮಂ ಮುಯ್ಯಿನೊಳಳವಡಿಸು ತ್ತಿರ್ಕ್ಕುಮೇ ಕಂಡೆಡೆನ್ನಂ ॥ ೫೧೭

---

೫೧೬. ಪಕ್ಕಾಗಿಸುವ—ಆಸ್ಪದವನ್ನಾಗಿಮಾಡುವ.

೫೧೭. ರೋಮಜಾಲದಿಂ—ರೋಮಸಮೂಹದಿಂದ; ಬಿಡಾಡುತ್ತಂ—ಹೋಗಲಾಡಿಸುತ್ತ; ಸಾಸಿ—ಲಜ್ಜೆಯು; ಪೊಸರೆ—ಪೆಟ್ಟಲು; ಬಿಟ್ಟು—ಬಿಚ್ಚಿಹೋಗಿ; ಮುಯ್ಯಿನೊಳ್—ಹೆಗಲಮೇಲೆ.

*[ತಣಿಪಿ] †[ಪ್ರಕರ]

ಕಂ ॥ ಕಣ್ಗುಡಿತೆಗಳಿಂದಾಕೆ ಪ । ವಣ್ಗಿಳಿದಾಬಾಷ್ಪವಾರಿಯುಂ ಸುರಿಯುತ್ತುಂ ॥ ಕಣ್ಗೊಳಿಸದಿರ್ಕ್ಕುಮೇಸೇ । ಳ್ಮಾಣ್ಗೆಂ ಮದನಾಗ್ನಿಯೆಂದು ವದಿಪ್ಪವತೆಱದಿಂ ॥ ೫೧೮

ವ ॥ ಆಸಮಯದೊಳ್ ಸಂಭ್ರಮಂಬೆರಸು ಮುನ್ನಿರ್ದ್ದ ಕುಸುಮಶಯನಮಂ ಪಿಂದಿಕ್ಕಿ ಕಂಪಿಸುತ್ತ ಮೆನಗಿದಿರೆಳ್ದು ಕಾದಂಬರೀದೇವಿಯುಂ ಕಣ್ಣಾರೆನೋಡಿ ಕಣ್ಬಡೆದುದರ್ಕ್ಕೆ ಸಾಫಲ್ಯಮುಂ ಸಾಧಿಸುವೆನನಂತರಂ ॥

ಕಂ ॥ ಚರಣನತೆ ಪತ್ರಲೇಖೆಯು । ಸಿರದೆತ್ತುವ ವಿನಯವಿನತೆ ಮದಲೇಖೆಯು ನಾ ॥ ದರಿಸುವ ಕೇಯೂರಕನಂ । ಬರೆತೆಗೆದಪ್ಪುವ ಸುಖಕ್ಕೆ ನೆಲೆಯೆನಿಸಿಪ್ಪೆಂ ॥ ೫೨೦

ವ ॥ ಅನಂತರಮಾಮಹಾಶ್ವೇತೆಯುಂ ಮಖಿಲಜನಸಮೂಹಮುಂ ವಿವಾಹಮಂಗಳಮನೆಸಗೆ ಕಾದಂಬರಿಯೊಳ್ಕೂಡಿ ಹೃದಯಜನ್ಮನಿವಾಸಮೆನಿಸಿದಾ ವಾಸಭವನಕ್ಕೆ ಸುರಭಿಕುಸುಮ ಧೂಪಾನುಲೇಪನಾಮೋದಿತಾಂಗನೆಂ ಗಂಧರ್ವಕನ್ಯಾಕರಗ್ರಹಣ ಪೂರ್ವ್ವಕಂ ಬಂದಾಕೆವೆರಸು ದಳಿಂಬದೊಳ್ಕುಳ್ಳಿರ್ದ್ದ ಕಿಱಿಯಬೇಗಕ್ಕೆ ಕೃತನರ್ಮ್ಮಾಲಾಪೆಯಪ್ಪಮದಲೇಖೆ ಮೆಲ್ಲನೇ ನಾನುಮೊಂದುನೆವದಿಂ ಪೊಱಮಟ್ಟು ಪೋಗೆ ॥ ೫೨೧

ವೃ ॥ ನವಲಜ್ಜಾಭಾರ ಸಮಾಸನ್ನೆಯ ಸುರದೊಳೊತ್ತಂಬದಿಂ ದೊತ್ತಿಸರ್ವಾಂ । ಗಮ ನೆನ್ನಂಗಂಗಳೊಳ್ಮೆಯ್ಗರೆದು ವೆನಿಸಿ ಮೆಯ್ಯಾರೆ ತಳ್ತಪ್ಪಿ ದೇವ । ರ್ಗ್ಗಮಣಂ ಕಯ್ಗೂಡದಂತಪ್ಪವಳಧರಸುಧಾಸಾರಮಂ

---

೫೧೮. ಕಣ್ಗುಡಿತೆಗಳಿಂದೆ—ಜೊಂಗಸೆಗಣ್ಣಿಂದ ; ಪವಣ್ಗಿಳಿದ—ಅಳತೆಮೀರಿದ ; ಇಂ—ಇನ್ನುಮೇಲೆ ; ಮದನಾಗ್ನಿ, ಮಾಣ್ಗೆ—ತೊಲಗಲಿ ; ಎಂದು, ವದಿಪ್ಪವತೆಱದಿಂ—ಹೇಳುವಂತೆ.

೫೧೯. ಕಣ್ಣಾರೆನೋಡಿ—ಕಣ್ಣು ದಣಿವಂತೆ ನೋಡಿ.

೫೨೦. ಚರಣನತೆ ಎಂಬ ಪ್ರಥಮಾಂತವು ಪತ್ರಲೇಖೆಯು ಎಂಬ ಚತುರ್ಥ್ಯಂತಕ್ಕೆ ವಿಶೇಷಣವು ಶ. ಮ. ಸೂ. ೧೪೦.

೫೨೧. ದಳಿಂಬದೊಳ್—ಮೆತ್ತೆಯಮೇಲೆ.

೫೨೨. ಒತ್ತಂಬದಿಂ—ಸೇರುವೆಯಿಂದ ; ಮೆಯ್ಗರೆದುವು—ಲೀನವಾದವು ; ದೇವರ್ಗ್ಗಂ—ದೇವತೆಗಳಿಗೂ ; ಅಣಂ, ಕಯ್ಗೂಡದಂತಪ್ಪ—ದೊರಕದಂಥಾ ;

ತೃಪ್ತಿಪರ್ಯಂ । ತವಲಂಪಿಂ ಪೀದ್ರ್ದಮದ್ವಲ್ಲಭೆಯ ಸುಸಿಲಸ್ಸೈಪಿಂ ಕೃತಾ ರ್ಥಾತ್ಮನಪ್ಪಂ ॥ ೫-೨೦

ಎನಸುಂ ವಿಶಾನೇಕ್ಷಣಂ ಸೋಲದ ರಸದೊದವಿಂ ಸೊರ್ಕ್ಕಿ ಬೆಂಡೇ ಳ್ವನಂ ನ । ಚ್ಚಿನಮುಗ್ಧಾಲಾಪ ವಿಂಪಂ ಕಱೆದು ಬಱೆತುದೆಂಬನ್ನೆಗಂ ಬತ್ತಿ ರಲ್ಪಾ । ಯ್ಮನದೊಳ್ತೀವಿರ್ದ್ದ ಮೋಹಾವೃತರಸಮನೆ ಸರ್ವಾಂಗಮುಂ ಟಾಗವಿಕ್ಕಿ । ತ್ತೆನಿಸಲ್ ಘರ್ಮಾಂಬು ತಳ್ತೊಪ್ಪಲು ವನುನಯದಿಂ ದಾ ಕೆಯೊ ಳಲ್ಕಡಿದಪ್ಪಂ ॥ ೫-೨೩

ವ॥ ಅದಲ್ಲದೆಯು ಮಖಿಳಜನಸುಲಭಮಾಗಿಯುಂ ಯೋಗ್ಯೈಕಗ ಮ್ಯಮುಂ ಸ್ಪರ್ಶವಿಷಯಮಾಗಿಯುಂ ಹೃದಯಗ್ರಾಹಿಯುಂ ಮೋಹನಮಾ ಗಿಯುಂ ಇಂದ್ರಿಯಪ್ರಸಾದಸಂಪಾದಕಮುಮುದ್ದೀಪನಮಾಗಿಯುಂ ಮದ ನದಹನನಿರ್ವೃತ್ತಿಕರಮುಂ ಉಪಜಾತವಿಷಮೋಚ್ಛ್ವಾಸಶ್ರಮಸ್ವೇದಮಾ ಗಿಯುಂ ಮಹಾಹ್ಲಾದಕಾರಿಯು ಮನುಭೂಯಮಾನಮಾಗಿಯುಂ ಉತ್ಪಾ ದಿತಾನುಭವಸ್ಪೃಹಮುಂ ಸಹಸ್ರವಾರಾನುಭೂತಮಾಗಿಯು ಮಪುನರುಕ್ತ ಮುಂ ಅತಿಸ್ಪಷ್ಟಮಾಗಿಯು ಮನಿರ್ದೇಶ್ಯಸ್ವರೂಪಮು ಮಸಂಸ್ಪರ್ಶನ ಮನುಪಮರಸ ಮನಾಖ್ಯೇಯಪ್ರೀತಿಕರಮು ಮಪ್ಪ ಸುರತಸುಖಮಂ ಬೇಱೊಂದು ಪರಮಾನಂದಸುಖಮ ನಾಕೆಯೊಳನುಭವಿಸಿ ರತಾವಸಾನ ಸಮಯದೊಳ್ ॥ ॥ ೫-೨೪

ಕಂ ॥ ಅಮೃತಲವಲಲಿತ ಮಾದ । ತ್ತಮೃತದ್ಯುತಿಬಿಂಬ ಮೆನಿಪ ನಿರ್ಭರಸುರತ ॥ ಶ್ರಮಜಲಲವಲಲಿತಮ ನವ । ಳಮುಖೇಂದುವ ನಡರೆ ನೋಳ್ಪನ್ನೈಪಂ ಪಡೆವಂ ॥ ೫-೨೫

• ವ॥ ಮತ್ತ ಮೆಳವೆಂಡಿರ ತಂಡದಲತಗೆಯೂಡಿದಡಿವಜ್ಜೆಗಳಿಂದಚ್ಚ ಱಿದ ಪಚ್ಚೆಯ ಪಾಸಱೆಗಳುಮಂ ಕೇಗುವ ನೋಗೆಗಳ ಕಳಕಳಂಗಳಿಂ ತೆಕ್ಕನೆತೀವಿದ ತಮಾಲತರುಗಳುಮಂ ಪೊಸನಿಸಿಲ ಪೊಳಪಿನಿಂ ನುಣ್ಣ ನುಜ್ಜಳಿಪ ರನ್ನದೆಳವೆಳಗಿನ ಬಳಗದಿಂ ಬಣ್ಣಿಸಿ ಸುರಶರಾಸನಂಗಳ ನೆಳ ಲ್ಕಿಕ್ಕಿದಂತೆ ಸಿಸಿರ್ವ ನಿರ್ಝರಂಗಳುಮನಪ್ಪುಕೆಯ್ದು ಕೇಳೀಪರ್ವತ ನಿತಂಬಂ ಗಳೊಳಂ ಪೂಗೊಳಂಗಳೊಳ್ತೀಂಕಿ ಪಾಱುವ ಪಕ್ಕಿಗಳೆಱಂಕೆ *[ವಿಡಿದುದಿ

ರ್ವ] ತಂಪನೀವ ತುಂತುರ್ವನಿಯ ತುಱುಗಲುಮಂ ತಳಿರ ನನೆಯಲರ ಕಾಯ ತನಿವಣ್ಣ ಬಣ್ಣಂಗಳಿಂ ಚಿತ್ರಿಸಿದಂತಿಡಿದಡರೆಗೋ †[ಡುಗಳೊಳಂ ಚಿತವಾದ]ಗೊಂಚಲುಗಳುಮ ನಲರ್ವಂಡನುಂಡು ತನಿಸೊರ್ಕಿಂಸೊರ್ಕಿ ತೆಱಂದಿರಿದು ಪಾಱುವಪೆಣ್ದುಂಬಿಗಳ ಬಳಗಮುಮನೊಳಕೊಂಡ ಲತಾ ಮಂಟಪಂಗಳೊಳಂ ತಳರೆತಾಗುವ ತೆರೆದುಱುಗಲಲೆಪದಿಂ ‡[ಸೂಸಿಪಾಸಿ ಱಿದು] ಬಣ್ಣವುರಂತೀವಿದಂತೆ ಬೆಡಂಗುವಡೆದ ಬಣ್ಣವಣ್ಣಿಗೆಯ ನೀರ್ವೂ ಗಳ ರಜಂಗಳುಮ ನೊಳದೊಂಡಿನ ಪಾಲ್ಗಳುಮಂ ಪೀರ್ದಿಂಗೊರಲ್ಗಳಾ ದ ನೀರ್ವಕ್ಕಿಗಳ ಸುಸಿಲಮುಸಕದಿಂಚರಂಗಳುಮಂ ನೀರಾಟಮಾಡುವ ಗಾ ಡಿಕಾರ್ತಿಯರ ಘನಜಘನಂಗಳ ಪೆರ್ಮೊಲೆಯ ಪೊರ್ಕುಳಿಯಿಂ ಪಱಿವಱಿ ಯಾದ ಪೆರ್ದೆರೆಗಳುಮಂ ತಳೆದ ಪೂಗೊಳಂಗಳೊಳಂ ಪಲತೆಱದ ರಮಣೀ ಯಪ್ರದೇಶಂಗಳೊಳ ವೊಂದುಪೊರ್ತಗಲದೆ ಮೆಯ್ಗೆಮೆಚ್ಚಿದಂತೊಚ್ಚತಂ ಕಾದಂಬರಿಯೊ ಳ್ನೆರೆದು ನಿಸರ್ಗರಮಣೀಯಮಪ್ಪ ಯೌವನಮಂ ರಮ ಣೀಯತರಮಾಗೆ ನೆಗಳುತ್ತಮಿರ್ಪ್ಪನದಲ್ಲದೆಯುಂ ॥ ೫೦೬

ಕಂ ॥ ಮನದನ್ನಳೆನಿಸಿ ನೆಗಳ್ವ । ನ್ನಿನಿಯಳ್ಗಂ ಪೇಳ್ದನಂತರಂ
ಮಾಡಿಸುವೆಂ ॥ ಮನವೊಸೆದಾವೈಶಂಪಾ । ಯನಂಗೆ ಮದಲೇಖೆಯೊ ಳ್ವಿ
ವಾಹೋತ್ಸವಮಂ ॥ ೫೦೭

---

೫೦೬. ಅಲತಗೆಯೂಡಿದ—ಅರಗಿನಬಣ್ಣವನ್ನು ಹಚ್ಚಿದ; ಅಚ್ಚಿಱಿದ—ಮುದ್ರಿತವಾದ; ಪಾಸಱೆ—ಹಾಸುಗಲ್ಲು; ಸುಣ್ಣನುಜ್ಜಳಿಪ—ಚೆನ್ನಾಗಿ ಪ್ರಕಾಶಿಸುವ; ಬಣ್ಣಿಸಿ—ಚಿತ್ರಿತವಾಗಿ ಅಂದರೆ ನಾನಾಬಣ್ಣವುಳ್ಳದ್ದಾಗಿ; ತೇಂಕಿ—ಈಜಾಡಿ; ಅಡರೆಗೋಡು—ನೀಡಿಕೊಂಡಿರುವಕೊಂಬೆಗಳು; ತೆಱಂದಿರಿದು—ಅವಕಾಶವನ್ನು ಹೊಂದಿ ಅಂದರೆನುಸುಳಿ; ತಳರೆ—ಹೊರಡಲು; ತಾಗುವ—ಬಂದಕ್ಕೊಂಡು ತಗಲುವ; ಸೂಸಿ—ಚೆಲ್ಲಿ; ಪಾಸಿಱಿದು—ಹರಡಿಕೊಂಡು; ಬಣ್ಣವುರಂತೀವಿದಂತೆ—ಚಿತ್ರಿತವಾದಂತೆ; ಬಣ್ಣವಣ್ಣಿಗೆಯ—ನಾನಾಬಣ್ಣದ; ಬಳದೊಂಡಿನ—ದಂಟನೊಳಗಣವಿಂಡಿನ; ಇಂಗೊರಲ್ಗಳಾದ—ಮಧುರಕಂಠವುಳ್ಳ; ಪೊರ್ಕುಳಿ—ತಾವನೆ; ಪಱಿವಱಿಯಾದ—ಚೆಲ್ಲಾಪಿಲ್ಲಿಯಾದ; ಬಚ್ಚತಂ—ಚೆನ್ನಾಗಿ;

*[ವಿಡಿದಾಲಿಗೊಡಿಸುವ] †[ಡಂಚಿತಮಲ್ಲದ] ‡[ದೆಸೆದುಪದೆಱಿಸೂಸಿಪಾಸಿಱಿದು]

೫೦೭. ಮನದನ್ನಳೆನಿಸಿನೆಗಳ್ವ—ಮುಂದೆ ನನ್ನ ಮನೋವಲ್ಲಭೆಯಾಗುವ; ಮನವೊಸೆದು—ಪ್ರೀತಿಸಿ.

ವ ॥ ಎಂದಿಂತನಂತ ಚಿಂತಾಂತರಂಗಂ ಪಲುಂಬಿ ಪಂಬಲಿಸುತ್ತುಂ ನಿಚ್ಚಪಯಣಂಗಳಿಂ ಯುವರಾಜನನೇಕ ಯೋಜನಂಗಳಂ ಪೆಱಗಿಕ್ಕಿ ಪೋಗುತ್ತುಮಿರೆಯಿರೆ ॥ ೫೭೮

ವೃ ॥ ವಸುಧಾಚಕ್ರಕ್ಕೆ ಕಾಲಾಯಸಗೃಹವರಣಂ ಚಂದ್ರಬಿಂಬಕ್ಕೆ ರಾಹುಗ್ರಸನಂ ಚಂಡಾಂಶುಬಿಂಬಕ್ಕವಮೆಯು ರಜನೀಪ್ರೋದ್ಗಮಂ ವಜ್ರವಹ್ನಿ ॥ ಪ್ರಸರಕ್ಕುದ್ದಾಮ ಧೂಮೋದಯ ಮಖಿಲವಿಯೋಗಾತುರಗ್ರಂಥಕಾರೋಲ್ಲಸನಂ ತಾನೆಂಬಿನಂ ಬಂದುದು ಬಹುಳತಟಿಜ್ಜಾಲಮಂ ಭೋದಕಾಲಂ ॥ ೫೭೯

ತಿರುವಂ ಮುಪ್ಪುರಿಗೊಂಡು ವಿಳ್ಳಿಸುವ ಮಿಂಚಂಮಾಡಿ ನೀಡುಂ ಭಯಂ । ಕರಮಾಗೇಱಿಸಿಕೊಂಡು ಧನುವಂ ಧಾರಾಶರಾಸಾರಮಂ ॥ ಸುರಿಯುತ್ತುಂ ಘನಘೋಷಗರ್ಘರತರ ಪ್ರಧ್ವಾನದಿಂ ದಾರ್ದುರಪಾ । ದ್ವಿರದುದ್ದಾಮನಿದಾಘಮಂ ಬೆದಱೆ ಬೆಂಕೊಂಡತ್ತು ಮೇಘಾಗಮಂ ॥ ೫೮೦

ವ ॥ ಅನ್ತು ಬಂದ ಮೇಘಾಗಮದೊಳ್ ವಿಯೋಗಿಜನಂಗಳ ಮೊಗಂಗಳುಂ ದಿಗಂತರಂಗಳುಂ ಮೊಡನೊಡನೆ ಕತ್ತಲಿಸಿದು ವವರ *[ಮನಮುಂ] ಮರಾಳಕುಲಮುಂ ಮೊಡನೊಡನೆ ಬೆದಱಿದು ವವರ ನಿಶ್ವಾಸವಾತಂಗಳುಂ ಧಾರಾಕದಂಬಂಗಳುಂ ಮೊಡನೊಡನೆ ಪೊಣ್ಮಿದು ವವರಕಣ್ಮಲಗಳುಂ ಕಾರಮುಗಿಲ್ಗಳುಂ ಮೊಡನೊಡನೆ ವಾರಿಧಾರೆಗಳಂ ಸುರಿದು ವವರ ಹೃದಯಂಗಳುಂ ನದೀನದಂಗಳುಂ ಮೊಡನೊಡನುತ್ಕಲಿಕೆಗಳ ನೊಳಕೆಯ್ದು ವವರರಣರಣಕಾವಸ್ಥೆಗಳುಂ ಕೆಂದಳಂಗಳುಂ ಮೊಡನೊಡನೆ ವಿಜೃಂ

೫೭೯. ಅವಮೆಯು—ಅಮಾವಾಸ್ಯೆಯು ; ಪ್ರೋದ್ಗಮಂ—ಆವಿರ್ಭಾವವು ;

೫೮೦. ವಿಳ್ಳಿಸುವ—ಚಲಿಸುವ ; ಮಿಂಚಂ—ಮಿಂಚನ್ನು ; ತಿರುವಂಮಾಡಿ—ಹೆದೆಯನ್ನಾಗಿ ಮಾಡಿಕೊಂಡು ; ಪಿಱಿಸಿ—ಹೆದೆಯನ್ನು ಸೇರಿಸಿಕಟ್ಟಿ ; ಬೆಂಕೊಂಡತ್ತು—ಓಡಿಸಿತು ; ಧಾರಾಕದಂಬಂಗಳುಂ—ಮುಗಿಲಕಡವದಮರಗಳೂ ; ಉತ್ಕಲಿಕೆಗಳಂ—ಉತ್ಕಲಿಗಳನ್ನು, ಆಸಕ್ತಿವಿಶೇಷವನ್ನು ; ಕೆಂದಳಂಗಳುಂ—ರಕ್ತೋತ್ಪಲಗಳೂ ;

ಭಿಸಿದು ನವರಮನೋರಥಂಗಳುಂ ಮೇಘವರ್ಣಂಗಳು ಮೊಡನೊಡನೆ ಬಹುವಿಧಂಗಳಾದು ವಂತುವಲ್ಲದೆಯುಂ ‖ ೫೩೧

ವೃ ‖ ಧರೆಯೊಳ್ಕಾಲೂರಸಂಘಂ ಪವನಪಥದೊಳಂಭೋಧರಾನೀಕ ವಾಶಾಂ । ತರದೊಳ್ಝಂಝೂಸಮೀರಂ ವನಸಮುದಯದೊಳ್ಕೇಕಿಸಂಘಾತಮುರ್ವೀ ‖ ಧರಚಕ್ರಪ್ರಾಂತದೊಳ್ನಿರ್ಝರತತಿ ತಟಿನೀವ್ಯೂಹದೊಳ್ಪೂರವಾರಂ । ವಿರಹಿವ್ರಾತಂ ಬಿಗುರ್ವ್ವಂತೊಡನೊಡನೆ ರುತಂಪರ್ವಿಸುತ್ತಿರ್ದ್ದುವೆತ್ತಂ ‖ ೫೩೨

ಬಯಲೊಳ್ಪರ್ವ್ವುಗೆದೋಱಿ ನುಣ್ಬಸಲೆಯೊಳ್ಮೆಯ್ದೋಱಿ ನೀರ್ದ್ದಾಣದೊ । ಳ್ನಯಮುಂ ಬೀಱಿ ಮಹೀಧ್ರದೊಳ್ಮಸಕಮುಂ ಕೈಕೊಂಡು ಶಾಖಾಸಮು ‖ ಚ್ಚಯದೊಳ್ಸಂದಣಿಗೊಂಡು ತಾಳವನದೊಳ್ಕಾರ್ಕಶ್ಯಮುಂ ಮಾಡಿಕೊಂ । ಡು ಯಥಾ *[ಸಾರನಿಪಾತ] ಮುಣ್ಮಿದುದು ಮೇಘೋನ್ಮುಕ್ತ ಧಾರಾರವಂ ‖ ೫೩೩

ಸ್ಫುರಿತ ತಟಿತ್ಪ್ರಭಾಪ್ರತತಿ ಕಳ್ತಲೆಯಂ ಸುರಗೋಪಕಾಂತಿ ಪಾಂ । ಡುರತೆಯ ನಂಬುವಾಹತತಿ ಶೋಷಣಮಂ ಘನವಾರಿಧಾರೆ ನಿ ‖ ರ್ಭರಪರಿತಾಪಮಂ ಕುಟಜಕುಂದನವೋದ್ಗಮವಾಟಿ ರಾಗಮಂ । ವಿರಹಿಜನಕ್ಕೆ ಮಾಡಿದುದು ನೋಡುವೊಡೆಯ್ದೆ ವಿರುದ್ಧಮೆಂಬಿನಂ ‖ ೫೩೪

ವ ‖ ಅನ್ತು ಬಂದ ಮಳೆಗಾಲಮಂ ಬಗೆಯದೆ ಸುಹೃದ್ದರ್ಶನಕುತೂಹಲದೊಳಂ ಕಾದಂಬರೀ ಸಮಾಗಮೌತ್ಸುಕ್ಯದೊಳ್ ಮೆಲ್ಲಿಯುಂ ತಡೆಯದೆ ಪಲವುಪಯಣಂಗಳಿಂ ಚಿತ್ರರಥವನಕ್ಕೆ ಸಮೀಪವೆನೆ ಬರ್ಪ್ಪನವನ್ನೆಗಂ

---

೫೩೧. *[ಮನೊಳಬಮುಂ]

೫೩೨. ಪೂರವಾರಂ—ಪ್ರವಾಹಸಮೂಹವು ; ಬಿಗುರ್ವ್ವಂತೆ—ಭಯಪಡುವ ಹಾಗೆ ; ರುತಂಪರ್ವಿಸುತ್ತೆ—ಸದ್ದನ್ನು ಹೆಚ್ಚಿಸುತ್ತ.

೫೩೩. ಪರ್ವ್ವುಗೆದೋಱಿ—ಹರಡಿಕೊಂಡು : ನುಣ್ಬಸಲೆಯೊಳ್—ಶಾದ್ವಲಪ್ರದೇಶವಲ್ಲಿ ಅಂದರೆ ಹಸುರಾಗಿ ಹುಲ್ಲು ಹುಟ್ಟಿರುವ ಸ್ಥಲವಲ್ಲಿ : ಮಸಕಂಕೆಯ್ಕೊಂಡು— ವಿಜೃಂಭಿಸಿ ; ಯಥಾಸಾರನಿಪಾತಂ—ಧಾರಾಸಂಪಾತವನ್ನನುಸರಿಸಿ ; ಧಾರಾರವಂ—ಜಲಧಾರೆಯಸದ್ದು.

*[ದಾರನಿವಾರ]

ಪತ್ರಲೇಖೆಯುಂ ಕಳುಪಿಮುಗುಳ್ದಂ ಬಂದುಪೊಡವಟ್ಟ ಮೇಘನಾದನ ನಿದಿರೊಳ್ಕಂಡು ವೈಶಂಪಾಯನವಾರ್ತಾಕರ್ಣನೋತ್ಸುಕನಾಗಿ ಚಂದ್ರಾಪೀಡನಿಂತೆಂದಂ ॥ ೫೩೫

ವೃ॥ ಪ್ರಿಯಸಖವಾರ್ತೆಯುಂ ತಿಳಿಯಬಿನ್ನವಿಸನ್ನೆಗಮಿರ್ಕೆ ಪತ್ರಲೇ । ಖೆಯು ದೆಸೆ ಕಂಡುಮುಂಟೆ ಸಖನೇಂ ಸುಖಮಿರ್ದ್ದನೆ ತದ್ವನಾಂತದ ॥ ಲ್ಲಿಯೆ ನೆಲಸಿರ್ದ್ದ ಕಾರಣವದೇಂ ನಿನಗಾತ ನದೇನನೆಂದನೆ । ನ್ನಯ ಬರುತಿರ್ದ್ದುದುಂ ವಿದಿತಮಾದುದೆ ಕಾಣ್ಬನೆ ಪೋದೊಡಾತನಂ ॥ ೫೩೬

ವ॥ ಎಂದು ಬೆಸಗೊಳ್ವುದುಂ ದೇವಬ್ಬೆಸಸಿದಲ್ಲಿವರಂ ಪೋಗಿಪತ್ರಲೇಖೆಯುಂ ಕಳುಪಿಬಂದೆನಲ್ಲದೆ ವೈಶಂಪಾಯನವೃತ್ತಾಂತಮ ನಱಿಯೆನೆಂದು ಮೇಘನಾದಂ ನುಡಿಯೆ ಚಂದ್ರಾಪೀಡಂ ಸುಹೃತ್ಸ್ನೇಹಕಾತರಹೃದಯನಾಗಿ ಬೇಗಂನಡೆಗೊಂಡು ಚಿತ್ರರಥಮನೆಯ್ದಿ ॥ ೫೩೭

ಕಂ॥ ತೊಲಗುಗುಮೊ ಕೆಳೆಯನೊರ್ದ್ದೆಸೆ । ಗೆ ಲಜ್ಜೆಯಿಂ ನಮ್ಮ ಬರವುಗೇಳ್ದೊಡೆನುತ್ತಾ । ಕುಲಮತಿ ಯುವರಾಜಂ ರಾ । ಜಲೋಕಮಂ ಬನದಪೊಱಗೆ ಕಾಪಂಪೇಳ್ದಂ ॥ ೫೩೮

ವ॥ ಅನಂತರಂ ತಾನುಮಾವನಮಂ ಪುಗುವಲ್ಲಿ ಜಲಧರಗಳಿತ ಧಾರಾಜಲಕ್ಲಿನ್ನ ತೀರತರುತಳಮುಂ ಮಾಪ್ಲಾವಿತೋಪಾಂತಶಾದ್ವಲಮುಂ ಅನವರತರೋಧೋಜಲಪ್ರವೇಶಕಲುಷಿತಪ್ರಾಂತಮುಂ ಅವಶೀರ್ಯಮಾಣೋದ್ದಂಡ ಕುಮುದದಳಗಹನಮುಂ ಮನೋಜ್ಞಕಮಲಷಂಡಮುಂ ಜರ್ಜರಿತಕಲ್ಹಾರಕುವಲಯಮುಂ ಉದ್ಭ್ರಾಂತಭ್ರಮರಮುಂ ಉಡ್ಡೀನಹಂಸಸಾರ್ಥಮುಂ ಉತ್ಕಂಪಿತ ಕಾದಂಬಕದಂಬಕಾ ಶ್ರಯಮಾಣೋಪಕೂಲನೆಸ್ಥಲಮುಂ ಅವಶಿಷ್ಟದಳಸಿಲೀಯಮಾನೋತ್ಕಂಠಿತಚಕ್ರವಾಕಯುಗಮು

೫೩೬. ಅನ್ನೆಗಂ—ಅದುವರೆಗು; ಪತ್ರಲೇಖೆಯುದೆಸೆ—ಪತ್ರಲೆಯು ಕಡೆಯ ಸಮಾಚಾರವು; ಇರ್ಕೆ—ಇರಲಿ; ಎನ್ನಯ ಬರುತಿರ್ದ್ದುದುಂ—ನನ್ನ ಆಗಮನವೂ;

೫೩೮. ಒರ್ದ್ದೆಸೆಗೆ—ಯಾವದಾದರೊ ಒಂದುಕಡೆಗೆ.

ಮೆನಿಸಿ ತಜ್ಜಲದೋಪಹತಿಯಿಂಬೇಱೊಂದುಸರೋವರಮೆಂಬಸಂದೆಯಮಂ ಸಂದಿಸುವಚ್ಛೋದಸರೋವರಮಂ ಕಂಡು ॥ ೫೩೯

ಪೃಥ್ವೀವತ್ತ॥ *[ವನಾಂತರದಪೆರ್ಮ್ಮರಂ ಪೊದಱುಪಳ್ಳಕೊಳ್ಳಂ ಗಳಿಂ । ಬಿನಿತ್ತೆಡೆಯೊಳಂ ತೊಳಲ್ದವನಿಪಾಲರುಂ ತಾನುಮಾ ॥ ವನಾಂತರದೊಳೆತ್ತಲುಂ ಸುಳಿದು ಸುತ್ತಲುಂಸುತ್ತಿ ಕಂ । ಡನಿಲ್ಲ ಸಬನಿರ್ದ್ದ ಚಿಹ್ನಮುಮನಾನರೇಂದ್ರಾತ್ಮಜಂ] ॥ ೫೪೦

ವ॥ ಅನ್ತು ವೈಶಂಪಾಯನನ ನೆಲ್ಲಿಯುಮಱಸಿ ಕಾಣದಾತನ ವೃತ್ತಾಂತಮಂ ಮಹಾಶ್ವೇತೆಯಾದೊಡಱಿಗುಮೆಂದು ಚಂದ್ರಾಪೀಡದೇವಂ ತದಾಶ್ರಮಮುಮನೆಯ್ದೆವಂದು ಕಿಱಿದಾನುಂದೂರದೊಳ್ ನಿವೇಶಿತತುರಂಗಸೈನ್ಯ ನಪನೀತಸಮಾಯೋಗನಾಗಿ ಪಾವಿನೆರೆಯದೊರೆಯ ದುಕೂಲಮಂ ಪೊದೆದು ಯಥಾಸ್ಥಿತಪರ್ಯಾಣಕಮಪ್ಪಿಂದ್ರಾಯುಧಮ ನೇಱಿಮಹಾಶ್ವೇತಾಶ್ರಮಮಂ ಪೊಕ್ಕುತುರಂಗಮದಿ ನವತರಿಸಿ ಪೆಱಗೆತೆಗೆದು ಬರ್ಪಿಂದ್ರಾಯುಧದ ಬಳಿವಿಡಿದು ಮಹಾಶ್ವೇತಾವಲೋಕನಕುತೂಹಲದಿಂದೆ ಪರಿಜನಂ ಬರುತ್ತಮಿರೆ ಗುಹಾದ್ವಾರಮನೆಯ್ದೆವರ್ಪಲ್ಲಿ ॥ ೫೪೧

ವೃ॥ ದೆಸೆಗೆಟ್ಟುದ್ಬಾಷ್ಪದಿಂದಂ ತರಳಿಕೆಪಿಡಿದೆಂತಾನು ವಾತ್ಮಾಂಗಮಂ ನೆ । ಮ್ಮಿಸೆ ಜೋಲ್ದಂತಾಗುಹಾದ್ವಾರದ ಶಿಲೆಯೊಳ್ ಮನ್ಯುವ್ಯಗ್ರಮಕ್ಷೋಭದಿಂ ಕಂ ॥ ಪಿಸುತಂ ಪ್ರಾವರ್ಷಧಾರಾವಳಿವೊಲೊಗೆವ ಕಣ್ಣೀರ್ಗಳೊಳ್ತೋಂಕುತಂ ದುಃ । ಖಸಹಸ್ರೋದ್ವೇಜನಾ ಧೋಮುಖಿಯೆನಿಪ ಮಹಾಶ್ವೇತೆಯಂ ಕಂಡನಾಗಳ್ ॥ ೫೪೨

ವ॥ ಅನ್ತು ಕಂಡು ಭೋಂಕೆನಲಾಶಂಕಿತ ಹೃದಯನಾಗಿ ॥

---

೫೪೦. *[ವನಾಂತರಪೆರ್ಮ್ಮರಂ ಪೊದಱುಬಳ್ಳಿಕೊಳಂಗಳಿಂ । ಬಿನಿತೆಡೆಯೊಳಂ ತೊಳಲ್ದವನಿಪಾಲರುಂ ತಾನುಮಾ ॥ ವನಾಂತರದೊಳೆತ್ತಲುಂ ಸುಳಿದುಸುತ್ತಲುಂ ಕಂ । ಡನೀಲಸಖನಿರ್ದ್ದ ಚಿಹ್ನಮುನಾನರೇಂದ್ರಾತ್ಮಜಂ॥]

೫೪೧. ಅಪನೀತಸಮಾಯೋಗನಾಗಿ—ವಸ್ತ್ರಾಭರಣಾದಿಗಳನ್ನು ತೆಗೆದವನಾಗಿ ; ಪೆಱಗೆ—ಹಿಂದೆ ; ತೆಗೆದುಬರ್ಪ—ಹಿಡಿದುಕೊಂಡು ಬರುವ.

ಕಂ॥ ಪಿರಿದುಂಹರ್ಷಮನೆನ್ನಯ । ಬರವಿಂದಂ ಮಾಡದೀ ಮಹಾ ಶ್ವೇತೆಯನೊಂ ॥ ದಿರವಿಂತಿದೇನೊ ಕಾದಂ । ಬರಿಗೇನಾನೊಂದನಿಷ್ಟಮಾ ಗಲೆವೇಳ್ಕುಂ ॥ ೫೪೩

ವ॥ ಎಂದು ತನ್ನೊಳ್ಬಗೆಯುತ್ತ ಮೆಯ್ಯನೊಯ್ಯನೆ ಪೋಗಿ ಶಿಲಾತಲದೊಳ್ಕುಳ್ಳಿರ್ದ್ದ ಬಾಷ್ಪವಿಷಣ್ಣವದನನಾಗಿ ತರಳಿಕೆಯು ನಿದೇ ನೆಂದು ಬೆಸಗೊಳ್ವುದು ಮಾಕೆ ಕುಮಾರಂ ಬಿಜಯಂಗೆಯ್ದನೆಂದು ಮಹಾ ಶ್ವೇತೆಗರಿಪುವುದು ಮಾಕಾಂತೆ ಯನುಪಸಂಹೃತಮನ್ಯುವೇಗೆಯುಂ ಗದ್ಗ ದಿಕಾವಗೃಹ್ಯಮಾಣಕಂಠೆಯುಂ ಮಾಗಿಕುಮಾರನನಿಂತೆಂದಳ್ ॥ ೫೪೪

ವೃ॥ ನಿನಗೇವೇಳ್ದಪಳೀಕೆ ಕೇಳಿಸಿದೆ ನಾಂ ಮದ್ದುಃಖಮಂ ಮುನ್ನೆ ನಿ । ನ್ನನದುಃಖಶ್ರವಣಾರ್ಹನಂ ಸಕಲದುಃಖಾವಾಸೆಯೆಂ ಜೀವಿತ ॥ ಕ್ಕೆನಿ ಬದ್ಧಾಸೆಯೆ ನತ್ರಪಾತ್ಮಿಕೆಯೆ ನೀಗಳ್ಮತ್ತೆಯುಂ ಕೇಳಿಸ । ಲ್ಕನುಗೆಯ್ದಪ್ಪೆ ನಿದೊಂದುದುಶ್ಶ್ರವಮುಮಂ ರಾಜಾಧಿರಾಜಾತ್ಮಜಾ ॥ ೫೪೫

ವ॥ ಅದೆಂತೆನೆನೀಮುಜ್ಜಯಿನಿಗೆ ಬಿಜಯಂಗೆಯ್ದಿರೆಂಬುದನಾಂಕೇ ಯೂರಕನ ಪೇಳ್ಕೆಯಿಂ [ದರಿದು] ಭೋಂಕನೆ ವಿದೀರ್ಣಹೃದಯೆಯಾಗಿ ಚಿತ್ರರಥಮನೋರಥಮುಂ ಮದಿರಾಮಹಾದೇವಿಯುಮನೋಭಿಲಷಿತಮುಂ ಮದೀಯಸಮೀಹಿತಮುಂ ಕಾದಂಬರಿಯುಮನಃಪ್ರಿಯಸಮಾಗಮನನಿರ್ವೃ ತಿಯುಂ ಸಮನಿಸಿತಿಲ್ಲೆಂದು ಮನಂನೊಂದು ವೈರಾಗ್ಯದಿಂ ಮದೀಯಪ್ರಿಯ ಸಖಿಯು ಕೂರ್ಮೆಯ ತೊಡಪ್ಪಂ ಪಱಿದು ಮಹಾಘೋರತರತಪಶ್ಚರ ಣಾರ್ಥಂ ಮತ್ತಮಿಲ್ಲಿಗೆ ವಂದಿರ್ದ್ದನನ್ನೆಗಮೊಂದುದಿವಸಂ ॥ ೫೪೬

ವೃ॥ ನಸುದೋಱುತ್ತಿರ್ದ್ದನುಣ್ಮೀಸೆಗಳು ಮತಿಮೃದುಸ್ನಿಗ್ಧಕೇಶಂ ಗಳುಂ ಕ । ಣ್ಣೆಸೆಯ ಲ್ಮಾಲೋಕಮುಂ ಯೌವನಚತುರತರಾಪಾಂಗದಿಂ

---

೫೪೦. ತರಳಿಕೆ—ಉದ್ವಾಷ್ಪದಿಂ; ದೆಸೆಗೆಟ್ಟು—ಭ್ರಾಂತಳಾಗಿ; ಆತ್ಮಾಂಗ ಮನಿಪ್ಪಿ—ತನ್ನ ಮೆಯ್ಯಲ್ಲಿ ಬಗೆಸಿಕೊಂಡಿರಲು; ಮನ್ಯೂದ್ಗಮ—ಕೋಪೋದ್ರೇಕ.

೫೪೫. ಮುನ್+ಎ=ಮುನ್ನೆ—ಮೊದಲೆ; ಇದೊಂದು ದುಶ್ಶ್ರವಮುಮಂ —ಇದೊಂದು ದುಃಖಸಮಾಚಾರವನ್ನು.

ದೊಂದುಸೀಪ್ಪು್ರ ॥ ಲ್ಗೆಸೆವನ್ನಂಮಾಡುತಂಗಪ್ರಭೆಯೊಳಖಿಲ ಕಾಂತಾ
ರವಮಂ ಕೂಡೆ ತೇಂಕಾ । ಡಿಸುತಂ ವಿಪ್ರೋತ್ತಮಂ ನಿನ್ನಯುಹರಯುಗವಂ
ಬಂದನೊರ್ವ್ವಾಂಕುಮಾರಂ ॥ ೫೪೭

ವ॥ ಅನ್ನೆಗಂ ದಂತಃಕರಣದಿ ನುನ್ಮುಕ್ತನಾದಂತೆಯುಂ ಸಕಲೇಂ
ದ್ರಿಯಂಗಳಂ ವಿಕಲನಾದಂತೆಯುಂ ಉತ್ತರಳಮುಖನುಂ ಉತ್ಫುಲ್ಲಿತಾಕ್ಷ
ನುಮೆನಿಸಿ ಬನದೊಳಲ್ಲಿಗಲ್ಲಿಗೆ ಬದ್ಧಲಕ್ಷ್ಯದೃಷ್ಟಿಯಿನೇನಾನುಂ ಕೆಟ್ಟುದನ
ರಸುವಂತೆನ್ನನೋಡುತ್ತ ಮೆಯ್ದೆವಂದು ಕಂಡಱಿವನಂತೆಯು ಮೇನಾನು
ಮಂ ಪ್ರಾರ್ಥಿಪನಂತೆಯುಂ ಬೆಸಗೊಳ್ಳದೆಯುಂ ನಿಜಾವಸ್ಥೆಯಂ ನೀವೆದಿಸು
ವಂತೆಯುಂ ಲಜ್ಜಿಸುವಂತೆಯು ಮುಮ್ಮಳಿಸುವಂತೆಯು ಮಾಗಿ ॥ ೫೪೮

ವೃ॥ ಸುರಿತರೆಬಾಷ್ಪಪೂರಮೆಮೆಯಿಕ್ಕದೆ ಕೆನ್ನೆಯನೆಯ್ದೆ ನೀ
ಳ್ದುಬಿ । ತ್ತರಿಪ *[ಬಳಲ್ಪೆಳರ್ವೆಸು] ಸುತ್ತುವಮುತ್ತುವ ಪಾಂಗಮಾಲೆ
ಯಿಂ ॥ ಬರೆತೆಗೆದಪ್ಪನಪ್ಪಿದ ಪನೆನ್ನೊಳಪ್ರೊಕ್ಕಪನೆಯ್ದೆ ಪೀರ್ದ್ದಪಂ । ಪಿ
ರಿದು ವೆನಲ್ಕೆತದ್ವಿಜಕುಮಾರಕನೆನ್ನನೊಱಲ್ದುನೋಡಿದಂ ॥ ೫೪೯

ವ॥ ಅನ್ನೆನೀಡುಂನೋಡುತ್ತ ಮೆನ್ನನಿಂತೆಂದಂ ॥

ಕಂ॥ ಭುವನದೊಳಿಲ್ಲಂ ತಂತ । ವ್ಮವಯೋರೂಪಕ್ಕೆತಕ್ಕುದಂ
ನೆಗಳ್ದೊಡೆ ಮೆ ॥ ಚ್ಚುವರೇವೆ ಗಮುಸದೃಶಮೆ ನಿ । ಸುವನುಷ್ಠಾನದೊಳ
ದೇಕೆನಿನ್ನಯುಯುತ್ನಂ ॥ ೫೫೦

ಇರಿಸಲ್ಕೆತಕ್ಕುದೊಲವಿಂ । ಸುರನೊಳಿಸಿಪ್ಪೊಂದುಮಾಲತೀಮಾಲಿ
ಕೆಯೊಳ್ ॥ ದೊರೆಯೆನಿಪ ನಿನ್ನತನುವಂ । ಕೊರಗಿಪುದೆ ಲತಾಂಗಿ ಘೋರ
ತರತಪದಿಂದಂ ॥ ೫೫೧

೫೪೭. ಮೂಲೋಕವಂ—ಮೂರುಲೋಕವಪುರುಷರನ್ನು; ಬಂದು ಸೀಪ್ಪು್ರ
ಲ್ಗೆಸೆವನ್ನಂಮಾಡುತ —ಬಂದು ಸಣ್ಣಹುಲ್ಲಿಗೆ ಸಮಾನವಾಗಿ ಶೋಭಿಸುವಂತೆ ಮಾಡುತ.

೫೪೯. ಕೆನ್ನೆಯಂ—ಕಪೋಲವನ್ನು; ಎಯ್ದೆ—ಸೇರುವಹಾಗೆ; ನೀಳ್ದು—
ದೀರ್ಘವಾಗಿ; ಬಿತ್ತರಿಪ—ಹರಡಿಕೊಳ್ಳುವ; ಬಳಲ್ಪೆಳರ್ವೆಸು—ಬಳಲಿಕೆ ಭಯಗಳಿಂದ
ಕೂಡಿ; ಸುತ್ತುವ—ತಿರಗುವ; ಅಪಾಂಗಮಾಲೆಯಿಂ—ಕಡೆಗಣ್ಣನೋಟಗಳಿಂದ.

*[ಬಳಲ್ಪೆಳಲ್ಪೆರಸು]

ವೃ॥ *[ಸುಮನೋಬಾಣ ಜಯಪ್ರದಾಯಕತಮಂ] ನಿನ್ನೀತ್ರಿ ಲೋಕಾಭಿರಾ । ಮ ಮೆನಿಪ್ಪಾಕೃತಿ ದೇವದುರ್ಲ್ಲಭತರಂ ನಿನ್ನೀಜಗದ್ವಾ ವನೀ ॥ ಯಮೆನಿಪ್ಪದ್ವಯ ವಪ್ರತರ್ಕ್ಯಮಹಿಮಂ ನಿನ್ನೀಮಹೋದಾ ರ ಮ । ಪ್ರಮಿತೈಶ್ವರ್ಯ ಮೆನಲ್ಕೆಮತ್ತೆ ತಪದಿಂ ತಪ್ಪಿಂಗಿ ನೀಂವೇಳ್ಪುದೇಂ ॥

ಕಂ॥ ಸರಸಮೃಣಾಳಿಕೆಯಂ ಮೃದು । ತರತುಹಿನಂ ಕೊರಗಿಪಂತೆ ಕಾಂತಿರಸಕ್ಕಾ ॥ ಗರಮೆನಿಪ ತಪಮೆ ನಿನ್ನಂ । ಕೊರಗಿಸುತಿರೆ ತರುಣಿ ಪಿರಿ ದುವಾಂ ಕೊರಗಿವಪೆಂ ॥ ೫೫೫

ವೃ॥ ಸುಂದರಿ ಜೀವಲೋಕವ ಸುಖಕ್ಕೆ ಪರಾಙ್ಮುಖಿಯಕ್ಕಳಾಗಿ ನಿ । ನ್ನೊಂದಿಗ ರೀತಪಕ್ಕೆಳಸಿದಂದು ಮನೋಜನ ಬಿಲ್ಲಬಲ್ಮೆ ಪೂ ॥ ರ್ಣೇಂದುವಿನುಜ್ಜ್ವಳಿಕ್ಕೆ ಮಧುಮಾಸದ ಗೋಸನೆ ತುಂಬಿಯಿಂಚರಂ । ಬಂ ದೆಳೆಮಾವಿನೇಳ್ಗೆ ಬಗೆದಂದು ನಿರರ್ಥಕಮಾಗದಿಕ್ಕುಮೋ ॥ ೫೫೬

ವ॥ ಎಂದಿವ್ರಮೊದಲಾಗಿ ಮತ್ತಮನೇಕ ಚಾಟುಚಪಲವಚನಂಗ ಳಂ ನುಡಿಯುತ್ತುಮಿರೆಕೇಳ್ದು ಪುಂಡರೀಕದೇವನ ವೃತ್ತಾಂತದಿ ನಪೇತಕಾ ತುಕೆಯುಂ ಮುಪಗತಸುಖೆಯುಂ ಮುವಧೀರಿತೋಪಭೋಗೆಯುಂ †[ಮಸಂ ಭೂತಪ್ರರುಷಾನುರಾಗೆಯುಂ ಮಾಗಿರ್ಪ್ಪನನು ಕಾರಣದಿಂ] ॥ ೫೫೭

೫೫೪. ನಿನ್ನ, ಈ ಆಕೃತಿ, ಅಪ್ರತರ್ಕ್ಯಮಹಿಮಂ, ಅಪ್ರಮಿತೈಶ್ವರ್ಯಂ, ಇವು ದೇವದುರ್ಲಭತರವೆನಿಸಲ್ಕೆ—ದೇವತೆಗಳಿಗೂ ದುರ್ಲಭವಾಗಿರುವಲ್ಲಿ; ನೀಂ ತಪದಿಂವೇ ಳ್ಪುದೇಂ—ತಪಸ್ಸಿನಿಂದ ನೀನು ಪಡೆಯತಕ್ಕದ್ದೇನಿದೆ. ವೇಳ್ಪುದೇಂ ಎಂಬಲ್ಲಿ ಬಕಾರಕ್ಕೆ ವಕಾರಾದೇಶವು. ಶಮ. ಸೂ. ೬೭.

• ೫೫೬. ಉಜ್ಜ್ವಳಿಕ್ಕೆ—ಹೊಳಪು; ಗೋಸನೆ—ಘೋಷಣೆ ಅಥವಾ ಆಡಂಬರ; ಬಂದೆಳೆಮಾವು—ಫಲಿತವಾದಮಾವು: ಉಜ್ವಲ ಎಂಬುವದು ಉಜ್ಜ್ವಳ ಎಂದು ತದ್ಭವ ವಾಗಿರಲು ಅದರಮೇಲೆ ಭಾವಾರ್ಥದಲ್ಲಿ ಇಕ್ಕೆ ಎಂಬ ಪ್ರತ್ಯಯಬಂದಿರುವದು. ಶಮ. ಸೂ. ೨೧೧.

*[ಸುಮನೋಬಾಣಜಯಪ್ರದಾಯಕತಮಂ]
†[ಮಸ್ಸಸಂಭೂತಪ್ರಸಾಗೆಯಾಗೆ ಮಾಸುಪ್ಪುದುಕಾರಣಂ]

ಕಂ॥ ನೀನಾಗ್ಗೆರ್ ಬಂದೆ ಯೆತ್ತಣಿ । ನೇನಂ ಬೆಸಗೊಳ್ವೆ ಯೆನ್ನನೆಂದಾತನ ನಂ ॥ ತೇನುಮನಾಂ ಬೆಸಗೊಳ್ಳದೆ । ಮೌನದಿ ನೊರ್ದ್ದೆಸೆಗೆ ತೊಲಗಿದೆಂ ನೃಪತಿಲಕಾ ॥ ೫೫೮

ವೃ॥ ತರಳಿಕೆ ದೇವತಾರ್ಚನಕೆ ಪೂದಿಱಿಯುತ್ತಿರ ಲಾಗಳೀಕೆಯಂ । ಕರೆದೆನಗೀದ್ವಿಜಂ ನುಡಿವನೊಂದುವ ಗೆಯ್ತುವ *[ಕಾನನಕ್ಕೆ] ವಂ ॥ ದಿರವಿದು ಬೇೞದೊಂದೆನಿಸದಿರ್ದ್ದಪ್ಪುದೀ ಗುಹೆಯತ್ತ ಸಾರದಂ । ತಿರಲಿವನಂ ನಿವಾರಿಸುಳಿದಂದೆನಸುಂ ಬಳಸಂದು ಪೊರ್ದ್ದಗುಂ ॥ ೫೫೯

ಎಂದು ಪೇಳ್ವುದುಮಿವಳೆನ್ನತ್ತಲಾ ದ್ವಿಜಕುಮಾರನಂ ಸಾರದನ್ತುನಿವಾರಿಸುತ್ತಮಿರೆಯಿರೆ ॥

ವೃ॥ ಆದಯನೆನಿಪ್ಪ ಮನ್ಮಥನ ದುರ್ಜಯವೃತ್ತಿಯದೊಂದು ಪಾ । ಪದ ಫಲದಿಂ ವಿಧಾತೃವಶದಿಂ ಭವಿತವ್ಯತೆಯಿಂದ ಮಿಂತುಮಾ ॥ ಣದೆ ದಿವಸಕ್ಕ ಮಿಲ್ಲಿಗಸದಾಗ್ರಹದಿಂದಮೆ ಬಂದು ಪೊರ್ದ್ದಲ । ಣ್ಮದೆ ಮದನಾತುರಂ ಸುಳಿವನೆನ್ನಯ ಕಣ್ಬೊಲದೊಳ್ನಿರಂತರಂ ॥ ೫೬೦

ವ॥ ಅನ್ತು ಸುಳಿಯುತ್ತಮಿರ ಲೊರ್ಮೆಯಾಮಿನೀ ಯಾಮತ್ರಯ ಸಮಯದೊಳುತ್ಸಾರಿತತಮಃಪಟಳಮು ಮು†[ದ್ದೀಪಿತ]ಮದನದಹನಮುಮುತ್ತೇಜಿತ ಮನೋಜಮಾರ್ಗಣಮುಂ ಮುದ್ದಳಿತವಿರಹಿಹೃದಯಮುಂ

---

೫೫೮. ನೀನಾಗ್ಗೆರ್—ನೀನಾರಮಗನು; ನೀನಾಗ್ಗೆರ್ ಎಂಬಲ್ಲಿ ಆನರಿವೆಂ ಪೃಥೆಯರಿವಳ್ . . . . . ನೀನಾಗ್ಗೆಂದಾರುಮಱಿಯರಂಗಾಧಿಪತೀ ಎಂದು ಪ್ರಯೋಗವುಂಟು ಶಮ. ಸೂ. ೨೨೪.

೫೫೯. ಬಂದುವಗೆಯ್ತುವ—ನನ್ನನ್ನು ಸೇರುವಕಾರ್ಯವನ್ನು; ನುಡಿವಂ—ಹೇಳುತ್ತಾನೆ.

೫೬೦. ದುರ್ಜಯವೃತ್ತಿಯ—ಜಯಿಸಲಸಾಧ್ಯವಾದವ್ಯಾಪಾರವುಳ್ಳ ಮನ್ಮಥನ ಅದೊಂದುಪಾಪದಫಲದಿಂ—ದುಷ್ಕಕಾರ್ಯದಿಂದ; ಅಸದಾಗ್ರಹದಿಂ—ದುಷ್ಟವಾದ ಅಪೇಕ್ಷೆಯಿಂದ: ಕಣ್ಬೊಲದೊಳ್—ದೃಷ್ಟಿಮಾರ್ಗದಲ್ಲಿ.

*[ಕಾಯನಕ್ಕೆ] †[ಕ್ರೀಡಿತ]

ಮುತ್ಖಂಡಿತಮಾನಿನೀಮಾನಮು ಮುದ್ರಾಬ್ಧೀಕೃತವಿರಹಿಜನಮು ಮೆನಿಸಿ ಚಂದ್ರಿಕಾಪಯಃಪೂರಮು ನಿಂದುಮಯೂಖಂಗಳ್ಸರಿಯೆ ತರಳಿಕೆ ಮಱೆದುನಿದ್ರೆಗೆಯ್ದು ಳೆನಗೆ ನಿದ್ರೆಬಾರದೆ ಸಂತಪ್ತಶರೀರೆಯಾಗಿ ಗುಹೆಯಂ ಪೊಱಮಟ್ಟೆನನ್ನೆಗಂ ॥ ೫೬೧

ವೃ॥ ಅಲರ್ದಚೆಳ್ಥೀದ ನವೋತ್ಪಲಪ್ರಸರ ದಿವ್ಯಾಮೋದದೊಳ್ಸಂದು
ನಿ । ರ್ಮ್ಮಲಚಂದ್ರದ್ಯುತಿವರ್ಷಹರ್ಷಿತ ಚಕೋರಾನಂದವಾರ್ಬ್ಬಿಂದು
ಸಂ । ಕುಲದೊಳ್ಮಿಂದು ಚಲಲ್ಲತಾವಳಿಗೆ ಲಾಸ್ಯಾರಂಭಮಂ ತಂದು ತ । ಣ್ಣೆ
ಲರೂದುತ್ತಿರ ಲಾನದರ್ಕ್ಕೆಳಸಿ ಪಟ್ಟಿರ್ದ್ದೆಂ ಶಿಲಾಪಟ್ಟದೊಳ್ ॥ ೫೬೨

ವ ॥ ಅಂತಿರ್ದ್ದಸುಧಾರ್ದ್ರಂಗಳಪ್ಪ ಕರಕೂರ್ಚ್ಚಂಗಳಿಂ ದಿಗ್ಭಿತ್ತಿಗಳಂ ಧವಳಿಸುತಿರ್ದ್ದ [ಸುಧಾಮಯೂಖನಂ ನೀಡುಂ] ನೋಡಿ ॥ ೫೬೩

ವೃ॥ ಅಮೃತಾಸಾರದಿ ನಾವಗಂ ತ್ರಿಭುವನಕ್ಕಾನಂದಮಂ ಮಾಳ್ಪ
ತ । ನ್ನಮರೀಚಿಪ್ರಕರಂಗಳಿಂದ ಮೆನಗೆಂತಾನಂದಮಂ ಮಾಳ್ಪನಂ ॥ ತೆ
ಮನಂಗೊಂಡು ಮದೀಯವಲ್ಲಭನೆನಿಪ್ಪಾ ಪುಂಡರೀಕಂಗ ಮಾ । ತ್ಮಮರೀ
ಚಿವ್ರಜದಿಂದೆ ಮಾಡುಗುಮೆ ಪೇಳಾನಂದಮಂ ಚಂದ್ರಮಂ ॥ ೫೬೪

ಮಿಸುಗುವ ಚಂದ್ರಮಂಡಲದಿ ನಂದಿಳತಂದನ ದಿವ್ಯವಾಣಿಯುಂ ।
ಪುಸಿಮೆನಿಸಿತ್ತು ಮಾಯ್ದನಗೆ ಪಾಪಿಗೆ ಮೇಣ್ದಯೆಯಿಂದೆ ಜೀವಿತ ॥ ವ್ಯಸ
ನಿನಿಯಂತೆ ಜೀವಿಸುತಮಿರ್ಕ್ಕೆವಳೆಂದು ಮಹಾತ್ಮನೆನ್ನನಾ । ಱಿಸಿದನದೆಂತು
ಮೆನ್ನಯ ಸಮಾಹಿತಮಿಂತು ವಿಳಂಬಿಸಿರ್ಕ್ಕುಮೋ ॥ ೫೬೫

ತನುವನದೊರ್ಮ್ಮೆಯುಂ ಮುಗುಳ್ದು ತೋಱಿಸಲಾಱನೆ ಪುಂಡರೀ
ಕದೇ । ವನ ನಿರದೆತ್ತಿಕೊಂಡು ಗಗನಕ್ಕೆ *[ಪರಾಸುವನಾವನಕ್ಕೆ] ಭೋಂ ॥

---

೫೬೨. ಸಂದು—ಸೇರಿ; ತಂದು—ಉಂಟುಮಾಡಿ; ಪಟ್ಟಿರ್ದ್ದೆಂ—ಮಲಗಿದ್ದೆನು.

೫೬೫. ಅದೆಂತುಂ—ಹ್ಯಾಗೂ; ಆಱಿಸಿದಂ—ಸಮಾಧಾನಪಡಿಸಿದನು.

೫೬೬. ಪರಾಸುವಂ—ಪ್ರೇತರೂಪನಾದ; ಪುಂಡರೀಕದೇವನಂ, ಗಗನಕ್ಕೆ,

*[ಸುರಾಸುರನಾವನಕ್ಕೆ]

ಕನೆ ಪಿಡಿದೊಯ್ದ ನೇವನೊ ಮನಃಪ್ರಿಯನಕ್ಕಟ ಜೀವಿಸುತ್ತಮೆಂ । ತೆನಗೆ
*[ಕೃಪಾಬ್ಧಿ ತಾರನೆ] ಕಪಿಂಜಲಕಂ ಪ್ರಿಯನೊಂದುವಾರ್ತೆಯುಂ ॥ ೫೬೬

ವ॥ ಎಂದಿವುಮೊದಲಾಗಿ ಪಲವುಮಮೂಲಜಾಲಂಗಳಂ ದುರ್ಜೀವಿಕಾಗೃಹೀತೆಯೆ ನೆನೆನ್ನೊಳ್ ಚಿಂತಿಸುತ್ತಮಿರ್ಪನ್ನೆಗ ಮಾದ್ವಿಜಕುಮಾರನ ನೆಡೆವಿಡದೆ ನಟ್ಟುಡಿದ ನನೆಯಂಬಿನ ಮೊನೆಗಳಂತೆ ನೆಗೆದಕಂಟಕನಿಕಾಯಮುಮಂ ಮದನದಹನನಿಂ ಭಸ್ಮಮಾದಂತೆ ಬೆಳರ್ಪನಪ್ಪುಕೆಯ್ದು ಮೆಯ್ಯುಮಪ್ರತಿಹತಶಾಸನನಪ್ಪ ಪುಷ್ಪಶರಾಸನನಂ ವಶ್ಯವ್ಯತಿಕರಣದೊಳ್ ಮಧ್ಯಶಿಲಾತಲಕಟ್ಟಲೆಂದು ಕಟ್ಟಿದ ಕಟ್ಟುಗಳಂತೆ ತೊಟ್ಟಮೃಣಾಳವಲಯಮುಮಂ ಸುತ್ತಿಯಿನ್ನೆತ್ತಮೋಪೆಯೆಂದು ತರ್ಜಿಸಿದ ನಿಶಾಕರನಕರಶಾಖೆಯಂತೆ ಕಿವಿಗವತಂಸಮಾದ ಕೇದಗೆಯೊಳ್ಗರಿಯುಂ ತನಗೆ ತಾನೆನೀರ್ಗೊಟ್ಟಪನೆಂಬಂತೆ ಸುರಿವ ನಿರಂತರಾಸ್ರುಪೂರಮುಂ ತನ್ನಿಚ್ಛೆಯೊಳಿನ್ನ ಕೈವಿಡಿಯಲೆಂದು ಮಿಂದನೆಂಬಂತೆ ಪೊಣ್ಮುವ ಘರ್ಮೋದಕಂಗಳುಂ ಇದಿರಮನಮೇನೆಂದಱಿಯದೆಳಸದಿರೆಂದಡಿಗಡಿಗೆ ನಿವಾರಿಸುವಂತೆ ನಿಲಿಸುವ ಊರುಸ್ತಂಭ

ಪಿಡಿದೊಯ್ದಂ—ತೆಗೆದುಕೊಂಡುಹೋದವನು; ಆವಂ—ಯಾರಾದರೂಆಗಲಿ ಅವನು; ತೋಱಿಸಲಾಱನೆ—ತೋರಿಸನೆ; ಕಪಿಂಜಲಕಂ, ಪ್ರಿಯನೊಂದು ವಾರ್ತೆಯುಂ, ತಾರನೆ—ತರಲಿಲ್ಲವಲ್ಲಾ; ಎನಗೆ—ನನ್ನವಿಷಯದಲ್ಲಿ; ಎಂತುಕೃಪಾಬ್ಧಿ—ಹ್ಯಾಗೆದಯಾಶಾಲಿ?

೫೬೭. ದುರ್ಜೀವಿಕಾಗೃಹೀತೆಯೆಂ--ದುಷ್ಟಜೀವನದಿಂದ ಗ್ರಹಿಸಲ್ಪಟ್ಟ ಅಂದರೆ ಕೆಟ್ಟಪ್ರಾಣವನ್ನು ಹಿಡಿದುಕೊಂಡಿರುವ ನಾನು; ಪಲವುಮಮೂಲಜಾಲಂಗಳಂ—ಅನೇಕ ಮಿಥ್ಯಾಭಿಲಾಷೆಗಳನ್ನು; ಚಿಂತಿಸುತ್ತಿರ್ಪನ್ನೆಗಂ—ಯೋಚಿಸುತ್ತಿರುವಷ್ಟರಲ್ಲಿ; ವಶ್ಯವ್ಯತಿಕರಣದೊಳ್—ವಶ್ಯಮಂತ್ರಪ್ರಯೋಗದಲ್ಲಿ; ಪುಷ್ಪಶರಾಸನನಂ, ಮಧ್ಯಶಿಲಾತಲಕೆ—ನಾನುಮಲಗಿದ್ದ ಶಿಲಾತಲಮಧ್ಯಕ್ಕೆ; ಅಟ್ಟಲೆಂದು, ಕಟ್ಟಿದಕಟ್ಟುಗಳಂತೆ—ದಿಗ್ಬಂಧನದ ಕಟ್ಟುಗಳಂತೆ; ತನಗೆ–ತನಗಾಗಿ; ತಾನೆ–ವೈಶಂಪಾಯನನೆ; ನೀರ್ಗೊಟ್ಟಪನೆಂಬಂತೆ—ಜಲಾಂಜಲಿಪ್ರದಾನವನ್ನು ಮಾಡುತ್ತಾನೆ ಎಂಬುವಹಾಗೆ; ಕಯ್ವಿಡಿಯಲೆಂದು—ಪಾಣಿಗ್ರಹಣಾರ್ಥವಾಗಿ; ಮಿಂದನೆಂಬಂತೆ—ಮಂಗಳಸ್ನಾನಮಾಡಿದನು ಎಂಬಹಾಗೆ; ಇದಿರಮನಂ—ಪರಹೃದಯವು; ಏನೆಂದು—ಎಂಥಾದ್ದೆಂದು; ಅಱಿಯದೆ—ತಿಳಿಯದೆ.

*[ಕೃಪಾರ್ಥಿಕಾರನೆ]

ಮು ಮುತ್ಕಲಿಕಾಸಹಸ್ರವಿಷಮರಾಗಸಾಗರಮಂ ನೀಸಿದಪ ನೆಂಬಂತೆನ್ನನ ಪ್ಪುವಳಿಯವಾಸೆಯಿಂ ದೂರದೊಳ್ ನಿಮಿರ್ದ ನಿಡುತೋಳ್ಗಳಿಂ ತನ್ನೊಳ್ ತೋಱಿದೆ ಸತ್ವಗುಣಕ್ಕೆ ಸಾರ್ಕೆಗುಡದೆ ಕೃಪಣತೆಗೆಡೆಗೊಟ್ಟು ವಿರಕ್ತತೆಗೆ ಬಿಗುರ್ತು ತರಳತೆಗೆ ಕೂರ್ತು ಲಜ್ಜೆಗೆ ಗೆಂಟಾಗಿ *[ಧಾರ್ಷ್ಟ್ಯಕ್ಕಭಿಮುಖನಾಗಿ] ಪರಲೋಕಭಯಕ್ಕೆ ಬೆಸೆದು †[ಬೆಸನಕ್ಕೊಸೆದು] ಯುಕ್ತಾಯುಕ್ತವಿವೇಕಕ್ಕೆ ಪಿಂತೆಗೆದು ಉನ್ಮತ್ತನಂತಚ್ಚಬೆಳ್ದಿಂಗಳೊಳೊಯ್ಯನೊಯ್ಯನೆ ಬರುತಿರ್ದನನಾಂ ದೂರದೊಳ್ಕಂಡು ಭಯಂಗೊಂಡು ॥ ೫೬೭

ವೃ॥ ಎಲೆ ಕೇಡಾಯ್ತೆನ ‡[ಗೋಪ್ಪೊ] ಮತ್ತಮಿವನೆನ್ನಂ ಕಯ್ಯೊ
ಳಂ ಬಂದುಮುಟ್ಟಿ । ಲೊಡಂ ಪತ್ತುವಿಡಲ್ಕೆವೇೞ್ಕು ವಸುವಂ ಮೆಯ್ಯೊಡ್ಡಿ
ದೆಂ ದುಃಖಸಂ ॥ ಕುಲಕೋರಂತಿರೆ ಪುಂಡರೀಕನನೆ ಮತ್ತಂ ಕಾಣ್ಬೆನಾನೆಂದೆ
ನಿ । ಷ್ಫಲಮಾಯ್ತಕ್ಕಟ ಮಂದಭಾಗ್ಯೆಗೆನಗಿಂತೀ ಪ್ರಾಣಸಂಧಾರಣಂ ॥

ವ॥ ಎಂದೆನ್ನೊಳೆ ಬಗೆಯುತ್ತಿರ್ದ ನನ್ನೆಗವಾತನೆಯ್ದೆವಂದೆನ್ನನಿಂತೆಂದಂ ॥ ೫೬೯

ಪೃಥ್ವೀವೃತ್ತ॥ ಎಲೇಕುಮುದನೇತ್ರೆ ಮನ್ಮಥಸಹಾಯನೀಚಂದ್ರಮಂ।
ಕೊಲಲ್ಬಗೆದನೆನ್ನ ನಾರ್ತನನನಾಥನಂ ದುಃಖಿ §[ಯಂ ॥ ಪಲುಂಬಿ ಮರೆ
ಪೊಕ್ಕೆನಾಂ ನಿನಗಧೀನ ಮೀಜೀವಿತಂ । ವಿಲಂಬಿಸದೆ ರಕ್ಷಿಸೆನ್ನನರಿಯೆಂ
ಪ್ರತೀಕಾರಮಂ ॥ ೫೭೦

ನೀಸಿದಪನೆಂಬಂತೆ—ಈಜುತ್ತಾನೆ ಎಂಬಹಾಗೆ; ಅಳಿಯವಾಸೆಯಿಂ—ನಡೆಯುವದರ ಅಪೇಕ್ಷೆಯಿಂದ; ನಿಮಿರ್ದ—ಚಾಚಿಕೊಂಡಿರುವ; ಸಾರ್ಕೆಗುಡದೆ—ಸೇರುವದಕ್ಕೆ ಅವಕಾಶವನ್ನು ಕೊಡದೆ; ಬಿಗುರ್ತು—ಭಯಪಟ್ಟು; ಗೆಂಟಾಗಿ—ದೂರವಾಗಿ.

೫೬೮. ಪುಂಡರೀಕನನೆ, ಮತ್ತಂ, ಕಾಣ್ಬೆನೆಂದೆ—ಕಾಣುವೆನೆಂತಲೆ; ದುಃಖಸಂಕುಲಕೆ, ಮೆಯ್ಯೊಡ್ಡಿದೆಂ—ಗುರಿಯಾದೆನು.

೫೭೦ರಿಂದ ೫೭೯ರ ವರೆಗೆ ಈ § ಗುರುತನ್ನು ಹಾಕಿರುವ ಪದ್ಯಗಳು ಗ್ರಂಥದಲ್ಲಿಲ್ಲದೆ ಕಥಾಸಂದರ್ಭ ಕೆಟ್ಟಿದ್ದ ಕಾರಣ ಶ್ರೀಮನ್ಮಹಾರಾಜರವರ ಅರಮನೆವಿದ್ವಾಂಸರಾದ, ಸೋಸಲೆ ಅಯ್ಯಾಶಾಸ್ತ್ರಿಗಳಿಂದ ರಚಿತಗಳಾಗಿ ಇಲ್ಲಿ ಸೇರಿಸಲ್ಪಟ್ಟಿರುವವು.

*[ದಾಂಡಿಕಷ್ಟ್ಯಾಭಿಮುಖನಾಗಿ] †[ಪೆಸನಕ್ಕೆಸೆದು] ‡[ಲಾನು]

§ ಕಂ॥ ಶರಣಾಗತಜನಭರಣಂ । ಪರತರಧರ್ಮಂ ತಪಸ್ವಿಗಳ್ಗದರಿಂದಂ ॥ ಪೊರೆ ಯೆನ್ನನಿಲ್ಲದೊಡೆ ಹಾ । ಸ್ಮರಶೀತಮಯೂಖರಿಂದೆ ಹತನಾದಪ್ಪೆಂ ॥ ೫೩೧

§ ವ॥ ಅದಂಕೇಳಲೊಡನೆನ್ನ ನೆತ್ತಿಯೊಳುರಿ ಮಸಗಿದಂತಾಗೆ ಕಿನಿಸುಕಯ್ಗಣ್ಮೆ ಕಣ್ಗಳಿಂದುಗುತರ್ಪ ಕಂಬನಿಗಿಡಿಗಳಿಂ ದುರುಪ್ರವಂತವನಂ ನೀಡುಂನೋಡುತ್ತಾವಿಷ್ಟೆಯಂತೆನ್ನ ನಾನಱಿಯದೆ ॥ ೫೩೨

§ ಕಂ॥ ನುಡಿವನ್ನ ನೆನ್ನನೀಪರಿ । ಸಿಡಿಲೇತಕೆ ಕೆಡೆದುದಿಲ್ಲ ನಿನ್ನಯಸಿರದೊಳ್ ॥ ಉಡುಗಿದುದಿಲ್ಲ ಮುಸಿನರ್ಮ್ಮ । ರ್ಮ್ಮಡಿಯೆನ ಲೀಜಿಹ್ವೆ ಬಿಱಿದುದಿಲ್ಲ ದುರಾತ್ಮಾ ॥ ೫೩೩

§ ವೃ॥ ಖಲನಿನ್ನೀತನು ಪಂಚಭೂತಮಯಮು ಲ್ತಂತಾಗೆ ನಿನ್ನಂರಸಾ। ತಲಮಂ ಪೊರ್ದ್ದಿಸದಾಯ್ತುದೇಕಿಳೆ ಮರುತ್ತೇಕೊಯ್ಯದಾಯ್ತೊರ್ಮ್ಮದಲ್ ॥ ಜಲವೇಕಾಳಿಸದಾದುದೋ ದಹಿಸಲಿಲ್ಲೇತರ್ಕ್ಕೆ ತಾನಗ್ನಿಪೇ। ಳೆಲೆ ಪಾಪಾತ್ಮನೆ ತನ್ನವೋಲೆಸಗಲಿಲ್ಲೇಕಾಗಸಂ ಶೂನ್ಯನಂ ॥ ೫೩೪

§ ಕಂ॥ ಈತೆಱದಿಂದಂ ಗಳಹುವ। ಪಾತಕಿ ನೀಂನೀತಿಮಾರ್ಗವಱಿಯದ ತಿರ್ಯ॥ಗ್ಜಾತಿಯೊಳೆ ಜನ್ಮವೆತ್ತದ। ದೇತರ್ಕ್ಕೆ ಮನುಷ್ಯಜಾತಿಯೊಳ್ ಜನಿಯಿಸಿದೈ ॥ ೫೩೫

§ ವ॥ ಮತ್ತಮೆಲೆಮತ್ತ ನೀನಿಂತು ನಗೆಗೀಡಾದ ನುಡಿಗಳಂ ನುಡಿಯುತ್ತ ಮೆನಗೆ ಮುಳಿಸನಾದೊಡಂ ಪುಟ್ಟಿಸಲಿಲ್ಲ ಮದುಕಾರಣದಿಂ ನಿನ್ನ ನುಡಿಗನುರೂಪಮಪ್ಪ ಜಾತಿಯೊಳ್ಪುಟ್ಟಿದೊಡೆ ಮ್ಮನ್ನರನೆಂದುಂ ಕಾಮಿಸೆಯೆಂದು ನುಡಿದೊಡನಾಂ ಚಂದ್ರಾಭಿಮುಖಿಯಾಗಿ ಕಯ್ಗಳಂ ಮುಗಿದು ಮಹಾಭಾಗ ಸಕಲಭುವನಚೂಡಾಮಣಿಯಪ್ಪ ರೋಹಿಣೀರಮಣ ಪುಂಡರೀಕನ ನಾಂನೋಡಿದಂದಿನಿಂ ಮತ್ತೊರ್ವ್ವಪುರುಷನಂ ಮನದೊಳಾದೊಡಂ

---

೫೩೨. ಕಿನಿಸುಕಯ್ಗಣ್ಮೆ—ಕೋಪಹೆಚ್ಚಲು.

೫೩೩. ಎನ್ನಂ—ನನ್ನನ್ನು ಕುರಿತು; ಈಪರಿ—ಈರೀತಿಯಲ್ಲಿ; ನುಡಿವನ್ನಂ—ನುಡಿಯುತ್ತಿರುವಕಾಲದಲ್ಲಿ.

೫೩೪. ಅಂತಾಗೆ—ಹಾಗೆ ಪಂಚಭೂತಮಯವಾಗಿದ್ದಪಕ್ಷದಲ್ಲಿ.

ಭಾವಿಸದಿರ್ದುದು ನನ್ನಿಯುಪ್ಪೊಡೀಯುಳೀಕಕಾಮಿ ಯಾನುಸಿರ್ದಂತೆ ಗಿಳಿಯಾಗಿ ಪುಟ್ಟುಗೆಂದು ಶಪಿಸಲೊಡನೆ ॥ ೫೭೬

§ ವೃ॥ ಸಹಿಸಲಸಹ್ಯಮಪ್ಪ ಮದನಜ್ವರವೇಗದೆ ಮೇಣ್ಣಿಜಾಘದು । ರ್ವಹಪರಿಪಾಕದಿಂ ಬಗೆಯು ಲಲ್ಲದೊಡೆನ್ನಯ ತೀವ್ರಶಾಪವಾ ॥ ಜ್ಮಹಿಮೆಯಿ ನಾತನಂದು ಕಡಿದಿಕ್ಕಿದ ಪೆರ್ಮರನಂತೆವ್ರೋಲದೇ । ನಹಹ ಸಿರೂಪಿಪೆಂ ಕೆಡೆದುಪೊಂದಿದ ನಾಯಿಳೆಯಲ್ಲಚೇತನಂ ॥ ೫೭೭

§ ವ॥ ಅದಂ ಕಂಡತಿದುಃಖಿತರಪ್ಪ ಪರಿಜನಂಗಳ ಮುಖದಿಂದೀತಂ ಭವತ್ಪ್ರಿಯವಸ್ಯನೆಂದರಿದಾಂ ಕಡುದುಗುಡಂದಳೆದಿದೇನೆಂದು ಕಂಬನಿಗಳಂ ಬಿಡುತ್ತೆ ಲಜ್ಜಾವನತಮುಖಿಯಾಗಿರಲೆನ್ನಂ ಕುರಿತು ಚಂದ್ರಾಪೀಡಂ ॥

§ ವೃ॥ ಪಿರಿದುಂ ನೀನೊಲವಿಂದೆ ಯತ್ನಿಸಿದೊಡಂ ಕಾದಂಬರೀದೇವಿಯಾ । ಚರಣೋಪಾಸನಸೌಖ್ಯಮಾದೊಡೆನಗಾದತ್ತಿಲ್ಲಮಿಾಪುಟ್ಟನೊಳ್ ॥ ದೊರಕೊಳ್ವಂತಮತಾನೊಡಚ್ಚುಮಱುಪುಟ್ಟಲ್ಲಾದೊಡಂ ನೀನೆಯೆಂ । ದೊರೆವನ್ನಂಬೆಱದತ್ತು ಭೋಂಕನೆರ್ದೆತದ್ರಾಜೇಂದ್ರಚಂದ್ರಾಂಕನಾ ॥

ವ॥ [ಅನಂತರಂ ತರಳಿಕೆ ಮಹಾಶ್ವೇತೆಯುಂ ಬಿಟ್ಟು ಭೋರನೆ ಚಂದ್ರಾಪೀಡಶರೀರಮಂ ಸೋರ್ದು ಹಾದೇವ ಚಂದ್ರಾಪೀಡ ಕಾದಂಬರಿಯನುಳಿದೆತ್ತ ಪೋಪೆಯೆಂದು ಬಾಯುಳಿದು ಪಳವಿಸುತ್ತೆ ಮಿರ್ದಳ್ಮಹಾಶ್ವೇತೆಯುಂ ಚಂದ್ರಾಪೀಡಮುಖನಿಹಿತ ನಿಶ್ಚಲಸ್ತಬ್ಧದೃಷ್ಟಿಯಾಗಿ ಮರಣಸಮಾಸಾದಿತೆಯಾದಂತೆ ಮೂರ್ಛೆಗೆಸಂದ ಳತ್ತಲನಂತರಂ ತತ್ಸಮಾಸಂನ ಪರಿಜನಂ [ಪ್ರಲಾಪಂಗೆಯ್ಯುತ್ತ ಪಸಿತಲದೊಳ್‌ಕೆಡೆದು] ದುವಿಗತಚೇತನನಾದಕುಮಾರನಂ ಕಂಡು ಕೆಟ್ಟೆವಿದೇನೆಂದು [ರಾಜಪುತ್ರರು ಮುದ್ಭ್ರಾಂತರಾಗಿ] ಚಂದ್ರಾಪೀಡನನುಗಮನಮೇ ಕರಣೀಯಮೆಂದು ನಿಶ್ಚೈಸಿರ್ದರನ್ನೆಗಮಿತ್ತಂ [ಕಾದಂಬರಿಯುಪರಿಜನಂ] ॥ ೫೭೮

ಕಂ॥ ತಮತಮಗೊಲಪಿಂ ಶ್ವೇತಾ । ಕ್ರಮಕ್ಕೆ ತಾಂಬಂದನಧಿಕಹರ್ಷದೆ ನೃಪಚಂ । ದ್ರಮನೆಂದು ಭೋಂಕನತಿ ಸಂ । ಭ್ರಮದಿಂ ಗಂಧರ್ವಕನ್ಯೆ ಗಱುಪಿದರಾಗಳ್ ॥ ೫೭೯

ವ || ಅಂತಱಿಪೆ ಚಂದ್ರೋದ [ಯೋಲ್ಲಸಿತೆ]ಯಪ್ಪುದಧಿವೇಳೆಯಂತೆ ಸಮುಕರಧ್ವಜೆಯಾಗಿ ಮನದೊಳಗೆ ಗುಡಿಗಟ್ಟಿ ಮಹಾಶ್ವೇತೆಯಲ್ಲಿಗೆ ಪೋದಪ್ಪೆನೆಂದು ಜನನೀಜನಕರಿಂ ಕೃತಾನುಜ್ಞೆಯಾಗಿ ಕಾದಂಬರಿ ಕಯ್ಗೆಯ್ದು *[ರಸನ್ಮಣಿನೂಪುರಕಲಾಪೆಯುಂ ಮುಖರಮೇಖಲಾದಾಮಸಂದಾನಿತಜಘನೆಯುಂ] ರತ್ನೋಜ್ಜ್ವಲಾಲಕೆಯುಂ ಗೃಹೀತಸುರಭಿಮಾಲ್ಯಾನುಲೇಪನಪಟವಾಸಾದ್ಯುಪಕರಣೆಯರುಂ ಮೆಸಿಸಿದ ಕೆಲಂಬರಾಪ್ತಪರಿಚಾರಿಕೆಯರ್ವೆರಸು ಕೇಯೂರಕೋಪದಿಶ್ಯಮಾನಮಾರ್ಗೆಯುಮೆನಿಸಿ ಪತ್ರಲೇಖಾಹಸ್ತಾವಲಂಬಿನಿಯುಮಾಗಿ ಬರುತಂ ಮದಲೇಖೆಗಿಂತೆಂದಳ್ ||

ವೃ || ಅಱಿವೋ ನಿಸ್ಸ್ನೇಹನೆನ್ನಂ ಹಿಮಗೃಹಕದೊಳಂತಿರ್ದ್ದಳಂ
ಕಂಡುಮತ್ತಂ | ಪೆಱವೋ[ದಂದುರ್ವಿದಗ್ಧಂ ಕಠಿನಹೃದಯನಾಂ ಸತ್ತೊ
ಡಂ ನಂಬನೆನ್ನಂ || ಮಱುಗುತ್ತಿರ್ದ್ದಪ್ಪ]ಳಿಂದೆಂದೆಣಿಸಿ[ನುಡಿದೊಡಂ ಪೇ
ಳೆಂನಾನೇನುಮಂಕೇ | ಳ್ಪೆಱತೇಂ ಸಾರ್ತ್ತಂದವಂ]ಕಾಲ್ವಿಡಿದೊಡ ಮೊಸೆ
ಯೆಂ ಪದ್ಮಪತ್ರಾಯತಾಕ್ಷೀ || ೫೮೩

ವ || ಎಂದುನುಡಿಯುತ್ತಂ ಚಂದ್ರಾಪೀಡದರ್ಶನೋತ್ಕಂಠೆಯಾಗಿ ಕಾದಂಬರಿಮಹಾಶ್ವೇತಾಪ್ರಮುಖ್ಯೆವಂದು ನೆರೆದಿರ್ದ್ದ ರಾಜಲೋಕದನಡುವೆ ತಿರೋಹಿತಾಮೃತಮಪ್ಪ ರತ್ನಾಕರಮುಮನಂತಃ[ಪ್ರವಿಷ್ಟಕಮಲ]ಮಪ್ಪ ಪದ್ಮಾಕರಮುಮಂ ಜಲಧರಪಟಲಾಂತರಿತೇಂದುವಪ್ಪ ನಿಶಾಪ್ರಬಂಧಮುಮನನುಕರಿಸಿ ತಿರೋಭೂತಚೇತನನಾದ ಚಂದ್ರಾಪೀಡದೇವನಂ ಕಂಡು

---

೫೮೨. ಗುಡಿಗಟ್ಟಿ—ಸಂತೋಷಪಟ್ಟು: ಕಯ್ಗೆಯ್ದು—ಒಡವೆಗಳನ್ನು ಧರಿಸಿ;

೫೮೩. ಅಱಿವೋ—ಬಲ್ಲೆಯೋ; ನಿಸ್ಸ್ನೇಹಂ—ಸ್ನೇಹಶೂನ್ಯನಾದ ಚಂದ್ರಾಪೀಡನು; ಹಿಮಗೃಹಕದೊಳ್, ಅಂತಿರ್ದ್ದಳಂ—ಹಾಗೆ ಮರಣಾವಸ್ಥೆಯಿಂದ ಕೂಡಿದ್ದ ನನ್ನನ್ನು; ಕಂಡು, ಮತ್ತಂ—ಪುನಃ; ಪೆಱವೋದಂ—ಹಿಂದಕ್ಕೆ ತನ್ನ ಪಟ್ಟಣಕ್ಕೆ ಹೋದನು; ಇಂದು—ಈಗ: ಮಱುಗುತ್ತಿರ್ದ್ದಪ್ಪಳ್—ತಪಿಸುವಳು; ಎಂದೆಣಿಸಿ—ಎಂದು ತಿಳಿದು; ನುಡಿದೊಡಂ—ನನ್ನ ಸಂಗಡ ಮಾತಾಡಿದರೂ; ಆಂ, ಏನುಮಂ, ಪೇಳೆಂ, ಪೆಱತೇಂ—ಹೆಚ್ಚು ಮಾತಿನಿಂದೇನು; ಅವಂ, ಕಾಲ್ವಿಡಿದೊಡಂ, ಒಸೆಯೆಂ—ನಾನು ಪ್ರಸನ್ನೆಯಾಗುವದಿಲ್ಲ.

*[ಸನ್ಮಣಿನೂಪುರಕಪ್ರೋಳಿಯುರುಂಮುಖರಮೇಖಲಾದಾಮಸಂದಾನಿತ 'ಜಘನೆಯುಂ]

ಕೆಟ್ಟೆನಿದೇನೆಂದು ತೊಟ್ಟನೆ ಮುಗ್ಧಮೂರ್ಛೆಗಸಂದು *[ನೆಲಕ್ಕೆಬೀಳ್ವನ್ನೆ ಗವೆಂತಾನುಂ ಮುಕ್ತಾಕ್ರಂದನೆಯಪ್ಪ ಮದಲೇಖೆ ಕರತಲದಿಂ ಪಿಡಿದೆತ್ತೆ ಪತ್ರಲೇಖೆಯುಂ] ಕಾದಂಬರೀದೇವಿಯು ಕರತಲವಂ ಬಿಟ್ಟು ನಿಶ್ಚೇತನೆ ಯಾಗಿ ಬಿಳ್ದಳತ್ತಲನಂತರವೆಂತಾನುಂ ಕಿಱಿದುಬೇಗಕ್ಕೆ ಕಾದಂಬರಿ ಲಬ್ಧ [ಸಂಜ್ಞೆ]ಯಾಗಿ ॥ ೫೮೪

ವೃ। ಮ[ರವಟ್ಟಂ]ತೆ ವಿಮೂರ್ಛೆಯಂತೆ ಬರೆದಂತಾವಿಷ್ಟೆಯಾದಂತೆ ಕಂ । ಪರಿಸಿಟ್ಟಂತುಸಿರಿಕ್ಕಲುಂ ಮಱೆದು ಚಂದ್ರಾಪೀಡದೇವಾನನಾಂ ॥ ಬುಜಪಸ್ತಂಭಿತದೃಷ್ಟಿ ಮೆಯ್ಯಱಿಯದಂತರ್ಮನ್ಯು ಭಾರಾತಿವಂ । ಥರೆ ಪೆಂಡಿಗ್ಗಿರ್ಸುತಕ್ಷ್ಮದಲ್ತೆನಿಪ ವಸ್ಥಾಭೇದಮಂ ತಾಳ್ದಿದಳ್ ॥ ೫೮೫

ವ। ಅಂತುತಾಳ್ದಿದ ಕಾದಂಬರಿಯಕಾಲವೊಳೆ [ಬಿಳ್ದು] ಮುಕ್ತಾರ್ತನಾದೆಯಾಗಿ ಮದಲೇಖೆಯಿಂತೆಂದಳ್ ॥ ೫೮೬

ವೃ। ಬಿಡುನಿಜಮನ್ಯು †[ಬಾಷ್ಪಭರಮಂ] [ನುಡಿಗುಂದುತವಿಂತು ದುಃಖಪಮಂ । ತೊಡೆ] ಕಡೆಗೋಡಿಪೋಗದೆ ಪೊಸಲ್ಪುಗುತರ್ಪ ತಟಾಕ [ದಂಡದಿಂ । ಪೊಡೆದಪ್ಪದಲ್ತೆ ನಿನ್ನಸುಮುಕೋಮಲಮಪ್ಪೆದೆ ತಂದೆಯ ತಾಯು] ‡[ಬಾಳ್ಕೆಯಿ । ನ್ನುಡಿಗೊಡದೆಂತು ವಿಲ್ಲತಿಳನೀಂಬಳಿಕಿಲ್ಲ ನಿಜಾ ನ್ವಯದ್ವಯಂ] ॥ ೫೮೭

ವ ಎಂದುನುಡಿಯೆ ವಿಹಸಿತವದನೆಯಾಗಿ [ಕಾದಂಬರಿ] ಮದಲೇಖೆ ಯನಿಂತೆಂದಳ್ ॥ ೫೮೮

೫೮೫. ಮರವಟ್ಟಂತೆ—ಸ್ತಬ್ಧವಾದಹಾಗೆ; ಬರೆದಂತೆ—ಚಿತ್ರಿತೆಯಂತೆ; ಕಂಪರಿಸಿಟ್ಟಂತೆ—ಕೆತ್ತಿ ಇರಿಸಿದಂತೆ; ಉಸಿರಿಕ್ಕಲುಂ—ಉಸುರನ್ನು ಬಿಡುವದಕ್ಕೂ; ಪೆಂಡಿರ್—ಸ್ತ್ರೀಯರಿಗೆ, ಉದುತಕ್ಕುದಲ್ತು—ಯೋಗ್ಯವಾದದ್ದಲ್ಲ.

*[ಮುಕ್ತಾಕ್ರಂದನೆಯಪ್ಪ ಮದಲೇಖೆಯುಂ] †[ಬಾಷ್ಪಬವಮುಂ]

‡[ಪೆಂಬಿಡಿವೊಳನೆಂತು ಮಿಲ್ಲಸಿತಬೊಳ್ಳಿಕೆಲನಿಜಾನ್ವಯದ್ವಯಂ]

ವೃ॥ ಮರುಳೇಸೀಂ ತಂಗಿ ಪೇಳ್ಕಲ್ಲರ್ದೆ ಯಿದೊಡಗುವೋಂ ಮುಂ
ದೆ *[ಮತ್ಕಾಂತನಿ]ಂತಾ । ಗಿರೆಯುಂ ಪ್ರಾಣಂಗಳೆನ್ನಂ ಬಿಡವು ಬಿಡದೊ
ಡೇನಾದು ದೆಂತಾನುಮೀಗಳ್ । ದೊರೆಕೊಂಡತ್ತೀ ಮದೀಯ [ಪ್ರಿಯ]ತಮ
ತನುವಿಂ ತಂದೆ ತಾಯ್ಬಂಧುವರ್ಗಂ । ಪರಿವಾರಂ ತಾನದೇಕೀತನುವಿನ ಬಳಿ
ಸಂದಾಂ ಕೃತಾರ್ಥಾತ್ಮೆಯಪ್ಪೆಂ ॥ ಅದಲ್ಲದೆಯುಂ ॥ ೫೪೯

ವೃ॥ ಪಿಂದೆ ಸಮಸ್ತರಾಜ್ಯಪದಮಂ ಬಿಸುಟೆನ್ನಯ ದೂಸಱಿಂದ
ಮೇ । ಳ್ತಂದೆನಗೊಪ್ಪುಗೊಟ್ಟು ನಿಜದೇಹಮ ನೀಮಹಿಪಂ ಗುರುತ್ವದಿಂ ।
ದೊಂದಿದ ನೀಗಳಾಂ ಬರಿದೆ ಕಣ್ಬನಿಯಂ ಸುರಿಯುತ್ತಮಿ†[ರ್ದೊಡಂ । ಬಂ
ದಪುದೇನೊ]ಪೇಳ್ಕಳದಿ ಕೆಮ್ಮನೆ ಲಾಘವದಿಂದಮೊಂದುಮೆಂ ॥ ೫೫೦

ವ॥ ಅದುಕಾರಣದಿಂ ॥

ವೃ॥ ಸಾವುದೆ ಜೀವನಂದಲೆನಗೀಕಡುನಾಣ್ಚೆಡೆಯಾದ ಜೀವನಂ ।
ಸಾವೆಮ ತಂಗಿನೀನೆನಗೆ ಕೂರ್ಪುದು ನಿಕ್ಕುವಮಪ್ಪೊಡೆನ್ನಮೇ । ಲಾವರಿ
ಸಿರ್ದ್ದ ಕೂರ್ಮೆಯನೆ ನಿನ್ನೊಳೆ ಮಾಡಿ ಮದೀಯಶೋಕದಿಂ । ಜೀವ
ಮನಬ್ಬೆಪತ್ತುವಿಡದಂತಿರೆ ಮಾಡುವು ದಾವುಪಾಯದಿಂ ॥ ೫೫೧

ವ॥ ಅದಲ್ಲದೆಯುಂ ॥

---

೫೪೯. ತಂಗಿ—ಎಲೆತಂಗಿಯೆ ; ನೀಂ, ಮರುಳೇ—ಹುಚ್ಚಳೆ : ತನು + ಇಂ
=ತನುವಿಂ ; ಇಂ—ಇನ್ನುಮೇಲೆ ;

೫೫೦. ಎನ್ನಯದೂಸಱಿಂದಂ—ನನಗೋಸ್ಕರವಾಗಿ : ನಿಜದೇಹಮಂ, ಎನಗೆ :
ಒಪ್ಪುಗೊಟ್ಟು—ಒಪ್ಪಿಸಿ ; ಗುರುತ್ವದಿಂದೊಂದಿದಂ—ಗೌರವವನ್ನು ಪಡೆದನು.

೫೫೧. ಈ ಕಡುನಾಣ್ಚೆಡೆಯಾದ—ಈ ನಾಚಿಗೆಗೆ ಈಡಾದ ; ಜೀವನಂ—ಬಾ
ಳು ; ಸಾವೆಮ—ಮರಣವಲ್ಲವೆ ? ; ಎನಗೆ, ನೀಂ, ಕೂರ್ಪುದು—ಪ್ರೀತಿಸುವದು ;
ನಿಕ್ಕುವಮಪ್ಪೊಡೆ—ನಿಜವಾದರೆ ; ಎನ್ನಮೇಲಾವರಿಸಿರ್ದ್ದ, ಕೂರ್ಮೆಯನೆ—ನನ್ನ
ತಾಯಪ್ರೀತಿಯನ್ನೇ ; ನಿನ್ನೊಳೆಮಾಡಿ—ನಿನ್ನಲ್ಲಿ ಆರೋಪಿಸಿಕೊಂಡು : ಆವುಪಾಯದಿಂ
—ಯಾವದಾದರೂ ಒಂದು ಉಪಾಯದಿಂದ ; ಅಬ್ಬೆ—ತಾಯಿಯು ; ಜೀವಮಂ, ಪತ್ತು,
ವಿಡದಂತಿರೆ—ಬಿಡದಂತೆ, ಮಾಡುವದು.

*[ಘಾತ್ಕಾನ್ನದಿಂ] †[ರ್ದದೊಂ । ಬಂದಪದೇನೊ]

ವೃ॥ ಪರಿಜನವುಂ ಸಖೀಜನಮು ಮೆನ್ನನೆ ಚಿಂತಿಸದನ್ತು ತಂಗಿ ನೀಂ । ನಿರು ಕರುವಾಡದೊಳ್ಮದುವೆಯಂ ಭವನಾಂಗಣಬಾಲಚೂತದೊ॥ *[ಳ್ಪರೆಪ್ರೊ]ಲವಿಂದೆ ಮಾಧವಿಯೊಳೆನ್ನ †[ಪದಾಂಚಕನ]ದಿಂದೆ ತಳ್ತುಬಿ ॥ ತ್ತರಿಸಿವ ಶೋಕದೊಳ್ಪುಳರ ‡[ಕೊಯ್ಯದಿರಾ]ಭರಣಾರ್ಥವಾಗಿಯುಂ ॥ ೫೯೧

ಕಂ॥ ಅನುರಾಗದಿನಾನೆ ಕುಮಾ । ರನ ಪಟಮಂ ಬರೆದು ಸೆಜ್ಜೆವನೆಯೊಳ್ಪ್ರಚ್ಛನ್ನ ॥ ದ್ದೆನದಂ ಪೂಜಿಸುತಿರು ಕಾ । ಮನ ಪಟಮಂ ಸೀಳ್ದುಕಳೆ ವೃಥಾಪೂಜಿತಮಂ ॥ ೫೯೩

ಕಂ॥ ಚಿರಕಾಲಂ ನವೆದುವು ಪಂ । ಜರದೊಳ್ಕಾಳಂದಿಯೆಂಬಸಾರಿಕೆಯುಂ ತ ॥ ತ್ಪರಿಹಾಸನೆಂಬಗಿಳಿಯುಂ ಮ । ವೆರಡಂ ನೀಂತಂಗಿಬಿಟ್ಟುಕಳೆ ಬಡವುಗಳಂ ॥ ೫೯೪

ಕಂ॥ ಶಮದಮಯುತನೆನಿಸಿದ್ದೊರ್ । ವ್ವಮುನಿಗೆ ತತ್ಕೇಳಿಶೈಲಮಂ ಕುಡು ವಕುಳ ॥ ದ್ರುಮಕಂ ಮಾಲತಿಗಂ ಮದು । ವೆಮಾಡಿದೆಂ ಬಿಡಿಸವರ್ಕ್ಕೆ ನೀಂ ಕಂಕಣಮಂ ॥ ೫೯೫

ವೃ॥ ತರಳಿಕೆಯೆಂಬ ನಮ್ಮಮುಱಿವುಲ್ಲೆಯು ನೊಂದು ತಪೋವನಕ್ಕೆ ನೀಂ । ನಿರಿಸು ಪಂಜರಾಂತರದ ಕನ್ನಡವಕ್ಕಿಯು ನೊಂದುಬಂದವಳಾ ॥ ಮರದೊಳ್ ಸಾಚ್ಚರ್ ಮಚ್ಚರಣನೂಪುರದಿಂಚರ ¶[ಕಾದವಳ್ಕಱಿಂ] । ಪರಿತರುತ್ತಿರ್ದ್ದ ಹಂಸಕನ ನೊಯ್ದಿರಿಸೊಂದು ಸರಃಪ್ರದೇಶದೊಳ್ ॥ ೫೯೬

---

೫೯೧. ಕರುವಾಡದೊಳ್—ಉಪ್ಪರಿಗೆಯಲ್ಲಿ; ಚೂತದೊಳ್, ಮಾಧವಿಯೊಳ್. ಮದುವೆಯಂಪರೆಪ್ರ—ವಿವಾಹವನ್ನು ವಿಸ್ತರಿಸು.

೫೯೩. ನವೆದುವು—ನವೆದವು; ಬಡವುಗಳಂ—ಕೃಶವಾದ; ಅವೆರಡಂ, ಬಿಟ್ಟುಕಳೆ.

೫೯೫. ಕಂಕಣಮಂಬಿಡಿಸು—ಕಂಕಣೋತ್ಸರ್ಜನವನ್ನು ಮಾಡಿಸು.

೫೯೬. ನಿರಿಸು—ಸೇರಿಸು; ಫಲಸಹಕಾರದೊಳ್—ಫಲಿಸಿರುವ ಮಾವಿನ ಮರದಲ್ಲಿ.

*[ಳ್ಪರೆಪ್ರ] †[ಪದಾಂಚನ] ‡[ಕೊಯ್ಯದಿರಾ] ¶[ಕಾದವಕ್ಕಱಿಂ]

ಕಂ॥ ಪದೆದೆನ್ನಯ ವೀಣೆಯನಿರಿ । ಪ್ರದು ನಿನ್ನಯ ತೊಡೆಯಮೇಲೆ ಮತ್ತಂ ನಿನಗಾ ॥ ಪ್ರದಪೇಕ್ಷಿತ ಮಾಗಿರ್ದ್ದ । ತ್ತದೆಲ್ಲಮಂ ನೀನೆಕೆಳದಿ ಕೈಕೊಳ್ಳೀಗಳ್ ॥ ೫೯೭

ವ॥ ಆನಪ್ಪೊಡೆ ತಿಂಗಳತಣ್ಗದಿರ್ಗಳೊಳ *[ಮಿಪ್ಪರ್ಳಯದ] ಸಿರಿಕಂಡದಣ್ಪಿನೊಳ ವೆಡೆವಿಡದಾಲಿನೀರ್ವನಿಗಳಂ ಸಿಂಪಿಸುವ ನೀರ್ಜ್ಜೊಂಪಂಗಳೊಳಂ ತುಹಿನಕರನ ತಣ್ಗದಿರ್ಗಳ ತನಿಸೋಂಕಿನಿಂ ತಣ್ಪುವಡೆದ ತಾರಹಾರಂಗಳೊಳಂ ಕರ್ಪೂರರಸದಿರ್ಪ್ಪಿನಿಂ ಕುಳಿರ್ವ ತಳಿರ್ವಾಸುಗಳೊಳಂ ಉಳ್ಕಲರ್ದ ತಾವರೆಯ ನೆಯ್ದಿಲೆಸಳ ಪಸೆಗಳೊಳಂ ತಪ್ತಶೇಷವಾಗಿ ಮಾಯ್ದೆನ್ನಶರೀರಮಂ ಪ್ರಿಯತಮಶರೀರಸಂಯೋಗಾಹ್ಲಾದದಿ ನಾಱಿಸಿದಪ್ಪೆನೆಂದು ತನ್ನಂ ಮದಲೇಖೆಯಿಂ ಬಿಡಿಸಿಕೊಂಡು ಲಬ್ಧಸಂಜ್ಞೆಯುಂ ಚಿಂತಾಸ್ತಿಮಿತನಯನೆಯು ಮಪ್ಪಮಹಾಶ್ವೇತೆಯುಂ ತಳ್ಕೈಸಿ ನಿರ್ವಿಕಾರವದನೆಯಾಗಿ ॥ ೫೯೮

ವೃ॥ ಇನಿಯನ ಬರ್ಪ್ಪುದುಂ ನಿನಗೆ ಪಾರ್ದ್ದಿರವೇಳ್ಪುದು ಪುಂಡರೀಕದೇ । ವನೆ ಪತಿಯಪ್ಪನೆಂಬನುಡಿಯುಂ ಸಮಕಾರಣಮಾಗೆ ತಾಳ್ದನೀಂ ॥ ತನುವನನೇಕಕಾಲ ವಿದನೆನ್ನಯ ಚಿಂತೆಯ ನಕ್ಕ ಮಾಣ್ಬುದಿಂ । ತೆನಗಿನಿತೊಂದು ಮೂಡುಗೆ ಭವಾಂತರದಲ್ಲಿ ಭವತ್ಸ್ನವಾಗಮಂ । ೫೯೯

ವ॥ ಎಂದನಂತರಂ ।

---

೫೯೮. ಇಪ್ಪರ್ಯುವ—ಪ್ರವಗುಂಪದ, ಆಲಿನೀರ್ವನಿ—ಆಲಿಕಲ್ಲಿನ ನೀರಿನ ಹನಿ ; ನೀರ್ಜೊಂಪ—ಜಲಗೃಹ ; ಕುಳಿರ್ವ—ತಣ್ಣಗೆ ಕೊರೆಯುವ : ಉಳ್ಕಲರ್ದ—ಅರ್ಧವಿಕಸಿತವಾದ.

೫೯೯. ಇನಿಯನಬರ್ಪ್ಪುದುಂ—ಪತಿಯ ಆಗಮನವು ; ನಿನಗೆ, ಪಾರ್ದ್ದಿರವೇಳ್ಪುದು—ನಿರೀಕ್ಷಿಸಲ್ಪಡತಕ್ಕದ್ದಾಗಿದೆ ; ಪುಂಡರೀಕನನುಡಿಯುಂ, ಸಮಕಾರಣಮಾಗೆ—ಒಳ್ಳೇಕಾರಣವಾಗಿರುವದರಿಂದ ; ಅನೇಕಕಾಲಂ, ತನುವಂ, ತಾಳ್ದು—ಧರಿಸು ; ಭವಾಂತರದಲ್ಲಿ, ಇಂತು—ಈಜನ್ಮದಲ್ಲಿರುವಹಾಗೆ : ಇನಿತೊಂದುಭವತ್ಸ್ನವಾಗಮಂ—ಇಷ್ಟೊಂದು ನಿನ್ನಸ್ನೇಹವು ; ಮೂಡುಗೆ—ಉಂಟಾಗಲಿ.

*[ಮಿಕ್ಕು ಮದ]

ಕಂ। ಸುಲಿಯೆ ಕಚಭಾರಹಸ್ತದಿ । ನರಲ್ಗಳಾತ್ಮೋತ್ತಮಾಂಗದಿಂ ಪರ್ಚಿಸಿದಳ್ । ಸರಭಸಮಾಗಳ್ಕಾಂದಂ । ಬರಿ ಚಂದ್ರಾಪೀಡದೇವ ಚರಣಾಂಬುಜಮಂ ॥ ೬೦೦

ವ। ಅನ್ತರ್ಜಿಸುತ್ತ ಮುತ್ಪುಂಜ್ಯಮಾನ ಪುಲಕನಿಕರೆಯುಂ ಮಸಮಸಾಧ್ವಸೋತ್ಕಂಪಮಾನಾಂಗಿಯುಂ ಮಮಂದಬಾಷ್ಪವೇಗಪ್ರಕ್ಷಾಳಿತವದನೆಯುಂ ಸರ್ವಾಂಗ *[ಸ್ರವತ್ಸ್ವೇದ]ಬಿಂದುತಾರಕಿತಗಾತ್ರೆಯುಂ ಮುಕುಳಾಯಮಾನನಯನಯುಗಳೆಯುಮಾಗಿ ತದವಸ್ಥನಪ್ಪ ಹೃದಯವಲ್ಲಭನೊಳ್ ಸಮಾಗಮಸುಖಮ ನನುಭವಿಸಿದಪ್ಪಳೆನಿಸಿ ವಿಗ †[ಳತ್ಸ್ವೇದಾರ್ದ್ರಂ]ಗಳಪ್ಪ ಕರಕಮಲಂಗಳಿಂ ಪ್ರಿಯತಮನಂ ತೊಡೆಯುಮೋಗಸ್ಥೆ ತೆಗೆದು ಮೊಗಮಂಬಿಡದೆನೋಡಿ ನಿಜಪ್ರಾಣಮಂ ಬಿಡಲುಜ್ಜುಗಂಗೆಯ್ವಾಗಳ್ ॥ ೬೦೧

ವೃ। ಅಮೃತಾಸಾರದಿ ನಾಪ್ರದೇಶಮನಿತುಂ ತೇಂಕಾಡಲಲ್ಲಿರ್ದ್ದರೆಲ್ಲ ಮಿದೇನೋ ಕಪಿತಪ್ರ್ವದೀಗಳೆನುತಂ ತಳ್ವುಯ್ದು ತಣ್ಪಿಂದಮೊ ॥ ಯ್ದೆಮುಳುಂಗುತ್ತಿರೆ ಲಿಪ್ಕೆತೊಪ್ಕೋರದಲೊ ಳವ್ಯಕ್ತಸ್ವರೂಪಂ ಸುಧಾಂಶುಮಯೂಖೋಜ್ಜ್ವಲ ಮಂತರಿಕ್ಷತಲದೊಳ್ ಪೈಮಪ್ರಭಾಮಂಡಲಂ ॥

ವ। ಅಂತಾಪ್ರಭಾಮಂಡಲದ ದೆಸೆಯಿನಮೃತವೃಷ್ಟಿಯಂ ಪಸರಿಸುವಂತದೊಂದು ದಿವ್ಯನಿನದಂ ॥

ವೃ। ಒಸೆದಂದಾಂ ನಿನ್ನನಾಶ್ವಾಸಿಸಿದೆ ನೆಲೆ ಮಹಾಶ್ವೇತೆ ಮತ್ತಿಂದುಮಾತ್ಮಾ । ಪಿಸಲೇಳ್ತಂದೆಂ ಮದೀಯಾಮೃತ ಮಯುಕರಸಂದೋಹದಿಂ ನಿಚ್ಚಮಾನ । ಜ್ವಿರಸುತಿರ್ದ್ದಿಂ ಪ್ರಂಡರೀಕೋಜ್ಜ್ವಲವಪುವ ನದಿನ್ನರ್ತ್ತುಮುಲ್ಲೋಕದೊಳ್ಳು । ನ್ನಸಮಾದೋಗಾರ್ಥ ಮಿನ್ನುಂತೊಳಗಿಬೆಳಗುತಂ ನಿತ್ಯರೂಪತ್ವದಿಂದಂ ॥ ೬೦೩

೬೦೦. ಕಚಭಾರಹಸ್ತದಿಂ—ಕೇಶಪಾಶದಿಂದ; ಪಾಶಃಪಕ್ಷಶ್ಚಹಸ್ತಶ್ಚ ಕಲಾಪಾರ್ಥಾಃಕಚಾತ್ಪರೇ, ಎಂದಮರವು.

೬೦೨. ತಳ್ವುದ್ಪು—ತಗಲುವ; ಒಪ್ಕೋರದಲೊಳ್—ತತ್ಕ್ಷಣದಲ್ಲಿ.

೬೦೩. ಒಸೆದು—ಪ್ರಸನ್ನನಾಗಿ; ಆಶ್ವಾಸಿಸಿದೆಂ—ಸಮಾಧಾನಮಾಡಿದೆನು.

*[ಶ್ರಮತಶ್ಶ್ವೇದ] †[ಗಳಿತಶ್ವೇತಾರ್ಥಂ]

ಇದುಪೇರ್ಮೆಯ್ವೊಕ್ಕ ಯೋಗೀಂದ್ರನ ತನುವಿನವೊಲ್ಮನ್ನಿಸಂತಿರ್ಪುದಂ। ಅಲ್ಲದೆಯುಂ ಕಾದಂಬರೀದೇವಿಯ ಕರತಲಸಂಸ್ಪರ್ಶಮಂ ತಾಳ್ದಿಕೊಂಡಿ ॥ ರ್ದುದು ಬೇಱೊಂದೆನ್ನ ತೇಜೋಮಯಮಿದು ಪೆಱತೇಂ ನಿತ್ಯಮೀದೇಹ ಮೀದೇ । ಹದೆ ಚಂದ್ರಾಪೀಡದೇವಂ ಕತಿಪಯ [ದಿಸ] ದಿಂ ದೀಕೆಯೊಳ್ಕೂಡಿದಪ್ಪಂ ॥ ೬೦೪

ಆದರಿನೀದೇಹಮ ನತಿಪ್ರಯತ್ನದಿ ಸಾರಾಧಿಸುತ್ತಿರ್ಪುದೆಂದು ನುಡಿದು ಮಾಣ್ಬುದು ಮಿದೇನೆನುತ್ತಂ ಕಾದಂಬರಿವೆರಸು ಸಕಲರಾಜಲೋಕಂ ವಿಸ್ಮಯಾಕ್ಷಿಪ್ತಹೃದಯರುಂ ಮಂದೀಕೃತಮರಣವ್ಯತಿಕರರುಮಾಗಿರ್ಪುದು ಮನಂತರಂ ಪತ್ರಲೇಖೆ ತತ್ಪ್ರಭಾಮಂಡಲಗಳಿತ ಹಿಮಸ್ಪರ್ಶದಿಂ ಲಬ್ಧಸಂಜ್ಞೆಯಾಗಿ ಮರುಳ್ಗೊಂಡಂತೆ [ಇಂದ್ರಾಯುಧಮಿರ್ಪೆಡೆಗೆ ಪರಿತಂದು ಪರಿವರ್ಧಕ ಹಸ್ತದಿಂದದಂ ತೆಗೆದು ವಾಹನಮಿಲ್ಲದೆ ಚಂದ್ರಾಪೀಡದೇವ ನೇಕಾಕಿಯಾಗಿಂತು ದೂರಮೆಯ್ದಲೆಮ್ಮನ್ನರಿರ್ಪುದನುಚಿತಮೆಂದು ನುಡಿದಾ ಯಿಂದ್ರಾಯುಧವ ನೊಡಗೊಂಡಚ್ಛೋದಸರದೊಳ್ಮುಳುಂಗಲೊಡಂ] ॥ ೬೦೫

ಪೊರೆದು ಸರೋಜರೇಣುಗಳನೊಂದಱೊಳೊಂದು ತೊಡಂಕೆ ವಾಃ
ಕಣ್ಣೋ । ತ್ಕರದೊಡಗೂಡಿ ಕಣ್ಗೆಕವಿತಪ್ಪ ಜಟಾಳಿಯ ನಿರ್ಕೆಲಕ್ಕ
ಮೋ ॥ ಸರಿಸುತ ವಜ್ಜತಂತುವಿನ ಜನ್ನಿವರಂ ಸುರಭೂಜವಲ್ಕ ಮೊ । ಪ್ಪಿರೆ
ಪೊಱಮಟ್ಟ ನಾಕೊಳದಿ ನಾಗಳದೊರ್ವ ಕುಮಾರತಾಪಸಂ ॥ ೬೦೬

ವ ॥ ಅನ್ತು ಪೊಱಮಟ್ಟ ಸುಹೃದ್ವಿಯೋಗ ವಿಹ್ವಲಿತ [ಹೃದಯನಪ್ಪ] ಕಪಿಂಜಲ ನುದ್ಬಾಷ್ಪಪರ್ಯಾಕುಲ ವ್ಯಾಬದ್ಧಲಕ್ಷ್ಯದೃಷ್ಟಿಯಪ್ಪ ಮಹಾಶ್ವೇತೆಯನೆಯ್ದೆವಂದು ॥ ೬೦೭

ಕಂ ॥ ಮಱುವುಟ್ಟಿಗನಾದನ ನೇ । ನಱಿವೋ ನೀನೆನ್ನನೆನೆ ಕಪಿಂ
ಜಲಮುನಿಯೆಂ ॥ ನಱಿನತಿಸಂಭ್ರಮದಿಂ ಬಂ । ದೆಱಗಿದಳಾಸತಿ ತದೀಯ
ಚರಣದ್ವಯದೊಳ್ ॥ ೬೦೮

---

೬೦೪. ಇದು—ಈ ಶರೀರವು ; ಪೇರ್ಮೆಯ್ವೊಕ್ಕ—ಪರಕಾಯಪ್ರವೇಶಮಾಡಿದ.
೬೦೮. ಮಱುವುಟ್ಟಿಗಂ—ಜನ್ಮಾಂತರವನ್ನು ಪಡೆದವನು.

ವೃ ॥ ಮುನಿಪತಿ ಲಜ್ಜೆಗೆಟ್ಟು ಬೆಸಗೊಂಡಪೆ ನೆಂತೆನೆ ಪುಂಡರೀಕ
ದೇ । ವನ ಪೆರಗಿಂತು ಜೀವಿಸುತಮಿರ್ದ್ದವಳೆಂ ಬೆಸಸಿಂ ಮಹಾನುಭಾ ॥
ವನ ನಿರದೊಯ್ದನಾವ ಸಿರಿಸಿಟ್ಟನದೆಲ್ಲಿ ತದೀಯವಾರ್ತೆಯೇ । ನಿನಿತುವ
ರಂ ವಿಲಂಬಿಸಿಯುಮೊರ್ವ್ವರೆ ಬಂದಿರಿದಾವಕಾರಣಂ ॥ ೬೦೯

ವ ॥ ಎಂದಮಹಾಶ್ವೇತೆಗೆ ಕಪಿಂಜಲನಿಂತೆಂದಂನೀನಂದಂತು ಬಾಯುಳಿದು ಪಳವಿಸುತ್ತಿರೆಯುಂ ನಿನ್ನನೇಕಾಕಿಯ ನೀಡಾಡಿ ವಯಸ್ಯಸ್ನೇಹದಿನಾಂ ಪುಂಡರೀಕನ ಕೊಂಡೊಯ್ದ ಪುರುಷನ ಬಳಿಸಂದು ಮದೀಯಸಖನನೆತ್ತಲೊಯ್ದಪೆ ಯೆಂಬುದು ಮಾತನೆನಗೆ ಮಱುಮಾತುಗುಡದೆ ಗೀರ್ವಾಣಮಾರ್ಗದೊಳನೇಕವೈಮಾನಿಕಜನ ಪ್ರಣಮ್ಯಮಾನನುಂ ದಿವ್ಯಾಂಗನಾವಲೋಕ್ಯಮಾನನುಮಾಗಿ ಪೋಗುತ್ತಮಂಬರ ಸರಃಕುಮುದಾಕರ ಮೆನಿಪ ತಾರಕಾಚಕ್ರಮ ನತಿಕ್ರಮಿಸಿ ಚಂದ್ರಲೋಕಮಂ ಪೊಕ್ಕು ಚಂದ್ರಕಾಂತ ಮಣಿಮಂಟಪದೊಳ್ ಪುಂಡರೀಕನ ಶರೀರಮನಿರಿಸಿ ಮಗುಳ್ದೆನ್ನಂನೋಡಿ ॥

ವ ॥ ಅಱಿಯೈ ಚಂದ್ರನೆನಾಂ ಕಪಿಂಜಲಕ ನೀನೀಪುಂಡರೀಕಾರ್ಥಮಿಗ । ತಪದಿಂ ಪಿಂದೆಯಿದೇಕೆ ಬಂದೆಗಡ ಲೋಕಾನುಗ್ರಹಂ ಗೆಯ್ವುದೂ ॥ ಸಜನಾಂ ಬಂದುದಯಂಗೆಯುತ್ತ ವಿರಲೀಕಾಮಾತುರಂ ಸಾವುತಂ । ಬಱಿ ದಿಂತೆನ್ನ ನಪೋಷಿಯಂ ಕುರಿತು ಕೋಪೋದ್ರೇಕದಿಂ ನೋಡಿದಂ ॥

ಅನ್ತು ನೋಡಿ:—

ಕಂ ॥ ಎಲ ಚಂದ್ರಹತಕ ಮದನನ । ಬಲದಿಂದಂ ಮೋಸವರಿದು
ಕೊಂದಿತೆನ್ನಂ । ನಿಲಬರಿದು ಜನ್ಮಸಿಂ ಮ । ರ್ತ್ಯಲೋಕದೊಳ್ಪುಟ್ಟಿ
ನುತ್ತೆ ಶಾಪಂಗೊಟ್ಟಂ ॥ ೬೧೦

೬೦೯. ಪುಂಡರೀಕದೇವನ, ಪೆರಗ—ಹಿಂದೆ; ಅಂದರೆ ಅವನ ವಿಯೋಗವನ್ನು ಪಡೆದು; ಬೆಸಸಿಂ—ಅಪ್ಪಣೆಯನ್ನು ಕೊಡಿ;

೬೧೦. ಬಾಯುಳಿದು—ಬಾಯನ್ನು ಬಿಟ್ಟು; ಪಳವಿಸುತ್ತಿರೆಯುಂ—ಪ್ರಲಾಪಿಸುತ್ತಿದ್ದಾಗ್ಯೂ;

೬೧೧. ಮೋಸವರಿದು—ಮೋಸಹೋದ್ದು; ಜನ್ಮ—ಎರಡುಸಾರಿ.

ಇವನೆನಗೆ ನಿರಪರಾಧಂ । ಗವಿಚಾರದೆ ಶಾಪವಿತ್ತಾಯೆ ನೀನುಂ ಸು
ಖದುಃ ॥ ಖವ ನೆನ್ನೊಡನನುಭವಿಸೆಂ । ದಿವಂಗೆ ಮುನಿದಾನುಮಂತು ಶಾಪಂ
ಗೊಟ್ಟೆಂ ॥ ೬೧೩

ವ॥ ಅಂತುಶಾಪವಿತ್ತಸ್ಮನ್ಮಯೂಖಸಂಭವೆಯೆನಿಸಿದಪ್ಸರಸೆಯ ರೊಳುದಯಿಸಿದ ಗೌರೀತನೂಜೆಯಪ್ಪ ಮಹಾಶ್ವೇತೆ*[ಯಿಂಸ್ವಯಂವೃತ]ನಾದ ನಪ್ಪುದರಿ ನಪಗತಾಮರ್ಷಣನಾಗಿ ಪುಂಡರೀಕನ ಶರೀರಮಂ ಕಿಡದನ್ತು ತಂದುಮತ್ತೇಜದಿಂ †[ದಾಪ್ಯಾಯಮಾನಮಾಗೆ] ಶಾಪಮೋಕ್ಷಪರ್ಯಂತ ಮಿರಿಸಿದಪ್ಪೆಂನೀನು ಮಿಾತನ ವೃತ್ತಾಂತಮ ನಪರಯ್ಯನಪ್ಪ ಶ್ವೇತಕೇತು ವಿಂಗೆ ನಿವೇದಿಸಾಮಹಾನುಭಾವ ನೀತಂಗಾಯುಃಪ್ರಾಮಹೋಪಾದಿಕಮ ನೊಡರ್ಚಿದಪನೆಂದೆನ್ನಂ ವಿಸರ್ಜಿಸುವುದು ಮಾಂಮುದ್ಯಚ್ಛ್ಯಾಂಧನೆಂಮ ಗುಳ್ದಮರ್ತ್ಯಮಾರ್ಗದೊಳ್ ಪರಿಯುತ್ತ ಮೊರ್ವ ‡[ವೈಮಾನಿಕನಂ ಭರದಿಂ ದಾಂಟುವುದು] ಮಾತಂ ಕ್ರೋಧಾನಲದಿನೆನ್ನ ನುರಿಪುವಂತು ಕೆಚ್ಚನಾಗೆ ಬಿಚ್ಚನೆಬಿಟ್ಟ ದಿಟ್ಟಿಗಳಿಂ ನೋಡಿ । ೬೧೪

ಎಲೆಮುತ್ಯೆಕ್ಷಿತ ನಿನ್ನ ಕಣ್ಗೊಡೆಮುಮೇವಿಸ್ತೀರ್ಣಮಪ್ಪೀನಭ । ಸ್ಥಳದೊಳ್ಪೋಗುತಮೆನ್ನ ನಿಂತುರದೆನೀಂ ಸಿನ್ನೊಂದು ವಿದ್ಯಾತಪ್ರೋ ॥ ಬಲದಿಂ ದಾಂಟಿದೆ ಮಾಹದಂತಿರದರಿಂ ಮಾಹತ್ವಮಂ ತಾಳ್ದಿ ಭೂ । ತಲದೊಳ್ಪೋ ನೆಲಸೆಂದು ಕೊಟ್ಟನೆನಗಾ ವೈಮಾನಿಕಂ ಶಾಪಮಂ । ೬೧೫

ವ॥ ಅನ್ತು ಶಾಪಂಗುಡಲಾಂ ನಡುನಡುಗಿ ಕಯ್ಗಳಂಮುಗಿದು ಮಹಾಪುರುಷಾ ನಿನ್ನ ನಾಂಮಯುಸ್ವಶೋಕಾಂಧನೆಂ ಕಾಣದೆ ದಾಂಟಿದೆನಲ್ಲದವಜ್ಞೆಯಿಂ ದಾಂಟಿದನಲ್ಲೆನಾದೊಡಮೆನಗೆ ಶಾಪಾಂತಕಾರಣಮಂ ಬೆಸಸೆಂಬುದುಂ ನೀನಾವಂಗೆ ವಾಹನಮಾಗಿಪ್ಪೆ ಯಾತಂ ಮಲುಮೆಯ್ಗೊಸಲ್ವ ಸಮಯದೊಳಚ್ಛೋದಸರೋವರ ಸಲಿಲದೊಳ್ ಮುಳುಂಗೆ ವಿಗತಶಾಪನಪ್ಪೆಯೆಂದು ವೈಮಾನಿಕನೆನಗೆಪೇಳ್ವುದುಮಾನಾತಂಗೆ ಮತ್ತಮಿಂತೆಂದೆಂ ॥

೬೧೪. ಕೆಚ್ಚನಾಗೆ—ಕೆಂಪಾಗಲು ; ಬಿಚ್ಚನೆಬಿಟ್ಟ—ವಿಸ್ತಾರವಾಗಿಬಿಟ್ಟ.
೬೧೫. ಉರದೆ—ತ್ವರೆಯಿಂದ ; ತಾಳ್ದಿ—ಹೊಂದಿ ; ಪೋ—ಹೋಗು.

*[ಯವಿತಕಸ್ವಯಂಮಿತ್ರ] †[ಪೂಜ್ಯಮಾನನಮಾಗಿ] ‡[ವೈಮಾನಿಕಚರದಿಂದಾವುದು]

ಕಂ ॥ ಜನಿಯಿಸಿದಪ ರೆನ್ನಯ ಕೆಳೆ । ಯನು ಮಾಚಂದ್ರಮನು
ಮಿನ್ನಿಳಾತಳದೊಳವ ॥ ರ್ಜನಿಯಿಸಿದಲ್ಲಿಯೆ ಜನಿಯಿಸು । ವಿನಿತಂ ನೀಂದ
ಯೆಯಿ ನೆನಗೆ ಮಾಡಲೆವೇಳ್ಕುಂ ॥ ೬೧೭

ವ ॥ ತುರಂಗತ್ವಮೆನಗೆ ಮಾಡಿದೊಡ ಮೆನ್ನ ಕೆಳೆಯನೊಡಗೂ
ಡಿ ಕಾಲಮಂ ಕಳಿಪುವಂತು ನಿನ್ನ ದಿವ್ಯಚಕ್ಷುಗಳಿಂ ನೋಡಿಬೆಸಸೆಂಬುದುಂ
ಸಮಯನಾಗಿ ತನ್ನೊಳ್ಕಱಪುಬೇಗಂ ವೈಮಾನಿಕಂ ಜಾನಿಸಿ ತಿಳಿದೆನ್ನನಿಂತೆಂ
ದ ನುಜ್ಜಯಿನಿಯೊಳಪತ್ಯಾರ್ಥ ಮನೇಕವ್ರತಾಚರಣ ತತ್ಪರನಪ್ಪ ತಾರಾಪೀ
ಡನೆಂಬ ಚಕ್ರವರ್ತಿಗೆ ಸಕಲಕಲಾಭಿರಾಮನುಂ ವಿಬುಧಜನಸೇವ್ಯನುಂ
ಕುವಲಯಾನಂದಕರನುಂ ಯಶಶ್ಚಂದ್ರಿಕಾಧವಳಿತಭುವನನು ಮೆನಿಸಿ ಚಂದ್ರಾ
ಪೀಡನೆಂಬ ಪೆಸರಿಂ ಚಂದ್ರಮನೆ ಬಂದುದಯಿಸಿದಪ್ಪ ನಾತನಮಂತ್ರಿ ಶುಕ
ನಾಸನೆಂಬಂಗೆ ನಿನ್ನ ಕೆಳೆಯನಪ್ಪ ಪುಂಡರೀಕಂ ವೈಶಂಪಾಯನನೆಂಬ ಪೆಸ
ರಿಂ ಪುಟ್ಟಿದಪ್ಪ ನಾ ಚಂದ್ರಾವತಾರನೆನಿಸಿವ ರಾಜಕುಮಾರಂಗೆ ನೀಂವಾಹನ
ಮಾದಪ್ಪೆ ಯೆಂಬುದುಂ ॥ ೬೧೮

ಕಂ ॥ ಅಂತಾವೈಮಾನಿಕ ವಚ । ನಾಂತದೊಳಾ ತುರಗರೂಪಮಂ
ತಳೆದಾಕಾ ॥ ಶಾಂತರದಿಂ ದಿಳಿದು ಸಮು । ದ್ರಾಂತರದೊಳ್ಬಿಳ್ದೆ ನೆನ್ನ
ಕರ್ಮಾಂತರದಿಂ ॥ ೬೧೯

ವ ॥ ಅನ್ನೆಗಮಿಳಿದುಂ ಪಾರಸೀಕಾಧಿರಾಜನೆನ್ನಂ ಕಂಡುಪಿಡಿದೊ
ಯ್ದು ತಾರಾಪೀಡನರೇಂದ್ರಂಗೊಪ್ಪಿಸೆ ತದೀಯನಂದನನೆನಿಸಿದ ಚಂದ್ರ
ಮೂರ್ತಿಯಪ್ಪ ಚಂದ್ರಾಪೀಡಂಗೆ ವಾಹನಮಾಗಿರ್ದು ಕಿನ್ನರಮಿಥುನದ
ಬೆಳಸಲ್ಕೆನೆವಿಂ ನಿನ್ನಂ ಕಾಣಿಸಲೆಂದೀ ಚಂದ್ರಾವತಾರನ ನೀಪ್ರದೇಶಕ್ಕೆತಂ
ದೆ ನೆದಲ್ಲದೆಯುಂ ॥ ೬೨೦

---

೬೧೮. ನಸುನಸುಗೆ—ಅತ್ಯಂತವಾಗಿ ನಸುಗೆ; ಮುಱಿಮೆಯಿಗ್ಗ ಸಲ್ಯಸಮಯ
ಮಾಳ್—ಜನ್ಮಾಂತರವನ್ನು ನನೆಯುವಕಾಲದಲ್ಲಿ. ನಡುನಡುಗೆ ಎಂಬಲ್ಲಿ ಅಧಿಕಾರ್ಥ
ದಲ್ಲಿ ದ್ವಿರುಕ್ತಿಯು. ಶ. ಮ. ಸೂ. ೧೯೫.

ವ ॥ ಎಂಬುದುಂ *[ಹಾಮುನಃಪ್ರಿಯು] ಪುಂಡರೀಕ ಜನ್ಮಾಂತರಾವಿಸ್ಕೃತಮದನುರಾಗ ಮತ್ಪ್ರತಿಬದ್ಧಜೀವಿತ ಮನ್ಮಯುಸಕಲಜೀವಿತಲೋ [ಕಮೆಂದುದ್ಗತಶೋ] ಕೆಯಾಗಿ ॥ ೬೨೧

ವೃ ॥ ಮುನ್ನಮದೊರ್ಮೆ ಪಾತಕಿಯೆನಂತಿರೆ ಕೊಂದವಳೆಂ ಭವಾಂತರೋ । ತ್ವ †[ನ್ನನುವಾಗಿ ನೀಂ] ಮದನುರಾಗದಿ ನೀಳ್ತರೆ ಮತ್ತೆ ಕೊಂದೆ ನಾಂ ॥ ನಿನ್ನನೆ ನಿನ್ನನಿಂತು ಮಗುಳ್ದುಂ ಮಗುಳ್ದುಂ ಕೊಲವೇಳ್ಪುದೆಂದು ಪೇ । ಳೆನ್ನನಿದಿಂತು ಪುಟ್ಟಿಸಿದನೇ ವಿಧಿ ರಕ್ಕಸಿಯುಂ ಮನಃಪ್ರಿಯಾ ॥ ೬೨೨

ವ ॥ ಎಂದಿವುಮೊದಲಾಗಿ ಬಹುಪ್ರಕಾರದಿಂ ಪಳವಿಸುವ ಮಹಾಶ್ವೇತೆಯುಂ ಕಪಿಂಜಲನಿಂತೆಂದಂ ॥ ೬೨೩

ಕಂ ॥ ಹೃದಯಪ್ರಿಯುನ ಸಮಾಗಮ । ನದೃಢಪ್ರತ್ಯಾಶೆಯಿಂದೆ ಘೋರತಪಃಕ್ಲೇ ॥ ಶದಿ ನೊಂದಿ ನಿಂದೆಗೆಡೆಯು । ಲ್ಲದ ನಿನ್ನಂ ನೀನಿದೇಕೆ ನಿಂದಿಸಿದಪ್ಪೆ ॥ ೬೨೪

ವ ॥ ಇದೆಲ್ಲಂಮದ್ವಯಸ್ಯಂಗಂ ಚಂದ್ರಾವತಾರಂಗ ಮೋರೊರ್ವ್ವರ ಶಾಪದಿಂದಮೆ ಸಮನಿಸಿದುದು ನಿನ್ನದೋಷವಲ್ಲೆಂಬುದ ನಾನುಂ ನಿನಗೆ ಪೇಳ್ದೆಂ ಮಿಯತ್ತಳದೊಳಿರ್ದ್ದ ಚಂದ್ರಮಂ ತನ್ನ ದಿವ್ಯವಚನದಿ ನಾಱುಸಿದುದುಮಂ ನೀನುಂ ಕಾದಂಬರಿಯುಂ ಕೇಳ್ದಿರದುಕಾರಣದಿನಶ್ರೇಯಸ್ಕರಮೆನಿಪ್ಪ ಶೋಕಾನುಬಂಧಮ ನಿರ್ವ್ವರುಂ ಮಾಡ ಲಾಗದಭಿಲಷಿತ ಸಿದ್ಧಿಗಂ

---

೬೨೧. ಮತ್ಪ್ರತಿಬದ್ಧಜೀವಿತ—ನನಗೋಸ್ಕರ ಪ್ರಾಣವನ್ನು ಹಿಡಿದಿದ್ದವನಾದ.

೬೨೨. ನಿನ್ನಂ, ಇಂತು—ಹೀಗೆ; ಮಗುಳ್ದುಂ ಮಗುಳ್ದುಂ—ಪುನಃ ಪುನಃ; ಕೊಲವೇಳ್ಪುದೆಂದು—ಕೊಲ್ಲಬೇಕೆಂದು; ಎನ್ನಂ—ನನ್ನನ್ನು; ಇದಿಂತು—ಹೀಗೆ, ಪುಟ್ಟಿಸಿದನೆ.

೬೨೪. ಮದ್ವಯಸ್ಯಂಗಂ—ನನ್ನ ಮಿತ್ರನಾದ ಕಪಿಂಜಲನಿಗೂ; ಸಮನಿಸಿದುದು ಉಂಟಾಯಿತು; ಅಱುಸಿದುದುಮಂ—ಸಮಾಧಾನಪಡಿಸಿದ್ದನ್ನೂ.

*[ಪುನಃ] †[ನ್ನೆಯೊಯಾಗಿಯುಂ]

ದಾವುದೊಂದು ಸದ್ವ್ರತಮ ನಾಚರಿಸುತ್ತಿರ್ದ್ದರದನೇ ನೀವನುಬಂಧಿಸುವುದ ದಲ್ಲದೆಯುಂ ॥ ೬೨೫

ಕಂ ॥ ತಪದಿಂ ಸ್ಮರರಿಪುದೇಹಾ । ರ್ಧಪದದೊಳಾಗೌರಿ ನಿಂದವ್ರೊ ಲ್ಸಿಕ್ಸೈಸೀಂ । ತಪದಿಂ ದಿನಿಯನ ತೊಡೆಯೊಳ್ । ತಪದಿಂ ದೊರಕೊಳ್ಳದಿ ರ್ಪ್ಪ ಫಲವೊಂದುಂಟೇ ॥ ೬೨೬

ವ ॥ ಎಂದು ತಿಳಿಯುವೇಳ್ದು ಮಹಾಶ್ವೇತೆಯುಂ ಸಮಾಶ್ವಾಸಿಸಿದ ಕ ಪಿಂಜಲನಂ ವಿಷಣ್ಣದೀನಮುಖಿಯಾಗಿ ಕಾದಂಬರಿ ಯಿಂತೆಂದಳ್ ॥ ೬೨೭

ಕಂ ॥ ಸಲಿಲಪ್ರವೇಶಮಂ ಪ । ತ್ರಲೇಖೆಯುಂ ನೀವುಮಲ್ತೆ ಮಾ ಡಿದಿರಂತಾ ॥ ಲಸಿನೆಯ ದೇಸಾದಳದಂ । ಜಲಕ್ಕನಾಗೆನಗೆ ಬೆಸಸಿ ವಿಾಗ ಳ್ಸ್ಮನಿಪಾ ॥ ೬೨೮

ವ ॥ ಎಂದು ಬೆಸಗೊಳ್ವುದುಂ ಕಪಿಂಜಲಕ ನೆಂದನಾಂ ಜಲಪ್ರವೇ ಶನಾನಂತರದ ವಾರ್ತೆಯುಂ ಅಱಿದೆನಿಲ್ಲದಱಿ ನೀಚಂದ್ರಾತ್ಮಕನಪ್ಪ ಚಂದ್ರಾ ಪೀಡನುಂ ಪುಂಡರೀಕಾತ್ಮಕನಪ್ಪ ವೈಶಂಪಾಯನನು ಮೆತ್ತಿರ್ದ್ದರೆಂಬುದಂ ಪತ್ರಲೇಖಾವೃತ್ತಾಂತ ಮೇನೆಂಬುದ ಮಾನಱಿಯಲೆಂದೀಗಳಾಂ ಪ್ರತ್ಯಕ್ಷ ಲೋಕತ್ರಯಮನೆನಿಪ ಶ್ವೇತಕೇತು ಮಹಾಮುನಿಗಳಲ್ಲಿಗೆ ಪೋದಪ್ಪೆನೆಂದು ಗಗನತಳಕ್ಕೆ ನೆಗೆದುಪೋದ ನನ್ನೆಗಮಿತ್ತ ಕಾದಂಬರಿ ಚಂದ್ರಾಪೀಡದೇವ ನಂ ನೋಡಿಕಣ್ಬನಿಗಳಂ ತೀವ್ರುವುದುಂ ಮಹಾಶ್ವೇತೆನೋಡಿ ತಂಗಿನೀನಳಲಂ ತಳೆಯದಿರಾಪಿನ್ನರುಂ ಸಮಸುಖದುಃಖ [ವೃತ್ತಿ] ಗಳಾದೆ ಮದಱಿಂ ಪ್ರಿ ಯತಮ ಸಮಾಗಮ ಪ್ರತ್ಯಾಶೆಯಿಂ ಕರಣೀಯಮಾವು ದದನೆ ಮಾಡವೇ ಳ್ಪುದದಱಿಂ ॥ ೬೨೯

ವೃ ॥ ಎನಗಿದು ದೈವಮೆಂದು ಮನದೊಳ್ಪರಿಭಾವಿಸಿ ಕಲ್ಲಮಣ್ಣೊ ರೂ । ಪನೆ ಗಡಪೂಜಿಸುತ್ತಿರೆ ಸುನಿದಮಾದಪು ದೆಂದೊಡಕ್ಕ ನೆ ॥ ಟ್ಟನೆ

---

೬೨೯. ಎತ್ತಿರ್ದ್ದರ—ಎಲ್ಲಿರುವರು ;

೬೩೦. ಕಲ್ಲುಮಣ್ಣು ರೂಪವಾದ ಆಕೃತಿಯನ್ನು ಇದು ನನಗೆ ದೇವರೆಂದು ಪ ರಿಭಾವಿಸಿ ಪೂಜಿಸಿದರೆ ಅದುಕೂಡಾ ಪ್ರಸನ್ನವಾಗುವಲ್ಲಿ ಚಂದ್ರಾಪೀಡನೆಂಬ ಹೆಸರಿನಿಂದ ಇಪ್ಪವ ಚಂದ್ರನನ್ನೆ ಪ್ರತ್ಯಕ್ಷವಾಗಿ ಪೂಜಿಸಿದರೆ ಪ್ರಸನ್ನನಾಗನೆ.

ಮನುಜೇಂದ್ರ ಚಂದ್ರವೆಸರಿಂದೆಸೆವಗ್ಗದ ಚಂದ್ರಮೂರ್ತಿಯುಂ । ಮನ
ವೊಸೆ ದರ್ಶಿಸುತ್ತಮಿರೆ ಸನ್ನಿದನಪ್ಪು ದಿದಾವಸಂದೆಗಂ ॥ ೬೩೦

ವ॥ ಎಂಬುದು ಪದನೆಮನಂಗೊಂಡು ಶೀತವಾತಾತಪ ವರ್ಷಾದಿಸ ರ್ವದ್ವಂದ್ವ ದೋಷರಹಿತಮಪ್ಪದೊಂದು ರತ್ನಶಿಲಾತಲದೊಳ್ ಚಂದ್ರಾಪೀಡ ದೇವನಂ ನಿಲಿಸಿ ದಿವ್ಯವಸನ ಕುಸುಮ ಧೂಪಾನುಲೇಪನಾಭರಣಂಗಳಿ ನಲಂಕರಿಸಿ ತದೀಯ ಚರಣಂಗಳಂ ತೊಡೆಯ ಮೇಲಿಕ್ಕಿಕೊಂಡು ಪರಿಜನ ಮುಂ ಪುರಜನಮುಂ ರಾಜಲೋಕಮುಂ ಬೆರಸಂದಿನಪಗಲುಮ ನಿರುಳು ಮಂ ಕಳೆದು ಮಱುದಿವಸಂ ಕಣ್ದೆಱೆವ ಚಿತ್ರದಂತಿರ್ದ್ದ ಚಂದ್ರಾಪೀಡನ ವಯವಂಗಳುಮನೆಲ್ಲಮ ನೆಳವಿನೋಡಿ ಕಾದಂಬರಿ ಕೆಲದೊಳಿರ್ದ್ದ ಮ ದಲೇಖೆಯುಂ ನೀನುಂ ಭಾವಿಸಿನೋಡೆಂಬುದು ಮಹಾಕೆ ತದ್ದಿವ್ಯಾಕೃತಿಯ ಸಕಲಾಂಗಪ್ರತ್ಯಂಗಂಗಳಂ ನೋಡಿ ೬೩೧

ವೃ॥ ನಗುವಂತಿರ್ದ್ದಪ್ಪುದಿಂತೀ ವದನ ಮುರುಳಿಗೊಂಡಿಪ್ಪ್ದ ದೀಕೇಶ
ವಿಹಾದ್ಯ । ಗ್ಯಗಳಂ ಕನ್ನೆಯ್ದಿಲಂತಿರ್ದ್ದಪು ದರುಣಿಮಮುಂ ಪೋಱುತಿರ್ದ್ದ
ಪ್ಪುವೀ ಮಿಂ । ಚುಗುರುಂ ಹಸ್ತಾಂಘ್ರಿಪದ್ಮಂಗಳು ಮಧರಮು ಮಾದೇಹ
ಲಾವಣ್ಯ ಮಾದಂ । ಮಿಗು *[ತಿಕ್ಕ್ರ್ಗಂತನ್ಮ] ಹಾಭಾಗನ ನುಡಿಯಿದಱಿಂ
ಸತ್ಯವಾಗಿರ್ದ್ದದಲ್ತೇ ೬೩೨

ವ॥ ಎಂದು ನುಡಿದ ಮದಲೇಖೆಯ ಮಾತಿನೊಳ್ ನಿರ್ಭರಾನಂದೆ ಯಾಗಿ ಕಾದಂಬರಿ ಮಹಾಶ್ವೇತೆಗಂ ಚಂದ್ರಾಪೀಡಚರಣತಳ ನಿಬದ್ಧಜೀವಿ ತಮಪ್ಪ ರಾಜಲೋಕಕ್ಕಂ ಪ್ರಿಯತಮಾಕೃತಿಯಂ ತೋಱಲೊಡ ಮವ ರ್ವಿಸ್ಮಯೋತ್ಫಲ್ಲ ಲೋಚನರು ಮಾವಿಷ್ಕೃತಾನಂದರುಮಪ್ಪದು ಮನಂ ತರಂ ಸಖೀಜನಂಬೆರಸು ಚಂದ್ರಾಪೀಡದೇವನ ನಲಂಕರಿಸಿ ಶರೀರಸ್ಥಿತಿಕರ ಣಾರ್ಥಂ ಸಕಲರಾಜಲೋಕಮಂ ವಿಸರ್ಜಿಸಿ ಮಹಾಶ್ವೇತಾನುರೋಧದಿಂ

---

೬೩೨. ಈಕೇಶಂ, ಉರುಳಿಗೊಂಡಿಪ್ಪ್ದದು—ಸುರುಳಿಯಾಗಿ ಸುತ್ತಿಕೊಂಡಿರು ವದು ; ಈ ದೇಹಲಾವಣ್ಯಂ, ಆದಂ—ಅಂತ್ಯವಾಗಿ; ಮಿಗುತಿಕ್ಕ್ರ್ಗಂ—ಹೆಚ್ಚುತ್ತಿರು ವದು.

*[ತಿರ್ದತ್ತಾಮ]

ಕೃತಫಲಜಲಾಹಾರೆಯಾಗಿ ತದನಂತರಂ ಮದಲೇಖೆಗೆಂದಳಿನ್ನೆಗ ವೆನಗೀ ಮನೋಹರಂ ಸನ್ನಿದನಪ್ಪನನ್ನೆವರ ವಿಯಾತೆಯಿಂ ದಿರಲ್ವೇಡಿದಿರ್ದ್ದಾದಲುಂ ವಿಸ್ಮಯಮುಪ್ಪೀ ವೃತ್ತಾಂತಮ ನಾದ್ಯಂತವಾಗಿ ತಾಯ್ತಂದೆಗಳ್ಗೆ ತಿಳಿಯ ವೇಳ್ದು ಸಮಾಧಾನಮುಂ ಮಾಳ್ಪುದೆಂದಾಕೆಯುಂ ಬೇಗಂಪೋಗಲ್ವೇಳ್ದಂದಿ ನಂಮೊದಲಿಂ ಚಂದ್ರಾಪೀಡಚರಣಕಮಲಂಗಳಂ ದೃಢಪ್ರತ್ಯಯದಿನಾರಾಧಿಸುತ್ತಿ ರ್ದ್ದಳನ್ನೆಗಂ ೬೩೩

ವೃ॥ *[ಪರೆಯೆ ಮುಗಿಲ್] ಲ್ಜಲಕ್ಕಸಿರ †[ಲೆ] ಣ್ದೆಸೆ ನೀರ್ತೆಗೆಯಲ್ಕೆ ‡[ಬೆಳ್ಮಳ] ೧ ಲ್ಪೆರೆಗಳ ನಪ್ಪುಕೆಯ್ಯೆ ತೊಡೆಚೆ ಶಾಲಿವನಾಳಿಯ¶[ಪೆಂಪಿಸಿಂಪಿ]ನಾ । ವರಿಸೆ ಪ್ರೊಲಂ ಸರೋಜಕುಮುದೋಜ್ವಲಮಾಗೆ ಕೊಳಂ ಪಳಚ್ಚ ನಾ । ಗಿರೆ ಶರತ್ಸ್ಮಿ ಬಂದುದತಿನಿರ್ಮಳ ನೀರದಮಪ್ಪ ಶಾರದಂ ೬೩೪

ವ॥ ಅನ್ತು ಬಂದ ಶರದಾಗಮದೊ ಳೊಂದುದಿವಸಂ ಚಂದ್ರಾಪೀಡ ಚರಣಮೂಲೋಪವಿಷ್ಟೆಯಾದ ಕಾದಂಬರಿಯಲ್ಲಿಗೆ ಮೇಘನಾದಂ ಬಂದು ತದೆಮುವಕರ್ತ್ಕಂಲಿತರಾಗಿ ತಾರಾಪೀಡದೇವನುಂ ವಿಲಾಸವತೀಮಹಾದೇವಿ ಯುಂ ಮಾರ್ಯಶುಕನಾಸನುಂ ವಾರ್ತಾಹರರ ನಟ್ಟಿಗೊಡವರು ಮರಸನಂ ಕಾಣಲೆಂದು ಬಂದಿರ್ದ್ದಪರಿಲ್ಲಿಗೆತಕ್ಕುದಂ ದೇವಿಯರೆ ಬಲ್ಲಿರೆಂದು ಬಿನ್ನವಿ ಸುವ್ರದುಂ ಕೇಳ್ದನೆ ವಿಚಿತ್ರವೃತ್ತಾಂತಸ್ಮರಣ ಪರಿಕ್ಷುಬ್ಧಹೃದಯೆಯುಂ ಗದ್ಗದಿಕಾವಗೃಹ್ಯಮಾಣ ಕಂಠೆಯುಮಾಗಿಕಾದಂಬರಿ ಕಿಱಿದುಬೇಗಂ ತನ್ನೊಳೆ ಚಿಂತಿಸುತ್ತು ಮಿಂತಾನುಂ ವಾರ್ತಾಹರರಂ ಬರವೇಳೆಂಬುದು ಮೇಘನಾದಂ ತಂದುಕಾಣಿಸಿ ಚಂದ್ರಾಪೀಡಚರಣಂಗಳ್ಗೆ ದೂರದೊಳೆ ಸ ರ್ವಾಂಗಾಲಿಂಗಿತ ಮಹೀತಳರಾಗಿ ಪ್ರೊಡಮಟ್ಟು ಕುಮಾರನಂ ಕಾಣುತ್ತೆ ಕೌತುಕದಿ ನಮಿತೋತ್ಪಕ್ಷ್ಮ ನಿಶ್ಚೃತದೃಷ್ಟಿಗಳುಂ ಖಿನ್ನವದನರು ಮಾದ ವಾರ್ತಾಹರರಂ ನೀಡುಂನೋಡಿ ಕಾದಂಬರಿ ಯಿಂತೆಂದಳ್ । ೬೩೫

೬೩೪. ಣ್ದೆಸೆ—ಎಂಟುದಿಕ್ಕುಗಳೂ; ಜಲಕ್ಕಸಿರಲೆ—ನಿರ್ಮಲವಾಗಿರಲು; ತೊಡೆಚೆ—ತೋರಿಗಳು; ನೀರ್ತೆಗೆಯಲ್ಕೆ—ನೀರು ತಗ್ಗಿಹೋಗಲು; ಬೆಳ್ಮಳಲ್ಪೆರೆ ಗಳ—ಬೆಳ್ಳಗಿರುವ ಮರಳಿನ ತೆರೆಗಳನ್ನು; ಅಪ್ಪುಕೆಯ್ಯೆ—ಪಡೆಯಲು; ಪಳಚ್ಚನಾ ಗಿರೆ—ನಿರ್ಮಲವಾಗಿರಲು.

*[ಪರೆವಮುಗಿಲು] †[ದೆ] ‡[ಬೆಳ್ಪ?] ¶[ಕೆಂಪುನಿಂಪ]

ವೃ॥ ಇದುಪೇದಪ್ರದಮಲ್ತು ವೃತ್ತಕವಿದಾಶ್ಚರ್ಯಪ್ರದಂ ಮರ್ತ್ಯನೆಂ । ಬುದು ಪೇಡೀವಿಘು ದೇವತಾತ್ಮ ನಿದಸೀವಕ್ಕೆಂದು ಪೇಳುತ್ತಮಿ । ರ್ದುದು ದಲ್ಪೇಳ್ವುದು ಪೋಗಿನೀವಿದಱು ನೀಂಗಳ್ಬೇಗ ವಚೆಕ್ಕೊಡೆ ತ್ರೀ । ರದೆಱೊಳಿರ್ದ್ದಂ ನೃಪಚಂದ್ರನೆಂಬಿದನೆ ರಾಜೇಂದ್ರಂಗೆ ನಿರ್ವ್ಯಾಕುಳಂ ॥ ೬೩೬

ವ॥ ಎಂಬುದುಂ ಪ್ರತ್ಯಕ್ಷಿತಸಕಲ ವೃತ್ತಾಂತನಪ್ಪನ ನೆಪೆಯ್ಮೊಡನೆ ದೇವಿಯುರ್ವ್ವಿಸಸುವುದೆನೆ ಕಾದಂಬರಿಯುಂ ಮದನೆ ಮನಂಗೊಂಡು ಮೇಘನಾದಂಗೆ ಬೆಸಸುವುದು ಪೂತಂ ತ್ವರಿತಗತನೆಂಬ ಕುಮಾರಸೇವಕನಂ ಕರೆದೀವೃತ್ತಾಂತಮಂ ತಾರಾಪೀಡದೇವಂಗೆ ಬಿನ್ನವಿಸಿ ಬಾಯೆಂಬುದು ವಾರ್ತಾಹರರೊಡನೆ ಪೋಗಲ್ವೇಳ್ವುದು ಮಾತ್ವರಿತಗತ ನತಿವೇಗದಿಂದ ಮಂಬಿರೊಡನೆ ಕೆಲವಾನುಂದಿವಸಂಗಳಿ ನುಜ್ಜೈನಿಯನೆಯ್ದಿ ಪುಗುವಾಗಳುಜ್ಜೈನಿಯನಿವಾಸಿಗಳಪ್ಪನರಪತಿಪ್ರಭೃತಿಬಂಧುಜನಂಗಳ್ ತಂತಮ್ಮವರವೃತ್ತಾಂತಂಗಳಂ ಬೆಸಗೊಳಲದಕ್ಕೆಲ್ಲದತ್ತ ಪ್ರತಿವಚನದಾಗಿ ರಾಜಭವನಮಂ ನೆಯ್ದೆವಪ್ಪುದು ಮತಿಸಂಭ್ರಮದಿಂ ಪರಿಜನಂಗಳ್ ತಮತಮಗೆ ಪರಿತಂದು ಚಂದ್ರಾಪೀಡದೇವನತ್ತಣಿಂ ವಾರ್ತಾಹರ ರ್ಬ್ಬಂದರೆಂದು ವಿಲಾಸವತೀಮಹಾದೇವಿವೆರಸಿರ್ದ್ದ ತಾರಾಪೀಡದೇವಂಗೆ ಬಿನ್ನವಿಸಲೊಡ ನಾನಂದಬಾಷ್ಪಲುಳಿತಲೋಚನನುಂ ವಾರ್ತಾಹರಾಗಮನಸವತ್ತ್ವೃಷ್ಟಿಯುಮಾಗಿ ॥ ೬೩೭

ವೃ॥ ಇದು ಪಿರಿದಪ್ಪ ಜೇವಸದಬೀಡು ಪಥಶ್ರಮದಾಗರಂ ಪ್ರವಾ । ಸದ ಪೊವಲೆಂಬಿನ ವಿವಿಧವೈಪಥಪಾಂಸುಗಳಿಂದೆ ನಾಡೆಸೀ । ಱಿದ ತಲೆಯುಂ ಕರಂ ಮಲಿನಮಾದ ಪಟಚ್ಚರಮುಂ ನೆಗಳ್ಚಲಂ । ದಿದಿರೊಳೆ ಲೇಖವಾಹನಿವಹಂ ಬರೆಕಂಡ ನಿಳಾಧಿನಾಯಕಂ । ಆನ್ತು ಕಂಡು ॥ ೬೩೮

---

೬೩೬. ಮರ್ತ್ಯನೆಂಬುದು—ಮನುಷ್ಯನೆಂಬ ಬುದ್ಧಿಯು ; ಪೇಡಿ—ನಿಮಗೆತಕ್ಕದ್ದಲ್ಲ.

೬೩೮. ವಿವಿಧವೈಪಥಪಾಂಸುಗಳಿಂದೆ—ನಾನಾಪ್ರಕಾರವಾದ ಅರಣ್ಯಮಾರ್ಗದ ಧೂಳಿಯಿಂದ ; ಸೀಱಿದ—ವಿವರ್ಣವಾದ : ತಲೆಯುಂ,ಮಲಿನಮಾದಪಟಚ್ಚರಮುಂ, ಜೇವಸದಬೀಡು—ದುಃಖದಸ್ಥಾನವುಎಂಬಿದಂ—ಎಂಬುವದನ್ನು ; ನೆಗಳ್ಚಲ್—ಸೂಚಿಸಲು.

ಕಂ॥ ತನಯಂ ಕುಶಲದೆ ಬರುತಿ । ರ್ದನೆ ಪೇಳಮೆನುತ್ತ ಮಂತೆ ವಾರ್ತಾಹರರಂ । ತನಗೆ ಪೊಡಮಡದ ಮುನ್ನಮೆ । ಜನಕಂ ಬೆಸಗೊಂಡ ನಾಗಳುತ್ಕಂಠತೆಯಿಂ ॥ ವ॥ ಅನಲ್ಲದೆಯುಂ ೬೩೯

ಕಂ॥ ಎಂತುಟು ಯುವರಾಜನ । ವೃತ್ತಾಂತಂ ಬರುತಿರ್ದನೆಲ್ಲಿ ತಡದಿ ರ್ದ್ದಂ ತಾ । ನಿಂತೇಕೆ ಬಿನ್ನವತ್ತಲೆ । ಯಂ ತಂದಿರೆ ತೋಱುವೆಂದು ನುಡಿ ವುದುವಾಗಳ್ ॥ ೬೪೦

ವ॥ ಆಲೇಖವಾಹಕ ತ್ವರಿತಗತಸಮೇತಂ ರಾಜಾಧಿರಾಜಂಗೆ ಕೃತ ಪ್ರಣಾಮರಾಗಿ ದೇವ ಚಂದ್ರಾಪೀಡದೇವ ನಚ್ಛೋದಸರೋವರದ ತಡಿಯು ಲ್ಲಿರ್ದ್ದಂ ಮೇಲಾದವೃತ್ತಾಂತಮಂ ತ್ವರಿತಗತಂ ಬಿನ್ನವಿಸಿದಪ್ಪ ನೆನುತ್ತಂ ವಿಷಣ್ಣವದನರಾಗಿರ್ಪ್ಪುದುಂ ವಿಳಾಸವತಿ ಮಹಾದೇವಿ ಯಿಂತೆಂದಳ್ ॥

ವೃ॥ ನಿರುದ್ಧನಿಜಬಾಷ್ಪಮೋಕ್ಷ ರತಿದುಃಖದೀನಾನ । ಪ್ಪರಿಚ್ಯು ತಮುಂದ ಮ್ಮರ್ದಾಸನ ವಿಲೋಕನತ್ರಸ್ತರಿಂ ॥ ತಿರಲ್ಕೆ ಬೆಸಗೊಳ್ವುದೇಂ ಮಗನದೊಂದು ವೃತ್ತಾಂತಮಂ । ನಿರಾಕುಳಮೆಪೇಳ್ದರಾಂ ನೆರೆಯೆ ಕೇಳೆ ನಿನ್ನೆಲ್ಲಮಂ ॥ ೬೪೨

ವ॥ ಎನುತ್ತಂ ಪುತ್ರಸ್ನೇಹ ಕಾತರಹೃದಯೆ [ಯಾದುದಱಿಂ] ಬ ಹುಪ್ರಕಾರದಿಂ ಬಾಯುಳಿದು ಪಳವಿಸುತ್ತಂ ಮೂರ್ಛಾಪ್ರಪನ್ನೆಯಾಗಿ ಕಿಱಿ ದಾನುಂಜೇಗಕ್ಕೆ ಶಿಶಿರೋಪಚಾರಂಗಳಿಂ ಲಬ್ಧಚೇತನೆಯು ಮರ್ದ್ಧೋನ್ಮೀಲಿತ ಲೋಚನೆಯು ಮಾದವಿಳಾಸವತೀ ಮಹಾದೇವಿಯುಂ ಬಾಷ್ಪಗದ್ಗದಕಂಠ ನಾಗಿ ತಾರಾಪೀಡ ನಿಂತೆಂದಂ ॥ ೬೪೩

ಕಂ॥ ಮಗನಾ *[ದ ನೆನಿ] ಸ್ವರ್ಗಿ । ನೆಗಳ್ತೆ ನಮಗೇಕೆ ಬೇಡ ಕೇಳ್ವೆಂ ಸಾವ । ನ್ನೆಗ ವಿನಿಸಂ ಮತ್ತಂ ತ್ವರಿ । ತಗತನೆ ತಾಂ ಪೇಳಲಿರ್ದ ನೆಂಬುದನೀಗಳ್ ॥ ೬೪೪

---

೬೪೪. ಮಗನಾದನೆನಿಪ್ಪವರ್ಗೆ—ಮಗನಿಂದ ಆಗತಕ್ಕ ಪ್ರಯೋಜನವನ್ನು ಪಡೆದವರಿಗೆ; ನೆಗಳ್ತೆ—ಆ ನಡತೆ, ಅಂದರೆ ಅವನ ಸಾಸಿವೃದ್ಧಿಯನ್ನು ವಿಚಾರಿಸುವದರಿಂದುಂಟಾಗುವ ಮಾತುಸುಖಗಳು ನಮಗೇಕೆ, ಬೇಡ—ಸುಖದುಃಖಾದಿಗಳು ಬೇಡ; ತ್ವರಿತಗತಂ, ತಾಂಪೇಳಲಿರ್ದನೆಂಬುದಂ—ನಾನು ಹೇಳುತ್ತೇನೆ ಎಂಬುವನ್ನು; ಸಾವನ್ನೆಗಂ—ನಾನು ಪ್ರಾಣತ್ಯಾಗವನ್ನು ಮಾಡುವವರೆಗೂ; ಕೇಳ್ವೆಂ—ಕೇಳುವೆನು.

*[ದುದನ]

ವ॥ ಎಂದಾತ್ಮಚರಿತಗತಮಂ ಬೆಸಗೊಳ್ವುದುಮುಮಂ ವೈಶಂಪಾಯನ ವ್ಯತಿಕರದಿಂ ಚಂದ್ರಾಪೀಡದೇವಂಗಾದ ವೃತ್ತಾಂತಮುಮಂ ತತ್ಕ್ಷಣದೊಳ್ ವಿಸ್ಮಯಮಪ್ಪಾಗಳಾಕಸ್ಮಿಕ ಮಾಗಸದೊಳೊಗೆದ ದಿವ್ಯವಚನಮುಮಂ ನನಂತರಮಾಪತ್ರಲೇಖೆಯೊಡನಚ್ಛೋದ ಸರೋವರದೊಳ್ ಮುಳುಂಗಿದಿಂದ್ರಾಯುಧಮೆ ವಿಗತಶಾಪನಾಗಿ ಕಪಿಂಜಲಕನೆಂಬ ಕುಮಾರನಾದುದುಮುಂ ನಾತನೆ ಮಹಾಶ್ವೇತೆಯಲ್ಲಿಗೆ ವಂದು ಪರಸ್ಪರಶಾಪದಿಂ ಸಕಲಕಳಾಭಿರಾಮನುಂ ವಿಬುಧಜನಸೇವ್ಯನುಂ ಯಶಶ್ಚಂದ್ರಿಕಾಧವಳಿತಸಕಲಭುವನನುಂ ಕುವಲಯಾನಂದಕರನು ಮೆನಿಸಿದ ಚಂದ್ರಮನೆ ದೇವರ್ಗ್ಗೆ ಚಂದ್ರಾಪೀಡನಾಗಿ ಪುಟ್ಟಿದನೆಂಬುದಮಂ ನವರ್ಕ್ಕೆತಿಪಯದಿನದಿಂ ಪ್ರತ್ಯುಜ್ಜೀವಿತರಾದಪ್ಪುದಮಂ ತದ್ವಚನಾನುರೂಪಮಾಗಿ ಚಂದ್ರಾಪೀಡದೇವನ ದಿವ್ಯದೇಹದೊಳಾದ ವೃಥೆತರ ಪ್ರತ್ಯಯೋತ್ಪಾದಕಂಗಳೆನಿಸಿದ ಪ್ರತಿದಿನಪ್ರವರ್ಧಮಾನ ಲಾವಣ್ಯಾದ್ಯನೇಕ ಚಿಹ್ನಂಗಳುಮನಾದ್ಯಂತಂ ಬಿನ್ನವಿಸೆ ನಿರತಿಶಯಶೋಕಾಕರಮುಂ ದುಶ್ರವಮುಂ ವಿಸ್ಮಯೋತ್ಪಾದಕಮುಂ ಮತಿಕೌತುಕಜನಕಮುಮಪ್ಪ ವೈಶಂಪಾಯನನವೃತ್ತಾಂತಮಂ ತಾರಾಪೀಡದೇವಂ ಕೇಳ್ದು ಕೆಲದೊಳ್ ನಿರ್ವಿಶೇಷಾವಸ್ಥನಾಗಿರ್ದ್ದ ಶುಕನಾಸನ ಮೊಗಮಂ ನೋಳ್ಪುದು ಮಾಮಂತ್ರಿಮುಖ್ಯಂ ತದವಸ್ಥನಾಗಿಯುಂ ಸುಹೃದ್ದುಃಖಾಪನೋದನಾರ್ಥಂ ಸ್ವಸ್ಥನಂದದಿಂ ನರೇಂದ್ರನ ನಿಂತೆಂದಂ ॥ ೬೪೫

ವೃ॥ ಉದಯಿಕ್ಕುಂ ಪರಮೇಶ್ವರೇಚ್ಛೆಯೊಳ್ ಮೋಹಾಂಧ್ಯದಿಂ ಮೋಹ್ಯಕ । ರ್ಮದನೆ ಮೋಹ್ಯಸ್ತು ನಿಜಸ್ವಭಾವದೊಳ್ ಮೋಹ್ಯವೈಚಿತ್ರ್ಯಮಂ ಕೂಡೆಕೆ । ಳ್ದದ ಸಂಸಾರದೊ ಳಂದುಮಿಂತೆ ಸುಖದುಃಖಾದಿಪ್ರಸಂಗಕ್ಕೆ ಪು । ಟ್ಟಿದ ನಾನಾವಿಧಮಪ್ಪ †[ಭೂತ] ತನಿಮಹಕ್ಕಾ [ರಬ್ಧ] ಕಾರ್ಯೋದಯಂ ॥ ೬೪೬

ಕಂ॥ ಇದಜಿರೊಳ್ ಯುಕ್ತಿಯನಾರ । ಯ್ವ *[ದಿರುಗ್ರವಿಷ] ಪ್ರಸುಪ್ತ

೬೪೩. ಧ್ಯಾನದೆ—ದೇವತಾಮೂರ್ತಿಧ್ಯಾನದಿಂದ; ವಿಷಪ್ರಸುಪ್ತಂ, ಎಚ್ಚರ್ಪ್ಪಂ—ಬದುಕುವನು; ದಲ್—ನಿಶ್ಚಯವು: ಇದಜಿರೊಳ್—ಈ ವಿಷಯದಲ್ಲಿ; ಯುಕ್ತಿಯಂ—ಯಾವಸಂಬಂಧವನ್ನು; ಅರಯ್ವದಿರ್—ಹುಡುಕದಿರ, ಅಂದರೆ ದೇವತಾ

ನೆಚ್ಚಿಪ್ಪರ್ಗಂ ಧ್ಯಾ ॥ ನದೆದಲ್ ಕಾಬ್ಬೊರ್ನ್ನಂ ತಿರು । ಗಿದಪ್ಪು ದಯಸ್ಕಾಂತ [ಶಕ್ತಿ] ಯೆಲ್ಲಿತ್ತದಱೊಳ್ ॥ ೬೪೭

ವ॥ ಮತ್ತಂ ಮದ ಮಾಂದ್ಯೋತ್ಪಾದನಾಪಹರಣ ಮಾರಣ ವಶೀಕರಣ ವಿದ್ವೇಷಣಾದಿಗಳ್ಗೆ ಪೆಱವುವಿಾದೊರೆಯವಕ್ಕೆರ್ ಪಿರಿಗು ಮಾಗಮಂಗಳೆ ಪ್ರಮಾಣಂಗಳಲ್ಲದೆಯುಂ ಪುರಾಣ ರಾಮಾಯಣ ಭಾರತಾದಿಗಳೊಳಂ ಶಾಪ *[ಕಥನಂಗಳನೇಕಪ್ರಕಾರಮಿಪ್ಪರ್ವವೆಂತೆನೆ] ॥ ೬೪೮

ವೃ॥ ಸಮನಿಸಿದತ್ತು ಕೇಳಜಗರತ್ವ ಮಗಸ್ತ್ಯನದೊಂದುಶಾಪದಿಂ । ದಮೆ ಸುರರಾಜನಪ್ಪನಹುಷಂಗೆ ವಸಿಷ್ಠನ ಶಾಪದಿಂದ ವ ॥ ಷ್ಟಮವಸುಗಳ್ತೆ ಶಂತನುತನೂಜತೆ ಸಾರ್ದುದು ಶುಕ್ರಶಾಪದಿಂ । ದಮೆ ದೊರೆಕೊಂಡುದಲ್ಲವೆ ಯಯಾತಿಗೆ ಯೌವನದೊಳ್ಜರಾಗಮಂ । ಅದಲ್ಲದೆಯುಂ ॥ ೬೪೯

ಕಂ॥ ತ್ರಿಜಗದ್ವಂದಿತನೆನಿಸಿ । ರ್ದ್ದಜನಾ ಜಮದಗ್ನಿಗಖಿಳ ಭುವನಪ್ರಭು ಪಂ । ಕಜನಾಭಂ ದಶರಥಭೂ । ಭುಜಂಗೆ ಸುತರಾದ †[ನೆಂಬುದಂ ಕೇಳ್ಮೊದಲೊಳ್] ॥ ೬೫೦

ಜನಿಯಿಸುವರಲ್ತೆ ದೇವ । ರ್ಮ್ಮನುಜರ್ಗ್ಗದಱಿಂದೆ ಸಂದೆಯಂ ಬಡಲೇಂ ನಾ । ಮನುಜರ್ಗ್ಗೆಂ ಕಿಱಿಯನೆ ನೀಂ । ವನರುಹನಾಭಂಗೆ ಚಂದ್ರನೇಂ ಕಿಱುಕುಳನೇ ॥ ೬೫೧

ಧ್ಯಾನಮಹಿಮೆಯಿಂದ ಅಸಾಧ್ಯವಾದಕಾರ್ಯವೂ ಆಗುವದೆಂದು ತಾತ್ಪರ್ಯವು; ಕಾಬ್ಬೊರ್ನ್ನಂತಿರುಗಿದಪ್ಪುದು—ಸೂಜಿಕಲ್ಲಿನ ಸಾನ್ನಿಧ್ಯದಿಂದ ಕಬ್ಬಿಣವೂ ತಿರುಗುವುದು; ಅದರೊಳ್—ಆ ಕಬ್ಬಿಣದಲ್ಲಿ; ಅಯಸ್ಕಾಂತಶಕ್ತಿ—ಸೂಜಿಗಲ್ಲಿನಶಕ್ತಿಯು; ಎಲ್ಲಿತ್ತು—ಎಲ್ಲಿಯದು; ಅಂದರೆ ವಸ್ತುಸ್ವಭಾವಸಂಬಂಧದಿಂದ ವಿಚಿತ್ರಕಾರ್ಯವುಂಟಾಗುವದೆಂದುತಾತ್ಪರ್ಯವು.

೬೪೮. ಪೆಱವುಂ—ಇತರವಾದ; ಈ ದೊರೆಯವಕ್ಕರ್—ಇಂಥಾವುಗಳಿಗೆ;

೬೫೦. ಅಖಿಳಭುವನಪ್ರಭು, ತ್ರಿಜಗದ್ವಂದಿತಂ, ಅಜಂ, ಎನಿಸಿರ್ದ್ದ, ಪಂಕಜನಾಭಂ—ವಿಷ್ಣುವು; ಜಮದಗ್ನಿಗೆ, ದಶರಥಂಗೆ, ಇಬ್ಬರಿಗೂ, ಸುತರಾದಂ—ಮಕ್ಕಳಾದನು; ಎಂಬುದಂ.

೬೫೧. ಕಿಱುಕುಳನೆ—ಕಡಮೆಯಾದವನೆ.

*[ಕರಣಂಗಳಿಂದನೇಕಪ್ರಕಾರಂಗಳಪ್ಪುದಂಕೆಳಲಪು ದದೆಂತೆನೆ]

†[ರೆಂಬುದಂ ಕೇಳ್ವಮೊದಲ್]

ಕನಸಿನೊಳಾ ಪೇಪಿಯರಾ । ನನಜೊಳ್ಪುಂಡ್ರಪ್ರವೇಶ ಮಾಯ್ತೆಂದು
ನಿರ್ದಯ ‖ ಜನಪತಿನೀಂ ಪೇಳೆನೆ ದಲ್ । ನಿನಗಾನುಂ ಪುಂಡರೀಕಮುಂ ಕಂ
ಡುದುವಂ ‖ ೬೫೨

ಬರ್ಪ್ಪ ಸಮೃತಸ್ವರೂಪದೊ । ಳೊರ್ಪ್ಪಂ ತಾನಿರ್ದ್ದಪಂ ತದಮೃ
ತದಿನಂತಾ ‖ ಯಿರ್ಪ್ಪಗ್ಗಂ ಪ್ರತ್ಯುದ್ಭವ । ಮುರ್ವೀಪತಿ ಸಮನಿಸಿಪ್ಪ
ದೇಂ ಸಂದೆಯಮೋ ‖ ೬೫೩

ವೃ‖ ಭುವನಕ್ಕಾದ ಮಪೂರ್ವಮಾಡುಜೆನಿಸಿರ್ದ್ದಾ ರೂಪು ಮಲಾ
ಣ್ಯಾವೈ । ಭವ ಮಾಕಾಂತಿವಿಶೇಷ ಮಾಜನಮನೋಹಾರಿತ್ವ ಮಾಸತ್ಕಳಾ ‖
ನಿವಹಂ ಶ್ರೀನಿಲಯತ್ವ ಮಾಸಕಲಲೋಕಾಹ್ಲಾದಕಾರಿತ್ವ ಮು । ಕ್ಕುವೆ
ಚಂದ್ರಾತ್ಮಕನಲ್ಲ *[ದಂದು ನೆಗಳ್ದಾ] ರಾಜೇಂದ್ರಚಂದ್ರಾಂಕನೊಳ್ । ೬೫೪

ಪದೆದಾಕಾದಂಬರೀದೇವಿಗೆ ವರನೆ ಭವನ್ನಂದನಂ ಶಾಪ್ವತ್ವೈಶ್ವ । ರ್ಯ್ಯದ
ಪೆಂಪಂ ಲೋಕಪಾಲತ್ವದ ಮಹಿಮೆಯನುತ್ಸಾಹದಿಂ ತಾಳ್ದಿತಪ್ಪೇ । ಹದಿ ನಾವಂ
ಭಕ್ತಿಯಿಂ ನಿನ್ನಡಿಗೆಱಗಿಪಪಂ ತಾನೆ ಚಂದ್ರಂ ದ †[ಲೀಬಂ । ದದಱಿಂ]
ಸೈಪಾವುದಾ ಶಾಪಮೆ ನಮಗೆ ‡[ವರಂ ಶೋಕಮುಂ ಮಾಣ್ಬುದೀಗಳ್] ‖

ವ‖ ಎಂದು ಶುಕನಾಸಂ ತಿಳಿಯಪೇಳೆ ತಾರಾಪೀಡನರೇಂದ್ರಂ ಮತ್ತ
ಮಿಂತೆಂದಂ ‖

---

೬೫೩. ಆ ಇರ್ಪ್ಪಗ್ಗಂ—ಅವರಿಬ್ಬರಿಗೂ : ಪ್ರತ್ಯುದ್ಭವಂ—ಉತ್ಪತ್ತಿಯು
ಸಮನಿಸಿಪ್ಪುದು—ಉಂಟಾಗಿರುವದು ; ಸಂದೆಯಮೇ—ಸಂಶಯವೆ ?

೬೫೫. ಚಂದ್ರಂ—ಚಂದ್ರನು : ತಾನೆ, ಈ ಬಂದು—ಇದೋ ಇನ್ನೇನು ಸ್ವಲ್ಪ
ದಿವಸದಲ್ಲಿ ಬಂದು ; ನಿನ್ನಡಿಗೆಱಗಿಪಪಂ—ನಮಸ್ಕಾರಮಾಡುವನು ; ದಲ್—ನಿಶ್ಚಯವು.
ಅದಱಿಂ ಸೈಪಾವುದು—ಅದಕ್ಕಿಂತಲೂ, ಉತ್ತಮವಾದ ಪುಣ್ಯಾವಾವದು ? ಆಶಾಪಮೆ,
ನಮಗೆ, ವರಂ—ಶ್ರೇಯಸ್ಕರವಾದದ್ದು.

*[ದಂತುನೆಗಳ್ದಂ] †[ಲೀಯೆಂದದಱಿಂ] ‡[ವಲಂಶೋಕಮುಂಮಾಳ್ಪುದೀಗಳ್]

ಕಂ॥ ಉಱಿದುವ *[ವೇನುಂ] ತೋಱವು । ಫಳಿಲನೆತಾಂ †[ತನ್ನ ಕೂರ್ತ್ತತವ್ಯಂಗಾದೊಂ] ॥ ದಳಲಿಂಮಗನೆರ್ದೆಯೊಡೆದುದು । ತೊಳಲುತ್ತಿರ್ಪ್ಪುದು ಮನದೊಳಂ ಕಣ್ಗಳೊಳಂ ॥ ೬೫೬

ಸಂತೈಸಲ್ಕಾರ್ತ್ತೆಪೆನಿ । ಲ್ಲೆಂತುಂನೋಡೆನ್ನ ನಾನೆದಲ್‌ದೇವಿಯನಿ ॥ ನ್ನೆಂತಾವತೆಱದಿನೀಗಳ್ । ಸಂತೈಸುವೆ ನೆನುತಮಂತೆತಾರಾಪೀಡಂ ॥ ೬೫೭

ಪೊರಲ್ಕೇಂಜೀವಿತಸಂ । ಧಾರಣಕಿಂ ಗಮನವೊಂದೆ ಪೊಱಗಾಗಿರೆ ಮು ॥ ತ್ತಾರಯಲುಪಾಯ ವಿಲ್ಲವ । ಧಾರಿಸು [ವುದು] ಮನದೊಳಾರ್ಯೆ ನಮಗಿದು ಕಾರ್ಯಂ ॥ ೬೫೮

ವ॥ ಎಂಬುದುಂ ವಿಲಾಸವತೀಮಹಾದೇವಿ ವಿಲಂಬವಾವುದೇಳಿವೆಂಬುದು ಮಿತ್ತಱತಿಸಂಭ್ರಮೆಯಾಗಿ ಚಂದ್ರಾಪೀಡನ ವೃತ್ತಾಂತವಂ ಕೇಳ್ದು ಮನೋಕ್ಷೆಮೆ ಬರುತ್ತಿರ್ದ್ದಳೆಂಬುದಂ ಕೇಳ್ದು ವಿಲಾಸವತೀಮಹಾದೇವಿಯುಂ ತಾರಾಪೀಡನಿಂತೆಂದಂ ॥ ೬೫೯

ವೃ॥ ಭಾವಿಸು ಧೈರ್ಯವಂ ತನಯರಿರ್ವ್ವರ ವಾರ್ತೆಯನತ್ತ ಕೇಳ್ವುದುಂ । ಜೀವಮನಂತೆ ಪತ್ತುವಿಡುಗುಂ ತನುವಿಂದದಱಿಂದ ಮಾಗಳಿ । ನ್ನಾವುದು ಪಾಯದಿಂದಿನಿತುಮಂ ತಿಳಿವಂತಿರೆ ಮುಂಚೆಪೇಳ್ದು ನೀಂ । ಜೀವಿಸುವಂತು ಸಂತಯಿಸು ಪ್ರೇಗಿಮನೋರಮೆಯುಂ ಮನಃಪ್ರಿಯೇ ॥

ವ॥ ಎಂದುಪೇಳೆ ಪ್ರೇಗಿಮನೋರಮೆಯುಂ ಸಂತೈಸಿ ಮುಂದಿಟ್ಟೊಡಗೊಂಡು ಬಂದಳತ್ತಲಾರ್ಯಶುಕನಾಸಂ ಬಿರಸು ಗಮನಸಂವಿಧಾನವುಂ ಮಾಡಿ ತಾರಾಪೀಡಂಪ್ರೆಱಪಡುವುದುಂ ರಾಜಾದೇಶದೊಳಂ ಚಂದ್ರಾಪೀಡ

೬೫೬. ಮಗನೆರ್ದೆ, ಒಡೆದುದು—ಒಡೆದುಹೋದದ್ದು; ಮನದೊಳಂ, ಕಣ್ಗಳೊಳಂ, ತೊಳಲುತ್ತಿರ್ಪ್ಪುದು—ಸುತ್ತುತ್ತಿರುವದು.

೬೫೮. ಆರ್ಯೆ—ಅಮ್ಮನವರೆ: ಜೀವಿತಸಂಧಾರಣಕೆ—ಪ್ರಾಣಧಾರಣೆಗೆ; ಗಮನವೊಂದೆ, ಪೊಱಗಾಗಿರೆ—ಹೊರತಾಗಿರಲು, ಪೊರಲ್ಕೆಂ—ಸಾಕಾಸಬಂದೇನು; ಅಂದರೆ ನಾವು ಪ್ರಯಾಣಮಾಡದಿದ್ದರೆ ನಮ್ಮ ಪ್ರಾಣ ಪೋಯಾವದಿಲ್ಲವೆಂದಭಿಪ್ರಾಯವು.

*[ವೇನುಂ] †[ತನ್ನಕೂರ್ತಮಂಪಾದೊಂ]

ಸ್ನೇಹದೊಳ್ ಮಾಙ್ಛರ್ಯದರ್ಶನತಾತ್ಪರ್ಯದೊಳಂ ಪ್ರಥಮಗತ ಪಿತೃಮಿತ್ರಭ್ರಾತೃಸ್ವಜನದರ್ಶನೌತ್ಸುಕ್ಯದೊಳಂ ಗೃಹರಕ್ಷಕವರ್ಜಮಾಗುಜ್ಜಯಿನಿಯ ಸಕಳರಾಜಲೋಕಮೆಳ್ದು ನಡೆಗೊಳ್ವುದಂ ಕಂಡಿದು ಶೀಘ್ರಗಮನ ವಿಘಾತಹೇತುವೆಂದು ‖ ೬೬೧

ವೃ‖ ಇರಿಸಲ್ವೇಡಿದ್ದರಂ ಪಿಂದಿರಿಸಿ ಸಕಲರಾಜನ್ಯಕಂ ಸುತ್ತುವಂದೇ । ಳ್ತರಲಶ್ವಾನೀಕಮಾದಂ ಪಥಮನಿರದೆ ಪೀತ್ತರ್ಂದುವ್ರೋಪೇಳವೆಂಬಂ ‖ ತಿರಲೇಳ್ತಂದೆಲ್ಲಿಯುಂ ನಿಲ್ಲದೆ ಕೆಲದಿವಸಕ್ಕೆ ಯ್ದಿದಂ ಪದ್ಮಪತ್ರೋ । ತ್ಕರಕಾಂತಿ ಪ್ರಚ್ಛದಾಚ್ಛಾದಿತಜಲಮೆನಿಪಚ್ಛೋದಮಂ ಸಾರ್ವಭೌಮಂ‖ ೬೬೨

ವ‖ ಅಂತೆಯ್ದಿ ವಿಕಲ್ಪಶತಡೋಲಾಧಿರೂಢನಾಗಿ ವಾರ್ತೆಯನಾರಯ್ಯಲಾಪ್ತರೆನಿಸಿದ ಸಾದಿಗಳ್ಗಂ ತ್ವರಿತಗತಂಬೆರಸಟ್ಟಿದ ನನ್ನೆಗಮುವರ್ವೀರಸುಜ್ಝಿತಾತ್ಮಸಂಸ್ಕಾರಮ *[ಲಿನೀಕೃತ] ಶರೀರರುಂ ಅವನಿತಲನಿವೇಶಿತೋತ್ತಮಾಂಗರು ಮುದ್ಬಾಷ್ಪದೀನತರದೃಷ್ಟಿಗಳುಮಾಗಿ ಲಜ್ಜೆಯಿಂರಸಾತಳಮಂ ಪುಗುವಂತೆ ಬಗೆದು ಮೋಘನಾದಸಹಿತಂ ಬರುತಿರ್ದ ಚಂದ್ರಾಪೀಡಚರಣತಳನಿಬದ್ಧಜೀವಿತರಪ್ಪ ನಿಖಿಳರಾಜಪುತ್ರರಂ ಕಂಡು ಸಮುಲ್ಲಸಿ †[ತತನಯಶೋಕಾಕ್ರಾಂತನಾದೊಡಮುಚ್ಛ್ವಸಿತಹೃದಯನುಂ] ಪೃಥೀಭೂತಚಂದ್ರಾಪೀಡದೇಹಾವಿನಾಶ ಪ್ರತ್ಯಯನುಮಾಗಿ ಪಕ್ಕದಿರ್ದವಿಳಾಸವತೀಮಹಾದೇವಿಯರಂ ತಾರಾಪೀಡನಿಂತೆಂದಂ ‖ ೬೬೩

ವೃ‖ ಬಗೆಯೊಳ್ ಧೈರ್ಯಮನುಂಟುಮಾಡುತನುಮಂ ತಾಳ್ದಿರ್ದಪಂ ನಿಶ್ಚಯಂ । ಮಗನೆಂ ‡[ತುಂತೆಗೆ] ಮೋಘನಾವಸಹಿತಂ ತತ್ಪಾದಪದ್ಮೋಪ

---

೬೬೨. ಸಕಲರಾಜನ್ಯಕಂ—ರಾಜಲೋಕವೆಲ್ಲಾ ; ಸುತ್ತುವಂದು—ಸುತ್ತಿಕೊಂಡು ; ಏಳ್ತರಲ್—ಸಂಗಡಬರಲು ; ಇರಿಸಲ್ವೇಡಿರ್ದರಂ—ಹಿಂದೆ ನಿಲ್ಲಿಸಬೇಕಾದವರನ್ನು ; ಪಥಮಂ—ಮಾರ್ಗವನ್ನು : ಪೀತ್ತರ್ಂದುವ್ರೊ—ಪಾನಮಾಡಿದವ್ರೊ ; ಎಂಬಂತಿರಲ್—ಎಂಬುವಹಾಗೆ.

೬೬೪. ತೆಗೆ—ಶೋಕವನ್ನು ಬಿಡು ; ಅರಮಕ್ಕಳೆಲ್ಲಂ—ಅರಸುಮಕ್ಕಳೆಲ್ಲರೂ

*[ಲಿನಕ್ರೀಡ] †[ತನಯನುಂಉತ್ಸೃಷ್ಟಿತಹೃದಯನುಂ] ‡[ತೊಂದೆಗೆ]

ಜೇ ॥ ವಿಗಳಾಗಿರ್ದ್ದರಸುಮಕ್ಕಳೆಲ್ಲ ವಿದೆನಮ್ಮಂ ಕಾಣಲೆಂದೀಗಳಿ । ಲ್ಲಿಗೆ ಮುಂತೀಬರುತಿರ್ಪ್ಪ ರೀಕ್ಷಿಸಿನಿಸಂ ಪಂಕೇಜಪತ್ರೇಕ್ಷಣೇ ॥ ೬೬೪

ವ ಎಂಬುದುಮದಂಕೇಳ್ದು ಸುತನಿರ್ವಿಶೇಷಮಪ್ಪ ರಾಜಲೋಕ ಮಂ ನೋಡಿ ಧೈರ್ಯಸಂಪತ್ತು ಪಿಟ್ಟೆರ್ದ್ದೆ ಪಡಿಗೆಱೆದಂತಾಗೆ । ೬೬೫

ಕಂ॥ ಬಿಡಸಾಡಿಯೊಡನೆ ಬಳೆದೊಡ । ನೊಡಸಂದಿರ್ದ್ದರಸುಮಕ್ಕ ಳೆಲ್ಲಬ್ಬರೆ ನೀಂ ॥ *[ನಡುವೆಸೆದು] ಬಾರದಾವುದು । ತೊಡಪ್ಪಿನಿಂಪೆಱಗೆ ನಿಂದೆ ಯೊರ್ವ್ವನೆ ಕಂದಾ ॥ ೬೬೬

ವ ಎಂದು ಪ್ರಲಾಪಂಗೆಯ್ವ ವಿಲಾಸವತೀ ಮಹಾದೇವಿಯು ನಾಶ್ವಾ ಸಿಸುತಿರ್ಪ್ಪುದು ಮಖಿಳರಾಜಲೋಕಂ ಬೆರಸು ಮೇಘನಾದನವನಿತಳನಿವೇ ಶಿತೋತ್ತಮಾಂಗನಾಗಿ ॥ ೬೬೭

ವೃ॥ ಎಂತುಟು ಮೇಘನಾದ ತೊಡಕಿಲ್ಲದೆ ಪೇಳ್ಮಗನಿರ್ದ್ದದೊಂದು ವೃ । ತ್ತಾಂತಮ ನೆಂಬುದುಂ ಪ್ರತಿದಿನಂ ನೃಪಚಂದ್ರನ ದಿವ್ಯದೇಹದಿಂ ॥ ಕಾಂತಿಪ್ರದಳ್ದು ಪರ್ವಿಗಗನಾಂತರಮುಂ ಪುದಿದಿರ್ಪ್ಪುದೀ ಗಳೇ । ನುಂ ತಪವಿಲ್ಲ ಸನ್ನಿಹಿತ ನಾದಪನಲ್ತೆ ಭವತ್ತನೂಭವಂ ॥ ೬೬೮

ವ ಎಂದು ಮೇಘನಾದಂ ಬಿನ್ನಪಂಗೆಯ್ಯೆ ಸಮುಪಜಾತಪ್ರತ್ಯಾಶೆ ಯಾಗಿರ್ದ್ದ ವಿಲಾಸವತೀ ಮಹಾದೇವಿಗಿಂತೆಂದಂ ॥ ೬೬೯

ಕಂ ಅಮೃತಾಂಶು ಮೂರ್ತಿಯೆನಿಸಿ । ರ್ದ್ದ ಮಗನ ನೀಕ್ಷಿಸಿ ಕೃ ತಾರ್ಥರಪ್ಪಂ ನಡೆ ಪೋ । ಪ ಮೆನುತ್ತೆ ಮಹಾಶ್ವೇತಾ । ಶ್ರಮಕ್ಕೆ ನಡೆ ತಂದನಂದು ತಾರಾಪೀಡಂ ॥ ೬೭೦

ವ ಆನ್ನೆಗಮಿತ್ತ ಚಂದ್ರಾಪೀಡನ ಗುರುಜನದ ಬರವಂ ಮಹಾ ಶ್ವೇತೆ ಕೇಳ್ದು ಘೊಂಕನೆ ಕಣ್ಬನಿಗಳಂ ಸೂಸಿ ॥

ಕಂ॥ ಕರಗಿಸುತಿರ್ದ್ದಪೆ ಯೆನ್ನಂ । ಮರಣಮು ನೆಮಗೇಕೆ ಮಾಡೆ ವಿಧಿ ಯೆನುತಂ ನಿ । ತ್ತರಿಸದೆ ಲಜ್ಜಿಸಿಪೊಕ್ಕಳ್ । ಪರಿದು ಮಹಾಶ್ವೇತೆ ನಿ ಜಗುಹಾಭ್ಯಂತರಮಂ ॥ ೬೭೧

ವ॥ ಗಂಧರ್ವರಾಜ ನಂದನೆಯುಂ ಮೋಹಾಂಧಕಾರಂ ಕವಿಯೆ ಚಂದ್ರಮೂರ್ತಿಯಪ್ಪ ಚಂದ್ರಾಪೀಡನ ಪಕ್ಕದೊಳ್ ಸಖೀಜನ ಹಸ್ತಾವಲಂಬಿತ ಶರೀರೆ ಯಾಗಿರ್ದ್ದಳಿತ್ತ ಶುಕನಾಸಾವಲಂಬಿತ ಶರೀರನಾಗಿ ತಾರಾಪೀಡಂ ತದಾಶ್ರಮಮಂ ಪುಗುವುದು ಮಲ್ಲಿತನ್ನ ಮಗನೆತ್ತ ವೋದನೆಂದು ನೀಡುಂನೋಡುತುಂ ಮನೋರಮಾವಲಂಬಿತ ಶರೀರೆಯಾಗಿ ವಿಲಾಸವತೀಮಹಾದೇವಿ ಪ್ರೋಕ್ಷ್ಯಸಹಜಮಪ್ಪ ಕಾಂತಿಯೊಳೊಪ್ಪಂಬಡೆದು ಲೆಪ್ಪದಂತಿರ್ದ್ದ ಮಗನಂ ಗೆಂಟಿನೊಳ್ ಕಂಡು । ೬೩೦

ಹ॥ ಇನಿತುದಿವಸಕ್ಕೆಂತಾನುಂ ಕಂಡೆನಪ್ಪುವೆ ಕಂದ [ಹಾ] । ಯೆನುತ ನಿಮಿರಲ್ತೊಳ್ಗಳ್ಕಣ್ಣೀರಪೂರದಲಂದು ಝುು । ವ್ಮನುತೆ ಮೊಳೆವಾಲಾದಂ *[ತಾನೆತ್ತಲುಂ] ತೊರೆದುಚ್ಚಿ ಪಾ । ಯ್ವಿನೆಗ ಮಿರದೇಳ್ತಂದಳ್ ಸೋತ್ಕಂಠೆ ಪುತ್ರವಿಮೋಹದಿಂ ಅನ್ತುಬರುತ್ತಂ— ೬೩೧

ವೃ॥ ಮಱುಮಾತಂ ಕುಡುವತ್ಸ ನಿನ್ನ ವಿನಯಂ ಪೇಳೆತ್ತವೋಯಿತ್ತಾಗಳೀ । ತೆಱನೇಕಾದುದೊ ಕಂದ ಕಾಣ್ಬಿತಿರಪೆಂ ನಿಮ್ಮಯ್ಯನೀಬಂದ ನ ॥ ಳ್ಕಱಿನೊಳ್ನೀಸಿದಿರೆಳ್ದ್ದು ಕಾಲ್ಗೆಱಗು ಚಂದ್ರಾಪೀಡ ನೀಂಭಕ್ತಿಯಂ । ಮಱೆದೈ ನಿನ್ನಯ ಕೂರ್ಮೆಯೆಲ್ಲಿತೆನುತಂ ಬಾಯ್ವಿಟ್ಟು ಪುಯ್ಯಲ್ಚಿದಳ್ ॥

ವೃ॥ ಬಿಡದಾಲಿಂಗಿಸಿ ಪುತ್ರನಂ ಪದೆದು ಮೂರ್ಧಘ್ರಾಣಮಂ ಮಾಡಿ ಕ । ನ್ನಡಿಯುಂತಿರ್ದ್ದ ಕದಂಪನೊತ್ತಿ ಕಡುಪಿಂ ದಿನ್ನೀವೆನಾನೆಂದು ಕೇ ॥ ಸಡಿಯಂ ನೆತ್ತಿಯೊಳಟ್ಟು ಕೊಂಡು ಪಿರಿದೊಂದಾಕ್ರಂದದಿಂ ಗಂಟಲಂ । ದೊಡೆಮಂತಾ ಗಳುತಿರ್ದ್ದಳಪ್ಪಿನೆಗ ವೇಳ್ತಂದಂ ಧರಾಧೀಶ್ವರಂ ೬೩೪

ವ॥ ಅಂತು †[ಬಂದಂತರಿತ ನೀಜಪೀಡ] ನಪ್ಪ ತಾರಾಪೀಡಂ ಚಂದ್ರಾ

---

೬೩೦. ಒಪ್ಪಂಬಡೆದ--ಶೋಭಿಸುತ್ತಿದ್ದ ; ಲೆಪ್ಪದಂತಿರ್ದ್ದ—ಬೊಂಬೆಯಹಾಗಿದ್ದ.

೬೩೧. ತೊರೆದು—ಸ್ತನ್ಯತುಂಬಿ.

೬೩೪. ಕೇಸಡಿಯಂ—ಕೆಂಪಾದಪಾದವನ್ನು.

೬೩೬. ಅಂತರಿತನಿಜಪೀಡನಪ್ಪ—ಮರೆಮಾಡಲ್ಪಟ್ಟತನ್ನ ದುಃಖವುಳ್ಳ.

*[ತೆತಲುಂ] †[ಬಂದನುಚಿತನಿಜಪಿತ]

ಪೀಡನಂ ಪ್ರಜಾಪೀಡಾಪಹರಣಕ್ಷಮಂಗಳಪ್ಪ ಬಾಹುದ್ವಯದಿ ನಪ್ಪಿ ವಿಲಾಸವತೀ ಮಹಾದೇವಿಗಿಂತೆಂದಂ ॥ ೬೭೬

ಕಂ॥ ಬಸುಜರೊಳ್ಳಂನಂ ನವೆ್ನ್ಯಂ । ದುಸುಕೃತದಿಂ ದೇವತಾತ್ಮನೀ ಮಗನಂ ವಾ ॥ ನಿಸನೆಂದು ದೇವಿನೀಂ ಭಾ । ವಿಸಿ ಶೋಕಮನೇನ ನಪ್ಪುಕೆಯ್ಯುದಿರೀಗಳ್ ॥ ೬೭೭

ವ॥ ಮತ್ತಂ ವೈಶಂಪಾಯನ ವಿಯೋಗದಿಂ ವಿಹ್ವಲಿತರಾದ ಮನೋರಮೆಯುಮಂ ಶುಕನಾಸನುಮಂ ನಾಮೀಗಳಾವತೆಱದಿಂ ಸಂತೈಸಲ್ವೇಳ್ಪುದವಲ್ಲದೆಯುಂ ತ್ವದಾತ್ಮಜಾತ ಜೀವಿತಪ್ರತಿಲಬ್ಧಾಭ್ಯುದಯ ಮಹೋತ್ಸವೆಯಪ್ಪ ಗಂಧರ್ವರಾಜತನೂಜೆ ॥ ೬೭೮

ಕಂ॥ ನಿನ್ನಯ ಸೊಸೆ ಕಾದಂಬರಿ । ಯುನ್ನಾಡೆಯು ಮೊದಮನ್ನ್ಯವಿಂದಂ ಮುೞ್ಗಿರ್ ಪನ್ನೆಯೆನಿಸಿಪ್ಪರ್ ಳೆಚ್ಚುಱು । ನನ್ನೆವರಂ ದೇವಿ ತೊಡೆಯ ಮೋಲಿಟ್ಟೀಗಳ್ । ಎಂದುತಾರಾಪೀಡಂ ನುಡಿಯೆ ೬೭೯

ಕಂ॥ ಅತಿಸಂಭ್ರಮದಿಂದಂ ಸತಿ । ಸುತನಂ ಬಿಟ್ಟಲ್ಲಿನ ಳ್ಮದನ್ವಯಜೀವ ॥ ಪ್ರತಿಲಂಭನಹೇತು ವೆನು । ತ್ತತಿಸಂಮೋಹದೊಳೆ ಹೃದಯಮಂ ತಾನೆಳವಿ ॥ ೬೮೦

ವೃ॥ ಮಗಳೆ ತೆಱನೀಂ ಕಣ್ಣಿಂ ನೀನಿಲ್ಲದನ್ನೆಗ ವಾಸೆಯಿ । ಲ್ಲಗಡ ಬಳಯಂ ಚಂದ್ರಾಪೀಡಾಂಕನಂ ಪಿಡಿದಳ್ಕಱಂ ॥ ಪಗಲದಿನಿತುಂ ಕಾಲಂಪ್ರೊಫ್ಪಿರ್ದಿರ್ ನೀನಮೃತಾಂಗಿಯ್ಯಿ । ಮಗುಳ್ದು ಮದಱಿಂ ಕಂಡೆಂ ರಾಜೇಂದ್ರಚಂದ್ರನ ವಕ್ತ್ರಮಂ । ೬೮೧

ವ॥ ಎಂದು ವಿಲಾಸವತೀಮಹಾದೇವಿ ನುಡಿದು ಚಂದ್ರಾಪೀಡ ನಾಮಗ್ರಹಣದೊಳಂ ಪ್ರಿಯತಮಸ್ಪರ್ಶನಿರ್ವಿಶೇಷಮಪ್ಪ ಕರಸ್ಪರ್ಶದೊಳಂ ಮೂರ್ಛೆಯಿಂದೆೞ್ಚತ್ತು ನೋಡಿ ನಮ್ರಮುಖಿಯಾದ ಕಾದಂಬರಿಯಂ ಮದಲೇಖೆವೆಲ್ಲನೆತ್ತಿ ॥ ೬೮೨

---

೬೮೦. ಪ್ರತಿಲಂಭನಹೇತು—ದೊರೆಯುವುದಕ್ಕೆ ಕಾರಣವಾದ ; ಎಳವಿ—ಸವೆದು ; ಎಳವಿ ಎಂಬಲ್ಲಿ ಪಾಠದ ತೊಡಕಿರುವುದು ಅಕ್ಷರಗಳ್ಳಾದ ಗುರುವೆಂದು ಭಾವಿಸಬೇಕು.

ಕಂ॥ ಪ್ರತಿಪತ್ತಿಮೂಢೆ ಯೆನಿಸಿ । ರ್ದ್ದ ತರುಣಿಯುಂ ಗುರುಜನಕ್ಕೆ ಪೊಡವಡಿಪುದು ಮಾ ॥ ಸತಿಯುಂ ಪರಸಿದ ರಾಯು । ಷ್ಮತಿನೀಂ *[ನಿಜ್ಜೈ ದೆ] ಯಾಗೆನುತ್ತ ಮರಾಗಳ್ ॥ ೬೮೩

ವ॥ ಅಂತುಪರಕೆಯುಂ ಪರಸಿ ತಾರಾಪೀಡನರೇಂದ್ರಂ ಮದಲೇಖೆ ಗಿಂತೆಂದಂ ॥ ೬೮೪

ವೃ॥ †[ನೋಡಲೆದೇವಿ ಬಂದೆವಲೆ ಚಿತ್ರರಥಾತ್ಮಜೆ ಯಿರ್ದ್ದದೂಸ ಱಿಂ । ಕೂಡಿದುವಳ್ಕಱೊಂದೆ ಯುವರಾಜನದಿವ್ಯಶರೀರದಲ್ಲಿ ಯಾಂ ॥ ಮಾಡುವ ರುದ್ಧದೊಳ್ಕಱಿದು ನಾಚುಗುವೋ ವಧುವಪ್ರಯೋಜನಂ । ನೋಡುತವಿರ್ದ್ದ ವೇನಮೃತಮೂರ್ತಿಯೆ ನೋಡುತಮಿರ್ಕ್ಕೆ ಪಕ್ಕ ದೊಳ್] ॥ ೬೮೫

---

೬೮೩. ಪ್ರತಿಪತ್ತಿಮೂಢೆ—ಜ್ಞಾನಶೂನ್ಯಳು ; ಪೊಡವಡಿಪುದುಂ—ನಮಸ್ಕಾರ ಮಾಡಿಸುತ್ತಲೂ ; ನಿಜ್ಜೈದೆ—ನಿತ್ಯಸುವಾಸಿನಿ.

೬೮೫. ದೇವಿ—ಎಲೌಮದಲೇಖೆಯೆ ; ಚಿತ್ರರಥಾತ್ಮಜೆಯಿರ್ದ್ದದೂಸಱಿಂ—ಕಾದಂಬರಿ ಇದ್ದಕಾರಣ ; ನೋಡಲೆಬಂದೆವಲೆ—ನೋಡುವದಕ್ಕೆ ಬಂದೆವಲ್ಲವೆ; ಯುವರಾಜನ, ದಿವ್ಯಶರೀರದಲ್ಲಿ—ಶರೀರದವಿಷಯದಲ್ಲಿ ; ಅಳ್ಕಱೊಂದೆ—ಪ್ರೀತಿಯೊಂದೆ ; ಕೂಡಿದುದು—ನಗಗೆಸೇರಿದ್ದು ಅಂದರೆ ಪ್ರೀತಿಹೊರತಾಗಿ ನಮ್ಮಿಂದೇನೂ ಆಗಲಾರದೆಂದು ತಾತ್ಪರ್ಯವು ; ಆಂ—ನಾವು ; ಮಾಡುವ, ರುದ್ಧದೊಳ್—ನಾವು ಸಮೀಪದಲ್ಲಿರುವದರಿಂದ ಉಂಟಾಗುವನಿರೋಧದಿಂದ ; ವಧು—ಕಾದಂಬರಿಯು ; ನಾಚುಗುವೋ—ನಾಚಿಕೊಳ್ಳುವಳೋ ; ಅಪ್ರಯೋಜನಂ—ಪ್ರಯೋಜನವಿಲ್ಲದೆ ; ನೋಡುತಮಿರ್ದ್ದಂ—ನಾವುನೋಡುತ್ತಾ ಇದ್ದಾಗ್ಯೂ ; ಏಂ—ಏನು ಪ್ರಯೋಜನವು. ಅಮೃತಮೂರ್ತಿಯೆ ಚಂದ್ರಾಪೀಡನನ್ನು ಬದುಕಿಸುವದರಲ್ಲಿ ಅಮೃತಸ್ವರೂಪಳಾದ ಕಾದಂಬರಿಯು.

*[ನಿಷ್ಠೈದೆ]

†[ನೋಡಲೆದೇವಿಬಂದೆವೆಲೆಚಿತ್ರರಥಾತ್ಮಜೆಯಿರ್ದ್ದದೂಸಱಿಂ । ಕೂಡಿದುದಕ್ಕಱಿಂದೆಯುವರಾಜನದಿವ್ಯಶರೀರದಲ್ಲಿಯುಂ ॥ ಮಾಡುವಯುದ್ಧದೊಳ್ ಕಿಱಿದುನಾಚುಗುವೋವಧುಸಪ್ರಯೋಜನಂ । ನೋಡುತಮಿರ್ದುವೆನಮೃತಮೂರ್ತಿಯನೋಡುತಮಿರ್ಕ್ಕೆ ಪಕ್ಕದೊಳ್ ॥]

ವ॥ ಎಂದು ಕಿಱಿದುಬೇಗ ಮಿರ್ದ್ದಲ್ಲಿಂಪೊರಮಟ್ಟು ಮುನ್ನೆ ಕಲ್ಪಿತ ಮಾದ ನಿವಾಸಕ್ಕೆ ಪೋಗಿ ಪೆಱತೊಂದಾಶ್ರಮದೊಳೆಸೆವ ಶಿಲಾತಲಸನಾಥ ಮಪ್ಪ ತರುಲತಾಮಂಟಪದೊಳ್ಕುಳ್ಳಿರ್ದ್ದು ಸಮದುಃಖಿಗಳಪ್ಪ ಮಂತ್ರಿಶು ಕನಾಸನುಮ ನಖಿಲನಿಜಾನುಗತ ರಾಜಚಕ್ರಮುಮಂ ಕರೆದವರೆಲ್ಲರುಮ ನಿಂತೆಂದಂ ॥ ೬೮೬

ವೃ॥ ಇದುಶೋಕೋದ್ರೇಕದಿಂದಂ ನುಡಿದನುಡಿ ಯೆನಲ್ವೇಡ ಮ
ಚ್ಚಿತ್ತದೊಳ್ತಾ । ಳ್ದಿದುದಂ *[ನಾನಾಡಿದಪ್ಪೆಂ] ವಧುವೆರಸಿ †[ದ ಪು] ತ್ರಂಗೆ
ಸಾಮ್ರಾಜ್ಯ ‡[ಭಾರಾ] ಸ್ಪದಮಂ ಕೊಟ್ಟೊಂದು ಋಷ್ಯಾ ಶ್ರಮದೊಳೆ
ತನುವಂ ಮುಪ್ಪಿನೊಳ್ತೀದು ಮೋಕ್ಷಾ । ಸ್ಪದಮಂ ಕೈಕೊಳ್ವೆ ನಾನೆಂದಿರೆ
ವಿಧಿವಶದಿಂ ದಿಂತುಟೊಂದಾದುದೀಗಳ್ ॥ ೬೮೭

ಕಂ॥ ಆರಿದೆರ್ಗ್ಗಡದೇಂ ರಾಜ್ಯದ । ಭಾರಂ ನಿಮ್ಮಿಂದವಪ್ಪುಕೆಯ್ವು
ದು ನೀವಾ । ಭಾರಮ ನಾಂಸುಖರಹಿತಶ । ರೀರದೆ ಪರಲೋಕಸುಖಮ
ನಿಂಸಾಧಿಸುವೆಂ ॥ ೬೮೮

ವ॥ ಎಂಬುದು ಮಾಸಕಲರಾಜಲೋಕಂ

ವೃ॥ ಇದನೇನೆಂದಪ್ಪಿ ರೆಚ್ಚತ್ತಖಿಲಭುವನ ಸಾಂಮ್ರಾಜ್ಯಮಂ ತಾನೆ
ದಳ್ತಾ । ಳ್ದಿದಪಂ ರಾಜೇಂದ್ರಚಂದ್ರಂ ಪೆಱಗೆಮ ತಳೆಯಲ್ಕಕ್ಕುಮೇ ದೇವ
ನೀವಾ ॥ ¶[ಳ್ದಿದ ನಾಮಾಳ್ದಪ್ಪೆವೆಂತೆಲ್ಲರು] ಮೆನೆ ಪರಿವಾರಾನ್ವಿತಂ ರಾಜ್ಯ
ದೊಳ್ನಿ । ಲ್ಲದೆ ನಾಪಿರ್ಪ್ಪಂತಿರಿರ್ದ್ದಂ ಮುನಿವಿನುತ ತಪೋರಾಜ್ಯದೊ
ಳ್ಸಾರ್ವಭೌಮಂ ॥ ೬೮೯

---

೬೮೬. ಮುನ್ನೆ—ಮೊದಲೆ.

೬೮೭. ನುಡಿದನುಡಿಯೆನಲ್ವೇಡ—ಆಡಿದಮಾತೆನ್ನ ಕೂಡದು : ಮಚ್ಚಿತ್ತದೊಳ್, ತಾಳ್ದಿದುದಂ—ನಿಶ್ಚಯಿಸಿ ಇದ್ದದ್ದನ್ನು : ಆಡಿದಪ್ಪಂ—ಹೇಳುತ್ತೇನೆ : ಮೋಕ್ಷಾಸ್ಪದಮಂ—ಮೋಕ್ಷಪದವಿಯನ್ನು.

*[ನಾಡಿದಪ್ಪೆಂ] †[ಪುತ್ರ] ‡[ದಾ] ¶[ಮದನಾಪಾದಪ್ಪೆಂದೆಲ್ಲರು]

ವೃ॥ ಎಂದಾಹಾರೀತ ನಾಮಪ್ರಮುಖ ಮುನಿಸಮೂಹಕ್ಕೆ ಜಾಬಾಲಿಗಳ್ಪೇ। ಳ್ವಂದುಂ ಮಂದಸ್ಮಿತಾಸ್ಯ ರ್ಕ್ಕಥೆಯ ರಸದೊಳೋಲಾಡುತಂ ಪೊಳ್ತಿನಿತ್ತಾ॥ ಯ್ತೆಂದುಂ ಮಚ್ಚಿತ್ತದೊಳ್ಭಾವಿಸದೆ ಮಱೆದು ಪೇಳುತ್ತಮಿಂತಿರ್ಪ್ಪರ್ಮೇ ಪೇ। ಳೆಂದೆನ್ನಂ ನೋಡಿ ಕೇಳ್ಶೂದ್ರಕನೃಪ ಕೆಲದೊಳ್ಕೇಳ್ವವರ್ಗ್ಗಂದರಾಗಳ್॥ ಅದೆಂತೆನೆ ೬೯೦

ವೃ ಅಪ್ಪೊಂ ಶ್ರೀಶ್ವೇತಕೇತುವ್ರತಿಗೆ ಸುತನೆನಲ್ಪಂದು ಕಾಮಿತ್ವದಿಂದಂ। ದೇವತ್ವಂಗೆಟ್ಟು ಮರ್ತ್ತ್ಯೋದ್ಭವನೆನೆ ಶುಕನಾಸಂಗೆ *[ಪುಟ್ಟಿದ್ದರ್ನೋತಾ॥ ನಾ] ವೈಶಂಪಾಯನಂ ತಂದೆಯ ಮುನಿಸಿನ ಶ್ಶೈಗುಳ್ಗಳಿಂದಂ ಮಹಾಶ್ವೇ। ತಾವಾ ಕ್ಸಾಮರ್ಥ್ಯದಿಂದಂ ಗಿಳಿಯಬಸುಱೊಳೀಯುಂದದಿಂ ಬಂದನಲ್ತೇ॥ ೬೯೧

ಕಂ॥ ಅನ್ತುಮುನಿಪೇಳ ಲೆಚ್ಚ। ತ್ತನ್ತೆಪ್ರೋಲಾನಾಗೆ ಬಾಲ್ಯದೊಳವೆನ್ನಯಜ। ನ್ಮಾನ್ತರದೊಳಾದವಿದ್ಯಾ। ಸನ್ತತಿ ಜಿಹ್ವಾಗ್ರದಲ್ಲಿ ನೆಲಸಿದುದಾಗಳ್॥ ೬೯೨

ವ॥ ಅದಲ್ಲದೆಯು ಮಖಿಲಕಲಾ ಕಲಾಪೋಪದೇಶ ಕೌಶಲಮನೊಳಕೊಂಡಿ †[ಪ್ಪರಸ್ಪಷ್ಟವರ್ಣಾಭಿಧಾನಮಪ್ಪ] ವಾಣಿಯ ಸಪ್ಪೃಕೆಯುಂ ‡[ವಿಜ್ಞಾತ] ಸಕಲಾನ್ಯಜನ್ಮವೃತ್ತಾಂತನೆ ನಾಗಿ ತಾಯುಂ ತಂದೆಯುಂ ತಾರಾಪೀ

೬೯೦. ಪೇಳ್ವಂದುಂ—ಹೇಳುವಕಾಲದಲ್ಲಿಯೂ: ಮಂದಸ್ಮಿತಾಸ್ಯರ್—ಮುಗುಳುನಗೆಯಿಂದಕೂಡಿದವರಾಗಿ; ಪೊಳ್ತಿನಿತ್ತಾಯ್ತೆಂದುಂ—ಹೊತ್ತು ಎಷ್ಟಾಯಿತೆಂತಲೂ; ಭಾವಿಸದೆ—ಯೋಚಿಸದೆ; ಇಂತಿರ್ಪ್ಪರ್ಮೇ—ನಾವು ಹೀಗಿರಬಹುದೆ? ಎಂದು—ಜಾಬಾಲಿಗಳುನುಡಿದು; ಶೂದ್ರಕನೃಪ—ಎಲೈ ಶೂದ್ರಕನೆ: ಎನ್ನಂನೋಡಿ—ಜಾಬಾಲಿಗಳು ನನ್ನನ್ನುನೋಡಿ; ಕೆಲದೊಳ್, ಕೇಳ್ವವರ್ಗ್ಗ, ಎಂದರ್—ಹೇಳಿದರು.

೬೯೧. ಅಪ್ಪೊಂ—ಯಾವಪುಂಡರೀಕನು: ಶುಕನಾಸಂಗೆ—ಪುಟ್ಟಿದ್ದರ್ನೋ—ವೈಶಂಪಾಯನನೆಂಬ ಹೆಸರಿನಿಂದ ಹುಟ್ಟಿದ್ದನೊ; ಅಪ್ಪೊಂ, ಎಂಬಲ್ಲಿ. ಪದಾಂತವಾದ ಅಕಾರಕ್ಕೆ ಒಕಾರಾದೇಶವು ಶ ಮ. ಸೂ. ೧೫೭

*[ತಾಂಬಿಂದುಪುಟ್ಟಿದ್ದರ್] †[ಪಷ್ಟಮದಾನ್ಯಯುಪ್ಪ] ‡[ವಿಯಾರ್ದ]

ಡದೇವನುಮಂ ವಿಲಾಸವತೀಮಹಾದೇವಿಯುಮಂ ಚಂದ್ರಾಪೀಡದೇವನುಮಂ ಮುನ್ನಿನ್ನ ಕೆಳೆಯನಪ್ಪ ಕಪಿಂಜಲನುಮಂ ನೆನೆದೆಂ ಮಹಾಶ್ವೇತೆಯೊಳಾದ ಕೂರ್ಮೆಯುಮಂ ನೂರ್ಮಡಿಸೆ *[ತದ್ಗತ] ಚಿತ್ತನಾಗಿ ನೆನೆನೆನೆದೆನ್ನ †[ಕಾಮಪರತೆಗಾಂ ನೆಲದೊಳ್ತಲೆಯಂ ಕುತ್ತಿ] ಕಿಱಿದುಬೇಗಮಿರ್ದು ನಿಜಾವಿನಯಶ್ರವಣಲಜ್ಜೆಯಿಂ ಕರಗುವಂತೆಯುಂ ಪಾತಾಳಮಂ ಪುಗುವಂತೆಯುಮಾಗಿಂತೆಂದೆನದೆಂತೆನೆ ೬೯೩

ಕಂ ಮುನ್ನಿನ ಭವಮಂ ಬಂಧುಗ। ಳನ್ನಱೆ ತಿಳಿವಱಿತಮಾಯ್ತು ಭವದೀಯಪದಾ। ಸನ್ನತೆಯಿಂದಾದೊಡಮೇಂ। ಬಿನ್ನವಿಸಿದಪೆಂ ಮುನೀಂದ್ರ ನಾಣ್ಚದೆ ಮತ್ತಂ॥ ೬೯೪

ಕಂ ಜಾತಿಸ್ಮರತೆ ವಿರಕ್ತಿಗೆ। ಹೇತುವೆನುತ್ತಿರ್ಪರದುವೆ ಪುಸಿಯಾಗಿ ಮಹಾ॥ ಶ್ವೇತೆಯೊಳಾದೊಂದನುರಾ। ಗಾತಿಶಯಂ ಪೆರ್ಚಿದಪುದು ಮುನ್ನಿಂದೀಗಳ್॥ ೬೯೫

ವ ಅದಲ್ಲದೆಯುಂ ಮದ್ವಿಪತ್ತಿಶ್ರವಣಮಾತ್ರದಿಂ ಸ್ಫುಟಿತಹೃದಯನಾದ ಚಂದ್ರಾಪೀಡ ನೆಲ್ಲಿಪುಟ್ಟಿದನೆಂಬುದಂ ಬೆಸಸಲ್ವೇಳ್ಕುಮಾಂತಿಯರ್ಗ್ಗಾತ್ರಿಯಮಾದೊಡ ಮಾತನಂನೋಡಿ ಕೃತಾರ್ಥನಪ್ಪೆನೆಂಬುದು ಮಾಮುನೀಂದ್ರ ನೆನ್ನಂಮುನ್ನಿನಂತೆ ನೋಡಿನಿಜಸ್ನೇಹವಚನದಿ ನೆನ್ನನಿಂತೆಂದಂ।

ಕಂ। ಮಱದ್ಯೆ ತರಳತೆಯಿಂ ದಿ। ತೆಱನಾವುದ ನೆಲೆದುರಾತ್ಮ ಪಾಪಾತ್ಮತ್ತಂ। ಮಱುಗುತ್ತಿರ್ದಪೆ ಯಿನಿಸಂ। ಗಱಿಮೂಡಿದ ಬಳಿಕನೀನೆದಲ್ ಪೋದಪ್ಪೈ॥ ೬೯೬

ವ ಎಂದುಜಾಬಾಲಿಗಳ್ನುಡಿಯೆ ಹಾರೀತನತಿಕುತೂಹಲಿತಾಂತಃಕರಣನಾಗಿ ತಂದೆಗಿಂತೆಂದಂ॥ ೬೯೭

ವೃ। ತನುವಿಂದಂ ಪೋಗೆಜೀವಂ ನಿಲೆವಿಡಿಯಲಣಂ ಬಾರದೆಂಬನ್ನೆ

೬೯೩. ಕುತ್ತಿ—ಬಡಿದು.

೬೯೮. ತನುವಿಂದಂ, ಜೀವಂ, ಪೋಗೆ—ಪೋಗುತ್ತಿರಲು : ನಿಲೆವಿಡಿಯಲ್ಬಾರದೆಂಬನ್ನೆ

*[ಗದ್ಗದ] †[ಕಾಮಪರತೆಗಾನೆಲೆಗೊಳಲುತಲೆಯಂಕುತ್ತಿ]

ಗಂ ತ । ನ್ನಮನಿಗಂತಪ್ಪೊಂದು ಕಾಮಾತುರತೆ ಸಮನಿಸಿತ್ತೀತಱಿಂ *[ನಾಕ] ಸಂಭೂ ॥ ತನದೇಕಲ್ಪಾಯುಮಾದಂ ಬೆಸಸಿ ಮೆನಗಿದಾಶ್ಚರ್ಯಮಾಗಿದ್ದು ದೆಂದಾ । ತನಯುಂಗಿಂತೆಂದ ನಾಗಳ್ಮನಿಜನ ಕುಮುದಾನಂದಚಂದ್ರಂ ಮು ನೀಂದ್ರಂ ॥ ೬೯೯

ಕಂ॥ ವಿದಿತಮೆನ ಲ್ಕಾಮದ †[ಮೋ । ಹದ ಮೊದಲೆಂದೆನಿಸಿದ] ಲ್ಪ ಸಾರಸ್ತ್ರೀವೀ ॥ ರ್ಯದಿ ನಲ್ತೆ ಕೇವಲಂ ಪು । ಟ್ಟಿದ ನೀಪಾಪಾತ್ಮ ನಾತ್ಮಕ ಮೋರ್ದಯದಿಂ ॥ ೭೦೦

ಸ್ಪ॥ ವೇದದಲ್ಲಿಯು ಮಿದೀಪ್ರಕಾರದಿಂ । ದೋದಿತೆಂದಱಿವೆ ಯಲ್ತೆ ವತ್ಸನೀಂ ॥ ಯಾದೃಶೋ ಜಗತಿ ಜಾಯತೇ ಪುನ । ಸ್ತಾದೃಶೋ ಭವತಿ ಯೆಂಬವಾಕ್ಯಮಂ ॥ ೭೦೧

ವ॥ ಅದಲ್ಲದೆಯುಂ ಕಾರ್ಯಂಗಳ್ ಕಾರಣಗುಣ ‡[ಯೋಗಂಗಳದು ವಲ] ಮಾಯುರ್ವೇದದೊಳಮಲ್ಪಸಾರಸ್ತ್ರೀವೀರ್ಯದೊ ಳಲ್ಪಾಯುವ ಪ್ಪ ನೆಂಬುದಱಿ ನೀತಂಗಿಂತಪ್ಪ ಕಾಮಪರತೆಯುಂ ಮದನಜ್ವರ ಸಂತಾಪ ಮರಣಮುಂ ಮಾದುದು ॥ ೭೦೨

ಕಂ॥ ಇನ್ನು ಮಚಿರಾಯು ವಕ್ಕುಂ । ಮುನ್ನಿನ ತೆಱದಿಂದಮಾ ಯುರವಸಾನದೊ ಳೀ ॥ ತನ್ನೆಟ್ಟ ನಕ್ಷಯಾಯು । ಷ್ಯೋನ್ನತಿಯಂ ತಳೆ ದು ಸುಖದಿನಿಕ್ಕುರ್ಗಂ ಬಳಿಯುಂ ॥ ೭೦೩

ಗಂ—ಹಿಡಿದುನಿಲ್ಲಿಸಿಕೊಳ್ಳುವದಕ್ಕೆ ಆಗದು ಎಂಬುವಷ್ಟು; ಅಂತಪ್ಪೊಂದುಕಾಮಾತುರ ತೆ—ಅಂಥಾದ್ದೊಂದು ಕಾಮಾತುರತ್ವವು; ತನ್ಮನಿಗೆ—ಪುಂಡರೀಕನಿಗೆ; ಏತರಿಂ, ಸಮನಿ ಸಿತ್ತು—ಉಂಟಾಯಿತು; ಅದೇಕೆ, ಅಲ್ಪಾಯುಮಾದಂ; ಎಂದೆ-ಎಂದು ಕೇಳಿದ.

೭೦೦. ಕಾಮದ, ಮೋಹದ, ಮೊದಲೆಂದೆನಿಸಿದ—ಉತ್ಪತ್ತಿಸ್ಥಾನವೆನಿಸಿಕೊ ಳ್ಳುವ ಅಂದರೆ ಕಾಮಮೋಹಮಯವಾದ

೭೦೧. ಇದು — ಈವಿಷಯವು; ಓದಿತು—ಓದಲ್ಪಟ್ಟಿತು.

೭೦೨. ಯೋಗಂಗಳ್—ಸಂಬಂಧವುಳ್ಳವುಗಳು; ಅದುವಲಂ-ಅದುನಿಶ್ಚಯವು.

*[ದುಃಖ] †[ಹೋ । ಮದನೊದಲಿದುವೆನಿಪಕ] ‡[ಭೋಗ್ಯಂಗಳದೊಲ]

ವ॥ ಎಂಬುದು ಮುದಂಕೇಳ್ದುಮವನಿತಲ ನಿವೇಶಿತೋತ್ತಮಾಂಗ ನಾಗಿ ಯತಿಪತಿಯು ನಿಂತೆಂದಂ ॥ ೨೦೪

ವೃ॥ *[ಧೈರ್ಯಂಕೆಟ್ಟಿತ್ತು ಸರ್ವಾಕ್ಷಮಮೆನಿಪುದಱೊ ಳ್ವರ್ತಿಸು ತಿರ್ಪೆ ನಿಂತೀ। ತಿರ್ಯಗ್ಜಾತಿತ್ವದೊ ಳ್ನಾಲಗೆಯು ಮಿದುಭವತ್ಸೇವೆಯಿಂ ಪಾದುಮಿನ್ನೇಂ । ಕಾರ್ಯಂ ಮತ್ತುಂಟು ಸಾಗ್ರ್ಗಂ ತನುವು ಮಗಣಿತಾಯು ಷ್ಯಮುಂ ಮತ್ತೆನಲ್ಕಾ । ಶ್ಚರ್ಯಂಬಟ್ಟಪ್ಪೆ ನೀಗಳ್ಬಸಸಿ ಮೆನಗೆನ ಲ್ಮಕ್ತ ತಂದ್ರಂ ಮುನೀಂದ್ರಂ] ॥ ೨೦೫

ವೃ॥ ತವುತಿರ್ದ್ದತ್ತಲ್ತೆ ತಾರಾಸಮುದಯ ಮಿದೊ ಪಂಪಾಸರಸ್ತೀರ ಸುಪ್ತೋ । ತ್ಥವಿಹಂಗ ಧ್ವಾನವೀಪ್ಪೊಣ್ಮುವುದು ವನಲತಾಳಿ ಪ್ರಸೂನಾವಳೀ ಗಂ ॥ ಧವಹಂ ಮೆಲ್ಪಿಂದೆ ದಲ್ಮುತ್ತಿರದೆಸೆವ ನಿಶಾಸಂಘ ಸಂಮರ್ದದೊಂದು। ತ್ಸವದಿಂ ತಣ್ಗಂಪ ನೀಬೀಱಿದಪುದು ಬೆಳಗಾಯ್ತೆನನಿಂ ಪೇಳ್ವೆನೀಗಳ್ ॥

ವ॥ ಅದಲ್ಲದೆಯುಂನಿತ್ಯಕರ್ಮಂ ಪ್ರತ್ಯಾಸನ್ನಮಾಯ್ತೆಂದು ॥ ೨೦೬

ಕಂ॥ ನಿಷ್ಕ್ರಾಪರಂ ಪ್ರಭಾತಾ। ನುಷ್ಠಾನ ನಿಮಿತ್ತಮೆಳ್ದ ನಲ್ಲಿಂದಂ ತ ॥ ದ್ಗೋಷ್ಠಿಯ ನುಳಿದು ಮುನೀಂದ್ರಗ । ರಿಷ್ಠಂ ಜಾಬಾಲಿನಾಮಧೇ ಯ ಮುನೀಂದ್ರಂ ॥ ೨೦೭

ವ॥ ಆಗಳಾತಪಸ್ವಿಗಳ್ನೀರಾಗರಾಗಿಯುಂ ಕಥಾರಸವಿಸ್ಮೃತಗು ರೂಚಿತಪ್ರತಿಪತ್ತಿಗಳುಂ ಮತ್ತಂಕೇಳುತ್ತಮಿರ್ದ್ದಂತೆಕಂಟಕಿತಕಾಯರುಂ

---

೨೦೫. ಧೈರ್ಯಂಕೆಟ್ಟಿತ್ತು—ನನಗೆಧೈರ್ಯವುಕೆಟ್ಟುಹೋಯಿತು; ಸರ್ವಾಕ್ಷಮಮೆನಿಪುದಱೊಳ್—ಯಾವಕಾರ್ಯಕ್ಕೂ ಅಸಮರ್ಥವಾದ; ಇಂತೀತಿರ್ಯಗ್ಜಾತಿಯೊಳ್—ಈ ಪಕ್ಷಿಜಾತಿಯಲ್ಲಿ; ವರ್ತಿಸುತ್ತಿರ್ಪೆಂ—ಜೀವಿಸುತ್ತಿರುವೆನು; ಇನ್ನೇಂಕಾರ್ಯಂಮತ್ತುಂಟು—ನನಗೆ—ಆಗತಕ್ಕದ್ದು ಇನ್ನೇನುಂಟು; ಸಾಗ್ರ್ಗಂ—ಉಂಟಾಗುವದು; ಪೆಸಸಿಂ—ಆ ಯುಸ್ಸು ಮತ್ತು ಶರೀರಾಂತರ ಉಂಟಾಗುವದನ್ನು ಆಜ್ಞಾಗಿಸಿ.

*[ಧೈರ್ಯಂಗೆಟ್ಟಿತ್ತು ಸರ್ವಕ್ಷಮಮೆನಿಪ್ಪುದಱೊಳ್ವರ್ತಿಸುತ್ತಿರ್ದ್ದೆನಿಂತೀ। ತಿರ್ಯಗ್ಜಾತಿತ್ವದೊಳ್ ನಾಲಗೆಯುಮಿದುಭವತ್ಸೇವೆಯಿಂದಾದನನ್ನೀ । ಕಾರ್ಯಂಮತ್ತುಂಟೆಸಾಗ್ರ್ಗಂ ತನುವುಮಗಣಿತಾಯುಷ್ಯಮುಂಮತ್ತೆನಲ್ಕಾ । ಶ್ಚರ್ಯಂಬಟ್ಟಪ್ಪೆನೀಗಳ್ಬಸಿಸೆನಗೆನಲ್ಮಕ್ತಚಂದ್ರಂ ಮುನೀಂದ್ರಂ ॥]

ವಿಷಯೋತ್ಫುಲ್ಲಮಾನಸರುಂ ಯುಗಪದಾಗಳಿತಶೋಕಾನಂದಜನ್ಮನಯನ ಸಲಿಲರುಂ ಹಾಕಷ್ಟ ಶಬ್ದಾನುಬಂಧಿಗಳುಂ ಪರವಶರು ಮೆನಿಸಿ ಕಿಱಿದು ಬೇಗ ಮಿರ್ದ್ದಲ್ಲಿಂದಮೆಳ್ದು ॥ ೨೦೮

ಕಂ॥ ಸಕಲಮುನಿಪ್ರಜಮಿರೆ ತಾ। ನೆ ಕರುಣದಿಂ ಕೊಂಡುಪೋಗಿ ಮೆಲ್ಲನೆ ಹಾರೀ ॥ ತಕುಮಾರಂ ತನ್ನಯ ಪ। ರ್ಣಕುಟೀರಗ ಶಯನತಳ ದೊಳಿರಿಸಿದನೆನ್ನಂ ॥ ೨೦೯

ವ॥ ಅನ್ನೆಗಂ ಪ್ರಾಭಾತಿಕ ಕ್ರಿಯಾನಿಮಿತ್ತಂ ಹಾರೀತಂ ಪೋದನಿತ್ತ ಸಕಲಕಾರ್ಯಾಕ್ಷಮಮಪ್ಪ ತಿರ್ಯಗ್ಜಾತಿಯೊಳ್ಬಿಳ್ದುಚಿಂತಾಪೀಡಿತನಾಗಿ

ವೃ॥ ಪಡೆಯಲ್ಬಾರದು ಮುನ್ನಸಂತಭವದೊಳ್ಮಾನುಷ್ಯಮಂ ಮತ್ತೆಯುಂ। ಪಡೆಯಲ್ಬರ್ಕ್ಕುಮೆ ವಿಪ್ರಜಾತಿಯನದಂ ಪೆತ್ತುಂ ಮುನೀಂದ್ರತ್ವಮಂ॥ ಪಡೆಯಲ್ಬರ್ಕ್ಕುಮೆ ಮತ್ತಮಾರ್ಗ್ಗೆ ಪಡೆಯಲ್ದೇವತ್ವಮಂ ನೋಡದಂ। ಪಡೆದಾನಿಂತಿರೆ ಶಾಪದಿಂದಕಟ ತಿರ್ಯಗ್ಜಾತಿಯೊಳ್ಬಿಳ್ದೆನೇ॥

ಕಂ॥ ಶೋಕಸಂತಾಕುಲಮುಂ ದುಃ। ಖಾಕರಮು ಮೆನಿಪ್ಪ ಮಾಯ್ದು ಮತ್ತಾಯುಮ ನಿ॥ ಸ್ನೇಕೆಗಡ ಪಿಡಿದಪೆಂ ನಿ। ರ್ವ್ಯಾಕುಲ ದಿಂ ಬಿಡುವೆ ನೆಂದುಚಿಂತಿಸುವಿನೆಗಂ ॥ ೨೧೧

ಕಂ॥ ಚಿಂತಾಕುಲಿತನ ನಾಱುಸು। ವಂತಿರೆ ಮೊಗಮಲರ್ದು ನಸು ನಗುತ್ತಂ ಹಾರೀ ॥ ತಂ ತೊಟ್ಟನೆ ಪರ್ಣಕುಟೀ। ರಾಂತರಮಂ ಪೊಕ್ಕು ಪದಪಿನಿಂದಿಂತೆಂದಂ ॥ ೨೧೨

ಕಂ॥ ಎಲೆ ವೈಶಂಪಾಯನ ತ। ನ್ನೊಲವಿಂದಂ ಬಂದನೀಗಳರಸುತ್ತೆ ಕಪಿಂ॥ ಜಲನಿಲ್ಲಿಗೆ ನಿನ್ನಂ ಪಂ। ಬಲಿಸುತ್ತಂ ಶ್ವೇತಕೇತುಯತಿಗಳ ಕೆಲದಿಂ॥

ವ॥ ಎಂಬುದು ಮಾಕ್ಷಣದೊಳುತ್ಪನ್ನಪಕ್ಷ ನಾದಂತೆಗೆಯ್ದು

೨೧೦. ಮಾನುಷ್ಯಮಂ—ಮನುಷ್ಯಜನ್ಮವನ್ನು ; ಪಡೆಯಲ್ಬಾರದು—ಪಡೆಯುವದಕ್ಕೆ ಅಸಾಧ್ಯವು: ಮತ್ತಂ, ಆರ್ಗ್ಗೆ—ಯಾರಿಗೆತಾನೇ; ದೇವತ್ವಮಂ, ಪಡೆಯಲ್ಬರ್ಕ್ಕುಂ—ಪಡೆಯುವದಕ್ಕೆ ಸಾಧ್ಯವಾದೀತು.

೨೧೨. ಮೊಗಮಲರ್ದು—ವಿಕಸಿತವದನನಾಗಿ ; ತೊಟ್ಟನೆ—ಬೇಗನೆ.

ನೋಡಲುತ್ಕಂಠಿತನಾಗಿ ಮದ್ವಯಸ್ಯನೆಲ್ಲಿರ್ದಪ ನಾವೆಡೆಯೆನೆ ಹಾರೀತಂ ಮ ತ್ತಾತಪಾಷನ ಮೂಲಪಲ್ಲಿಗ ವಂದನೆಂಬುದು ಮತ್ತಲೆಕಣ್ಣಾಗಿರೆ ॥ ೨೧೪

ವೃ॥ ಬಳಲೆ ಪೆಗಲಿಂ ಚಂಚದ್ವಲ್ಕಾಂಚಲಂ ಪೆಗಲಿಂಗೆ ಬಂ॥ ದೆಳಲೆ ಜಡೆಗಳ್ಮ್ರುಪ್ಪಿಂ ಯಜ್ಞೋಪವೀತ ಮದೊಯ್ಯನಂ । ದಿಳಿಯೆ *[ಪರಿಪಟ್ಯೋ] ರಂತಾಕಾಶಮಾರ್ಗದ ಬಂದುಪಾ । ಡಳಿದ ಸಖನಂ ಮುಂದಾಂ ಕಂಡೆಂ ಕಪಿಂಜಲನಂ ನೃಪಾ ॥ ೨೧೫

ಅಂತುಕಂಡು ಕಣ್ಣಾಸೀಗರ್ಗಳುಣ್ಮೆ ಘೋಂಕನಿದಿರೇಳ ಲುಜ್ಜುಗಂಗೆ ಯ್ದೆನ್ನ ಕೆಳೆಯನಪ್ಪ ಕಪಿಂಜಲನ ನಿಂತೆಂದೆಂ ॥ ೨೧೬

ವೃ॥ ದೊರೆಕೊಂಡತ್ತು ಭವದ್ವಯಾಂತರದೊಳೀಗಳ್ಕಾಣ್ಕೆ ಕಂಡೇನೊ ಚಿ । ಚ್ಚರಮೆಳ್ದಪ್ಪುವ ಕುಳ್ಳಿರಲ್ಕುಡುವ ನಿನ್ನೀಸೇದೆವಟ್ಟಂಗಮಂ॥ ಕರದಿಂ †[ದೊತ್ತುವ ಶಕ್ತಿಯುಂ ತಳೆವುದಕ್ಕರ್ಗಂ] ನೋಂತೆನಿಲ್ಲಣ್ಣಾ ನೀಂ । ಬರೆಯುಂ ಪಾಪಿಯೆ ‡[ನೀವೆನೆಂದು] ಪಿರಿದುಂ ಶೋಕಾಂಧನಾಗಿಪ್ಪೆನಂ ॥

ವೃ॥ ಎತ್ತಿ ಕರಂಗಳಿಂದೆ ನಿಜಬಾಷ್ಪ ನಿರುದ್ಧಮೆನಿಪ್ಪ ಕಣ್ಗಳಂ । ದೊತ್ತಿ ಶರೀರದೊಳ್ಸಗಿಸಿಕೊಂಡಪ ನೆಂಬಿನ ಪಾದಮಪ್ಪುತುಂ ॥ ಚಿತ್ತದಲಂಪಿನಿಂ ಕಿಱುಳನಂತಿರ ಲೆನ್ನಯ ಮಾಯ್ದಕಾಲ್ಗಳಂ । ನೆತ್ತಿಯೊಳಟ್ಟಿಕೊಂಡಳುತ ಮಿರ್ದ್ದನಳಲ್ದೆನಸುಂ ಕಪಿಂಜಲಂ ॥ ೨೧೮

೨೧೫. ಚಂಚದ್ವಲ್ಕಾಂಚಲಂ, ಪೆಗಲಿಂ—ಹೆಗಲಿನಿಂದ ; ಬಳಲೆ—ಜಾರಲು ; ಜಡೆಗಳ್, ಪೆಗಲಿಂಗೆ, ಬಂದು, ಎಳಲೆ—ಜೋಲಾಡಲು ; ಮುಯ್ಪಿಂ—ಭುಜದಿಂದ ; ಒಯ್ಯನೆ—ಮಂದಸಮಾನಾಗಿ ; ಪರಿಪಟ್ಯು—ಓಡಿ ; ಪಾಡಳಿದ—ಅಯಾಸಪಟ್ಟ.

೨೧೭. ಚಿಚ್ಚರಂ—ವೇಗನೆ ; ಕುಳ್ಳಿರಲ್ಕುಡುವ—ಕೂತುಕೊಳ್ಳುವದಕ್ಕೆ ಪೀಠವನ್ನು ಕೊಡುವ ; ಸೇದೆವಟ್ಟು—ಆಯಾಸವನ್ನು ಹೊಂದಿದ.

೨೧೮. ಚಿತ್ತದಲಂಪಿನಿಂ—ಮನಸ್ಸಿನ ಸಂತೋಷದಿಂದ ; ಕಿಱುಳನಂತಿರಲ್—ಸಾಮಾನ್ಯಬಾಲಕನಂತೆ ; ಎನ್ನಯ, ಮಾಯ್ದಕಾಲ್ಗಳಂ—ನಾಚನಾದಕಾಲುಗಳನ್ನು ; ಎನಸುಂ—ಬಹಳವಾಗಿ ; ಅಳಲ್ದು—ದುಃಖಪಟ್ಟು.

*[ಬಡಸಿಟ್ಟು] †[ಪೆತ್ತುಬಳಕ್ಕೆ ಮಂತಳೆವುದಕ್ಕರ್ಗಂ] ‡[ಗೆಯ್ವೆನೆಂದು]

ಅನ್ತಳುತಿರ್ದನಂ ವಾಙ್ಮಾತ್ರಪ್ರತೀಕಾರನೆ ನಿಂತೆಂದಂ ॥

ಕಂ॥ ಮೊದಲೊಳ್ಪಱಿದ್ದೈ ಸಂಸಾ । ರದ ತೊಡರಂ ನಿಂದೆ ಮುಕ್ತಿಪದದೊಳ್ನಿನಗಿಂ ॥ ತಿದು ತಕ್ಕುದೆ ಮೂಢರ ಮಾ । ರ್ಗದಿ ನಿನಗೆ ಜಡಂಗಿದೇಕೆ ಶೋಕಂಗೆಯ್ವೈ ॥ ೨೧೯

ಕಂ॥ ಜನಕಂ ಕುಶಲದಿ ನಿರ್ದ್ದನೆ । ನೆನೆವನೆ ಮಾಯ್ದೆನ್ನ ವಾರ್ತೆಗೇಳ್ದೀನೆಂದಂ । ಮನದೊಳ್ಖೇದಿಸಿದನೆ ಮುನಿ । ದನೆ ಪೇಳೆಂದೆನ್ನ ಕೆಳೆಯನಂ ಬೆಸಗೊಂಡೆಂ ॥ ೨೨೦

ವ॥ ಅನ್ನೆಗಂ ಹಾರೀತಶಿಷ್ಯೋಪನೀತ ಪಲ್ಲವಾಸನದೊಳ್ಕುಳ್ಳಿರ್ದ್ದ ತನ್ನ ತೊಡೆಯ ಮೇಲೆನ್ನನಿರಿಸಿ ॥ ೨೨೧

ಕಂ॥ ತಂದೆಗೆ ಕುಶಲಂ ನ ಮಗಾ । ದಂದಮುಮಂ ದಿವ್ಯಚಕ್ಷುವಱಿದಿರ್ದ್ದಂ ನೀ ॥ ನೊಂದರ್ಕ್ಕಂ ಚಿಂತಿಸಬೇ । ಡೆಂದು ಕಪಿಂಜಲಕ ನಿನಗೆ ಮಗುಳ್ದುಂ ನುಡಿದಂ ॥ ೨೨೨

ವ॥ ಅಂತುರಂಗತ್ವಮಂ ಪತ್ತುವಿಟ್ಟು ತಂದೆಯಲ್ಲಿಗೆ ವಂದೆನನ್ನೆಗಮನತಿದೂರದೊಳುದ್ಬಾಷ್ಪದೃಷ್ಟಿಯುಂ ವಿಷಣ್ಣದೀನವದನನುಂ ಸಭಯನುಮಾಗಿ ಪ್ರೊರ್ದ್ದಲೆನ್ನಂ ಕಂಡು ॥ ೨೨೩

ವೃ॥ ಬಿಡು ನೀನಂಜಿಕೆಯಂ ಕಪಿಂಜಲಕ ದೋಷಂ ನಿನ್ನದಲ್ತೇಕೆ ಪೇ । ಳ್ಪೆಡವೈದೋಷವಿದೆನ್ನದೆಂದು ಮಱುಗುತ್ತಿರ್ದ್ದಂ ಮಗಂ ಪುಟ್ಟಿದಾ । ಗಡೆ ಮಾಡಲ್ಬಗೆದಂದೆನಿಲ್ಲಿನಿಸು ಮಾಯುಷ್ಕಾಮಮಂ ಯಜ್ಞಮಂ । ತಡವಂ ಮಾಡಿದೆನೀಗಳಿಂದೆ ಬಗೆನೀಂ ತತ್ಕಾರ್ಯಸಂಸಿದ್ಧಿಯಂ । ೨೨೪

ವ॥ ಇದಱಿಂ ನೀನೊಂದುಮಂ ಚಿಂತಿಸದಿರೆಂದು ತಂದೆ ಬೆಸಸೆ ಭಯಮುಮಂ ಪತ್ತುವಿಟ್ಟು

---

೨೨೪. ಇದುದೋಷಂ, ಎನ್ನದೆಂದು, ಮಱುಗುತ್ತಿರ್ದ್ದಂ—ನಾನು ವ್ಯಸನಪಡುತ್ತಿದ್ದೆ ಕೂಡ; ಮಗಂ, ಪುಟ್ಟಿದಾಗಡೆ, ಮಾಡಲ್—ಆಯುಷ್ಕಾಮಯಜ್ಞವನ್ನು ಮಾಡುವದಕ್ಕೆ; ಬಗೆದಂದೆನಿಲ್ಲ—ನಾನು ಮನಸ್ಸುಮಾಡಲಿಲ್ಲ; ಈಗಳಿಂದೆ—ಇನ್ನು ಮೇಲೆ; ತತ್ಕಾರ್ಯಸಂಸಿದ್ಧಿಯುಂ, ಬಗೆ—ಸಿದ್ಧಿಯಾಯಿತೆಂತಲೆ ತಿಳಿ.

*ಕಂ ॥ ಎನಗೆ ಪಸಾದಿಪ್ರೌಢಿ ಸಖರಂ । ಜನಿಯಿಸಿದೆಡೆಯತ್ತ[ಲ್ತೈದು ವಂತೆ ನಗಾಜ್ಞಾ । ಪನವಿರಾವು ಮೊಲವಿನಿಂ ನೀಂ । ಮನೆ ಜನಕಂ ಕೇಳ್ದು ಮುಗುಳ್ದು ಬೆಸಸಿದನಾಗಳ್] ॥ ೭೦೫

*ಮಗನೆ ಶುಕಜಾತಿಯೊಳಗವ । ನೊಗೆದಿರ್ದ್ದಪ ನವನ ನರಿಯ ಲಾರ್ತೈ ನಿನ್ನಂ । ಮಿಗೆ ತಿಳಿಯಲಾರ ನವನುಂ । ತೆಗೆ ಯುವರಿಂ ಗಮನಚಿಂತೆ ಯಂ ನೀನೀಗಳ್ ॥ ೭೦೬

*ವ ಎಂದು ನುಡಿದಿರ್ದ್ದಿನಂದಿನ ಪ್ರೊಳ್ತರೆಯೊಳಯ್ಯನೆನ್ನಂಕರೆದು.

*ಸ್ರ ಕೇಳೆಲೆ ಸಿಂಕಪಿಂಜಲ ಭವತ್ಸುಹೃದಂ ವಿಧಿಯೋಗದಿಂದೆ ಜಾಬಾಲಿಮುನೀಂದ್ರ ನಾಶ್ರಮುವ ನಾಶುಕಗೇಹದೆ ಸೇರ್ದ್ದನಿಂದು ಮೇ । ಸ್ಮೇಳಿಸಿತ್ತೈ ಸಮಂತು ಜನನಾಂತರ ಸಂಸ್ಮರಣಂ ದಲಾತನೊಳ್ । ತಾಳುತ ನೂನಹರ್ಷಮನೆ ಪೋಗವನಂ ನಡೆನೋಡಲೊಪ್ಪದಿಂ ॥ ೭೦೭

*ಭರದಿಂದಂಸಾದ್ರ್ದಪ್ರಣ್ಯಾಶ್ರಮುವ ನಿರದೆ ಮತ್ಸ್ವಸ್ತಿವಾದಂಗಳಂ ಬಿ । ತ್ತರಿಸುತ್ತಂ ದೀರ್ಘಕಾಲಂ ಬದುಕಿಪ ಬಗೆಯಿಂದೀಗಳಾಂ ಮಾಡುತಾಯುಃ । ಪ್ಕರಯಜ್ಞಂ ಪೂರ್ಣಮಪ್ಪನ್ನೆವರ ಮೊಸೆದು ಜಾಬಾಲಿ ಸಾವಿನ್ಯದೊಳ್ನ್ । ದರಮಿ ಬ್ಬೀರೆರೊಂದ ನಾಲೋಚಿಸದಿರೆನುತೆ ಪೇಳ್ದೀನವಂ ಗೆಂದರಾಗಳ್ ॥ ೭೦೮

*ವ । ಇದಲ್ಲದೆ ಭವದೀಯವಿಯೋಗ ದುಃಖಸಮಾಕುಲಿತೆ ಯಾಗಿರ್ಪ್ಪ ನಿನ್ನ ಜನನಿಯೆನಿಸಿದ ಲಕ್ಷ್ಮಿಯುಂ ಮಾಕಣ್ಣದೊಳ್ ಪರಿಚಾರಿಣಿಯಾಗಿರ್ದ್ದಪಳಾಕೆಯುಂ ಪೆನ್ನಂಮುದ್ದಿಸಿ ಜನಕನೊರೆದುದನೆ ಮುಗುಳ್ದು ಮುಗುಳ್ದು ಬೆಸಸಿದಳ್ ॥ ೭೦೯

*ಕಂ । ಇಂತೊರೆದು ಪ್ಯದುರಿಪಸು । ವಾಂತದಪ್ರೋಲ್ ಸೂಕ್ಷ್ಮ

---

* ಈ ಗುರುತನ್ನು ಹಾಕಿರುವ [illegible] ಪದ್ಯಗಳು ಗ್ರಂಥದಲ್ಲಿಲ್ಲದೆ ಮಹಾರಾಜರವರ ಕಾಲೇಜು ಕನ್ನಡ [illegible] ಗಳಿಂದ ರಚಿಸಲ್ಪಟ್ಟು ಇಲ್ಲಿ ಸೇರಿಸಲ್ಪಟ್ಟಿರುವವು.

ಮೆನಿಪ ತುಪ್ಪುಳತತಿಯಿಂ ॥ ಪಂತುರವಾದೆನ್ನಂಗಮು । ನಂತರಿಸದೆ ಕರ
ದಿ ನೆಳಲವಿದಂ ಮನದಳಲಿಂ ॥ ೨೩೦

ವ॥ ಆಗಳಾತನ ಮನದ ಸಂತಾಪಮು ನರಿದಾನುಂ ದುಃಖಿತ ಹೃದಯನಾಗಿ ಮಿತ್ರನಪ್ಪ ಕಪಿಂಜಲ ನೀಂ ನಿರ್ಭಾಗ್ಯನಾದೆನಗೋಸುಗಂ ಕುದುರೆವರಿಜಂ ತಳೆದು ಪರಾಧೀನನಾಗಿ ಪಲಕೋಟಲೆಗಳ ನನುಭವಿಸಿದೆ ನೋವು ಪಾನೋಚಿತ ಮುಪ್ಪೀಮೊಗದೊಳ್ ನೊರೆವೆರೆದ ನೆತ್ತರುಗುವ ಬೆಟ್ಟಿತಪ್ಪ ಕಡಿಯಣದೇರ್ಗ್ಗಳುಮಂ ಪೊಗೆಯ್ವ ಪದದೊಳ್ಮೇಲೆಕೆಡೆದೆಳವಳ್ಳಿಯ ನೋಂಕಿಗಂ ಬಳಲ್ದೊಡಲೊಳ್ ಚಮ್ಮಟಿಗೆಗುತ್ತುಗಳುಮಂ ಚೆಂದಳಿರ ಮೆಲ್ವಾಸಿನೊಳ್ಮಲಂಗುತಿರ್ದ ನಿನ್ನೀಜೆನ್ನೆಲುವಿನೊಳಾವಗಂ ಬಿಗಿದಿರ್ದ ಪಲ್ಲಣದೊತ್ತಿನಿಂ ದೊಗೆದ ದಡ್ಡುಗಳುಮಂ ಜನ್ನಿವಾರಮಂ ತಳೆವೀಮೆಯ್ಯೊಳ್ತೊವಲ್ವಾರಜೆಗಳ ಕಟ್ಟಿಂಪ್ರಟ್ಟಿವ ಜೇನೆಯುಮು ನೆಂತುಸೈರಿಸಿದೆ ಯೆಂದೀ ತೆರದ ಪೂರ್ವವೃತ್ತಾಂತಾಲಾಪಂಗಳಿಂ ದಾಗಳಾಂ ತಿರ್ಯಗ್ಜಾತಿದುಃಖಮಂ ಮಱೆದು ಸಂತಸದಿ ನಿರ್ಪನ್ನೆಗಂ ॥ ೨೩೧

ಕಂ॥ ಗಗನಾಂಗಣ ಸೌಧಾಗ್ರದೊ । ಳೊಗುಮಿಗೆಯಿಂ ರಾಜಿಸಿರ್ಪ
ಮಣಿಕಲಶಂಬೊಲ್ ॥ ಸೊಗಯಿಸಿದುದು ಮಿಗೆಮಧ್ಯಾ । ಹ್ನಗತಂ ರವಿಬಿಂ
ಬ ಮಾಗಳಂಬರ ತಲದೊಳ್ ॥ ೨೩೨

ವ॥ ಆಗಳಾಹಾರೀತಂ ಕಪಿಂಜಲಂಗ ಮೆನಗಮುಚಿತ ಮಾದಾಹಾರದಿಂತಣಿಪಿದ ನಂತರಂ ಕಪಿಂಜಲಂ ಕಿಱಿದುಪ್ರೊಳ್ತಂ ಕಳೆದೆನ್ನಂ ಕುರಿತ್ತು ಕೆಳೆಯನೆ ತಾತಂ ತಾನೆಸಗುವಾಯುಷ್ಕರಯಜ್ಞಂ ಪೂರ್ಣಮಪ್ಪನ್ನೆಗಮಾ ಪೂಜ್ಯನಪ್ಪ ಜಾಬಾಲಿಯಾಶ್ರಮದಿಂ ಚಲಿಸಬಿರಾನುಮಾ ಕರ್ಮದೊಳೆ ವ್ಯಗ್ರನಾಗಿರ್ಪೆ ನವೞಿಂದೀ ಗಳಾಂ ಪೋಪೆನೆಂದೆನ್ನಂ ತಳ್ಕೈಸಿ ವಿಸ್ಮಯಾವಿಷ್ಟ

---

೨೩೦. ತುಪ್ಪುಳ—ತುಬಟದ.

೨೩೧. ಕುದುರೆವರಿಜಂ—ಅಶ್ವಾಕೃತಿಯನ್ನು; ನೆತ್ತರುಗುವ—ರಕ್ತಸುರಿಯುವ; ಬೆಟ್ಟಿತಪ್ಪ—ಕಠಿನವಾದ; ಏರ್ಗಳುಮಂ—ಗಾಯಗಳನ್ನೂ: ಚಮ್ಮಟಿಗೆಗುತ್ತು—ಕಶಾಘಾತ ಅಂದರೆ ಕೊರಡೆಯ ಏಟು; ದಡ್ಡು—ಜಡ್ಡು; ತೊಗಲ್ವಾರಜೆ—ಚರ್ಮದ ಹಗ್ಗ ಅಂದರೆ ಲಗಾಮಿನಬಾರು.

ರಾದ ಮುನಿಕುಮಾರರುನ್ನಮಿತಾನನರಾಗಿ ನೋಡುತ್ತಿರೆ ಗಗನಕ್ಕೊಗೆದ ನೃತ್ಯನಾದಂ ಬಳಿಕ್ಕಂ ಹಾರೀತನೆನ್ನಂ ಕೆಲವಾನುಂದಿವಸಂ ಪ್ರೋಷಿಸುತ್ತಿರಲೆನಗಗರಿಗಳೊಗೆದು ಪಾಱುವನಿತುಬಲಮುಜಯಿಸೆ ಮನದೊಳಿಂತಾಲೋಚಿಸಿದೆಂ ॥ ೭೩೪

ಸ್ರ ॥ ಕ್ಷಮನಾದೆಂ ನಭದಲ್ಲಿಪಾಱಲುರೆಚಂದ್ರಾಪೀಡನುತ್ಪತ್ತಿಯಾ। ಕ್ರಮಮುಂ ಮೋಕ್ಷಕ್ಕೆ ಇಮಿಂಗೆಬಂದುದನಱಂ ದಾರಾಜಚಂದ್ರಾಂಕನಂ ॥ ನಿಮಿಷಂ ನೋಡದಿರಲ್ಕವಾಜಿ ನಹಹಾ ವಿನಾನುಮುಕ್ಕೀಗಳಿಂ । ಗಮಿಪೆಂ ತಾನವನಲ್ಲಿಗೆಂದು ಮನದೊಳ್ ನಿಶ್ಚೈಸಿದೆಂ ಭೂಪತೀ ॥ ೭೩೪

ವ ॥ ಅಂತುನಿಶ್ಚೈಸಿ ಬಳಿಕೊಂದುದಿನಂಪ್ರಾತರ್ವಿಹಾರಾರ್ಥಮುತ್ತರಾಭಿಮುಖನಾಗಿ ಮೆಲ್ಲನೆ ಪೊರಮಟ್ಟು ಬಳಲ್ಕೆಯಿಂ ಬಸವಳಿದುಪಾಱಲಱವಿಲ್ಲದೆ ಸಮೀಪದೊಳಿರ್ದ್ದ ಹರಿತಪಲ್ಲವಭರಾವನಮ್ರಮಾದೊಂದು ಜಂಬೂವೃಕ್ಷ ಮನಡರ್ದ್ದುಕಿಱದು ಬೇಗ ಮಿರ್ದ್ದುಚೇತರಿಸಿ ಕೊಂಡಲ್ಲಿಂ ತಳರ್ದ್ದು ೭೩೫

ಮ ॥ ಕುಳಿರುತ್ತಂ ಸುತ್ತಲುಂ ಕತ್ತಲಿಪ ತರುತಲಚ್ಛಾಯೆಯುಂ ಸಾರ್ದ್ದುಸಾರ್ದ್ದು । ತ್ಪಲಗಂಧೋದ್ಗಾರಿ ಪಂಪಾಸರದ ಸಲಿಲಮುಂ ಪೀರ್ದ್ದುಪೀರ್ದ್ದುಬೀಜಾ । ವಳಿಯುಂ ತೀರದ್ರುಮಾಂದೋಳಿತ ಫಲತತಿಯುಂ ಕಾರ್ದ್ದುಕಾರ್ದ್ದೊರ್ದ್ದಸ್ಸನಲ್ಲಿಂ । ತಳ್ *[ದಾರ್ಂ ಮತ್ತೊಂದು ತಣ್ಣಂ]ತಳೆದ ತರುತಲಸ್ಕಂಧದೊಳ್ ಕ್ರಂದನಾಗಳ್ ॥ ೭೩೬.

ವ ॥ ಅನ್ತುನಿಂದು.—

ಕಂ ॥ ಇನ್ನುಮಪರಾಹ್ನದೊಳ್ಕಱು । ದುನ್ನತನೋಡುತ್ತೆ ಮನದೊಳಿಂ ಚಿಂತಿಸುತಿ । ರ್ಪನ್ನೆಗ ಮಧ್ಯಕ್ರಮದಿಂ । ದನ್ನದೆಮಾಯ್ದ್ದನಗೆನಿದ್ರೆಬಂದತ್ತಾಗಳ್ ॥ ೭೩೭

---

೭೩೬. ಸುತ್ತಲುಂ, ಕ. ಸುತ್ತಂ—ತಣ್ಣನೆ ಕೊರೆಯುತ್ತ; ಸಾರ್ದ್ದುಸಾರ್ದ್ದು—ಅಲ್ಲಲ್ಲಿ ಸೇರಿಸೇರಿ; ಕಾರ್ದ್ದುಕಾರ್ದ್ದು—ಭಕ್ಷಿಸಿ, ಭಕ್ಷಿಸಿ.

*[ದೇಂ ಮತ್ತೊಂದು ತಣ್ಣಂ]

ವ ॥ ಅನ್ತು ಸಿದ್ರೆಗೆಯ್ದು ಕಿಱಿದುಬೇಗಕ್ಕೆಂತಾನು ಮೆಚ್ಚತ್ತು ನೇಣ್ಬಲೆಯೊಳ್ಸಿಲುಕಿರ್ದೆನ್ನಂ ಕಂಡಿದೆತ್ತಣಿಂ ಬಂದುದೆಂದು ನೋಳ್ಪನ್ನೆಗಮುದ್ಬದ್ಧಭೀಷಣ ಭ್ರುಕುಟಿಯುಂ ಮಕಾರಣಕ್ರೋಧಾಂಧಕಾರಿತ ರೌದ್ರಮುಖನು ಮಾರಕ್ತತಾರಕಾಕ್ಷನು ಮಾಗಿಕೇವಲಕಾಲಾಯಸ ಪರಮಾಣುಗಳಿಂ ನಿರ್ಮಿಸಿದಂತೆ ರೌದ್ರಾಕಾರನಾದಕಾಲಪ್ರುಷನೋರ್ವನಂ ಕಂಡುಭಯಂಗೊಂಡು ಮೆಲ್ಲನಿಂತೆಂದೆಂ ॥ ೭೩೮

ಕಂ ॥ ಎಲೆನೀನಾರೇಕಿಕ್ಕಿದೆ । ಬಲೆಯುಂ ಪೇಳಣ್ಣನಿನಗೆ ಮಾಂಸ
ದೊಳಾದೊಂ । ದೊಲ*[ವು ಸಮನಿಸಿದೊ]ಡಕ್ಲಿಯು । ಕೊಲಲೊಲ್ಲದೆಮಾ
ಣ್ದೆಯೇನಿದಚ್ಚರಿಯಲ್ತೇ ॥ ೭೩೯

ಕರುಣಿಸಿ ಬಿಡುವಲ್ಲಭಜನ । ನಿರೀಕ್ಷಣೋತ್ಸುಕನೆ ನಿನಗೆ ಪ್ರೋಪಿತೆ
ದೂರಂ । ತರಮುಂತುಂ ಪ್ರಾಣಿಗಳೆ । ಲ್ಲರಾಸೆಯುಂ ಬಗೆಪ್ರೊಡೊಂದೆ
ನೀನಱಿಯದುದೇ ॥ ೭೪೦

ವ ಎಂಬುದು ಮೆನ್ನನಾತನಿಂತೆಂದ ನಾಂ ಕ್ರೂರಕರ್ಮಜಾತಿಯಪ್ಪ ಚಂಡಾಲನೆನಪ್ಪೆ ನಾದೊಡಂ ಮಾಂಸಲೋಭಚಿತ್ತದೊಳ್ ಪಿಡಿದನಲ್ಲಿತ್ತಲ್ಲಿಗನತಿದೂರದೊಳ್ ಮಾತಂಗರಪಳ್ಳಿಯಿರ್ಪುದಲ್ಲಿಗೆನ್ನಾಳ್ದನೊಡೆಯ ನಾತನ ಮಗಳ್ ಕೌತುಕದಿಂ ನಿನ್ನಂಪಿಡಿದುತರಲೆಂದು ಪಲಂಬರ ನಟ್ಟಿದೊಡೆನ್ನ ಪುಣ್ಯದಿಂ ನೀನೆನಗೆ ದೊರೆಕೊಂಡೆ ನಿನ್ನ ನೆನ್ನಾಳ್ತಿಯಲ್ಲಿಗೊಪ್ಪಿಸುವೆ ನಲ್ಲಿಂಮೇಲೆ ಬಿಡುಗ ಬಿಡದಿರ್ಕೆ ನಿನಗಾಯುಷ್ಯಿಯೊಡೆಯಳೆಂಬುದಂ ಪೇಳ್ವುದುಮದಂ ಕೇಳ್ದು ತೊಟ್ಟನೆ ನೆತ್ತಿಯುಂ ಸಿಡಿಲ್ವೊಡೆದಂತಾಗೆ । ೭೪೧

೭೩೮. ಕಿಱಿದುಬೇಗಕ್ಕೆ — ಸ್ವಲ್ಪ ಹೊತ್ತಿಗೆ ; ನೇಣ್ಬಲೆಯೊಳ್ — ಹಗ್ಗದ ಬಲೆಯಲ್ಲಿ.

೭೪೦. ಪ್ರೋಪಿತೆ — ಹೊರಗೆ ಹೋಗಿರುವ ಸ್ತ್ರೀ : ದೂರಾಂತರಂ — ದೂರದಲ್ಲಿರತಕ್ಕದ್ದು ; ಉಂತುಂ — ಹಾಗೂ ; ಪ್ರಾಣಿಗಳೆಲ್ಲರಾಸೆಯುಂ, ಬಗೆಪ್ರೊಡೆ — ಯೋಚಿಸಿದರೆ : ಒಂದೆ.

೭೪೧. ಅಲ್ಲಿಗೆ — ಆ ಚಂಡಾಲರ ಹಳ್ಳಿಗೆ ; ಎನ್ನಾಳ್ದಂ — ನನ್ನ ಯಜಮಾನನು ; ಒಡೆಯಂ — ದೊರೆಯಾಗಿದ್ದಾನೆ : ಆಳ್ತಿ — ಒಡತಿ.

*[ವಸಮೊಪಿಡಿದ]

ವೃ । ಪಡೆವಳನೇಕ[ಲೋಕ]ಜನವಂದಿತೆ ಲಕ್ಷ್ಮಿಯೆನಲ್ಕೆ ನೋಂಪ
ದಿಂ । ನಡೆಸಿದನೆನ್ನನಾ ತ್ರಿಭುವನಾರ್ಚಿತನಪ್ಪ ಮಹೇಂದ್ರನೆಂದು ಮಿ ।
ರ್ಪೆ(?)ಡೆ ಸುರಲೋಕ ಮಕ್ಕುಟನಗೇ ಪ್ರೊಲವಟ್ಟಿನ ಮೇಲೆ ಬೆಳ್ಳಿದೊಂ ।
ದಡಸಿದು ದಾನವಪಾಪಮನೆ ಮಾಡಿದೆನಿಂತಿರೆ ಮಂದಭಾಗ್ಯನೆಂ ॥ ೨೪೨

ಕಂ । ಎಲೆ ಪುಂಡರೀಕ ಬಿಡುಜ । ನ್ಮಲೋಭವಮಂ ನಿನ್ನಗೆಯ್ದ ಕ
ರ್ಮಂ ವಿಹಿತಂ ತಲೆಯೊಳನುಭವಿಸುವೀಕೋ । ಟಲೆಯಿಂ ಗರ್ಭದೊ
ಳ್ ಕರಗನೇಕೆಯೊ ಮೊದಲೊಳ್ ೨೪೩

ವೃ । ರಕ್ಷಿಸಲಾಗದೇ ಜಗದಭೀಷ್ಟಫಲಪ್ರದೆ ತಾಯೆ ಲಕ್ಷ್ಮಿಪೇ ।
ಳ್ ಕ್ಷಮನಾದ*[ನಿನ್ನ ಮಗನಂ]ಪರಿರಕ್ಷಿ†[ಪ್ರದಿಲ್ಲಿ]ವಿಪ್ವರ ॥ ಕ್ಷಾಕ್ಷಮ ತಾತ
ನೀಂ ಮಗುಳ್ದು ಬಂದು ಕಪಿಂಜಲ ಮಾಳ್ಪ‡[ದೆನ್ನಕ] । ಮರ್ಗಕ್ಷಯಮಂ
ಭವಾಂತರದೊಳಾದೊಡಮಕ್ಕುಮೆ ಮತ್ಸಮೀಹಿತಂ ೨೪೪

ವ ॥ ಎಂದಿನ್ನವೊದಲಾಗಿ ಪಲವುಮಂ ಪ್ರಲಾಪಿಸುತ್ತು ಮಾ ಮಾತಂ
ಗನೆ ನಿಂತೆಂದೆಂ ॥

ಕಂ । ಜಾತಿಸ್ಮರನಾದೆಂ ಮುನಿ । ಜಾತಿಯೆ ನಾಂ ಮುನ್ನ ಶಾಪದಿಂದಂ
ತ್ರಿಯರ್ಗ್ ಗ್ಗಾಪ್ತಿಗೆ ಬಿಳ್ದಂ ಬಿಡುಮಃ । ಖಾತುರನೆಂ ನಿನಗೆ ಪುಣ್ಯಮಕ್ಕು
ಮಗಣ್ಯಂ ॥ ೨೪೫

೨೪೨. ಪ್ರೊಲವಟ್ಟಿನಮೇಲೆ—ಕಂಬಾಲದ ಬೀದಿಯಲ್ಲಿ; ಬೆಳ್ಳುದೊಂದು—ಆ
ರುವದೊಂದು; ಅಡಸಿದುದು—ಪ್ರಾಪ್ತವಾಯಿತು.

೨೪೩. ನಿನ್ನಗೆಯ್ದ ಕರ್ಮಂ—[illegible]; ತಲೆಯೊಳ್ ವಿಹಿತಂ—[illegible]; ಕೋಟಲೆಯಿಂ—[illegible].

೨೪೪. [illegible] ಕ್ಷಮನಾದ [illegible] ಮಾಳ್ಪುದು [illegible] ಪದೆ ಹೋದರೆ; ಭವಾಂತರದೊಳಾದೊಡಂ—[illegible]; ಮತ್ಸಮೀಹಿ
ತಂ—ನನ್ನ ಇಷ್ಟಾರ್ಥವು; ಅಕ್ಕುಮೆ—ಆದೀತೆ.

೨೪೫. [illegible]

*[ನಿನ್ನ್ಯುಮಿವನಂ] †[ಸುವಲ್ಲಿ] ‡[ದಂಣಕ]

ವ|| ಎಂದಡಿಗಡಿಗೆ ಕಾಲಮೇಲೆಬೀಳ್ವುದು ಮಮಂಬೆಟ್ಟವೆಟ್ಟನಿಂತೆಂದಂ

ಕಂ|| ಮುನಿಯೋ [ಯಕ್ಷನೊ] ಗಂಧ | ರ್ವನೊ ರಾಕ್ಷಸನೋ
ಪಿಶಾಚನೋ ನೀನಿನ್ನಾ | ವನು ಮೆಂಪಱಿಯೆಂ ಮತ್ತಾ | ವಿನಿಗೊಯ್ದೊ
ಪ್ಪಿಸುವೆ ನೀಂಗಳನಿತನೆ ಬಲ್ಲೆಂ || ೨೪೬

ವ|| ಎಂದೆನ್ನಂ ಪಿಡಿದುಕೊಂಡು ದಕ್ಷಿಣಾಭಿಮುಖನಾಗಿ ಪೋಪ್ಪ
ದು ಮೆನಗಿಂ ಪ್ರಾಣಪರಿತ್ಯಾಗಮೇ ಪ್ರತಿಕ್ರಿಯೆಯೆಂದು ನಿಶ್ಚೈಸುವಿನ
ಮನ್ನೆಗಂ ಮುಂದೆ ಜೀರ್ಣವಾಗುರಾಗ್ರಥನ ವ್ಯಗ್ರರುಂ ಗೃಹೀತಕಾಂಡ
ಕೋದಂಡರು ಮುದ್ದಂಡಪಾಣಿಗಳುಂ ಬಹುವಿಧಗ್ರಾಹಕ ವಿಹಂಗ ವಾಚಾಲ
ನಾಕುಶಲರುಂ ಕೌಲೇಯಕಮುಕ್ತಿ ಸಂಚಾರಣ ಚತುರರುಮಪ್ಪ ಚಂಡಾಲ
ಶಿಸುಗಳ್ ದೆಸೆದೆಸೆಗೆ ಪರಿದು ಬೇಂಟೆಯಾಡುತ್ತ ಮಿರೆ ಮತ್ತಮಾನಂತೆ ಪೋಗೆ
ವೋಗೆ ಪೊಲಸಿನ ಗಂಧಮುಂ ಪೊತ್ತು ಕಿಱುಕವ್ವರೆಗೊಳ್ವ ಕೌರಪೊಗೆಯಿ
ನಱಿಯಲಾದ ಬೇಡವಟ್ಟಮುಂ ಕಂಡೆನಲ್ಲಿ *[ಯೆಲುವೆ ಮನೆಯುಕಸದಕೂ
ಟಂ] ಬಸೆಯೆ ತುಪ್ಪಂ ನಾಯ್ಗಳ್ ಪರಿವಾರಂ ಮದ್ಯಮೆ ಪುರುಷಾರ್ಥಂ ನೆತ್ತ
ರೆ ದೇವತಾರ್ಚನೋಪಕರಣಂ ಪಶೂಪಹಾರಮೆ ಧರ್ಮಮಂತುಮಲ್ಲದೆಯುಂ

ಕಂ|| ನರಕದ ನೆಲೆ ಪೇಸಿಕೆಗಳ | ಕರು ಮಸಣದ ಪುಟ್ಟು ಪಾಪದೆ
ಱಿ ಪಾತಕದಾ | ಗರಮುದು ನೆನೆವಗ್ಗ ಭಯಮುಂ | ಕರಮತಿಪಾಪಕರ ಮಾದು
ಮದ್ವೇಗಕರಂ || ೨೪೮

ವ|| ಅಂತದಂ ಕಂಡು ಕಂಟಣಿಸುತ್ತ ಮೆನ್ನೊಳಿಂತೆಂದೆಂ.—

ವೃ|| ಬರುತಿರೆ ಕಂಡು ದೂರದೊಳ್ ತನ್ನಯಜಾತಿಗೆ ತಕ್ಕುವಲ್ತೆ

೨೪೭. ಕಿಱುಕಾವರೆಗೊಳ್ವ—ಸ್ವಲ್ಪವಾಗಿ ಹೊಗೆಯುತ್ತಿರುವ; ಕೌರಪೊಗೆ
ಯಿಂ—ಸೀಕಲುಹೊಗೆಯಿಂದ; ಬೇಡವಟ್ಟಮುಂ—ಕಿರಾತನಿವಾಸಸ್ಥಾನವನ್ನು.

೨೪೯. ಬರುತಿರೆ—ನಾನು ಪಟ್ಟಣಕ್ಕೆ ಬರುತ್ತಿರಲು, ದೂರದೊಳ್; ಕಂಡು—
ನನ್ನನ್ನು ಆ ಹೊಲತಿಯು ನೋಡಿ; ತನ್ನಯಜಾತಿಗೆತಕ್ಕುವಲ್ತೆನಲ್—ತನ್ನ ಜಾತಿಗೆ
ತಕ್ಕದ್ದಲ್ಲದ;

*[ಎಲುವಿನನೆಯೂಟು]

ನ | ಕ್ಕರುಣಮನಪ್ಪುಕೆಯ್ದು ಮನದೊಳ್ಪಿಡುವಂತು*[ಟದೊಂದವಳ್ಗೆ]ಪೇ|
ಳ್ವೆರಕೊಳ ಲಾರ್ಕ್ಕವೇಂ ಪೊಲತಿಗೆನ್ನಯ ಪುಣ್ಯದೊಳೆಂದು ಭಾ | ವಿ
ಸು | ತ್ತಿರ ಲಿರದೆಯ್ದಿದಂ ಪೊಲೆಯನಾ ಪೊಲೆವಟ್ಟಿನೊಳಿರ್ದ್ದ ಕನ್ನೆಯಂ॥

ವ ಕಂಡು ಗೆಂಟಜೊಳ್ ಪೊಡವಟ್ಟು ಮೆಲ್ಲನೆ ನೀಡೆ ಲೇಸುಗೆಯ್ದೆ
ಯೊಂದೆನ್ನಂ ಕರತಲದೊಳ್ ತಳೆದು ೩೫೦

ಕಂ ॥ ಎಯ್ದೆ ಬೆಡೆಯೆಲ್ಲಿಮಂ ನೀ | ನೆಯ್ದಿದೆ ಮತ್ತಿರದೆಮಗನೆ ಮಾ
ಣದೆ ಪೇಳ ॥ ನ್ನೆಯ್ದಿದಪೆ ಯೆಲ್ಲಿಗಳ್ಕಟ | ನು[ಯ್ದ]ಪೆ ನಾಂ ಕಾವು| ಪರ
ತೆಯಿಂದಂ ಕೆಟ್ಟೆಟ ॥ ೩೫೧

ವ ॥ ಎಂದಾಚಂಡಾಲಕನ್ನಿಕೆ ರೋಮಾಂಬೊರೆದ ಪಂದೊವಲ ಪಂ
ಜರದೊಳಿಕ್ಕಿ ಮಹಾಶ್ಚರ್ಯಾವಲೋಕನ[ಕೆ ತಗೆಯಂ] ಮಾಳ್ಪಂತೆ ಪಡಿ
ಮಂ ಕತ್ತಗುಳಿಯು ನಿಕ್ಕಿ ನೀನಿಂತಿರೆಂದು ನಿರ್ವೃತಾಂತರಾತ್ಮೆಯಂತೆ ನುಡಿದು
ಸಿರವಿದೆರ್ದ್ದಡಾನು ಮಾಪಂಜರದ ಪಡಕೆಯೊ ಳಿದ್ದೆನ್ನೊಳಿಂತೆಂದೆಂ ॥

ಅಕ್ಕರ ನುಡಿವೆ ನಪ್ಪೊಡೆ ಲೇಸಾಗಿ ನುಡಿಯಲ್ಕೆ ಬಲ್ಲುದೀಗಿಳಿಯೆಂ
ದು ಕನ್ನೆಯೆನ್ನಂ | ಬಿಡದಿಕ್ಕ್ಕವುದಜೊಂದ ವಿಷಕನ್ನಿಕೆ ನುಡಿಯಿಸಿದೊಡ
ಮೆಂತುಂ ನುಡಿಯದಿಪ್ಪೆಂ ॥ ನುಡಿಯುದಿರ್ದ್ದ ನಪ್ಪೊಡೆ ಕಡುಮುಳಿಸಿಂದಂ
ಪಿಡಿದಪ್ಪವಸ್ಥೆಯ ನೆಯ್ದಿಸುಗುಂ | ನುಡಿಯದಂತು ಮೌಬಾರ್ತೆಯೆಂಪು ಮೇ
ಣ್ಬೆ ಶುಗಮೆ ಪೇಳಿಸುತ್ತೆ ಬಗೆಯುತ್ತಿರ್ದ್ದೆಂ | ೩೫೨

ಕರುಣಮಂ, ಮನದೊಳ್, ಅಪ್ಪುಕೆಯ್ದು — ಹೊಂದಿ ; ಬಿಡುವಂತುಟು—ನನ್ನನ್ನು ಬಿಟ್ಟು
ಬಿಡುವಹಾಗೆ ; ಅದೊಂದು —ಅದೊಂದು ಮನಸ್ಸು ; ಅವಳ್ಗೆ ಪೊಲತಿಗೆ—ಆ ಹೊಲತಿಗ ;
ದೊರೆಕೊಳಲಾರ್ಕವೇ—ಲಭಿಸುದೀತೆ : ಎಂದು ಭಾವಿಸುತ್ತಿರಲ್—ಎಂದು ನಾನು
ಮನಸ್ಸಿನಲ್ಲಿ ಯೋಚಿಸುತ್ತಿರಲು ; ಪೊಲೆವಟ್ಟಿನೊಳ್—ಚಂಡಾಲನಾಟಿಯಲ್ಲಿ.

೩೫೧. ನಾಂ—ನಾನು ; ಉಯ್ದಪೆಂ—ಅಡ್ಡಿಮಾಡುವೆನು.

೩೫೨. ತಗೆಯಂ—ಅಡ್ಡಿಯನ್ನು ; ಮಾಳ್ಪಂತೆ—ಮಾಡುವಹಾಗೆ ; ಪಡಿಯಂ
ಕೆತ್ತಿ—ಬಾಗಿಲನ್ನು ಮುಚ್ಚಿ ; ಪಡಕೆ—ಜಾಲಂದರ.

*[ಟುದೊದವಳ್ಗೆ]

ವೃ ॥ ಸುರಲೋಕ ಭ್ರಷ್ಟನೆಂ ಮರ್ತ್ಯರೊಳುದಯಿಸಿ ತಿರ್ಯಕ್ತ್ವದೊಳ್ನಿಲ್ವಚಂಡಾ | ಲರ ಕಯ್ಯೊಳ್ಬೀಳ್ವ ತೋಳ್ಪಂಜರದ ಪಡಕೆಯೊಳ್ನಿಲ್ವ ದುರ್ವಾರ ದುಃಖದೋ | ತ್ಕರಮೆಲ್ಲಂ ನೋಡೆ ಚೆನ್ನಿಂದ್ರಿಯ ನಿವಹದ ದೋಷಂದಲಿಂ ವಿಜ್ಞಜಂತಾ | ಗಿರಿಸಲ್ವೇಳ್ಕೆಂದವಂ ನಿಗ್ರಹಿಪ ನಿಯಮದಿಂ ಮೌನದಿಂ ಪಿರ್ದೆನಾಗಳ್ ॥ ೭೫೪

ವ ಅಂತು ನಿಖಿಲೇಂದ್ರಿಯ ನಿಗ್ರಹಕ್ಕೆ ನಿಶ್ಚಯಂಗೆಯ್ದೆನಗೆ ಮರಣಮೆ ಶರಣಮೆಂದಿರೆ ತಮಂತಮಾಗೆ ಬಂದು ॥ ೭೫೫

ಕಂ ನುಡಿಯಿಸಿದೊಡ ಮುಱೆಬಿಡೆ ಜಡಿ | ದೊಡ ಮೋವದೆ ಪಿಡಿದು ಬಡಿದೊಡಂ ಕೋಪದೊಳ ವಾಂ ॥ ನುಡಿಯದೆ ಕಿವಿ ಘೀಳೆನೆ ಘೀ | ಳಿಡುತಿರ್ದೆಂ ಕುಟುಕನೊಲ್ಲೆ ನಂತಿಕ್ಕಿದೊಡಂ ೭೫೬

ವ ॥ ಅಂತಾದಿವಸಮ ನನನನದೊಳ್ಕಳೆಯಲಾ ಕನ್ನೆ ಕಂಡು ನೋವಂತೆ ಗೆಯ್ದು ಪಲತೆಱದ ಪಕ್ವಫಲಂಗಳುಮಂ ಸುರಭಿಶೀತಲಜಲಂಗಳುಮಂ ತಾನೆತಂದು ನೀಡೆಯುಮೊಲ್ಲದಿರಲೆನ್ನನಿಂತೆಂದಳ್ ನಿರ್ವಿಕಾರಚಿತ್ತವೃತ್ತಿಗಳಪ್ಪ ಪಕ್ಷಿಗಳ್ ಪಸಿವುಂ ನೀರಳ್ಕೆಯುಮಾಗಲುಪಯೋಗಿಸದು ದೊಂದುವಿಲ್ಲೆತ್ತಾನುಂ ಭೋಜ್ಯಾಭೋಜ್ಯ ವಿವೇಕನೆನಾಂ ಜಾತಿಸ್ಮರವಾಹಾರಮಂ ಪರಿಹರಿಸುವೆ ನೆಂಬೆಯುಪ್ಪೊಡೆ ಭಕ್ಷ್ಯಾಭಕ್ಷ್ಯರಹಿತಮಪ್ಪ ತಿರ್ಯಗ್ಜಾ

---

೭೫೪. ವಿಜ್ಞಜಂತಾಗೆ—ವಿಜ್ಞಜನನಾಗೆ; ಇರಿಸಲ್ವೇಳ್ಕುಂ—ಕಾಪಾಡಬೇಕು; ಎಂದು, ಅವಂ—ಆ ಇಂದ್ರಿಯಗಳನ್ನು; ನಿಗ್ರಹಿಪನಿಯಮದಿಂ—ನಿಗ್ರಹಮಾಡುವ ವ್ರತದಿಂದ.

೭೫೬. ಉಱೆನುಡಿಯಿಸಿದೊಡಂ—ಬಹಳವಾಗಿ ಮಾತಾಡಿಸಿದರೂ; ಬಿಡೆ—ಬಹಳವಾಗಿ; ಜಡಿದೊಡಂ—ಗದರಿಸಿದರು; ಓವದೆ—ನಿಲ್ಲದೆ; ಕಿವಿ, ಘೀಳೆನೆ—ಛಿಟ್ಟೆನ್ನುವಹಾಗೆ; ಘೀಳಿಡುತಿರ್ದೆಂ—ಕಿರಚುತ್ತಿದ್ದೆನು.

೭೫೭. ನೋವಂತೆಗೆಯ್ದು—ವ್ಯಸನಪಡುವವಳಂತೆ ಕಾಣಿಸಿಕೊಂಡು; ನೀಡೆಯುಂ—ಕೊಟ್ಟಾಗ್ಯೂ; ಪಸಿವುಂ—ಹಸಿವೆಯೂ, ನೀರಳ್ಕೆಯುಂ—ಬಾಯಾರಿಕೆಯೂ; ಎತ್ತಾನುಂ ಬಂದುವೇಳೆ: ಭೋಜ್ಯಾಭೋಜ್ಯವಿವೇಕನೆಂ, ಆಂ—ನಾನು;

ತಿಯೊಳ್ಪುಟ್ಟಿದನಿನಗೆಯುಮಭಕ್ಷ್ಯವೊಂದುಮಿಲ್ಲಂ ಮೊದಲೊಳುತ್ಕೃಷ್ಟಜಾತಿಯೊಳ್ಪುಟ್ಟಿ ತಿರ್ಯಗ್ಜಾತಿಗೆ ಬಿಳ್ದಂದೇ ನಿನ್ನವಿವೇಕಮಱಿದಂತುಟವಲಮಿನ್ನಿನಗೆ ಜಾತಿಗೆತಕ್ಕಂತಾಹಾರಮ ನಾಚರಿಸೆ ದೋಷಮಿಲ್ಲಮಲ್ಲದೆಯುಂಭಕ್ಷ್ಯಾಭಕ್ಷ್ಯ ನಿಯಮಿತಗ್ರ್ರಾಸಪನ್ನಿಷಯದೊಳ್ ಪ್ರಾಣಸಂಧಾರಣಾರ್ಥಮುಭೋಜ್ಯೋಪಭೋಗ ಮುಂಟೇಗಳೆತ್ತಾನುಮಾಸಿತ್ತುಪ ನೊಲ್ಲೆನೆಂಬೆ ಯಪ್ಪೊಡೆ *[ಚಂಡಾಲಭಾಂಡದಿಂ ಭೂಮಿಪತಿತಮಾದಂಬುವುಂ] ಪವಿತ್ರಮೆಂಬುದುಂಟದಱಿಂ ಕ್ಷುತ್ಪಿಪಾಸೆಗಳ ನಾಯಾಸಂಬಡದೆ ಮುನಿಜನೋಚಿತ ಮಪ್ಪ ನವಫಲಂಗಳ ನುಪಭೋಗಿಸೆಂದುನುಡಿಯೆ ॥ ೭೫೭

ವೃ ॥ ನಯಮಿಂದಂ ತಿಳಿವುಟ್ಟಿರಲ್ಕೆನಗೆಪೇಳಲ್ಕೇಳ್ದು ಚಂಡಾಲಜಾ।
ತಿಯೊಳೀವಾಕ್ಯಮು ಮೀವಿವೇಕಮು ಮದೆಂತಾದತ್ತೊಪೇಳೆಂದು ವಿ॥
ಸ್ಮಯಮುತ್ತೆಂದುದುಗೆಯ್ದನೆಂಬ ಬಗೆಯೊಳ್ಬಾಳ್ವಾಸೆಯಿಂ ಕ್ಷುತ್ಪಿಪಾ।
ಸೆಯುಮಂ ತಾಳ್ದುಱಲಾಱ ದಾಱಿಸಿದೆ ನಾಂತತ್ಪಾನಪಾನಂಗಳಂ ॥ ೭೫೮

ವ ॥ ಅಂತುಕೆಲವುದಿವಸ ಮಿಪ್ಪನ್ನೆಗಂ—

ಪೃಥ್ವೀ ॥ ಇನೋದಯದೊಳೊರ್ಮೆಕಣ್ದೆಱೆದು ನೋಡುತುಂ ಕಂಡೆನಾಂ । ಕನತ್ಕನಕ ಪಂಜರಸ್ಥಿತನನೆನ್ನನಾಕನ್ನೆಯಂ ॥ ನ್ನಿನಂ ತೆನಿಜರೂಪದಿಂ ದಮೆಸೆದಿರ್ದ †[ಳೆಂತಿಲ್ಲಿಕೇ] । ಳನಂತರ ಮೆತೋಱಿತಿಂದ್ರಪುರದಂತಿ ರಾಪಕ್ಕಣಂ ॥ ೭೫೯

ವ ॥ ಅಂತದಂಕಂಡು ವಿಸ್ಮಿತಾಂತರಂಗನಾಗಿ ಮೌನಮಂ ಬಿಟ್ಟುಕನ್ನೆಯುಂ ಪೆಸಗೊಳಲುಜ್ಜುಗಂಗೆಯ್ವನ್ನ ಮೆನ್ನನೊಡಗೊಂಡು ದೇವರಶ್ರೀಪಾದಂಗಳಂ ಕಾಣಲೆಂದುಬಂದಳ್ ॥ ೭೬೦

ಜಾತಿಸ್ಮರಂ — ಜನ್ಮಾಂತರಸ್ಮರಣೆಯುಳ್ಳವನಾಗಿರುವ ಕಾರಣ ; ಎಂಬೆಯಪ್ಪೊಡೆ— ಎಂದು ಹೇಳುವಪಕ್ಷದಲ್ಲಿ ; ತಿರ್ಯಗ್ಜಾತಿಗೆ, ಬಿಳ್ದಂದೆ — ಬಿದ್ದಾಗಲೆ ; ಎನಗೆ, ನಿನ್ನವಿವೇಕಂ, ಹಲಂಗಱಿದಂತುಟೆ — ಚೆನ್ನಾಗಿ ತಿಳಿದವಾಗಿದೆ. ಆದಿತು.

೭೫೮ ತಿಳಿವುಟ್ಟಿರಲ್ಕೆ — ಸಮಾಧಾನವುಂಟಾಗುತ್ತಿರಲು : ವಿಸ್ಮಯಮುತ್ತು — ಆಶ್ಚರ್ಯಪಟ್ಟು : ಎಂದುದುಗೆಯ್ದನ್—ಹೇಳಿದ್ದನ್ನು ಮಾಡುತ್ತೇನೆ.

*[ಚಂಡಾಲಭೂಮಿಪತಿತಂದುದು] †[ಳಂಕಲ್ಲಿಕಣ]

ಕಂ ॥ ಈಕನ್ಯೆಯಾಗ್ರೆ ಪೆಸರೇ । ನೇಕೆನ್ನಂ ಪಿಡಿದುತರಿಸಿದ ಳ್ಸ ಱಿಯೊಳ್ಮ ॥ ತ್ತೇಕಿಕ್ಕಿದಳಾಗಳ್ತಾ । ನೇಕಿಲ್ಲಿಗೆ ತಂದಳರಿಯೆ ನಿದನವನಿಪತೀ ॥ ೩೬೧

ವ॥ ಎಂದು ಶೂದ್ರಕ ಮಹಾರಾಜಂಗಾಪ್ರಪಂಚಮೆಲ್ಲಮಂ ಪೇಳೆ ಕೇಳ್ದತಿಕುತೂಹಲಿತನಾಗಿ ಚಂಡಾಲಕನ್ಯೆಯ ನೊಡಗೊಂಡು ಬಾಯೆಂದು ಮುಂದಿರ್ದ್ದ ಪಡಿಯಱಿಗೆ ಬೆಸಸುವುದುಮವಳ್ಪೋಗಿ ಬೇಗದಿನೊಡಗೊಂಡು ಬರೆ ತದುಪದಿಶ್ಯಮಾನ ಮಾರ್ಗೆಯಾಗಿ ಬಂದು ॥ ೩೬೨

ಕಂ ॥ ಮಾಣ್ಗುಳಿದರ ಮೆಯ್ವೆಳಗೆನೆ । ಕಣ್ಗಳ್ಗೀರಯ್ಸೆ ತೊಳಗಿಬೆಳಗುತ್ತಂ ಮುಂ ॥ ದಣ್ಗಾಗಿ ನಡೆದು ನೃಪನಂ । ಜಾಣೆ ಕಣ್ಗೊಂಡ ನಿಜಪ್ರಗಲ್ಭವಚನದೆ ನುಡಿದಳ್ ॥ ೩೬೩

ವೃ ॥ ವಿದಿತಾಶೇಷಕಲಾಕಲಾಪ ಭುವನಾಲಂಕಾರ ಕಾದಂಬರೀ। ಹೃದಯಾನಂದನ ರೋಹಿಣೀರಮಣ *[ತಾನಾ]ತ್ಮೀಯ ವೃತ್ತಾಂತಮಂ ॥ ವಿದಿತಂ ಪೇಳುತ ಮಿಾದುರಾತ್ಮನಿರೆ ಕೇಳುತ್ತಿರ್ದ್ದನೀಂ ಕೇಳ್ದವಲ್ । ಮೊದಲಿಂ ಪೂರ್ವಭವಾಂತರೋದಿತ ಭವದ್ವೃತ್ತಾಂತ ಸಂತಾನಮಂ ೩೬೪

ವ †[ಮತ್ತ ಮಿಾದುರ್ಬುದ್ಧಿ ಈ ಜನ್ಮದೊಳಂ ಗುರುಗಳಿಂ ನಿಷಿದ್ಧನಾಗಿಯುಂ ತಂದೆಯಮಾತಂ ಮಿಾಱಿ ವಧೂನಿರೀಕ್ಷಣೋತ್ಸು]ಕತೆಯಿಂ ಪಾಱಿಪೋಗುತ್ತ ಮಿರೆ ॥ ೩೬೫

---

೩೬೩. ಉಳಿದರ—ಮಿಕ್ಕವರ ; ಮೈವೆಳಗು—ದೇಹಕಾಂತಿಯು ; ಮಾಣ್ಗೆ—ಹಾಗಿರಲಿ ; ಎನೆ—ಎಂಬುವಹಾಗೆ.

೩೬೪. ತಾಂ—ಈ ವೈಶಂಪಾಯನನೆಂಬ ಗಿಳಿಯು ; ಆತ್ಮೀಯವೃತ್ತಾಂತಮಂ—ತನ್ನ ಸಮಾಚಾರವನ್ನು ; ಪೇಳುತ್ತಿರೆ, ನೀಂಕೇಳುತ್ತಿರ್ದ್ದೆ, ಭವದ್ವೃತ್ತಾಂತಮಂ—ನಿನ್ನವೃತ್ತಾಂತವನ್ನು ; ಕೇಳ್ದೆ—ನೀನು ಕೇಳಿದೆ, ಅಂದರೆ ನಿಮ್ಮಿಬ್ಬರ ವೃತ್ತಾಂತನೂ ನಿನಗೆ ತಿಳಿಯಿತೆಂದಭಿಪ್ರಾಯವು.

*[ತನ್ನಾ]

†[ಮತ್ತ ಮಿನಿರ್ಬುದ್ಧಿ ಗುರುಗಳಿಂ ನಿಷಿದ್ಧವಾಗಿ ತಂದೆಯಮಾತಂಮಿಾಱುವನಿರೀಕ್ಷಣೋತ್ಸು]

ವೃ ॥ ಮಗನಿಂತೀ ಶುಕನೀ ದುರಾತ್ಮಕನ ತಾಯೆಂ ಶ್ರೀಯೆನಾಂ ದಿವ್ಯಚ । ಕ್ಷುಗಳಿಂದೀತನ ತಂದೆಪೋಗಱಿದಿವಂ ತಿರ್ಯಕ್ತ್ವದೊಳ್ಸಿಲ್ವನೆ ॥ ನ್ನಿಗ [ಮಾಯುಷ್ಕರಮಾದ ಯಜ್ಞಮನಿದಂಪೂರ್ಯೆಸದಾಸಿಪ್ಪೆರ್ಗನ] । ನ್ನಿಗವಿಗಳ್ಗೆ ಱಯಿಕ್ಕೆಯಿಂ ನಿಲಿಪ್ರದೆಂದೆನ್ನಲ್ಲಿ ಗಿಂತಟ್ಟಿದಂ ೨೬೬

ವ ॥ ಅದಱಿ ನೀತಂಗೆಂತೆಂತು ವಿರಕ್ತಿಪುಟ್ಟುಗುಮಂತಂತೆ ವಿನಯವೃತ್ತಿನಿಮಿತ್ತವಿನಿತುಮಂ ಮಾಡಿದೆ ನೀಗಳಾಯುಜ್ಞಾವಸಾನ ಸಮಯಮಾಗಿದ್ದುರ್ದವಱಿ ನೀಸಮಯದೊಳ್ ಸಮಸುಖದುಃಖಿಗ ಳಾಗಲೆವೇಳ್ಕು ಮದಱಿಂ ದೀತನ ಜನ್ಮಾಂತರ ಸಹಾಯನಪ್ಪ ನಿನ್ನಲ್ಲಿ ಗೊಡಗೊಂಡು ಬಂದೆನೀವಿರ್ವರುಂ ಜನ್ಮಜರಾಮರಣವ್ಯಾಧಿದುಃಖಬಹುಳಂಗಳಪ್ಪ ತನುಗಳಂ ಬಿಟ್ಟು ದಿವ್ಯದೇಹಂಗಳಂ ಕಯ್ಕೊಂಡು ಇಷ್ಟಜನಸಮಾಗಮ ಸುಖಮನನುಭವಿಸಿಂ ಮರ್ತ್ಯಲೋಕ ಸಂಪರ್ಕಪರಿಹಾರಾರ್ಥ ಮಾಚಂಡಾಲ ವೇಷಮುಂ ತಳೆದಿರ್ದೆ ನಿಂಪ್ರೋಪೆನೆಂದು ॥ ೨೬೭

ಪೃಥ್ವೀ ॥ ಘುಣಘ್ಝಣಿತ ಮೇಖಲಾಕಲಿತ ಹಾರಕೇಯೂರಭೂ । ಷಾಪ್ರಭೆ ದಿಗಂತಮಂ ಬೆಳಗೆ ರಾಜರಾಜ ದ್ಗೃಹಾಂ ॥ ಗಣಸ್ಥಿತ ಜನಕ್ಕೆ ವಿಸ್ಮಯಮನಾಗಿಸುತ್ತುಂ ನಭೋಂ । ಗಣಕ್ಕೊಗೆದ ಳಂದು ಲಕ್ಷ್ಮಿಕುಡು ಮಿಂಚಿದೊಂದೆಂಬಿನಂ । ೨೬೮

ವ । ಅನಂತರ ಮಾಶೂದ್ರಕ ಮಹಾರಾಜನಾವಚನಮಂ ಕೇಳ್ದು ಜಾತಿಸ್ಮರನಾಗಿ ಗಿಳಿಯುಮೊಗಮಂ ನೋಡಿ

ಕಂ ॥ ನೀಂಪುಂಡರೀಕನಮ್ಮೈ । ಶಂಪಾಯನ ಪೂರ್ವಜನ್ಮ ಸಂಬಂಧಯ್ಯಂ ॥ ಡೆಂ ಪುಣ್ಯದಿಂದ ಮಿರ್ವರು । ಮಿಂಪಡೆದಪಮೊಡನೆ ಶಾಪಮೋಕ್ಷದ ಫಲಮಂ ॥ ೨೬೯

೨೬೯. ನೀಂ. ಪುಂಡರೀಕನಮ್ಮ—ಪುಂಡರೀಕನಾಗಿದ್ದೀಯೆ ; ವೈಶಂಪಾಯನ ಪೂರ್ವಜನ್ಮಸಂಬಂಧಮ-ವೈಶಂಪಾಯನನ ಪೂರ್ವಜನ್ಮದಸಂಬಂಧವುಳ್ಳವನಾಗಿದ್ದೀಯೆ. ಇರ್ವರುಂ, ಶಾಪಮೋಕ್ಷದಫಲಮಂ, ಪಡೆದಪಂ—ಪಡೆಯುವ. ಪುಂಡರೀಕನಮ್ಮ, ಇಲ್ಲಿ ಗುಣವಾಚಕವಾದ ಪುಂಡರೀಕಶಬ್ದದಮೇಲೆ ಅಸ್ಮತ್ ವಿಭಕ್ತಿ ಬಂದಿರು ವದು. ಶಮ. ಸೂ. ೨೧೯.

ವ || ಎಂಬುದು ಮನಂತರಂ ಗಂಧರ್ವರಾಜನಂದನೆಯುಂ ಮುಂದೆಸಿಲಿಸಿ ಕರ್ಣಾಂತಾಕೃಷ್ಟಕಾರ್ಮ್ಮುಕನಾಗಿ ಮಕರಧ್ವಜ ನೆಡೆವಿಡದೆ ಮತ್ಸರಿಸಿ ಮನುಜಮಕರಧ್ವಜನ ನೋರಂತಿಸುತ್ತಿರಲಾತನ ಲರ್ಗಣೆಯ ಗಾಳಿಯೆ ಪೊಯ್ದಂತೆ ಮೆಯ್ಯ್ನಡುಗಲೊಡರಿಸಿದು ದಾತನ ನನೆಯಂಬಿನ ಮೊನೆಗಣೆಗಳವೆಂಬಿನಂ ಮೆಯ್ಯ್ನವಿರ್ನ್ನೆಸೆದು ವಾತನ ಕುಡುವಿಲ್ಲ ಜೀವಡೆಗೆ ಬಿಗುತ್ತಿರ್ಪಂತೆ ಕಣ್ಮುಕುಳಿಸಿದು ವಾತನುರಿಯಂಬಿನ ಪ್ರೊಗೆ ಮೊಗಸಿ ದಂತಧರಕಿಸಲಯಂ ನಸುಗಂದಿದು ದಾತನ ವಿಷಮಶರಶಲಾಕೆಗಳಂ ಕೀಲಿತವಾದಂತವಯವಂಗಳ್ ನಟ್ಟುನಿಂದು ವಂತುವ್ಮಲ್ಲದೆಯುಂ ೭೭೦

ಕಂ || ಎಳವರನಂ ಕಾಳ್ಗಿಚ್ಚಿರ | ದಳುರ ಲ್ಬೆವರುಣ್ಮಿ ಪೊಣ್ಮುವಂತಿರಲಾ ಕೋಂ ಮಳತನುವ ನತನುದಾವಾ | ನಳನಳುರಲ್ಬೆವರ್ಗಳುಣ್ಮಿಪೊಣ್ಮಿದುವಾಗಳ್ || ೭೭೧

ವ || ಅಂತು ಸಂತಾಪವೊದವೆ ತಾಪಾಪನೋದನಾರ್ಥಂ ಪ್ರವಾಳಕಮಲಕುವಲಯ ಕಲ್ಹಾರ ಮೃಣಾಳವಲಯ ಮಲಯಜ ಮೌಕ್ತಿಕಾವಳೀ ದರ್ಪಣಾದಿ ಶಿಶಿರೋಪಚಾರಂಗಳಂ ಪರಿಜನಂಗಳ್ ಪರಿತಂದು ಮಾಡೆತನ್ನೊಳಿಂತೆಂದಂ || ೭೭೨

ವೃ || ತಳಿರಂ ಕಾಂತೆಯ ಕೆಂಪಳಂ ಕಮಲಮಂ ಕಣ್ಗಳ್ ಮೃಣಾಳಂಗಳಂ | ನಳತೋಳ್ಕನ್ನಡಿಯುಂ ಕುಚಂ ಮಲಯಜಶ್ರೀಯುಂ ಸ್ಮಿತಂ ಮೌಕ್ತಿಕಾವಳಿಯುಂ ದಂತಮರೀಚಿ ಚಂದ್ರಿಕೆಯ ನಂಗಜ್ಯೋತಿಪೂರ್ಣೇಂದುವಂ | ಜಳವುಂ ಮುದ್ದುಮೊಗಂ ಗೆಲುತ್ತಮಿರೆ ಮತ್ತೇನೆಂದಿವಂತಾಳ್ದುವೆಂ||

ವ || ಎಂದು ಚಿತ್ರರಥನಂದನೆಯುಂ ಹೃದಯದೊಳ್ತಳೆದು.—

ಕಂ || ಆಕೆಯುಪೆಸಪಾಕೆಯ ಮಾ | ತಾಕೆಯ ಮುದ್ದಾಕೆಯಂದವಾಕೆಯತನು ಸೋಂ || ಕಾಕೆಯ ಶ್ರೀವಾಕೆಯ ಮುಳಿ | ಸಾಕೆಯ ಕೊಟಮೆ ದಲಿರ್ದ್ದುದರಸನ ಮನದೊಳ್ || ೭೭೪

೭೭೦. ಮೆಯ್ನವಿರ್—ಶರೀರದ ರೋಮಗಳು ; ಜೀವಡೆಗೆ—ಜ್ಯಾನಾದಕ್ಕೆ.
೭೭೧. ಎಳವರನಂ—ಎಳೇಮರವನ್ನು ; ಅಳುರಲ್—ಆವರಿಸಲು.

ವ ॥ ಅದಲ್ಲದೆಯುಂ ಗಿಳಿಯ ಮೊಗಮಂ ನೋಡಿ ನೃಪರೂಪಚಂದ್ರಂ ಚಂದ್ರಾಪೀಡನಾದ ತನ್ನ ಮುನ್ನಿನ ಭವದ ಕೆಳೆಯನಂ ವೈಶಂಪಾಯನನಂ ನೆನೆನೆನೆದು ನಿಜಪ್ರಿಯಸಖವಿಯೋಗದವದಹ್ಯಮಾನಮಾನಸನಾಗಿ ಪರಿಜನಂಗಳ್ ಪಸರಿಸಿದ ಸಿರಿಕಂಡದಣ್ಪುಗಳೊಳಂ ಕೇಸಡಿಗಳೊಳಿಕ್ಕುವಿಪ್ಪರ್ವ್ವೊರೆದ ತಾವರೆಯೆಲೆಗಳೊಳಂ ಕೆಂದಳಂಗಳೊಳ್ಸಂದಿಸುವ ಕರ್ಪ್ಪುರರಜದೊಳ್ಪೊರೆದ ಹಿಮದ ಜೊಬ್ಬುಗಳೊಳ ಮುರದೊಳಿಕ್ಕಿದಾಲಿಗೋಡುವ ಹಾರಂಗಳೊಳಂ ಕದಂಪಿನೊಳೊತ್ತುವ ರನ್ನದ ಕನ್ನಡಿಗಳೊಳಂ ನೊಸಲೊಳಿಕ್ಕುವ ಚಂದ್ರಕಾಂತದ ಪಟ್ಟಂಗಳೊಳಂ ಮುಯ್ಪಿನೊಳಮರ್ಚ್ಚುವ ಮೃಣಾಳದ ತೋಳ್ವಲಯಂಗಳೊಳಂ ಬಾಳೆಯ ತಿರುಳೆಲೆಯ ಬಿಜ್ಜಣಿಗೆಗಳೊಳ ಮೆಸಳಪಸೆಗಳೊಳಂ ಪಳಂಕಿನನೆಲೆವಾಳಿಗೆಗಳೊಳಂ ಧಾರಾಗೃಹಂಗಳೊಳಂ ಜಲಮಂಟಪಂಗಳೊಳ ಮೆಂತುಮಾಸಂತಾಪಮಂ ಸಂತಯಿಸಲಾಱದೆ ॥ ೨೨೫

ಸ್ವಾಗತ । ಎನ್ನನಿತ್ತು ಸುಖಮಂ ಸಖಂಗೆ ಮಾ । ಳ್ಪೆನ್ನಿರಾಕುಳಮೆನುತ್ತಮಾಗಳಿ । ತ್ತನ್ನೃಪಂ ಪದಪಿನಿಂ ಮಹಾತ್ಮನಾಂ । ಕಿನ್ನದೇಯಮೆನೆ ತನ್ನ ಜೀವಮಂ ॥ ೨೨೬

ಕಂ । ಗಿಳಿಯಿತ್ತ ಮಹಾಶ್ವೇತಾ । ವಳೋಕನೋತ್ಕಂಠೆಯಿಂದೆ ಜೀವಂ ಬಿಟ್ಟ ॥ ತ್ತೆಳಸುತಿರಲಮೃತಕರಮಂ । ಡಳಮಧ್ಯದ ಪುಂಡರೀಕದೇಹಮದಾಗಳ್ ॥ ೨೨೭

---

೨೨೫. ಇಪ್ಪರ್ಪ್ಪೊರೆದ—ದ್ರವದಿಂದ ಕೂಡಿದ; ಜೊಬ್ಬು—? ಆಲಿಗೋಡುವ—ಆನಿಕಲ್ಲಿನಂತೆ ಕೊರೆಯುವ.

೨೨೬. ಮಹಾತ್ಮನಾಂಕಿಂನದೇಯಂ—ಮಹನೀಯರಿಗೆ ಏನನ್ನು ತಾನೆ ಕೊಡಕೂಡದು; ಏನೆ—ಎಂಬನೀತಿಗನುಸಾರವಾಗಿ; ತನ್ನ ಜೀವಮಂ, ಪದಪಿಂ—ಪ್ರೀತಿಯಿಂದ ಇತ್ತಂ—ಕೊಟ್ಟನು; ಕಿಂನದೇಯಮೆನೆ ಎಂಬಲ್ಲಿ ವಾಕ್ಯಸೇಷ್ಟನೆಯಲ್ಲಿ ಸಂಧಿವಿಕಲ್ಪವಾದ್ದರಿಂದ ಸಂಧಿಕಾರ್ಯ ಬಂದಿರುವದು. ಶಮ. ಸೂ. ೬೧.

೨೨೭. ಪುಂಡರೀಕದೇಹಂ—ಪುಂಡರೀಕನ ಶರೀರವು; ಎಳಸುತ್ತಿರಲು—ಗಿಳಿಯ ಜೀವವನ್ನು ಅಪೇಕ್ಷಿಸುತ್ತಿರಲು, ಗಿಳಿಯು ಜೀವಂಬಿಟ್ಟಿತ್ತು.

ಸ್ರ॥ ಉದಯಂ ರಾಜೇಂದ್ರಚಂದ್ರಾತ್ಮಕನೆನಿಸಿದ ಚಂದ್ರಂಗೆ ಸಾತ್ತ್ರಾಂಪ ಏನ್ನ । ಭ್ಯುದಯಂ ಲೋಕತ್ರಯಕ್ಕೆಂಬುದನಱಿಪ್ರವೆಸಾಂರಾಗದಿಂ ಬೀಗಳೆಂಬಂ ॥ ಪದೆ ರಕ್ತಾಶೋಕ ಚೂತದ್ರುಮ ಸಮುದಿತ ಬಾಲಪ್ರವಾಳಧ್ವಜಾ ಬಂ। ದುದು ಚಂಚಚ್ಚಂಚರೀಕ ಪ್ರಕರಶುಕಕುಲಾಲಾಪ ಕಾಂತಂ ವಸಂತಂ ॥ ೨೬೮

ಕಂ॥ ಎಳಮಾವಿನ ಚೆಲ್ವಿಂ ಪೂಂ। ಬೆಳೆಗಂಪಿಂ ತೆಂಕಣೆಲರಿ ನೆಳಸೀಗ್ಗಳಿಸಿಂ ದೊಳದಿಂ ತಣಿಯಿಪ್ಪುದು ಜನಂ। ಗಳ ಪಂಚೇಂದ್ರಿಯಮನೆಂದು ಬಂದ ವಸಂತಂ ॥ ೨೬೯

ವೃ ತಳಿರಿಂತಳ್ತಿತ್ತಶೋಕದ್ರುಮ ಮೆಳಗೊನರಿಂದೊಂದಿತಿಮ್ಮಾವು ಬಲ್ಪಿಂ। ಬಳೆಯಿಂಬಳ್ಕಿತ್ತು ಕೌಂಗಚ್ಚಲರ ತುಱುಗಲಂ ಪೇಱಿಕೊಂಡಿಮ್ರ್ದಿದೆತ್ತಂ। ತಿಳಕಂ ಪೂಗೊಂಚಲಿಂ ದೊಂದಿದುದು ಕುರವಕಂ ಕಂಜಕಿಂಜಲ್ಕದಿಂ ಕ। ಣ್ಗೊಳಿಸಿ ತ್ತಬ್ಜಾಕರಂ ತಂಪಲೆವ ಮಲಯ ಮಂದಾನಿಲಾಂದೋಳದಿಂದಂ ॥ ೨೭೦

ವೃ ಬನಮಂ ಕೆಂದಳಿರಿಂದೆ ಬಾಸಣಿಸುತಂ ದಿಗ್ರಾಜಿಯಂ ಬಂದಮಾ। ವಿನ ಕಂಪಿಂದಮೆ ಪೂಸುತಂ ಬಿರಯಿಯಂ ಮತ್ತಾಳಿನೀ ಕೋಕಿಲ। ಧ್ವನಿಯಿಂ ದಂಜಿಸುತಂ ಸಮಸ್ತಜನಮಂ ಪುಷ್ಪಾಸವಾಸಾರದು। ರ್ದಿನದಿಂ ಸೊಕ್ಕಿಸುತಂ ಪ್ರವರ್ತಿಸಿದುದು ಜಗತ್ಕಾಂತಂ ವಸಂತಾಗಮಂ ॥ ೨೭೧

ಕಂ ಬಿರಯಿಗಳಂ ಬೆಚ್ಚಿಸಲಿದೆ। ಪರಮಾಸ್ತ್ರಮನುಮತಂಗೆನಿಪ್ಪ ವಸಂತಂ ॥ ಬರಲೊಡನೊಮ್ಮೆಯೆ ಗಂಧ। ರ್ವರಾಜಸುತೆ ಮನದೊಳಾಗಳಾಕುಲೆಯಾದಳ್ ॥ ೨೭೨

ವ ಅನ್ನೆಗಂ ಕಾಮದೇವ *[ನುಕ್ಕೆವದಲ್ಲಿ] ಮುನ್ನಮೆ ಕಟ್ಟಿದ

೨೭೦. ಪೂಂಬೆಳೆಯಿಂ-ಮೊಗ್ಗಾಳಿಯಿಂದ; ಅಬ್ಜಾಕರಂ-ಕಮಲಸರೋವರವು; ತಂಪಲೆವಮಲಯಮಂದಾನಿಲಾಂದೋಳದಿಂದಂ—ಕಂಪಿನಿಂದಕೂಡಿ ಚಲಿಸುವಮಲಯಮಾರುತದಿಂದುಂಟಾದ ಅಲೆಗಳ ತೂಗುವಿಕೆಯಿಂದ; ಕಣ್ಗೊಳಿಸಿತ್ತು—ಶೋಭಿಸಿತು.

೨೭೩. ಉಕ್ಕೆವದಲ್ಲಿ—ಉತ್ಸವದಲ್ಲಿ: ಕೇಗ್ಗಟ್ಟನೊಳಂ-ತಡಿಕೆಯಿಂದಲೂ;

*[ವಪ್ಪುದುವೆಲ್ಲಿ]

ಮಾಂದಳಿರ ತೋರಣಂಗಳೊಳ ಮೌತ್ತಿದಶೋಕಪಲ್ಲವಪತಾಕೆಯೊಳಂ ನೇಜುಲರಕ್ತಚಾಮರಂಗಳೊಳಂ ಬಿಗಿದ ನಾರಂಗದ ಮೇಲ್ಕಟ್ಟಿನೊಳಂ ಮಾಂಗಾಯ ಫಲಾವಳಿಗಳೊಳಂ ತೊಡಚ್ಚಿರ್ದ ಪ್ರನ್ನಾಗದಸೂಸಕಂಗಳೊಳಂ ನಾಗದ ಝಳುಂಬಕಂಗಳೊಳಂ ಸಂಪಗೆಯಲರ ಕಿಂಕಿಣಿಗಳೊಳಂ ಕೆಂದಾವರೆಯ ಗಂಟೆಗಳೊಳಂ ದವನದ ಕೇಗ್ಗಟ್ಟಿನೊಳಂ ಜವೆಯ ಜಾಗರದೊಳಂ ಮಲರ್ವಂದಿನ ಜಗಲಿಯೊಳಂ ಸಹಕಾರದ ಸಾರಣೆಯೊಳಂ ಅಲ್ಲಲ್ಲಿಗಲರ್ದ ಪೂವಲಿಗಳೊಳಂ ಶತಪತ್ರದ ಸಿತಾತಪತ್ರದೊಳಂ ಪ್ರೆಂಬಾಳೆಯ ಚಾಮರಂಗಳೊಳ ಮೆಸೆವ ಮಂಟಪಂಗಳ ನಡುವಣ ಪದ್ಮರಾಗದ ಪಟ್ಟವಣೆಯೊಳ್ ನಿಲಿಸಿದ ಕಾಮದೇವನನತಿಪ್ರೀತಿಯಿಂದರ್ಚಿಸಿ ॥ ೨೮೩

ಕಂ॥ ನಿನ್ನನೆ ಪೂಜಿಸಿ ಪಡೆದ । ಕ್ಕನ್ನೆಯರಭಿಮತಮನಾದವಾರಾಧಿಸಲಾ ॥ ನಿನ್ನವರಂ ರತಿಪತಿನೀ । ನೆನ್ನ ಮನೋರಥಮನೇಕೆ ಪೇಳ್ತೆಡೆಯಿಸಿದ್ಯೈ ॥ ೨೮೪

ವ॥ ಎಂದು ವಿಷಮಾಸ್ತ್ರಂಗೆ ವಿಷಾದದೊಳೆ ಪೊಡಮಟ್ಟು ॥

ವೃ॥ ಸುರಭಿಜಲಂಗಳಿಂದ ಮಭಿಷಿಕ್ತನ ನಾನ್ಯಪರೂಪ ಚಂದ್ರನಂ । ತರದೊಳೆ [ಮಾಡಿ] ಕೇಸಡಿಗಳಂ ಹರಿಚಂದನದಿಂದ ಮಾಡಿ ಕೇ ॥ ಸರದ ತುಱುಂಬನಿಕ್ಕಿ ಸಿರಿಕಂಡಮ ನೊಯ್ಯನೆ ಪೂಸಿ ಕಂಪಿನೊಳ್ ಪೊ । ರೆದ ವಸಂತದೊಳ್ಮಿಗುಳ ತಣ್ತೊಡವಂ ತುಡಿಸಲ್ಕೊಡರ್ಚಿದಳ್ ॥ ೨೮೫

ವ॥ ಅದೆಂತೆನೆ ಸುರಗಿಯಲರ ಮುಗುಳ ಮುತ್ತಿನಮಾಲೆಯಿಂ ಸುರಹೊನ್ನೆಯ ರನ್ನವಟ್ಟಿಗೆಯಿಂ ರಕ್ತಾಶೋಕ *[ರಚಿತ] ರತ್ನಕಟಕದಿಂ ಕಪ್ಪುರದ †[ಪೂವ] ಸರಿಗೆಯಿಂ ಕುಂಕುಮದ ಕುಟ್ಮಲದ ‡[ಪದಕದಿಂ]

ಜಾಗರದೊಳಂ—ಪೈರಿನಿಂದಲೂ; ಸೂಸಕಂಗಳೊಳಂ—ಕುಚ್ಚುಗಳಿಂದಲೂ.

೨೮೫. ಕೇಸಡಿಗಳು—ಕೇಸರದಪಾದಗಳನ್ನು; ಹರಿಚಂದನದಿಂದ, ಆಡಿ—ಲೇಪನಮಾಡಿ; ತಣ್ತೊಡವು—ತಂಪಾದ ಆಭರಣಗಳು.

೨೮೬. ರನ್ನವಟ್ಟಿಗೆ—ರನ್ನದಪಟ್ಟಿಕೆ; ಹಿಂದುವಾರ—ಲಿಕ್ಕಿ.

*[ರಚನೆಯ] †[ಫಲ] ‡[ಕೌಸ್ತುಭದಿಂದ]

ಸಿಂದುವಾರತಾರಹಾರದಿಂ ಕುರವಕದ ಕೇಯೂರದಿಂ ಪಾರಿಜಾತದ ಕರ್ಣ
ಪೂರದಿಂ ತಿಲಕದ ತಿಲಕದಿ ನಲಂಕರಿಸಿ ॥ ೩೮೬

ಹರಿಣಿ ॥ ಅಳಿಪಿನೊದವಿಂ ನೀಡುಂ ಪೀರ್ವಂದದಿಂ ನಡೆನೋಡಿ
ಸಂ । ಗಳಿಸೆ ನಿಡುಸುಯ್ ರೋಮರಾಂಚಂ ಪೊಣ್ಮೆ ಘರ್ಮಜಲಂ ಪೊದ ॥
ಳ್ದಳಿಯೆ ನಡುಗುತ್ತಕ್ಕಂ ಕಂಡಪ್ಪಳೆಂದು ಮೃಗಾಕ್ಷಿ ಪೆ । ಪ್ಪಳಿಸಿ ದೆಸೆ
ಯಂ ನೋಡುತ್ತಂ ಪೊರ್ದಿದಳ್ ನೃಪಚಂದ್ರನಂ ॥ ಅದಲ್ಲದೆಯುಂ ॥ ೩೮೭

ಹರಿಣೀ ॥ ಉಳಿಯಲೆನಸುಂ ಲಜ್ಜಾಭಾರಂಸಮಂಚಿತ ಸಾಧ್ವಸಂ ।
ಕಳಿಯಲೆಡೆವೆತ್ತಾಗ ಳ್ಸಾರಾರು ಮಿಲ್ಲದಿರಲ್ಕೆ ಕಂ । *[ಡೆಳಸಿ ನಿಲಿಸಲ್ತ]
ನ್ನಂ ತಾನಾಱದೊಯ್ಯನೆ ಕಣ್ಮಲ । ರ್ಮಲರೆ ನೃಪನಂಭೋಂಕಲ್ ಮೇ
ಲ್ವಾಯ್ದು ತಳ್ತಿರದಪ್ಪಿದಳ್ ॥ ೩೮೮

ವ॥ ಆಗಳ್ ತದಾಲಿಂಗನಾಮೃತ ವರ್ಷದಿಂ ಜೀವಂಬಂದು—

ವೃ॥ †[ಪ್ರಸರಚ್ಚಂದ್ರಪ್ರಭಾ ಲಿಂಗಿತ ಕುಮುದಮಯಂ ತಾನಿದೆಂ
ಬಂತಿರುತ್ಸಾ । ಹಿಸೆ ಮೆಲ್ಸುಯ್ಯುತ್ತಿನಿಂ ದೊಂದಿದ ಹೃದಯ ಮುಷಸ್ಸಂಗ
ಪದ್ಮಂಬೊ ಲುನ್ಮೀ । ಳಿಸೆ ಕಂಗಳ್ಕೂಡೆ ಚೈತನ್ಯದೊಳಳವಡೆ ಸರ್ವಾಂಗ
ಮೆಚ್ಚತ್ತನಾಗಳ್ । ಪಸೆಯೊ ಳ್ಮನ್ನಿದ್ರೆಗೆಯ್ದೆಚ್ಚಱುವರಸನವೋಲಂದು
ರಾಜೇಂದ್ರಚಂದ್ರಂ]॥ ೩೮೯

---

೩೮೭. ಅಳಿಪಿನೊದವಿಂ—ಹೆಚ್ಚಾದಪ್ರೀತಿಯಿಂದ; ಅಕ್ಕಂ—ಮಹಾಶ್ವೇತೆಯು; ಪೆಪ್ಪಳಿಸಿ—ದಿಗ್ಭ್ರಮೆಯನ್ನು ಹೊಂದಿ;

೩೮೮. ಸಾರೆ—ಸಮೀಪದಲ್ಲಿ. ಸಾರೆ+ಆರುಂ=ಸಾರಾರುಂ.

೩೮೯. ಮೆಲ್ಸುಯು—ಮೃದುವಾದನಿಶ್ವಾಸದ; ಕುತ್ತಿನಿಂ—ಸಂಘಟ್ಟನೆಯಿಂದ; ಬಂದಿದ—ಕೂಡಿದ; ಹೃದಯಂ—ಮನಸ್ಸು; ತಾಂ—ತಾನು; ಪ್ರಸರಚ್ಚಂದ್ರಪ್ರಭಾಲಿಂಗಿತಕುಮುದಮಯಂ ಎಂಬಂತಿರೆ, ಉತ್ಸಾಹಿಸೆ—ವಿಕಾಸವಾಗಲು: ಪಸೆಯೊಳ್—ಹಾಸಿಗೆಯಲ್ಲಿ.

*[ಡೆಳಸಲಾತಂ]

†[ಪ್ರಸರದ್ವಪ್ರಭಾಲಿಂಗಿತ ಕುಮುದಮಯಂತಾನಿವೆಂಬಂತಿರುತ್ಸಾ । ಹಿಸೆಮೆಲ್ಲುಯಿತ್ತಿನಿಂದೊಂದಿದಮುದಯಮುಷಸ್ಸಂಗಪದ್ಮಂಜೊಲುನ್ಮೀ ॥ ಲಿಸೆಕಂಗಳ್ಕೂಡೆಚೈತನ್ಯದೊಳಳವಡೆಸರ್ವಾಂಗ ಮೆಚ್ಚೆತ್ತನಾಗಳ್ । ಬಸೆಯೊಳ್ಮನ್ನಿದ್ರೆ ಗೆಯ್ತೆಚ್ಚಱುವರನವೋಲಂದುರಾಜೇಂದ್ರಚಂದ್ರಂ ॥]

ವ ಅನ್ತುಮೆಯ್ಮುರಿದೆೞ್ತುತ್ತು ತನ್ನಂತಳ್ತಪ್ಪಿರ್ದ್ದ ಗಂಧರ್ವರಾಜನಂದನೆಯಂ ಕಂಡು ॥

ವೃ॥ ಪಡೆವೆಂ ಮತ್ಪುಣ್ಯದಿಂ ದೀಪನವು ನಿನಿತು ಕಾಲಕ್ಕೆನುತ್ತುಂ ನರೇಂದ್ರಂ। ನಿಡುದೋಳಿಂದಪ್ಪಿ ಭೋಂಕಲ್ಭಯದೆ ನಡುಗುತಂ ಕಣ್ಗಳಂ ಮುಚ್ಚಿ ತಳ್ತು॥ ದೋರ್ದ್ದಂಡಲಂ ಪ್ರೋಕ್ಷ್ಯಪ್ಪಳಿಂಬಂದದೆ ಬೆಡಗಿನೊಳಪ್ಪುತ್ತಮಾಗಳ್ಬಿಡಲ್ಕಂ। ಪಿಡಿಯಲ್ಕಂ ತಾನದೇನೆಂದಱಿಯದಬಲೆ ನಾನಾರಸಾಕ್ರಾಂತೆಯಾದಳ್॥ ೩೯೦

ವ॥ ಅಂತಿರ್ದ್ದಳಂ ಮನುಜೇಂದ್ರಚಂದ್ರಂ ನೋಡಿ ॥

ಕಂ॥ ಭಯಮುಂ ಮಾ *[ಣ್ಜೀವಂನಿ]। ನ್ನಯ ಪರಿರಂಭಣದೆ ಬಂದುವಲ್ತೆ ಸುಧಾಸೂ॥ ತಿಯ ಕಾಂತಿಯೊಳೊಗೆದ †[ಚ್ಚರ। ಸಿಯರ] ನ್ವಯದಲ್ಲಿ ದೇವಿ ಜನಿಯಿಸಿದವಳಯ್॥ ೩೯೧

ವ॥ ಅದಲ್ಲದೆಯುಂ—

ವೃ॥ ಇದು ಜೇಜೊಂದೆನ್ನ ತೇಜೋಮಯ ಮೆನೆ ಮೊದಲೊಳ್ನಿತ್ಯವಿದ್ದೀಡ ಮಂತ। ಲ್ಲದೆಯುಂ ಕಾದಂಬರೀದೇವಿಯ ಕರತಲಸಂಸ್ಪರ್ಶದಿಂ ತಾಳ್ದಿಕೊಂಡಿರ್ಪ್ಪ॥ ದೆನಲ್ಕೇವೇಳ್ವ ದೀದೇಹದೊಳೆ ನೆರೆಗುವೆಂದಾದಲಂಪಿಂ ನಭೋಮ। ಧ್ಯದೊಳದ್ದಾನಂದೆ ಪೇಳ್ದೆನ್ನಯ ನುಡಿಯನದಂ ಭಾವಿಸಂಭೋಜನೇತ್ರೇ ॥ ೩೯೨

---

೩೯೦. ಭೋಂಕಲ್—ಭಗ್ನನೆ; ತಳ್ತಿರ್ದ್ದ—ಆಲಿಂಗನಮಾಡಿಕೊಂಡಿದ್ದ; ಬಿಡಲ್ಕಂ—ಬಿಡುವದಕ್ಕೂ; ಪಿಡಿಯಲ್ಕಂ—ಹಿಡಿದುಕೊಂಡಿರುವದಕ್ಕೂ.

೩೯೧. ದೇವಿ, ನೀಂ ಸುಧಾಸೂತಿಯ—ಚಂದ್ರನ; ಕಾಂತಿಯೊಳೊಗೆದ—ಕಿರಣದಿಂದಹುಟ್ಟಿದ; ಅಚ್ಚರಸಿಯರ—ಅಪ್ಸರಸ್ತ್ರೀಯರ; ಜನಿಯಿಸಿದವಳಯ್—ಹುಟ್ಟಿದವಳಾಗಿದ್ದೀಯೆ.

೩೯೨. ತಾಳ್ದಿಕೊಂಡು—ಉಳಿದುಕೊಂಡು; ಇರ್ಪ್ಪುದು—ಇರುವದು; ನೆಱೆಗುಂ—ಸೇರುವನು; ಅಂ—ಚಂದ್ರನೊಸನಾದನಾನು; ಅಂದೆ—ಪೂರ್ವದಲ್ಲಿಯೆ; ಪೇಳ್ದ—ಹೇಳಿದ; ಎನ್ನಯನುಡಿಯಂ—ನನ್ನ ಮಾತನ್ನು; ಭಾವಿಸು—ಸ್ಮರಿಸು.

*[ಮಾಣೀಕಳ್ನಿಂ] †[ಪ್ಸರಸರ]

ವ॥ ಇನ್ನೆವರಂ [ನಿನ್ನ] ಕರತಲಸ್ಪರ್ಶದಿ ನಾಪ್ಯಾಯಿತ ಶರೀರನಾಗಿಯುಂ ಶಾಪದೋಷದಿಂ ಪ್ರತ್ಯುಜ್ಜೀವಿತನಾಗದಾನೀಗಳ್ ಮಹಾಶ್ವೇತೆಯ ಪ್ರಿಯತಮನಪ್ಪ ಮದೀಯುವಸ್ಯಂ ಬೆರಸು ವಿಗತದೋಷನಾಗಿ ನಿನ್ನ ದೂಸಱೊಳಲ್ಲಿ ನಿಲಿಸಿದ ಮದೀಯ ದೇಹಕ್ಕವತರಿಸಿದೆ ನೆಂದು ಚಂದ್ರಮನನುಭೂತ ಪೂರ್ವಮಪ್ಪ ಗಂಭೀರಪೂರ್ವವಚನದಿಂ ನುಡಿದು ಗಂಧರ್ವರಾಜನಂದನೆಯ ನಾನಂದಿಸುತ್ತಮಿರ್ಪ್ಪುದುಂ ॥ ೭೯೩

ವೃ ॥ ಕುಳಿರುತ್ತಿರ್ಪ್ಪಮೃತಾಂಶು ಮಂಡಲದೊಳದ್ದಾಗದಂ ಸುಧಾಮೋದಮಂ । ತಳೆದಂಗಂ ಬೆಳಗೆಂಪ ನಾಳ್ದರೆ ಮಹಾಶ್ವೇತಾಂಗನಾ ಮೌಕ್ತಿಕಾ ॥ ವಳಿ ವಕ್ಷಸ್ಥಲದೊಳ್ತೆಱಂಬೊಳೆಯ ಲಾಗಳ್ಪುಂಡರೀಕಂ ಕಪಿಂಜಲಕಂ ಕಯ್ಗುಡ *[ಲಿಷ್ಟಮಿತ್ರನೆ] ಬರುತ್ತಿರ್ದ್ದಂ ಮರುನ್ಮಾರ್ಗದಿಂ ॥ ಮನದೊಂದಾಹ್ಲಾದದಿಂದಂ ಗಗನತಲದಿ ನೇಳ್ತಂದು ರಾಜೇಂದ್ರಚಂದ್ರಾಂ । ಕನ ಪಾದಾಂಭೋಜಯುಗ್ಮಕ್ಕೆಱಗೆ ತೆಗೆದು ತಳ್ಕೈಸುತಂ ಪುಂಡರೀಕಾ ॥ ಖ್ಯ ನಿಜಪ್ರಾಗ್ಜನ್ಮ ಸಂಬಂಧದಿ ನೊಗೆದಸುಹೃತ್ಸ್ನೇಹದಿಂ ಮತ್ತೆಯುಂ ಪಿಂ । ತನೆಬಂದೈ ನೀನೆನುತ್ತಳ್ಕಱೊಳ್ ಕೆಳೆಯನೊಳ್ಪಾತನಾಡುತ್ತಮಿರ್ದ್ದಂ ॥ ೭೯೫

ವ ॥ ಅನ್ನೆಗಂ ಕೇಯೂರಕಂ ಚಿತ್ರರಥಹಂಸರ್ಗ್ಗೆ ತನ್ಮಹೋತ್ಸವಮಂ ಪೇಳಲ್ಕೆ ಪೋದನಿತ್ತ ಮೃತ್ಯುಂಜಯ ಜಪವ್ಯಗ್ರನಾಗಿ ವಿಲಾಸವತೀ ಮಹಾದೇವಿವೆರಸಿರ್ದ್ದ ತಾರಾಪೀಡನಲ್ಲಿಗೆ ಮವಲೇಖೆ ಪರಿತಂದು ವೈಶಂಪಾಯನಂಬೆರಸು ಯುವರಾಜಂ ಪ್ರತ್ಯುಜ್ಜೀವಿತ ನಾದನೆಂದು ಪೇಳ್ವುದು ಮತ್ಯಾನಂದ ರಭಸದಿಂ ವಿಲಾಸವತೀಮಹಾದೇವಿಯುಮ ನಾರ್ಯಶುಕನಾಸನುಮಂ ಜರಾಶಿಥಿಲ ದೀರ್ಘಬಾಹುಯುಗಳದಿಂ ದಳ್ಕಱೊಳ್ †[ತಳ್ಕೈಸಿ] ॥ ೭೯೬

---

೭೯೪. ಆದಂ—ಅತ್ಯಂತವಾಗಿ; ಸುಧಾಮೋದಮಂ-ಅಮೃತಪರಿಮಳವನ್ನು ಬೆಳಗೆಂಪಂ—ಪಾಂಡುರವರ್ಣವನ್ನು ; ತೆಱಂಬೊಳೆಯೆ—ಪ್ರಕಾಶಿಸುತ್ತಿರಲು ;

*[ಲಿಷ್ಟಪ್ರೀಯನೆ] *[ತರ್ಕಯಿಸಿತಾನೆಪಿಡಿದೆತ್ತಿ]

ವೃ ॥ ಜರೆಯಿಂ ತಳ್ಪೊಯ್ವ ತನ್ನೊಳ್ದೊರೆಯೆನಿಸಿದ ರಾಜರ್ಷಿಗ
ಳ್ಸುತ್ತುಗೊಂಡೇಂ । ಳ್ತರೆಮುಯ್ಪಿಂದಾವಗಂ ಸಂಭ್ರಮದೆ ರುಚಿರ ವಲ್ಕೋ
ತ್ತರೀಯಾಂಚಲಂ ಜೋ । ಲ್ತಿರೆ ಲೋಕಾಹ್ಲಾದಿ ಚೈತ್ರಾನಿಲ ವಿಲುಳಿತ
*[ಪದ್ಮಾಕರಂ] ತಾನಿದೆಂಬಂ । ತಿರೆ ತಾರಾಪೀಡದೇವ ಕ್ಷಿತಿಪತಿಯುತಿ ಬಂ
ದಂ ಮಹೋತ್ಸಾಹದಿಂದಂ ॥ ೩೯೭

ವ ॥ ಅಂತತಿಹರ್ಷ ಪರವಶನಾಗಿ ಬರುತ್ತಿರ್ದ್ದ ತನ್ನ ತಂದೆಯಂ ಕಂಡು ರಾಜೇಂದ್ರಚಂದ್ರಂ ಸಾಷ್ಟಾಂಗ ಪ್ರಣಾಮ ಪುರಸ್ಸರಂ ಪಾದಾರವಿಂದಕ್ಕೆಱಗಿ ದಾಗಳ್ ॥ ೩೯೮

ವೃ ॥ ನಿನಗಾಂ ತಂದೆಯೆ ನಾದೆ ನೆಮ್ಮ ಬಸುಱಿಂದಂ ಬಂದೆ ನೀ
ನೆಂಬ ಪೆಂ । ಪೆನಗೇಂ ಸಾಲದೆ ಕಂದ ಚಂದ್ರನೆನಲುಂ ತ್ರೈಲೋಕ್ಯದಿಂ ವಂ
ದಿಸೇ ॥ ಯೆನೆ ಯೆಂಬಂದೆಮಗೆಲ್ತ್ತ ವಂದ್ಯನಪ್ಪೊ ಲೆಂದಾನಂದದಿಂ ದಾತ್ಮನಂ ।
ದನನಂ ಚಂದ್ರನ ನಪ್ಪಿದಂ ತೆಗೆದು ತಾರಾಪೀಡಚಕ್ರೇಶ್ವರಂ ॥ ೩೯೯

ವ ॥ ಅನ್ತು ತಳ್ಕೈಸೆ ನಿರ್ಭರಹರ್ಷ ಪರವಶೆಯಪ್ಪ ತಾಯುಂ ಚಂದ್ರಾಪೀಡಂ ನೋಡಿ ॥ ೪೦೦

ಕಂ ॥ ಪ್ರೌಢವಡೆ ತಾಯ್ಬಸುಱೊಳಗಿಡ । ಲೊಡರಿಸಿದಪ ಳಿರದೆ
ಮುಗುಳ್ದು ಮೊಸೆ ಮೊಲೆವಾಲ್ಗ ॥ ಳ್ಬಡದೆಚ್ಚು ಪಾಯೆ ಪದಪಿಂ । ದಡಿಗಡಿ
ಗಾತ್ಮಜನ ನಾದವಪ್ಪಿದ ಳಾಗಳ್ ॥ ೪೦೧

ವ ॥ ಅನಂತರಂ ಮನೋರಮಾಸಮೇತನಪ್ಪ ಶುಕನಾಸನಲ್ಲಿಗೆ ವಂದು ॥

ಕಂ ॥ ವಿನಯ †[ಭರದಿಂದೆ] ನಮಿತಾ । ನನನೆಸಿಸಿದ ಪುಂಡರೀಕ
ನಂ ವೈಶಂಪಾ ॥ ಯನ‡[ನೆಂನವಧ]ರಿಸಿಂ ನೀ । ವೆನುತಂ ಕಾಣಿಸಿದನಂ
ದು ಚಂದ್ರಾಪೀಡಂ ॥ ೪೦೨

---

೩೯೭. ತನ್ನೊಳ್ದೊರೆಯೆನಿಸಿದ—ತನಗೆ ಸಮಾನರಾದ ; ಜರೆಯಿಂ—ಮುಪ್ಪಿನಿಂದ ; ತಳ್ಪೊಯ್ವ—ಅಭಿಸತರಾದ ; ರಾಜಋಷಿಗಳ್.

*[ಭೂರ್ಜಾಕರಂ] †[ತಾವಚನ] ‡[ನನವಧಾ]

ವ || ಅನ್ತಾಸಮಯದೊಳ್ ಕಪಿಂಜಲಕಂ ಶುಕನಾಸನನಿಂತೆಂದಂ ||

ವೃ || ನಡಪಲ್ಕಂ ಪೆತ್ತೆನೀತನ ನಿನಿತೆಡರಿಂ ಪುಂಡರೀಕಾಖ್ಯನಂ ಪೇ | ಳ್ವೊಡೆ ವೈಶಂಪಾಯನಂ ತನ್ನಯ ಮಗನದಱಿಂ ಸ್ನೇಹಮೊಟ್ಟೈಸೆ ತಮ್ಮಿ || ರ್ದೆಡೆಗೀಗಳ್ಮತ್ತಾಪಂ ನಿಜತನುವೆರಸಾನಂದದಿಂ ಬಂದನೀತಂ | ಗೊಡೆಯತ್ತಾರ್ವೆಂದು ಪೇಳ್ದಟ್ಟಿದನೊಲವಿಂ ಶ್ವೇತಕೇತುವ್ರತೀಶಂ

ವ || ಎಂಬು*[ದುಂ ವಿನಯವಿನಮಿತನಪ್ಪ]ಪುಂಡರೀಕನ ಮೇಲೆ ಕಯ್ಯನಿಕ್ಕಿ ಶುಕನಾಸನಿಂತೆಂದಂ ೮೦೪

ಕಂ || ಸಕಲಾರಾಧ್ಯತ್ವಾರ್ಗವಿಂ | ತು ಕರುಣದಿಂ ಪೆಸಗೆ ಬೆಸಸಿಯಟ್ಟಿದರೆಂದಂ | ದುಕಪಿಂಜಲ ಪೇಳೆನ್ನಿಂ | ದೆ ಕೃತಾರ್ಥರು ಮೊಳರೆ ಮತ್ತೆ ಭುವನತ್ರಯದೊಳ್ || ೮೦೫

ವ || ಎಂದಿವು ಮೊದಲಾಗಿ ಪೂರ್ವಜನ್ಮಸ್ಮರಣಾಲಾಪಂಗಳಿಂದಂ ಪರಸ್ಪರಾಲೋಕನ ಸುಖೋತ್ಫುಲ್ಲ ಲೋಚನರಾಗಿ ಕಣ್ಣೊಳೆ ಬೆಳಗಪ್ಪುದುಂ ಪ್ರಭಾತಸಮಯದೊಳಖಿಲಗಂಧರ್ವ ಲೋಕದೊಡನೆ ಬರೆ ಮದಿರಾಮಹಾದೇವಿವೆರಸು ಚಿತ್ರರಥನುಂ ಗೌರಿವೆರಸುಹಂಸನುಂ ಬಂದು ಜಾಮಾತೃದರ್ಶನೋತ್ಫುಲ್ಲವದನ ತಾರಾಪೀಡಶುಕನಾಸರೊಳತಿಶ್ಲಾಘ್ಯಸಂಬಂಧ ಬಂಧುರವಚನಂಗಳಂ ನುಡಿಯುತ್ತ ಮಾನಂದಪರಂಪರೆಯು ನೆಯ್ದಿ ಕಿಱಿದು ಬೇಗವಿರ್ದು ರಾಜಾಧಿರಾಜನಂ ಗಂಧರ್ವರಾಜ ನಿಂತೆಂದಂ ೮೦೬

ವೃ || ಇವಗಾತ್ಮೋಚಿತ ಮಾಗಿಮುನ್ನಮೆ ವಿವಾಹಂ ಸಂದುದಿಂ ಲೌಕಿಕ | ವ್ಯವಹಾರಕ್ಕೆ ಸಗಲ್ಕೆವೇಳ್ಪುದವಱಿಂದಂ ಪ್ರೇಮಕೌಟಕ್ಕೆ ಮಂ||

---

೮೦೩. ಪುಂಡರೀಕಾಖ್ಯನಂ, ಈತನಂ—ಇವನನ್ನು ; ಇನಿತೆಡಱಿಂ, ನಡಪಲ್—ಇಷ್ಟು ವಿಪತ್ತುಗಳಿಂದ ತಪ್ಪಿಸಿ ರಕ್ಷಿಸುವವಕ್ಕೆ ಮಾತ್ರ : ಮುನ್—ಮೊದಲು : ಪೆತ್ತೆನು—ಪಡೆದೆನು ; ಪೇಳ್ವೊಡೆ—ಈತನ್ಯಾರೆಂದರೆ: ತನ್ನಯಮಗಂ, ವೈಶಂಪಾಯನಂ—ನಿನ್ನ ಮಗನಾದ ವೈಶಂಪಾಯನನೆ ; ಅದಱಿಂ—ಆದಕಾರಣ ; ಸ್ನೇಹಮೊಟ್ಟೈಸೆ—ಸ್ನೇಹವುಂಟಾಗಲು ; ತಮ್ಮಿರ್ದೆಡೆಗೆ—ನೀವಿದ್ದ ಕಡೆಗೆ : ಬಂದಂ, ತಾವು ಈತಂಗೆ, ಒಡೆಯರ್, ಎಂದು, ಪೇಳ್ದು, ಅಟ್ಟಿದಂ—ನನ್ನನ್ನು ನಿಮ್ಮಲ್ಲಿಗೆ ಕಳುಹಿಸಿದನು.

೮೦೬. ಕಣ್ಣೊಳೆ ಬೆಳಗಪ್ಪುದುಂ—ನಿದ್ರೆಯಿಲ್ಲದೆ ಒಬ್ಬರನ್ನೊಬ್ಬರು ನೋಡುತ್ತಿರುವಾಗಲೆ ಬೆಳಗಾಗಲು.

ದುವಿವಾಹೋತ್ಸವಮಂ ನೆಗಳ್ಚಿ ಪಿರಿದೊಂದುತ್ಸಾಹಮಂ ಮಾಳ್ಪುದಿ ॥ ನ್ನಿವ
ಗೆಂದಳ್ಕಱೊಳಿಂತಿದಂ ನುಡಿದನಾಗಂಧರ್ವಲೋಕೇಶ್ವರಂ ॥ ೮೦೭

ವ ॥ ಅಂತು ನುಡಿದು ತಾರಾಪೀಡನರೇಂದ್ರನಿಂತೆಂದಂ ॥

ಮ । ಭವದೀಯಶ್ಲಾಘ್ಯಸಂಬಂಧಮೆ ದಲಿದುವೆ ಕೈಸಾರ್ದುದಿಂದೆ
ಮಹೇಶ್ವ । ನ್ನಿವಗಿಲ್ಲಿಂಬಿಟ್ಟು ಮತ್ತಂಸುಖವೆನಿಪುದದೇಂ ಪುತ್ರನಿಕ್ಷಿಪ್ತರಾ
ಜ್ಯ । ಗ್ರವಗಿಂ ಮತ್ತೆಳ್ತರ*[ಲ್ಕಾಗದು ಸದನ]ಸುಖಾವಾಪ್ತಿಯಂ ಮಾಡು
ನೀನೆ । ಲ್ಲಿವ ನತ್ಯುತ್ಸಾಹದಿಂನಿನ್ನಳಿಯನ ನೊಡಗೊಂಡೆಯ್ದು ಗಂಧರ್ವರಾಜಾ

ವ । ಎಂಬುದುಂ ನಿಮಗೆಂತು ಸಂತಸಮಂತೆ ನೆಗಳ್ವೆನೆಂದು ರಾಜೇಂ
ದ್ರಚಂದ್ರಂ ಬೆರಸುತ್ಸಾಹಾನ್ವಿತನಾಗಿ ನಾನಾಧ್ವಜ ವಿರಾಜಿತಕೂಟಮುಮು
ದ್ಘಾಟಿತ ಸಕಲವಾತಾಯನ ಕವಾಟಮುಮಪ್ಪ ಹೇಮಕೂಟಕ್ಕೆ ಬಂದು
ಮಂಗಳಾನಕ ರವಂಗಳನೆಸೆವ ವಿವಾಹ ಮಂಟಪಕ್ಕೈತಪ್ಪುದುಮಿತ್ತ ಕೃ
ತಸಕಲಮಂಗಳವ್ಯಾಪಾರನು ಮಾಗಿ । ೮೦೯

ಮ । ಎಱೆಯುಂ ತ್ರೈಲೋಕ್ಯರಾಜ್ಯಕ್ಕೆನಿಸಿದ ವಿಭುವಿಂ ಗೇನನಿ
ತ್ತೀಗಳೊಲ್ದು । ನೆಱೆವೆಂ ಕಾದಂಬರೀದೇವಿಗೆ ಬಳಿವಳಿ ಗಂಧರ್ವರಾಜ್ಯಾಂ
ದಲೆಂದ । ಳ್ಕಱ ನಿಂದ್ಯ ಕೈಕೊಳ್ವುದೆಂದಾತ್ಮಜೆಯ ನೊಲವಿನಿಂದಿತ್ತು ಸಾಮ್ರಾ
ಜ್ಯಕ್ಕೆ ಕೈಸೀ । ರೆಱೆದಂ ರಾಜೇಂದ್ರಚಂದ್ರಂ ಗೊಣವಿದಮದಂ ದಂದುಗಂಧ
ರ್ವರಾಜಂ ॥ ೮೧೦

ಕಂ । ಪಿರಿದುಂ ವಿಭೂತಿಯಿಂ ಚಿ । ತ್ರರಥಾನುಜನೆನಿಪ ಹಂಸನುಂ
ಸಿಂಹಾಸ್ಯಾ । ಬೆರಸು ಮಹಾಶ್ವೇತೆಯನಾ । ದರದಿಂದಂ ಪುಂಡರೀಕದೇವಂ
ಗಿತ್ತಂ ॥ ೮೧೧

---

೮೦೮. [illegible]
[illegible]
ಎವಗೆ, ಇಂ—ಇನ್ನುಮೇಲೆ; ಮತ್ತೆ—ಪುನಃ; ಪೆಳ್ತರಲ್ಕಾಗದು—ಬರತಕ್ಕದು
[illegible]
[illegible]

*[ಲ್ಸಾರದು ಸಕಲ]

ವ॥ ಅನ್ತು ವಿವಾಹೋತ್ಸವಮಂ ರಾಜೇಂದ್ರಚಂದ್ರನುಂ ಪುಂಡರೀ ಕನುಮುಪ್ಪ್ರಕೆಯ್ದು ॥ ೮೧೨

ಕಂ ॥ ದೊರೆಕೊಂಡುದುಮುಂ ಬಯಸಿದ । ತರುಣಿಯರೊಳ್ಕೂಟ ಮನಿತಱಿಂದಮೇ ನೋಡ । ಲ್ಬರಿತಾರ್ಥರಾವೆ ಕಿಂಚಿ । ತ್ಕರವನ್ಯಮೆನುತ್ತ ಮಾತ್ಮಗತದೊಳ್ಬಗೆದರ್ ॥ ೮೧೩

ವ ॥ ಅನಂತರ ಮಭಿವಾಂಛಿತ ಪ್ರಾಣೇಶ್ವರ ಪ್ರಾಪ್ತಿಸಮುತ್ಸುಕೆ ಯುಂ ಮಖಿಲಪರಿವಾರಪರಿವೃತೆಯುಂ ಮಪ್ಪ ಕಾದಂಬರಿ ವಿಷಾದಮನಪ್ಪ್ರ ಕೆಯ್ದು ಮನುಜೇಂದ್ರಚಂದ್ರನಂ ನೋಡಿ ॥ ೮೧೪

ಕಂ ॥ ಜೀವಂ[ಬಂದುದು ಸಕಲ । ಗ್ಗೀವೇಳ್ವೆಂ]ಪತ್ರಲೇಖೆಯಂ ಕಂಡಪೆವಿ ॥ ಲ್ಲಾವಧು ಪೂರ್ವ್ವಳದೆಲ್ಲಿದ । ಳಾವೆಡೆಯೊಳ್ನಿಂದಳರಸ ಪೇಳೆ ನಗೀಗಳ್ ॥ ಎನೆ ಮನುಜೇಂದ್ರಚಂದ್ರನಿಂತೆಂದಂ— ೮೧೫

ವೃ ॥ ಸಮಸುಖದುಃಖಮಂ ತಳೆವ ರೋಹಿಣಿತಾನಿವ*[ನಿತ್ತ ಶಾಪ ದಾ । ಕ್ರಮವನೆ ಕೇಳ್ದು]ಮಾಣಿಸೆಯುಂ ಮೆನ್ನಯ ಮೋಹದೆ ಮರ್ತ್ಯರೂ ಪದಿಂ ॥ ದಮೆ ಬಳಸಂದ[ಳೊಲ್ದು]ಮಗಳ್ದಂ ಬರೆಪಿಂತೆಯೆ ಮತ್ತೆ ಬಲ್ಪಿ ನಿಂ । ದಮೆ ನಿಲಿಸಿಟ್ಟನೆಯ್ದೆ ನಿಜಲೋಕದೊಳಾಕೆಯನಲ್ಲಿ ಕಂಡಪೈ ೮೧೬

ವೃ ॥ ಎಂದು ನರೇಂದ್ರಚಂದ್ರನುಸಿರಲ್ಬಧು ರೋಹಿಣಿವೆನ್ನೊಳಂತೆ ಬಂ । ದಂದಮನಾತ್ಮವಲ್ಲಭನೊಳಾವನುರಕ್ತತೆಯುಂ ಮಹತ್ತ್ವಮುಂ ॥ ಸಂದಪತಿವ್ರತಾಚರಣಮುಂ ಋಜುವೃತ್ತಿಯು ನಂದುಭಾವಿಸು । ತ್ತೊಂದು ಮನೊಂದಳಿಲ್ಲ ಬಳಿಯುಂ ಪಿರಿಮುಂ ತನಗಾದ ಲಜ್ಜೆಯಿಂ ॥ ೮೧೭

---

೮೧೫. ಎಲ್ಲಿದಳ್—ಎಲ್ಲಿದ್ದವಳು ಅಂದರೆ ಪೂರ್ವಜನ್ಮನಲ್ಲಿ ಇವಳ್ಯಾರು ಎಂ ಬು ತಾತ್ಪರ್ಯವು. ಎಲ್ಲಿದಳ್ ಎಂಬಲ್ಲಿ ಎಲ್ಲಿ ಇದ್ದವಳು ಅಥವಾ ಹುಟ್ಟಿದವಳು ಎಂಬರ್ಥ ದಲ್ಲಿ ದಪ್ರತ್ಯಯವುಳಾಗಮವೂ ಬಂದಿರುವವು. ಶಶಾ. ಸೂ. ೧೮೨.

೮೧೬ ಇವಂ_ಈ ಪುಂಡರೀಕನು; ಇತ್ತ; ಮಾಣಿಸೆಯುಂ-ತಡೆದಾಗ್ಯೂ; ಬಳಸಂ ದಳ್_ಸಂಗಡಬಂದಳು.

*[ಶಿತ್ತಲೆತ್ತ——೪೦]

ವೃ॥ ಎರಡುಂ ಜನ್ಮಂಗಳೊಳ್ ಜೇರ್ವರಿದಬಯುಕೆ ಕೂಡಿತ್ತದೆಂತಾನು ಮಿಾಗಳ್ । ನೆನೆಯಲ್ಕಿಂ ವೇಳ್ಕುಮೆಂಬಂತನುಚರನವೊಲಾಲೋಕಮಂ ಪತ್ತುವಿಟ್ಟೋ ॥ ಸರಿಸಿತ್ತಾವೇಗದೊಳ್ವಾಸರಮನುಚರಿವ್ರೊಲ್ಸಂಜೆಸಂಜಾತರಕ್ತಾಂ । ಬರದಿಂದಂ ಬಾಸಣಿಪ್ಪಂತೆಸೆದುದಸದಳಂ ಸಾಂದ್ರಶೋಣಾಂಶುಜಾಲಂ॥ ೮೧೮

ವ ॥ ತದನಂತರಂ—

ಕಂ ॥ ಅನುರಕ್ತನಿಜಕರಸ್ಪ । ರ್ಶನದಿಂ ವನಿತಾಜನಕ್ಕೆ ರಾಗೋದ್ರೇಕಂ ॥ ಜನಿಯಿಸುತಿರೆ ಕುವಲಯಪತಿ । ಯನುಕ್ರಮೋದಯವಿಲಾಸಮೇನೊಪ್ಪಿದುದೋ ॥ ೮೧೯

ವ ॥ ಅನ್ನಾರಜನಿಯೊಳ್ ರಾಜೇಂದ್ರಚಂದ್ರಂ ಸುರತಸುಖಾಂಭೋಧಿಯೊಳ್ಮುಳುಗಾಡಿ ಮಱುದಿವಸಂ ಮಾನಂದಿರಂ ಬೀಳ್ಕೊಂಡು ವಧೂಸಮೇತಂ ಪರಿತ್ಯಕ್ತ ಸಕಲಕಾರ್ಯರಪ್ಪ ಮಾತಾಪಿತೃಗಳಲ್ಲಿಗೆ ವಂದು ತತ್ಪಾದಪ್ರಣತನಾಗಿ ತದೀಯಾಶೀರ್ವಾದಶತಸಹಸ್ರಂಗಳಂ ತಲೆಯೊಳಾಂತು ನಿಜಸಮಾನೀಕೃತ ಸಕಲರಾಜಲೋಕಸಮನ್ವಿತ ಮುಜ್ಜಯಿನ್ಯಭಿಗಮನ ಕೃತಾಭ್ಯನುಜ್ಞನಾಗಿ ॥ ೮೨೦

ವೃ ॥ ನಯದಿಂ ಗಂಧರ್ವರಾಜಾತ್ಮಜೆ ಯೆಡದೊಳರ ಲ್ಪುಂಡರೀಕಂ ಮಹಾಶ್ವೇ । ತೆಯು ನೋಂಕಿಂದಾದಲಂಪಿಂ ಬಲದೊಳಗಿರೆ ಪಾರಾವನೀಪಾಲ ಪುತ್ರ ॥ ಪ್ರಯುತಂ ನಾನಾವಿಮಾನಾವಳಿಮಣಿಕಿರಣವ್ಯಾಪ್ತ ದಿಕ್ಚಕ್ರ ನುಜ್ಜ್ವಲ । ನಿಯು ನಡೆದ್ಯುಂದು ಪ್ರೊಕ್ಕಂವಿಬುಧಕುವಲಯಾನಂದಚಂದ್ರಂ ನರೇದ್ರಂ ॥ ೮೨೧

---

೮೧೮ ಇನ್—ಇನ್ನು ನೋಡಿ, ನೆನೆಯಲ್ಕೆ ವೇಳ್ಕುಂ—ಇಬ್ಬರೂ ಸೇರಬೇಕು; ಎಂಬಂತೆ—ಎಂದು ತಿಳಿದುಕೊಂಡೊ ಎಂಬಂತೆ; ವಾಸರಂ—ಹಗಲು; ಆಲೋಕವಂ—ನೋಟವನ್ನು; ಪತ್ತುವಿಟ್ಟು—ಬಿಟ್ಟು; ಅನುಚರನವೊಲ್—ಸೇವಕನಂತೆ; ಸರಿಸಿತ್ತು—ಸೊರಟುಹೋಯಿತು; ಸಂಜೆ—ಸಂಧ್ಯಾವೇಳೆ; ಸಂಜಾತ—ಉಂಟಾದ; ರಕ್ತಾಂಬರದಿಂ—ಕೆಂಪಾದ ಆಕಾಶವೆಂಬ ಕೆಂಪು ಬಟ್ಟೆಯಿಂದ; ಬಾಸಣಿಪ್ಪಂತೆ—ಮುಸುಕುಹಾಕುತ್ತಿರುವಂತೆ; ಸಾಂದ್ರಶೋಣಾಂಶುಜಾಲಂ ಎಸೆದುದು.

ವೃ॥ ಅವಿಭಕ್ತಸ್ನೇಹೆಯಂ ರೋಹಿಣಿಯು *[ನೊಸೆಯಿಸ] ಲ್ಸೋಮಲೋಕಕ್ಕದೊವ್ಳ್ರ । ವ್ಳ್ರ ವಯಸ್ಯಂ ಪುಂಡರೀಕಂಬೆರಸಮಳಸರಃಪಂಕಜಾವೋಪಲಕ್ಷ್ಮೀ ಭವನಕ್ಕೊವ್ಳ್ರವ್ಳ್ರ ಕಾದಂಬರಿ ಯೊಲವಿನೊಳಂ ಹೇಮಕೂಟಕ್ಕದೊವ್ಳ್ರ । ವ್ಳ್ರ ವಿಶೇಷಸ್ನೇಹನುಂ ಮಾಡುವನನುದಿನವೇಳ್ತಂದು ರಾಜೇಂದ್ರಚಂದ್ರಂ । ೮-೨೨

ವೃ॥ ಪ್ರಿಯದಿಂ ರಾಜೇಂದ್ರಚಂದ್ರಂ ಪ್ರಿಯತಮೆಯೆನೆ ಸಂದಿರ್ದ್ದ ಕಾದಂಬರೀಕಾಂ । ತೆಯೊ ಳಾಕಾದಂಬರೀಕಾಂತೆಯುಂ ಪೊಸೆದು ಮಹಾಶ್ವೇತೆಯೊ ಳ್ತನ್ಮಹಾಶ್ವೇ । ತೆಯುನೊಲ್ದು ಪುಂಡರೀಕಾಪ್ವಯು ನಮಲತರಪ್ರೇಮದಿಂ ಪುಂಡರೀಕಾ । ಹ್ವಯನಂ ರಾಜೇಂದ್ರಚಂದ್ರಾಂಕನು ಮಗಲದೆ ಕೂಡಿದ್ದರುತ್ಸಾಹದಿಂದಂ ॥ ೮-೨೩

ವೃ॥ ಕ್ಷಿತಿಯೊಳ್ಸೌವರ್ಣಕಾಂತಿ ಪ್ರಸರಮಸದಳಂ ಪರ್ವಿಸಂದಿರ್ದ್ದದಂತಾ । ಕೃತಿಮುನ್ನಂ ಬಾಣವಾಣೀಪ್ರಿಯನ ವಚನದಿಂ ಮತ್ತೆ ಕರ್ನಾಟಭಾಷಾ ॥ ಚತುರತ್ವಂಪ್ರೋದ್ಭಿ ಕಾದಂಬರಿ ಪಸರಿಸಿ ರಾಜೇಂದ್ರಚಂದ್ರಾಂಕನೊ ಳ್ಸಂ । ಗತಿವೆತ್ತಾದಂ ತ್ರಿಲೋಕೀಸಹಚರಿ †[ಯೆನೆತಾಂಸಂದುದಾ]ಚಂದ್ರತಾರಂ ॥ ೮-೨೪

ವೃ॥ ‡[ಇವು ಕಾಳಿಂಗಾಭಿಧೇಯು ಪ್ರವಿದಿತ ಮಿವು ಕಾಂಭೋಜಬಾಹ್ಲೀಕದೇಶೋ । ದ್ಭವಮುಸ್ವಂ ರಾಶಿಯಾಗಿರ್ದ್ದಪುವಿವು ನಿಜನಾಮಾಂಕವಿನ್ಯೋದ ಮಾಗ ॥ ಲ್ಕಿವು ನಾನಾಶಾಸನಂ ಸತ್ಕೃತಿವನಿತೆಗಿವೌಚಿತ್ಯವೆಂದಿತ್ತ ನತ್ಯ । ತ್ಸವದಿಂ ವಿದ್ವತ್ಸಭಾಮಂಡಲಿ ತಣಿವಿನೆಗಂ ಭೋಜರಾಜಕ್ಷಿತೀಶಂ ॥] ೮-೨೫

೮-೨೨. ನೊಸೆಯಿಸಲ್—ಪ್ರಸನ್ನಳನ್ನಾಗಿಮಾಡಿಕೊಳ್ಳುವದಕ್ಕೆ.

*[ನೆನೆಯಿಸಲ್] †[ಯೆನಿಸಲ್ಸಂದುದಾ]

‡[ಇವು ಕಾಳಿಂಗಾಭಿಧೇಯವಿವು ಕಾಂಭೋಜಬಾಹ್ಲಿಕದೇಶೋ । ದ್ಭವಮುಸ್ವಂ ರಾಶಿಯಾಗಿರ್ದ್ದಪುವಿವು ನಿಜನಾಮಾಂಕವಾಗ ॥ ಲ್ಕಿವು ನಾನಾಶಾಸನಂ ಸತ್ಕೃತಿವನಿತೆಗಿವೌಚಿತ್ಯವೆಂದಿತ್ತ ನತ್ಯ । ತ್ಸವದಿಂ ವಿದ್ವತ್ಸಭಾಮಂಡಲಿ ತಣಿವಿನೆಗಂ ಭೋಜರಾಜಕ್ಷಿತೀಶಂ ॥]

ಕಂ || *[ಅತಿಚತುರಕವಿಕದಂಬಂ | ಸ್ತುತಿಯಿಸೆ ಚಾತುರ್ಯವೃತ್ತಿಯಂ ತಳೆದು ಜಗತ್ || ಸ್ತುತನಾದ ನಾಗಪೂಜ್ಯಂ | ಕೃತಿಪಂತಾಂ ಸುಖದಿಸಿಕ್ಕೆಯಿನನಳಗೆವರಂ]|| ೮೭೬

ವೃ|| †[ಇದು ಚೋದ್ಯಂ ಕವಿಹೃದ್ಗತಂ ನವರಸಂ ನಿರ್ದೋಷವೆಂದೀಗಳಾ | ದುದು ಕಾದಂಬರಿ ಸೇವ್ಯಮಾದುದನಿತುಂ ತಾನೆಯ್ದೆ ಭೂಭಾಗದೊ || ಳ್ಪದಿತಶ್ರೀಕವಿ ನಾಗವರ್ಮನ ವಚಃಸಂದೋಹದಿಂ ದೋಷವೆಂ | ದದಲಂಕಾರದ ವಸ್ತುಬಂಧವಿದು ತಾನೇಂಪಾಡದೇಂಗೆಯ್ಯದೋ]|| ೮೭೭

ಕರ್ಣಾಟಕ ಕಾದಂಬರಿ ಸಂಪೂರ್ಣಂ.

---

*[ಅತಿಚತುರಕವಿಕದಂಬಂ | ಸ್ತುತಿಯಿಸೆ ಚಾತುರ್ಯವೃತ್ತಿಯಂ ತಳೆದುಜಗ || ಸ್ತುತನಾದ ನಾಗಪೂಜ್ಯಂ | ಕೃತಿಪಂತಾಂ ಸುಖದಿಸಿರ್ಕೆ ವಿನನಳಗೆವರಂ]||

†[ಇದು ಚೋದ್ಯಂ ಕವಿಹೃದ್ಗತಂ ನವರಸಂ ನಿರ್ದೋಷವೆಂದೀಗಳಾ | ದುದು ಕಾದಂಬರಿ ಸೇವೆ ಮೊಂದನಿನಿತುಂ ತಾನೆಯ್ದೆ ಭೂಭಾಗದೊ || ಳ್ಪದಿತಶ್ರೀಕವಿ ನಾಗವರ್ಮನವಚಃಸಂದೋಹದಿಂ ದೋಷವೆ | ತ್ತದಳಂಕಾರದ ವಸ್ತುಬಂಧವಿದು ತಾನೆಂ ಮಾಡದೆಂಗೆಯ್ಯದೋ]||